## ಕರ್ನಾಟಕ [1][ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್][1] ಅಧಿನಿಯಮ, 1993
### ಪ್ರಕರಣಗಳ ಅನುಕ್ರಮಣಿಕೆ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ


ಪ್ರಕರಣಗಳು:

**ಅಧ್ಯಾಯ I**
**ಪ್ರಾರಂಭಿಕ**


1. ಚಿಕ್ಕ ಹೆಸರು ಮತ್ತು ಪ್ರಾರಂಭ.
2. ಅರ್ಥ ವಿವರಣೆಗಳು.


**ಅಧ್ಯಾಯ Iಎ**
**ಪಂಚಾಯತ್ ನೀತಿ ನಿರ್ದೇಶಕ ತತ್ವಗಳು**


2ಎ. ಪಂಚಾಯತ್ ನೀತಿ ನಿರ್ದೇಶಕ ತತ್ವಗಳು


**ಅಧ್ಯಾಯ II**
**ವಾರ್ಡ್‌ಸಭೆ ಮತ್ತು ಗ್ರಾಮಸಭೆ**


3. ಗ್ರಾಮ ಸ್ವರಾಜ್ ಘಟಕಗಳು
3ಎ. ಜನವಸತಿ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳು
3ಬಿ. ಜನವಸತಿ ಸಭಾದ ಸಭೆಗಳು
3ಸಿ. ವಾರ್ಡ್ ಸಭಾ
3ಡಿ. ವಾರ್ಡ್ ಸಭಾದ ಸಭೆಗಳು
3ಇ. ಗ್ರಾಮಸಭೆ
3ಎಫ್. ಗ್ರಾಮಸಭೆಯ ಕರ್ತವ್ಯಗಳು
3ಜಿ. ಗ್ರಾಮಸಭಾದ ಸಭೆಗಳು
3ಹೆಚ್. ಗ್ರಾಮಸಭಾದ ವಿಶೇಷ ಸಭೆ


**ಅಧ್ಯಾಯ III**
**ಗ್ರಾಮ ಪಂಚಾಯತಿಗಳ ಹಾಗೂ ಸ್ಥಾಯಿ ಸಮಿತಿಗಳ ರಚನೆ**


4. ಪಂಚಾಯತಿ ಪ್ರದೇಶದ ಘೋಷಣೆ ಮತ್ತು ಗ್ರಾಮ ಪಂಚಾಯತಿಗಳ ಸ್ಥಾಪನೆ.
5. ಗ್ರಾಮ ಪಂಚಾಯತಿಯ ರಚನೆ.
6. ಗ್ರಾಮ ಪಂಚಾಯತಿಯನ್ನು ನಿಗಮಿತಗೊಳಿಸುವುದು.
7. ಮತದಾನದ ವಿಧಾನ ಮತ್ತು ಚುನಾವಣಾ ಕಾರ್ಯವಿಧಾನ.
8. ಗ್ರಾಮ ಪಂಚಾಯತಿಗಳ ಸದಸ್ಯರನ್ನು ಚುನಾಯಿಸಲು ತಪ್ಪಿದಲ್ಲಿ ಆಡಳಿತ ಸಮಿತಿಯ ಅಥವಾ ಆಡಳಿತಾಧಿಕಾರಿಯ ನೇಮಕ.
9. ಮತದಾನದ ಹಕ್ಕು.
10. ಮತದಾರರ ಪಟ್ಟಿ.
11. ಸದಸ್ಯತ್ವಕ್ಕೆ ಅರ್ಹತೆ.
12. ಸದಸ್ಯರಾಗಲು ಅನರ್ಹತೆ.
13. ಸದಸ್ಯರ ಸ್ಥಾನವು ಖಾಲಿಯಾಗುವುದು.
14. ಏಕಕಾಲದ ಸದಸ್ಯತ್ವದ ನಿಷೇದ.
15. ಚುನಾವಣಾ ತಕರಾರು ಅರ್ಜಿ.
16. ತಕರಾರು ಅರ್ಜಿಯ ಒಳಾಂಶಗಳು ಮತ್ತು ಕೋರಬಹುದಾದ ಪರಿಹಾರ.
17. ಚುನಾವಣಾ ತಕರಾರು ಅರ್ಜಿಯ ವಿಚಾರಣೆ.
18. ಗೊತ್ತುಪಡಿಸಿದ ನ್ಯಾಯಾಲಯರ ತೀರ್ಮಾನ.
19. ಚುನಾವಣೆಯು ಅನೂರ್ಜಿತವೆಂದು ಘೋಷಿಸಲು ಕಾರಣಗಳು.
20. ಚುನಾಯಿತ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದಂಥ ಕಾರಣಗಳು.
21. ಸಮಾನ ಮತಗಳು ಬಂದ ಸಂದರ್ಭದಲ್ಲಿ ಕಾರ್ಯವಿಧಾನ.
22. ಭ್ರಷ್ಟಾಚಾರಗಳು.
23. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶ.
24. ಆದೇಶಗಳನ್ನು ತಿಳಿಸುವುದು.
24ಎ. ಬಾಕಿ ಪ್ರಕರಣಗಳ ವರ್ಗಾವಣೆ
25. ಸ್ಥಾನವು ಖಾಲಿಯಾದರೆ ಹೊಸ ಚುನಾವಣೆ.
26. ಮತದಾನದ ಕೇಂದ್ರದಲ್ಲಿ ಅಥವಾ ಅದರ ಬಳಿಯಲ್ಲಿ ಚುನಾವಣಾ ಪ್ರಚಾರದ ನಿಷೇಧ.
27. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರ ಅನುಚಿತ ನಡತೆಗಾಗಿ ದಂಡನೆ.
28. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡನೆ.
29. ಮತದಾನದ ರಹಸ್ಯವನ್ನು ಕಾಪಾಡುವುದು.

30. ಚುನಾವಣೆಯಲ್ಲಿ ಅಧಿಕಾರಿಗಳು ಮೊದಲಾದವರು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡತಕ್ಕದ್ದಲ್ಲ ಅಥವಾ ಮತದಾನದ ಮೇಲೆ ಪ್ರಭಾವ ಬೀರತಕ್ಕದ್ದಲ್ಲ.
31. ಚುನಾವಣೆಗಳಿಗೆ ಸಂಬಂಧಿಸಿದ ಸರ್ಕಾರಿ ಕರ್ತವ್ಯದ ಭಂಗ.
31ಎ. ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ.
31ಬಿ. ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟರಾಗಿ ಕಾರ್ಯನಿರ್ವಹಿಸುವ ಸರ್ಕಾರಿ ನೌಕರರುಗಳಿಗೆ ದಂಡನೆ ವಿಧಿಸುವುದು.
32. ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವುದು ಅಪರಾಧ.
33. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡನೆಗಳು.
34. ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರತ್ವವನ್ನು ಉತ್ತೇಜಿಸುವುದು.
35. ಚುನಾವಣಾ ದಿವಸದ ಹಿಂದಿನ ದಿವಸದಂದು ಮತ್ತು ಚುನಾವಣಾ ದಿವಸದಂದು ಸಾರ್ವಜನಿಕ ಸಭೆಗಳ ನಿಷೇಧ.
36. ಚುನಾವಣೆಯ ದಿನದಂದು ಜಾತ್ರೆ ಇತ್ಯಾದಿಗಳನ್ನು ನಿಷೇಧಿಸಲು ಡೆಪ್ಯೂಟಿ ಕಮಿಷನರ್ ಅವರಿಗಿರುವ ಅಧಿಕಾರ.
37. ಚುನಾವಣಾ ಸಭೆಗಳಲ್ಲಿ ಗಲಭೆ.
38. ಕಿರು ಹೊತ್ತಿಗೆಗಳು, ಭಿತ್ತಿಪತ್ರಗಳು, ಮುಂತಾದವುಗಳನ್ನು ಮುದ್ರಿಸುವುದರ ಬಗ್ಗೆ ನಿರ್ಬಂಧಗಳು.
39. ಚುನಾವಣೆಯಲ್ಲಿ ಕಾನೂನು ವಿರುದ್ಧವಾಗಿ ವಾಹನವನ್ನು ಬಾಡಿಗೆಗಾಗಿ ಪಡೆಯುವುದಕ್ಕೆ ಅಥವಾ ಒದಗಿಸುವುದಕ್ಕೆ ದಂಡನೆ.
40. ಕೆಲವು ಅಪರಾಧಗಳ ಸಂಬಂಧದಲ್ಲಿ ಪ್ರಾಸಿಕ್ಯೂಷನ್.
41. ಹುದ್ದೆಯ ಅವಧಿ.
42. ಹುದ್ದೆಯ ಅವಧಿಯ ಪ್ರಾರಂಭ.
43. ಸದಸ್ಯರ ರಾಜೀನಾಮೆ.
43ಎ. ಸದಸ್ಯರನ್ನು ತೆಗೆದುಹಾಕುವುದು
43ಬಿ. ಸದಸ್ಯರಿಂದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆ
44. ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆ.
45. ಗ್ರಾಮ ಪಂಚಾಯತಿಯು ಸ್ಥಾಪನೆಯಾದಾಗ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಚುನಾವಣಾ ಕಾರ್ಯ ವಿಧಾನ ಇತ್ಯಾದಿ.
46. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿ ಮತ್ತು ಸೇವಾ ಷರತ್ತುಗಳು.
47. ಹುದ್ದೆಯು ಖಾಲಿ ಇರುವ ಅವಧಿಯಲ್ಲಿ ಅಧ್ಯಕ್ಷನ ನೇಮಕ.
48. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ತೆಗೆದುಹಾಕುವಿಕೆ.
49. ಗ್ರಾಮಪಂಚಾಯತಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ಸೂಚನೆ.
50. ಸಭೆಗಳ ಕಾರ್ಯವಿಧಾನ.
51. ಆಕಸ್ಮಿಕ ಖಾಲಿ ಸ್ಥಾನಗಳು.
52. ಗ್ರಾಮ ಪಂಚಾಯತಿಯ ಸಭೆ.
53. ಕೋರಂ ಮತ್ತು ಕಾರ್ಯವಿಧಾನ.
54. ನಿರ್ಣಯವನ್ನು ಮಾರ್ಪಾಟು ಮಾಡುವುದು ಅಥವಾ ರದ್ದುಪಡಿಸುವುದು.
55. ನಡೆವಳಿಕೆ ಪುಸ್ತಕ.
56. ಅಡ್ಡಪ್ರಶ್ನೆಗಳು ಮತ್ತು ನಿರ್ಣಯಗಳು.
57. ವ್ಯವಹರಣೆಗಳ ವಿಧಿಮಾನ್ಯತೆ.

### ಅಧ್ಯಾಯ IV

**ಗ್ರಾಮ ಪಂಚಾಯತಿಗಳ, ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು**

58. ಗ್ರಾಮ ಪಂಚಾಯತಿಯ ಪ್ರಕಾರ್ಯಗಳು.
58ಎ. ಜೀತಗಾರಿಕೆ ಪದ್ಧತಿ ಸಂಬಂಧದಲ್ಲಿ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರತಕ್ಕದ್ದು.
58ಬಿ. ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂಧಿಸಲು ಗ್ರಾಮಪಂಚಾಯತಿಯ ಕರ್ತವ್ಯ.
58ಸಿ. ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು ಗ್ರಾಮ ಪಂಚಾಯತ್‌ನ ಕರ್ತವ್ಯ
58ಡಿ. ಕಂದಾಯ ಭೂಮಿಯನ್ನು ಹೊರತುಪಡಿಸಿ ಒತ್ತುವರಿ ಮಾಡಿಕೊಂಡಿರುವ ಗ್ರಾಮ ಪಂಚಾಯತಿಯ ಸ್ವತ್ತನ್ನು ಪುನಃ ಸ್ವಾಧೀನ ಪಡೆಯುವ ಕರ್ತವ್ಯ
58ಇ. ಸ್ವಚ್ಛ ಪರಿಸರವನ್ನು ಕಾಪಾಡುವ ಕರ್ತವ್ಯ
58ಎಫ್. ಅಪಾಯಕಾರಿ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳನ್ನು, ತೆರೆದ ಬಾವಿಗಳನ್ನು ತೋಡುವುದು ಮತ್ತು ಹೊಂಡಗಳನ್ನು ನಿರ್ಮಿಸುವುದು
59. ಕಾರ್ಯಗಳನ್ನು ವಹಿಸಿಕೊಡುವುದು.
60. ಗ್ರಾಮ ಪಂಚಾಯತಿಯ ಸಾಮಾನ್ಯ ಅಧಿಕಾರಗಳು.
60ಎ. ಗುತ್ತಿಗೆಗಳನ್ನು ಮಾಡಿಕೊಳ್ಳಲು ವಿಧಾನ
60ಬಿ. ಸಮುದಾಯಿಕ ಗುತ್ತಿಗೆಗಳು.
61. ಸ್ಥಾಯಿ ಸಮಿತಿಗಳು.
61ಎ. ಇತರ ಸಮಿತಿಗಳು.

61ಬಿ. ಬಿಟ್ಟು ಬಿಡಲಾಗಿದೆ.
62. ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳು.
63. ರಸ್ತೆಗಳು, ಸೇತುವೆಗಳು ಮುಂತಾದವುಗಳ ಬಗ್ಗೆ ಗ್ರಾಮ ಪಂಚಾಯತಿಯ ಅಧಿಕಾರ.
64. ಕಟ್ಟಡಗಳ ನಿರ್ಮಾಣದ ಬಗ್ಗೆ ನಿಯಂತ್ರಣ.
65. ಕೆಲವು ಪ್ರದೇಶಗಳಲ್ಲಿ ಅನುಮತಿಯಿಲ್ಲದೆ ಕಟ್ಟಡಗಳ ನಿರ್ಮಾಣವನ್ನು ನಿಷೇಧಿಸಲು ಮತ್ತು ನಿಯಂತ್ರಿಸಲು ಸರ್ಕಾರದ ಅಧಿಕಾರ.
66. ಕಾರ್ಖಾನೆಗಳನ್ನು ನಿರ್ಮಿಸಲು ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲು ಅನುಮತಿ.
67. ಲೈಸೆನ್ಸಿಲ್ಲದೆ ಉಪದ್ರವಕಾರಿ ಅಥವಾ ಅಪಾಯಕಾರಿ ವ್ಯಾಪಾರದ ನಿಷೇಧ.
68. ಹೊಟೇಲು ಮುಂತಾದವುಗಳ ನಿಯಂತ್ರಣ.
69. ಅಂಗಡಿಗಳಿಗೆ ಲೈಸೆನ್ಸು ಕೊಡುವುದು.
70. 66, 67, 68 ಮತ್ತು 69ನೇ ಪ್ರಕರಣಗಳ ಅಡಿಯಲ್ಲಿ ಅನುಮತಿಗಳಿಗೆ ಮತ್ತು ಲೈಸೆನ್ಸುಗಳಿಗೆ ಅನ್ವಯವಾಗುವ ಪಬಂಧಗಳು.
71. ಗ್ರಾಮ ಪಂಚಾಯತಿಗಳಿಗೆ, ಸಂಸ್ಥೆಗಳು ಅಥವಾ ಕಾಮಗಾರಿಗಳ ವರ್ಗಾವಣೆ.
72. ಸಾರ್ವಜನಿಕ ಬೀದಿಗಳು ಮತ್ತು ಖಾಲಿ ನಿವೇಶನಗಳ ಮೇಲಿನ ಅಡೆತಡೆ ಮತ್ತು ಒತ್ತುವರಿಗಳು.
73. ಬೀದಿಗಳಿಗೆ ಹೆಸರಿಡಲು ಮತ್ತು ಕಟ್ಟಡಗಳಿಗೆ ಸಂಖ್ಯೆಯನ್ನು ಕೊಡಲು ಅಧಿಕಾರ.
74. ಹಾಳು ಬಿದ್ದ ಅಥವಾ ಬೀಳುವ ಸಂಭವವಿರುವ ರಚನೆಗಳು, ಮರಗಳು ಮುಂತಾದವುಗಳನ್ನು ತೆಗೆದುಹಾಕುವುದು.
75. ನೈರ್ಮಲ್ಯ, ನಿರ್ಮಲೀಕರಣ ಮತ್ತು ಚರಂಡಿ ವ್ಯವಸ್ಥೆಯ ಬಗ್ಗೆ ಅಧಿಕಾರ.
76. ಯಾತ್ರಾಸ್ಥಳ ಮುಂತಾದವುಗಳ ಮೇಲೆ ನಿಯಂತ್ರಣ ಹೊಂದಿರುವ ವ್ಯಕ್ತಿಗಳಿಂದ ವಂತಿಗೆ.
77. ಸಾಕಷ್ಟು ನೀರು ಸರಬರಾಜು ವ್ಯವಸ್ಥೆ ಮಾಡಲು ಅಧಿಕಾರ.
78. ನೀರು ಸರಬರಾಜಿನ ವ್ಯವಸ್ಥೆಗಳ ಬಗ್ಗೆ ಉಪ-ವಿಧಿಗಳನ್ನು ರಚಿಸಲು ಗ್ರಾಮಪಂಚಾಯತಿಯ ಅಧಿಕಾರ.
79. ಜಂಟಿ ಸಮಿತಿಗಳ ನೇಮಕ.
80. ಪ್ರವೇಶಾಧಿಕಾರ.
81. ಹೊಲಸು ಕಟ್ಟಡಗಳು ಮುಂತಾದವು.
82. ನೀರು ಸರಬರಾಜಿನ ಮೂಲಗಳ ಬಗ್ಗೆ ಅಧಿಕಾರಗಳು ಮತ್ತು ಕರ್ತವ್ಯಗಳು.
83. ನೀಡಿದ ನಿರ್ದೇಶನಗಳನ್ನು ಪಾಲಿಸದೆ ಇರುವುದಕ್ಕಾಗಿ ಪರಿಹಾರೋಪಾಯ.
84. ಸಾರ್ವಜನಿಕರ ಚಿಲುಮೆಗಳು ಮುಂತಾದವುಗಳನ್ನು ಕೆಲವು ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಇರಿಸಲು ಅಧಿಕಾರ.
85. ಕೆಲವು ಮೂಲಗಳಿಂದ ನೀರಿನ ಉಪಯೋಗವನ್ನು ನಿಷೇಧಿಸಲು ಅಧಿಕಾರ.
86. ಕೆಲವು ಉದ್ದೇಶಗಳಿಗಾಗಿ ನೀರನ್ನು ಉಪಯೋಗಿಸುವುದಕ್ಕೆ ದಂಡನೆ.
87. ಹೊಲಸು ನೀರಿನಿಂದಾಗುವ ಉಪದ್ರವವನ್ನು ತಡೆಯುವುದು.
88. ಸ್ಮಶಾನಗಳನ್ನು ಮುಚ್ಚುವುದು.
89. ಸಾಂಕ್ರಾಮಿಕ ರೋಗಗಳಿರುವ ಕಟ್ಟಡ ಮುಂತಾದವುಗಳೊಳಗೆ ಪ್ರವೇಶಿಸುವ ಅಧಿಕಾರ.
90. ಕಟ್ಟಡ ಮುಂತಾದವುಗಳ ಸೋಂಕು ನಿವಾರಣೆ.
91. ಸೋಂಕು ತಗಲಬಹುದಾದ ವಸ್ತುಗಳು.
92. ಹೂಳುವ ಮತ್ತು ಸುಡುವ ಸ್ಥಳಗಳ ನೋಂದಣಿ.
93. ಮೃತರ ಅಂತ್ಯಕ್ರಿಯೆಗಾಗಿ ಸ್ಥಳಗಳಿಗೆ ಲೈಸನ್ಸ್ ಕೊಡುವುದು.
94. ನೋಂದಾಯಿಸಿದ, ಲೈಸನ್ಸನ್ನು ಕೊಟ್ಟ ಅಥವಾ ಒದಗಿಸಿದ ಸ್ಥಳಗಳ ಬಗ್ಗೆ ಪುಸ್ತಕವನ್ನು ಇಡಬೇಕು.
95. ಅನಧಿಕೃತ ಸ್ಥಳಗಳಲ್ಲಿ ಹೂಳುವುದು ಅಥವಾ ಸುಡುವುದಕ್ಕೆ ನಿಷೇಧ.
96. ಹೂಳುವುದು ಇತ್ಯಾದಿಗಳ ಬಗ್ಗೆ ಗ್ರಾಮ ಪಂಚಾಯಿತಿಗೆ ತಿಳಿಸಬೇಕು.
97. ಸಾರ್ವಜನಿಕ ಇಳಿದಾಣಗಳು, ಗಾಡಿ ನಿಲ್ದಾಣಗಳು ಇತ್ಯಾದಿ.
98. ಗುಡಿಸಲುಗಳನ್ನು ಕ್ರಮಗೊಳಿಸುವುದು.
99. ಚರಂಡಿಗಳನ್ನು ನಿರ್ಮಿಸುವ ಅಧಿಕಾರ.
100. ಮನೆಗಳಿಗೆ ಸಮರ್ಪಕ ಒಳ ಚರಂಡಿ ವ್ಯವಸ್ಥೆ.
101. ಚರಂಡಿ ನೀರನ್ನು ಗ್ರಾಮ ಪಂಚಾಯಿತಿಯ ಚರಂಡಿಗೆ ಹರಿಯಬಿಡಲು, ಕಟ್ಟಡಗಳ ಅಥವಾ ಭೂಮಿಗಳ ಮಾಲೀಕರ ಅಥವಾ ಅನುಭವದಾರರ ಅಧಿಕಾರ.
102. ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಗೆ ಅಥವಾ ಚರಂಡಿಗೆ, ಚರಂಡಿ ನೀರನ್ನು ಸೇರಿಸುವ ಹಕ್ಕು.
103. ಯಾವ ಭೂಮಿಯ ಮೂಲಕ ಚರಂಡಿಯನ್ನು ಹಾಕಲಾಗಿದೆಯೋ ಅಂಥ ಭೂಮಿಯ ಮೇಲೆ ಆ ತರುವಾಯ ಕಟ್ಟಡವನ್ನು ಕಟ್ಟುವ ಬಗ್ಗೆ ಮಾಲೀಕನ ಹಕ್ಕು.
104. ಶೌಚಗೃಹ ಮುಂತಾದವುಗಳನ್ನು ಒದಗಿಸುವುದು.
105. ಶೌಚಗೃಹ ಮೊದಲಾದವುಗಳನ್ನು ಮಾರ್ಪಡಿಸುವ, ದುರಸ್ತಿ ಮಾಡುವ ಮತ್ತು ಸುಸ್ಥಿತಿಯಲ್ಲಿಡುವ ಸಂಬಂಧದ ವೆಚ್ಚ.
106. ಚರಂಡಿ ಮೊದಲಾದವುಗಳ ಪರಿವೀಕ್ಷಣೆ.
107. ಅಪಾಯಕಾರಿ ಕಲ್ಲುಗಣಿ ಕೆಲಸ.
108. ಅಸಹ್ಯಕರ ಪದಾರ್ಥ ಇತ್ಯಾದಿಗಳನ್ನು ಉಪಯೋಗಿಸುವುದು.
109. ಹೊಗೆ ಹೊರಸೂಸುವಿಕೆ.

110. ಉಪದ್ರವಕಾರಿ ಕೆಲಸಗಳ ನಿಷೇಧ.

**ಅಧ್ಯಾಯ IV ಎ**

**ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು**

110ಎ. ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

**ಅಧ್ಯಾಯ V**

**ಗ್ರಾಮ ಪಂಚಾಯತಿಗಳ ಸಿಬ್ಬಂದಿ**

111. ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಇತರ ಅಧಿಕಾರಿಗಳು.
112. ಸಿಬ್ಬಂದಿ ಸ್ವರೂಪ ಮತ್ತು ಉದ್ಯೋಗಿಗಳ ಪಟ್ಟಿ.
113. ನೌಕರರ ನೇಮಕಾತಿ ಮತ್ತು ನಿಯಂತ್ರಣ.
113ಎ. ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿಯ ವ್ಯವಸ್ಥೆ.

**ಅಧ್ಯಾಯ VI**

**ಚಿಕ್ಕ ನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶದ ಪರಿವರ್ತನೆ ಮತ್ತು ಸಂಯೋಜನೆ**

114. ಅರ್ಥ ವಿವರಣೆ.
115. ಚಿಕ್ಕ ನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸುವುದರ ಪರಿಣಾಮ.
116. ಮಧ್ಯಕಾಲೀನ ಗ್ರಾಮ ಪಂಚಾಯತಿಯ ಸದಸ್ಯರ ಹುದ್ದೆಯ ಅವಧಿ ಮತ್ತು ಅವರ ಅಧಿಕಾರಗಳು.
117. ಪಂಚಾಯತಿ ಪ್ರದೇಶಗಳ ಸಂಯೋಜನೆಯ ಪರಿಣಾಮ.
118. ಪಂಚಾಯತಿ ಪ್ರದೇಶದ ವಿಭಜನೆಯ ಪರಿಣಾಮ.

**ಅಧ್ಯಾಯ VII**

**ತಾಲ್ಲೂಕು ಪಂಚಾಯತಿಯ ರಚನೆ**

119. ತಾಲ್ಲೂಕು ಪಂಚಾಯತಿಯ ಸ್ಥಾಪನೆ ಮತ್ತು ಅದರ ನಿಗಮನ.
120. ತಾಲ್ಲೂಕು ಪಂಚಾಯತಿಯ ರಚನೆ.
121. ಚುನಾಯಿತ ಸದಸ್ಯರು.
122. ಪ್ರತಿಯೊಂದು ಜನಗಣತಿಯ ತರುವಾಯ ಚುನಾಯಿತ ಸದಸ್ಯರುಗಳ ಬಗ್ಗೆ ನಿರ್ಧರಣೆ.
123. ಸ್ಥಾನಗಳ ಮೀಸಲಾತಿ.
124. ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ.
125. ಮತದಾನದ ಹಕ್ಕು.
126. ಮತದಾರರ ಪಟ್ಟಿ.
127. ಅಭ್ಯರ್ಥಿಯ ಅರ್ಹತೆಗಳು.
128. ಸದಸ್ಯನಾಗಲು ಅನರ್ಹತೆ.
129. ಸ್ಥಾನವು ಖಾಲಿಯಾಗುವುದು.
130. ಮತ ನೀಡುವ ವಿಧಾನ ಮತ್ತು ಚುನಾವಣೆಗಾಗಿ ಪ್ರಕ್ರಿಯೆ.
131. ಏಕಕಾಲದ ಸದಸ್ಯತ್ವದ ನಿಷೇಧ.
132. ಚುನಾವಣೆಗಳಿಗೆ ಸಂಬಂಧಪಟ್ಟಂತೆ ಕೆಲವು ಪ್ರಕರಣಗಳ ಅನ್ವಯ.
133. ಸದಸ್ಯರ ಹೆಸರುಗಳ ಪ್ರಕಟಣೆ.
134. ಸದಸ್ಯರ ಪದಾವಧಿ.
135. ಸದಸ್ಯರ ರಾಜೀನಾಮೆ.
136. ಸದಸ್ಯರನ್ನು ತೆಗೆದುಹಾಕುವುದು.
136ಎ. ಸದಸ್ಯರ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಘೋಷಣೆ
136ಬಿ. ಸದಸ್ಯತ್ವವು ನಿಂತುಹೋಗುವುದು
137. ಆಕಸ್ಮಿಕ ಖಾಲಿ ಸ್ಥಾನಗಳನ್ನು ತುಂಬುವ ವಿಧಾನ.
138. ಅಧ್ಯಕ್ಷ, ಉಪಾಧ್ಯಕ್ಷನ ಚುನಾವಣೆ ಮತ್ತು ಹುದ್ದೆಯ ಅವಧಿ.
139. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮತ್ತು ಇತರ ಸದಸ್ಯರ ಸಂಬಳ ಮತ್ತು ಭತ್ಯಗಳು.
140. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ಅವನನ್ನು ತೆಗೆದುಹಾಕುವುದು.
141. ತಾಲ್ಲೂಕು ಪಂಚಾಯತಿಯ ಸಭೆಗಳು.
142. ಅಡ್ಡ ಪ್ರಶ್ನೆಗಳು ಮತ್ತು ನಿರ್ಣಯಗಳು.
143. ತಾಲ್ಲೂಕು ಪಂಚಾಯತಿಯು ಸಭೆಗಳಲ್ಲಿ ಸರ್ಕಾರಿ ಅಧಿಕಾರಿಗಳ ಹಾಜರಾತಿಯನ್ನು ಅಗತ್ಯಪಡಿಸುವುದು.
144. ವ್ಯವಹರಣೆಗಳ ವಿಧಿಮಾನ್ಯತೆ.

**ಅಧ್ಯಾಯ VIII**

**ತಾಲ್ಲೂಕು ಪಂಚಾಯತಿಯ, ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು.**

145. ತಾಲ್ಲೂಕು ಪಂಚಾಯತಿಯ ಪ್ರಕಾರ್ಯಗಳು.
145ಎ. ಯೋಜನೆಗಳ ಕ್ರೋಢೀಕರಣ ಮತ್ತು ಸಮಗ್ರಗೊಳಿಸುವಿಕೆ.
145ಬಿ. ಅಪಾಯಕಾರಿ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳು, ತೆರೆದ ಬಾವಿಗಳು ಮತ್ತು ಗುಂಡಿಗಳು.
145ಸಿ. ಜೀವ ವೈವಿಧ್ಯತೆ, ಸಾಮಾಜಿಕ ಅರಣ್ಯ ಮತ್ತು ಪರಿಸರ.

145ಡಿ.ಮಾಹಿತಿ ನಿರ್ವಹಣೆ.
146. ಪ್ರಕಾರ್ಯಗಳನ್ನು ವಹಿಸಿಕೊಡುವುದು.
147. ತಾಲ್ಲೂಕು ಪಂಚಾಯತಿಯ ಸಾಮಾನ್ಯ ಅಧಿಕಾರಗಳು.
148. ಸ್ಥಾಯಿ ಸಮಿತಿ.
149. ಸ್ಥಾಯಿ ಸಮಿತಿಗಳ ಪ್ರಕಾರ್ಯಗಳು.
150. ಸಮಿತಿಗಳ ಕಾರ್ಯವಿಧಾನ.
151. ಅಧಿಕಾರಗಳನ್ನು ವಹಿಸಿಕೊಡುವುದು.
152. ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು.
153. ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು.
154. ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.

**ಅಧ್ಯಾಯ IX**

**ತಾಲ್ಲೂಕು ಪಂಚಾಯತಿಯ ಸಿಬ್ಬಂದಿ**

155. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಸಿಬ್ಬಂದಿ.
156. ಕಾರ್ಯನಿರ್ವಾಹಕ ಅಧಿಕಾರಿಯ, ಇತರ ಅಧಿಕಾರಿಗಳ ಹಾಗೂ ಸಿಬ್ಬಂದಿಯ ಪ್ರಕಾರ್ಯಗಳು.
157. ದಾಖಲೆ ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರಲು ಕಾರ್ಯನಿರ್ವಾಹಕ ಅಧಿಕಾರಿಯ ಹಕ್ಕು.

**ಅಧ್ಯಾಯ X**

**ಜಿಲ್ಲಾ ಪಂಚಾಯತಿ**

**ಜಿಲ್ಲಾ ಪಂಚಾಯತಿಯ ರಚನೆ**

158. ಜಿಲ್ಲಾ ಪಂಚಾಯತಿಯ ಸ್ಥಾಪನೆ ಮತ್ತು ಅದರ ನಿಗಮನ.
159. ಜಿಲ್ಲಾ ಪಂಚಾಯತಿಯ ರಚನೆ.
160. ಚುನಾಯಿತ ಸದಸ್ಯರು.
161. ಜನಗಣತಿಯ ತರುವಾಯ ಚುನಾಯಿತ ಸದಸ್ಯರುಗಳ ಸಂಖ್ಯೆಯನ್ನು ನಿರ್ಧರಿಸುವುದು.
162. ಸ್ಥಾನಗಳ ಮೀಸಲಾತಿ.
163. ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ.
164. ಮತದಾನದ ಹಕ್ಕು.
165. ಮತದಾರರ ಪಟ್ಟಿ.
166. ಅಭ್ಯರ್ಥಿಯ ಅರ್ಹತೆಗಳು.
167. ಸದಸ್ಯರಾಗಲು ಅನರ್ಹತೆ.
168. ಸ್ಥಾನವು ಖಾಲಿಯಾಗಿರುವುದು.
169. ಮತ ನೀಡುವ ವಿಧಾನ ಮತ್ತು ಚುನಾವಣಾ ಕಾರ್ಯ ವಿಧಾನ.
170. ಏಕಕಾಲದ ಸದಸ್ಯತ್ವದ ನಿಷೇಧ.
171. ಚುನಾವಣೆಗಳಿಗೆ ಸಂಬಂಧಪಟ್ಟಂತೆ ಕೆಲವು ಪ್ರಕರಣಗಳ ಅನ್ವಯ.
172. ಸದಸ್ಯರ ಹೆಸರುಗಳ ಪ್ರಕಟಣೆ.
173. ಸದಸ್ಯರ ಹುದ್ದೆಯ ಅವಧಿ.
174. ಸದಸ್ಯರ ರಾಜೀನಾಮೆ.
175. ಸದಸ್ಯರನ್ನು ತೆಗೆದುಹಾಕುವುದು
175ಎ. ಸದಸ್ಯರಿಂದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆ:
175ಬಿ. ಸದಸ್ಯತ್ವವು ನಿಂತುಹೋಗುವುದು
176. ಆಕಸ್ಮಿಕ ಖಾಲಿ ಸ್ಥಾನ.
177. ಅಧ್ಯಕ್ಷ, ಉಪಾಧ್ಯಕ್ಷನ ಚುನಾವಣೆ ಮತ್ತು ಹುದ್ದೆಯ ಅವಧಿ.
178. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮತ್ತು ಇತರ ಸದಸ್ಯರ ಸಂಬಳ ಮತ್ತು ಭತ್ಯೆಗಳು.
179. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ಅವನನ್ನು ತೆಗೆದುಹಾಕುವುದು.
180. ಜಿಲ್ಲಾ ಪಂಚಾಯತಿಯ ಸಭೆಗಳು.
181. ಅಡ್ಡ ಪ್ರಶ್ನೆಗಳು ಮತ್ತು ನಿರ್ಣಯಗಳು.
182. ಜಿಲ್ಲಾ ಪಂಚಾಯತಿಯ ಸಭೆಗಳಲ್ಲಿ [1][ಸರ್ಕಾರವು ಅಧಿಸೂಚಿಸಬಹುದಾದಂತೆ ಸರ್ಕಾರದ ಅಥವಾ ಯಾವುದೇ ಸರ್ಕಾರಿ ಸಮಿತಿಯ ಅಥವಾ ಕಂಪನಿಯ ಅಥವಾ ನಿಗಮದ ಅಧಿಕಾರಿಗಳ][1] ಹಾಜರಾತಿಯನ್ನು ಅಗತ್ಯಪಡಿಸಬಹುದು.
183. ವ್ಯವಹರಣೆಗಳ ವಿಧಿಮಾನ್ಯತೆ.

**ಅಧ್ಯಾಯ XI**

**ಜಿಲ್ಲಾ ಪಂಚಾಯತಿಯ, ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು, ಅಧಿಕಾರಗಳು**

184. ಜಿಲ್ಲಾ ಪಂಚಾಯತಿಯ ಪ್ರಕಾರ್ಯಗಳು.
185. ಪ್ರಕಾರ್ಯಗಳನ್ನು ವಹಿಸಿಕೊಡುವುದು.
186. ಸ್ಥಾಯಿ ಸಮಿತಿಗಳು.
187. ಸ್ಥಾಯಿ ಸಮಿತಿಗಳ ಪ್ರಕಾರ್ಯಗಳು.
188. ಸಮಿತಿಗಳ ಕಾರ್ಯವಿಧಾನ.
189. ಅಧಿಕಾರಿಗಳ ಪ್ರತ್ಯಾಯೋಜನೆ.

190. ರಸ್ತೆಯನ್ನು ಮಾರ್ಗಪಲ್ಲಟ ಮಾಡುವ, ಮುಂದುವರಿಸದಿರುವ ಅಥವಾ ಮುಚ್ಚುವ ಅಧಿಕಾರ.
191. ಜಿಲ್ಲಾ ಪಂಚಾಯತಿಯ ಸಾಮಾನ್ಯ ಅಧಿಕಾರಗಳು.
192. ನಿರ್ವಹಿಸಲಾಗದ ಸಂಚಾರ ನಿಯಂತ್ರಣ.
193. ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು.
194. ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು.
195. ಕರಾರುಗಳನ್ನು ಮಾಡಿಕೊಳ್ಳುವ ವಿಧಾನ

**ಅಧ್ಯಾಯ XII**

**ಜಿಲ್ಲಾ ಪಂಚಾಯತಿಯ ಸಿಬ್ಬಂದಿ**

196. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಇತರ ಅಧಿಕಾರಿಗಳು.
197. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಹಾಗೂ ಇತರ ಅಧಿಕಾರಿಗಳ ಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು.
198. ದಾಖಲೆ ಮುಂತಾದವುಗಳನ್ನು ಕಡ್ಡಾಯವಾಗಿ ಕೋರುವುದಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಹಕ್ಕು.

**ಅಧ್ಯಾಯ XIII**

**ತೆರಿಗೆಗಳು ಮತ್ತು ಫೀಜುಗಳು**

199. ಗ್ರಾಮ ಪಂಚಾಯತಿಗಳು ತೆರಿಗೆಗಳ ದರ ವಿಧಿಸುವುದು ಇತ್ಯಾದಿ.
199ಎ. ತೆರಿಗೆಗಳು ಮತ್ತು ದರಗಳ ಪರಿಷ್ಕರಣೆ.
200. ತೆರಿಗೆಗಳು ಮತ್ತು ಇತರ ಬಾಕಿಗಳ ವಸೂಲಿ.
201. ತೆರಿಗೆ ನಿರ್ಧರಣೆ ಮುಂತಾದವುಗಳ ವಿರುದ್ಧ ಅಪೀಲು.
202. ಕಾರ್ಖಾನೆ ಪ್ರದೇಶಗಳಲ್ಲಿ ತೆರಿಗೆಗಳ ಬಗ್ಗೆ ರಾಜಿ ಮಾಡಿಕೊಳ್ಳುವುದು.
203. ಸಂಗ್ರಹಣೆಗಾಗಿ ಏಜೆನ್ಸಿ.

**ಅಧ್ಯಾಯ XIV**

**ಸರ್ಕಾರದಿಂದ ಉಪಕರಗಳು ಮುಂತಾದವುಗಳನ್ನು ವಿಧಿಸುವುದು ಮತ್ತು ಆರ್ಥಿಕ ನೆರವು ನೀಡುವುದು**

204. ಸರ್ಕಾರವು ಸ್ಥಳೀಯ ಉಪಕರ ಮುಂತಾದವುಗಳನ್ನು ವಿಧಿಸುವುದು.
205. ಸ್ಥಿರ ಸ್ವತ್ತುಗಳ ವರ್ಗಾವಣೆಯ ಮೇಲೆ ಶುಲ್ಕ.
206. ಗ್ರಾಮ ಪಂಚಾಯತಿಗಳಿಗೆ ಅನುದಾನ.
207. ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸಿಬ್ಬಂದಿ ಅನುದಾನ.
208. ವಿವೇಚನಾತ್ಮಕ ಅನುದಾನ.

**ಅಧ್ಯಾಯ XV**

**ಪಂಚಾಯತಿಗಳ ಸ್ವತ್ತುಗಳು ಮತ್ತು ನಿಧಿಗಳು**

209. ಗ್ರಾಮ ಪಂಚಾಯತಿಯು, ಸ್ವತ್ತನ್ನು ಆರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು.
210. ಗ್ರಾಮ ಪಂಚಾಯತಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವುದು.
211. ಗ್ರಾಮ ಪಂಚಾಯತಿಯಿಂದ ಅಥವಾ ಅದರ ವಿರುದ್ಧವಾಗಿ ಸ್ವತ್ತಿನ ಬಗೆಗಿನ ಕ್ಲೇಮುಗಳ ತೀರ್ಮಾನ.
212. ಗ್ರಾಮ ಪಂಚಾಯಿತಿಯ ನಿಧಿ.
213. ಗ್ರಾಮ ಪಂಚಾಯತಿ ನಿಧಿಯನ್ನು ಮತ್ತು ಸ್ವತ್ತನ್ನು ಬಳಸುವುದು.
214. ಗ್ರಾಮ ಪಂಚಾಯತಿಯು ಸಾಲಗಳನ್ನು ಎತ್ತಬಹುದು ಮತ್ತು ಋಣ ಪರಿಹಾರ ನಿಧಿಯನ್ನು ರಚಿಸಬಹುದು.
215. ತಾಲ್ಲೂಕು ಪಂಚಾಯತಿಯು, ಸ್ವತ್ತನ್ನು ಆರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು.
216. ತಾಲ್ಲೂಕು ಪಂಚಾಯತಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವುದು.
217. ಸ್ವತ್ತಿಗೆ ತಾಲ್ಲೂಕು ಪಂಚಾಯತಿಯು ಅಥವಾ ಅದರ ವಿರುದ್ಧವಾಗಿ ಮಾಡಿದ ಕ್ಲೇಮುಗಳ ತೀರ್ಮಾನ.
218. ತಾಲ್ಲೂಕು ಪಂಚಾಯತಿ ನಿಧಿ.
219. ತಾಲ್ಲೂಕು ಪಂಚಾಯತಿ ನಿಧಿಯನ್ನು ಮತ್ತು ಸ್ವತ್ತನ್ನು ಬಳಸುವುದು.
220. ತಾಲ್ಲೂಕು ಪಂಚಾಯಿಯು ಸಾಲಗಳನ್ನು ಎತ್ತಬಹುದು ಮತ್ತು ಋಣಪರಿಹಾರ ನಿಧಿಯನ್ನು ರಚಿಸಬಹುದು.
221. ಬಾಡಿಗೆಗಳು ಮತ್ತು ಫೀಜುಗಳು.
222. ಜಿಲ್ಲಾ ಪಂಚಾಯತಿಯು, ಸ್ವತ್ತನ್ನು ಆರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು.
223. ಜಿಲ್ಲಾ ಪಂಚಾಯತಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವುದು.
224. ಸ್ವತ್ತಿಗೆ ಜಿಲ್ಲಾ ಪಂಚಾಯತಿಯು ಅಥವಾ ಅದರ ವಿರುದ್ಧವಾಗಿ ಮಾಡಿದ ಕ್ಲೇಮುಗಳ ತೀರ್ಮಾನ.
225. ಜಿಲ್ಲಾ ಪಂಚಾಯತಿ ನಿಧಿ.
226. ಜಿಲ್ಲಾ ಪಂಚಾಯತಿಯ ನಿಧಿಯ ಅಭಿರಕ್ಷೆ ಮತ್ತು ಹೂಡಿಕೆ.
227. ಜಿಲ್ಲಾ ಪಂಚಾಯತಿ ನಿಧಿಯನ್ನು ಮತ್ತು ಸ್ವತ್ತನ್ನು ಬಳಸುವುದು.
228. ಬಾಡಿಗೆಗಳು ಮತ್ತು ಫೀಜುಗಳು.

229. ಜಿಲ್ಲಾ ಪಂಚಾಯತಿಯು ಸಾಲಗಳನ್ನು ಎತ್ತಬಹುದು ಮತ್ತು ಋಣಪರಿಹಾರ ನಿಧಿಯನ್ನು ರಚಿಸಬಹುದು.
230. ಬಜೆಟ್‌ನಲ್ಲಿ ಒಳಗೊಳ್ಳದಿರುವ ವೆಚ್ಚಕ್ಕೆ ನಿರ್ಬಂಧ.
231. ಸರ್ಕಾರದ ರಸ್ತೆಗಳು ಮತ್ತು ಇತರ ಸ್ವತ್ತನ್ನು ಜಿಲ್ಲಾ ಪಂಚಾಯತಿಗೆ ವಹಿಸಿಕೊಡಬಹುದು.

**ಅಧ್ಯಾಯ XVI**

**ಆಡಳಿತ, ಪರಿವೀಕ್ಷಣೆ, ಮೇಲ್ವಿಚಾರಣೆ ಮತ್ತು ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್‌ದ ಆಯುಕ್ತರ ಕಾರ್ಯಾಲಯದ (ಕಮೀಷನರೇಟಿನ) ಸೃಜನೆ**

232. ಪರಿವೀಕ್ಷಣೆಯ ಮತ್ತು ಮೇಲ್ವಿಚಾರಣೆಯ ಅಧಿಕಾರ.
232ಎ. ಪಂಚಾಯತ್‌ರಾಜ್ ಆಯುಕ್ತರ ಕಾರ್ಯಾಲಯದ ಸ್ಥಾಪನೆ.
232ಬಿ. ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆಯ ಸ್ಥಾಪನೆ.
233. ತಾಂತ್ರಿಕ ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ.
234. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಸಂಬಂಧಪಟ್ಟಂತೆ ಸರ್ಕಾರದ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧಿಕಾರಗಳು.
235. ಗ್ರಾಮ ಪಂಚಾಯತಿಯು, ತಾಲ್ಲೂಕು ಪಂಚಾಯತಿಯು ಅಥವಾ ಜಿಲ್ಲಾ ಪಂಚಾಯತಿಯು ತಪ್ಪು ಎಸಗಿದ್ದಾಗ ಕರ್ತವ್ಯಗಳನ್ನು ನೆರವೇರಿಸಲು ಸರ್ಕಾರದ ಅಥವಾ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯ ಅಧಿಕಾರಗಳು.
236. ಗ್ರಾಮ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ, ಜಿಲ್ಲಾ ಪಂಚಾಯತಿಯ ವ್ಯವಹಾರಗಳ ಬಗ್ಗೆ ಸರ್ಕಾರವು ವಿಚಾರಣೆ ನಡೆಸುವುದು.
237. ಕಾನೂನು ಬಾಹಿರ ಆದೇಶದ ಅಥವಾ ನಿರ್ಣಯದ ಅಮಾಲ್ಜಾರಿಯನ್ನು ಅಮಾನತುಗೊಳಿಸುವ ಅಧಿಕಾರ.
238. ಸಾಮಗ್ರಿ ಮತ್ತು ಸಾಧನ ಸಲಕರಣೆಗಳ ಖರೀದಿ.
239. ಕೆಲವು ಸಂದರ್ಭಗಳಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಅಧಿಕಾರ.
240. ಪಂಚಾಯತಿಗಳ ಪಾತ್ರವನ್ನು ನಿರ್ದಿಷ್ಟಪಡಿಸಲು ಸರ್ಕಾರದ ಅಧಿಕಾರ.

**ಅಧ್ಯಾಯ XVII**

**ಹಣಕಾಸು ನಿಯಂತ್ರಣ ಮತ್ತು ಲೆಕ್ಕ ಪರಿಶೋಧನೆ**

241. ಗ್ರಾಮ ಪಂಚಾಯತಿಯ ಲೆಕ್ಕಗಳ ಮತ್ತು ಬಜೆಟ್‌ನ ಮಂಡನೆ.
242. ಬಜೆಟ್ ಪರಿಷ್ಕರಣೆ.
243. ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ವೆಚ್ಚದ ಮೇಲೆ ನಿರ್ಬಂಧ.
244. ಲೆಕ್ಕಪತ್ರಗಳ ರವಾನೆ.
245. ವಸೂಲಾಗದ ಮೊತ್ತಗಳನ್ನು ವಜಾ ಮಾಡಲು ಅಧಿಕಾರ.
246. ಲೆಕ್ಕಪತ್ರಗಳ ಪರಿಶೋಧನೆ.
247. ತಾಲ್ಲೂಕು ಪಂಚಾಯತಿಯ ಲೆಕ್ಕಪತ್ರಗಳ ಮತ್ತು ಬಜೆಟ್‌ನ ಮಂಡನೆ.
248. ಬಜೆಟ್ ಪರಿಷ್ಕರಣೆ.
249. ಪೂರಕ ಬಜೆಟ್.
250. ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ವೆಚ್ಚದ ಮೇಲೆ ನಿರ್ಬಂಧ.
251. ಲೆಕ್ಕಪತ್ರಗಳ ರವಾನೆ.
252. ವಸೂಲಾಗದ ಮೊತ್ತಗಳನ್ನು ವಜಾ ಮಾಡುವ ಅಧಿಕಾರ.
253. ಲೆಕ್ಕಪತ್ರಗಳ ಪರಿಶೋಧನೆ.
254. ಲೆಕ್ಕಪರಿಶೋಧನಾ ವರದಿಯ ಮೇಲೆ ತಾಲ್ಲೂಕು ಪಂಚಾಯತಿಯ ಕ್ರಮ.
255. ಅನುಮತಿಸಿಲ್ಲದ ಮೊಬಲಗುಗಳ ವಸೂಲಿ.
256. ಜಿಲ್ಲಾ ಪಂಚಾಯತಿಯ ಲೆಕ್ಕಪತ್ರಗಳು ಮತ್ತು ಬಜೆಟ್ಟಿನ ಮಂಡನೆ.
257. ಬಜೆಟ್ ಪರಿಷ್ಕರಣೆ.
258. ಪೂರಕ ಬಜೆಟ್.
259. ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ವೆಚ್ಚದ ಮೇಲೆ ನಿರ್ಬಂಧ.
260. ಲೆಕ್ಕಪತ್ರಗಳ ರವಾನೆ.
261. ವಸೂಲಾಗದ ಮೊತ್ತಗಳನ್ನು ವಜಾಮಾಡುವ ಅಧಿಕಾರ.
262. ಲೆಕ್ಕಪತ್ರಗಳ ಪರಿಶೋಧನೆ.
263. ಲೆಕ್ಕಪರಿಶೋಧಕನ ವರದಿಯ ಮೇಲೆ ಜಿಲ್ಲಾ ಪಂಚಾಯತಿಯ ಕ್ರಮ.
264. ಅನುಮತಿಸಿಲ್ಲದ ಮೊಬಲಗುಗಳ ವಸೂಲಿ.
265. ಜಿಲ್ಲಾ ಪಂಚಾಯತಿಗಳ ಮತ್ತು ತಾಲ್ಲೂಕು ಪಂಚಾಯತಿಗಳ ಬಾಕಿಗಳ ವಸೂಲಿಗೆ ಕಾರ್ಯವಿಧಾನ.
266. ಜಪ್ತಿ ಮತ್ತು ಮಾರಾಟದ ಷರತ್ತುಗಳು.
267. ಹಣಕಾಸು ಆಯೋಗ.

**ಅಧ್ಯಾಯ XVIII**

**ಸಂಕೀರ್ಣ**

268. ಪಂಚಾಯತಿಗಳ ವಿಸರ್ಜನೆ.
269. ಅಪೀಲುಗಳು.

270. ಸಮಿತಿಗಳ ತೀರ್ಮಾನಗಳ ಮೇಲೆ ಅಧಿಕಾರ.
271. ಚುನಾವಣಾ ಉದ್ದೇಶಗಳಿಗಾಗಿ ಆವರಣ, ವಾಹನಗಳು ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು.
272. ನಷ್ಟ ಪರಿಹಾರ ಸಂದಾಯ.
273. ಮಾಹಿತಿಯನ್ನು ಪಡೆಯುವ ಅಧಿಕಾರ.
274. ಆವರಣ ಇತ್ಯಾದಿಗಳಿಗೆ ಪ್ರವೇಶಿಸುವ ಮತ್ತು ಅವುಗಳನ್ನು ಪರಿಶೀಲಿಸುವ ಅಧಿಕಾರ.
275. ಕಡ್ಡಾಯವಾಗಿ ಕೋರಲಾದ ಆವರಣಗಳಿಂದ ಹೊರ ಹಾಕುವುದು.
276. ಕಡ್ಡಾಯ ಕೋರಿಕೆಯಿಂದ ಆವರಣಗಳ ಬಿಡುಗಡೆ.
277. ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ಯಾವುದೇ ಆದೇಶದ ಉಲ್ಲಂಘನೆಗೆ ದಂಡನೆ.
278. ಅನರ್ಹಗೊಂಡಿದ್ದಾಗ ಸದಸ್ಯ, ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸುವುದಕ್ಕಾಗಿ ದಂಡನೆ.
279. ಹಿತಾಸಕ್ತಿಯನ್ನು ಹೊಂದಿದ್ದ ಸದಸ್ಯನು, ಮತ ಚಲಾಯಿಸಿದ್ದಕ್ಕಾಗಿ ದಂಡನೆ.
280. ಕರಾರಿನಲ್ಲಿನ ಹಿತಾಸಕ್ತಿಯನ್ನು ಅಧಿಕಾರಿ ಅಥವಾ ನೌಕರನು ಆರ್ಜಿಸಿರುವುದಕ್ಕಾಗಿ ದಂಡನೆ.
281. ಕೆಲವು ಅಧಿಕಾರಿಗಳನ್ನು ಅಕ್ರಮವಾಗಿ ಅಡ್ಡಿಪಡಿಸುವುದು.
282. ಅಧ್ಯಕ್ಷ ಅಥವಾ ಉಪಾಧ್ಯಕ್ಷ ಮುಂತಾದವರನ್ನು ಅಡ್ಡಿಪಡಿಸುವುದರ ವಿರುದ್ಧ ನಿಷೇಧ.
283. ನೋಟೀಸನ್ನು ತೆಗೆದುಹಾಕುವುದು ಅಥವಾ ಅಳಿಸಿ ಹಾಕುವುದರ ವಿರುದ್ಧ ನಿಷೇಧ.
284. ಮಾಹಿತಿಯನ್ನು ಕೊಡದೆ ಇರುವುದಕ್ಕೆ ಅಥವಾ ಸುಳ್ಳು ಮಾಹಿತಿಯನ್ನು ಕೊಡುವುದಕ್ಕಾಗಿ ದಂಡನೆ.
285. ಸವಾಲು ಕೂಗುವುದರ ನಿಷೇಧ.
286. ಪಂಚಾಯತಿಗಳ ಸದಸ್ಯರು ಮತ್ತು ಅವುಗಳ ಅಧಿಕಾರಿಗಳು ಮತ್ತು ನೌಕರರಿಗೆ 'ಲೋಕ ನೌಕರ' ಎಂಬ ಪದದ ಅನ್ವಯ.
287. ಜುಲ್ಮಾನೆಗಳನ್ನು ಪಂಚಾಯತಿ ನಿಧಿಗೆ ಜಮೆ ಮಾಡತಕ್ಕದ್ದು.
288. ಪಂಚಾಯತಿಗಳ ಯಾವುದೇ ಸ್ವತ್ತಿಗೆ ಉಂಟಾದ ಹಾನಿ ಮತ್ತು ಅದನ್ನು ತುಂಬಿ ಕೊಡುವ ಬಗೆ.
289. ಪಂಚಾಯತಿಗಳ ವಿರುದ್ಧ ದಾವೆಗಳನ್ನು ಹೂಡುವುದಕ್ಕೆ ಸಂಬಂಧಿಸಿದಂತೆ ನಿರ್ಬಂಧಗಳು.
290. ಸರ್ಕಾರವು ಲೈಸೆನ್ಸುಗಳು ಮತ್ತು ಅನುಮತಿಗಳನ್ನು ಪಡೆಯಬೇಕಾಗಿಲ್ಲ.
291. ಚುನಾವಣಾ ವ್ಯವಹರಣೆಗಳಲ್ಲಿ ನಿರ್ಬಂಧಕಾಜ್ಞೆಗಳನ್ನು ಕೊಡತಕ್ಕದ್ದಲ್ಲ.
292. ಇತರ ಯಾವುದೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿಲ್ಲದ ಆದೇಶಗಳು ಮತ್ತು ನೋಟೀಸುಗಳ ಉಲ್ಲಂಘನೆಗಾಗಿ ದಂಡ.
293. ಮಾಲೀಕ ಅಥವಾ ಅನುಭವದಾರನು ತಪ್ಪಿದಲ್ಲಿ ಪಂಚಾಯತಿಯು ಕಾಮಗಾರಿಗಳನ್ನು ನಿರ್ವಹಿಸಬಹುದು ಮತ್ತು ವೆಚ್ಚಗಳನ್ನು ವಸೂಲಿ ಮಾಡಬಹುದು.
294. ಖರ್ಚು ಅಥವಾ ವೆಚ್ಚಗಳನ್ನು ನಿರ್ಧರಿಸುವ ಮತ್ತು ವಸೂಲು ಮಾಡುವ ಬಗೆ.
295. ದಾವೆಗಳ ಪ್ರತಿಷೇಧ ಇತ್ಯಾದಿ.
296.ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ.
296ಎ. ಕುಂದು ಕೊರತೆ ನಿವಾರಣಾ ಪ್ರಾಧಿಕಾರ.
296ಬಿ. ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಅಧಿಕಾರಗಳು ಮತ್ತು ಕರ್ತವ್ಯಗಳು
296ಸಿ. ಅಪೀಲು
296ಡಿ. ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಪದಾವಧಿ.
296ಇ. ರಾಜೀನಾಮೆ ಮತ್ತು ತೆಗೆದುಹಾಕುವುದು
296ಎಫ್. ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಪ್ರಕ್ರಿಯೆ ಮತ್ತು ವಿಧಾನಗಳು
296ಜಿ. ತನಿಖೆಗೆ ಒಳಪಡದ ವಿಷಯಗಳು
296ಎಚ್. ಬಾಕಿ ಪ್ರಕರಣಗಳ ವರ್ಗಾವಣೆ
296ಐ. ಕೈಗೊಂಡ ಕ್ರಮದ ವರದಿ.
297. ದಾವೆಯ ಮೂಲಕ ಪರ್ಯಾಯ ಪ್ರಕ್ರಿಯೆ.
298. ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳಿಗಾಗಿ ದಂಡನೆ ಮತ್ತು ರಾಜಿ ಮಾಡಿಕೊಳ್ಳಲು ಅಧಿಕಾರ.
299. ಪೊಲೀಸ್ ಅಧಿಕಾರಿಗಳ ಅಧಿಕಾರಗಳು.
300. ವಾರ್ಷಿಕ ಆಡಳಿತ ವರದಿ.
301. ಸರ್ಕಾರಿ ಬಾಕಿ, ಇತ್ಯಾದಿಗಳ ಹೊಂದಾಣಿಕೆ.
302. ಒಂದು ಪಂಚಾಯತಿ ಪ್ರದೇಶದ ಭಾಗವನ್ನು ಅಥವಾ ಜಿಲ್ಲಾ ಅಥವಾ ತಾಲ್ಲೂಕು ಪರಿಮಿತಿಗಳಲ್ಲಿರುವ ಒಂದು ಪ್ರದೇಶವನ್ನು ದೊಡ್ಡ ನಗರ ಮುಂತಾದುವುಗಳೊಳಗೆ ವಿಲೀನಗೊಳಿಸುವುದರ ಪರಿಣಾಮ.
302ಎ. ಅಸ್ತಿತ್ವದಲ್ಲಿದ್ದ ಜಿಲ್ಲೆಗಳು ಮತ್ತು ತಾಲ್ಲೂಕುಗಳ ಪರಿಮಿತಿಗಳನ್ನು ಬದಲಾಯಿಸುವ ಮೂಲಕ ಹೊಸ ಜಿಲ್ಲೆ ಮತ್ತು ತಾಲ್ಲೂಕುಗಳ ರಚನೆ.
302ಬಿ. ಒಂದು ಪಂಚಾಯತಿ ಪ್ರದೇಶದ ಭಾಗವನ್ನು ಅಥವಾ ಜಿಲ್ಲಾ ಅಥವಾ ತಾಲ್ಲೂಕು ಪರಿಮಿತಿಗಳಲ್ಲಿರುವ ಯಾವುದೇ ಪ್ರದೇಶವನ್ನು ಇನ್ನೊಂದು ಪಂಚಾಯತಿ ಪ್ರದೇಶ, ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ವಿಲೀನಗೊಳಿಸುವುದರ ಪರಿಣಾಮ.
303. ಸ್ವತ್ತಿನ ವರ್ಗಾವಣೆಯು ಷರತ್ತುಗಳಿಗೊಳಪಟ್ಟಿರಬಹುದು.
304. ಕಾರ್ಯಗಳು ಮತ್ತು ವ್ಯವಹರಣೆಗಳ ಉಳಿಸುವಿಕೆ.
305. ಸಮಾಲೋಚನಾ ಪ್ರಕ್ರಿಯೆ.
306. ನೋಟೀಸು ಇತ್ಯಾದಿಗಳನ್ನು ಜಾರಿಮಾಡುವ ವಿಧಾನ.
307. ಧ್ವಜದ ಅಧಿಕೃತ ಪ್ರದರ್ಶನ.

308. ರಾಜ್ಯ ಚುನಾವಣಾ ಆಯೋಗ.
308ಎ. ಕೆಲವು ಪ್ರಾಧಿಕಾರಗಳ ಸಿಬ್ಬಂದಿಯನ್ನು ಚುನಾವಣಾ ಕೆಲಸಕ್ಕೆ ಲಭ್ಯವಾಗುವಂತೆ ಮಾಡುವುದು.
308ಎಎ. ಚುನಾವಣೆಗಳ ವೇಳಾಪಟ್ಟಿ.
308ಎಬಿ. ನಾಮ ಪತ್ರಗಳನ್ನು ಸಲ್ಲಿಸುವುದು ಮೊದಲಾದವುಗಳಿಗಾಗಿ ದಿನಾಂಕಗಳ ಅಧಿಸೂಚನೆ.
308ಎಸಿ. ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟುವುದು
308ಎಡಿ. ಚುನಾವಣಾ ವೆಚ್ಚದ ಲೆಕ್ಕ ಮತ್ತು ಆ ವೆಚ್ಚದ ಗರಿಷ್ಠ ಮೊತ್ತ
308ಬಿ. ರಿಟರ್ನಿಂಗ್ ಆಫೀಸರನಿಗೆ ಲೆಕ್ಕಪತ್ರಗಳನ್ನು ಸಲ್ಲಿಸುವಿಕೆ.
309ಎ. ಪಂಚಾಯತ್‌ಗಳಿಗಾಗಿ ವಿಕೇಂದ್ರೀಕರಣ ಯೋಜನೆ.
309ಬಿ. ದೂರದೃಷ್ಟಿ ಯೋಜನೆ.
309ಸಿ. ತಾಲ್ಲೂಕು ಪಂಚಾಯತ್ ಯೋಜನೆ
309ಡಿ. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ.
309ಇ. ಯೋಜನೆ ಮತ್ತು ಅಭಿವೃದ್ಧಿಯ ಕಾರ್ಯವಿಧಾನ.
309ಎಫ್. ಜಿಲ್ಲಾ ಪಂಚಾಯತ್ ಯೋಜನೆ.
309ಜಿ. ಜಿಲ್ಲಾ ಅಭಿವೃದ್ಧಿ ಯೋಜನೆ.
309ಎಚ್. ಕೈಗೊಂಡ ಕ್ರಮದ ವರದಿ.
308ಸಿ. ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಸಲ್ಲಿಸುವುದಕ್ಕೆ ತಪ್ಪುವುದು.
308ಡಿ. ರಿಟರ್ನಿಂಗ್ ಆಫೀಸರ್ ಮುಂತಾದವರು ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿ ನಿಯೋಜನೆಯ ಮೇಲೆ ಇರುವುದಾಗಿ ಭಾವಿಸತಕ್ಕದ್ದು.
309. ಅಭಿವೃದ್ಧಿ ಯೋಜನೆಯ ತಯಾರಿಕೆ.
310. ಜಿಲ್ಲಾ ಯೋಜನಾ ಸಮಿತಿ.
310ಎ. ರಾಜ್ಯ ಪಂಚಾಯತಿ ಪರಿಷತ್ತು.
310ಬಿ. ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ.

**ಅಧ್ಯಾಯ XIX**

**ನಿಯಮಗಳು, ವಿನಿಮಯಗಳು ಮತ್ತು ಉಪವಿಧಿಗಳು**

311. ನಿಯಮಗಳನ್ನು ರಚಿಸಲು ಸರ್ಕಾರದ ಅಧಿಕಾರ.
312. I, II ಮತ್ತು III ನೇ ಅನುಸೂಚಿಗಳ ತಿದ್ದುಪಡಿ.
313. ವಿನಿಯಮಗಳನ್ನು ರಚಿಸಲು ಜಿಲ್ಲಾ ಪಂಚಾಯತಿಗಳ ಅಧಿಕಾರ.
314. ವಿನಿಯಮಗಳನ್ನು ರಚಿಸಲು ತಾಲ್ಲೂಕು ಪಂಚಾಯತಿಗಳ ಅಧಿಕಾರ.
315. ಉಪವಿಧಿಗಳನ್ನು ಮಾಡಲು ಗ್ರಾಮ ಪಂಚಾಯತ್‌ನ ಅಧಿಕಾರ
315ಎ. ಗ್ರಾಮ ಪಂಚಾಯತಿಯ ಉಪ ವಿಧಿಗಳನ್ನು ರದ್ದುಪಡಿಸುವ ಅಥವಾ ಮಾರ್ಪಡಿಸುವ ಸರ್ಕಾರದ ಅಧಿಕಾರ
316. ಮಾದರಿ ವಿನಿಯಮಗಳು ಮತ್ತು ಉಪವಿಧಿಗಳನ್ನು ರಚಿಸಲು ಸರ್ಕಾರದ ಅಧಿಕಾರ ಮತ್ತು ಪಂಚಾಯತಿಗಳು ಅಂಥ ನಿಯಮಗಳು ಮತ್ತು ಉಪವಿಧಿಗಳನ್ನು ಅಳವಡಿಸಿಕೊಳ್ಳುವುದು.
317. ಕಾನೂನುಗಳನ್ನು ಅಳವಡಿಸಲು ಸರ್ಕಾರದ ಅಧಿಕಾರ.
318. ನಿರಸನ ಮತ್ತು ಉಳಿಸುವಿಕೆಗಳು.
319. ಈ ಅಧಿನಿಯಮವನ್ನು ಜಾರಿಗೊಳಿಸುವ ಆದೇಶಗಳು.
320. ರಾಜ್ಯ ವಿಧಾನಮಂಡಲದ ಸದನಗಳ ಮುಂದೆ ಮಂಡಿಸಬೇಕಾದ ನಿಯಮಗಳು ಮತ್ತು ಆದೇಶಗಳು.
321. ತೊಂದರೆಗಳ ನಿವಾರಣೆ.
ಅನುಸೂಚಿ - I
ಅನುಸೂಚಿ - II
ಅನುಸೂಚಿ - III
ಅನುಸೂಚಿ - IV
ಅಧಿಸೂಚನೆ

*****

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**I**

**1993ರ ಅಧಿನಿಯಮ 14.-** 1991ರ ಎಪ್ಪತ್ತೆರಡನೆ ಸಂವಿಧಾನ ತಿದ್ದುಪಡಿ ವಿಧೇಯಕದಲ್ಲಿ ಪ್ರಸ್ತಾವಿಸಿರುವ ಬದಲಾವಣೆಗಳ ಪರಿಣಾಮವಾಗಿ 1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮದ ಬದಲಾಗಿ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 1993ನ್ನು ಮಂಡಿಸಬೇಕಾಗಿದೆ.

ರಾಜ್ಯದಲ್ಲಿನ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನರು ಹೆಚ್ಚಾಗಿ ಪಾಲುಗೊಳ್ಳುವಂತೆ ಮಾಡುವ ಮತ್ತು ಆ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಸಲುವಾಗಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾಮಟ್ಟಗಳಲ್ಲಿ ಚುನಾಯಿತ ಸಂಸ್ಥೆಗಳು ಇರುವ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸ್ಥಾಪಿಸಲು ಈ ವಿಧೇಯಕ.

ವಿಧೇಯಕದ ಮುಖ್ಯಾಂಶಗಳು ಈ ಮುಂದಿನಂತಿವೆ,-

1. ಈಗಾಗಲೇ ಅಂಕಿ ಅಂಶಗಳನ್ನು ಪ್ರಕಟಿಸಲಾಗಿರುವ ಹಿಂದಿನ ಜನಗಣತಿಯಿಂದ ಖಚಿತ ಪಡಿಸಿಕೊಳ್ಳಲಾದ ಜನಸಂಖ್ಯೆ ಆಧಾರದ ಮೇಲೆ ಮೂರು ಹಂತದ ಪಂಚಾಯತಿ ವ್ಯವಸ್ಥೆಯನ್ನು ಸ್ಥಾಪಿಸಬೇಕಾಗಿದೆ.

2. ವಿಧೇಯಕಲ್ಲಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದವರಿಗೆ ಅವರವರ ಸಂಖ್ಯೆಯ ಪ್ರಮಾಣಕ್ಕನುಸಾರವಾಗಿ ಸ್ಥಾನಗಳ ಮೀಸಲಾತಿಯನ್ನು ಮತ್ತು ಮಹಿಳೆಯರಿಗೆ ಎಲ್ಲಾ ಹಂತಗಳಲ್ಲೂ ಮೂರನೇ ಒಂದರಷ್ಟು ಸ್ಥಾನಗಳನ್ನು ಮೀಸಲಿಡಲು ಉಪಬಂಧ ಕಲ್ಪಿಸಲಾಗಿದೆ.

3. ಇದರಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದವರಿಗಾಗಿ ಎಲ್ಲಾ ಹಂತಗಳಲ್ಲಿಯೂ ಸ್ಥಾನಗಳ ಮತ್ತು ಆಧ್ಯಕ್ಷರ ಹುದ್ದೆಗಳ ಮೀಸಲಾತಿಯನ್ನು ಸಹ ಕಲ್ಪಸಲಾಗಿದೆ.

4. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದವರಿಗೆ ಹಾಗೂ ಮಹಿಳೆಯರಿಗೆ ಆಧ್ಯಕ್ಷರ ಹುದ್ದೆಗಳ ಮೀಸಲಾತಿಯನ್ನು ಸಹ ಕಲ್ಪಿಸಲಾಗಿದೆ.

5. ರಾಜ್ಯ ಚುನಾವಣಾ ಆಯೋಗ, ಹಣಕಾಸು ಆಯೋಗ ಮತ್ತು ಜಿಲ್ಲಾ ಯೋಜನಾ ಸಮಿತಿ ಇವುಗಳ ರಚನೆಯೂ ಸಹ ಇದರಲ್ಲಿ ಒಳಗೊಂಡಿದೆ.

ಆದ್ದರಿಂದ ಈ ವಿಧೇಯಕ.

(1993ರ ವಿಧಾನ ಸಭಾ ವಿಧೆಯಕ ಸಂಖ್ಯೆ 21ರಲ್ಲಿದ್ದಂತೆ.)

## II

**1995ರ ತಿದ್ದುಪಡಿ ಅಧಿನಿಯಮ 10.-** (i) ಸರ್ಕಾರವು ಹಿಂದುಳಿದ ವರ್ಗಗಳನ್ನು ನಿಯಮಗಳನ್ನು ರಚಿಸುವ ಮೂಲಕ ನಿರ್ದಿಷ್ಟಪಡಿಸದೆ, ಅಧಿಸೂಚನೆಯನ್ನು ಹೊರಡಿಸುವ ಮೂಲಕ ನಿರ್ದಿಷ್ಟಪಡಿಸಲು ಉಪಬಂಧ ಕಲ್ಪಿಸಲು;

(ii) ಹಿಂದಳಿದ ವರ್ಗದವರಿಗಾಗಿ ಮೀಸಲಿರಿಸಿದ ಸ್ಥಾನಗಳು ಮತ್ತು ಅಧ್ಯಕ್ಷರ ಹುದ್ದೆಗಳಲ್ಲಿ ಅನುಕ್ರಮವಾಗಿ "ಎ"ಪ್ರವರ್ಗಕ್ಕೆ ಸೇರಿದವರಿಗೆ ಶೇಕಡಾ ಎಂಬತ್ತರಷ್ಟನ್ನು ಮತ್ತು "ಬಿ" ಪ್ರವರ್ಗಕ್ಕೆ ಸೇರಿದವರಿಗೆ ಶೇಕಡಾ ಇಪ್ಪತ್ತರಷ್ಟನ್ನು ಪ್ರತ್ಯೇಕವಾಗಿ ಮೀಸಲಿರಿಸಲು ಉಪಬಂಧ ಕಲ್ಪಿಸಲು;

(iii) ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿಗಾಗಿ ಹದಿನೆಂಟು ಸಾವಿರ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನಿಗಾಗಿ ಉಪಬಂಧ ಕಲ್ಪಿಸಲು; ಮತ್ತು

(iv) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಅವರ ಜನಸಂಖ್ಯೆಯ ಪ್ರಮಾಣವನ್ನು ಪರಿಗಣಿಸದೆ ಅನುಕ್ರಮವಾಗಿ ಶೇಕಡಾ ಹದಿನೈದು ಮತ್ತು ಶೇಕಡಾ ಮೂರರಷ್ಟು ಕನಿಷ್ಠ ಮೀಸಲಾತಿಗೆ ಉಪಬಂಧ ಕಲ್ಪಿಸಲಾಗಿದ್ದು, ಅಂಥ ಉಪಬಂಧಗಳನ್ನು ಬಿಟ್ಟುಬಿಡಲು,

-ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ತಿದ್ದುಪಡಿ ಮಾಡುವುದು ಯುಕ್ತವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನ ಸಭೆಯು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 1995ನ್ನು (ಕರ್ನಾಟಕ ಅಧ್ಯಾದೇಶ ಸಂಖ್ಯೆ 1) ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(1995ರ ವಿಧಾನ ಸಭಾ ವಿಧೆಯಕ ಸಂಖ್ಯೆ 8ರಲ್ಲಿದ್ದಂತೆ.)

## III

**1996ರ ತಿದ್ದುಪಡಿ ಅಧಿನಿಯಮ 9.-** ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುವ ಸಲುವಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ, ಅವುಗಳೆಂದರೆ:-

(1) 156 ಮತ್ತು 197ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ನೌಕರರು ಅಧ್ಯಕ್ಷರುಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಸಾಮಾನ್ಯ ಅಧಿಕಾರಗಳಿಗೊಳಪಟ್ಟು ಪ್ರಕಾರ್ಯಗಳನ್ನು ನಿರ್ವಹಿಸುವುದು;

(2) 152 ಮತ್ತು 193ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಿಗೆ ಕಾರ್ಯನಿರ್ವಾಹಕ ಮುಖ್ಯಸ್ಥನ ಸ್ಥಾನಮಾನವನ್ನು ನೀಡುವುದು;

(3) 159ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ ಜಿಲ್ಲಾ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯಲ್ಲಿ ಯಾವ ಲೋಕಸಭೆ ಮತ್ತು ರಾಜ್ಯ ವಿಧಾನಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳಿರುವುವೋ ಅಂತಹ ಸದಸ್ಯರನ್ನು ಮತ್ತು ಜಿಲ್ಲಾ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಮತದಾರರೆಂದು ನೋಂದಾಯಿತರಾದ ರಾಜ್ಯಸಭಾ ಸದಸ್ಯರನ್ನು ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ಮಾತ್ರ ಜಿಲ್ಲಾ ಪಂಚಾಯಿತಿಯ ಸದಸ್ಯರೆಂದು ಪರಿಗಣಿಸುವುದು.

ಆದ್ದರಿಂದ ಈ ವಿಧೇಯಕ;

(1996ರ ವಿಧಾನ ಸಭಾ ವಿಧೇಯಕ ಸಂಖ್ಯೆ 2ರಲ್ಲಿದ್ದಂತೆ.)

## IV

**1996ರ ತಿದ್ದುಪಡಿ ಅಧಿನಿಯಮ 17.-** ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ನ್ನು ಈ ಮುಂದಿನ ಉದ್ದೇಶಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ:-

(i) ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ಉದ್ದೇಶಕ್ಕಾಗಿ ಕರೆದಿರುವ ಯಾವುದೇ ಸಭೆಯನ್ನು ಕೋರಂ ಇಲ್ಲದ ಕಾರಣಕ್ಕಾಗಿ ಮರುದಿನಕ್ಕೆ ಅಥವಾ ಮುಂದಿನ ಯಾವುದೇ ದಿನಕ್ಕೆ ಮುಂದೂಡಲಾಗಿದ್ದಲ್ಲಿ, ಹಾಗೆ ಮುಂದೂಡಲಾದ ಸಭೆಯಲ್ಲಿ ಕೋರಂ ಅಗತ್ಯತೆಗೆ ವಿನಾಯತಿ ನೀಡುವುದು;

(ii) ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿಯನ್ನು ಇಪ್ಪತ್ತು ತಿಂಗಳುಗಳಿಗೆ ನಿರ್ಬಂಧಿಸುವುದು;

(iii) ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸ್ಥಾಯೀ ಸಮಿತಿಯ ಪ್ರತಿಯೊಬ್ಬ ಸದಸ್ಯನ ಹುದ್ದೆಯ ಅವಧಿಯನ್ನು ಇಪ್ಪತ್ತು ತಿಂಗಳುಗಳಿಗೆ ನಿರ್ಬಂಧಿಸುವುದು;

(iv) "ಅಧಿಭಾರ" ಎಂಬ ಪದಕ್ಕೆ ಬದಲಾಗಿ "ಹೆಚ್ಚುವರಿ ಸ್ಟಾಂಪು ಶುಲ್ಕ" ಎಂಬ ಪದಗಳನ್ನು ಇಡುವುದು.

ಆದುದರಿಂದ ವಿಧೇಯಕ.

(1996ರ ವಿಧಾನ ಸಭಾ ವಿಧೇಯಕ ಸಂಖ್ಯೆ 2ರಲ್ಲಿದ್ದಂತೆ.)

## V

**1997ರ ತಿದ್ದುಪಡಿ ಅಧಿನಿಯಮ 1**.- ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ನ್ನು,-

(1) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಚುನಾವಣೆ ನಡೆಸುವುದಕ್ಕಾಗಿ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಮೊದಲ ಸಭೆಯ ಅಧ್ಯಕ್ಷತೆ ವಹಿಸುವ ಅಧಿಕಾರಿಗಳು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳು ಖಾಲಿಯಿದ್ದಾಗ ಅವುಗಳನ್ನು ತುಂಬುವುದಕ್ಕೆ ನಡೆಸಲಾಗುವ ತರುವಾಯದ ಸಭೆಗಳ ಅಧ್ಯಕ್ಷತೆಯನ್ನು ಸಹ ವಹಿಸುವುದಕ್ಕೆ ಅವಕಾಶ ಕಲ್ಪಿಸಲು;

(2) ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಉಪಾಧ್ಯಕ್ಷರು ಅಧ್ಯಕ್ಷನ ಹುದ್ದೆ ಖಾಲಿಯಿದ್ದಾಗ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸುವಂತೆ ಮಾಡಲು;

(3) ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳ ಉಪಾಧ್ಯಕ್ಷರು, ಅಧ್ಯಕ್ಷನ ಹುದ್ದೆ ಖಾಲಿ ಇದ್ದಾಗ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯ ಸಭೆಯ ಅಧ್ಯಕ್ಷತೆ ವಹಿಸುವಂತೆ ಮಾಡಲು, ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ.

ಕೆಲವು ಆನುಷಂಗಿಕ ಬದಲಾವಣೆಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(1997ರ ವಿಧಾನ ಸಭಾ ವಿಧೇಯಕ ಸಂಖ್ಯೆ 5ರಲ್ಲಿದ್ದಂತೆ.)

## VI

**1997ರ ತಿದ್ದುಪಡಿ ಅಧಿನಿಯಮ 10**.- ಈ ಮುಂದಿನ ಕಾರಣಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಭಾವಿಸಲಾಗಿದೆ, ಎಂದರೆ:-

ಮಾನ್ಯ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ 7547/97ರಲ್ಲಿ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾಯಿಸಲಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಇಪ್ಪತ್ತು ತಿಂಗಳ ಪೂರ್ಣ ಅವಧಿಗೆ ಹುದ್ದೆಯನ್ನು ಹೊಂದಿರತಕ್ಕದ್ದೆಂದು ತೀರ್ಪುನೀಡಿದೆ. ಆದಾಗ್ಯೂ, ಯಾವ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸ್ಥಾನಕ್ಕೆ ಅವನು ಚುನಾಯಿತನಾಗಿರುವನೋ ಆ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಹುದ್ದೆಯು ಖಾಲಿಯಾಗಿರದಿದ್ದರೆ ಯಾವ ಅವಧಿಯವರೆಗೆ ಹುದ್ದೆಯನ್ನು ಅವನ್ನು ಹೊಂದಿರುತ್ತಿದ್ದನೋ ಆ ಉಳಿದ ಅವಧಿಗೆ ಮಾತ್ರ ಅವಧಿಯನ್ನು ಮಿತಿಗೊಳಿಸುವುದು ಕಾನೂನಿನ ಉದ್ದೇಶವಾಗಿದೆ. ಮೇಲಿನ ಉದ್ದೇಶವನ್ನು ನಿರ್ದಿಷ್ಟಪಡಿಸುವ ಸಲುವಾಗಿ, 138 ಮತ್ತು 177 ಈ ಎರಡು ಪ್ರಕರಣಗಳ (3)ನೇ ಉಪಪ್ರಕರಣಗಳಿಗೆ ಪರಂತುಕಗಳನ್ನು 1996ರ ಅಕ್ಟೋಬರ್ ಇಪ್ಪತ್ತನಾಲ್ಕರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಪಂಚಾಯತಿ ಪ್ರದೇಶಗಳ ಸಂಯೋಜನೆಗೆ ಸಂಬಂಧಪಟ್ಟ ಉಪಬಂಧವನ್ನು ಪುನರ್ ರೂಪಿಸಲು ಉದ್ದೇಶಸಲಾಗಿದೆ.

ಒಂದು ಪಂಚಾಯತಿ ಪ್ರದೇಶದ ಯಾವುದೇ ಭಾಗವನ್ನು ಅಥವಾ ತಾಲ್ಲೂಕು ಅಥವಾ ಜಿಲ್ಲೆಯ ಪರಿಮಿತಿಗಳೊಳಗಿನ ಯಾವುದೇ ಪ್ರದೇಶವನ್ನು ಯಾವುದೇ ದೊಡ್ಡ ನಗರ ಪ್ರದೇಶದಲ್ಲಿ, ಚಿಕ್ಕ ನಗರ ಪ್ರದೇಶದಲ್ಲಿ ಅಥವಾ ಪರಿವರ್ತಿತವಾಗಲಿರುವ ಪ್ರದೇಶದಲ್ಲಿ ವಿಲೀನಗೊಳಿಸಿದುದರ ಮತ್ತು ಪಂಚಾಯತಿ ಪ್ರದೇಶ ಅಥವಾ ತಾಲ್ಲೂಕು ಪರಿಮಿತಿಗಳಲ್ಲಿರುವ ಯಾವುದೇ ಪ್ರದೇಶವನ್ನು ಚಿಕ್ಕ ನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶವಾಗಿ ಪರಿವರ್ತಿಸಿದುದರ ಪರಿಣಾಮಗಳನ್ನು ಮತ್ತು ಅಸ್ತಿತ್ವದಲ್ಲಿದ್ದ ಜಿಲ್ಲೆಗಳು ಮತ್ತು ತಾಲ್ಲೂಕುಗಳ ಪರಿಮಿತಿಗಳನ್ನು ಬದಲಾವಣೆ ಮಾಡಿ ಹೊಸ ಜಿಲ್ಲೆಗಳು ಅಥವಾ ತಾಲ್ಲೂಕುಗಳ ರಚನೆಯಿಂದಾದ ಪರಿಣಾಮಗಳನ್ನು ಸವಿವರವಾಗಿ ನಿರೂಪಿಸಲು ಸಹ ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1997ರ ವಿಧಾನ ಸಭಾ ವಿಧೇಯಕ ಸಂಖ್ಯೆ 21ರಲ್ಲಿದ್ದಂತೆ.)

## VII

**1997ರ ತಿದ್ದುಪಡಿ ಅಧಿನಿಯಮ 29**.- ರಾಜ್ಯದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಅನುಶಾಸಿಸಿ ಪಂಚಾಯತ್ ರಾಜ್ ಸಂಸ್ಥೆಗಳ ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಗೆ ಮಾರ್ಗದರ್ಶಿಯಾಗಿರುವ ಕರ್ನಾಟಕ ರಾಜ್ಯವು ಈ ಸಂಸ್ಥೆಗಳನ್ನು ಎಲ್ಲ ಹಂತಗಳಲ್ಲೂ ಸ್ಥಳೀಯ ಸ್ವಯಂ ಸರ್ಕಾರದ ಘಟಕಗಳಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವಲ್ಲಿ ಶ್ರದ್ಧಾಪೂರ್ವಕವಾಗಿ ಶ್ರಮಿಸುತ್ತಿರುವುದರಿಂದ, ರಾಜ್ಯದಲ್ಲಿ ಈ ಸಂಸ್ಥೆಗಳ ಉತ್ತಮ ಆಡಳಿತ ಹಾಗೂ ಕಾರ್ಯನಿರ್ವಹಣೆಗಾಗಿ ಸಲಹೆಗಳನ್ನು ನೀಡುವ ಉದೇಶಕ್ಕಾಗಿ, ಶ್ರೀ ಪಿ. ಆರ್. ನಾಯಕ್‌ರವರ ಅಧ್ಯಕ್ಷತೆಯಲ್ಲಿ ತಜ್ಞ ಸಮಿತಿಯೊಂದನ್ನು ಅದು ನೇಮಕಮಾಡಿತು. ಸಮಿತಿಯು 1996ರ ಮಾರ್ಚ್‌ನಲ್ಲಿ ಅದರ ವರದಿಯನ್ನು ಒಪ್ಪಿಸಿದ್ದು, ಇದನ್ನು ರಾಜ್ಯ ಸರ್ಕಾರವು ಅಂಗೀಕರಿಸಿದೆ. ಈ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಿ, ಇತರ ವಿಷಯಗಳ ಜೊತೆಗೆ ಈ ಮುಂದಿನವುಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ಸಮಗ್ರವಾದ ತಿದ್ದುಪಡಿಯನ್ನು ತರಲು ಈಗ ಪ್ರಸ್ತಾಪಿಸಲಾಗಿದೆ:-

(1) ಪಂಚಾಯತ್ ರಾಜ್ ಸಂಸ್ಥೆಗಳು ಸ್ಥಳೀಯ ಸ್ವಯಂ ಸರ್ಕಾರದ ಘಟಕಗಳಂತೆ ಕಾರ್ಯನಿರ್ವಹಿಸತಕ್ಕದ್ದೆಂಬುದನ್ನು ಅಧಿನಿಯಮದ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಘೋಷಿಸುವಂತೆ ಮಾಡುವುದು;

(2) ಸಂವಿಧಾನದ 74ನೇ ತಿದ್ದುಪಡಿಯ ಪರಿಣಾಮವಾಗಿ, ನೈರ್ಮಲ್ಯ ಮಂಡಲಿಗಳು, ಪಟ್ಟಣ ಮಂಡಲಿಗಳು ಮತ್ತು ಅಧಿಸೂಚಿತ ಪ್ರದೇಶ ಸಮಿತಿಗಳಂತಹ ವಿವಿಧ ಸ್ಥಳೀಯ ನಿಕಾಯಗಳಿಗೆ 'ಪಟ್ಟಣ ಪಂಚಾಯತಿ' ಯೆಂದು ಏಕರೂಪವಾಗಿ ಹೆಸರು ನೀಡುವುದು;

(3) ಎಲ್ಲ ಗ್ರಾಮ ಪಂಚಾಯತಿಗಳ ಚುನಾಯಿತ ಸದಸ್ಯರುಗಳ ಸಂಖ್ಯೆಯನ್ನು ನಿರ್ಧರಿಸುವ ಬೇರೆಬೇರೆ ವರ್ಗಗಳಿಗೆ ಸ್ಥಾನಗಳನ್ನು ಮೀಸಲಿರಿಸುವ, ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸುವ ಮತ್ತು ಚುನಾಯಿತ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸುವ ಕಾರ್ಯಭಾರವನ್ನು ಸ್ವತಂತ್ರ ನಿಕಾಯವಾಗಿರುವ ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಿಕೊಡುವುದು;

(4) ಪಂಚಾಯತ್ ಸಂಸ್ಥೆಗಳ ಸದಸ್ಯರುಗಳಲ್ಲಿ ಪಂಚಾಯತಿಗಳ ಕಾಮಗಾರಿಗಳನ್ನು ನಿರ್ವಹಿಸುವುದರಲ್ಲಿ ಅದಕ್ಕೆ ಸರಕುಗಳನ್ನು ಮತ್ತು ಸೇವೆಗಳನ್ನು ಪೂರೈಸುವುದರಲ್ಲಿ ಪ್ರತ್ಯಕ್ಷವಾಗಿಯೇ ಅಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ತೊಡಗಿರುವಂಥ ಮತ್ತು ತಮ್ಮ ಕುಟುಂಬದ ಸದಸ್ಯರುಗಳ ಉಪಯೋಗಕ್ಕಾಗಿ ಶೌಚಗೃಹಗಳನ್ನು ಒದಗಿಸಿರದಂಥ ಸದಸ್ಯರುಗಳನ್ನು ಅನರ್ಹರನ್ನಾಗಿ ಮಾಡುವ ಬಗ್ಗೆ ಉಪಬಂಧ ಕಲ್ಪಿಸುವುದು;

(5) ಮತಗಟ್ಟೆಯನ್ನು ವಶಪಡಿಸಿಕೊಳ್ಳುವ ಅಪರಾಧವನ್ನು ವಿಷದೀಕರಿಸಿ ಈ ಅಪರಾಧಕ್ಕಾಗಿ ದಂಡನೆಯನ್ನು ವಿಧಿಸುವ ಬಗ್ಗೆ ಉಪಬಂಧ ಕಲ್ಪಿಸುವುದು ಮತ್ತು ಸರ್ಕಾರಿ ನೌಕರರುಗಳು ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟರಾಗಿ ಕಾರ್ಯನಿರ್ವಹಿಸುವ ಪ್ರವೃತ್ತಿಯನ್ನು ಕಠಿಣ ದಂಡನೆಯನ್ನು ವಿಧಿಸುವುದರ ಮೂಲಕ ತಡೆಗಟ್ಟುವುದು;

(6) ಪಂಚಾಯತಿಗಳ ಅಧ್ಯಕ್ಷರುಗಳು, ಸದಸ್ಯರುಗಳ ರಾಜೀನಾಮೆ ಪತ್ರವನ್ನು ಪಂಚಾಯತಿಯ ಸಭೆಗಳ ಮುಂದೆ ಮಂಡಿಸುವಂತೆ ಅವರನ್ನು ಅಗತ್ಯಪಡಿಸುವುದು;

(7) ಪರಿಭಾಷಿಸಲ್ಪಟ್ಟ ದುರ್ನಡತೆಗಾಗಿ ಗ್ರಾಮ ಪಂಚಾಯಿತಿಯ ಸದಸ್ಯರುಗಳನ್ನು ತೆಗೆದುಹಾಕುವ ಬಗ್ಗೆ ಉಪಬಂಧ ಕಲ್ಪಿಸುವುದು;

(8) ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಚುನಾವಣೆಯನ್ನು ಚುನಾಯಿತ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳಿನೊಳಗೆ ನಡೆಸತಕ್ಕದ್ದೆಂದು ಸ್ಪಷ್ಟವಾಗಿ ಸೂಚಿಸುವುದು;

(9) ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಹುದ್ದೆಗಳ ಅವಧಿಯ ಸ್ಥಿರತೆಯನ್ನು ಸಂರಕ್ಷಿಸುವ ಕ್ರಮವಾಗಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಆತನು ಚುನಾಯಿತನಾದ ದಿನಾಂಕದಿಂದ ಒಂದು ವರ್ಷದೊಳಗೆ ಮತ್ತು ಅಂಥ ನಿರ್ಣಯದ ಬಗ್ಗೆ ಕೊನೆಯದಾಗಿ ತೀರ್ಮಾನ ನೀಡಿದ ದಿನಾಂಕದಿಂದ ಒಂದು ವರ್ಷದೊಳಗೆ ಮತ್ತು ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯ ಸಂದರ್ಭದಲ್ಲಿ ಅಂಥ ದಿನಾಂಕದಿಂದ ಆರು ತಿಂಗಳುಗಳೊಳಗೆ ಮತ್ತೆ ಮಂಡಿಸತಕ್ಕದ್ದಲ್ಲವೆಂದು ಉಪಬಂಧ ಕಲ್ಪಿಸುವುದು;

(10) ಎಲ್ಲ ಪಂಚಾಯತಿ ಸಂಸ್ಥೆಗಳ ಮೇಲೆ ಕೆಲವು ಪ್ರಕಾರ್ಯಗಳನ್ನು ಕಡ್ಡಾಯವನ್ನಾಗಿ ಮಾಡುವುದು ಮತ್ತು ಬೇರೆಬೇರೆ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತಿ ನಿಕಾಯಗಳ ಪ್ರಕಾರ್ಯಗಳನ್ನು ಸ್ಪಷ್ಟವಾಗಿ ಸೂಚಿಸುವುದು;

(11) ನಿರ್ದಿಷ್ಟ ಉದ್ದೇಶಕ್ಕಾಗಿ ಗ್ರಾಮ ಪಂಚಾಯತಿಗಳು ಸೂಕ್ತ ಸಮಿತಿಗಳನ್ನು ಮತ್ತು ಯಾವುದೇ ಸಾಮಾನ್ಯ ಉದ್ದೇಶಕ್ಕಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿಗಳಿಗಾಗಿ ಜಂಟಿ ಸಮಿತಿಗಳನ್ನು ನೇಮಕ ಮಾಡುವ ಬಗ್ಗೆ ಉಪಬಂಧಿಸುವುದು;

(12) ರಚನೆಗೆ ಸಂಬಂಧಪಟ್ಟ ಕೆಲವು ಬದಲಾವಣೆಗಳನ್ನು ತರುವುದು, ಎಂದರೆ:-

ಪಂಚಾಯತಿ ಪ್ರದೇಶವನ್ನು ಎರಡು ಅಥವಾ ಅದಕ್ಕಿಂತ ಹೆಚ್ಚು ಪಂಚಾಯತಿಗಳನ್ನಾಗಿ ವಿಭಜಿಸುವುದು; ಎರಡು ಅಥವಾ ಅದಕ್ಕಿಂತ ಹೆಚ್ಚು ಪಂಚಾಯತಿ ಪ್ರದೇಶಗಳನ್ನು ಸಂಯೋಜಿಸಿ ಒಂದು ಪಂಚಾಯತಿಯನ್ನು ರಚಿಸುವುದು ಮತ್ತು ಅಸ್ತಿತ್ವದಲ್ಲಿದ್ದ ಪಂಚಾಯತಿಗಳಿಂದ ಬೇರ್ಪಡಿಸಲಾದ ಪ್ರದೇಶಗಳ ಮೂಲಕ ಹೊಸ ಪಂಚಾತಿಯನ್ನು ಸೃಜಿಸುವುದು - ಈ ಸಂದರ್ಭಗಳಿಂದ ಉದ್ಭವಿಸುವ ಪರಿಣಾಮಗಳನ್ನು ಅವಶ್ಯಕವಿದ್ದಷ್ಟು ವಿವರವಾಗಿ ತಿಳಿಸುವುದು ಮತ್ತು ಇಂಥ ಎಲ್ಲ ಸಂಭವನೀಯತೆಗಳಲ್ಲೂ ಈ ಪ್ರದೇಶಗಳನ್ನು ಪ್ರತಿನಿಧಿಸುವ ಸದಸ್ಯರುಗಳು ಯಾವ ಅವಧಿಯವರೆಗೆ ಚುನಾಯಿತರಾಗಿರುವರೋ ಆ ಅವಧಿಯಲ್ಲಿನ ಉಳಿದ ಭಾಗಕ್ಕೆ ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿ ಸದಸ್ಯರಾಗಿ ಮುಂದುವರಿಯತಕ್ಕದ್ದೆಂದು ಉಪಬಂಧಿಸುವುದು;

(13) ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಮಹಿಳೆಯರಿಗೆ ಮತ್ತು ಅನುಸೂಚಿತ ಜಾತಿಗಳಿಗೆ / ಅನುಸೂಚಿತ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಿರಿಸುವುದು ; ಜಿಲ್ಲಾ ಪಂಚಾಯತಿಯ ಸ್ಥಾಯಿ ಸಮಿತಿಯ ಸದಸ್ಯರುಗಳ ಒಟ್ಟು ಸಂಖ್ಯೆಯನ್ನು ಐದರಿಂದ ಏಳಕ್ಕೆ ಏರಿಸುವುದು ; ಮತ್ತು ಅಧ್ಯಕ್ಷನನ್ನು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿಯ ಅಧ್ಯಕ್ಷನನ್ನಾಗಿಯೂ ಮತ್ತು ಉಪಾಧ್ಯಕ್ಷನನ್ನು ಸಾಮಾನ್ಯ ಸ್ಥಾಯಿ ಸಮಿತಿಯ ಅಧ್ಯಕ್ಷನನ್ನಾಗಿಯೂ ಮಾಡುವುದು;

(14) ಹೊರಡಿಸಲಾದ ಯಾವ ನಿರ್ಣಯವನ್ನು ಅಥವಾ ಕೈಗೊಳ್ಳಲಾದ ಯಾವ ತೀರ್ಮಾನವನ್ನು ಕಾರ್ಯಗತಗೊಳಿಸುವುದರಿಂದ ಯಾವುದೇ ಕಾನೂನಿನ ಉಪಬಂಧ ಅಥವಾ ಬಜೆಟ್ ಏರ್ಪಾಡುಗಳು ಇತ್ಯಾದಿಗಳನ್ನು ಉಲ್ಲಂಘಿಸಿದಂತಾಗುತ್ತದೆಯೋ ಅಂಥ ನಿರ್ಣಯವನ್ನು ನೀಡುವ ಅಥವಾ ತೀರ್ಮಾನವನ್ನು ಕೈಗೊಳ್ಳುವ ಪಂಚಾಯತಿಯ ಅಧ್ಯಕ್ಷನಿಗೆ, ಉಲ್ಲಂಘನೆಯಾಗುವ ಸಂಭವವಿರುವಂಥ ನಿರ್ದಿಷ್ಟ ಉಪಬಂಧವನ್ನು ಸೂಚಿಸಿ,ಲಿಖಿತದಲ್ಲಿ ಸಲಹೆ ನೀಡುವಂತೆ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಗತ್ಯಪಡಿಸುವುದು;

(15) ಸಂಬಂಧಪಟ್ಟ ಪಂಚಾಯತಿಗಳು, 233ನೇ ಪ್ರಕರಣದಡಿ ಪರಿವೀಕ್ಷಣಾಧಿಕಾರಿಯ ವರದಿಯ ಮೇಲೆ ಅನುಸರಣ ಕ್ರಮವನ್ನು ಮೂವತ್ತು ದಿನಗಳೊಳಗೆ ಕೈಗೊಳ್ಳುವಂತೆ ಅಗತ್ಯಪಡಿಸುವುದು ಮತ್ತು ಹಾಗೆ ಕೈಗೊಳ್ಳುವಲ್ಲಿ ಲೋಪವಾಗಿರುವುದನ್ನು ಕರ್ತವ್ಯ ನಿರ್ವಹಣೆಯ ಲೋಪ ಎಂಬುದಾಗಿ ಅರ್ಥ ಕಲ್ಪಿಸುವ ಬಗ್ಗೆ ಉಪಬಂಧಿಸುವುದು;

(16) ಪಂಚಾಯತಿಗಳು ಯಾವುದೇ ಕರ್ತವ್ಯವನ್ನು ನೆರವೇರಿಸಲು ತಪ್ಪಿದರೆ ಅದನ್ನು ನೆರವೇರಿಸಲು ವ್ಯಕ್ತಿಯೊಬ್ಬನನ್ನು ನೇಮಕ ಮಾಡುವುದು ಮತ್ತು ವೆಚ್ಚಗಳನ್ನು ವಸೂಲು ಮಾಡುವುದು ಸಾಧ್ಯವಾಗುವಂತೆ ಮಾಡಿರುವ 234ನೇ ಪ್ರಕರಣದ ಉಪಬಂಧಗಳನ್ನು ಬಿಟ್ಟುಬಿಡುವುದು;

(17) ಉತ್ತಮ ಕಾರ್ಯನಿರ್ವಹಣೆಗೆ ಅನುವು ಮಾಡಿಕೊಡಲು ಕೆಲವು ಪ್ರಾಧಿಕಾರಗಳ ಅಧಿಕಾರಗಳನ್ನು ಅವುಗಳಿಂದ ಹಿಂತೆಗೆದುಕೊಂಡು, ಇತರ ಪ್ರಾಧಿಕಾರಗಳಲ್ಲಿ ಅವುಗಳನ್ನು ನಿಹಿತಗೊಳಿಸುವುದರ ಮೂಲಕ ಈ ಅಧಿನಿಯಮದಡಿ ಈ ಪ್ರಾಧಿಕಾರಗಳ ಅಧಿಕಾರವನ್ನು ಮರು ಹಂಚಿಕೆ ಮಾಡುವುದು, ಎಂದರೆ:-

(ಎ) ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ತೆಗೆದುಹಾಕುವ ಅಧಿಕಾರವನ್ನು ಕಮೀಷನರನಿಂದ ಹಿಂತೆಗೆದುಕೊಂದು, ಸರ್ಕಾರದಲ್ಲಿ ನಿಹಿತಗೊಳಿಸುವುದು;

(ಬಿ) 235ನೇ ಪ್ರಕರಣದಡಿ ಕಮೀಷನರ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅಧಿಕಾರಗಳನ್ನು ಹಿಂತೆಗೆದುಕೊಂಡು, ಕ್ರಮವಾಗಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ಅದನ್ನು ನಿಹಿತಗೊಳಿಸುವುದು;

(ಸಿ) ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ಕಾನೂನು ಬಾಹಿರ ಆದೇಶ ಅಥವಾ ನಿರ್ಣಯದ ಅಮಲ್ಜಾರಿಯನ್ನು ತಡೆಹಿಡಿಯಲು 237ನೇ ಪ್ರಕರಣದಡಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಮೀಷನರನಿಗೆ ಇರುವ ಅಧಿಕಾರಗಳನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷನಲ್ಲಿ ನಿಹಿತಗೊಳಿಸುವುದು; ಮತ್ತು

(ಡಿ) ಕಮೀಷನರನಿಗೆ 268ನೇ ಪ್ರಕರಣದಡಿ ಗ್ರಾಮ ಪಂಚಾಯತಿಯನ್ನು ವಿಸರ್ಜಿಸಲು ಇರುವ ಅಧಿಕಾರವನ್ನು ಜಿಲ್ಲಾ ಪಂಚಾಯತಿಯಲ್ಲಿ ನಿಹಿತಗೊಳಿಸುವುದು.

(18) ಗ್ರಾಮ ಪಂಚಾಯತಿಯ ಪ್ರತಿಯೊಂದು ಮೂಲ ಆದೇಶದ ವಿರುದ್ಧವಾಗಿ ಅಪೀಲು ಮಾಡಿಕೊಳ್ಳಲು ಉಪಬಂಧಿಸುವುದು;

(19) ಗ್ರಾಮ ಸಭೆಯ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವಾಗ, ಅದು ಸೂಚಿಸಿದ ಅಭಿವೃದ್ಧಿ ಕಾರ್ಯಕ್ರಮವನ್ನು ಗ್ರಾಮ ಪಂಚಾಯತಿಯು ಪರಿಗಣಿಸುವಂತೆ ಅಗತ್ಯಪಡಿಸುವುದು;

(20) ಜಿಲ್ಲಾ ಪಂಚಾಯತಿಯ ಅಧ್ಯಕ್ಷನನ್ನು ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷನನ್ನಾಗಿ ಮತ್ತು ಜಿಲ್ಲೆಯ ಕೇಂದ್ರ ಕಾರ್ಯಸ್ಥಾನಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪುರಸಭಾ ನಿಕಾಯದ ಮೇಯರ್ ಅಥವಾ ಅಧ್ಯಕ್ಷನನ್ನು ಉಪಾಧ್ಯಕ್ಷನನ್ನಾಗಿ ಮಾಡುವುದು;

(21) ರಾಜ್ಯದಲ್ಲಿರುವ ಪಂಚಾಯತಿಗಳ ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಲು, ಮುಖ್ಯಮಂತ್ರಿಯವರು ಅಧ್ಯಕ್ಷರಾಗಿರುವ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉಪಾಧ್ಯಕ್ಷರಾಗಿರುವ ರಾಜ್ಯ ಪಂಚಾಯತಿ ಪರಿಷತ್ತೊಂದನ್ನು ರಚಿಸುವುದು;

(22) ಪಂಚಾಯತಿಗಳ ಪ್ರಕಾರ್ಯಗಳಿಗೆ ಸಂಬಂಧಪಟ್ಟ ಅಧಿನಿಯಮದ ಅನುಸೂಚಿ L,LL ಅಥವಾ LLLನ್ನು ತಿದ್ದುಪಡಿ ಮಾಡುವುದಕ್ಕೆ ಮೊದಲು ರಾಜ್ಯ ಪಂಚಾಯತಿ ಪರಿಷತ್ತಿನೊಡನೆ ಸಮಾಲೋಚಿಸುವ ಬಗ್ಗೆ ಉಪಬಂಧಿಸುವುದು;

ಕಾರ್ಯನಿರ್ವಹಣೆಯ ಅವಶ್ಯಕತೆಗಳ ಮೇಲೆ ಅವಲಂಬಿಸಲ್ಪಟ್ಟಂಥ ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ತರಲು ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಆದುದರಿಂದ ಈ ವಿಧೇಯಕ.

(1997ರ ವಿಧಾನ ಸಭಾ ವಿಧೇಯಕ ಸಂಖ್ಯೆ 26ರಲ್ಲಿದ್ದಂತೆ.)

## VIII

**1998ರ ತಿದ್ದುಪಡಿ ಅಧಿನಿಯಮ 29.**- 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು (1993ರ ಕರ್ನಾಟಕ ಅಧಿನಿಯಮ 14),-

(i) ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಮತ್ತು ವಿಶೇಷ ಅದೇಶಗಳಿಗೆ ಒಳಪಟ್ಟು, ಚುನಾಯಿತ ಸದಸ್ಯರುಗಳ ಸಂಖ್ಯೆಯನ್ನು ಅಧಿಸೂಚಿಸಲು, ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ ಮಾಡಲು ಮತ್ತು ಚುನಾಯಿತ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸಲು, ಡೆಪ್ಯುಟಿ ಕಮೀಷನರರುಗಳಿಗಿದ್ದ ಅಧಿಕಾರಗಳನ್ನು ಅವರಿಗೇ ಮರಳಿ ಕೊಡಲು; ಮತ್ತು

(ii) ಜಿಲ್ಲಾ ಪಂಚಾಯತಿ ಚುನಾವಣಾ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ವಿಭಜಿಸಿ, ಗ್ರಾಮ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ತಹಶೀಲ್ದಾರರಿಗೆ ಅಧಿಕಾರ ನೀಡಲು,

- ರಾಜ್ಯ ಚುನಾವಣಾ ಆಯೋಗವು ಸಲಹೆ ನೀಡಿದಂತೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ.

ಅಲ್ಲದೆ, ಕರ್ನಾಟಕ ಆಡಳಿತ ಸೇವೆ (ಆಯ್ಕೆ ಶ್ರೇಣಿ)ಗೆ ಸೇರಿದ ಅಥವಾ ಕರ್ನಾಟಕ ಆಡಳಿತ ಸೇವೆ (ಆಯ್ಕೆ ಶ್ರೇಣಿ)ಯ ತತ್ಸಮಾನ ದರ್ಜೆಯ ಅಭಿವೃದ್ಧಿ ವಿಭಾಗದ ಅಧಿಕಾರಿಗಳನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳನ್ನಾಗಿ ನೇಮಕ ಮಾಡುವ ಉಪಬಂಧವನ್ನೂ ಸಹ ಕಲ್ಪಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 1998, (1998ರ ಕರ್ನಾಟಕ ಅಧ್ಯಾದೇಶ 4) ಮತ್ತು ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧ್ಯಾದೇಶದ (1998ರ ಕರ್ನಾಟಕ ಅಧ್ಯಾದೇಶ 6) ಬದಲಿಗೆ ಸಾಮಾನ್ಯ ಶಾಸನವನ್ನು ಮಂಡಿಸುವುದು ಅವಶ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 6-11-1998ರ ಕರ್ನಾಟಕ ರಾಜ್ಯಪತ್ರ (ವಿಶೇಷ ಪತ್ರಿಕೆ) ಭಾಗ 4-2ಎರಲ್ಲಿ ಸಂಖ್ಯೆ 1145 ಆಗಿ ಪ್ರಕಟವಾಗಿದೆ)

**IX**

**1999ರ ತಿದ್ದುಪಡಿ ಅಧಿನಿಯಮ 10**.- ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ಈ ಮುಂದಿನ ತಿದ್ದುಪಡಿಗಳನ್ನು ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ:-

(1) ಈಗಿರುವ ವ್ಯವಸ್ಥೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯತಿಗಳ ಸಂಖ್ಯೆಯು, ಅವುಗಳ ಪ್ರಕಾರ್ಯಗಳ ಮೇಲೆ ಸೂಕ್ತ ಮೇಲ್ವಿಚಾರಣೆ ಮಾಡಲು ಸಾಧ್ಯವಿಲ್ಲದಷ್ಟು ದೊಡ್ಡದಾಗಿದೆ ಮತ್ತು ಈಗಿರುವ ಗ್ರಾಮ ಪಂಚಾಯತಿಗಳು ಆರ್ಥಿಕವಾಗಿ ಬಹಳ ದುರ್ಬಲವಾಗಿವೆ. ಗ್ರಾಮ ಪಂಚಾಯಿತಿಗಳನ್ನು ಸಮರ್ಥಗೊಳಿಸುವ ಸಲುವಾಗಿ ಅವುಗಳನ್ನು ಹೆಚ್ಚು ಅಧಿಕಾರ ವ್ಯಾಪ್ತಿಯೊಡನೆ ಪುನರ್ ರಚಿಸಬೇಕಾಗಿದೆ. ಈಗಿರುವ ಗ್ರಾಮ ಪಂಚಾಯತಿಗಳನ್ನು ಪುನರ್‌ರೂಪಿಸುವ ಕಾರ್ಯವನ್ನು ಶೀಘ್ರದಲ್ಲಿಯೇ ಕೈಗೊಳ್ಳಬೇಕಾಗಿದೆ.

(2) ಸಂವಿಧಾನದ 243-ಡಿ ಅನುಚ್ಛೇದದ (1)ನೇ ಖಂಡಕ್ಕನುಸಾರವಾಗಿ, ಒಂದು ಪಂಚಾಯತಿಯಲ್ಲಿ ಮೀಸಲಿಟ್ಟ ಸ್ಥಾನಗಳನ್ನು ಬೇರೆಬೇರೆ ಚುನಾವಣಾ ಕ್ಷೇತ್ರಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡಬಹುದು. ಕರ್ನಾಟಕ ಪಂಚಾಯತಿ ರಾಜ್ ಅಧಿನಿಯಮ, 1993ರ ಪ್ರಕರಣ 5ರ ಉಪ-ಪ್ರಕರಣ (4)ರ ಪರಂತುಕವು, ಮೀಸಲಿಟ್ಟ ಸ್ಥಾನಗಳನ್ನು ಬೇರೆಬೇರೆ ಚುನಾವಣಾ ಕ್ಷೇತ್ರಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದೆಂದು ಅಗತ್ಯಪಡಿಸುತ್ತದೆ. ಹೀಗೆ ಈ ಪರಂತುಕವು ಸಂವಿಧಾನದ ಮೇಲ್ಕಂಡ ಉಪಬಂಧಕ್ಕೆ ಸುಸಂಗತವಾಗಿಲ್ಲ. ಅಲ್ಲದೆ, ಪಂಚಾಯತ್ ರಾಜ್ ವ್ಯವಸ್ಥೆಯ ಈಗಿನ ಆರಂಭಾವಸ್ಥೆಯಲ್ಲಿ ಸರದಿ ವ್ಯವಸ್ಥೆಯು ಒಂದು ಅವಧಿಗಾಗಿ ಚುನಾಯಿತರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಮತ್ತು ಮಹಿಳೆಯರು ತರುವಾಯದ ಅವಧಿಗಾಗಿ ಪಂಚಾಯತಿಗೆ ಚುನಾಯಿತರಾಗದಿರುವ ಸಂಭವವಿರುವ ಕಾರಣ ವಿಶೇಷವಾಗಿ ಈ ಪ್ರವರ್ಗಗಳ ವ್ಯಕ್ತಿಗಳು, ಗ್ರಾಮ ಮಟ್ಟದಲ್ಲಿ ರಾಜಕೀಯ ನಾಯಕತ್ವದ ಪರಿಣಾಮಕಾರಿ ಬೆಳವಣಿಗೆಯನ್ನು ಕುಂಠಿತಗೊಳಿಸುವುದೆಂದು ಭಾವಿಸಲಾಗಿದೆ ಅವರ ಚುನಾವಣಾ ಕ್ಷೇತ್ರಗಳ ಮೀಸಲಾತಿಯ ಪ್ರವರ್ಗವನ್ನು, ಕಡ್ಡಾಯ ಆಧಾರದ ಮೇಲೆ ಸದರಿ ವ್ಯವಸ್ಥೆಗೊಳಪಡಿಸಿದರೆ, ಇದು ಕಠಿಣ ಪರಿಸ್ಥಿತಿಗೆ ಎಡೆಮಾಡಿಕೊಡುತ್ತದೆ. ಆದ್ದರಿಂದ ಗ್ರಾಮ ಪಂಚಾಯತಿಯಲ್ಲಿ ಮೀಸಲಿಟ್ಟ ಸ್ಥಾನಗಳ ಸರದಿಗೆ ಸಂಬಂಧಪಟ್ಟ ಉಪಬಂಧಗಳನ್ನು ಬಿಟ್ಟು ಬಿಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

(3) ಗ್ರಾಮ ಪಂಚಾಯತಿಗಳನ್ನು ಪುನರ್‌ರೂಪಿಸುವ ಪ್ರಸ್ತಾವದ ಪರಿಣಾಮವಾಗಿ, ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು, ಈಗ ಇರುವ ನಾಲ್ಕು ನೂರು ಜನಸಂಖ್ಯೆಯ ಬದಲು ಒಂದು ಸಾವಿರ ಜನಸಂಖ್ಯೆಗಾಗಿ ಚುನಾಯಿತನಾಗತಕ್ಕದ್ದು.

ಆದ್ದರಿಂದ ಈ ವಿಧೇಯಕ.

(1999ರ ವಿಧಾನ ಸಭಾ ವಿಧೇಯಕ ಸಂಖ್ಯೆ 1೦ರಲ್ಲಿದ್ದಂತೆ.)

**X**

**1999ರ ತಿದ್ದುಪಡಿ ಅಧಿನಿಯಮ 21**.- ಈ ಮುಂದಿನ ಉದ್ದೇಶಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ:-

(i) ಹತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಒಂದು ಪಂಚಾಯತಿ ಪ್ರದೇಶದ ಸಂದರ್ಭದಲ್ಲಿ ಕನಿಷ್ಠ ಹನ್ನೊಂದು ಚುನಾಯಿತ ಸದಸ್ಯರಿಗಾಗಿ ಅವಕಾಶ ಕಲ್ಪಿಸುವುದು, ಮತ್ತು

(ii) ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯವನ್ನು ಅಸಿಸ್ಟೆಂಟ್ ಕಮಿಷನರರಿಗೆ ವಹಿಸಿಕೊಡುವುದು.

ಆದ್ದರಿಂದ ಈ ವಿಧೇಯಕ.

(1999ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 15ರಲ್ಲಿದ್ದಂತೆ.)

**XI**

**2000ರ ತಿದ್ದುಪಡಿ ಅಧಿನಿಯಮ 8**.- ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ಅಧಿನಿಯಮ, 1997ಕ್ಕೆ ಮೊದಲು ಇದ್ದಂಥ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ರಲ್ಲಿ, ತಾಲ್ಲೂಕು ಪಂಚಾಯತಿಗಳ ಮತ್ತು ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುವ ಮತ್ತು ಸ್ಥಾನಗಳ ಹಾಗೂ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದ ಮತ್ತು ಜಿಲ್ಲಾ ಪಂಚಾಯತಿಯ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯಕ್ಕೆ ಸಂಬಂಧಿಸಿದ ಹಾಗೂ ಜಿಲ್ಲಾ ಪಂಚಾಯತಿ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸುವ ಅಧಿಕಾರಗಳನ್ನು ಸರ್ಕಾರದಲ್ಲಿ ನಿಹಿತಗೊಳಿಸಲಾಗಿತ್ತು. ಅಲ್ಲದೇ, ತಾಲ್ಲೂಕು ಪಂಚಾಯತಿಯ ಪ್ರದೇಶ ಚುನಾವಣಾ ಕ್ಷೇತ್ರಗಳ ಸೀಮಾನಿರ್ಣಯ ಮತ್ತು ತಾಲ್ಲೂಕು ಪಂಚಾಯತಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸುವ ಅಧಿಕಾರಗಳು, ಅನುಕ್ರಮವಾಗಿ ಡೆಪ್ಯುಟಿ ಕಮೀಷನರ್ ಅವರಲ್ಲಿ ನಿಹಿತವಾಗಿದ್ದವು.

ಮೇಲೆ ಹೇಳಿದ 1997ನೇ ತಿದ್ದುಪಡಿ ಅಧಿನಿಯಮದ ಮೂಲಕ ಸರ್ಕಾರದಲ್ಲಿ ನಿಹಿತವಾದ ಅಧಿಕಾರಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಿಕೊಡಲಾಯಿತು. ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರ ಹೆಸರುಗಳನ್ನು ಪ್ರಕಟಿಸುವ ಅಧಿಕಾರವನ್ನು ಸಹ ರಾಜ್ಯ ಚುನಾವಣಾ ಆಯೋಗಕ್ಕೆ ನೀಡಲಾಗಿತ್ತು. ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯದ ಅಧಿಕಾರವನ್ನು, ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೊಳಪಟ್ಟು ಡೆಪ್ಯುಟಿ ಕಮೀಷನರ್ ಅವರಿಗೆ ನೀಡಲಾಗಿತ್ತು.

ಹಿಂದಿನ ಎರಡು ವರ್ಷಗಳ ಅನುಭವದ ಆಧಾರದ ಮೇಲೆ, ಸಂಬಂಧಪಟ್ಟ ಪ್ರಕರಣಗಳಿಗೆ, ತಿದ್ದುಪಡಿ ಮಾಡುವುದು ಮತ್ತು ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ಅಧಿನಿಯಮ, 1997ರ ತಿದ್ದುಪಡಿಗೆ ಮೊದಲು ಇದ್ದಂಥ ಒಟ್ಟಾರೆ ಪರಿಸ್ಥಿತಿಯನ್ನೇ ಕಾಯ್ದುಕೊಂಡು ಬರುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಅಲ್ಲದೇ, ಗ್ರಾಮಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಪಧಾವಧಿಯನ್ನು ಮೂವತ್ತು ತಿಂಗಳಿಗೆ ಇಳಿಸುವ ಮೂಲಕ, ಐದು ವರ್ಷಗಳ ಅವಧಿಯಲ್ಲಿ, ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷನಾಗಿ ಚುನಾಯಿತರಾಗುವುದಕ್ಕೆ ಒಂದಕ್ಕಿಂತ ಹೆಚ್ಚು ತಂಡಕ್ಕೆ ಅವಕಾಶ ಕಲ್ಪಿಸುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 2ರಲ್ಲಿದ್ದಂತೆ.)

**XII**

**2000ರ ತಿದ್ದುಪಡಿ ಅಧಿನಿಯಮ 11.**– ಕಡಿಮೆ ಅವಧಿಯೊಳಗೆ ರಚನಾತ್ಮಕ ಬದಲಾವಣೆಗಳನ್ನು ಮಾಡುವುದು ಅಪೇಕ್ಷಣೀಯವಲ್ಲವೆಂದು ಪರಿಗಣಿಸಲಾದುದರಿಂದ 28.1.1999ಕ್ಕೆ ಮೊದಲು ಅಸ್ತಿತ್ವದಲ್ಲಿದ್ದಂಥ ಕಡಿಮೆ ಅಧಿಕಾರ ವ್ಯಾಪ್ತಿಯುಳ್ಳ ಗ್ರಾಮಪಂಚಾಯತಿಗಳನ್ನೇ ಉಳಿಸಿಕೊಳ್ಳಲು ನಿರ್ಧರಿಸಲಾಯಿತು. ಕಡಿಮೆ ಅಧಿಕಾರ ವ್ಯಾಪ್ತಿಯುಳ್ಳ ಗ್ರಾಮಪಂಚಾಯತಿಗಳಿಂದಾಗಿ ಸಮಾಜದ ವರ್ಗಗಳ ಜನರಿಗೆ ಇನ್ನೂ ಹೆಚ್ಚಿನ ಪ್ರಾತಿನಿಧ್ಯ ಪಡೆದುಕೊಳ್ಳಲು ಸಾಧ್ಯವಾಗುತ್ತದೆಂದು ಸಹ ಅಭಿಪ್ರಾಯ ಪಡಲಾಯಿತು. ಆದ್ದರಿಂದ, ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 4ನೇ ಮತ್ತು 5ನೇ ಪ್ರಕರಣಗಳಿಗೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಗಣಿಸಲಾಯಿತು; ಎಂದರೆ:–

(i) ಒಂದು ಪಂಚಾಯತಿ ಪ್ರದೇಶದ ಘೋಷಣೆಗಾಗಿ ಐದು ಸಾವಿರ ಮತ್ತು ಏಳು ಸಾವಿರ ಹಾಗೂ ಎರಡು ಸಾವಿರದ ಐದುನೂರು ಜನಸಂಖ್ಯೆಯ ಮಾನದಂಡವನ್ನು ಮತ್ತು ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದಂತೆ ಐದು ಕಿಲೋಮೀಟರ್ ತ್ರಿಜ್ಯದ (1o ಕಿಲೋಮೀಟರ್ ವ್ಯಾಸದ) ಮಿತಿಯನ್ನು ಉಳಿಸಿಕೊಳ್ಳುವುದು;

(ii) ಗ್ರಾಮ ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಒಂದು ಸಾವಿರ ಜನಸಂಖ್ಯೆಯ ಬದಲು ಐದುನೂರು ಜನಸಂಖ್ಯೆಯನ್ನು ನಿರ್ದಿಷ್ಟಪಡಿಸುವುದು;

(iii) ಹತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪಂಚಾಯತಿ ಪ್ರದೇಶದ ಸಂಬಂಧದಲ್ಲಿ, ಕನಿಷ್ಠ ಹನ್ನೊಂದು ಸದಸ್ಯರಿಗೆ ಅವಕಾಶ ಕಲ್ಪಿಸುವ ಉಪಬಂಧವನ್ನು ಬಿಟ್ಟುಬಿಡುವುದು;

(iv) ಒಂದು ಪಂಚಾಯತಿ ಪ್ರದೇಶದಲ್ಲಿ ಬೇರೆ ಬೇರೆ ಚುನಾವಣಾ ಕ್ಷೇತ್ರಗಳಿಗೆ ಸ್ಥಾನಗಳನ್ನು ಸರದಿಯ ಪ್ರಕಾರ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಉಳಿಸಿಕೊಳ್ಳುವುದು;

(v) 4ನೇ ಮತ್ತು 5ನೇ ಪ್ರಕರಣಗಳ ಉಪಬಂಧಗಳು 28.1.1999ಕ್ಕೆ ಮತ್ತು 4.8.1999ಕ್ಕೆ ಮೊದಲು ಇದ್ದಂತೆ ಮುಂದುವರೆದಿರುವುದಾಗಿ ಭಾವಿಸತಕ್ಕದೆಂದು ಘೋಷಿಸುವುದು;

(vi) ಅಂಥ ದಿನಾಂಕಕ್ಕೆ ಮೊದಲು 4ನೇ ಮತ್ತು 5ನೇ ಪ್ರಕರಣಗಳ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮ ಅಥವಾ ಹೊರಡಿಸಿದ ಯಾವುದೇ ಅಧಿಸೂಚನೆಯು, ಮಾನ್ಯವಾದುದಾಗಿ ಮತ್ತು ಜಾರಿಯಲ್ಲಿರುವುದು ಮುಂದುವರೆದಿರುವುದಾಗಿ ಭಾವಿಸತಕ್ಕದೆಂದು ಘೋಷಿಸುವುದು.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ಪಂಚಾಯತ್‌ರಾಜ್ (ಎರಡನೇ ತಿದ್ದುಪಡಿ) ಅಧ್ಯಾದೇಶ, 1999ನ್ನು ಮತ್ತು ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ಅಧ್ಯಾದೇಶ, 1999ನ್ನು ಹೊರಡಿಸಲಾಯಿತು.

ಸದರಿ ಅಧ್ಯಾದೇಶಗಳ ಬದಲು ಈ ಮುಂದಿನ ಸೇರ್ಪಡೆಗಳೊಂದಿಗೆ ಈ ವಿಧೇಯಕವನ್ನು ಮಂಡಿಸಲಾಗಿದೆ, ಎಂದರೆ:–

(i) ಒಂದು ತಾಲ್ಲೂಕು ಪಂಚಾಯತಿಯಲ್ಲಿ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ, ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿಡುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(ii) ಗ್ರಾಮ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಅಥವಾ ಜಿಲ್ಲಾ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗುವುದಕ್ಕೆ ಮತ್ತು ಸದಸ್ಯನಾಗಿರುವುದಕ್ಕೆ ಆತನ ಕುಟುಂಬದ ಸದಸ್ಯರ ಬಳಕೆಗಾಗಿ, ಶೌಚಗೃಹ ಇಲ್ಲದಿರುವ ಕಾರಣಕ್ಕಾಗಿ ಒಬ್ಬ ವ್ಯಕ್ತಿಯ ಅನರ್ಹತೆಗೆ ಸಂಬಂಧಿಸಿದ ಉಪಬಂಧವನ್ನು ಬಿಟ್ಟುಬಿಡುವುದು;

(iii) ಒಂದು ಗ್ರಾಮ ಪಂಚಾಯತಿಗೆ ಸರ್ಕಾರವು ನೀಡತಕ್ಕ ವಾರ್ಷಿಕ ಅನುದಾನದ ಮೊತ್ತವನ್ನು, ಈಗ ಇರುವ ಒಂದು ಲಕ್ಷ ರೂಪಾಯಿಗಳಿಂದ ಎರಡು ಲಕ್ಷ ರೂಪಾಯಿಗಳಿಗೆ ಹೆಚ್ಚಿಸುವುದು.

ಆದ್ದರಿಂದ ಈ ವಿಧೇಯಕ.

(2೦೦೦ರ ವಿಧಾನ ಸಭಾ ವಿಧೇಯಕ ಸಂಖ್ಯೆ 11 ರಲ್ಲಿದ್ದಂತೆ.)

**XIII**

**2001ರ ತಿದ್ದುಪಡಿ ಅಧಿನಿಯಮ 30.**– ಪ್ರತಿಯೊಂದು ಗ್ರಾಮ ಪಂಚಾಯತಿಯು, ಪಂಚಾಯತಿ ಪ್ರದೇಶದಲ್ಲಿಯ ಯಾವುದೇ ಜೀತಗಾರಿಕೆ ಪದ್ಧತಿಯ ಪ್ರಕರಣವನ್ನು, ಡೆಪ್ಯೂಟಿ ಕಮೀಷನರಿಗೆ ಅಥವಾ ಈ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಾಧಿಕಾರಕ್ಕೆ ವರದಿ ಮಾಡುವುದನ್ನು ಕಡ್ಡಾಯಗೊಳಿಸುವುದಕ್ಕಾಗಿ ಮತ್ತು ಜೀತಗಾರಿಕೆ ಪದ್ಧತಿಯ ಪ್ರಕರಣವನ್ನು ವರದಿ ಮಾಡುವಲ್ಲಿ ಉಂಟಾದ ಯಾವುದೇ ವಿಫಲತೆಯನ್ನು, ಗ್ರಾಮ ಪಂಚಾಯತಿಯ ಕರ್ತವ್ಯಗಳ ನೆರವೇರಿಕೆಯಲ್ಲಿ ಆದ ತಪ್ಪು ಎಂದು ಪರಿಗಣಿಸುವುದಕ್ಕಾಗಿ ಹಾಗೂ ಈ ವಿಫಲತೆಯು ಗ್ರಾಮ ಪಂಚಾಯತಿಯ ವಿಸರ್ಜನೆಯಲ್ಲಿ ಪರಿಣಮಿಸುವಂತೆ ಮಾಡುವುದಕ್ಕಾಗಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

(2000ರ ವಿಧಾನ ಸಭಾ ವಿಧೇಯಕ ಸಂಖ್ಯೆ:33(ಕಡತ ಸಂಖ್ಯೆ: ಸಂವ್ಯಶಾಇ 51 ಶಾಸನ 2000)ರಲ್ಲಿ ಇದ್ದಂತೆ)

**XIV**

**2003ರ ತಿದ್ದುಪಡಿ ಅಧಿನಿಯಮ 8**.- 2002-03ನೇ ವರ್ಷದ ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964, ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1876 ಹಾಗೂ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993- ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2003ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 8 (ಕಡತ ಸಂಖ್ಯೆ: ಸಂವ್ಯಶಾಇ 15 ಶಾಸನ 2003)

**XV**

**2003ರ ತಿದ್ದುಪಡಿ ಅಧಿನಿಯಮ 37**.- ಈ ಮುಂದಿನವುಗಳಿಗಾಗಿ ಉಪಬಂಧಕಲ್ಪಿಸುವುದಕ್ಕಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಪ್ರತಿಯೊಂದು ಗ್ರಾಮ ಪಂಚಾಯತ್ ಚುನಾವಣಾ ಕ್ಷೇತ್ರದ ಸಂಬಂಧದಲ್ಲಿ ಒಂದು ವಾರ್ಡ್ ಸಭೆಯನ್ನು ಮತ್ತು ಸಂಪೂರ್ಣ ಪಂಚಾಯತ್ ಪ್ರದೇಶಕ್ಕಾಗಿ ಒಂದು ಗ್ರಾಮ ಸಭೆಯನ್ನು ವ್ಯವಸ್ಥೆಗೊಳಿಸುವುದು ಮತ್ತು ಗ್ರಾಮ ಮಟ್ಟದಲ್ಲಿ ಜನರ ಪಾಲುಗೊಳ್ಳುವಿಕೆಯು ಹೆಚ್ಚು ಅರ್ಥಪೂರ್ಣ ಮತ್ತು ಗಾಢವಾಗಿರುವಂತೆ ನೋಡಿಕೊಳ್ಳಲು ಅವರಿಗೆ ಇನ್ನೂ ಹೆಚ್ಚು ಜವಾಬ್ದಾರಿಗಳನ್ನು ವಹಿಸುವುದು;

(ii) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತ್‌ಗಳ ಸದಸ್ಯರುಗಳು ಚುನಾವಣಾ ವೆಚ್ಚಗಳ ಲೆಕ್ಕಗಳನ್ನು ಸಲ್ಲಿಸಲು ವಿಫಲರಾದಲ್ಲಿ ಅವರನ್ನು ಮೂರು ವರ್ಷಗಳ ಅವಧಿಗಾಗಿ ಅನರ್ಹಗೊಳಿಸುವುದು;

(iii) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸಭೆಗೆ ಹಾಜರಾಗುವ ಸದಸ್ಯರುಗಳ ಪೈಕಿ ಸಾಧ್ಯವಾದಷ್ಟು ಮಟ್ಟಿಗೆ ಮೂರನೇ ಒಂದರಷ್ಟು ಸದಸ್ಯರು ಮಹಿಳಾ ಸದಸ್ಯರಾಗಿರುವುದನ್ನು ಖಚಿತಪಡಿಸಿಕೊಳ್ಳುವುದು;

(iv) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ಪರಿಗಣನೆಗಾಗಿ ಬರುವ ಯಾವುದೇ ವಿಷಯದಲ್ಲಿ ತಾನು ಹಣಕಾಸಿನ ರೂಪದ ಯಾವುದೇ ಹಿತಾಸಕ್ತಿಯನ್ನು ಹೊಂದಿದ್ದಾನೆಯೇ ಎಂಬುವದನ್ನು ತಿಳಿಸುವಂತೆ ಅಗತ್ಯಪಡಿಸುವುದು;

(v) ಗ್ರಾಮ ಪಂಚಾಯತಿಯ ಅಧ್ಯಕ್ಷನನ್ನು ಕಾರ್ಯನಿರ್ವಾಹಕ ಮುಖ್ಯಸ್ಥನನ್ನಾಗಿ ಮಾಡುವುದು;

(vi) ಗ್ರಾಮ ಪಂಚಾಯತಿಯ ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಪುನಃ ಪರಿಭಾಷಿಸುವುದು;

(vii) ರಾಜ್ಯ ಸಿವಿಲ್ ಸೇವೆಗಳ ಅಧಿಕಾರಿಗಳು ಮತ್ತು ನೌಕರರ ಸೇವೆಯನ್ನು ಪಡೆದುಕೊಂಡು ಅವರನ್ನು ಗ್ರಾಮ ಪಂಚಾಯತಿಗಳಿಗೆ ನಿಯೋಜಿಸುವುದು ಮತ್ತು ರಾಜ್ಯ ಸಿವಿಲ್ ಸೇವೆಗಳಿಗೆ ಸೇರಿರದ ತಾಂತ್ರಿಕ ಸಿಬ್ಬಂದಿಯ ಸೇವೆಯನ್ನು ನಿರ್ದಿಷ್ಟ ಕಾಮಗಾರಿಗಾಗಿ ಬಳಸಿಕೊಳ್ಳಲು ಗ್ರಾಮ ಪಂಚಾಯತಿಗೆ ಅಧಿಕಾರ ನೀಡುವುದು;

(viii) ತಾಲ್ಲೂಕು ಪಂಚಾಯತಿಯ ಮತ್ತು ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಸ್ಥಾನಗಳ ಮೀಸಲಾತಿ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ ಮಾಡುವುದಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಿರ್ಧರಿಸುವ ರಾಜ್ಯ ಸರ್ಕಾರದ ಅಧಿಕಾರಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಿಕೊಡುವುದು;

(ix) ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸದಸ್ಯರು ತಮ್ಮ ಆಸ್ತಿಗಳನ್ನು ಘೋಷಿಸುವಂತೆ ಅಗತ್ಯಪಡಿಸುವ ಬಗ್ಗೆ ಮತ್ತು ನಿಜವಲ್ಲದ ಅಥವಾ ಸರಿಯಾದುದಲ್ಲದ ಘೋಷಣೆಯನ್ನು ಸಲ್ಲಿಸಿದ್ದಕ್ಕಾಗಿ ಸದಸ್ಯತ್ವ ನಿಂತುಹೋಗುವ ಬಗ್ಗೆ ಉಪಬಂಧಕಲ್ಪಿಸುವುದು;

(x) ತಾಲ್ಲೂಕು ಪಂಚಾಯತಿಯ ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಬ್ಬರ ಪದಗಳು ಖಾಲಿ ಇದ್ದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸಾಮಾಜಿಕ ನ್ಯಾಯದ ಸ್ಥಾಯಿ ಸಮಿತಿಯ ಅಧ್ಯಕ್ಷನನ್ನು ನೇಮಿಸಲು ಉಪಬಂಧ ಕಲ್ಪಿಸುವುದು;

(xi) ಚುನಾವಣಾ ವೆಚ್ಚಗಳ ಲೆಕ್ಕ ಪತ್ರಗಳನ್ನು ನಿರ್ವಹಿಸುವುದು ಮತ್ತು ಅದನ್ನು ಸಲ್ಲಿಸುವುದು ಮುಂತಾದುವುಗಳಿಗೆ ಉಪಬಂಧ ಕಲ್ಪಿಸುವುದು.

ಈ ವಿಧೇಯಕದಲ್ಲಿ ಇತರ ಕೆಲವು ಪ್ರಾಸಂಗಿಕ ಮತ್ತು ಆನುಷಂಗಿಕವಾದ ವಿಷಯಗಳ ಬಗ್ಗೆ ಸಹ ಉಪಬಂಧಗಳನ್ನು ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2002ರ ವಿಧಾನಸಭೆಯ ವಿಧೇಯಕ ಸಂಖ್ಯೆ 27 (ಕಡತ ಸಂಖ್ಯೆ: ಸಂವ್ಯಶಾಇ 33 ಶಾಸನ 2002)

**XVI**

**2007ರ ತಿದ್ದುಪಡಿ ಅಧಿನಿಯಮ 17**.- ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 9 ಬಿಎಂಎಂ 2003, ದಿನಾಂಕ: 8.9.2005ರಲ್ಲಿ ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂಗಳಲ್ಲಿ ಪ್ರಾದೇಶಿಕ ಕಮೀಷನರುಗಳ ಹುದ್ದೆಗಳನ್ನು ಹಾಗೂ ಅವರಿಗೆ ಸಹಾಯಕ ಸಿಬ್ಬಂದಿಯ ಹುದ್ದೆಗಳನ್ನು ಸೃಜನೆ ಮಾಡಲಾಗಿದೆ.

ಸಂಬಂಧಪಟ್ಟ ಅಧಿನಿಯಮಗಳಿಗೆ ಅವಶ್ಯಕ ತಿದ್ದುಪಡಿಗಳನ್ನು ಮಾಡಿ ಪ್ರಾದೇಶಿಕ ಕಮೀಷನರುಗಳಿಗೆ, ಶಾಸನಬದ್ಧ ಅಧಿಕಾರಗಳನ್ನು ಕೊಡಬೇಕಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲವು ಅಧಿವೇಶನದಲ್ಲಿಲ್ಲದೇ ಇದ್ದುದರಿಂದ ಕರ್ನಾಟಕ ಭೂ–ಕದಂದಾಯ ಮತ್ತು ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2006 (2006ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5)ನ್ನು ಮೇಲಿನ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 7)

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 18ನೆಯ ನಮೂದನೆಗಳ ಅಡಿಯಲ್ಲಿ ಬರುತ್ತದೆ.]

## XVII

**2010ರ ತಿದ್ದುಪಡಿ ಅಧಿನಿಯಮ ಸಂಖ್ಯೆ 24.–** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು,

(1) "ಪಂಚಾಯತಿ ಅಭಿವೃದ್ಧಿ ಅಧಿಕಾರಿ" ಎಂಬುದನ್ನು ಪರಿಭಾಷಿಸಲು ಮತ್ತು ಆತನ ಅಧಿಕಾರಗಳು ಮತ್ತು ಕರ್ತವ್ಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ;

(2) ಚುನಾವಣಾ ಫಲಿತಾಂಶಗಳನ್ನು ಶೀಘ್ರವಾಗಿ ಮತ್ತು ಖಚಿತವಾಗಿ ಅಧಿಸೂಚಿಸಲು ಮತ್ತು ರಾಜ್ಯದಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳಲ್ಲಿ ವಿದ್ಯನ್ಮಾನ ಮತ ಯಂತ್ರಗಳನ್ನು ಬಳಸುವ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣಾ ಪದ್ಧತಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಪರಿಚಯಿಸುವುದಕ್ಕಾಗಿ;

(3) ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿನ ಎಲ್ಲಾ ಮೂರು ಹಂತಗಳಲ್ಲಿ, ಸ್ಥಾನಗಳಲ್ಲಿ ಅಥವಾ ಹುದ್ದೆಗಳಲ್ಲಿ ಮಹಿಳೆಯರಿಗೆ ಶೇಕಡಾ ಐವತ್ತರಷ್ಟು ಮೀಸಲಾತಿಗಾಗಿ ಉಪಬಂಧ ಕಲ್ಪಿಸುವುದಕ್ಕಾಗಿ,–

– ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2010ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 03, ಕಡತ ಸಂಖ್ಯೆ ಸಂವ್ಯಶಾಇ 03 ಶಾಸನ 2010)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೆಯ ನಮೂದನೆ ಮತ್ತು ಅನುಚ್ಛೇದ 243ಡಿ ಅಡಿಯಲ್ಲಿ ಬರುತ್ತದೆ.)

## XVIII

**2011ರ ತಿದ್ದುಪಡಿ ಅಧಿನಿಯಮ ಸಂಖ್ಯೆ 34.–** ಈ ಮುಂದಿನವುಗಳಿಗಾಗಿ ಎಂದರೆ:–

(i) 1994ರ ರಿಟ್ ಅರ್ಜಿ (ಸಿವಿಲ್) ಸಂಖ್ಯೆ 356ರಲ್ಲಿ ಕೃಷ್ಣಮೂರ್ತಿ ಮತ್ತು ಇತರರು ವಿರುದ್ಧ ಭಾರತ ಸರ್ಕಾರ ಈ ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಜಾರಿಗೊಳಿಸುವುದಕ್ಕಾಗಿ;

(ii) 13ನೇ ಕೇಂದ್ರ ಹಣಕಾಸು ಆಯೋಗದ ಶಿಫಾರಸ್ಸನ್ನು ಜಾರಿಗೊಳಿಸುವುದಕ್ಕಾಗಿ,

–ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

(iii) ಕೆಲವು ಇತರ ಅನುಷಂಗಿಕ ತಿದ್ದುಪಡಿಗಳನ್ನು ಸಹಾ ಪ್ರಸ್ತಾವಿಸಲಾಗಿದೆ.

ಈ ವಿಧೇಯಕವನ್ನು ಕರ್ನಾಟಕ ಪಂಚಾಯತ್ ರಾಜ್ಯ (ತಿದ್ದುಪಡಿ) ಅಧ್ಯಾದೇಶ, 2010ರ (2010ರ ಕರ್ನಾಟಕ ಅಧ್ಯಾದೇಶ 3) ಬದಲಾಗಿ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನಸಭೆಯ ವಿಧೇಯಕ ಸಂಖ್ಯೆ:6, ಕಡತ ಸಂಖ್ಯೆ:ಸಂವ್ಯಶಾಇ 40 ಶಾಸನ 2010)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇ ನಮೂದನೆಯ ಹಾಗೂ ಭಾರತ ಸಂವಿಧಾನದ 243(ಡಿ) ಅನುಚ್ಛೇದದಡಿಯಲ್ಲಿ ಬರುತ್ತದೆ.)

## XIX

**2014ರ ತಿದ್ದುಪಡಿ ಅಧಿನಿಯಮ ಸಂಖ್ಯೆ 23.–** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 136ಎ ಮತ್ತು 175ಎ ಪ್ರಕರಣಗಳಲ್ಲಿ, ಒಬ್ಬ ಸದಸ್ಯನು, ತನ್ನ ಮತ್ತು ತನ್ನ ಕುಟುಂಬದ ಯಾವೊಬ್ಬ ಸದಸ್ಯನ ಒಡೆತನದಲ್ಲಿರುವ ಸ್ವತ್ತುಗಳ ಬಗ್ಗೆ ಘೋಷಣೆಯನ್ನು, ರಾಜ್ಯ ಚುನಾವಣಾ ಆಯೋಗದ ಅಥವಾ ಸಕ್ಷಮ ಪ್ರಾಧಿಕಾರದ ಮುಂದೆ ದಾಖಲು ಮಾಡಲು ವಿಫಲನಾದಲ್ಲಿ, ಆತನು ಸದಸ್ಯನಾಗಿರುವುದು ತಂತಾನೇ ನಿಂತುಹೋಗುವುದು. ಆದರೆ ಈ ಸಂಬಂಧದಲ್ಲಿ ಸದಸ್ಯನ ವಿವರಣೆಯನ್ನು ಕೇಳುವ ಬಗ್ಗೆ ಅಥವಾ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡುವ ಬಗ್ಗೆ ಯಾವುದೇ ಉಪಬಂಧವನ್ನು ಕಲ್ಪಿಸಿರುವುದಿಲ್ಲ. ಅದಕ್ಕಿಂತ ಹೆಚ್ಚಾಗಿ, ಸದಸ್ಯತ್ವದ ನಿಂತುಹೋಗುವಿಕೆ ಕುರಿತು ಭಾರತ ಸಂವಿಧಾನದಲ್ಲಿ ಯಾವುದೇ ಉಪಬಂಧವಿರುವುದಿಲ್ಲ.

ಆದ್ದರಿಂದ, ಅಂಥ ಸದಸ್ಯನಿಗೆ ಯುಕ್ತ ಅವಕಾಶವನ್ನು ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ ಮತ್ತು ಅದಕ್ಕೆ ಅನುಸಾರವಾಗಿ ಉಪಬಂಧಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ,

(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ 22:, ಕಡತ ಸಂಖ್ಯೆ:ಸಂವ್ಯಶಾಇ 50 ಶಾಸನ 2013)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

**XX**

**2015ರ ಅಧಿನಿಯಮ ಸಂಖ್ಯೆ 17.–** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ (1993ರ ಕರ್ನಾಟಕ ಅಧಿನಿಯಮ 14) ಈ ಮುಂದಿನ ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಎಂದರೆ:–

1) ಶ್ರೀ ರಮೇಶ್ ಕುಮಾರ್. ವಿಧಾನ ಸಭೆಯ ಸನ್ಮಾನ್ಯ ಸದಸ್ಯರ ಅಧ್ಯಕ್ಷತೆಯಲ್ಲಿನ ಉನ್ನತಮಟ್ಟದ ತಜ್ಞ ಸಮಿತಿಯು ಶಿಫಾರಸ್ಸು ಮಾಡಿದಂತೆ ಗ್ರಾಮ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಮತ್ತು ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಪದಾವಧಿಯನ್ನು ಐದು ವರ್ಷಗಳಿಗೆ ಹೆಚ್ಚಿಸುವುದು.
2) ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ ಮತ್ತು ಮೀಸಲಿರಿಸದ ಪ್ರವರ್ಗದ ಮೀಸಲಾತಿಯ ಸರದಿಯನ್ನು ಹತ್ತು ವರ್ಷಗಳವರೆಗೆ ಮುಂದುವರೆಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸುವುದು.
3) ಪಂಚಾಯತಿ ಚುನಾವಣೆಗಳಲ್ಲಿ ಕಡ್ಡಾಯ ಮತದಾನಕ್ಕಾಗಿ ಉಪಬಂಧವನ್ನುಕಲ್ಪಿಸುವುದು.
4) ಎಲ್ಲಾ ಪಂಚಾಯತಿಗಳಲ್ಲಿ ಮಹಿಳೆಯರಿಗೆ ಅರ್ಧದಷ್ಟು ಮೀಸಲಾತಿಗಾಗಿ ಉಪಬಂಧವನ್ನು ಕಲ್ಪಿಸುವುದು,

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ 18:, ಕಡತ ಸಂಖ್ಯೆ:ಸಂವ್ಯಶಾಇ 26 ಶಾಸನ 2015)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

**XXI**

**2015ರ ಅಧಿನಿಯಮ ಸಂಖ್ಯೆ 44.–** ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಪಂಚಾಯತಿಯನ್ನು "ಗ್ರಾಮ ಸ್ವರಾಜ್"ವನ್ನಾಗಿ ಶಕ್ತಗೊಳಿಸುವ ಸಾಂವಿಧಾನಿಕ ಜನಾದೇಶವನ್ನು ಅನುವಾದಿಸುವ ಕಾರಣೀಭೂತ ಬದ್ಧತೆಯನ್ನು ರುಜುವಾತುಗೊಳಿಸಲಾಗಿದೆ.

2014–15ರ ಆಯವ್ಯಯ ಭಾಷಣದ 277ನೇ ಕಂಡಿಕೆ "ಮಹಾತ್ಮಾಗಾಂಧಿಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ"

ಮಾನ್ಯ ಮುಖ್ಯಮಂತ್ರಿಯವರು ರಾಜ್ಯಕ್ಕೆ ಮಾಡಿದ ವಾಗ್ದಾನವನ್ನು ಈ ನಿಟ್ಟಿನಲ್ಲಿ ಕ್ರಮಗಳ ಮೂಲಕ ಚಾಲನೆ ನೀಡಲಾಗುತ್ತಿದೆ. ಇದರಂತೆ, ಪಂಚಾಯತಿಗಳನ್ನು ಸಮಗ್ರವಾಗಿ ಬಲಪಡಿಸುವುದಕ್ಕಾಗಿ ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಅಧ್ಯಯನಕ್ಕೆ ಮತ್ತು ಅಳವಡಿಸಿಕೊಳ್ಳಬೇಕಾದ ಸಾಧನಗಳು ಮತ್ತು ಕ್ರಮಗಳನ್ನು ಶಿಫಾರಸ್ಸು ಮಾಡುವುದಕ್ಕೆ ಕರ್ನಾಟಕ ಸರ್ಕಾರವು ಶ್ರೀ ರಮೇಶ ಕುಮಾರ, ವಿಧಾನಸಭಾ ಸದಸ್ಯರು ಮತ್ತು ಮಾಜಿ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ, ಇವರ ನೇತೃತ್ವದಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಿತ್ತು.

ಸಮಿತಿಯು ತಜ್ಞರು ಮತ್ತು ಭಾಗಿದಾರರನ್ನು ಒಳಗೊಂಡ ಸರಣಿ ಸಭೆಗಳನ್ನು ನಡೆಸಿತು ಮತ್ತು ತನ್ನ ವರದಿಯನ್ನು ಸಲ್ಲಿಸಿತು. ಸಚಿವ ಸಂಪುಟ ಉಪಸಮಿತಿಯು ವರದಿಯನ್ನು ಪರಿಗಣಿಸಿತು ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ಪ್ರಸ್ತಾಪಿಸಿತು.

ಗ್ರಾಮಗಳನ್ನು ಭಯ, ಶೋಷಣೆ ಮತ್ತು ವ್ಯಾಜ್ಯಗಳಿಂದ ಮುಕ್ತಗೊಳಿಸಲು, ಪ್ರತಿಯೊಬ್ಬ ವ್ಯಕ್ತಿಯು ಆತ್ಮಗೌರವ ಮತ್ತು ಘನತೆಯಿಂದ ಬದುಕುವುದಕ್ಕೆ ಪಂಚಾಯತ್ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದ ಮೂಲಕ ಗ್ರಾಮೀಣ ಜನರ ಜೀವನಮಟ್ಟವನ್ನು ವೃದ್ಧಿಸುವುದಕ್ಕೆ ತಿದ್ದುಪಡಿಗಳನ್ನು ಪ್ರಸ್ತಾವಿಸಿದೆ.

ಲಿಂಗಸಮಾನತೆಯನ್ನು ಸಾಧಿಸಲು ಮಹಿಳೆಯರನ್ನು ಸಬಲಗೊಳಿಸುವುದು, ಬಯಲು ಬಹಿರ್ದೆಸೆ, ಶೋಷಣೆ ಮತ್ತು ತಾರತಮ್ಯಗಳಂತಹ ದುರಾಚರಣೆಗಳನ್ನು ನಿರ್ಮೂಲಗೊಳಿಸುವುದು, ಪ್ರಮುಖವಾಗಿ ಸಾಮಾಜಿಕ ದುರ್ಬಲವರ್ಗಗಳ ಮತ್ತು ಸಾಮಾನ್ಯ ಜನರನ್ನು ಬಲಪಡಿಸುವ ಮೂಲಕ ಸಮಾನತಾವಾದಿ ಸಮಾಜದೆಡೆಗೆ ದಾರಿ ತೋರಿಸುವುದು.

ವಿಧೇಯಕದ ಪ್ರಮುಖ ಅಂಶಗಳು ಈ ಮುಂದಿನಂತಿವೆ:–

1) ಪಂಚಾಯತ್ ಸಂಸ್ಥೆಗಳಲ್ಲಿ ಸ್ಥಳೀಯ ಸ್ವ–ಆಡಳಿತದ ತತ್ವವನ್ನು ತರುವುದಕ್ಕೆ ಅಧಿನಿಯಮದ ಶೀರ್ಷಿಕೆಯನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಎಂಬುದಾಗಿ ಮರುಹೆಸರಿಸಲಾಗುತ್ತಿದೆ.
2) ಪ್ರಜಾಪ್ರಭುತ್ವದ ತಳಹಂತದಿಂದ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ಜನವಸತಿ, ಜನವಸತಿ ಸಭಾದ ಪರಿಕಲ್ಪನೆಯನ್ನು ತರಲಾಗುತ್ತಿದೆ.
3) ಅವುಗಳ ಅಗತ್ಯ, ತೊಂದರೆಗಳು, ಮತ್ತು ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ ಮತ್ತು ಹಣಕಾಸು ಅಭಿವೃದ್ಧಿ ಯೋಜನೆಗಳ ಆದ್ಯತೆಯನ್ನು ಗೊತ್ತುಪಡಿಸುವುದಕ್ಕೆ ಹಾಗೂ ಜನವಸತಿ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಸ್ಕೀಮುಗಳ ಮುಂದಿಡುವುದಕ್ಕೆ ಜನವಸತಿ ಸಭಾ, ವಾರ್ಡ ಸಭಾ ಮತ್ತು ಗ್ರಾಮ ಸಭಾಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಜನವಸತಿ ಸಭಾ, ವಾರ್ಡ ಸಭಾ ಮತ್ತು ಗ್ರಾಮ ಸಭಾಗಳ ಆದ್ಯತೆಯ ಮೌಲ್ಯ ನಿರ್ಣಯಿಸಲು ನಿರ್ದಿಷ್ಟ ಪ್ರಕಾರ್ಯಗಳ ಮತ್ತು ಅಧಿಕಾರಗಳನ್ನು ಅವುಗಳಿಗೆ ವಹಿಸಲಾಗಿದೆ.
4) ಗ್ರಾಮ ಸ್ವರಾಜ್‌ನ ಮೌಲ್ಯಗಳನ್ನು ಸ್ಪಷ್ಟಪಡಿಸುವುದಕ್ಕೆ ಪ್ರಸ್ತಾವನೆ ಮತ್ತು ಪಂಚಾಯತ್ ನೀತಿಯ ನಿರ್ದೇಶನಾತ್ಮಕ ತತ್ವಗಳನ್ನು ತರಲಾಗುತ್ತಿದೆ.
5) ಪಂಚಾಯತ್ ಸದಸ್ಯರುಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಒಳಗೊಳ್ಳುವುದಕ್ಕೆ ಉಪಬಂಧವೊಂದನ್ನು ಮಾಡಲಾಗಿದೆ.

6) ರಾಜ್ಯ ಆರ್ಥಿಕ ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅನುದಾನಗಳ ವಿಕೇಂದ್ರಿಕರಣವನ್ನು 206ನೇ ಪ್ರಕರಣವು ಕಲ್ಪಿಸಿದೆ ಮತ್ತು ಶೇಕಡಾ 20ಕ್ಕಿಂತ ಕಡಿಮೆಯಲ್ಲದ ಅನುದಾನವು ಮುಕ್ತ ಅನುದಾನವಾಗಿರತಕ್ಕದ್ದು.
7) ಪ್ರಕರಣ 43ಬಿ, 136ಎ, 175ಎ ಆಡಳಿತದ ಎಲ್ಲಾ ಹಂತಗಳಲ್ಲೂ ಪಾರದರ್ಶಕತೆಯನ್ನು ಖಚಿತಪಡಿಸಿದ್ದು, ಚುನಾಯಿತ ಸದಸ್ಯರುಗಳ ಆಸ್ತಿಗಳು ಮತ್ತು ದಾಯಿತ್ವಗಳ ಘೋಷಣೆಯನ್ನು ಕಡ್ಡಾಯಗೊಳಿಸಿದೆ.
8) ಅನುಸೂಚಿತ ಜಾತಿಯ ವ್ಯಕ್ತಿಗಾಗಿ ಮೀಸಲಿಟ್ಟ ಸ್ಥಾನಗಳಲ್ಲಿ ಆ ಪ್ರವರ್ಗದ ವ್ಯಕ್ತಿಯು ಲಭ್ಯವಿರದಿದ್ದಲ್ಲಿ, ಅನುಸೂಚಿತ ಬುಡಕಟ್ಟಿನ ವ್ಯಕ್ತಿಯನ್ನು ಹಾಗೂ ವಿಪರ್ಯಾಯವಾಗಿ ತುಂಬಲು ಒಂದು ಉಪಬಂಧವನ್ನು ಮಾಡಲಾಗಿದೆ.
9) ಗ್ರಾಮ ಪಂಚಾಯಿತಿಯು ಕಾರ್ಯಗತಗೊಳಿಸಿದ ಕೆಲಸದ ಮೌಲ್ಯದ ಶೇಕಡ ಹತ್ತಕ್ಕಿಂತ ಕಡಿಮೆಯಿಲ್ಲದಷ್ಟು ಕೊಡುಗೆ ನೀಡಿರುವ ಪಂಚಾಯತ್ ಪ್ರದೇಶದೊಳಗಿನ ಫಲಾನುಭವಿಗಳನ್ನು ಒಳಗೊಂಡ ಸ್ವಸಹಾಯ ಸಮೂಹಗಳಿಗೆ " ಸಾಮುದಾಯಿಕ ಗುತ್ತಿಗೆ (Community contract) ಯನ್ನು ಕಲ್ಪಿಸುವುದಕ್ಕಾಗಿ 60 ಬಿ ಪ್ರಕರಣವನ್ನು ಸೇರಿಸಲು ಉದ್ದೇಶಿಸಿದೆ.
10) ಪಂಚಾಯತ್ ರಾಜ್ ಆಯುಕ್ತಾಲಯ (Commissionerate)ದ ಸ್ಥಾಪನೆಯ ಕುರಿತು 232ಎ ಪ್ರಕರಣವನ್ನು ಮತ್ತು ಪಂಚಾಯತ್ ಆಡಳಿತ ಸೇವೆ ಸ್ಥಾಪನೆಯ ಕುರಿತು 232 ಬಿ ಪ್ರಕರಣವನ್ನು ಸೇರಿಸಿದೆ.
11) ಪಂಚಾಯತಿಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕ್ರೋಢೀಕರಣವನ್ನು ಖಚಿತಪಡಿಸಲು ದೃಷ್ಟಿಕೋನ ಮತ್ತು ಕ್ರಿಯಾ ನಕಾಶೆ(Activity Mapping) ವಿನ್ಯಾಸಗೊಳಿಸಿದೆ.
12) ಗ್ರಾಮಗಳಲ್ಲಿ ದಮನಿತ ಮತ್ತು ತುಳಿತಕ್ಕೊಳಗಾದ ವರ್ಗಗಳಿಗೆ ಅಸ್ಪ್ರಶ್ಯತೆ ಮತ್ತು ಸಾಮಾಜಿಕ ಬಹಿಷ್ಕಾರದ ಬೆದರಿಕೆಯನ್ನು ಹೋಗಲಾಡಿಸುವುದು ಮತ್ತು ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಶೂನ್ಯಗೊಳಿಸುವುದು.
13) ಕಾಲಮಿತಿ (Time Bond) ಮತ್ತು ಪರಿಣಾಮಕಾರಿ ಸೇವಾ ನೀಡಿಕೆ ವ್ಯವಸ್ಥೆ(Effective Service Mechanism)ಗೆ ಕುಂದುಕೊರತೆ ನಿವಾರಣಾ ಪ್ರಾಧಿಕಾರವನ್ನು ರಚಿಸಲಾಗುತ್ತಿದೆ.
14) ಪ್ರತಿಯೊಂದು ಗ್ರಾಮದ ಅಗತ್ಯಗಳಿಗಾಗಿ ಜಿಲ್ಲಾ ಯೋಜನಾ ಮಂಡಳಿಗಳು ಮತ್ತು ರಾಜ್ಯ ಯೋಜನಾ ಮಂಡಳಿಗಳ ಮೂಲಕ ಪರಿಣಾಮಕಾರಿ ಅನುಷ್ಠಾನದ ಮುಖಾಂತರ ಕರ್ನಾಟಕದಲ್ಲಿ ಗ್ರಾಮ ಯೋಜನೆಯನ್ನು ತಳಮಟ್ಟದಿಂದ ಮೇಲ್ಮಟ್ಟಕ್ಕೆ ಯೋಜನೆಗಳನ್ನು ರೂಪಿಸಲಾಗುವುದು.
15) ಪಂಚಾಯತಿಯ ರಾಜಸ್ವ ಉತ್ಪಾದನೆ ಮತ್ತು ಸಂಪನ್ಮೂಲ ಸಜ್ಜುಗೊಳಿಸುವಿಕೆಗಾಗಿ 199ನೇ ಪ್ರಕರಣ.
16) ಆನುಷಂಗಿಕ ತಿದ್ದುಪಡಿಗಳನ್ನು ಮತ್ತು ಆಡಳಿತಾತ್ಮಕ ದೃಷ್ಟಿಕೋನದಿಂದ ಅವಶ್ಯಕವಾಗುವ ತಿದ್ದುಪಡಿಗಳನ್ನು ಮಾಡುವುದಕ್ಕೆ ಅವಕಾಶವನ್ನು ಕೈಗೊಳ್ಳಲಾಗಿದೆ.
ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ 37:, ಕಡತ ಸಂಖ್ಯೆ:ಸಂವ್ಯಶಾಇ 45 ಶಾಸನ 2015)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## XXII

**2017ರ ಅಧಿನಿಯಮ ಸಂಖ್ಯೆ 37.–** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:–

(1) ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಚುನಾವಣಾ ವಿವಾದಗಳನ್ನು ನಿರ್ವಹಿಸಲು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿಯನ್ನು ವಹಿಸುವುದು.
(2) 13ನೇ ಪ್ರಕರಣ (1)ನೇ ಉಪಪ್ರಕರಣದ (ಸಿ) ಖಂಡದ ಉಪಬಂಧವನ್ನು ಬಿಟ್ಟುಬಿಡುವುದು.
(3) ಸರಕುಗಳು ಮತ್ತು ಸೇವಾ ತೆರಿಗೆಯು ಜಾರಿಯಾದ ಪರಿಣಾಮವಾಗಿ ಪಂಚಾಯತಿಯು ಜಾಹೀರಾತು ತೆರಿಗೆಯನ್ನು ವಿಧಿಸುವ ಕುರಿತಾದ ಉಪಬಂಧಗಳನ್ನು ಬಿಟ್ಟುಬಿಡುವುದು.

ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ34:, ಕಡತ ಸಂಖ್ಯೆ:ಸಂವ್ಯಶಾಇ 36 ಶಾಸನ 2017)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

**1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14**

*(1993ರ ಏಪ್ರಿಲ್ 30ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

**ಕರ್ನಾಟಕ [1][ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್][1] ಅಧಿನಿಯಮ, 1993**

*(1993ರ ಏಪ್ರಿಲ್ 30ನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ).*

(1995ರ 10, 1996ರ 9, 1996ರ 17, 1997ರ 1, 1997ರ 10, 1997ರ 29, 1998ರ 29, 1999ರ 10, 1999ರ 21, 2000ದ 8, 2000ದ 11, 2001ರ 30, 2003ರ 8, 2003ರ 37, 2007ರ 17, 2010ರ 24 2011ರ 34, 2014ರ 23, 2015ರ 17 , 2015ರ 44 ಮತ್ತು 2017ರ 37ನೇ ಇದರ ಮೂಲಕ ತಿದ್ದುಪಡಿಯಾದಂತೆ)

[1][ಈ ಮುಂದಿನವುಗಳಿಗಾಗಿ, ಎಂದರೆ:–

(i) ಭಾರತ ಸಂವಿಧಾನದ 73ನೇ ತಿದ್ದುಪಡಿಯ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಮತ್ತು ಜನರು ಹೆಚ್ಚಿನ ರೀತಿಯಲ್ಲಿ ಗ್ರಾಮ ಸ್ವರಾಜ್‌ನ, ಸ್ಥಳೀಯ ಸ್ವಯಮಾಡಳಿತದ ಘಟಕಗಳಲ್ಲಿ ಭಾಗವಹಿಸಿ ಕಾರ್ಯನಿರ್ವಹಿಸಲು ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಚುನಾಯಿತ ನಿಕಾಯಗಳೊಂದಿಗೆ ಮೂರು ಹಂತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕಾಗಿ;

(ii) ಗ್ರಾಮೀಣ ಜನರ ಜೀವನಮಟ್ಟವನ್ನು ಹೆಚ್ಚಿಸಲು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ;

(iii) ಗ್ರಾಮೀಣ ಕರ್ನಾಟಕವನ್ನು ವ್ಯಾಜ್ಯ ಮುಕ್ತ, ಶೋಷಣೆ ಮುಕ್ತ, ಮತ್ತು ಭಯ ಮುಕ್ತ, ಸಮಾನತಾವಾದಿ ರಾಜ್ಯವನ್ನಾಗಿ ಮಾಡುವುದಕ್ಕಾಗಿ;

(iv) ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತವಾದ ಸ್ವಚ್ಛ ಗ್ರಾಮಗಳನ್ನಾಗಿ ಮಾಡುವುದಕ್ಕಾಗಿ;

(v) ಮಹಿಳೆಯರನ್ನು ಸಶಕ್ತಗೊಳಿಸುವುದು ಮತ್ತು ಲಿಂಗ ಸಮಾನತೆಯನ್ನು ಸಾಧಿಸುವ ಸಲುವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲ ಪಡಿಸುವುದಕ್ಕಾಗಿ;

(vi) ಆರ್ಥಿಕ ಅಭ್ಯುದಯ ಮತ್ತು ಸಾಮಾಜಿಕ ಸಮಾನತೆಯನ್ನು ಸಾಧಿಸಲು ಸಾಮಾಜಿಕವಾಗಿ ವಂಚಿತರಾದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸುವುದಕ್ಕೆ;

(vii) ಆರ್ಥಿಕ ಚಟುವಟಿಕೆಗಳ ಮೂಲಕ ಗ್ರಾಮೀಣ ಜನರ ಬದುಕುಗಳಲ್ಲಿ ಪರ್ಯಾಯ ಆದಾಯ ಮೂಲಗಳನ್ನು ಕಲ್ಪಿಸುವುದಕ್ಕೆ ಮತ್ತು ನಾಗರಿಕ ಮೂಲ ಸೌಕರ್ಯಗಳನ್ನು ಒದಗಿಸಿ ಜೀವನಮಟ್ಟವನ್ನು ಹೆಚ್ಚಿಸುವುದಕ್ಕಾಗಿ;

(viii) ಸೃಜನಶೀಲ, ಹೆಮ್ಮೆಯ, ಸ್ವಾವಲಂಬಿ, ಸಂಪದ್ಭರಿತ, ತೃಪ್ತ ಮತ್ತು ಸಾಮರಸ್ಯ ಸಮಾಜವನ್ನು ನಿರ್ಮಾಣ ಮಾಡುವುದಕ್ಕಾಗಿ;

(ix) ಜನವಸತಿ ಸಭೆ, ವಾರ್ಡ್ ಸಭಾ ಮತ್ತು ಗ್ರಾಮ ಸಭೆಗಳನ್ನು ಅಭಿವೃದ್ಧಿಯ ಚಿಂತನ ಮಂಥನ ವೇದಿಕೆಗಳಂತೆ ಬಳಕೆ ಮಾಡಿಕೊಂಡು ನೇರವಾಗಿ ಪಾಲ್ಗೊಳ್ಳುವಂತೆ ಮಾಡಿ ಜನರ ದನಿ, ನೀತಿ ರಚನೆ ಕಾರ್ಯದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುಗಳೇ ಆಗಿರುವ ಜನರೇ ಆಡಳಿತದಲ್ಲಿ ಪ್ರತಿಧ್ವನಿಸುವಂತೆ ಮಾಡುವುದಕ್ಕೆ, ಅವಕಾಶ ಕಲ್ಪಿಸಿ ಆ ಮೂಲಕ ಮಹಾತ್ಮಾ ಗಾಂಧೀಜಿಯವರ ಕನಸಿನ ಗ್ರಾಮಸ್ವರಾಜ್ಯ ಸ್ಥಾಪನೆಯನ್ನು ಮಾಡುವುದಕ್ಕಾಗಿ,

– ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಘಟಕಗಳನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.][1]

ಭಾರತ ಗಣರಾಜ್ಯದ ನಲವತ್ನಾಲ್ಕನೇ ವರ್ಷದಲ್ಲಿ ಇದು ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕರ್ನಾಟಕ [2][ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್][2] ಅಧಿನಿಯಮ, 1993 ಎಂದು ಕರೆಯತಕ್ಕದ್ದು.

(2) ಇದು, ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಮತ್ತು ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

1. ಈ ಅಧಿನಿಯಮವು ಅಧಿಸೂಚನೆಯ ಮೂಲಕ ದಿನಾಂಕ: 10–05–1993ರಿಂದ ಜಾರಿಗೆ ಬಂದಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**2. ಅರ್ಥ ವಿವರಣೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ,–

(1) "ಅಸಿಸ್ಟೆಂಟ್ ಕಮಿಷನರ್" ಎಂದರೆ, ರೆವಿನ್ಯೂ ಉಪ-ವಿಭಾಗದ ಅಸಿಸ್ಟೆಂಟ್ ಕಮಿಷನರ್;

[1][(2)"ಹಿಂದುಳಿದ ವರ್ಗಗಳು" ಎಂದರೆ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಸ್ಥಾನಗಳಲ್ಲಿ ಮತ್ತು ಅಧ್ಯಕ್ಷರ ಹುದ್ದೆಗಳಲ್ಲಿ ಮೀಸಲಾತಿಯ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ "ಎ" ಮತ್ತು "ಬಿ" ಪ್ರವರ್ಗಗಳೆಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ಅಂಥ ವರ್ಗ ಅಥವಾ ವರ್ಗಗಳ ನಾಗರಿಕರು;][1]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13–01–1995 ರಿಂದ ಪ್ರತಿಯೋಜಿಸಲಾಗಿದೆ.

(3) "ಕಟ್ಟಡ" ಎಂಬುದರಲ್ಲಿ ಮನೆ, ಹೊರ-ಮನೆ, ಅಂಗಡಿ, ಕೊಟ್ಟಿಗೆ, ಉಗ್ರಾಣ, ಕಾರ್ಯಾಗಾರ, ಮೇಲ್ಛಪ್ಪರ, ಷೆಡ್, ಗುಡಿಸಲು ಅಥವಾ ಮಾನವ ವಾಸಕ್ಕಾಗಿ ಅಥವಾ ಬೇರೆ ರೀತಿಯಾಗಿ ಉಪಯೋಗಿಸುವ ಇತರ ಆವರಣಗಳು

ಒಳಗೊಳ್ಳುತ್ತವೆ ಮತ್ತು ಗೋಡೆ, ಆವರಣ ಗೋಡೆ, ಬೇಲಿ, ವರಾಂಡ, ಜಗಲಿ, ಮೇಲುಪಾಯ, ಬಾಗಿಲಮೆಟ್ಟಿಲು ಮತ್ತು ಅಂಥವು ಒಳಗೊಳ್ಳತಕ್ಕದ್ದು;

(4) "ವ್ಯವಹಾರ" ಎಂಬುದರಲ್ಲಿ ಯಾವುದೇ ವ್ಯಾಪಾರ, ವಾಣಿಜ್ಯ ಅಥವಾ ತಯಾರಿಕೆ ಅಥವಾ ವ್ಯಾಪಾರ, ವಾಣಿಜ್ಯ ಅಥವಾ ತಯಾರಿಕೆಯ ಸ್ವರೂಪದ ಸಾಹಸೋದ್ಯಮ ಅಥವಾ ವ್ಯಾಪಾರ ಸಂಸ್ಥೆ ಒಳಗೊಳ್ಳುತ್ತದೆ;

(5) "ಆಕಸ್ಮಿಕ ಖಾಲಿ ಸ್ಥಾನ" ಎಂದರೆ, ಕಾಲ ಕಳೆದುಹೋಗುವುದರಿಂದಲ್ಲದೆ ಬೇರೆ ರೀತಿಯಿಂದಾಗುವ ಖಾಲಿ ಸ್ಥಾನ;

(6) "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ" ಎಂದರೆ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ;

(7) "ಕಮಿಷನರ್" ಎಂದರೆ, [1][ಪ್ರಾದೇಶಿಕ ಕಮೀಷನರ್][1] ಅಥವಾ ಈ ಅಧಿನಿಯಮದಡಿ ಕಮಿಷನರ್ ಅವರ ಅಧಿಕಾರಗಳನ್ನು ಚಲಾಯಿಸಲು ಸರ್ಕಾರವು ನೇಮಿಸಬಹುದಾದಂಥ ಇತರ ಅಧಿಕಾರಿ;

1.2007ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 5-1-2007ರಿಂದ ಪ್ರತಿಯೋಜಿಸಲಾಗಿದೆ.

(8) "ಕಂಪನಿ" ಎಂದರೆ, 1956ರ ಕಂಪನಿಗಳ ಅಧಿನಿಯಮದಲ್ಲಿ (1956ರ ಕೇಂದ್ರ ಅಧಿನಿಯಮ 2) ಅರ್ಥ ವಿವರಣೆ ನೀಡಿರುವ ಕಂಪನಿ ಅಥವಾ 1959ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದಡಿ (1959ರ ಕರ್ನಾಟಕ ಅಧಿನಿಯಮ 11) ನೋಂದಾಯಿತವಾದ ಸಹಕಾರಿ ಸಂಘ ಮತ್ತು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ, ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ನಿರ್ವಹಿಸುತ್ತಿರುವ ಯಾವುದೇ ಫರ್ಮ್ ಅಥವಾ ವ್ಯಕ್ತಿಗಳ ಸಂಘ ಒಳಗೊಳ್ಳುತ್ತದೆ;

(9) "ಡೆಪ್ಯುಟಿ ಕಮಿಷನರ್" ಎಂದರೆ, ಜಿಲ್ಲೆಯ ಡೆಪ್ಯುಟಿ ಕಮಿಷನರ್;

[1][(9ಎ) "ಗೊತ್ತುಪಡಿಸಿದ ನ್ಯಾಯಾಲಯ" ಎಂದರೆ, ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳ ಅಧಿವಿಚಾರಣೆಯನ್ನು ನಡೆಸಲು ಗೊತ್ತುಪಡಿಸಿದ ಅಧಿಕಾರ ವ್ಯಾಪ್ತಿಯುಳ್ಳ ಮತ್ತು ಪಂಚಾಯತ್ ಪ್ರದೇಶವು ಅಥವಾ ಪಂಚಾಯತ್ ಪ್ರದೇಶದ ಬಹಳಷ್ಟು ಭಾಗವು ಅನುಕ್ರಮವಾಗಿ ಯಾವ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತದೋ, ಆ ಅಧಿಕಾರವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ.][1]

1. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 12.07.2017 ರಿಂದ ಪ್ರತಿಯೋಜಿಸಲಾಗಿದೆ.

(10) "ಜಿಲ್ಲೆ " ಎಂದರೆ, ರೆವಿನ್ಯೂ ಜಿಲ್ಲೆ;

(11) "ಯಾವುದೇ ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣ ಅಥವಾ ವಿಸ್ತರಣೆ " ಎಂಬುದರಲ್ಲಿ,-

(i) ಯಾವುದೇ ಕಟ್ಟಡಕ್ಕೆ ಮಾಡಲಾಗುವ ಮುಖ್ಯ ಬದಲಾವಣೆ ಮತ್ತು ವಿಸ್ತರಣೆ;

(ii) ಮೂಲತಃ ಮಾನವ ವಾಸಕ್ಕಾಗಿ ನಿರ್ಮಿಸಿರದಿದ್ದ ಯಾವುದೇ ಕಟ್ಟಡವನ್ನು, ರಚನೆಯಲ್ಲಿ ಮಾರ್ಪಾಡು ಮಾಡುವ ಮೂಲಕ ಮಾನವ ವಾಸದ ಸ್ಥಳವಾಗಿ ಪರಿವರ್ತಿಸುವುದು;

(iii) ಮಾನವ ವಾಸದ ಒಂದು ಅಥವಾ ಹೆಚ್ಚು ಸ್ಥಳಗಳನ್ನು ಹೆಚ್ಚಿನ ಸಂಖ್ಯೆಯ ಅಂಥ ಸ್ಥಳಗಳನ್ನಾಗಿ ಪರಿವರ್ತಿಸುವುದು;

(iv) ಮಾನವ ವಾಸದ ಎರಡು ಅಥವಾ ಹೆಚ್ಚು ಸ್ಥಳಗಳನ್ನು ಕಡಿಮೆ ಸಂಖ್ಯೆಯ ಅಂಥ ಸ್ಥಳಗಳನ್ನಾಗಿ ಪರಿವರ್ತಿಸುವುದು;

(v) ಒಳ ಚರಂಡಿ ವ್ಯವಸ್ಥೆ ಅಥವಾ ನೈರ್ಮಲ್ಯ ವ್ಯವಸ್ಥೆಗಳಲ್ಲಿ ಬದಲಾವಣೆ ಉಂಟುಮಾಡುವಂಥ ಅಥವಾ ಅದರ ಭದ್ರತೆಗೆ ಮುಖ್ಯವಾಗಿ ಬಾಧಕ ಉಂಟಾಗುವ ಹಾಗೆ ಕಟ್ಟಡವನ್ನು ಮಾರ್ಪಾಟು ಮಾಡುವುದು;

(vi) ಯಾವುದೇ ಕಟ್ಟಡಕ್ಕೆ ಯಾವುದೇ ಕೊಠಡಿಗಳು, ಕಟ್ಟಡಗಳು, ಹೊರ-ಮನೆ ಅಥವಾ ಇತರ ರಚನೆಗಳ ಸೇರ್ಪಡೆ;

(vii) ಮೂಲತಃ ಯಾವುದೇ ಸ್ಥಳ ಅಥವಾ ಕಟ್ಟಡವನ್ನು ಧಾರ್ಮಿಕ ಪೂಜೆಗಾಗಿ ಅಥವಾ ಪವಿತ್ರ ಉದ್ದೇಶಕ್ಕಾಗಿ ಕಲ್ಪಿಸಿರದಿದ್ದಲ್ಲಿ ಅಥವಾ ನಿರ್ಮಿಸಿರದಿದ್ದಲ್ಲಿ ಅಂಥ ಸ್ಥಳ ಅಥವಾ ಕಟ್ಟಡವನ್ನು ರಚನೆಯಲ್ಲಿ ಯಾವುದೇ ಮಾರ್ಪಾಡು ಮಾಡುವ ಮೂಲಕ ಅಂಥ ಉದ್ದೇಶಗಳಿಗಾಗಿ ಬಳಸಲು ಪರಿವರ್ತಿಸುವುದು;

(viii) ಗೋಡೆಗಳ ಅಥವಾ ಕಟ್ಟಡಗಳ ನಡುವೆ ಇರುವ ಖಾಲಿ ಜಾಗಕ್ಕೆ ಮೇಲ್ಹಾವಣಿ ಅಥವಾ ಹೊದಿಕೆ ಹಾಕುವ ಮೂಲಕ ನಿರ್ಮಿಸಿದಂಥ ರಚನೆಗೆ ಸಂಬಂಧಿಸಿದಂತೆ ಆ ಜಾಗಕ್ಕೆ ಮೇಲ್ಹಾವಣಿ ಅಥವಾ ಹೊದಿಕೆ ಹಾಕುವುದು;

(ix) ಯಾವುದೇ ಕಟ್ಟಡವನ್ನು ಮೂಲತಃ ಮಳಿಗೆ, ಅಂಗಡಿ, ಉಗ್ರಾಣ ಅಥವಾ ಗೋಡೌನ್ ಇವುಗಳ ಉಪಯೋಗಕ್ಕಾಗಿ ನಿರ್ಮಿಸಿರದಿದ್ದಲ್ಲಿ ಆ ಕಟ್ಟಡವನ್ನು ಅಂಥ ಉಪಯೋಗಕ್ಕಾಗಿ ಬಳಸಲು ಅಥವಾ ಪ್ರತಿಕ್ರಮದಲ್ಲಿ ಬಳಸಲು ಪರಿವರ್ತಿಸುವುದು;

(x) ಯಾವುದೇ ಬೀದಿ ಅಥವಾ ಭೂಮಿಗೆ ಸೇರಿದಂತಿರುವ ಗೋಡೆಯ ಮಾಲೀಕನಲ್ಲಿ ಆ ಬೀದಿ ಅಥವಾ ಭೂಮಿಯ ಮೇಲಿನ ಹಕ್ಕು ನಿಹಿತವಾಗಿರದಿದ್ದರೆ, ಅಂಥ ಗೋಡೆಯಲ್ಲಿ ಬಾಗಿಲನ್ನು ನಿರ್ಮಿಸುವುದು ಮತ್ತು ಅಂಥ ಬಾಗಿಲಿನಿಂದ ಬೀದಿ ಅಥವಾ ಭೂಮಿಗೆ ಹಾದಿ ಕಲ್ಪಿಸುವುದು,

[1][(xi) ಪಂಚಾಯತ್ ಪ್ರದೇಶದಲ್ಲಿರುವ ಯಾವುದೇ ಕಟ್ಟಡದ ಮೇಲ್ಛಾವಣಿಯ ಮೇಲೆ ಅಥವಾ ಕಾಂಪೌಂಡ್‌ನ ಒಳಗಿರುವ ಭೂಭಾಗದಲ್ಲಿ (Platform) ಅಥವಾ ಆ ಕಟ್ಟಡಕ್ಕೆ ಹೊಂದಿಕೊಂಡಿರುವ ಯಾವುದೇ ಭೂಮಿಯಲ್ಲಿ ಹೋರ್ಡಿಂಗ್ ಅಥವಾ ಮೊಬೈಲ್ ಟವರನ್ನು ನಿಲ್ಲಿಸುವುದು.][1]

-ಇವುಗಳು ಒಳಗೊಳ್ಳುತ್ತವೆ;

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(12) "ಕಾರ್ಯನಿರ್ವಾಹಕ ಅಧಿಕಾರಿ" ಎಂದರೆ, ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿ;

(13) "ಕಾರ್ಖಾನೆ" ಎಂದರೆ, 1948ರ ಕಾರ್ಖಾನೆಗಳ ಅಧಿನಿಯಮದಲ್ಲಿ (1948ರ ಕೇಂದ್ರ ಅಧಿನಿಯಮ 13) ಅರ್ಥ ವಿವರಣೆ ನೀಡಿರುವ ಕಾರ್ಖಾನೆಯೇ ಅಲ್ಲದೆ, ಮಾನವ ಇಲ್ಲವೆ ಪ್ರಾಣಿ ಶಕ್ತಿಯ ಮೂಲಕ ಉತ್ಪಾದನೆ ಮಾಡಿರದ, ಯಾಂತ್ರಿಕವಾಗಿ ರವಾನಿಸಿದ ಉಗಿ, ನೀರು, ತೈಲ ಅನಿಲ, ವಿದ್ಯುತ್ ಅಥವಾ ಯಾವುದೇ ಇತರ ರೀತಿಯ ಶಕ್ತಿಯ ಸಹಾಯದಿಂದ ಯಾವುದೇ ಔದ್ಯಮಿಕ ತಯಾರಿಕಾ ಅಥವಾ ವ್ಯಾಪಾರ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆಯೋ ಅಲ್ಲಿನ ಪ್ರಾಕಾರಗಳೂ ಒಳಗೊಂಡಿರುವ ಯಾವುವೇ ಆವರಣಗಳು;

(14) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(15) "ಗ್ರಾಮ ಪಂಚಾಯತಿ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿರುವ ಗ್ರಾಮ ಪಂಚಾಯತಿ;

[1][(16) **"ಗ್ರಾಮ ಸಭಾ"** ಎಂದರೆ, ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯತ್ ಪ್ರದೇಶದ ಒಳಗೆ ಇರುವ ಗ್ರಾಮಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಗಳಲ್ಲಿ ನೋಂದಾಯಿತರಾಗಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][(16ಎ) **"ಜನವಸತಿ"** ಎಂದರೆ, ಗ್ರಾಮದ ಪರಿಮಿತಿಯ ಹೊರಗೆ ಇರುವ ಒಂದು ನೂರರಿಂದ ಮುನ್ನೂರೈವತ್ತು ಜನಸಂಖ್ಯೆಯುಳ್ಳ ಸಣ್ಣ ವಸತಿ ಪ್ರದೇಶ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ, ಇತರ ಸಣ್ಣ ವಸತಿ ಸಮೂಹ (hamlet) ಅಥವಾ ಅಂಥ ಸಣ್ಣ ವಸತಿ ಪ್ರದೇಶ (small settlement) ಅಥವಾ ಸಣ್ಣ ವಸತಿ ಸಮೂಹಗಳ ಗುಂಪು ಮತ್ತು 3ನೇ ಪ್ರಕರಣದ ಅಡಿಯಲ್ಲಿ ಹಾಗೆ ಅಧಿಸೂಚಿತವಾದುದು;

(16ಬಿ) **"ಜನವಸತಿ ಸಭಾ"** ಎಂದರೆ, ಗ್ರಾಮ ಪಂಚಾಯತಿಯಲ್ಲಿರುವ ಜನವಸತಿಯ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(17) "ಆರೋಗ್ಯಾಧಿಕಾರಿ" ಎಂದರೆ, ಜಿಲ್ಲಾ ಪಂಚಾಯತಿಯಿಂದ ಅಥವಾ ಅದರ ಪರವಾಗಿ ನಿಯೋಜಿತನಾದ ಆರೋಗ್ಯಾಧಿಕಾರಿ ಮತ್ತು ಅಂಥ ಯಾವ ಅಧಿಕಾರಿ ಇಲ್ಲದಿದ್ದರೆ ಸಂಬಂಧಪಟ್ಟ ತಾಲ್ಲೂಕು ಅಥವಾ ಜಿಲ್ಲೆಯ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸರ್ಕಾರಿ ಆರೋಗ್ಯಾಧಿಕಾರಿ;

(18) "ಸಾಂಕ್ರಾಮಿಕ ರೋಗ" ಎಂದರೆ, ಮಿದುಳು ಮತ್ತು ಮಿದುಳುಬಳ್ಳಿಯ ಜ್ವರ, ಸೀತಾಳ ಸಿಡುಬು, ಕಾಲರ, ಡಿಫ್ತೀರಿಯಾ, ವಿಷಮ ಶೀತಜ್ವರ, ಸಾಂಕ್ರಾಮಿಕ ಇನ್‌ಫ್ಲೂಯಂಜಾ, ಕುಷ್ಠ ರೋಗ, ದಡಾರ, ಪ್ಲೇಗು, ರೇಬಿಸ್, ಕೆಂಜ್ವರ, ಸಿಡುಬು, ಕ್ಷಯ, ಟೈಫಸ್ ಜ್ವರ, ಬೊಕ್ಕೆರೋಗ ಅಥವಾ ಈ ಬಗ್ಗೆ ಸರ್ಕಾರವು ಸಾಮಾನ್ಯವಾಗಿ ರಾಜ್ಯಾದ್ಯಂತ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರಾಜ್ಯದ ಭಾಗ ಅಥವಾ ಭಾಗಗಳಲ್ಲಿ ಅಧಿಸೂಚಿಸಬಹುದಾದಂಥ ಯಾವುದೇ ಇತರ ರೋಗ;

(19) "ಭೂ ಕಂದಾಯ" ಎಂದರೆ, ಭೂಮಿಯನ್ನು ಧಾರಣ ಮಾಡಿರುವುದರಿಂದಾಗಿ ಅಥವಾ ಅದು ನಿಹಿತವಾಗಿರುವುದರಿಂದಾಗಿ ಯಾವನೇ ವ್ಯಕ್ತಿಯಿಂದ, ಆ ಭೂಮಿಯು ಇರುವಂಥ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಕಂದಾಯ ವ್ಯವಸ್ಥೆಯಲ್ಲಿ ನಿಗದಿಪಡಿಸಿದಂತೆ ಸರ್ಕಾರವು ಅಥವಾ ಅದರ ಪರವಾಗಿ ಸ್ವೀಕರಿಸಿದ ಅಥವಾ ಕೋರಬಹುದಾದ ಎಲ್ಲ ಮೊತ್ತಗಳು ಮತ್ತು ಸಂದಾಯಗಳು;

(20) "ಪಾಯಿಖಾನೆ ಮನೆ" ಎಂಬುದರಲ್ಲಿ ಶೌಚಾಲಯ, ಶೌಚಗೃಹ ಮತ್ತು ಮೂತ್ರಸ್ಥಳ ಒಳಗೊಳ್ಳುತ್ತದೆ;

(21) "ಸ್ಥಳೀಯ ಪ್ರಾಧಿಕಾರ" ಎಂಬುದರಲ್ಲಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಿದ ಮುನಿಸಿಪಲ್ ಕಾರ್ಪೋರೇಷನ್, ಮುನಿಸಿಪಲ್ ಕೌನ್ಸಿಲ್, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ, [1][ಪಟ್ಟಣ ಪಂಚಾಯತಿ, ಕೈಗಾರಿಕಾ ಉಪ-ನಗರ][1], ಅಭಿವೃದ್ಧಿ ಮಂಡಲಿ, ನಗರ ಅಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರ ಒಳಗೊಳ್ಳುತ್ತದೆ;

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(22) "ಮಾರುಕಟ್ಟೆ" ಎಂದರೆ, ಸರಕುಗಳು ಅಥವಾ ಪ್ರಾಣಿಗಳನ್ನು ಎಲ್ಲಿ ಸಾರ್ವಜನಿಕವಾಗಿ ಮಾರಾಟಕ್ಕಾಗಿ ಇಡಲಾಗಿದೆಯೋ, ಎಲ್ಲಿ ಸಾಮಾನ್ಯವಾಗಿ ಅಥವಾ ನಿಯತಕಾಲಿಕವಾಗಿ ಕನಿಷ್ಠ ಪಕ್ಷ ನಾಲ್ಕು ಅಂಗಡಿಗಳು, ಮಳಿಗೆಗಳು ಅಥವಾ ಷೆಡ್ಡುಗಳನ್ನು ಸ್ಥಾಪಿಸಲಾಗಿದೆಯೋ ಅಥವಾ ಕನಿಷ್ಠ ಪಕ್ಷ ಹತ್ತು ಪ್ರಾಣಿಗಳನ್ನು ಮಾರಾಟಕ್ಕಾಗಿ ತರಲಾಗಿದೆಯೋ ಆ ಸ್ಥಳ;

(23) "ಉಪದ್ರವ" ಎಂಬುದರಲ್ಲಿ ಗಾಯ, ಅಪಾಯ, ಕಿರುಕುಳವನ್ನು ಅಥವಾ ದೃಷ್ಟಿ ಶಕ್ತಿ, ಘ್ರಾಣಶಕ್ತಿ ಅಥವಾ ಶ್ರವಣ ಶಕ್ತಿಗೆ ಕಿರಿಕಿರಿಯನ್ನು ಅಥವಾ ವಿಶ್ರಾಂತಿ ಅಥವಾ ನಿದ್ರೆಗೆ ತೊಂದರೆಯನ್ನು ಉಂಟುಮಾಡುವ ಅಥವಾ ಉಂಟುಮಾಡಬಹುದಾದ ಅಥವಾ ಪ್ರಾಣಕ್ಕೆ ಅಪಾಯಕಾರಿಯಾದ ಅಥವಾ ಅಪಾಯಕಾರಿಯಾಗಬಹುದಾದ ಅಥವಾ ಸಾರ್ವಜನಿಕ ಆರೋಗ್ಯ ಅಥವಾ ಸ್ವತ್ತಿಗೆ ಅಥವಾ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ಜನಸಾಮಾನ್ಯರ ಅಥವಾ ಸಾರ್ವಜನಿಕ ಹಕ್ಕನ್ನು ಚಲಾಯಿಸಬಹುದಾದಂತಹ ಅವಕಾಶ ಹೊಂದಿರುವ ವ್ಯಕ್ತಿಗಳ ಆರೋಗ್ಯ ಅಥವಾ ಸ್ವತ್ತಿಗೆ ಹಾನಿಕಾರಕವಾದ ಯಾವುದೇ ಕಾರ್ಯ, ಲೋಪ, ಸ್ಥಳ ಅಥವಾ ವಸ್ತು ಒಳಗೊಳ್ಳುತ್ತದೆ;

(24) "ಅಸಹ್ಯ ಅಥವಾ ಅಪಾಯಕರ ವ್ಯಾಪಾರ" ಎಂದರೆ, ಜೀವ, ಆರೋಗ್ಯ ಅಥವಾ ಆಸ್ತಿಗೆ ಅಪಾಯಕಾರಿಯಾದ, 67ನೇ ಪ್ರಕರಣದಡಿ ಸರ್ಕಾರವು ಅಧಿಸೂಚಿಸುವ ಅಥವಾ ಉಪದ್ರವವನ್ನುಂಟು ಮಾಡುವ ಸಂಭವವಿರುವ ಯಾವುದೇ ವ್ಯಾಪಾರ, ವ್ಯವಹಾರ ಅಥವಾ ಉದ್ಯಮ;

(25) "ಅನುಭವದಾರ" ಎಂದರೆ, ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗದ ವಾಸ್ತವಿಕ ಸ್ವಾಧೀನತೆ ಹೊಂದಿರುವ ಯಾವನೇ ವ್ಯಕ್ತಿ ಮತ್ತು ಅದು ವಾಸ್ತವಿಕ ಸ್ವಾಧೀನತೆ ಹೊಂದಿರುವ ಮಾಲೀಕ ಮತ್ತು ಬಾಡಿಗೆದಾರ ಅಥವಾ ಲೈಸನ್ಸುದಾರನನ್ನು, ಅಂಥ ಬಾಡಿಗೆದಾರ ಅಥವಾ ಲೈಸನ್ಸುದಾರನು ಬಾಡಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರಲಿ ಅಥವಾ ಇಲ್ಲದಿರಲಿ, ಒಳಗೊಳ್ಳುತ್ತದೆ;

(26) "ಅಸಹ್ಯಕರ ವಸ್ತು" ಎಂಬುದರಲ್ಲಿ ಹೊಲಸು, ಗ್ರಾಮಸಾರ, ಕೊಚ್ಚೆ, ಮನೆಯ ಕಸ ಮತ್ತು ಅಗಿದ ಎಲೆ ಮತ್ತು ಹೊಗೆಸೊಪ್ಪು ಒಳಗೊಂಡ ಉಗುಳು, ಅಡಿಗೆ ಮನೆಯ ಅಥವಾ ಕೊಟ್ಟಿಗೆಯ ಕಸ, ಒಡೆದ ಗಾಜುಗಳ ಅಥವಾ ಮಣ್ಣಿನ ಪಾತ್ರೆಗಳ ಚೂರುಗಳು, ಮುರುಕಲು ಗುಪ್ಪೆ ಮತ್ತು ರದ್ದಿ ಕಾಗದ ಒಳಗೊಳ್ಳುತ್ತದೆ;

(27) "ಮಾಲೀಕ" ಎಂಬುದರಲ್ಲಿ ತತ್ಕಾಲದಲ್ಲಿ ತನ್ನ ಸ್ವಂತ ಲೆಕ್ಕದಲ್ಲಿ ಅಥವಾ ಏಜೆಂಟ್ಸ್, ರಿಸೀವರ್ ಅಥವಾ ಟ್ರಸ್ಟಿಯಾಗಿ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಅದರ ಯಾವುದೇ ಭಾಗದ ಬಾಡಿಗೆಯನ್ನು ಸ್ವೀಕರಿಸುವ ಅಥವಾ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗವನ್ನು ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿದ್ದರೆ ಬಾಡಿಗೆಯನ್ನು ಸ್ವೀಕರಿಸುವ ವ್ಯಕ್ತಿ ಒಳಗೊಳ್ಳುತ್ತದೆ;

(28) "ಪಂಚಾಯತಿ ಪ್ರದೇಶ" ಎಂದರೆ 4ನೇ ಪ್ರಕರಣದಡಿ ಪಂಚಾಯತಿ ಪ್ರದೇಶ ಎಂದು ಘೋಷಿಸಿರುವ ಯಾವುದೇ ಪ್ರದೇಶ;

[1][28–ಎ)"ಪಂಚಾಯತಿ ಅಭಿವೃದ್ಧಿ ಅಧಿಕಾರಿ" ಎಂದರೆ, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ;'] [1]

[3][[2][(28ಬಿ) **"ಪಂಚಾಯತಿ ಸಿಬ್ಬಂದಿ"** ಎಂದರೆ, ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವೆಯಲ್ಲಿ ಇರುವ ಹುದ್ದೆಗಳನ್ನು ಹೊರತುಪಡಿಸಿ ಪಂಚಾಯತಿಯು ನೇಮಕ ಮಾಡಿದ ಅಧಿಕಾರಿಗಳು ಮತ್ತು ಸಿಬ್ಬಂದಿ;

(28ಸಿ) "ಜವಾಬ್ದಾರಿಗಳ ನಕ್ಷೆ" ಎಂದರೆ, "ಪಂಚಾಯತ್ ರಾಜ್ ಸಂಸ್ಥೆಗಳು ಈ ಅಧಿನಿಯಮದ ಅಡಿಯಲ್ಲಿ ಹೊಂದಿರಬಹುದಾದ ಜವಾಬ್ದಾರಿಗಳ ವಿವರವಾದ ಪಟ್ಟಿ;"

(28ಡಿ) ಈ ಅಧಿನಿಯಮದಲ್ಲಿ ಬಳಸಿರುವ **"ರಿಟರ್ನಿಂಗ್ ಆಫೀಸರ್", "ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್", "ಪ್ರಿಸೈಡಿಂಗ್ ಆಫೀಸರ್"** ಮತ್ತು **"ಪೋಲಿಂಗ್ ಆಫೀಸರ್"** ಎಂಬ ಪದಗಳಿಗೆ, ರಾಜ್ಯ ಚುನಾವಣಾ ಆಯೋಗವು ಪಂಚಾಯತ್‌ಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಆ ಎಲ್ಲ ಪದಗಳು ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರಲ್ಲಿ (1951ರ ಕೇಂದ್ರ ಅಧಿನಿಯಮ 43) ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು][2]][3]

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23–07–2010 ರಿಂದ ಸೇರಿಸಲಾಗಿದೆ.
2. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04–10–2010 ರಿಂದ ಸೇರಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(29) "ಜನಸಂಖ್ಯೆ" ಎಂದರೆ, ಕಳೆದ ಸಲ ಜನಗಣತಿಯಲ್ಲಿ ಕಂಡುಕೊಂಡಿರುವ ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಸುಸಂಗತ ಅಂಕಿ ಅಂಶಗಳಲ್ಲಿ ಪ್ರಕಟಿಸಿರುವ ಜನಸಂಖ್ಯೆ;

(30) "ಖಾಸಗಿ ಮಾರುಕಟ್ಟೆ" ಎಂದರೆ, ಸಾರ್ವಜನಿಕ ಮಾರುಕಟ್ಟೆಯಲ್ಲದ ಇತರ ಮಾರುಕಟ್ಟೆ;

(31) "ಸಾರ್ವಜನಿಕ ಮಾರುಕಟ್ಟೆ" ಎಂದರೆ, ಗ್ರಾಮ ಪಂಚಾಯತಿಯ ಒಡೆತನದಲ್ಲಿರುವ ಅಥವಾ ಗ್ರಾಮ ಪಂಚಾಯತಿಯು ಆರ್ಜಿಸಿದ, ನಿರ್ಮಿಸಿದ, ನಡೆಸಿಕೊಂಡು ಬರುತ್ತಿರುವ ಅಥವಾ ನಿರ್ವಹಿಸುತ್ತಿರುವ ಯಾವುದೇ ಮಾರುಕಟ್ಟೆ;

(32) "ಸಾರ್ವಜನಿಕ ಸ್ಥಳ" ಎಂದರೆ, ಅಂಥ ಸ್ಥಳವು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯಲ್ಲಿ ನಿಹಿತವಾಗಿರಲಿ ಅಥವಾ ಇಲ್ಲದಿರಲಿ ಸಾರ್ವಜನಿಕರ ಬಳಕೆಗೆ ಅಥವಾ ಉಪಯೋಗಕ್ಕೆ ಅವಕಾಶ ಇರುವಂಥ ಖಾಸಗಿ ಸ್ವತ್ತು ಅಲ್ಲದ ಯಾವುದೇ ಸ್ಥಳ;

(33) "ಸಾರ್ವಜನಿಕ ಬೀದಿ" ಎಂದರೆ, ಅದು ಮುಖ್ಯ ರಸ್ತೆಯಾಗಿರಲಿ ಅಥವಾ ಇಲ್ಲದಿರಲಿ ಸಾರ್ವಜನಿಕರಿಗೆ ದಾರಿಹಕ್ಕು ಇರುವ ಯಾವುದೇ ಬೀದಿ;

(34) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಿರುವ ಅನುಸೂಚಿ;

(35) "ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ 1950ರ ಸಂವಿಧಾನದ (ಅನುಸೂಚಿತ ಜಾತಿಗಳು) ಆದೇಶದಲ್ಲಿ ಮತ್ತು 1950ರ ಸಂವಿಧಾನದ (ಅನುಸೂಚಿತ ಪಂಗಡಗಳು) ಆದೇಶದಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿರುವ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು;

(36) "ಕಾರ್ಯದರ್ಶಿ" ಎಂದರೆ, ಗ್ರಾಮ ಪಂಚಾಯತಿಯ ಕಾರ್ಯದರ್ಶಿ;

[1][(36ಎ) "ರಾಜ್ಯ ಚುನಾವಣಾ ಆಯೋಗ" ಎಂದರೆ 308ನೇ ಪ್ರಕರಣದಡಿ ರಚಿತವಾದ ಕರ್ನಾಟಕ ಚುನಾವಣಾ ಆಯೋಗ;][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20–10–1997 ರಿಂದ ಸೇರಿಸಲಾಗಿದೆ.

(37) "ಬೀದಿ" ಎಂಬುದರಲ್ಲಿ ಯಾವುದೇ ಹೆದ್ದಾರಿ, ಒಡ್ಡುದಾರಿ, ಸೇತುವೆ, ಸೇತುವೆ ರಸ್ತೆ, ಕಮಾನು, ರಸ್ತೆ, ಭೂಮಿ, ಕಾಲುದಾರಿ, ಸುರಂಗಮಾರ್ಗ, ಅಂಗಳ, ಓಣಿ ಅಥವಾ ಸವಾರಿದಾರಿ ಅಥವಾ ಮಾರ್ಗ, ಅದು ಮುಖ್ಯ ರಸ್ತೆಯಾಗಿರಲಿ ಅಥವಾ ಇಲ್ಲದಿರಲಿ, ಒಳಗೊಳ್ಳುತ್ತದೆ ಮತ್ತು ಯಾವುದೇ ಬೀದಿಯಲ್ಲಿ ಕಾಲುದಾರಿ ಮತ್ತು ಬಂಡಿರಸ್ತೆ ಇದ್ದರೆ, ಆ ಪದವು ಅವೆರಡನ್ನೂ ಒಳಗೊಳ್ಳುತ್ತದೆ;

(38) "ತಾಲ್ಲೂಕು" ಎಂದರೆ, ರೆವಿನ್ಯೂ ತಾಲ್ಲೂಕು, ಆದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ [1][ನಿರ್ದಿಷ್ಟಪಡಿಸಿದ ದೊಡ್ಡ ನಗರ ಪ್ರದೇಶ, ಚಿಕ್ಕ ನಗರ ಪ್ರದೇಶ, ಪರಿವರ್ತಿತವಾಗಲಿರುವ ಪ್ರದೇಶ ಅಥವಾ ಕೈಗಾರಿಕಾ ಉಪ-ನಗರದ][1] ಪರಿಮಿತಿಗಳನ್ನು ಹೊರತುಪಡಿಸಿದ ರೆವಿನ್ಯೂ ತಾಲ್ಲೂಕು;

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20–10–1997ರಿಂದ ಪ್ರತಿಯೋಜಿಸಲಾಗಿದೆ.

(39) "ತಾಲ್ಲೂಕು ಪಂಚಾಯತಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ತಾಲ್ಲೂಕು ಪಂಚಾಯತಿ;

(40) "ತಹಸೀಲ್ದಾರ್" ಎಂದರೆ, ರೆವಿನ್ಯೂ ತಾಲ್ಲೂಕಿನ ತಹಸೀಲ್ದಾರ್;

(41) "ವಾಹನ" ಎಂಬುದರಲ್ಲಿ ಬೈಸಿಕಲ್, ಸೈಕಲ್‌ರಿಕ್ಷಾ, ಮೋಟಾರುಕಾರು ಮತ್ತು ಸಾರ್ವಜನಿಕ ರಸ್ತೆಯಲ್ಲಿ ಬಳಸುತ್ತಿರುವ ಅಥವಾ ಬಳಸಲು ಸಾಧ್ಯವಿರುವಂತಹ ಚಕ್ರ ಇರುವ ಪ್ರತಿಯೊಂದು ವಾಹನ ಒಳಗೊಳ್ಳುತ್ತದೆ;

(42) "ಗ್ರಾಮ" ಎಂದರೆ,ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯಪಾಲರು ಸಾರ್ವಜನಿಕ ಅಧಿಸೂಚನೆಯ ಮೂಲಕ ಗ್ರಾಮವೆಂದು ನಿರ್ದಿಷ್ಟಪಡಿಸುವ ಗ್ರಾಮ ಮತ್ತು ಅದರಲ್ಲಿ, ಹಾಗೆ ನಿರ್ದಿಷ್ಟಪಡಿಸುವ ಗ್ರಾಮಗಳ ಗುಂಪು ಒಳಗೊಳ್ಳುತ್ತದೆ;

[2][[1][(42ಎ) **"ದೂರದೃಷ್ಟಿ ಯೋಜನೆ"** ಎಂದರೆ, ಪಂಚಾಯತ್ ಪ್ರದೇಶದಲ್ಲಿ ಒಟ್ಟಾರೆ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ಇರುವ ದೀರ್ಘಾವಧಿಯ ದೂರದೃಷ್ಟಿ ಯೋಜನೆ.

(42ಬಿ) **"ಸಮಾಜದ ಸುರಕ್ಷಿತವಲ್ಲದ (vulnerable) ವರ್ಗಗಳು"** ಎಂದರೆ, ಮಕ್ಕಳು, ಅಪ್ರಾಪ್ತ ವಯಸ್ಸಿನ ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು, ರೋಗಗ್ರಸ್ಥರು ಮತ್ತು ಅಶಕ್ತರು, ಅಸಮರ್ಥರು ಮತ್ತು ವಿಕಲಚೇತನರು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು, ಸಮಾಜದ ಧಾರ್ಮಿಕ, ಭಾಷಾ ಮತ್ತು ಲೈಂಗಿಕ ಅಲ್ಪಸಂಖ್ಯಾತರು, ಜೀತ ಕಾರ್ಮಿಕರು ಯಾರಾದರೂ ಇದ್ದಲ್ಲಿ, ಅಲೆಮಾರಿಗಳು ಮತ್ತು ಬುಡಕಟ್ಟು ಸಮೂಹಗಳು ಹಾಗೂ ವಲಸೆ ಕಾರ್ಮಿಕರು;

(42ಸಿ)"ವಾರ್ಡ್" ಎಂದರೆ, ಗ್ರಾಮ ಪಂಚಾಯತಿಗೆ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಗ್ರಾಮಪಂಚಾಯತಿಯ ಒಳಗೆ ಗಡಿ ಗುರುತು ಮಾಡಲಾಗಿದೆಯೋ ಆ ಸ್ಥಳೀಯ ಚುನಾವಣಾ ಕ್ಷೇತ್ರ;

(42ಡಿ) ವಾರ್ಡ್ ಪ್ರದೇಶಕ್ಕೆ ಸಂಬಂಧಿಸಿದಂತೆ, **"ವಾರ್ಡ್‌ಸಭಾ"** ಎಂದರೆ, ಪ್ರತಿಯೊಂದು ಗ್ರಾಮ ಪಂಚಾಯತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಗಳಲ್ಲಿ ಮತದಾರರಾಗಿ ನೋಂದಾಯಿತರಾದ ಎಲ್ಲಾ ವ್ಯಕ್ತಿಗಳನ್ನು ಒಳಗೊಂಡ ನಿಕಾಯ]][2]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 20-10-2003ರಿಂದ ಸೇರಿಸಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(43) "ಜಿಲ್ಲಾ ಪಂಚಾಯತಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ಜಿಲ್ಲಾ ಪಂಚಾಯತಿ.

## [1][ಅಧ್ಯಾಯ Iಎ
## ಪಂಚಾಯತ್ ನೀತಿ ನಿರ್ದೇಶಕ ತತ್ವಗಳು

**2ಎ. ಪಂಚಾಯತ್ ನೀತಿ ನಿರ್ದೇಶಕ ತತ್ವಗಳು.–** (1) ಪಂಚಾಯತಿಯು ಈ ಮುಂದಿನವುಗಳಿಗೆ ಪ್ರೋತ್ಸಾಹಿಸಲು ಶ್ರಮಿಸತಕ್ಕದ್ದು, ಎಂದರೆ:–

(i) ಎಲ್ಲರಿಗೂ ಶುದ್ಧ ಕುಡಿಯುವ ನೀರು, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮ ಸಮುದಾಯದ ಜೀವನಮಟ್ಟವನ್ನು ಮತ್ತು ಬದುಕಿನ ಗುಣಮಟ್ಟವನ್ನು ಸುಧಾರಿಸುವುದು;

(ii) ಅಗತ್ಯ ಗ್ರಾಮೀಣ ಮೂಲ ಸೌಲಭ್ಯಗಳನ್ನು ಒದಗಿಸುವುದು ಮತ್ತು ಗ್ರಾಮೀಣ ಸಮುದಾಯಗಳು ಮತ್ತು ಸಂಘಟನೆಗಳನ್ನು ತನ್ನ ಸುಧಾರಣೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು;

(iii) ತನ್ನ ನಿವಾಸಿಗಳ ಆರ್ಥಿಕ, ಸಾಮಾಜಿಕ ಮತ್ತು ಪರಿಸರಾತ್ಮಕ ಗುಣಮಟ್ಟವನ್ನು ವೃದ್ಧಿಸುವುದಕ್ಕಾಗಿ ಆಸ್ತಿಗಳ ನಿರ್ವಹಣೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಪಂಚಾಯತಿ ಪ್ರದೇಶದಲ್ಲಿ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯ, ಸಾಮಾಜಿಕ ಸಮ್ಮಿಳನ ಮತ್ತು ಅರ್ಥಪೂರ್ಣ ಸಮುದಾಯಯವನ್ನು ತೊಡಗಿಸಿಕೊಳ್ಳುವುದು;

(iv) ಪಂಚಾಯತ್ ಅಧೀನದಲ್ಲಿರುವ ಸಂಪನ್ಮೂಲಗಳನ್ನು ಬಳಕೆ ಮಾಡಿಕೊಂಡು ಪಂಚಾಯತಿ ಪ್ರದೇಶದ ಅರಣ್ಯ ಮತ್ತು ವನ್ಯಜೀವಿಗಳನ್ನು ಸುಸ್ಥಿರ ಅಭಿವೃದ್ಧಿಗೆ ಸಮರ್ಪಕವಾಗಿ ಮುಂದಿನ ಪೀಳಿಗೆಗಾಗಿ ಅವುಗಳನ್ನು ಸಂರಕ್ಷಿಸುವ ಸಮರ್ಥನೀಯ ವಿಧಾನವನ್ನು ಅನುಸರಿಸುವುದು;

(v) ಸ್ಥಳೀಯ ಸಮುದಾಯದ ಕಲೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ರಕ್ಷಿಸುವುದು ಮತ್ತು ಕಾಪಾಡುವುದು ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನವನ್ನು ನೀಡುವುದು;

(vi) ನವಣೆ, ಸಜ್ಜೆ, ಬಿಳಿ ಜೋಳ, ಸಾಮೆ, ಸಾವೆ, ಕೋರ್ಲೆ ಇತ್ಯಾದಿ ಮತ್ತು ಔಷಧೀಯ ಮೌಲ್ಯವುಳ್ಳ ಗಿಡಮೂಲಿಕೆಗಳಂಥ ದೇಸಿ ವೈವಿಧ್ಯತೆಯುಳ್ಳ ಬೀಜಗಳನ್ನು ಸಂರಕ್ಷಿಸುವುದು, ಅಭಿವೃದ್ಧಿಪಡಿಸುವುದು ಮತ್ತು ಹಂಚಿಕೆ ಮಾಡುವುದು;

(vii) ಕೃಷಿ–ಕೈಗಾರಿಕಾ ಕೇಂದ್ರಗಳು, ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸುವ ಮೂಲಕ ಉದ್ಯೋಗಗಳನ್ನು ಸೃಜಿಸುವುದು ಮತ್ತು ವ್ಯವಹಾರ ಕಾರ್ಯಾಚರಣೆಗಳನ್ನು ಸುಗಮಗೊಳಿಸುವುದಕ್ಕಾಗಿ ದಸ್ತಾವೇಜುಗಳನ್ನು ಸ್ವೀಕರಿಸುವ ಏಕ ಗವಾಕ್ಷಿ ವ್ಯವಸ್ಥೆ ಮಾಡುವುದು;

(viii) ರಾಷ್ಟ್ರೀಯ ಮತ್ತು ರಾಜ್ಯ ಕಾರ್ಯನೀತಿಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸಲು ಸಮರ್ಥಗೊಳಿಸುವುದಕ್ಕಾಗಿ ಬೇರುಮಟ್ಟದಲ್ಲಿ ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಮೂಲಕ ಸಹಕಾರಿ ಮನೋಭಾವ ಮತ್ತು ವಾತಾವರಣವನ್ನು ನಿರ್ಮಿಸುವುದು;

(ix) ಗ್ರಾಮೀಣ ಪ್ರದೇಶಗಳಲ್ಲಿ ಜನರ ಕೌಶಲ್ಯ, ಜ್ಞಾನ ಮತ್ತು ಇತರ ಸಾಮರ್ಥ್ಯಗಳಿಗೆ ಅನುಗುಣವಾಗಿ ಗ್ರಾಮೀಣ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಬಲೀಕರಣಗೊಳಿಸುವುದು;

(x) ಶಾಂತಿಯುತ ಸಮಾಜ ಮತ್ತು ಕೋಮು ಸೌಹಾರ್ದವನ್ನು ಸಂರಕ್ಷಿಸುವ ಹಾಗೂ ಎಲ್ಲಾ ರೀತಿಯ ಹಿಂಸೆಗಳನ್ನು ತಡೆಗಟ್ಟುವ ಸುರಕ್ಷಿತ ಮತ್ತು ಸಹನಶೀಲ ಸಮುದಾಯವನ್ನು ಪೋಷಿಸುವುದು.

(2) ಗ್ರಾಮದ ನಿವಾಸಿಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದಾದರೂ ಒಂದು ನಿರಾಶಾದಾಯಕ ಪ್ರವೃತ್ತಿ ಅಥವಾ ಆಲೋಚನೆ ಹಬ್ಬಿದಾಗ ಅದು ನೆಲೆಗೊಳ್ಳುವುದನ್ನು ತಡೆಯುವುದು ಗ್ರಾಮ ಪಂಚಾಯತಿಯ ನಿರ್ದೇಶನ ತತ್ವಗಳ ಪ್ರಮುಖ ತತ್ವವಾಗಿರುತ್ತದೆ. ಹಣಕಾಸಿನ ಋಣಭಾರ, ಬಡತನ ಅಥವಾ ಇತರ ಕಾರಣಗಳಿಗಾಗಿ ಆತ್ಮಹತ್ಯೆಯಂತಹ ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಮಾನಸಿಕ ಸ್ಥಿತಿಯಿಂದ ಪೀಡಿತರಾದ ರೈತರು ಮತ್ತು ಇತರರು ಸಾಮಾಜಿಕ–

ಆರ್ಥಿಕ ಸ್ಥಿತಿಗತಿಗಳ ಒತ್ತಡಕ್ಕೆ ಸಿಲುಕಿ ನಾಜೂಕಾದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಸಂದರ್ಭಗಳಲ್ಲಿ ಅವರೆಡೆಗೆ ಗ್ರಾಮ ಪಂಚಾಯತಿಯು ವಿಶೇಷ ಗಮನಹರಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿಯ ಸದಸ್ಯರು ಅಂತಹ ವ್ಯರ್ಥ ಸಾಹಸಗಳ ಮನಸ್ಥಿತಿಯಿಂದ ಉಂಟಾಗುವ ಪರಿಣಾಮಗಳ ಬಗ್ಗೆ ನಿವಾಸಿಗಳನ್ನು ಜಾಗೃತಗೊಳಿಸಿ ಅವರಲ್ಲಿ ವಿಶ್ವಾಸ ಕುದುರಿಸುವ ಕ್ರಮ ಕೈಗೊಳ್ಳುವುದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

## [1][ಅಧ್ಯಾಯ II

## ವಾರ್ಡ್ ಸಭೆ ಮತ್ತು ಗ್ರಾಮಸಭೆ

[1][**3. ಗ್ರಾಮ ಸ್ವರಾಜ್ ಘಟಕಗಳು.**–(1) ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾಗಳು ಗ್ರಾಮ ಪಂಚಾಯತಿಯ ಘಟಕಗಳಾಗಿರತಕ್ಕದ್ದು.

(2) ಜಿಲ್ಲೆಯ ಜಿಲ್ಲಾಧಿಕಾರಿಯು ಜನವಸತಿಯ ಪ್ರದೇಶಗಳೆಂದು ನಿರ್ದಿಷ್ಟಪಡಿಸಿ ಅಧಿಸೂಚಿಸುವ ಅಂಥ ಜನವಸತಿಗಳಷ್ಟು ಸಂಖ್ಯೆಯ ಜನವಸತಿ ಸಭಾಗಳು ಇರತಕ್ಕದ್ದು.

(3) ಗ್ರಾಮ ಪಂಚಾಯತಿ ಪ್ರದೇಶದ ಪರಿಮಿತಿಯೊಳಗೆ, ಎಷ್ಟು ವಾರ್ಡ್‌ಗಳು ಇವೆಯೋ ಅಷ್ಟು ವಾರ್ಡ್ ಸಭಾಗಳು ಇರತಕ್ಕದ್ದು; ಮತ್ತು

(4) ಗ್ರಾಮ ಪಂಚಾಯತಿ ಪ್ರದೇಶದೊಳಗೆ ಇರುವ ಸಂಬಂಧಪಟ್ಟ ಗ್ರಾಮದ ಮತದಾರರ ಪಟ್ಟಿಯಲ್ಲಿ ಮತದಾರರೆಂದು ನೋಂದಾಯಿಸಿರುವ ಎಲ್ಲ ವ್ಯಕ್ತಿಗಳನ್ನು ಒಳಗೊಂಡ ಪ್ರತಿಯೊಂದು ಗ್ರಾಮ ಪಂಚಾಯತಿಯ ಒಂದು ಗ್ರಾಮ ಸಭೆ ಇರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**3ಎ. ಜನವಸತಿ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳು.**– (1) ತನ್ನ ಅಧಿಕಾರ ವ್ಯಾಪ್ತಿಯೊಳಗೆ ಜನವಸತಿ ಸಭಾದ ಪ್ರಕಾರ್ಯಗಳು ವಾರ್ಡ್ ಸಭಾ ಮತ್ತು ಗ್ರಾಮ ಸಭಾಗೆ ನೆರವು ನೀಡುವುದು ಆಗಿರತಕ್ಕದ್ದು ಮತ್ತು ಈ ಮುಂದಿನ ಇತರ ಪ್ರಕಾರ್ಯಗಳನ್ನೂ ಒಳಗೊಳ್ಳತಕ್ಕದ್ದು, ಎಂದರೆ:–

(i) ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವಂಥ ಮತ್ತು ಸಾಮಾನ್ಯವಾಗಿ ಎಲ್ಲಾ ಜನರು ಮತ್ತು ಅದರಲ್ಲೂ ಮುಖ್ಯವಾಗಿ ಸಮಾಜದ ಸುರಕ್ಷಿತವಲ್ಲದ ವರ್ಗಗಳ ಜನರು ತಮ್ಮ ತಮ್ಮ ಹಕ್ಕುಗಳನ್ನು ಚಲಾಯಿಸುವುದಕ್ಕೆ ಸುರಕ್ಷಿತ ಮತ್ತು ಹಿತಕರ ಪರಿಸರ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದು;

(ii) ಅಪಾಯಕಾರಕಗಳನ್ನು ಗುರುತಿಸುವುದು ಮತ್ತು ಗ್ರಾಮದ ನಿವಾಸಿಗಳಿಗೆ ಅದರಲ್ಲೂ ಮುಖ್ಯವಾಗಿ ಜನವಸತಿ ಪ್ರದೇಶಗಳ ನಿವಾಸಿಗಳಿಗೆ ಅಲ್ಲಿ ಸ್ವಚ್ಛ ಮತ್ತು ಆರೋಗ್ಯಕರ ಪರಿಸರವನ್ನು ಕಲ್ಪಿಸಿ ಅಲ್ಲಿನ ಎಲ್ಲ ನಿವಾಸಿಗಳ ಸುರಕ್ಷತೆ, ಭದ್ರತೆಗಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳಿಗೆ ಸಲಹೆಯನ್ನು ನೀಡುವುದು;

(iii) ದೂರದೃಷ್ಟಿ ಯೋಜನೆಯನ್ನು ರೂಪಿಸುವುದು ಮತ್ತು ಸಿದ್ಧಪಡಿಸುವುದು ಗ್ರಾಮ ಪಂಚಾಯತ್‌ಗೆ ಸಾಧ್ಯವಾಗುವಂತೆ ಮಾಡುವ ಸಲುವಾಗಿ ಸಾಮಾಜೋ–ಆರ್ಥಿಕ ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕೆ ಜನವಸತಿ ಪ್ರದೇಶದ ಅಭಿವೃದ್ಧಿಗಾಗಿ ಅಲ್ಲಿನ ನಿವಾಸಿಗಳ ಅಗತ್ಯತೆಗಳನ್ನು ಮತ್ತು ಅವಶ್ಯಕತೆಗಳನ್ನು ನಿರ್ಧರಿಸುವುದಕ್ಕೆ, ಕ್ರಮಗಳನ್ನು ಸಮೀಕ್ಷೆ ಮಾಡುವುದಕ್ಕೆ ಅಥವಾ ಗ್ರಾಮೀಣ ಪರಾಮರ್ಶನದಲ್ಲಿ ಭಾಗವಹಿಸುವುದಕ್ಕೆ ಗ್ರಾಮ ಪಂಚಾಯತ್‌ಗೆ ನೆರವಾಗುವುದು;

(iv) ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮತ್ತು ಜನವಸತಿ ಪ್ರದೇಶದಲ್ಲಿರುವ ಪ್ರತಿಯೊಂದು ಸಮೂಹದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಜನವಸತಿ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಬೇಕಾದ ಯೋಜನೆಗಳಿಗೆ ಆದ್ಯತೆಯನ್ನು ನಿಗದಿಪಡಿಸುವುದಕ್ಕೆ ಮತ್ತು ಅವುಗಳನ್ನು ದೂರದೃಷ್ಟಿ ಯೋಜನೆಯಲ್ಲಿ ಮತ್ತು ಗ್ರಾಮ ಪಂಚಾಯತ್‌ನ ವಾರ್ಷಿಕ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸುವುದಕ್ಕಾಗಿ ಅವುಗಳನ್ನು ಗ್ರಾಮ ಸಭೆಯ ಮುಂದೆ ಮಂಡಿಸುವುದು;

(v) ಜನವಸತಿ ಪ್ರದೇಶದಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು, ಸಮುದಾಯ ನೀರು ಕೊಳಾಯಿಗಳಿಗೆ, ಸಾರ್ವಜನಿಕ ಬಾವಿಗಳಿಗೆ, ಸಾರ್ವಜನಿಕ ನೈರ್ಮಲ್ಯ ಘಟಕಗಳಿಗೆ, ನೀರಾವರಿ ಸೌಲಭ್ಯಗಳಿಗೆ ಮತ್ತು ಅಂತಹ ಇತರ ಸಾರ್ವಜನಿಕ ಸೌಲಭ್ಯ ಯೋಜನೆಗಳಿಗೆ ಶಿಫಾರಸ್ಸು ಮಾಡುವುದಕ್ಕೆ ಮತ್ತು ಕೊರತೆಗಳನ್ನು ಗುರುತಿಸುವುದಕ್ಕೆ ಹಾಗೂ ಪರಿಹಾರ ಕ್ರಮಗಳನ್ನು ಸಲಹೆ ಮಾಡುವುದಕ್ಕೆ ಮತ್ತು ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಂಡಿರುವುದನ್ನು ವರದಿ ಮಾಡುವುದಕ್ಕೆ ಹಾಗೂ ಸ್ವಚ್ಛ ಮತ್ತು ಆರೋಗ್ಯಕರ ವಾತಾವರಣವನ್ನು ನಿರ್ವಹಿಸುವುದು;

(vi) ಜನವಸತಿ ಪ್ರದೇಶದಲ್ಲಿ ನೀರು ಪೂರೈಕೆ ವ್ಯವಸ್ಥೆಯಲ್ಲಿ ಮತ್ತು ಬೀದಿ ದೀಪ ವ್ಯವಸ್ಥೆಯಲ್ಲಿ ಇರುವ ಕುಂದು ಕೊರತೆಗಳನ್ನು ಗುರುತಿಸುವುದು ಮತ್ತು ಪರಿಹಾರ ಕ್ರಮಗಳನ್ನು ಸಲಹೆ ಮಾಡುವುದು;

(vii) ಬಡತನ ನಿವಾರಣೆ ಮತ್ತು ಇತರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳ ಮೇರೆಗೆ ಜನವಸತಿ ಪ್ರದೇಶದಲ್ಲಿ ನಿಗದಿಪಡಿಸುವ ಮಾನದಂಡಗಳ ಆಧಾರದ ಮೇಲೆ ಅರ್ಹ ಫಲಾನುಭವಿಗಳನ್ನು ಗುರುತಿಸುವುದು ಮತ್ತು ಆಯ್ಕೆ ಮಾಡುವುದು ಹಾಗೂ ಆದ್ಯತೆಯ ಆಧಾರದ ಮೇಲೆ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು;

(viii) ಕೈಗೊಂಡ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಪ್ರಾಜೆಕ್ಟ್‌ಗಳನ್ನು ರೂಪಿಸಲು ಮೇಲ್ವಿಚಾರಣೆ ಮಾಡಲು ಮತ್ತು ಅನುಷ್ಠಾನಗೊಳಿಸಲು ಗ್ರಾಮ ಸಭೆಗೆ ಮತ್ತು ಗ್ರಾಮ ಪಂಚಾಯತ್‌ಗೆ ನೆರವಾಗುವುದು;

(ix) ಜಾತಿ, ಧರ್ಮ ಮತ್ತು ಲಿಂಗ ಇತ್ಯಾದಿ ಆಧಾರದ ಮೇಲೆ ತಾರತಮ್ಯ ಆಗುವುದನ್ನು ತಡೆಯಲು ಕ್ರಮ ಕೈಗೊಳ್ಳುವುದು;

(x) ಜನವಸತಿ ಪ್ರದೇಶದಲ್ಲಿ ಇರುವ ವಿವಿಧ ಜನ ಸಮೂಹಗಳಲ್ಲಿ ಸಾಮರಸ್ಯ ಮತ್ತು ಏಕತೆಯನ್ನು ತರುವ ಸಲುವಾಗಿ ಅಸ್ಪೃಶ್ಯತೆಯನ್ನು ಮತ್ತು ಯಾವುದೇ ಬಗೆಯ ಸಾಮಾಜಿಕ ಬಹಿಷ್ಕಾರವನ್ನು ನಿರ್ಮೂಲನ ಮಾಡುವ ಮತ್ತು ಸಾಮಾಜಿಕವಾಗಿ ಹೊರಗಿಡುವ ಇತರ ರೀತಿ ರಿವಾಜುಗಳನ್ನು ನಿರ್ಮೂಲನ ಮಾಡಲು ಗ್ರಾಮ ಪಂಚಾಯತ್ ಮಾಡುವ ಪ್ರಯತ್ನಗಳಿಗೆ ನೆರವಾಗುವುದು;

(xi) ಆ ಪ್ರದೇಶದ ಸ್ಥಳೀಯ ಆಟಗಳಿಗೆ, ಕ್ರೀಡಾಸ್ಪರ್ಧೆಗಳಿಗೆ ಸಾಹಿತ್ಯಕ್ಕೆ ಕಲೆಗೆ ಮತ್ತು ಸಂಸ್ಕೃತಿಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ಅವುಗಳನ್ನು ಪೋಷಿಸುವುದಕ್ಕಾಗಿ ಮತ್ತು ನಿವಾಸಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವುದಕ್ಕಾಗಿ ಅವಕಾಶಗಳನ್ನು ಕಲ್ಪಿಸಿಕೊಡಲು ಸಾಂಸ್ಕೃತಿಕ ಉತ್ಸವಗಳನ್ನು, ಸಾಹಿತ್ಯಿಕ ಚಟುವಟಿಕೆಗಳನ್ನು ಮತ್ತು ಕ್ರೀಡಾ ಉತ್ಸವಗಳನ್ನು ನಡೆಸುವುದು;

(xii) ಸ್ವಚ್ಛತೆ, ಪರಿಸರ ಸಂರಕ್ಷಣೆ, ಸಾರ್ವಜನಿಕ ಉಪದ್ರವ, ಮಾಲಿನ್ಯದಂತಹ ಸಾರ್ವಜನಿಕ ಕಳಕಳಿ ವಿಷಯಗಳ ಬಗ್ಗೆ ಅರಿವು ಮೂಡಿಸುವುದು, ಸಾರ್ವಜನಿಕ ಶಾಂತಿ ಇರುವುದನ್ನು ಎಲ್ಲಾ ಜನರು ಸುರಕ್ಷತೆಯಿಂದಿರುವುದನ್ನು ಮತ್ತು ಅವರಿಗೆ ಭದ್ರತೆ ಒದಗಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದು;

(xiii) ಜಲ ಸಂರಕ್ಷಣೆ, ನೈಸರ್ಗಿಕ ಸಸ್ಯ ಸಂಕುಲದ ಸಂರಕ್ಷಣೆ ಮತ್ತು ಜೈವಿಕ ವಿಘಟಿಸಬಹುದಾದ ವಸ್ತುಗಳ ಮರುಬಳಕೆ ವಿಷಯಗಳನ್ನು ಪರಾಮರ್ಶಿಸುವುದು;

(xiv) ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವುದು, ಸಾಕ್ಷರತೆ ಮತ್ತು ಶಿಕ್ಷಣ ಮಟ್ಟಗಳನ್ನು ಹೆಚ್ಚಿಸುವುದಕ್ಕೆ ಮತ್ತು ಕೌಟುಂಬಿಕ ಸಮಾಲೋಚನೆಗೆ, ಸದ್ಗುಣ ಬೆಳೆಸಿಕೊಳ್ಳುವುದಕ್ಕೆ ಕುಡಿತದ ಚಟಕ್ಕೆ ಒಳಗಾಗದಂತೆ, ಮಾದಕ ದ್ರವ್ಯಗಳ ಸೇವನೆಯನ್ನು ತ್ಯಜಿಸುವಂತೆ ಪ್ರೇರೇಪಿಸುವುದಕ್ಕೆ ಮತ್ತು ಯುವ ಜನರು ಮತ್ತು ಹಿರಿಯ ನಾಗರಿಕರು ಧೂಮ್ರಪಾನವನ್ನು ತ್ಯಜಿಸುವುದಕ್ಕೆ ಪ್ರೇರೇಪಿಸುವ ಮೂಲಕ ಚಾರಿತ್ರ್ಯ ನಿರ್ಮಾಣ ಕೈಗೊಳ್ಳುವುದು.

(xv) ಮಹಿಳಾ, ಯುವ ಮತ್ತು ಹಿರಿಯ ನಾಗರೀಕರ ಸ್ವಯಂ ಸೇವಾ ಸಂಘ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಗ್ರಾಮಕೈಗಾರಿಕೆಗಳಿಗೆ ಸಣ್ಣ ಪ್ರಮಾಣದ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ವಾಣಿಜ್ಯ ಉದ್ಯಮಗಳಿಗೆ ಉತ್ತೇಜನ ನೀಡುವುದು ಮತ್ತು ಉದ್ಯೋಗಕ್ಕಾಗಿ ತರಬೇತಿ ಮತ್ತು ಕೌಶಲ್ಯ ಬೆಳವಣಿಗೆಗೆ ಅವಕಾಶಗಳನ್ನು ಒದಗಿಸುವುದು ಮತ್ತು ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಲು ಗ್ರಾಮ ಸಭೆಗಳಿಗೆ ಪ್ರಸ್ತಾವಗಳನ್ನು ಕಳುಹಿಸುವುದು;

(xvi) ಜನವಸತಿ ಪ್ರದೇಶದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಮೇಲ್ವಿಚಾರಣೆ ಮಾಡುವುದು ಹಾಗೂ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ, ಅದರಲ್ಲೂ ಮುಖ್ಯವಾಗಿ ಸಾಂಕ್ರಾಮಿಕ ರೋಗಗಳ ನಿವಾರಣೆಗಾಗಿ ಮತ್ತು ಕುಟುಂಬ ಕಲ್ಯಾಣ ಕ್ರಮಗಳ ಬಗ್ಗೆ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಗ್ರಾಮ ಪಂಚಾಯತಿಗೆ ನೆರವಾಗುವುದಕ್ಕೆ ಮತ್ತು ಸಾಂಕ್ರಾಮಿಕ ರೋಗಗಳು ಹರಡಿರುವ ಬಗ್ಗೆ ಮತ್ತು ಪ್ರಕೃತಿ ವಿಕೋಪಗಳು ಸಂಭವಿಸಿರುವುದರ ಬಗ್ಗೆ ಗ್ರಾಮ ಪಂಚಾಯತ್‌ಗೆ, ಚುನಾಯಿತ ಸದಸ್ಯರಿಗೆ ಮತ್ತು ಸಂಬಂಧಪಟ್ಟ ಪಂಚಾಯತ್‌ನ ಕಾರ್ಯಕರ್ತರಿಗೆ ವರದಿ ಮಾಡುವುದು;

(xvii) ಜನವಸತಿ ಪ್ರದೇಶದಲ್ಲಿ ಮತ್ತು ಗ್ರಾಮಪಂಚಾಯತ್ ಪ್ರದೇಶದಲ್ಲಿರುವ ಗೋಮಾಳ, ಹುಲ್ಲುಗಾವಲು, ಕೆರೆಗಳು, ಕೆರೆಅಂಗಳಗಳು, ಅಂತರ್ಜಲ ಸಂಪನ್ಮೂಲಗಳು, ರಸ್ತೆಗಳು, ಸೇತುವೆಗಳು, ಗಣಿಗಳು ಇವೇ ಮುಂತಾದ ಸಾರ್ವಜನಿಕ ಆಸ್ತಿ–ಪಾಸ್ತಿಗಳನ್ನು ಸಂರಕ್ಷಿಸುವ ಮತ್ತು ನಿರ್ವಹಿಸುವ ದೃಷ್ಟಿಯಿಂದ ಅವುಗಳ ಬಗ್ಗೆ ಜಾಗರೂಕತೆ ವಹಿಸುವುದು;

(xviii) ಜಾನಪದ ಕಲೆಗಳನ್ನು, ಕರ ಕುಶಲಕಲೆಗಳನ್ನು, ಗೃಹ ಮತ್ತು ಗುಡಿ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು ಮತ್ತು ಅಭಿವೃದ್ಧಿಪಡಿಸುವುದು;

(xix) ಅಭಿವೃದ್ಧಿ ಕಾಮಗಾರಿಗಳಿಗೆ ನಗದು ಅಥವಾ ವಸ್ತುರೂಪದ ಕೊಡುಗೆಗಳನ್ನು ಮತ್ತು ಶ್ರಮದಾನದ ಕಾರ್ಮಿಕರನ್ನು ಕ್ರೋಢೀಕರಿಸಿ ಒದಗಿಸುವ ಮೂಲಕ ಅಂತಹ ಅಭಿವೃದ್ಧಿ ಕಾಮಗಾರಿಗಳನ್ನು ಸ್ವಯಂ ಸೇವಕರ ಮುಖಾಂತರ ಶ್ರಮದಾನದ ಮೂಲಕ ಪೂರ್ಣಗೊಳಿಸುವುದನ್ನು ಮೇಲ್ವಿಚಾರಣೆ ನಡೆಸುವುದು;

(xx) ಜನವಸತಿ ಪ್ರದೇಶದಲ್ಲಿ ನೈರ್ಮಲ್ಯ ವ್ಯವಸ್ಥೆಗಳನ್ನು ಒದಗಿಸುವುದಕ್ಕಾಗಿ ಸ್ವಚ್ಛ ಮತ್ತು ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿ ಪರಿವರ್ತಿಸುವುದಕ್ಕೆ ಗ್ರಾಮ ಪಂಚಾಯತ್ ಕಾರ್ಯಕರ್ತರಿಗೆ ನೆರವಾಗುವುದಕ್ಕೆ ಹಾಗೂ ತ್ಯಾಜ್ಯವನ್ನು ತೆಗೆದುಹಾಕುವುದಕ್ಕಾಗಿ ಸ್ವಯಂ ಸೇವೆಯನ್ನು ಒದಗಿಸುವುದು; ಮತ್ತು

(xxi) ಗ್ರಾಮಪಂಚಾಯತಿಗೆ ಸಂದಾಯವಾಗಬೇಕಾದ ತೆರಿಗೆಗಳನ್ನು ಮತ್ತು ಮರುಪಾವತಿ ಮಾಡಬೇಕಾದ ಸಾಲಗಳನ್ನು ಪಾವತಿಸುವಂತೆ ಜನವಸತಿಯ ನಿವಾಸಿಗಳನ್ನು ಪ್ರೇರೇಪಿಸುವುದು.

(2) ಪ್ರತಿಯೊಂದು ಜನವಸತಿ ಸಭಾವು,–

(i) ಗ್ರಾಮಪಂಚಾಯತಿಯ ಕಾರ್ಯಕರ್ತರುಗಳಿಂದ ಅವರುಗಳು ನೀಡತಕ್ಕ ಸೇವೆಗಳು, ಅವರುಗಳ ಮೂಲಕ ಅನುಷ್ಠಾನಗೊಳ್ಳತಕ್ಕ ಕಾರ್ಯಕ್ರಮಗಳು ಮತ್ತು ಯೋಜನೆಗಳು ಹಾಗೂ ಜನವಸತಿ ಸಭಾದ ಯಶಸ್ವಿ ಸಭೆಯ ತರುವಾಯ ಆರು ತಿಂಗಳ ಅವಧಿಯಲ್ಲಿ ಕೈಗೊಳ್ಳಲು ಉದ್ದೇಶಿಸಿದ ಸಾರ್ವಜನಿಕ ಕೆಲಸಗಳ ಮಾಹಿತಿಯನ್ನು ಪಡೆಯುವ;

(ii) ಜನವಸತಿಗೆ ಸಂಬಂಧಿಸಿದಂತೆ ಗ್ರಾಮಸಭಾದ ನಿರ್ಣಯಗಳ ಮೇಲೆ ಕೈಗೊಂಡ ಅನುಸರಣಾ ಕ್ರಮಗಳ ಮೇರೆಗೆ ಗ್ರಾಮ ಪಂಚಾಯತ್ ಮೂಲಕ ಮಾಹಿತಿಯನ್ನು ಪಡೆಯುವ;

(iii) ಜನವಸತಿಯ ನಿವಾಸಿಗಳ ಸಾರ್ವಜನಿಕ ಹಿತ ಅಥವಾ ಆರೋಗ್ಯ ಮತ್ತು ಸುರಕ್ಷೆಗೆ ಹಾನಿಯಾಗುವ ಯಾವುದೇ ಇತರ ಚಟುವಟಿಕೆಯನ್ನು ನಿಯಂತ್ರಿಸುವುದಕ್ಕೆ ಗ್ರಾಮಪಂಚಾಯತಿಗೆ ನೆರವು ನೀಡುವ;

–ಅಧಿಕಾರವನ್ನು ಹೊಂದಿರತಕ್ಕದ್ದು.

**3ಬಿ. ಜನವಸತಿ ಸಭಾದ ಸಭೆಗಳು.**– (1) ಜನವಸತಿ ಸಭಾವು ವಾರ್ಡ್‌ನ ಚುನಾಯಿತ ಸದಸ್ಯರು ನಿರ್ಧರಿಸಬಹುದಾದಂಥ ಸ್ಥಳದಲ್ಲಿ ತನ್ನ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ಕೊನೆಯ ಪಕ್ಷ ಆರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಇಂಥ ಸಭೆಯು, ಗ್ರಾಮ ಸಭಾದ ಸಭೆಯು ಸಭೆ ಸೇರುವ ತಿಂಗಳಿನ ಕನಿಷ್ಠ ಒಂದು ತಿಂಗಳು ಮೊದಲು ಸಭೆ ಸೇರತಕ್ಕದ್ದು.

(2) ಆಯಾ ಜನವಸತಿ ಪ್ರದೇಶವನ್ನು ಪ್ರತಿನಿಧಿಸುವ ವಾರ್ಡಿನ ಚುನಾಯಿತನಾದ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಆತನ/ಆಕೆಯ ಅನುಪಸ್ಥಿತಿಯಲ್ಲಿ ಸದರಿ ಜನವಸತಿಸಭಾದಿಂದ ಚುನಾಯಿತನಾದ ಗ್ರಾಮ ಪಂಚಾಯತಿಯ ಯಾವೊಬ್ಬ ಇತರೆ ಮತದಾರನು ಅಧ್ಯಕ್ಷತೆ ವಹಿಸತಕ್ಕದ್ದು. ವಾರ್ಡನ್ನು ಪ್ರತಿನಿಧಿಸುವ ಚುನಾಯಿತ ಸದಸ್ಯರ ಸಂಖ್ಯೆಯು ಒಂದಕ್ಕಿಂತ ಹೆಚ್ಚಾಗಿರುವ ಸಂದರ್ಭದಲ್ಲಿ, ಗ್ರಾಮ ಪಂಚಾಯತಿಯಲ್ಲಿ ತಮ್ಮ ಪೈಕಿಯೇ ಚುನಾಯಿತನಾದ ಸದಸ್ಯನೊಬ್ಬನು ಸಭೆಯನ್ನು ಕರೆದು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ವಾರ್ಡ್‌ಗೆ ಚುನಾಯಿತನಾದ, ಜನವಸತಿ ಪ್ರದೇಶದಲ್ಲಿರುವ ಸದಸ್ಯನು ಜನವಸತಿ ಪ್ರದೇಶ ಸಭಾದ ಸಭೆಯನ್ನು ಯಾವಾಗ ಕರೆಯಬೇಕಾಗಿತ್ತೋ ಅಥವಾ ಕರೆಯುವುದು ಅವಶ್ಯಕವಾಗಿತ್ತೋ ಆಗ ಸಭೆಯನ್ನು ಕರೆಯಲು ಮತ್ತು ಮತ್ತು ಸಭೆಯ ಅಧ್ಯಕ್ಷತೆಯನ್ನು ವಹಿಸಲು ತಪ್ಪಿದರೆ, ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಥವಾ ಸಂದರ್ಭಾನುಸಾರವಾಗಿ ಕಾರ್ಯದರ್ಶಿಯವರು ಅಂಥ ಸಭೆಯನ್ನು ಕರೆಯತಕ್ಕದ್ದು ಮತ್ತು ಜನವಸತಿ ಸಭಾದ ಸಭೆಯಲ್ಲಿ ಉಪಸ್ಥಿತರಿರುವ ಸದಸ್ಯರು ಗ್ರಾಮ ಪಂಚಾಯತ್‌ನ ಯಾವೊಬ್ಬ ಇತರ ಮತದಾರನನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡಬಹುದು.

(4) ಒಟ್ಟು ಮತದಾರರ ಪೈಕಿ ಕನಿಷ್ಠ ಐದನೇ ಒಂದರಷ್ಟು ಸದಸ್ಯರು ಅಥವಾ ಇಪ್ಪತ್ತು ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರ ಸಂಖ್ಯೆಯು ಜನವಸತಿ ಪ್ರದೇಶ ಸಭಾದ ಸಭೆಗೆ ಕೋರಂ ಆಗಿರತಕ್ಕದ್ದು. ಅವರ ಪೈಕಿ ಶೇಕಡಾ ಮೂವತ್ತಕ್ಕೆ ಕಡಿಮೆಯಿಲ್ಲದಷ್ಟು ಮಹಿಳೆಯರು ಇರತಕ್ಕದ್ದು ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವ್ಯಕ್ತಿಗಳು ಅವರವರ ಜನಸಂಖ್ಯೆಯ ದಾಮಾಷಾ ಪ್ರಮಾಣಕ್ಕೆ ಅನುಸಾರವಾಗಿ ಜನವಸತಿ ಪ್ರದೇಶದ ಸಭಾದ ಸಭೆಯಲ್ಲಿ ಇರತಕ್ಕದ್ದು:

ಪರಂತು, ಮುಂದೂಡಿದ ಸಭೆಗೆ ಯಾವುದೇ ಕೋರಂನ ಅಗತ್ಯ ಇರತಕ್ಕದ್ದಲ್ಲ.

(5) ನಡೆದ ಸಭೆಯಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಎಲ್ಲಾ ನಿರ್ಣಯಗಳನ್ನು ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಬಹುಮತದಿಂದ ಅಂಗೀಕರಿಸತಕ್ಕದ್ದು :

ಪರಂತು, ಆಸಕ್ತ ಗುಂಪು ಒತ್ತು ನೀಡಿದ ಅಗತ್ಯತೆಗಳನ್ನು ಜನವಸತಿ ಸಭಾದ ಸಭೆಯಲ್ಲಿ ಚರ್ಚಿಸತಕ್ಕದ್ದು ಮತ್ತು ಅದನ್ನು ತನ್ನದೆಂಬಂತೆಯೆ ದಾಖಲಿಸತಕ್ಕದ್ದು ಹಾಗೂ ಗ್ರಾಮಸಭೆಯ ಸಭೆಯಲ್ಲಿ ಮಂಡಿಸಲು ಗ್ರಾಮ ಸಭೆಗೆ ಅದನ್ನು ಕಳುಹಿಸತಕ್ಕದ್ದು.

(6) ಸಭೆಗಳನ್ನು ಕರೆಯುವುದಕ್ಕೆ ಮತ್ತು ನಡೆಸುವುದಕ್ಕೆ ಅಗತ್ಯವಾದ ಕಾರ್ಯವಿಧಾನವು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(7) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಜನವಸತಿ ಪ್ರದೇಶದ ವಿಶೇಷ ಸಭೆಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಥವಾ ಸಂದರ್ಭಾನುಸಾರವಾಗಿ ಕಾರ್ಯದರ್ಶಿಯು, ಜನವಸತಿ ಪ್ರದೇಶದ ಮತದಾರರ ಕೊನೆಯ ಪಕ್ಷ ಶೇಕಡಾ 10 ರಷ್ಟು ಕಡಿಮೆಯಲ್ಲದ ಮತದಾರರು ಸಭೆಯಲ್ಲಿ ಚರ್ಚಿಸಬೇಕಾದ ವಿಷಯವನ್ನು ನಿರ್ದಿಷ್ಟಪಡಿಸಿ, ಲಿಖಿತ ಮನವಿಯನ್ನು ಸಲ್ಲಿಸಿದಾಗ ಕರೆಯತಕ್ಕದ್ದು:

ಪರಂತು, ಮೂರು ತಿಂಗಳ ಅವಧಿಯೊಳಗೆ ಎರಡು ಸಲ ವಿಶೇಷ ಸಭೆಗಳನ್ನು ಕರೆಯತಕ್ಕದ್ದಲ್ಲ.

(8) (1)ನೇ ಅಥವಾ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಪ್ರಕೃತಿ ವಿಕೋಪ ಉಂಟಾದಾಗ ಅಥವಾ ಸಾರ್ವಜನಿಕ ಮಹತ್ವದ ತುರ್ತು ವಿಷಯದ ಸಂದರ್ಭದಲ್ಲಿ ಜನವಸತಿ ಪ್ರದೇಶದ ತುರ್ತು ಸಭೆಯನ್ನು ಸಂಬಂಧಪಟ್ಟ ಜನವಸತಿ ಪ್ರದೇಶದ ಚುನಾಯಿತ ಸದಸ್ಯರು ಕರೆಯಬಹುದು ಮತ್ತು ಸದರಿ ಜನವಸತಿ ಪ್ರದೇಶದ ಚುನಾಯಿತ ಸದಸ್ಯರು ಮತ್ತು ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅಥವಾ ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗೆ ಚುನಾಯಿತರಾಗಿರುವ ಯಾವೊಬ್ಬ ಸದಸ್ಯರು ಅಂಥ ತುರ್ತು ಸಭೆಗೆ ಹಾಜರಾಗತಕ್ಕದ್ದು. ಅಧ್ಯಕ್ಷರು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(9) ಆಸಕ್ತ ಗುಂಪು ಅಗತ್ಯ ಉಂಟಾದಾಗಲೆಲ್ಲ ಸಭೆಗಳನ್ನು ನಡೆಸಲು ಮುಂದಾದರೆ ಮತ್ತು ಗ್ರಾಮ ಪಂಚಾಯತ್‌ನ ನಿಯತ ಸಭೆಗಳ ಮುಂದೆ ಮಂಡಿಸುವುದಕ್ಕಾಗಿ ಸಲಹೆಗಳ ಸಹಿತ ತಮ್ಮ ತಮ್ಮ ಗುಂಪುಗಳ ಅಭಿವೃದ್ಧಿ ಅಗತ್ಯಗಳಿಗೆ ಒತ್ತು ನೀಡಿ ಒಟ್ಟಾಗಿ ಮುಂದೆ ಬಂದಾಗ ಸಭೆ ನಡೆಸಲು (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿರುವುದು ಯಾವುದೂ, ಅಡ್ಡಿ ಪಡಿಸುತ್ತದೆಂದು ಅರ್ಥೈಸತಕ್ಕದ್ದಲ್ಲ.

**3ಸಿ. ವಾರ್ಡ್ ಸಭಾ.**– ವಾರ್ಡ್ ಸಭೆಯು ತನ್ನ ಸಂಬಂಧಪಟ್ಟ ಅಧಿಕಾರವ್ಯಾಪ್ತಿಯೊಳಗೆ ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು:–

(i) ವಾರ್ಡ್ ಸಭಾ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಯೋಜನೆಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು ಮತ್ತು ಆದ್ಯತೆಯನ್ನು ನಿರ್ಧರಿಸುವುದು ಮತ್ತು ಅದನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸುವುದಕ್ಕಾಗಿ ಅದನ್ನು ಗ್ರಾಮ ಸಭೆಗೆ ಕಳುಹಿಸಿಕೊಡುವುದು;

(ii) ನಿಗದಿಪಡಿಸುವ ಮಾನದಂಡಗಳ ಆಧಾರದ ಮೇಲೆ ಫಲಾನುಭವಿ ಆಧಾರಿತ ಯೋಜನೆಗಳಿಗಾಗಿ ವಾರ್ಡ್ ಸಭೆಯ ಪ್ರದೇಶದಿಂದ ಅತ್ಯಂತ ಅರ್ಹತೆಯುಳ್ಳ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ಆದ್ಯತೆಗಳ ಅನುಸಾರ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಅದನ್ನು ಗ್ರಾಮಪಂಚಾಯತ್ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸುವುದಕ್ಕಾಗಿ ಅದನ್ನು ಕಳುಹಿಸಿಕೊಡುವುದು;

(iii) ಸರ್ಕಾರದಿಂದ ಪಿಂಚಣಿ ಮತ್ತು ಸಬ್ಸಿಡಿಗಳಂಥ ವಿವಿಧ ರೀತಿಯ ಕಲ್ಯಾಣ ಕಾರ್ಯಕ್ರಮಗಳ ನೆರವುಗಳನ್ನು ಪಡೆಯುವುದಕ್ಕಾಗಿ ವ್ಯಕ್ತಿಗಳ ಅರ್ಹತೆಯನ್ನು ಪರಿಶೀಲಿಸುವುದು;

(iv) ವಾರ್ಡ್ ಸಭಾದ ಸಭೆಯ ತರುವಾಯ ಮುಂದಿನ ಆರು ತಿಂಗಳುಗಳಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ಉದ್ದೇಶಿಸಿರುವ ಸೇವೆಗಳಿಗೆ ಮತ್ತು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳುವುದು;

(v) ವಾರ್ಡ್ ಸಭಾ ಪ್ರದೇಶಕ್ಕೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತ್‌ವು ತೆಗೆದುಕೊಂಡ ಪ್ರತಿಯೊಂದು ತೀರ್ಮಾನಕ್ಕೆ ಇರುವ ಸಕಾರಣಗಳ ಬಗ್ಗೆ ಗ್ರಾಮ ಪಂಚಾಯತಿಯಿಂದ ಮಾಹಿತಿಯನ್ನು ಪಡೆದುಕೊಳ್ಳುವುದು;

(vi) ವಾರ್ಡ್ ಸಭಾ ತೀರ್ಮಾನಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಗ್ರಾಮ ಪಂಚಾಯತ್‌ನಿಂದ ಮಾಹಿತಿ ಪಡೆದುಕೊಳ್ಳುವುದು;

(vii) ಕೆಲಸ ಮಾಡಲು ತಾವಾಗಿಯೇ ಬರುವಂಥ ಕೆಲಸಗಾರರನ್ನು ಒದಗಿಸುವುದು ಮತ್ತು ಅಭಿವೃದ್ಧಿ ಕಾಮಗಾರಿಗಳಿಗಾಗಿ ನಗದು ರೂಪದಲ್ಲಿ ಹಾಗೂ ವಸ್ತು ರೂಪದಲ್ಲಿ ಕೊಡುಗೆಗಳನ್ನು ಸಂಗ್ರಹಿಸುವುದು ಮತ್ತು ಸ್ವಯಂಸೇವಾ ತಂಡಗಳ ಮೂಲಕ ಅಂಥ ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆನಡೆಸುವುದು;

(viii) ವಾರ್ಡ್ ಸಭಾ ಸದಸ್ಯರು ಗ್ರಾಮ ಪಂಚಾಯತಿಗೆ ತೆರಿಗೆಗಳನ್ನು ಮತ್ತು ಮರುಪಾವತಿ ಮಾಡಬೇಕಾದ ಸಾಲಗಳನ್ನು ಸಂದಾಯ ಮಾಡಿರುವುದನ್ನು ಸುನಿಶ್ಚಿತಪಡಿಸಿ ಕೊಳ್ಳುವುದು;

(ix) ವಾರ್ಡ್ ಸಭೆಯ ಪ್ರದೇಶದಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು, ಸಮುದಾಯ ನೀರು ಕೊಳಾಯಿಗಳಿಗೆ, ಸಾರ್ವಜನಿಕ ಬಾವಿಗಳಿಗೆ, ಸಾರ್ವಜನಿಕ ನೈರ್ಮಲ್ಯ ಘಟಕಗಳಿಗೆ, ನೀರಾವರಿ ಸೌಲಭ್ಯಗಳಿಗೆ ಮತ್ತು ಅಂತಹ ಇತರ ಸಾರ್ವಜನಿಕ ಸೌಲಭ್ಯದ ಯೋಜನೆಗಳಿಗೆ ಆದ್ಯತೆಯನ್ನು ನೀಡುವುದು;

(x) ವಾರ್ಡ್ ಸಭಾ ಪ್ರದೇಶದಲ್ಲಿ ನೀರು ಸರಬರಾಜು ಮತ್ತು ಬೀದಿ ದೀಪದ ವ್ಯವಸ್ಥೆಯಲ್ಲಿ ಇರುವ ಕುಂದುಕೊರತೆಗಳನ್ನು ಗುರುತಿಸುವುದು ಮತ್ತು ಪರಿಹಾರ ಕ್ರಮಗಳನ್ನು ಸೂಚಿಸುವುದು;

(xi) ಸ್ವಚ್ಛತೆ, ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿವಾರಣೆಗಳಂಥ ಸಾರ್ವಜನಿಕ ಕಳಕಳಿಯ ವಿಷಯಗಳಿಗೆ ಸಂಬಂಧಿಸಿದಂತೆ ಅರಿವನ್ನು ಉಂಟುಮಾಡುವುದು;

(xii) ವಾರ್ಡ್ ಸಭಾ ಪ್ರದೇಶದಲ್ಲಿ ನೈರ್ಮಲ್ಯ ವ್ಯವಸ್ಥೆಗಳನ್ನು ಒದಗಿಸುವುದಕ್ಕಾಗಿ ಸ್ವಚ್ಛ ಮತ್ತು ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿ ಪರಿವರ್ತಿಸುವುದಕ್ಕೆ ಗ್ರಾಮ ಪಂಚಾಯತಿಯ ನೌಕರರಿಗೆ ನೆರವಾಗುವುದು ಹಾಗೂ ಕಸವನ್ನು ತೆಗೆದು ಹಾಕುವುದಕ್ಕಾಗಿ ಸ್ವಯಂ ಸೇವೆ ಸಲ್ಲಿಸುವುದು;

(xiii) ವಾರ್ಡ್ ಸಭಾ ಪ್ರದೇಶದ ಒಳಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವುದು;

(xiv) ವಾರ್ಡ್ ಸಭಾ ಪ್ರದೇಶದಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಚಟುವಟಿಕೆಗಳಲ್ಲಿ ಅದರಲ್ಲೂ ಮುಖ್ಯವಾಗಿ ರೋಗ ನಿವಾರಣೆ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗೆ ನೆರವಾಗುವುದು ಮತ್ತು ಸಾಂಕ್ರಾಮಿಕ ರೋಗಗಳು ಹರಡಿರುವ ಮತ್ತು ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಕೂಡಲೇ ವರದಿ ಮಾಡುವುದು;

(xv) ವಾರ್ಡ್ ಸಭಾ ಪ್ರದೇಶದಲ್ಲಿರುವ ಜನರ ವಿವಿಧ ಗುಂಪುಗಳು ಪರಸ್ಪರ ಸಾಮರಸ್ಯದಿಂದ ಮತ್ತು ಐಕ್ಯತೆಯಿಂದ ಇರುವುದಕ್ಕೆ ಉತ್ತೇಜನ ನೀಡುವುದಕ್ಕಾಗಿ ಮತ್ತು ಸ್ಥಳೀಯ ಜನರ ಪ್ರತಿಭೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಸಾಂಸ್ಕೃತಿಕ ಉತ್ಸವಗಳನ್ನು ಮತ್ತು ಕ್ರೀಡಾಕೂಟಗಳನ್ನು ಏರ್ಪಾಡು ಮಾಡುವುದು;

(xvi) ಗ್ರಾಮ ಪಂಚಾಯತಿಯ ಅಧಿಕಾರಿ ವರ್ಗದವರು (functionaries) ಯಾವ ಯಾವ ಸೇವೆಗಳನ್ನು ಸಲ್ಲಿಸಬೇಕಾಗುತ್ತದೆ, ಅವರು ಯಾವ ಯಾವ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ ಮತ್ತು ವಾರ್ಡ್ ಸಭಾದ ಸಭೆಯು ನಡೆದ ನಂತರದ ತರುವಾಯ ಬರುವ ಆರು ತಿಂಗಳ ಅವಧಿಯಲ್ಲಿ ಅವರು ಯಾವ ಯಾವ ಸಾರ್ವಜನಿಕ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದಾರೋ ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಳ್ಳುವುದು;

(xvii) ಆಯಾ ವಾರ್ಡ್‌ಗೆ ಸಂಬಂಧಿಸಿದಂತೆ ಗ್ರಾಮಸಭಾ ಕೈಗೊಂಡ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಗ್ರಾಮಪಂಚಾಯತ್‌ನಿಂದ ಮಾಹಿತಿಯನ್ನು ಪಡೆಯುವುದು;

(xviii) ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಆರೋಗ್ಯಕ್ಕೆ ಮತ್ತು ವಾರ್ಡ್ ಸಭೆಯ ನಿವಾಸಿಗಳ ಸುರಕ್ಷತೆಗೆ ಬಾಧಕವಾಗುವ ಯಾವುದೇ ಇತರ ಚಟುವಟಿಕೆಗಳನ್ನು ತಡೆಯುವುದಕ್ಕೆ ಗ್ರಾಮಪಂಚಾಯತಿಗೆ ನೆರವಾಗುವುದು; ಮತ್ತು

(xix) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

**3ಡಿ. ವಾರ್ಡ್ ಸಭಾದ ಸಭೆಗಳು.–** (1) ವಾರ್ಡ್ ಸಭಾ, ತನ್ನ ಕಾರ್ಯಕಲಾಪಗಳ ನಿರ್ವಹಣೆಗಾಗಿ ಆರು ತಿಂಗಳಲ್ಲಿ ಒಂದು ಬಾರಿ ಸಭೆಯನ್ನು ನಡೆಸತಕ್ಕದ್ದು, ಆ ಯಾವುದೇ ಸಭೆಯು ಗ್ರಾಮಸಭಾದ ಸಭೆ ನಡೆಯುವುದಕ್ಕೆ ಕನಿಷ್ಠ ಪಕ್ಷ ಒಂದು ತಿಂಗಳ ಮೊದಲು ನಡೆಯತಕ್ಕದ್ದು ಮತ್ತು ಸಭೆಯ ನಡವಳಿಕೆಯ ರೀತಿಯು ಈ ಮುಂದೆ ಹೇಳಿರುವಂತೆ ಇರತಕ್ಕದ್ದು, ಎಂದರೆ:–

(i) ನಡೆಯುವ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಆ ವಾರ್ಡ್ ಪ್ರದೇಶದಿಂದ ಚುನಾಯಿತನಾದ ಗ್ರಾಮ ಪಂಚಾಯತ್‌ನ ಸದಸ್ಯನು ಮತ್ತು ಸಂದರ್ಭಾನುಸಾರವಾಗಿ ಆತನ/ಅವಳ ಅನುಪಸ್ಥಿತಿಯಲ್ಲಿ ಸದರಿ ಚುನಾಯಿಸಲ್ಪಟ್ಟ ಗ್ರಾಮ ಪಂಚಾಯತ್‌ನ ಇತರ ಯಾವೊಬ್ಬ ಮತದಾರನು ವಹಿಸತಕ್ಕದ್ದು. ವಾರ್ಡ್‌ಸಭಾವನ್ನು ಪ್ರತಿನಿಧಿಸುವ ಚುನಾಯಿತ ಸದಸ್ಯರ ಸಂಖ್ಯೆಯು ಒಂದಕ್ಕಿಂತ ಹೆಚ್ಚಾಗಿರುವ ಸಂದರ್ಭದಲ್ಲಿ, ಗ್ರಾಮಪಂಚಾಯತಿಯಿಂದ

ನಿರ್ಧರಿಸಲ್ಪಟ್ಟ ತಮ್ಮ ಪೈಕಿಯೇ ಚುನಾಯಿತನಾದ ಸದಸ್ಯನೊಬ್ಬನು ಅಂಥ ಸಭೆಯನ್ನು ಕರೆಯತಕ್ಕದ್ದು.

(ii) ವಾರ್ಡ್ ಸಭೆಯನ್ನು ಕರೆಯಬೇಕಾದಾಗ ಅಥವಾ ವಾರ್ಡ್ ಸಭೆಯನ್ನು ನಡೆಸುವುದು ಅವಶ್ಯಕವಾಗಿರುವಾಗ, ವಾರ್ಡ್‌ನ ಚುನಾಯಿತ ಸದಸ್ಯನು ಸಂದರ್ಭಾನುಸಾರ ವಾರ್ಡ್ ಸಭೆಯನ್ನು ಕರೆಯುವುದಕ್ಕೆ ಮತ್ತು ಸಂದರ್ಭಾನುಸಾರವಾಗಿ ಅಧ್ಯಕ್ಷತೆ ವಹಿಸುವುದಕ್ಕೆ ವಿಫಲನಾಗಿದ್ದರೆ, ಆತನು ಗ್ರಾಮಪಂಚಾಯಿತಿ ನಿಧಿಗೆ ಒಂದು ನೂರು ರೂಪಾಯಿಗಳನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು ಮತ್ತು ಅಂಥ ವಿಫಲತೆಗೆ ವಿವರಣೆಯನ್ನು ನೀಡತಕ್ಕದ್ದು. ತದನಂತರ ಸಂಬಂಧಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅಥವಾ ಸಂದರ್ಭಾನುಸಾರವಾಗಿ ಕಾರ್ಯದರ್ಶಿಯವರು ಅಂಥ ಸಭೆಯನ್ನು ಕರೆಯತಕ್ಕದ್ದು ಮತ್ತು ವಾರ್ಡ್ ಸಭಾದ ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಆಯ್ಕೆ ಮಾಡಬಹುದಾದ, ಗ್ರಾಮ ಪಂಚಾಯತ್‌ನ ಇತರ ಯಾರೇ ಮತದಾರನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು:

(iii) ವಾರ್ಡ್ ಸಭಾದ ಒಟ್ಟು ಮತದಾರರ ಕನಿಷ್ಠ ಐದನೇ ಒಂದರಷ್ಟು ಅಥವಾ ಅದರ ಇಪ್ಪತ್ತು ಸದಸ್ಯರುಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರು ವಾರ್ಡ್ ಸಭಾದ ಸಭೆಗೆ ಕೋರಂ ಆಗಿರತಕ್ಕದ್ದು, ಈ ಪೈಕಿ ಕನಿಷ್ಠ ಪಕ್ಷ ಶೇಕಡಾ ಮೂವತ್ತರಷ್ಟು ಮಹಿಳೆಯರು ಇರತಕ್ಕದ್ದು ಮತ್ತು ಅನುಸೂಚಿತ ಜಾತಿಯ ಮತ್ತು ಅನುಸೂಚಿತ ಪಂಗಡಗಳ ವ್ಯಕ್ತಿಗಳು ಅವರ ಜನಸಂಖ್ಯೆಗೆ ಅನುಗುಣವಾದ ಪ್ರಮಾಣದಲ್ಲಿ ಇರತಕ್ಕದ್ದು:

ಪರಂತು, ಮುಂದೂಡಿದ ಸಭೆಗೆ ಕೋರಂನ ಅಗತ್ಯ ಇರತಕ್ಕದ್ದಲ್ಲ.

(iv) ಈ ಪ್ರಕರಣದ ಮೇರೆಗೆ ನಡೆದ ಸಭೆಯಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಇರುವಂಥ ಎಲ್ಲಾ ನಿರ್ಣಯಗಳನ್ನು ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸದಸ್ಯರುಗಳ ಬಹುಮತದಿಂದ ಅಂಗೀಕರಿಸತಕ್ಕದ್ದು:

ಪರಂತು, ಆ ಸಭೆಯಲ್ಲಿ, ಸಂಬಂಧಪಟ್ಟ ಗುಂಪು ನಿರೂಪಿಸಿದ ಅಗತ್ಯತೆಗಳನ್ನು ವಾರ್ಡ್ ಸಭಾದ ಸಭೆಗಳಲ್ಲಿ ಇಡತಕ್ಕದ್ದು ಮತ್ತು ಅದನ್ನು ಅದು ತನ್ನದೇ ಎಂಬಂತೆ ಭಾವಿಸಿ ದಾಖಲಿಸಿಕೊಳ್ಳತಕ್ಕದ್ದು ಮತ್ತು ಅದನ್ನು ಗ್ರಾಮ ಸಭಾಕ್ಕೆ ಕಳುಹಿಸಿ ಕೊಡತಕ್ಕದ್ದು.

(v) ಸಭೆಗಳನ್ನು ಕರೆಯುವುದಕ್ಕೆ ಮತ್ತು ನಡೆಸುವುದಕ್ಕೆ ಅಗತ್ಯವಾದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ವಾರ್ಡ್ ಸಭಾದ ವಿಶೇಷ ಸಭೆಯನ್ನು ಕರೆಯಬೇಕೆಂದು ವಾರ್ಡ್‌ನ ಕನಿಷ್ಠ ಪಕ್ಷ ಶೇಕಡ ಹತ್ತರಷ್ಟು ಮತದಾರರು ಲಿಖಿತದಲ್ಲಿ ಮನವಿ ಸಲ್ಲಿಸಿದಾಗ ಮತ್ತು ವಿಷಯವನ್ನು ನಿರ್ದಿಷ್ಟ ಪಡಿಸಿದ್ದಾಗ ಸಭೆಯನ್ನು ಕರೆಯತಕ್ಕದ್ದು:

ಪರಂತು, ಮೂರು ತಿಂಗಳುಗಳ ಅವಧಿಯೊಳಗೆ ಎರಡು ಸಲ ವಿಶೇಷ ಸಭೆಗಳನ್ನು ನಡೆಸತಕ್ಕದ್ದಲ್ಲ.

(3) (1)ನೇ ಅಥವಾ (2)ನೇ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಪ್ರಕೃತಿ ವಿಕೋಪಗಳು ಸಂಭವಿಸಿದಾಗ ಅಥವಾ ಸಾರ್ವಜನಿಕ ಪ್ರಾಮುಖ್ಯತೆಯ ತುರ್ತು ವಿಷಯದ ಸಂದರ್ಭದಲ್ಲಿ, ವಾರ್ಡ್ ಸಭಾದ ತುರ್ತು ಸಭೆಗಳನ್ನು ಕರೆಯಬಹುದು ಮತ್ತು ಸದರಿ ವಾರ್ಡಿಗೆ ಚುನಾಯಿತರಾದ ಸದಸ್ಯರು ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅಥವಾ ಯಾರೇ ಚುನಾಯಿತ ಸದಸ್ಯರುಗಳು ಅಂಥ ತುರ್ತು ಸಭೆಗೆ, ಹಾಜರಾಗುವುದು ಅಗತ್ಯವಾಗಿರತಕ್ಕದ್ದು. ಅಧ್ಯಕ್ಷನು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಆತನ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷನು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಬಾಧಿತ ಗುಂಪುಗಳು ಸಭೆಗಳನ್ನು ನಡೆಸುವುದಕ್ಕೆ ಮುಂದಾದರೆ ಮತ್ತು ಗ್ರಾಮ ಸಭೆಯ ನಿಯತ ಸಭೆಗಳ ಮುಂದೆ ಮಂಡಿಸುವುದಕ್ಕೆ ಸಲಹೆಗಳ ಸಮೇತ ತಮ್ಮ ತಮ್ಮಲ್ಲೇ ಗುಂಪುಗಳ ಅಭಿವೃದ್ಧಿಗೆ ಒತ್ತು ನೀಡಿ ಒಟ್ಟಾಗಿ ಮುಂದೆ ಬಂದಾಗ ಸಭೆ ನಡೆಸಲು (1)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಅಡ್ಡಿಪಡಿಸುತ್ತದೆಂದು ಅರ್ಥೈಸತಕ್ಕದ್ದಲ್ಲ.

**3ಇ. ಗ್ರಾಮಸಭೆ.–** (1) ಗ್ರಾಮ ಸಭಾವು, ಗ್ರಾಮ ಪಂಚಾಯತಿಯಲ್ಲಿ ಅನುಷ್ಠಾನಗೊಳ್ಳುವ ಎಲ್ಲಾ ರೀತಿಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳ ಮತ್ತು ಕೇಂದ್ರ, ರಾಜ್ಯ ಮತ್ತು ಜಿಲ್ಲಾ ವಲಯದ ಎಲ್ಲಾ ಸರ್ಕಾರಿ ಸ್ಕೀಮುಗಳನ್ನು ಯೋಜಿಸುವಲ್ಲಿ ಅನುಷ್ಠಾನಕ್ಕೆ ತರುವುದರಲ್ಲಿ, ಮೇಲ್ವಿಚಾರಣೆ ಮಾಡುವುದರಲ್ಲಿ ಮತ್ತು ಮೌಲ್ಯಮಾಪನ ಮಾಡುವುದರಲ್ಲಿ ಗ್ರಾಮದ ಎಲ್ಲಾ ನಾಗರಿಕರು ನೇರವಾಗಿ ಭಾಗಿಯಾಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಗ್ರಾಮಸಭಾ, ಗ್ರಾಮಮಟ್ಟದಲ್ಲಿ ಸ್ಥಳೀಯ ಸ್ವಯಂ ಆಡಳಿತದ ಮೂಲ ಘಟಕವಾಗಿರತಕ್ಕದ್ದು.

(2) ಗ್ರಾಮಸಭೆಯ ಪ್ರಕಾರ್ಯಗಳು ತಮ್ಮ ಸಂಬಂಧಿತ ಅಧಿಕಾರ ವ್ಯಾಪ್ತಿಯೊಳಗೆ ಗ್ರಾಮಪಂಚಾಯತಿಗೆ ನೆರವು ನೀಡುವುದಕ್ಕಾಗಿ ಇರತಕ್ಕದ್ದು ಮತ್ತು ಈ ಮುಂದಿನ ಪ್ರಕಾರ್ಯಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ದೂರದೃಷ್ಟಿ ಯೋಜನೆಯನ್ನು ಸಂಕಲಿಸಲು ಮತ್ತು ರೂಪಿಸಲು ಗ್ರಾಮ ಪಂಚಾಯತ್‌ಗೆ ಸಾಧ್ಯವಾಗುವಂತೆ ಮಾಡುವ ಸಲುವಾಗಿ ಗ್ರಾಮದ ಅಭಿವೃದ್ಧಿಗಾಗಿ ಸಮೀಕ್ಷೆಗಳನ್ನು ನಡೆಸುವುದಕ್ಕೆ ಮತ್ತು ಗ್ರಾಮೀಣ ಪರಾಮರ್ಶನದಲ್ಲಿ ಭಾಗವಹಿಸುವುದಕ್ಕೆ ಅಥವಾ ಅತ್ಯಾವಶ್ಯಕ ಸಮಾಜೋ–ಆರ್ಥಿಕ ದತ್ತಾಂಶವನ್ನು ಸಂಗ್ರಹಿಸಲು ನಿವಾಸಿಗಳ ಅವಶ್ಯಕತೆಗಳನ್ನು ನಿರ್ಧರಿಸಲು ನೆರವಾಗುವುದು.

(ಬಿ) ಜನವಸತಿ ಸಭಾಗಳ ಸಲಹೆಗಳನ್ನು ಪರಿಗಣಿಸಿದ ನಂತರ ಬೀದಿ ದೀಪಗಳನ್ನು, ಅಳವಡಿಸಲು ಬೀದಿಯು ಅಥವಾ ಸಮುದಾಯದ ನೀರಿನ ನಲ್ಲಿಗಳು, ಸಾರ್ವಜನಿಕ ಬಾವಿಗಳು, ಸಾರ್ವಜನಿಕ ನೈರ್ಮಲ್ಯೀಕರಣ ಘಟಕಗಳು, ನೀರಾವರಿ ಸೌಲಭ್ಯಗಳನ್ನು ಮತ್ತು ಅಂತಹ ಇತರ ಸಾರ್ವಜನಿಕ ಸೌಕರ್ಯ ಸ್ಕೀಮುಗಳನ್ನು ಒದಗಿಸಲು

ಸ್ಥಳಗಳನ್ನು ಆದ್ಯತೀಕರಿಸುವುದು ಮತ್ತು ಕೊರತೆಗಳನ್ನು ಗುರುತಿಸುವುದು ಮತ್ತು ಅವುಗಳಿಗೆ ಪರಿಹಾರಾತ್ಮಕ ಕ್ರಮಗಳನ್ನು ಸೂಚಿಸುವುದು ಹಾಗೂ ಕಾಮಗಾರಿ ಕಾರ್ಯವು ತೃಪ್ತಿಕರವಾಗಿ ಮುಗಿದ ಬಗ್ಗೆ ವರದಿ ಮಾಡುವುದು;

(ಸಿ) ಎಲ್ಲಾ ಯೋಜನೆಗಳು ಎಲ್ಲಾ ವರ್ಗದ ಜನರಿಗೆ ಅದರಲ್ಲೂ ವಿಶೇಷವಾಗಿ ಸುರಕ್ಷಿತವಲ್ಲದ ವರ್ಗಗಳಿಗೆ ಮತ್ತು ವಲಸೆ ಕಾರ್ಮಿಕರಿಗೆ ಪ್ರಯೋಜನಕಾರಿಯಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(ಡಿ) ಜನವಸತಿ ಸಭೆಗಳ ಮತ್ತು ವಾರ್ಡ್ ಸಭೆಗಳ ಅಗತ್ಯಗಳನ್ನು ಮತ್ತು ಸಲಹೆಗಳನ್ನು ಪರಿಗಣಿಸಿದ ನಂತರ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಪರಿಯೋಜನೆಗಳ ನಿಧಿಗಳ ಲಭ್ಯತೆಗೆ ಒಳಪಟ್ಟು ಅಂಥ ಯೋಜನೆಗಳನ್ನು ಕಾರ್ಯಕ್ರಮಗಳನ್ನು ಮತ್ತು ಪರಿಯೋಜನೆಗಳನ್ನು ಗ್ರಾಮ ಪಂಚಾಯತಿಯು ಅನುಷ್ಠಾನಕ್ಕೆ ತೆಗೆದುಕೊಳ್ಳುವ ಮೊದಲು ಅನುಮೋದಿಸುವುದು;

(ಇ) ಪ್ರತಿಯೊಂದು ಜನವಸತಿ ಸಭಾಗಳ ಹಾಗೂ ವಾರ್ಡ್ ಸಭಾಗಳ ಅಗತ್ಯಗಳನ್ನು, ಶಿಫಾರಸ್ಸುಗಳನ್ನು ಮತ್ತು ಸಲಹೆಗಳನ್ನು ಪರಿಗಣಿಸಿದ ನಂತರ 'ಆದ್ಯತೆ ರ್‍ಯಾಂಕಿಂಗ್' ವಿಧಾನದ ಪ್ರಕಾರ ಪಂಚಾಯತ್ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಎಲ್ಲಾ ಸ್ಕೀಮುಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಆದ್ಯತೆಯನ್ನು ನಿರ್ಧರಿಸುವ ಮೂಲಕ ಕ್ರೋಢೀಕೃತ ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು;

(ಎಫ್) ಬಡತನ ನಿವಾರಣೆಯ ನಿಟ್ಟಿನಲ್ಲಿ ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ ಪಿಂಚಣಿಗಳು ಮತ್ತು ಸಬ್ಸಿಡಿಗಳು ಮುಂತಾದವುಗಳು ಒಳಗೊಂಡಿರುವ ಬಡತನ ನಿವಾರಣೆ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳಿಗೆ, ಗ್ರಾಮ ಪ್ರದೇಶದಿಂದ ಅತ್ಯಂತ ಸೂಕ್ತ ಅರ್ಹ ಫಲಾನುಭವಿಗಳನ್ನು ಗುರುತಿಸಲು ಮತ್ತು ಆಯ್ಕೆ ಮಾಡಲು ಮತ್ತು ಜನವಸತಿ ಸಭಾಗಳ ಮತ್ತು ವಾರ್ಡ್ ಸಭಾಗಳ ಅಗತ್ಯಗಳನ್ನು, ಶಿಫಾರಸ್ಸುಗಳನ್ನು ಹಾಗೂ ಸಲಹೆಗಳನ್ನು ಪರಿಶೀಲಿಸಿದ ನಂತರ 'ಆದ್ಯತಾ ರ್‍ಯಾಂಕಿಂಗ್' ವಿಧಾನದ ಪ್ರಕಾರ ಆದ್ಯತೆಯ ಕ್ರಮದಲ್ಲಿ ಇರುವಂಥ ಒಂದು ಪಟ್ಟಿಯನ್ನು ಸಿದ್ಧಪಡಿಸಲು ಮತ್ತು ಅದನ್ನು ಜನವಸತಿ ಸಭಾಗಳು ಸಭೆಯ ಮತ್ತು ವಾರ್ಡ್ ಸಭಾಗಳು ಕಳುಹಿಸಿದ ಆದ್ಯತೆಯ ಕ್ರಮದಂತೆಯೇ ಗ್ರಾಮಸಭಾವು ಅವುಗಳನ್ನು ತನ್ನ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಗ್ರಾಮಪಂಚಾಯತ್‌ಗೆ ಕಳುಹಿಸಲು ಜವಾಬ್ದಾರಿಯಾಗಿರತಕ್ಕದ್ದು. ಅಂತಹ ಪಟ್ಟಿಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯು, ತಾಲ್ಲೂಕು ಪಂಚಾಯಿತಿಯು, ಜಿಲ್ಲಾ ಪಂಚಾಯಿತಿಯು ಹಾಗೂ ಸರ್ಕಾರವು ಬದ್ಧವಾಗಿರತಕ್ಕದ್ದು.

(3) ಗ್ರಾಮ ಸಭಾವು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುವಾಗ ಗ್ರಾಮ ಪಂಚಾಯತ್‌ನ ಎಲ್ಲಾ ಚಟುವಟಿಕೆಗಳಿಗೆ ಬೆಂಬಲ ನೀಡತಕ್ಕದ್ದು:-

(ಎ) ಅಭಿವೃದ್ಧಿ ಕಾಮಗಾರಿಗಳಿಗಾಗಿ ಸ್ವಯಂಸೇವಾ ಕಾರ್ಮಿಕರನ್ನು ಮತ್ತು ನಗದು ಹಾಗೂ ವಸ್ತು ಅಥವಾ ಎರಡೂ ರೂಪದಲ್ಲೂ ಕೊಡುಗೆಗಳನ್ನು ನೀಡುವ ಮೂಲಕ ಮತ್ತು ಸ್ವಯಂಸೇವಾ ಗುಂಪುಗಳಿಂದ ಅಂತಹ ಅಭಿವೃದ್ಧಿ ಕಾಮಗಾರಿಗಳನ್ನು ಮೇಲ್ವಿಚಾರಣೆ ಮಾಡಿಸುವ ಮೂಲಕ;

(ಬಿ) ಪಂಚಾಯತ್ ಪ್ರದೇಶದಲ್ಲಿ ನೈರ್ಮಲ್ಯೀಕರಣ ವ್ಯವಸ್ಥೆಗಳನ್ನು ಒದಗಿಸುವಲ್ಲಿ ಗ್ರಾಮ ಪಂಚಾಯತ್‌ನ ಕಾರ್ಯನಿರ್ವಾಹಕ ಸಿಬ್ಬಂದಿಗೆ ನೆರವು ನೀಡುವ ಮೂಲಕ ಬಯಲು ಬಹಿರ್ದೆಸೆ ಮುಕ್ತ ಸ್ವಚ್ಛ ಮತ್ತು ನಿರ್ಮಲ ಪರಿಸರವನ್ನು ಸೃಜಿಸಲು ಮತ್ತು ಗ್ರಾಮದ ಪ್ರದೇಶದಲ್ಲಿ ಕಸಕಡ್ಡಿಗಳನ್ನು ತೆಗೆದುಹಾಕಲು ಸ್ವಯಂಸೇವೆಯನ್ನು ಸಜ್ಜುಗೊಳಿಸುವ ಮೂಲಕ;

(ಸಿ) ಗ್ರಾಮದ ಪ್ರದೇಶದೊಳಗೆ ವಯಸ್ಕರ ಶಿಕ್ಷಣಕ್ಕೆ ಉತ್ತೇಜನ ನೀಡುವ ಸಾಕ್ಷರತೆಯನ್ನು ಹೆಚ್ಚಿಸುವ ಮತ್ತು ಕೌಟುಂಬಿಕ ಸಮಾಲೋಚನೆ ಮಾಡುವ ವ್ಯಕ್ತಿತ್ವ ನಿರ್ಮಾಣ ಮಾಡುವ ಮತ್ತು ಯುವಕರು, ವಯಸ್ಕರು, ಮತ್ತು ಹಿರಿಯ ನಾಗರಿಕರಲ್ಲಿ ಮದ್ಯ, ಮಾದಕ ವಸ್ತುಗಳ ನಿದ್ರಾಜನಕ ಔಷಧಗಳ ವ್ಯಸನವನ್ನು ಬಿಡಿಸಲು ಹಾಗೂ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವ ಮೂಲಕ;

(ಡಿ) ಗ್ರಾಮದಲ್ಲಿ ಯಾರೇ ವ್ಯಕ್ತಿಯ, ಅದರಲ್ಲೂ ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಮತ್ತು ಎಲ್ಲಾ ದುರ್ಬಲ ವರ್ಗಗಳ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳಿಗೆ ಘನತೆಗೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡುವಂಥ ರೀತಿಯ ಸಾಂಪ್ರದಾಯಿಕ, ಸಾಮಾಜಿಕ ಮತ್ತು ಧಾರ್ಮಿಕ ಆಚರಣೆ ನಡೆಯುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವ ಮೂಲಕ;

(ಇ) ಪಂಚಾಯತ್ ಪ್ರದೇಶದಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ, ಇತರ ಹಿಂದುಳಿದ ವರ್ಗಗಳ, ಹಿರಿಯ ನಾಗರಿಕರ, ವಿಕಲಚೇತನರ, ಮಹಿಳೆಯರ, ಮಕ್ಕಳ ಮತ್ತು ಯುವಜನರ ಅಭಿವೃದ್ಧಿಗಾಗಿ ಕೆಲಸ ಮಾಡುವ ಶಾಲಾಭಿವೃದ್ಧಿ ಸಮಿತಿಗಳು, ಅಂಗನವಾಡಿಗಳು, ಮಹಿಳಾ ಸಮಾಜ, ಯುವಜನ ಸಂಘಗಳು, ಸ್ವ-ಸಹಾಯ ಗುಂಪುಗಳು ಮತ್ತು ಸಂಘಟನೆಗಳ ಚಟುವಟಿಕೆಗಳಲ್ಲಿ ನೆರವಾಗುವುದು;

(ಎಫ್) ಪಂಚಾಯತ್ ಪ್ರದೇಶದಲ್ಲಿನ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಚಟುವಟಿಕೆಗಳಿಗೆ, ಅದರಲ್ಲೂ ಮುಖ್ಯವಾಗಿ ರೋಗವನ್ನು ತಡೆಯುವಂಥ ಮತ್ತು ಸಣ್ಣ ಕುಟುಂಬ ಇರುವುದಕ್ಕೆ, ಜನಸಂಖ್ಯಾ ನಿಯಂತ್ರಣಕ್ಕೆ ಉತ್ತೇಜನ ನೀಡುವುದು ಮತ್ತು ಪಶುರೋಗಗಳನ್ನು ತಡೆಗಟ್ಟುವುದಕ್ಕೆ ಸಹಕಾರ ನೀಡುವುದು ಮತ್ತು ಸಾಂಕ್ರಾಮಿಕ ರೋಗಗಳು ಹರಡುತ್ತಿರುವುದರ ಬಗ್ಗೆ ಮತ್ತು ನೈಸರ್ಗಿಕ ವಿಪತ್ತುಗಳ ಬಗ್ಗೆ ಸಂಬಂಧಪಟ್ಟ ಕಾರ್ಯನಿರ್ವಾಹಕ ಸಿಬ್ಬಂದಿಗೆ ತತ್‌ಕ್ಷಣವೇ ವರದಿ ಮಾಡುವುದು; ಮತ್ತು

(ಜಿ) ತೆರಿಗೆಗಳನ್ನು ಮತ್ತು ಇತರ ಬಾಕಿಗಳನ್ನು ಪಾವತಿಸುವಂತೆ ಮತ್ತು ಸಾಲವನ್ನು ಮರುಪಾವತಿಸುವಂತೆ ಗ್ರಾಮಸಭೆಯ ಸದಸ್ಯರ ಮನವೊಲಿಸುವುದು;

(4) ಗ್ರಾಮಸಭೆಯು,-

(ಎ) ಸಮಾಜದ ಎಲ್ಲಾ ನಾಗರಿಕರಿಗೆ ಹಾಗೂ ಅದರಲ್ಲೂ ಮುಖ್ಯವಾಗಿ ಸಮಾಜದ ಸುರಕ್ಷಿತವಲ್ಲದ ವರ್ಗಗಳ ಜನರು ತಮ್ಮ ತಮ್ಮ ಹಕ್ಕುಗಳನ್ನು ಮುಕ್ತವಾಗಿ ಹಾಗೂ ನ್ಯಾಯೋಚಿತ ರೀತಿಯಲ್ಲಿ ಚಲಾಯಿಸಲು ಅನುವುಮಾಡಿಕೊಡುವಂಥ ಮತ್ತು ಸಾಮಾಜಿಕ ನ್ಯಾಯ ಇರುವಂಥ ಒಳ್ಳೆಯ ಪರಿಸರ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು ಮತ್ತು ಗ್ರಾಮ ಪಂಚಾಯತ್‌ಗೆ ಮತ್ತು ಅದರ ಚುನಾಯಿತ ಸದಸ್ಯರಿಗೆ ಅಥವಾ ಇಲಾಖೆಯ ಅಧಿಕಾರಿಗಳಿಗೆ ಅಥವಾ ಇಬ್ಬರಿಗೂ, ಎಲ್ಲ ನಾಗರಿಕರನ್ನು ದುರುಪಯೋಗಪಡಿಸಿಕೊಳ್ಳದಂತೆ ಮತ್ತು

ಶೋಷಣೆ ಮಾಡದಂತೆ ರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳಲು ಸಹಾಯಕವಾಗುವಂಥ ಕ್ರಮಗಳನ್ನು ಗ್ರಾಮಪಂಚಾಯತ್‌ಗೆ ಸಲಹೆ ನೀಡತಕ್ಕದ್ದು.

(ಬಿ) ಆ ಪ್ರದೇಶದ ಸ್ಥಳೀಯ ಆಟಗಳಿಗೆ, ಸ್ಪರ್ಧೆಗಳಿಗೆ, ಆಟೋಟಗಳಿಗೆ (ಅಥ್ಲೆಟಿಕ್ಸ್) ಸಾಹಿತ್ಯಕ್ಕೆ, ಕಲೆಗೆ ಮತ್ತು ಸಂಸ್ಕೃತಿಗೆ ಉತ್ತೇಜನ ನೀಡುವಂಥ ಮತ್ತು ಪೋಷಿಸುವಂಥ ಸಾಂಸ್ಕೃತಿಕ ಹಬ್ಬಗಳನ್ನು, ಸಾಹಿತ್ಯಕ ಚಟುವಟಿಕೆಗಳನ್ನು ಮತ್ತು ಕ್ರೀಡಾ ಪಂದ್ಯಾವಳಿಗಳನ್ನು ಆಯೋಜಿಸುವುದು ಮತ್ತು ಅಲ್ಲಿನ ನಿವಾಸಿಗಳು ತಮ್ಮ ಪ್ರತಿಭೆಗಳನ್ನು ವ್ಯಕ್ತಪಡಿಸಲು ಅವಕಾಶಗಳನ್ನು ಒದಗಿಸತಕ್ಕದ್ದು;

(ಸಿ) ಸ್ವಚ್ಛತೆ, ಪರಿಸರ ಮತ್ತು ಜೀವಿ ಸಂರಕ್ಷಣೆ, ಸಾರ್ವಜನಿಕ ಉಪದ್ರವ ಮತ್ತು ಮಾಲಿನ್ಯ ತಡೆಗಟ್ಟುವಿಕೆ ಮುಂತಾದ ಸಾರ್ವಜನಿಕ ಹಿತಾಸಕ್ತಿಯ ವಿಚಾರಗಳಲ್ಲಿ ನಾಗರಿಕರಿಗೆ ಅರಿವನ್ನು ಮೂಡಿಸತಕ್ಕದ್ದು ಮತ್ತು ಗ್ರಾಮ ಪ್ರದೇಶದ ವ್ಯಾಪ್ತಿಯೊಳಗೆ ಎಲ್ಲಾ ಸಾರ್ವಜನಿಕ ಶಾಂತಿ, ಸುರಕ್ಷತೆ ಮತ್ತು ಭದ್ರತೆ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ಡಿ) ಜಲಸಂರಕ್ಷಣೆ, ಸ್ವಾಭಾವಿಕ ಪರಿಸರದ ಸಂರಕ್ಷಣೆ ಮತ್ತು ಜೈವಿಕವಾಗಿ ವಿಘಟಿಸಬಹುದಾದ ತ್ಯಾಜ್ಯಗಳ ಮರುಬಳಕೆಯ ವಿಷಯಗಳನ್ನು ಕುರಿತು ಅರಿವನ್ನು ಮೂಡಿಸತಕ್ಕದ್ದು;

(ಇ) ಮಹಿಳೆಯರ, ಯುವಜನರ ಮತ್ತು ಹಿರಿಯ ನಾಗರಿಕರ ಸಂಘ ಸಂಸ್ಥೆಗಳೊಂದಿಗೆ ಚರ್ಚಿಸಿ, ಗ್ರಾಮ ಮಟ್ಟದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ, ಅವರ ವ್ಯಾಪಾರ ವ್ಯವಹಾರಗಳಿಗೆ ಮತ್ತು ವಾಣಿಜ್ಯ ಉದ್ದಿಮೆಗಳಿಗೆ ಉತ್ತೇಜನ ನೀಡುವುದು ಮತ್ತು ಅವರು ಒಳ್ಳೇ ಹಣ ತರುವಂಥ ಉದ್ಯೋಗ ಪಡೆದುಕೊಳ್ಳಲು ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ಅವಕಾಶಗಳನ್ನು ಒದಗಿಸತಕ್ಕದ್ದು ಮತ್ತು ಅಂಥ ಕ್ರಮಕ್ಕಾಗಿ ಗ್ರಾಮಪಂಚಾಯತ್‌ಗೆ ಪ್ರಸ್ತಾವಗಳನ್ನು ಸಲ್ಲಿಸತಕ್ಕದ್ದು;

(ಎಫ್) ಗ್ರಾಮ ಪಂಚಾಯತ್ ಪ್ರದೇಶದ ಒಳಗೆ ಇರುವ ಗೋಮಾಳ, ಹುಲ್ಲುಗಾವಲುಗಳು, ಕೆರೆಗಳು, ಕೆರೆ ದಂಡೆಗಳು, ಅಂತರ್ಜಲ, ರಸ್ತೆಗಳು, ಸೇತುವೆಗಳು, ಗಣಿಗಳು ಮುಂತಾದವುಗಳಂತಹ ಸಾರ್ವಜನಿಕ ಸ್ವತ್ತುಗಳನ್ನು ಸಂರಕ್ಷಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಜಿ) ಗ್ರಾಮ ಪ್ರದೇಶದಲ್ಲಿ ಜನಪದ ಕಲೆಗಳ, ಕರಕುಶಲ ಕಲೆಗಳ, ಗೃಹ ಕೈಗಾರಿಕೆಗಳ ಮತ್ತು ಗುಡಿ ಕೈಗಾರಿಕೆಗಳ ಪುನರುಜ್ಜೀವನಕ್ಕೆ ಮತ್ತು ಬೆಳವಣಿಗೆಗೆ ಉತ್ತೇಜನ ನೀಡತಕ್ಕದ್ದು;

(ಹೆಚ್) ಗ್ರಾಮದ ನಿವಾಸಿಗಳು ಸುರಕ್ಷತೆಯಿಂದ ಇರುವುದನ್ನು, ಭದ್ರತೆ ಒದಗಿಸಿರುವುದನ್ನು ಮತ್ತು ಸ್ವಾತಂತ್ರ್ಯದಿಂದ ಇರುವುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು;

(ಐ) ಜನರ ಪರಂಪರೆಗಳನ್ನು ಮತ್ತು ಸಂಪ್ರದಾಯಗಳನ್ನು, ಅವರ ಸಾಂಸ್ಕೃತಿಕ ಅನನ್ಯತೆಯನ್ನು, ಸಮುದಾಯ ಸಂಪನ್ಮೂಲಗಳನ್ನು ಮತ್ತು ವಿವಾದಗಳನ್ನು ಬಗೆಹರಿಸಿಕೊಳ್ಳಲು ಅವರು ಅನುಸರಿಸುತ್ತಿರುವ ಸಾಂಪ್ರದಾಯಿಕ ವಿಧಾನವನ್ನು ಕಾಪಾಡುವುದಕ್ಕೆ ಮತ್ತು ಸಂರಕ್ಷಣೆ ಮಾಡುವುದಕ್ಕೆ ಸಮರ್ಥರಾಗಿರತಕ್ಕದ್ದು;

(ಜೆ) ಜಾತಿ, ಪಂಥ, ಧರ್ಮ ಮತ್ತು ಲಿಂಗ ಇತ್ಯಾದಿ ಆಧಾರದ ಮೇಲೆ ಜನರ ನಡುವಣ ತಾರತಮ್ಯವನ್ನು ತಡೆಗಟ್ಟಲು ಕ್ರಮವನ್ನು ವಹಿಸತಕ್ಕದ್ದು;

(ಕೆ) ಪಂಚಾಯತ್ ಪ್ರದೇಶದಲ್ಲಿ ಅಕ್ರಮವಾಗಿ ಹಣ ಲೇವಾದೇವಿ ನಡೆಸುವ ಚಟುವಟಿಕೆಗಳನ್ನು ತಡೆಯತಕ್ಕದ್ದು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಅಂಥ ಚಟುವಟಿಕೆ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಆ ಅಧಿಕಾರಿಗಳಿಗೆ ವರದಿ ಮಾಡುವುದಕ್ಕೆ ಅನುವಾಗುವಂತೆ ಗ್ರಾಮಪಂಚಾಯತ್‌ಗೆ ಮಾಹಿತಿಯನ್ನು ನೀಡತಕ್ಕದ್ದು.

(5) ಗ್ರಾಮಸಭೆಯು,-

(ಎ) ಆಯವ್ಯಯ ಏರ್ಪಾಟುಗಳನ್ನು, ಯೋಜನಾ ವೆಚ್ಚದ ವಿವರಗಳನ್ನು ಮತ್ತು ಪ್ರತಿಯೊಂದು ಕೆಲಸ ಕಾರ್ಯಕ್ಕೆ ನಿಧಿಗಳ ಹಂಚಿಕೆಯನ್ನು ಮತ್ತು ಗ್ರಾಮ ಪ್ರದೇಶದಲ್ಲಿ ಕಾರ್ಯಗತಗೊಳಿಸಬೇಕೆಂದು ಪ್ರಸ್ತಾಪಿಸಿರುವ ಅಥವಾ ಕಾರ್ಯಗತಗೊಳಿಸಲು ಉದ್ದೇಶಿಸಿರುವ ಕಾಮಗಾರಿಗಳ ಅಂದಾಜಿನ ಮತ್ತು ಸಾಮಗ್ರಿಗಳ ವೆಚ್ಚಗಳ ವಿವರಗಳನ್ನು ಸಹ ಸಿದ್ಧಪಡಿಸಬಹುದು ಮತ್ತು ಪ್ರತಿ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ ಎಲ್ಲಾ ಗ್ರಾಮಸಭಾಗಳ ವಿಶೇಷ ಸಭೆಯಲ್ಲಿ ಅವುಗಳನ್ನು ಚರ್ಚಿಸಬಹುದು ಮತ್ತು ಅನುಮೋದಿಸಬಹುದು;

(ಬಿ) ಹಿಂದಿನ ಆರ್ಥಿಕ ವರ್ಷದ ಲೆಕ್ಕಪತ್ರಗಳ ವಾರ್ಷಿಕ ವರದಿಯನ್ನು, ಕಳೆದ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಅದಕ್ಕೆ ಉತ್ತರಗಳನ್ನು ಮತ್ತು ಪಂಚಾಯತ್ ಜಮಾ-ಬಂದಿ ವರದಿಯನ್ನು ಸಿದ್ಧಪಡಿಸಬಹುದು ಮತ್ತು ಆ ಬಗ್ಗೆ ಕೈಗೊಂಡ ಕ್ರಮವನ್ನು ಪ್ರತಿ ವರ್ಷದ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಎಲ್ಲಾ ಗ್ರಾಮಸಭೆಗಳ ವಿಶೇಷ ಸಭೆಯಲ್ಲಿ ಚರ್ಚಿಸಬಹುದು ಮತ್ತು ಅದನ್ನು ಅನುಮೋದಿಸಬಹುದು.

(6) ಗ್ರಾಮಸಭೆಯು, ಈ ಕೆಳಕಂಡ ಮಾಹಿತಿಯನ್ನು, ಎಂದರೆ:-

(ಎ) ಪಂಚಾಯತ್ ಪ್ರದೇಶಕ್ಕೆ ಸಂಬಂಧಪಟ್ಟ ಗ್ರಾಮ ಪಂಚಾಯತ್‌ವು ಸಕಾರಣ ಇದ್ದೇ ಪ್ರತಿಯೊಂದು ತೀರ್ಮಾನವನ್ನು ತೆಗೆದುಕೊಂಡಿದೆಯೇ ಎಂಬ ಮಾಹಿತಿಯನ್ನು ಗ್ರಾಮ ಪಂಚಾಯತ್‌ನಿಂದ;

(ಬಿ) ಗ್ರಾಮಸಭಾದ ನಿರ್ಣಯಗಳ ಬಗ್ಗೆ ಅನುಸರಣಾ ಕ್ರಮ ಕೈಗೊಳ್ಳಲಾಗಿದೆಯೇ ಎನ್ನುವ ಬಗ್ಗೆ ಮಾಹಿತಿಯನ್ನು ಗ್ರಾಮ ಪಂಚಾಯತ್‌ನಿಂದ; ಮತ್ತು

(ಸಿ) ಗ್ರಾಮಪಂಚಾಯತ್ ಅಧಿಕಾರಿಗಳು ಯಾವ ಯಾವ ಸೇವೆಗಳನ್ನು ಸಲ್ಲಿಸುತ್ತಿದ್ದಾರೆ ಮತ್ತು ಗ್ರಾಮಸಭಾದ ಸಭೆಯ ನಂತರದ ಆರು ತಿಂಗಳುಗಳ ಅವಧಿಯಲ್ಲಿ ಅವರು ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಗ್ರಾಮ ಪಂಚಾಯತ್ ಅಧಿಕಾರಿಗಳಿಂದ

- ಕೇಳಬಹುದು ಮತ್ತು ಪಡೆದುಕೊಳ್ಳಬಹುದು.

(7) ಗ್ರಾಮಸಭೆಗಳ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳನ್ನು, ಅಭಿಪ್ರಾಯಗಳನ್ನು, ಶಿಫಾರಸ್ಸುಗಳನ್ನು ಅಥವಾ ಸಲಹೆಗಳನ್ನು ಗ್ರಾಮಸಭಾ ಗೊತ್ತುಪಡಿಸಿದ ಆದ್ಯತೆಗಳನ್ನು ಬದಲಿಸದೆಯೇ, ಲಭ್ಯವಿರುವ ನಿಧಿಗಳಿಗೆ ಒಳಪಟ್ಟು ಮತ್ತು ಸರ್ಕಾರವು ನೀಡಿದ ಮಾರ್ಗದರ್ಶನಗಳಂತೆ ಅನುಷ್ಠಾನಗೊಳಿಸುವುದಕ್ಕಾಗಿ ಗ್ರಾಮ ಪಂಚಾಯತ್ ತಿಳಿಸತಕ್ಕದ್ದು.

**3ಎಫ್. ಗ್ರಾಮಸಭೆಯ ಕರ್ತವ್ಯಗಳು.–** (1) ಗ್ರಾಮ ಸಭೆಯು ಈ ಮುಂದಿನ ಕರ್ತವ್ಯಗಳನ್ನು ಚಲಾಯಿಸತಕ್ಕದ್ದು, ಎಂದರೆ:–

(ಎ) ಎಲ್ಲಾ ವರ್ಗದ ಜನರಿಗೆ ವಿಶೇಷವಾಗಿ ಸುರಕ್ಷಿತವಲ್ಲದವರಿಗೆ ಮತ್ತು ಅಲೆಮಾರಿ ಕಾರ್ಮಿಕರಿಗೆ ಎಲ್ಲಾ ಯೋಜನೆಗಳು ಲಾಭದಾಯಕವೇ ಎಂಬುದನ್ನು ಖಚಿತಪಡಿಸುವುದು;

(ಬಿ) ಪ್ರತಿಯೊಂದು ಜನವಸತಿ ಸಭಾಗಳ ಹಾಗೂ ವಾರ್ಡ್ ಸಭಾಗಳ ಅಗತ್ಯಗಳನ್ನು, ಶಿಫಾರಸ್ಸುಗಳನ್ನು ಮತ್ತು ಸಲಹೆಗಳನ್ನು ಪರ್ಯಾಲೋಚಿಸಿದ ನಂತರ 'ಆದ್ಯತೆ ರ್‍ಯಾಂಕಿಂಗ್' ವಿಧಾನದ ಪ್ರಕಾರ ಪಂಚಾಯತ್ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಎಲ್ಲಾ ಯೋಜನೆಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಆದ್ಯತೆಯನ್ನು ನಿರ್ಧರಿಸಿಕೊಂಡು ಕ್ರೋಢೀಕೃತ ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು;

(ಸಿ) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಅಥವಾ ಸರ್ಕಾರವು ನಿಗದಿಪಡಿಸಿದ ಮಾನದಂಡದ ಆಧಾರದ ಮೇಲೆ ಫಲಾನುಭವಿ ಉದ್ದೇಶಿತ ಸ್ಕೀಮುಗಳ ಅಡಿಯಲ್ಲಿ ಪಂಚಾಯತ್ ಪ್ರದೇಶದಿಂದ ಅತಿ ಅರ್ಹ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ಆಯ್ಕೆ ಮಾಡುವುದು ಮತ್ತು ಜನವಸತಿ ಸಭಾಗಳು ಮತ್ತು ವಾರ್ಡ್ ಸಭಾಗಳ ಅಗತ್ಯತೆಗಳು, ಶಿಫಾರಸುಗಳು ಮತ್ತು ಸಲಹೆಗಳನ್ನು ಪರಿಗಣಿಸಿದ ತರುವಾಯ 'ಆದ್ಯತಾ ಶ್ರೇಣಿಯ' ಅನ್ವಯ ಆದ್ಯತೆಯ ಆಧಾರದಲ್ಲಿ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಜನವಸತಿ ಮತ್ತು ವಾರ್ಡ್ ಸಭಾಗಳು ಕಳುಹಿಸಿದ ಆದ್ಯತೆ ಕ್ರಮದಲ್ಲಿ ತನ್ನ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸುವುದಕ್ಕೆ ಗ್ರಾಮಪಂಚಾಯತಿಗೆ ಅದನ್ನು ಕಳುಹಿಸತಕ್ಕದ್ದು.

(ಡಿ) ನಿಧಿಗಳ ಲಭ್ಯತೆಗೆ ಒಳಪಟ್ಟು, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಪ್ರಾಜೆಕ್ಟ್‌ಗಳನ್ನು ಜನವಸತಿ ಸಭಾಗಳ ಮತ್ತು ವಾರ್ಡ್ ಸಭಾಗಳ ಅಗತ್ಯಗಳನ್ನು ಮತ್ತು ಸಲಹೆಗಳನ್ನು ಪರಿಗಣಿಸಿದ ತರುವಾಯ, ಗ್ರಾಮ ಪಂಚಾಯತಿಯು ಅನುಷ್ಠಾನಕ್ಕಾಗಿ ತೆಗೆದುಕೊಳ್ಳುವ ಮೊದಲು ಅಂಥ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಪ್ರಾಜೆಕ್ಟ್ ಗಳನ್ನು ಅನುಮೋದಿಸುವುದು;

(ಇ) ಪಂಚಾಯತ್ ಪ್ರದೇಶದಲ್ಲಿ ನೈರ್ಮಲ್ಯೀಕರಣ ವ್ಯವಸ್ಥೆಗಳನ್ನು ಒದಗಿಸುವಲ್ಲಿ ಗ್ರಾಮ ಪಂಚಾಯತ್‌ನ ಕಾರ್ಯನಿರ್ವಾಹಕ ಸಿಬ್ಬಂದಿಗೆ ನೆರವಾಗುವುದು ಮತ್ತು ಗ್ರಾಮದ ಪ್ರದೇಶದಲ್ಲಿ ಬಯಲು ಬಹಿರ್ದೆಸೆ ಮುಕ್ತ ಸ್ವಚ್ಛ ಮತ್ತು ಆರೋಗ್ಯಕರ ಪರಿಸರವನ್ನು ಸೃಜಿಸಲು ಮತ್ತು ಕಸಕಡ್ಡಿಗಳನ್ನು ತೆಗೆದುಹಾಕುವುದಕ್ಕೆ ಸ್ವಯಂಸೇವೆಯನ್ನು ಸಜ್ಜುಗೊಳಿಸುವುದು;

(ಎಫ್) ಗ್ರಾಮ ಸಭಾ ಸದಸ್ಯರುಗಳಿಗೆ ತೆರಿಗೆಯನ್ನು ಮತ್ತು ಇತರ ಬಾಕಿಗಳನ್ನು ಪಾವತಿಸುವುದಕ್ಕೆ ಮತ್ತು ಸಾಲಗಳನ್ನು ಮರುಪಾವತಿಸುವುದಕ್ಕೆ ಮನವೊಲಿಸುವುದು;

(ಜಿ) ನೀರಿನ ಸಂರಕ್ಷಣೆ, ನೈಸರ್ಗಿಕ ಪರಿಸರದ ಸಂರಕ್ಷಣೆ ಮತ್ತು ಜೈವಿಕ ವಿಘಟಕ ತ್ಯಾಜ್ಯಗಳ ಮರುಬಳಕೆಯ ವಿಷಯಗಳನ್ನು ಕುರಿತು ಅರಿವನ್ನು ಮೂಡಿಸತಕ್ಕದ್ದು;

(ಹೆಚ್) ಗ್ರಾಮ ಪಂಚಾಯತ್ ಪ್ರದೇಶದ ಒಳಗೆ ಇರುವ ಗೋಮಾಳ, ಹುಲ್ಲುಗಾವಲುಗಳು, ಕೆರೆಗಳು, ಕೆರೆ ಅಚ್ಚುಕಟ್ಟು ಪ್ರದೇಶ, ಅಂತರ್ಜಲ, ರಸ್ತೆಗಳು, ಸೇತುವೆಗಳು, ಗಣಿಗಳು ಮುಂತಾದವುಗಳಂತಹ ಸಾರ್ವಜನಿಕ ಸ್ವತ್ತುಗಳನ್ನು ಸಂರಕ್ಷಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಐ) ಗ್ರಾಮದ ನಿವಾಸಿಗಳು ಸುರಕ್ಷತೆಯಿಂದ ಇರುವುದನ್ನು, ಭದ್ರತೆ ಒದಗಿಸಿರುವುದನ್ನು ಮತ್ತು ಸ್ವಾತಂತ್ರ್ಯದಿಂದ ಇರುವುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು;

(ಜೆ) ಪಂಚಾಯತ್ ಪ್ರದೇಶದಲ್ಲಿ ಅಕ್ರಮವಾಗಿ ಹಣ ಲೇವಾದೇವಿ ನಡೆಸುವ ಚಟುವಟಿಕೆಗಳನ್ನು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ವರದಿ ಮಾಡತಕ್ಕದ್ದು ಮತ್ತು ಅದರ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿ ಗ್ರಾಮಪಂಚಾಯತ್‌ಗೆ ಮಾಹಿತಿಯನ್ನು ನೀಡತಕ್ಕದ್ದು.

**3ಜಿ. ಗ್ರಾಮಸಭಾದ ಸಭೆಗಳು.–** (1) ಗ್ರಾಮಪಂಚಾಯತ್‌ನ ಅಧ್ಯಕ್ಷನು ಎಲ್ಲಾ ಗ್ರಾಮಸಭಾಗಳ ಮೊದಲ ಸಭೆಯನ್ನು ಸಾಧ್ಯವಾಗಬಹುದಾದಷ್ಟು ಅರವತ್ತು ದಿನಗಳ ಒಳಗೆ ಕರೆಯತಕ್ಕದ್ದು ಮತ್ತು ತದನಂತರ ಸಭೆಯನ್ನು ಗ್ರಾಮಸಭೆಯು ನಿರ್ಧರಿಸಿದಂಥ ದಿನಾಂಕದಂದು ಕರೆಯತಕ್ಕದ್ದು, ಆದರೆ ಇಂಥ ಎರಡು ಸಭೆಗಳ ನಡುವಿನ ಅಂತರವು ಆರು ತಿಂಗಳುಗಳಿಗೆ ಮೀರದಂತೆ ಇರತಕ್ಕದ್ದು. ಗ್ರಾಮಸಭಾದ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಆಯಾ ಗ್ರಾಮಪಂಚಾಯತ್ ಅಧ್ಯಕ್ಷರು ವಹಿಸತಕ್ಕದ್ದು ಮತ್ತು ಆತನ/ಆಕೆಯ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸಿಕೊಳ್ಳತಕ್ಕದ್ದು ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಇಬ್ಬರ ಅನುಪಸ್ಥಿತಿಯಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮಲ್ಲೇ ಆಯ್ಕೆ ಮಾಡಿಕೊಂಡ ಯಾರೇ ಇತರ ಸದಸ್ಯರು ಅಧ್ಯಕ್ಷತೆ ವಹಿಸತಕ್ಕದ್ದು. ಸಭೆಯನ್ನು ಕರೆಯಬೇಕಾದ ಅಥವಾ ಅವಶ್ಯವಿದ್ದಾಗ ಗ್ರಾಮ ಪಂಚಾಯತಿಯ ಅಧ್ಯಕ್ಷನು ಸಭೆಯನ್ನು ಕರೆಯಲು ವಿಫಲನಾದರೆ ಕಾರ್ಯನಿರ್ವಹಣಾ ಅಧಿಕಾರಿಯು ಅಂಥ ಸಭೆಯನ್ನು ಕರೆಯತಕ್ಕದ್ದು. ಅಂಥ ಅಧ್ಯಕ್ಷನು ಒಂದು ಸಾವಿರ ರೂಪಾಯಿಗಳನ್ನು ಗ್ರಾಮ ಪಂಚಾಯತಿ ನಿಧಿಗೆ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು ಮತ್ತು ಸಭೆಯನ್ನು ಕರೆಯಲು ವಿಫಲನಾಗಲು ಇರುವ ಕಾರಣಗಳನ್ನು ಗ್ರಾಮಸಭೆಯ ಮುಂದಿನ ಸಭೆಯಲ್ಲಿ ತಿಳಿಸತಕ್ಕದ್ದು.

(2) ಸಭೆಗಳ ನೋಟೀಸುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಎಲ್ಲಾ ಸದಸ್ಯರು ಅಂತಹ ಸಭೆಗಳ ಬಗ್ಗೆ ತಿಳಿದುಕೊಳ್ಳುವ ಹಾಗೆ ಮತ್ತು ದೂರದರ್ಶನದ ಪ್ರಾದೇಶಿಕ ಚಾನಲ್‌ಗಳಲ್ಲಿ, ರೇಡಿಯೋ ಹಾಗೂ ವಾರ್ತಾ ಪತ್ರಿಕೆಗಳಂತಹ ಇತರ ಮಾಧ್ಯಮಗಳಲ್ಲಿ ಪ್ರಸಾರದ ಮೂಲಕ ಹಾಗೂ ಕರಪತ್ರಗಳಲ್ಲಿ ಮುದ್ರಿಸಿ ಗ್ರಾಮಪಂಚಾಯತಿ ಪ್ರದೇಶದಲ್ಲಿ ವಿತರಿಸತಕ್ಕದ್ದು.

(3) ಗ್ರಾಮಸಭಾದ ಸಾಮಾನ್ಯ ಸಭೆಗೆ ಕೋರಂ, ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆಯ ಹತ್ತನೇ ಒಂದು ಭಾಗದಷ್ಟು ಮತದಾರರು ಅಥವಾ ಒಂದುನೂರು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟಕ್ಕಿಂತ ಕಡಿಮೆ ಇರತಕ್ಕದ್ದಲ್ಲ:

ಪರಂತು, ಸಭೆಗೆ ನಿಗದಿಪಡಿಸಿದ ಸಮಯದಲ್ಲಿ ಕೋರಂ ಇಲ್ಲದಿದ್ದರೆ, ಪೀಠಾಸೀನ ವ್ಯಕ್ತಿಯು ಮೂವತ್ತು ನಿಮಿಷಗಳವರೆಗೆ ಕಾಯತಕ್ಕದ್ದು ಮತ್ತು ತದನಂತರವೂ ಕೋರಂ ಇಲ್ಲದಿದ್ದರೆ, ಪೀಠಾಸೀನ ವ್ಯಕ್ತಿಯು ಸಾರ್ವಜನಿಕ

ರಜಾದಿನ ಅಲ್ಲದ ಮುಂದಿನ ದಿನಕ್ಕೆ ಅಥವಾ ಯಾವುದೇ ಇತರ ದಿನಕ್ಕೆ ಸಭೆಯನ್ನು ಮುಂದೂಡತಕ್ಕದ್ದು, ಅಂತಹ ಮುಂದೂಡಲ್ಪಟ್ಟ ಸಭೆಗೆ ಕೋರಂನ ಅಗತ್ಯ ಇರತಕ್ಕದ್ದಲ್ಲ.

(4) ಪಂಚಾಯತ್ ಪ್ರದೇಶದೊಳಗೆ ಇರುವ ಪ್ರತಿಯೊಂದು ವಾರ್ಡ್ ಸಭಾದಿಂದ ಕಡೇಪಕ್ಷ ಹತ್ತು ಮಂದಿ ಸದಸ್ಯರು ಸಭೆಯಲ್ಲಿ ಹಾಜರಿರತಕ್ಕದ್ದು ಮತ್ತು ಸಭೆಯಲ್ಲಿ ಹಾಜರಿದ್ದ ಸದಸ್ಯರಲ್ಲಿ ಶೇಕಡ ಮೂವತ್ತಕ್ಕಿಂತ ಕಡಿಮೆಯಿಲ್ಲದಂತೆ ಮಹಿಳೆಯರು ಇರತಕ್ಕದ್ದು ಮತ್ತು ವಾರ್ಡ್‌ಸಭಾದಲ್ಲಿ ಅನುಸೂಚಿತ ಜಾತಿಯ ಮತ್ತು ಅನುಸೂಚಿತ ಪಂಗಡದ ವ್ಯಕ್ತಿಗಳು ಅವರವರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಇರತಕ್ಕದ್ದು.

(5) ಆ ಪ್ರದೇಶದಿಂದ ಚುನಾಯಿತರಾಗಿರುವ ಸದಸ್ಯರು ಪ್ರತಿಯೊಂದು ಗ್ರಾಮಸಭಾದ ಸಭೆಯಲ್ಲಿ ಹಾಜರಿರತಕ್ಕದ್ದು.

(6) ಗ್ರಾಮಪಂಚಾಯತ್‌ನ ಅಧಿಕಾರಿಗಳು, ಅಧ್ಯಕ್ಷರು ಅಗತ್ಯಪಡಿಸಿದರೆ ಗ್ರಾಮಸಭೆಯ ಸಭೆಗಳಲ್ಲಿ ಭಾಗವಹಿಸತಕ್ಕದ್ದು ಮತ್ತು ಸಭೆಯ ಸಂಚಾಲಕ ಎಂದು ನಿರ್ದಿಷ್ಟವಾಗಿ ಗೊತ್ತುಪಡಿಸಿದ ಪಂಚಾಯತಿಯ ಅಂಥ ಅಧಿಕಾರಿಯು ಸಭೆಯನ್ನು ಕರೆಯಲು ಮತ್ತು ನಡೆಸಲು ಮತ್ತು ಸಭೆಯ ನಡವಳಿಗಳನ್ನು ಟಿಪ್ಪಣಿ ಪುಸ್ತಕದಲ್ಲಿ ದಾಖಲು ಮಾಡಲು ಹಾಗೂ ಅವುಗಳನ್ನು ವಿಡಿಯೋ ಚಿತ್ರೀಕರಣ ಮಾಡುವುದಕ್ಕೆ ನೆರವಾಗತಕ್ಕದ್ದು ಮತ್ತು ಸಭೆಯ ಎಲ್ಲಾ ನಿರ್ಣಯಗಳನ್ನು ದಾಖಲು ಮಾಡತಕ್ಕದ್ದು ಹಾಗೂ ಅವುಗಳನ್ನು ಅಧ್ಯಕ್ಷರು ಪ್ರಮಾಣೀಕರಿಸತಕ್ಕದ್ದು:

ಪರಂತು, ಜನವಸತಿ ಸಭಾ ಮತ್ತು ವಾರ್ಡ್ ಸಭಾದ ಸಭೆಗಳಲ್ಲಿ ವಿತರಿಸಲಾದ ಅಗತ್ಯತೆಗಳನ್ನು ಗ್ರಾಮಸಭಾದ ಸಭೆಯಲ್ಲಿ ಕೈಗೆತ್ತಿಕೊಳ್ಳತಕ್ಕದ್ದು ಮತ್ತು ತನ್ನ ಸ್ವಂತದ್ದೆಂದು ದಾಖಲಿಸಿ ಅದರ ಮುಂದೆ ಇಡುವುದು.

(7) ಗ್ರಾಮಸಭಾದ ಸಭೆಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಂಡನೆ ಆದ ಎಲ್ಲಾ ನಿರ್ಣಯಗಳನ್ನು ಹಾಜರಿರುವ ಸದಸ್ಯರ ಬಹುಮತದ ಮತ್ತು ಮತದಾನದ ಮೂಲಕ ಅಂಗೀಕರಿಸತಕ್ಕದ್ದು ಮತ್ತು ಗ್ರಾಮಪಂಚಾಯತಿಯು, ಗ್ರಾಮಸಭೆಯ ಅಂತಹ ನಿರ್ಣಯಗಳನ್ನು ಅವು ತನ್ನದೇ ಆದ ನಿರ್ಣಯಗಳಾಗಿದ್ದರೆ ಹೇಗೋ ಹಾಗೆ ಅವುಗಳನ್ನು ಅಳವಡಿಸಿಕೊಳ್ಳತಕ್ಕದ್ದು ಮತ್ತು ಗ್ರಾಮಸಭಾವು ತಿಳಿಸಿದ ಆದ್ಯತೆಯ ಕ್ರಮದಲ್ಲಿ ಅವುಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(8) ಗ್ರಾಮಸಭಾದ ಎಲ್ಲಾ ಸಭೆಗಳಲ್ಲಿ ಎಲ್ಲಾ ನಾಗರಿಕರೂ ಅದರಲ್ಲೂ ಮುಖ್ಯವಾಗಿ ಸಮಾಜದ ಸುರಕ್ಷಿತವಲ್ಲದ ವರ್ಗಗಳ ಜನರು ಸಕ್ರಿಯ ಪಾಲ್ಗೊಳ್ಳುವಿಕೆಯ ಜೊತೆ ಎಲ್ಲ ಸಭೆಗಳೂ ಮುಕ್ತ ಮತ್ತು ಪಾರದರ್ಶಕವಾಗಿ ನಡೆಯತಕ್ಕದ್ದು.

(9) ಗ್ರಾಮಸಭೆಯ ಸಭೆಗಳನ್ನು ಕರೆಯುವುದು ಮತ್ತು ನಡೆಸುವ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

**3ಹೆಚ್. ಗ್ರಾಮಸಭಾದ ವಿಶೇಷ ಸಭೆ.**– (1) 3ಜಿ ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಗ್ರಾಮಸಭಾದ ವ್ಯಾಪ್ತಿಯೊಳಗೆ ಇರುವ ಮಹಿಳೆಯರ, ಅನುಸೂಚಿತ ಜಾತಿಯ ಮತ್ತು ಅನುಸೂಚಿತ ಪಂಗಡಗಳ, ರೈತಾಪಿ ಜನರ ಮತ್ತು ಕರಕುಶಲ ಕೆಲಸಗಾರರ, ಯುವಜನರ ಮತ್ತು ಹಿರಿಯ ನಾಗರೀಕರ ಗುಂಪುಗಳು ತಮಗೆ ಅನುಕೂಲವಾದಾಗಲೆಲ್ಲ ಸಭೆಗಳನ್ನು ನಡೆಸಲು ಮುಂದಾಗುವುದಕ್ಕೆ ಹಾಗೂ ಅಭಿವೃದ್ಧಿಗಾಗಿ ತಮ್ಮ ತಮ್ಮ ಪರಿಹಾರಕ್ಕಾಗಿ ಸಲಹೆಗಳ ಸಹಿತ ಗುಂಪಿನ ಅಗತ್ಯತೆಗಳ ರೂಪುರೇಷೆಯನ್ನು ಗ್ರಾಮಸಭೆಯ ನಿಯತ ಸಭೆಗಳಲ್ಲಿ ಸಭೆಯ ಮುಂದಿಡುವುದನ್ನು ತಡೆಯುತ್ತದೆಂದು ಅರ್ಥೈಸತಕ್ಕದ್ದಲ್ಲ:

ಪರಂತು, ಜನವಸತಿ ಸಭಾ ಮತ್ತು ವಾರ್ಡ್ ಸಭಾದ ಸಭೆಗಳಲ್ಲಿ ವಿತರಿಸಲಾದ ಅಗತ್ಯತೆಗಳನ್ನು ಗ್ರಾಮಸಭಾದ ಸಭೆಯಲ್ಲಿ ಕೈಗೆತ್ತಿಕೊಳ್ಳತಕ್ಕದ್ದು ಮತ್ತು ತನ್ನ ಸ್ವಂತದ್ದೆಂದು ದಾಖಲಿಸಿ ಗ್ರಾಮಪಂಚಾಯತಿಯ ಮುಂದೆ ಇಡುವುದು.

ಮತ್ತು ಪರಂತು, ಅಂತಹ ಪ್ರತಿಯೊಂದು ಪ್ರಾತಿನಿಧಿಕ ಗುಂಪು ತನ್ನ ಸಭೆಯಲ್ಲಿ ಸಿದ್ಧಪಡಿಸಿದ ಅಗತ್ಯತೆಗಳ ರೂಪುರೇಷೆಗಳನ್ನು ಗ್ರಾಮಸಭೆಯು ಪರಿಶೀಲಿಸತಕ್ಕದ್ದು ಮತ್ತು ಅದು ತನ್ನದೇ ವಿಷಯ ಎಂಬಂತೆ ಭಾವಿಸಿ ಗ್ರಾಮಪಂಚಾಯತಿಯ ಮುಂದೆ ಮಂಡಿಸಿ ಅನುಸರಣಾ ಕ್ರಮ ಕೈಗೊಳ್ಳತಕ್ಕದ್ದು.

(2) ಈ ಪ್ರಕರಣದ ಇತರ ಉಪಬಂಧಗಳಲ್ಲಿ ಒಳಗೊಂಡಿರುವ ಯಾವುದಕ್ಕೂ ಬಾಧಕವಾಗದಂತೆ ಅಧ್ಯಕ್ಷನು,–

(i) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ, ಮಹಿಳೆಯರ ಮತ್ತು ಮಕ್ಕಳ ಸಬಲೀಕರಣಕ್ಕಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಪ್ರತ್ಯೇಕವಾಗಿ ಗ್ರಾಮಸಭಾದ ಸಭೆಗಳನ್ನು ಗ್ರಾಮಪಂಚಾಯತ್ ಸಭೆಗಳು ನಡೆಯುವುದಕ್ಕೂ ಮೊದಲು ಕಡೆಯಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ಅವರವರುಗಳಿಗೆ ಪ್ರತ್ಯೇಕವಾಗಿ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆ ನಡೆಸಲು ಕರೆಯತಕ್ಕದ್ದು;

(ii) ಗ್ರಾಮಸಭಾದ ಸದಸ್ಯರ ಶೇಕಡಾ ಹತ್ತಕ್ಕಿಂತ ಕಡಿಮೆಯಿಲ್ಲದ ಸದಸ್ಯರು, ಚರ್ಚೆಗಾಗಿ ವಿಷಯವನ್ನು ನಿರ್ದಿಷ್ಟಪಡಿಸಿ ಮನವಿ ಮಾಡಿಕೊಂಡಾಗ ಗ್ರಾಮಸಭಾದ ವಿಶೇಷ ಸಭೆಗಳನ್ನು ಕರೆಯತಕ್ಕದ್ದು. ಆದಾಗ್ಯೂ, ಅಂಥ ಯಾವುದೇ ಎರಡು ವಿಶೇಷ ಸಭೆಗಳ ನಡುವೆ ಕಡೆಯಪಕ್ಷ ಮೂರು ತಿಂಗಳುಗಳ ಅಂತರ ಇರತಕ್ಕದ್ದು.

(iii) ಗ್ರಾಮಪಂಚಾಯತ್‌ನ ಯೋಜನೆಗಳನ್ನು ಮತ್ತು ಹಣಕಾಸು ವಿಷಯಗಳನ್ನು ಪರಿಶೀಲಿಸಲು ವರ್ಷದಲ್ಲಿ ಎರಡು ಬಾರಿ ಎಂದರೆ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಎಲ್ಲಾ ಗ್ರಾಮಸಭಾಗಳ ವಿಶೇಷ ಆಯವ್ಯಯ ಸಭೆಗಳನ್ನು ಕರೆಯತಕ್ಕದ್ದು.

(3) ಆಯಾ ಗ್ರಾಮಪಂಚಾಯತ್‌ನಲ್ಲಿ ಇರುವ ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಜನಸಂಖ್ಯೆಯ ಪ್ರಮಾಣಾನುಸಾರವಾಗಿ ಆಯವ್ಯಯವನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಗ್ರಾಮಸಭಾದ ವಿಶೇಷ ಸಭೆಯಲ್ಲಿ ಅದನ್ನು ನಿರ್ಧರಿಸತಕ್ಕದ್ದು:

ಪರಂತು, ಆ ಗ್ರಾಮಸಭೆಯು ಈ ನಿಧಿಯನ್ನು ಬಳಕೆ ಮಾಡಿರದಿದ್ದರೆ, ಈ ನಿಧಿಯನ್ನು ಕರ್ನಾಟಕ ಅನುಸೂಚಿತ ಜಾತಿಗಳ ಉಪ–ಯೋಜನೆ ಮತ್ತು ಅನುಸೂಚಿತ ಪಂಗಡಗಳ ಉಪ–ಯೋಜನೆ (ಯೋಜನೆ, ಹಂಚಿಕೆ ಮತ್ತು

ಹಣಕಾಸು ಸಂಪನ್ಮೂಲಗಳ ಬಳಕೆ) ಅಧಿನಿಯಮ, 2013ರಲ್ಲಿ (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 65) ಹೇಳಿರುವುದಕ್ಕೆ ಅನುಸಾರವಾಗಿ ಬಳಕೆ ಮಾಡಿಕೊಳ್ಳತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ III

## ಗ್ರಾಮ ಪಂಚಾಯತಿಗಳ ಹಾಗೂ ಸ್ಥಾಯಿ ಸಮಿತಿಗಳ ರಚನೆ

**4. ಪಂಚಾಯತಿ ಪ್ರದೇಶದ ಘೋಷಣೆ ಮತ್ತು ಗ್ರಾಮ ಪಂಚಾಯತಿಗಳ ಸ್ಥಾಪನೆ.**-(1) ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು, ಡೆಪ್ಯುಟಿ ಕಮಿಷನರ್ ಅವರು [1][ಐದು ಸಾವಿರಕ್ಕಿಂತ ಕಡಿಮೆ ಇಲ್ಲದ ಮತ್ತು ಏಳು ಸಾವಿರಕ್ಕೆ ಹೆಚ್ಚಿಗೆ ಇಲ್ಲದ][1] ಜನಸಂಖ್ಯೆಯನ್ನುಳ್ಳ ಒಂದು ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಪಂಚಾಯತಿ ಪ್ರದೇಶವೆಂದು ಘೋಷಿಸುವುದು ಯುಕ್ತವೆಂದು ಅಭಿಪ್ರಾಯಪಟ್ಟರೆ, ಮೊದಲೇ ಪ್ರಕಟಣೆ ಹೊರಡಿಸಿದ ತರುವಾಯ ಅಂಥ ಪ್ರದೇಶವನ್ನು ಪಂಚಾಯತಿ ಪ್ರದೇಶವೆಂದು ಈ ಅಧಿನಿಯಮದ ಉದ್ದೇಶಗಳಿಗಾಗಿ ಘೋಷಿಸಬಹುದು ಮತ್ತು ಅದರ ಕೇಂದ್ರ ಕಾರ್ಯಸ್ಥಾನವನ್ನು ಕೂಡ ನಿರ್ದಿಷ್ಟಪಡಿಸಬಹುದು:

1. 2೦೦೦ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 28-೦1-1999ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಸರ್ಕಾರವು, ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ [1][ಉಡುಪಿ, ಹಾವೇರಿ][1] ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ [2][ಎರಡು ಸಾವಿರದ ಐನೂರಕ್ಕಿಂತ ಕಡಿಮೆಯಿಲ್ಲದ][2] ಜನಸಂಖ್ಯೆಯುಳ್ಳ ಪ್ರದೇಶವನ್ನು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಪಂಚಾಯತಿ ಪ್ರದೇಶವೆಂದು ಘೋಷಿಸಬಹುದೆಂದು ಆದೇಶಿಸಬಹುದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997 ರಿಂದ ಸೇರಿಸಲಾಗಿದೆ.
2. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 28-01-1999 ರಿಂದ ಪ್ರತಿಯೋಜಿಸಲಾಗಿದೆ.

ಅಷ್ಟೇ ಅಲ್ಲದೆ, ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ, ಅವಶ್ಯಕ ಎಂದು ಕಂಡುಬರುವಲ್ಲೆಲ್ಲಾ ಸರ್ಕಾರವು, ವಿಶೇಷ ಪ್ರಕರಣವೆಂದು, ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ [1][ಉಡುಪಿ, ಹಾವೇರಿ][1] ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ ಗ್ರಾಮದ ಕೇಂದ್ರದಿಂದ [2][ಐದು ಕಿಲೋಮೀಟರುಗಳ ತ್ರಿಜ್ಯದ (ಹತ್ತು ಕಿಲೋಮೀಟರುಗಳ ವ್ಯಾಸದ)][2] ಒಳಗಿರುವ ಪ್ರದೇಶವನ್ನು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಪಂಚಾಯತಿ ಪ್ರದೇಶವೆಂದು ಘೋಷಿಸಬಹುದೆಂದು ಆದೇಶಿಸಬಹುದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦-1೦-1997ರಿಂದ ಸೇರಿಸಲಾಗಿದೆ.
2. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 28-01-1999ರಿಂದ ಪ್ರತಿಯೋಜಿಸಲಾಗಿದೆ.

ಅದೂ ಅಲ್ಲದೆ, ಡೆಪ್ಯುಟಿ ಕಮಿಷನರ್ ಅವರು, ಸರ್ಕಾರದ ಅನುಮತಿಯನ್ನು ಪಡೆದು, [1][ಐದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಅಥವಾ ಏಳು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ][1] ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಪಂಚಾಯತಿ ಪ್ರದೇಶವೆಂದು ಘೋಷಿಸಬಹುದು.

1. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 28-01-1999ರಿಂದ ಪ್ರತಿಯೋಜಿಸಲಾಗಿದೆ.

(2) ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಅವರು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ವಿನಂತಿಯ ಮೇಲೆ ಅಥವಾ ಅನ್ಯಥಾ ಮತ್ತು ಅಧಿಸೂಚನೆಯ ಮೂಲಕ ಪ್ರಸ್ತಾವವನ್ನು ಮೊದಲೇ ಪ್ರಕಟಿಸಿದ ತರುವಾಯ, ಯಾವುದೇ ಸಮಯದಲ್ಲಿ,-

(ಎ) ಯಾವುದೇ ಪಂಚಾಯತಿ ಪ್ರದೇಶವನ್ನು ಅಂಥ ಪಂಚಾಯತಿ ಪ್ರದೇಶದೊಳಗೆ ಯಾವುದೇ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಸೇರಿಸುವ ಮೂಲಕ ಹೆಚ್ಚಿಸಬಹುದು;

(ಬಿ) ಯಾವುದೇ ಪಂಚಾಯತಿ ಪ್ರದೇಶವನ್ನು ಅಂಥ ಪಂಚಾಯತಿ ಪ್ರದೇಶದಿಂದ ಯಾವುದೇ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಹೊರತುಪಡಿಸುವ ಮೂಲಕ ಕಡಿಮೆ ಮಾಡಬಹುದು;

(ಸಿ) ಯಾವುದೇ ಪಂಚಾಯತಿ ಪ್ರದೇಶದ ಕೇಂದ್ರ ಕಾರ್ಯಸ್ಥಾನವನ್ನು ಬದಲಾಯಿಸಬಹುದು;

(ಡಿ) ಯಾವುದೇ ಪಂಚಾಯತಿ ಪ್ರದೇಶದ ಹೆಸರನ್ನು ಬದಲಾಯಿಸಬಹುದು; ಅಥವಾ

(ಇ) ಯಾವುದೇ ಪಂಚಾಯತಿ ಪ್ರದೇಶವನ್ನು ಅದು ಪಂಚಾಯತಿ ಪ್ರದೇಶವಾಗಿರುವುದು ನಿಂತು ಹೋಗತಕ್ಕದ್ದೆಂದು ಘೋಷಿಸಬಹುದು.

(3) ಕಮಿಷನರ್ ಅವರು, ಅಂಥ ಅಧಿಸೂಚನೆಯಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಧಿಸೂಚನೆಯ ದಿನಾಂಕದಿಂದ ಮೂವತ್ತು ದಿವಸಗಳ ಒಳಗೆ ಮಾಡಿಕೊಂಡ ಅರ್ಜಿಯ ಮೇಲಾಗಲೀ ಅಥವಾ ತಾನಾಗಿಯೇ ಆಗಲಿ ಮತ್ತು ಅರ್ಜಿದಾರನಿಗೆ ಅಥವಾ ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ (1)ನೇ ಉಪ ಪ್ರಕರಣ ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿನ ಡೆಪ್ಯುಟಿ ಕಮಿಷನರ್ ಅವರ ಆದೇಶಗಳನ್ನು ಪರಿಷ್ಕರಿಸಬಹುದು ಮತ್ತು ಅವರು, ಅವಶ್ಯಕ ಎಂದು ಪರ್ಯಾಲೋಚಿಸಿದರೆ, (1)ನೇ ಉಪ ಪ್ರಕರಣದ ಮೂರನೇ ಪರಂತುಕದಲ್ಲಿ ಹೇಳಿರುವಂತೆ ಅದನ್ನು ಮಾರ್ಪಾಟು ಸಹ ಮಾಡಬಹುದು. ಡೆಪ್ಯುಟಿ ಕಮಿಷನರ್ ಅವರ ಆದೇಶವನ್ನು ಪರಿಷ್ಕರಿಸಿ ಅಥವಾ ಮಾರ್ಪಾಟು ಮಾಡಿ ಹಾಗೆ ಮಾಡಿದ ಪ್ರತಿಯೊಂದು ಆದೇಶವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ಹಾಗೆಂದು ಘೋಷಿಸಿದ ಪ್ರತಿಯೊಂದು ಪಂಚಾಯತಿ ಪ್ರದೇಶದಲ್ಲಿ ಗ್ರಾಮ ಪಂಚಾಯತಿಯನ್ನು ಸ್ಥಾಪಿಸತಕ್ಕದ್ದು.

**5. ಗ್ರಾಮ ಪಂಚಾಯತಿಯ ರಚನೆ.**- (1) ಪಂಚಾಯತಿ ಪ್ರದೇಶದ [1][ಜನಸಂಖ್ಯೆಯ ಪ್ರತಿ ನಾಲ್ಕು ನೂರು][1] ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನಂತೆ, [2][ರಾಜ್ಯ ಚುನಾವಣಾ ಆಯೋಗವು][2] ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಸಂಖ್ಯೆಯ ಚುನಾಯಿತ ಸದಸ್ಯರನ್ನು ಗ್ರಾಮ ಪಂಚಾಯತಿಯು ಹೊಂದಿರತಕ್ಕದ್ದು:

1. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 28-01-1999 ರಿಂದ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦-1೦-1997 ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಮೇಲೆ ಹೇಳಿದಂತೆ ನಿರ್ಧರಿಸಿರುವ ಸಂಖ್ಯೆಯು, ಆಗ ಅಧಿಕಾರದಲ್ಲಿದ್ದ ಚುನಾಯಿತ ಸದಸ್ಯರ ಹುದ್ದೆಯ ಅವಧಿಯು ಮುಕ್ತಾಯವಾಗುವವರೆಗೆ, ಗ್ರಾಮ ಪಂಚಾಯತಿಯ ಆಗಿನ ರಚನೆಗೆ, ಬಾಧಕವನ್ನುಂಟು ಮಾಡತಕ್ಕದ್ದಲ್ಲ.

[1][ಪರಂತುಕ x x x][1]

1. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 04-08-1999ರಿಂದ ಬಿಟ್ಟುಬಿಡಲಾಗಿದೆ.

(2) ಗ್ರಾಮ ಪಂಚಾಯತಿಯಲ್ಲಿ,-

(ಎ) ಅನುಸೂಚಿತ ಜಾತಿಗಳಿಗಾಗಿ; ಮತ್ತು

(ಬಿ) ಅನುಸೂಚಿತ ಪಂಗಡಗಳಿಗಾಗಿ,

-ಸ್ಥಾನಗಳನ್ನು [1][ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ಡೆಪ್ಯುಟಿ ಕಮೀಷನರು ಮೀಸಲಿರಿಸತಕ್ಕದ್ದು][1] ಮತ್ತು ಪಂಚಾಯತಿ ಪ್ರದೇಶದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು, ಗ್ರಾಮ ಪಂಚಾಯತಿಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು:

[2][ಪರಂತುಕ x x x][2]

[3][ಪರಂತು, ಪ್ರತಿ ಗ್ರಾಮ ಪಂಚಾಯತಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು:

ಮತ್ತು ಪರಂತು, ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಯು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನವನ್ನು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಂದ ಹಾಗೂ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಯು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನವನ್ನು ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡುತಕ್ಕದ್ದು.][3]

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 24-08-1998ರಿಂದ ಪ್ರತಿಯೋಜಿಸಲಾಗಿದೆ.
2. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995 ರಿಂದ ಬಿಟ್ಟುಬಿಡಲಾಗಿದೆ.
3. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 16-12-1999ರಿಂದ ಸೇರಿಸಲಾಗಿದೆ.

(3) ಗ್ರಾಮ ಪಂಚಾಯತಿಯ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಮೂರನೇ ಒಂದರಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ [1][ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ಡೆಪ್ಯುಟಿ ಕಮೀಷನರು ಮೀಸಲಿರಿಸತಕ್ಕದ್ದು:][1] [3][ಆದರೆ ಈ ಉಪ ಪ್ರಕರಣದಡಿಯಲ್ಲಿ ಹಿಂದುಳಿದ ವರ್ಗಗಳಿಗೆ ಹಾಗೆ ನಿರ್ಧರಿಸಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು, (2)ನೇ ಉಪ ಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಮತ್ತು ಈ ಉಪ ಪ್ರಕರಣದಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು ಆ ಗ್ರಾಮ ಪಂಚಾಯತಿಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು, ಮೀರತಕ್ಕದ್ದಲ್ಲ.][3]

[2][ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಮೀಸಲಿರಿಸಿದ ಸ್ಥಾನಗಳ ಪೈಕಿ ಅಂಥ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿನ ಶೇಕಡಾ ಎಂಬತ್ತರಷ್ಟು ಸ್ಥಾನಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇಕಡಾ ಇಪ್ಪತ್ತರಷ್ಟು ಸ್ಥಾನಗಳನ್ನು 'ಬಿ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು:

ಮತ್ತು ಪರಂತು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು, ಹಾಗೆಯೇ, "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು.

**ವಿವರಣೆ.**- ಈ ಉಪ-ಪ್ರಕರಣದ, 44ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಪರಂತುಕದ, 123ನೇ ಪ್ರಕರಣದ (2)ನೇ ಉಪ-ಪ್ರಕರಣದ, 138ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ, 162ನೇ ಪ್ರಕರಣದ (2)ನೇ ಉಪ-ಪ್ರಕರಣದ ಮತ್ತು 177ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಉದ್ದೇಶಕ್ಕಾಗಿ "ಎ" ಮತ್ತು "ಬಿ" ಪ್ರವರ್ಗಗಳು ಎಂದರೆ 2ನೇ ಪ್ರಕರಣದ (2)ನೇ ಖಂಡದಲ್ಲಿ ಉಲ್ಲೇಖಿಸಲಾಗಿರುವ "ಎ" ಮತ್ತು "ಬಿ" ಪ್ರವರ್ಗಗಳು.][2]

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 24-08-1998ರಿಂದ ಪ್ರತಿಯೋಜಿಸಲಾಗಿದೆ.
2. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995 ರಿಂದ ಸೇರಿಸಲಾಗಿದೆ.
3. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010 ರಿಂದ ಸೇರಿಸಲಾಗಿದೆ.

(4) ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಸ್ಥಾನಗಳಲ್ಲಿ ಮತ್ತು ಮೀಸಲಿಟ್ಟಿರದ ಸ್ಥಾನಗಳಲ್ಲಿ [4][ಶೇಕಡಾ ಐವತ್ತರಷ್ಟಕ್ಕೆ][4] ಕಡಿಮೆ ಇಲ್ಲದಷ್ಟು ಸ್ಥಾನವನ್ನು ಮಹಿಳೆಯರಿಗಾಗಿ [5][ಒಟ್ಟಾರೆಯಾಗಿ ಅರ್ಧದಷ್ಟು ಪರಿಮಿತಿಗೆ ಒಳಪಟ್ಟು ಮುಂದಿನ ಸಂಖ್ಯೆಗೆ ಪೂರ್ಣಾಂಕಗೊಳಿಸಿದಷ್ಟು][5] [1][ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ಡೆಪ್ಯುಟಿ ಕಮೀಷನರು ಮೀಸಲಿರಿಸತಕ್ಕದ್ದು][1]:

[2][ಪರಂತುಕ x x x][2]

[3][ಪರಂತು, (2), (3) ಮತ್ತು (4)ನೇ ಉಪ-ಪ್ರಕರಣಗಳ ಅಡಿಯಲ್ಲಿ ಮೀಸಲಿಸಿದ ಸ್ಥಾನಗಳನ್ನು ಪಂಚಾಯತಿ ಪ್ರದೇಶದಲ್ಲಿನ ಬೇರೆ ಬೇರೆ ಚುನಾವಣಾ ಕ್ಷೇತ್ರಗಳಿಗೆ ಸರದಿ ಪ್ರಕಾರ ಹಂಚಿಕೆ ಮಾಡತಕ್ಕದ್ದು [5][ಅಂಥ ಸರದಿಯು ಹತ್ತು ವರ್ಷಗಳ ಅವಧಿಯವರೆಗೆ ಮುಂದುವರೆಯತಕ್ಕದ್ದು.][3]][5]

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 24-08-1998ರಿಂದ ಪ್ರತಿಯೋಜಿಸಲಾಗಿದೆ.
2. 1999ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 28-01-1998 ರಿಂದ ಬಿಟ್ಟುಬಿಡಲಾಗಿದೆ.
3. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 28-01-1999ರಿಂದ ಸೇರಿಸಲಾಗಿದೆ.
4. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.

5. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

ಅಷ್ಟೇ ಅಲ್ಲದೆ, ಈ ಪ್ರಕರಣದಲ್ಲಿರುವುದು ಯಾವುದೂ, ಯಾವ ಗ್ರಾಮ ಪಂಚಾಯತಿಯಲ್ಲಿ ಮಹಿಳೆಯರಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಅಥವಾ ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ ಸ್ಥಾನಗಳನ್ನು ಮೀಸಲಿಡಲಾಗಿದೆಯೋ, ಅಂಥ ಮಹಿಳೆಯು ಅಥವಾ ವ್ಯಕ್ತಿಯು ಅಂಥ ಗ್ರಾಮ ಪಂಚಾಯತಿಯಲ್ಲಿ ಮೀಸಲಿರಿಸಿಲ್ಲದ ಯಾವುದೇ ಸ್ಥಾನಗಳಿಗೆ ಚುನಾವಣೆಗೆ ನಿಲ್ಲದಂತೆ ತಡೆಯುಂಟು ಮಾಡುತ್ತದೆಯೆಂದು ಭಾವಿಸತಕ್ಕದ್ದಲ್ಲ.

(5) (2), (3) ಮತ್ತು (4)ನೇ ಉಪ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, [1][ಹಾಗೂ ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು ಡೆಪ್ಯೂಟಿ ಕಮಿಶನರು][1], ಅಧಿಸೂಚನೆಯ ಮೂಲಕ,-

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 24-08-1998ರಿಂದ ಪ್ರತಿಯೋಜಿಸಲಾಗಿದೆ.

(ಎ) ಪ್ರತಿಯೊಂದು ಗ್ರಾಮ ಪಂಚಾಯತಿಗೆ ಚುನಾವಣೆ ನಡೆಸುವ ಉದ್ದೇಶದಿಂದ ಪ್ರತಿಯೊಂದು ಗ್ರಾಮ ಪಂಚಾಯತಿಯ ಅಧಿಕಾರವ್ಯಾಪ್ತಿಯಲ್ಲಿ ಬರುವ ಪ್ರದೇಶವನ್ನು ಎಷ್ಟು ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಬಹುದೆಂಬುದನ್ನು;

(ಬಿ) ಪ್ರತಿಯೊಂದು ಚುನಾವಣಾ ಕ್ಷೇತ್ರದ ವ್ಯಾಪ್ತಿಯನ್ನು;

(ಸಿ) ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲೂ ಅನುಸೂಚಿತ ಜಾತಿಗಳಿಗಾಗಿ ಮತ್ತು ಅನುಸೂಚಿತ ಪಂಗಡಗಳಿಗಾಗಿ ಮತ್ತು ಹಿಂದುಳಿದ ವರ್ಗಗಳಿಗಾಗಿ ಅಥವಾ ಮಹಿಳೆಯರಿಗಾಗಿ ಸ್ಥಾನಗಳನ್ನೇನಾದರೂ ಮೀಸಲಿರಿಸಿದ್ದರೆ ಅವುಗಳ ಸಂಖ್ಯೆ ಎಷ್ಟು ಎಂಬುದನ್ನು;

(ಡಿ) ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೂ ಎಷ್ಟು ಸ್ಥಾನಗಳನ್ನು ಹಂಚಬೇಕೆಂಬುದನ್ನು ಅದು ಒಂದೇ ಅಥವಾ ಅದಕ್ಕೂ ಹೆಚ್ಚೇ ಎಂಬುದನ್ನು,-

-ನಿರ್ಧರಿಸತಕ್ಕದ್ದು.

(6) ಯಾವುದೇ ಕಾರಣದಿಂದ ಗ್ರಾಮ ಪಂಚಾಯತಿಗೆ ನಡೆದ ಚುನಾವಣೆಯಲ್ಲಿ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಅಗತ್ಯಪಡಿಸಿದಷ್ಟು ಸಂಖ್ಯೆಯ ಸದಸ್ಯರು ಚುನಾಯಿತರಾಗದಿದ್ದರೆ [1][ಡೆಪ್ಯೂಟಿ ಕಮಿಶನರು][1] (8)ನೇ ಉಪ ಪ್ರಕರಣದ ಮೇರೆಗೆ ತಾನು ಚುನಾಯಿತ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ, ಅಗತ್ಯಪಡಿಸಿರುವಷ್ಟು ಸಂಖ್ಯೆಯು ಪೂರ್ಣಗೊಳ್ಳಲು ಬೇಕಾಗುವಷ್ಟು ಸಂಖ್ಯೆಯ ಸದಸ್ಯರ ಚುನಾವಣೆಗಾಗಿ ಮತ್ತೊಂದು ಚುನಾವಣೆಗೆ ವ್ಯವಸ್ಥೆ ಮಾಡತಕ್ಕದ್ದು.

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 24-08-1998ರಿಂದ ಪ್ರತಿಯೋಜಿಸಲಾಗಿದೆ.

(7) (1) ಮತ್ತು (6)ನೇ ಉಪ-ಪ್ರಕರಣಗಳಲ್ಲಿ ಏನೇ ಇದ್ದರೂ, ಆದರೆ, ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು, ಯಾವುದೇ ಗ್ರಾಮ ಪಂಚಾಯಿತಿಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಎರಡು ಭಾಗದಷ್ಟು ಸದಸ್ಯರು ಚುನಾಯಿತರಾಗಿರುವಲ್ಲಿ, ಆ ಗ್ರಾಮ ಪಂಚಾಯತಿಯು ಈ ಅಧಿನಿಯಮದ ಅಡಿಯಲ್ಲಿ ಕ್ರಮಬದ್ಧವಾಗಿ ರಚಿತವಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

(8) [1][ಡೆಪ್ಯೂಟಿ ಕಮಿಶನರು][1], ಚುನಾಯಿತರಾದ ಸದಸ್ಯರ ಅಥವಾ ಕ್ರಮಬದ್ಧವಾಗಿ ಚುನಾಯಿತರಾಗಿರುವುದಾಗಿ ಭಾವಿಸಲಾದ ಸದಸ್ಯರ ಹೆಸರುಗಳನ್ನು ಗೊತ್ತುಪಡಿಸಿರುವ ರೀತಿಯಲ್ಲಿ ಪ್ರಕಟಿಸತಕ್ಕದ್ದು.

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 24-08-1998ರಿಂದ ಪ್ರತಿಯೋಜಿಸಲಾಗಿದೆ.

**6. ಗ್ರಾಮ ಪಂಚಾಯತಿಯನ್ನು ನಿಗಮಿತಗೊಳಿಸುವುದು.-** ಪ್ರತಿಯೊಂದು ಗ್ರಾಮ ಪಂಚಾಯತಿಯು "............................ ಗ್ರಾಮ ಪಂಚಾಯತಿ" ಎಂಬ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಿರುವಂಥ ನಿರ್ಬಂಧಗಳಿಗೆ ಒಳಪಟ್ಟು, ತನ್ನ ನಿಗಮಿತ ಹೆಸರಿನಲ್ಲಿ ದಾವೆ ಹೂಡುವ ಅಥವಾ ದಾವೆಗೆ ಗುರಿಯಾಗುವ ಮತ್ತು ತಾನು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಪ್ರದೇಶದ ಪರಿಮಿತಿಗಳ ಹೊರಗೆ ಆಗಲಿ ಅಥವಾ ಒಳಗೆ ಆಗಲಿ ಚರ ಅಥವಾ ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವರ್ಗಾವಣೆ ಮಾಡುವ, ಕರಾರುಗಳನ್ನು ಮಾಡಿಕೊಳ್ಳುವ ಮತ್ತು ಅದನ್ನು ರಚಿಸಲಾಗಿರುವಂಥ ಉದ್ದೇಶಗಳಿಗೆ ಅವಶ್ಯವಾದ, ಸರಿಕಂಡ ಅಥವಾ ವಿಹಿತವಾದ ಎಲ್ಲ ಕಾರ್ಯಗಳನ್ನು ಮಾಡುವ ಸಾಮರ್ಥ್ಯವು ಅದರಲ್ಲಿ ನಿಹಿತವಾಗಿರತಕ್ಕದ್ದು.

**7. ಮತದಾನದ ವಿಧಾನ ಮತ್ತು ಚುನಾವಣಾ ಕಾರ್ಯವಿಧಾನ.-** (1) ಪ್ರತಿಯೊಬ್ಬ ಮತದಾರನು, ಚುನಾವಣಾ ಕ್ಷೇತ್ರದಿಂದ ಎಷ್ಟು ಸದಸ್ಯರು ಚುನಾಯಿತರಾಗಬೇಕಾಗಿದೆಯೋ ಅಷ್ಟು ಮತಗಳನ್ನು ಹೊಂದಿರತಕ್ಕದ್ದು. ಯಾವನೇ ಮತದಾರನು, ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತವನ್ನು ಕೊಡತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಗ್ರಾಮ ಪಂಚಾಯತಿಗೆ ಚುನಾವಣೆಗಳನ್ನು, ಪಕ್ಷದ ಆಧಾರದ ಮೇಲಲ್ಲದೆ, ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಅನುಸಾರವಾಗಿ ಮತದಾನದ ಮೂಲಕ ನಡೆಸತಕ್ಕದ್ದು.

[1][(3)ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಏನೇ ಇದ್ದರೂ, ನಿಯಮಿಸಬಹುದಾದಂಥ ವಿಧಾನದಲ್ಲಿ, ಮತದಾನ ಯಂತ್ರಗಳ ಮೂಲಕ, ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಮತಗಳನ್ನು ನೀಡುವುದನ್ನು ಮತ್ತು ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಪರಿಸ್ಥಿತಿಗನುಸಾರವಾಗಿ ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ, "ಮತದಾನ ಯಂತ್ರ" ಎಂದರೆ, ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸಲಾಗುವ, ವಿದ್ಯುನ್ಮಾನ ವಿಧಾನದ ಮೂಲಕವಾಗಲಿ ಅಥವಾ ಅನ್ಯಥಾ ಕಾರ್ಯ ನಿರ್ವಹಿಸುವ, ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರಕ್ಕೆ ಸಂಬಂಧಿಸಿದ ಯಾವುದೇ ಉಲ್ಲೇಖವು, ಅನ್ಯಥಾ

ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರಗಳನ್ನು ಬಳಸಿರುವಲ್ಲೆಲ್ಲಾ ಅಂಥ ಮತಯಂತ್ರಕ್ಕೆ ಸಂಬಂಧಿಸಿದ ಉಲ್ಲೇಖವನ್ನು ಒಳಗೊಳ್ಳುತ್ತದೆಂಬುದಾಗಿ ಅರ್ಥೈಸಲಾಗುವುದು.][1]

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಸೇರಿಸಲಾಗಿದೆ.

**8. ಗ್ರಾಮ ಪಂಚಾಯತಿಗಳ ಸದಸ್ಯರನ್ನು ಚುನಾಯಿಸಲು ತಪ್ಪಿದಲ್ಲಿ ಆಡಳಿತ ಸಮಿತಿಯ ಅಥವಾ ಆಡಳಿತಾಧಿಕಾರಿಯ ನೇಮಕ.**- (1) (ಎ) ಡೆಪ್ಯುಟಿ ಕಮಿಷನರ್ ಅವರಿಗೆ ಗ್ರಾಮ ಪಂಚಾಯತಿಯನ್ನು ಸ್ಥಾಪಿಸಿದ ತರುವಾಯ ಕೂಡಲೇ ಗ್ರಾಮಕ್ಕಾಗಿ ಅಥವಾ ಗ್ರಾಮಗಳ ಗುಂಪಿಗಾಗಿ ಗ್ರಾಮ ಪಂಚಾಯತಿಯನ್ನು,-

(i) ಗ್ರಾಮ ಪಂಚಾಯತಿಯ ಸದಸ್ಯರ ಚುನಾವಣೆಯನ್ನು ನಡೆಸುವುದಕ್ಕೆ ಯಾವುದೇ ತೊಂದರೆಯ ಕಾರಣದಿಂದಾಗಿ; ಅಥವಾ

(ii) 5ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ನಡೆಸಲಾದ ಎರಡು ಅನುಕ್ರಮ ಚುನಾವಣೆಗಳಲ್ಲಿ ಅಂಥ ಸದಸ್ಯರನ್ನು ಚುನಾಯಿಸಲು ವಿಫಲವಾಗಿರುವ ಕಾರಣದಿಂದಾಗಿ; ಅಥವಾ

(iii) ಇತರ ಯಾವುದೇ ಸಾಕಷ್ಟು ಕಾರಣದಿಂದಾಗಿ, ಆದೇನೆ ಇರಲಿ, ರಚಿಸಲು ಸಾಧ್ಯವಿಲ್ಲವೆಂದು ಮನದಟ್ಟಾದರೆ; ಅಥವಾ

(ಬಿ) ಗ್ರಾಮ ಪಂಚಾಯತಿಗೆ ಯಾವುದೇ ಸಾರ್ವತ್ರಿಕ ಚುನಾವಣೆಯಲ್ಲಿ ಯಾವನೇ ಸದಸ್ಯನು ಚುನಾಯಿತನಾಗದಿದ್ದರೆ ಅಥವಾ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟಕ್ಕಿಂತಲೂ ಕಡಿಮೆ ಸದಸ್ಯರು ಚುನಾಯಿತರಾಗಿದ್ದರೆ,

- ಡೆಪ್ಯುಟಿ ಕಮಿಷನರ್ ಅವರು, ಅಧಿಸೂಚನೆಯ ಮೂಲಕ,-

(i) ಚುನಾಯಿತರಾಗಲು ಅರ್ಹರಾದ ವ್ಯಕ್ತಿಗಳನ್ನು ಒಳಗೊಂಡ ಆಡಳಿತ ಸಮಿತಿಯನ್ನು ನೇಮಕ ಮಾಡತಕ್ಕದ್ದು. ಅಂಥ ವ್ಯಕ್ತಿಗಳ ಸಂಖ್ಯೆಯು 5ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ಧರಿಸಿರುವ ಸದಸ್ಯರ ಸಂಖ್ಯೆಗೆ ಸಮನಾಗಿರತಕ್ಕದ್ದು, ಅಥವಾ

(ii) ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕದ್ದು.

(2) ಆಡಳಿತ ಸಮಿತಿಯ ಸದಸ್ಯರು ಅಥವಾ ಆಡಳಿತಾಧಿಕಾರಿಯು, (1)ನೇ ಉಪ-ಪ್ರಕರಣದ ಮೇರೆಗೆ, ಅಧಿಸೂಚನೆಯಲ್ಲಿ, ಡೆಪ್ಯುಟಿ ಕಮೀಷನರ್ ಅವರು ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳು ಮೀರದಂಥ ಅವಧಿಯವರೆಗೆ ಹುದ್ದೆಯ ಧಾರಣ ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ, ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ನೇಮಕಗೊಂಡಾಗ, ಅಂಥ ನೇಮಕಕ್ಕೆ ಮುಂಚೆ, ಗ್ರಾಮ ಪಂಚಾಯತಿಯ ಸದಸ್ಯರಾಗಿ ಆಯ್ಕೆಯಾಗಿದ್ದ ವ್ಯಕ್ತಿಗಳು, ಯಾರಾದರೂ ಇದ್ದರೆ, ಅವರು ಗ್ರಾಮ ಪಂಚಾಯತಿಯ ಸದಸ್ಯರಾಗಿರುವುದು ನಿಂತುಹೋಗತಕ್ಕದ್ದು ಮತ್ತು ಆ ಗ್ರಾಮ ಪಂಚಾಯತಿಯ ಎಲ್ಲ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಂಥ ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

(4) ಆಡಳಿತ ಸಮಿತಿಯನ್ನು ಅಥವಾ ಆಡಳಿತಾಧಿಕಾರಿಯನ್ನು, ಈ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ರಚಿಸಿದ ಗ್ರಾಮ ಪಂಚಾಯತಿ ಎಂದು ಭಾವಿಸತಕ್ಕದ್ದು:

ಪರಂತು, (1)ನೇ ಉಪಪ್ರಕರಣದ ಅಡಿಯಲ್ಲಿ ಆಡಳಿತ ಸಮಿತಿಯು ಅಥವಾ ಆಡಳಿತಾಧಿಕಾರಿಯು ನೇಮಕಗೊಂಡ ತರುವಾಯ ಯಾವುದೇ ಸಮಯದಲ್ಲಿ ಡೆಪ್ಯುಟಿ ಕಮಿಷನರ್ ಅವರಿಗೆ, ಸದಸ್ಯರ ಚುನಾವಣೆ ಮೂಲಕ ಗ್ರಾಮ ಪಂಚಾಯತಿಯನ್ನು ಕ್ರಮಬದ್ಧವಾಗಿ ರಚಿಸಲು ಯಾವುದೇ ತೊಂದರೆಯಿಲ್ಲವೆಂದು ಮನದಟ್ಟಾದರೆ, ಡೆಪ್ಯುಟಿ ಕಮಿಷನರ್ ಅವರು, ಯಾವ ಪದಾವಧಿಗಾಗಿ ಆಡಳಿತ ಸಮಿತಿಯ ಸದಸ್ಯರನ್ನು ಅಥವಾ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿತ್ತೋ ಆ ಪದಾವಧಿಯು ಮುಕ್ತಾಯವಾಗಿಲ್ಲದಿದ್ದರೂ, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಸಂದರ್ಭಾನುಸಾರ, ಆಡಳಿತ ಸಮಿತಿಯ ಸದಸ್ಯರು ಅಥವಾ ಆಡಳಿತಾಧಿಕಾರಿಯು ಪದಧಾರಣ ಮಾಡುವುದು ನಿಂತುಹೋಗತಕ್ಕದ್ದು ಎಂದು ನಿರ್ದೇಶಿಸಬಹುದು.

**9. ಮತದಾನದ ಹಕ್ಕು.**- (1) ಸಂಬಂಧಪಟ್ಟ ಚುನಾವಣಾ ಕ್ಷೇತ್ರಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ಪ್ರತಿಯೊಬ್ಬ ಮತದಾರನೂ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಮತದಾರರ ಪಟ್ಟಿಯು ಜಾರಿಯಲ್ಲಿರುವಾಗ ಆ ಚುನಾವಣಾ ಕ್ಷೇತ್ರದಲ್ಲಿ ನಡೆಯುವಂಥ ಯಾವುದೇ ಚುನಾವಣೆಯಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರದಿರುವ ಯಾವ ವ್ಯಕ್ತಿಯೂ ಅಂಥ ಯಾವುದೇ ಚುನಾವಣೆಯಲ್ಲಿ ಮತ ನೀಡತಕ್ಕದ್ದಲ್ಲ.

(2) ಯಾವನೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿನ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರದಲ್ಲಿ ಅಥವಾ ಅದೇ ಚುನಾವಣಾ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚುಬಾರಿ ಮತ ನೀಡತಕ್ಕದ್ದಲ್ಲ ಮತ್ತು ಅವನು ಹಾಗೆ ಮಾಡಿದರೆ ಅವನ ಎಲ್ಲ ಮತಗಳು ಅಸಿಂಧುವಾಗತಕ್ಕದ್ದು.

[1][(3) ಪಂಚಾಯತಿಯ ಚುನಾವಣೆಯಲ್ಲಿ ಮತನೀಡುವುದು ಗ್ರಾಮ ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅದು ಕಡ್ಡಾಯವಾಗಿರತಕ್ಕದ್ದು. ಆದಾಗ್ಯೂ, (4)ನೇ ಉಪಪ್ರಕರಣದಲ್ಲಿ ಸೂಚಿಸಿದಂತೆ ಆತನು ತನ್ನ ಮತವನ್ನು ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ಚಲಾಯಿಸಲು ಸ್ವತಂತ್ರನಾಗಿರತಕ್ಕದ್ದು.

(4) ಚುನಾವಣಾ ಆಯುಕ್ತರು ಸೂಕ್ತ ಉಪಬಂಧವನ್ನು ಕಲ್ಪಿಸಿದರೆ, ಆತನು ಯಾವುದೇ ಅಭ್ಯರ್ಥಿಯ ಪರವಾಗಿ ಮತ ನೀಡಲು ಬಯಸದಿದ್ದ ಪಕ್ಷದಲ್ಲಿ, ಅರ್ಹ ಮತದಾರನು ತನ್ನ ಮತವನ್ನು ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ಚಲಾಯಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

**10. ಮತದಾರರ ಪಟ್ಟಿ.**– (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಚುನಾವಣಾ ಕ್ಷೇತ್ರದ ಅಂಥ ಭಾಗಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯನ್ನು ಅಂಥ ಗ್ರಾಮ ಪಂಚಾಯತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿ ಎಂದು ಭಾವಿಸತಕ್ಕದ್ದು.

(2) ಯಾವುದೇ ಗ್ರಾಮ ಪಂಚಾಯತಿಯ ಚುನಾವಣಾ ಕ್ಷೇತ್ರದಲ್ಲಿ ಚುನಾವಣೆಗಾಗಿ ನಾಮಪತ್ರಗಳನ್ನು ಸಲ್ಲಿಸಲು ಇರುವ ಕೊನೆಯ ದಿನಾಂಕದ ತರುವಾಯ ಮತ್ತು ಅಂಥ ಚುನಾವಣೆಯು, ಮುಕ್ತಾಯವಾಗುವುದಕ್ಕೆ ಮುಂಚೆ ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯಲ್ಲಿನ ಯಾವುದೇ ನಮೂದಿಗೆ ಮಾಡಿದ ತಿದ್ದುಪಡಿಯು ಸ್ಥಾನಪಲ್ಲಟವು ಅಥವಾ ಬಿಟ್ಟುಬಿಟ್ಟಿರುವುದು ಈ ಪ್ರಕರಣದ ಉದ್ದೇಶಕ್ಕಾಗಿ ಅಂಥ ಚುನಾವಣೆಗಾಗಿ ಮತದಾರರ ಪಟ್ಟಿಯ ಭಾಗವಾಗಿರತಕ್ಕದ್ದಲ್ಲ.

[1][(3) ಸಂಬಂಧಪಟ್ಟ ತಹಶೀಲ್ದಾರನು ಪ್ರತಿಯೊಂದು ಗ್ರಾಮ ಪಂಚಾಯತಿಯ ಚುನಾವಾಣಾ ಕ್ಷೇತ್ರಕ್ಕಾಗಿ ಮತದಾರರ ಪಟ್ಟಿಯನ್ನು ನಿಯಮಿಸಲಾದ ರೀತಿಯಲ್ಲಿ ತಯಾರಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿಯ ಕಾರ್ಯದರ್ಶಿಯು ಅಂಥ ಪಟ್ಟಿಯ ಪ್ರತಿಯೊಂದನ್ನು ಇಟ್ಟುಕೊಂಡು ಬರತಕ್ಕದ್ದು.][1]

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 21-09-1998ರಿಂದ ಪ್ರತಿಯೋಜಿಸಲಾಗಿದೆ.

**11. ಸದಸ್ಯತ್ವಕ್ಕೆ ಅರ್ಹತೆ.**– ಯಾವುದೇ ಗ್ರಾಮ ಪಂಚಾಯತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತನ್ನ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿ ಇರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅನರ್ಹಗೊಂಡಿದ್ದ ಹೊರತು, ಗ್ರಾಮ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದು:

ಪರಂತು, ಅನುಸೂಚಿತ ಜಾತಿಗಳಿಗಾಗಿ ಅಥವಾ ಅನುಸೂಚಿತ ಪಂಗಡಗಳಿಗಾಗಿ ಅಥವಾ ಹಿಂದುಳಿದ ವರ್ಗಗಳಿಗಾಗಿ ಅಥವಾ ಮಹಿಳೆಯರಿಗಾಗಿ ಮೀಸಲಿರಿಸಿದ ಸ್ಥಾನಗಳ ಸಂಬಂಧದಲ್ಲಿ, ಅಂಥ ವ್ಯಕ್ತಿಯು, ಸಂದರ್ಭಾನುಸಾರ, ಆ ಯಾವುದೇ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಅಥವಾ ಹಿಂದುಳಿದ ವರ್ಗಗಳ ವ್ಯಕ್ತಿ ಅಥವಾ ಮಹಿಳೆಯಾಗಿದ್ದ ಹೊರತು ಅಂಥ ಸ್ಥಾನಕ್ಕೆ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ.

**12. ಸದಸ್ಯರಾಗಲು ಅನರ್ಹತೆ.**- ಒಬ್ಬ ವ್ಯಕ್ತಿಯು, ಗ್ರಾಮ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು,-

(ಎ) ಅವನನ್ನು ರಾಜ್ಯ ವಿಧಾನಮಂಡಲಗಳಿಗೆ ನಡೆಯುವ ಚುನಾವಣೆಯ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಹಾಗೆ ಅನರ್ಹಗೊಳಿಸಿದ್ದರೆ:

ಪರಂತು, ಯಾವ ವ್ಯಕ್ತಿಯನ್ನು ಅವನು ಇಪ್ಪತ್ತೊಂದು ವರ್ಷ ವಯಸ್ಸಿನವನಾಗಿದ್ದರೆ, ಅವನು ಇಪ್ಪತ್ತೈದು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವನೆಂಬ ಕಾರಣಕ್ಕಾಗಿ ಅನರ್ಹಗೊಳಿಸತಕ್ಕದ್ದಲ್ಲ;

(ಬಿ) 1965ರ ಕರ್ನಾಟಕ ಅಬ್ಕಾರಿ ಅಧಿನಿಯಮದ (1966ರ ಕರ್ನಾಟಕ ಅದಿನಿಯಮ 21) ಅಡಿಯಲ್ಲಿನ ಅಪರಾಧದ ಸಂಬಂಧದಲ್ಲಿ ಕ್ರಿಮಿನಲ್ ನ್ಯಾಯಾಲಯವು ಅವನಿಗೆ ಮೂರು ತಿಂಗಳನ್ನು ಮೀರಿದ ಅವಧಿಯ ಕಾರವಾಸದ ಶಿಕ್ಷೆಯನ್ನು ವಿಧಿಸಿದ್ದರೆ, ಅಂಥ ಶಿಕ್ಷೆಯನ್ನು ನಂತರ, ವ್ಯತಿರಿಕ್ತಗೊಳಿಸಿರದಿದ್ದರೆ ಅಥವಾ ರದ್ದುಗೊಳಿಸಿರದಿದ್ದರೆ ಅಥವಾ ಆ ಅಪರಾಧವನ್ನು ಮನ್ನಿಸಿರದಿದ್ದರೆ; ಅಥವಾ

(ಸಿ) 1973ರ ದಂಡ ಪ್ರಕ್ರಿಯಾ ಸಂಹಿತೆಯ (ಕೇಂದ್ರಾಧಿನಿಯಮ 1974ರ 2) 110ನೇ ಪ್ರಕರಣದ ಅಡಿಯಲ್ಲಿ ಹೂಡಿದ ವ್ಯವಹರಣೆಗಳಲ್ಲಿ ಆ ಸಂಹಿತೆಯ 117ನೇ ಪ್ರಕರಣದ ಅಡಿಯಲ್ಲಿ ಅವನ ವಿರುದ್ಧ ಆದೇಶವನ್ನು ಮಾಡಿದ್ದರೆ, ಅಂಥ ಆದೇಶವನ್ನು ವ್ಯತಿರಿಕ್ತಗೊಳಿಸಿರದಿದ್ದರೆ, ರದ್ದುಗೊಳಿಸಿರದಿದ್ದರೆ; ಅಥವಾ

(ಡಿ) ಅವನನ್ನು ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿರುವ ಸೇವೆಯಿಂದ ವಜಾ ಮಾಡಿದ್ದರೆ; ಅಥವಾ

(ಇ) ಲೀಗಲ್ ಅಥವಾ ಮೆಡಿಕಲ್ ಪ್ರಾಕ್ಟೀಷನರ್ ಅಥವಾ ಚಾರ್ಟರ್ಡ್ ಅಕೌಂಟೆಂಟ್‌ನಾಗಿದ್ದು ಸಕ್ಷಮ ಪ್ರಾಧಿಕಾರಿಯ ಆದೇಶದ ಮೂಲಕ ಅವನನ್ನು ಆ ಪಟ್ಟಿಯಿಂದ ತೆಗೆದುಹಾಕಿದ್ದರೆ ಅಥವಾ ಅಮಾನತ್ತಿನಲ್ಲಿಟ್ಟಿದ್ದರೆ ಎರಡನೆಯ ಸಂದರ್ಭದಲ್ಲಿನ ಅನರ್ಹತೆಯು ಅಮಾನತ್ತಿನ ಅವಧಿಯಲ್ಲಿ ಜಾರಿಯಲ್ಲಿದ್ದರೆ; ಅಥವಾ

(ಎಫ್) ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯತ್ವದಿಂದ ಅವನನ್ನು ತೆಗೆದುಹಾಕಿದ್ದರೆ; ಅಥವಾ

(ಜಿ) ಅವನು, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ಘೋಷಿಸಿರುವಂಥ ಹುದ್ದೆಗಳ ಧಾರಕನನ್ನು ಅನರ್ಹಗೊಳಿಸತಕ್ಕದ್ದಲ್ಲವೆಂದು ಘೋಷಿಸಿರುವಂಥ ಅಂಥ ಹುದ್ದೆಗಳನ್ನು ಹೊರತುಪಡಿಸಿ, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿರುವ ಯಾವುದೇ ಸ್ಥಳೀಯ ಅಥವಾ ಯಾವುದೇ ಇತರ ಪ್ರಾಧಿಕಾರದಲ್ಲಿ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿದ್ದರೆ;

**ವಿವರಣೆ.**– ಈ ಖಂಡದ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಯು, ಅವನು ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನೆಂಬ ಕಾರಣದಿಂದಾಗಿಯೇ ಗ್ರಾಮ ಪಂಚಾಯತಿಯ ಅಡಿಯಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿರುವವನೆಂದು ಭಾವಿಸತಕ್ಕದ್ದಲ್ಲ;

(ಹೆಚ್) ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಹೊರತು, ಅವನು ಗ್ರಾಮ ಪಂಚಾಯತಿಯ ಆದೇಶದ ಮೂಲಕ ಮಾಡಿದ ಯಾವುದೇ ಕಾಮಗಾರಿಯಲ್ಲಿ ಅಥವಾ ಗ್ರಾಮ ಪಂಚಾಯತಿಯೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರ ಮೂಲಕ, ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಉದ್ಯೋಗದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; [1][ಅಥವಾ ಗ್ರಾಮ ಪಂಚಾಯತಿಯ ಪರವಾಗಿ ಯಾವುದೇ ಅಂಥ ಕಾಮಗಾರಿ ಅಥವಾ ಕರಾರನ್ನು ಅಥವಾ ಗ್ರಾಮ ಪಂಚಾಯತಿಗೆ ಸರಕುಗಳನ್ನು ಮತ್ತು ಸೇವೆಗಳನ್ನು ಪೂರೈಸುವುದಕ್ಕಾಗಿ ಯಾವುದೇ ಕರಾರನ್ನು ಪಡೆದುಕೊಳ್ಳುವಲ್ಲಿ ಅಥವಾ ನಿರ್ವಹಿಸುವಲ್ಲಿ ಆತನು

ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನಾಗಿಯೇ ಆಗಲಿ ಅಥವಾ ತನ್ನ ಏಜೆಂಟ್, ಪಾಲುದಾರ ಅಥವಾ ನೌಕರನ ಮೂಲಕವಾಗಿಯೇ ಆಗಲಿ ತೊಡಗಿದ್ದರೆ;][1] ಅಥವಾ

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

(ಐ) ಗ್ರಾಮ ಪಂಚಾಯತಿಯ ಪರವಾಗಿ ವೇತನ ಪಡೆಯುವ ಲೀಗಲ್ ಪ್ರಾಕ್ಟೀಷನರ್ ಆಗಿ ನಿಯೋಜಿತನಾಗಿದ್ದರೆ ಅಥವಾ ಗ್ರಾಮ ಪಂಚಾಯತಿಯ ವಿರುದ್ಧ ಲೀಗಲ್ ಪ್ರಾಕ್ಟೀಷನರ್ ಆಗಿ ಉದ್ಯೋಗವನ್ನು ಅಂಗೀಕರಿಸಿದ್ದರೆ; ಅಥವಾ

[1][(ಜೆ) ತನ್ನ ಕುಟುಂಬದ ಸದಸ್ಯರುಗಳ ಉಪಯೋಗಕ್ಕಾಗಿ ಶೌಚಗೃಹವನ್ನು ಒದಗಿಸಿರದಿದ್ದರೆ:

[2][ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಒಬ್ಬ ವ್ಯಕ್ತಿಯು ತನ್ನ ಉಮೇದುವಾರಿಕೆಯನ್ನು ಸಲ್ಲಿಸುವ ಸಮಯದಲ್ಲಿ, ಒಬ್ಬ ಸದಸ್ಯನಾಗಿ ತನ್ನ ಹುದ್ದೆಯ ಅವಧಿಯ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ, ತನ್ನ ಕುಟುಂಬದ ಸದಸ್ಯರ ಉಪಯೋಗಕ್ಕಾಗಿ ಶೌಚ ಗೃಹವನ್ನು ನಿರ್ಮಿಸುವುದಾಗಿ ಒಂದು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದರೆ ಹಾಗೂ ಸದಸ್ಯನಾದ ತರುವಾಯ ಅಂಥ ಮುಚ್ಚಳಿಕೆಯಲ್ಲಿರುವುದನ್ನು ಪಾಲಿಸಿದರೆ, ಅವನಿಗೆ ಅನ್ವಯವಾಗತಕ್ಕದ್ದಲ್ಲ.][2]][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997 ರಿಂದ ಸೇರಿಸಲಾಗಿದೆ.
2. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 25-04-2000 ದಿಂದ ಪ್ರತಿಯೋಜಿಸಲಾಗಿದೆ.

[1][(ಕೆ)][1] ಈ ಅಧಿನಿಯಮದ ಅಡಿಯಲ್ಲಿ, ಗ್ರಾಮ ಪಂಚಾಯತಿಗೆ ಅವನಿಂದ ಯಾವುದೇ ಬಗೆಯ ಬಾಕಿಗಳು ಬರಬೇಕಾಗಿದ್ದರೆ;

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಮರು ಸಂಖ್ಯೆ ನೀಡಲಾಗಿದೆ.

[1][(ಎಲ್) ಸದಸ್ಯನು ತನ್ನ ಸದಸ್ಯತ್ವದ ಅವಧಿಯಲ್ಲಿ ಪಂಚಾಯತ್‌ನ ನಿಧಿಯ ಅಥವಾ ಇತರ ಆಸ್ತಿಗಳ ದುರುಪಯೋಗ ಅಥವಾ ಪಂಚಾಯತ್‌ನ ಯಾವುದೇ ಕಾರ್ಯಕ್ರಮವನ್ನು, ಯೋಜನೆಯನ್ನು ಅಥವಾ ಪ್ರಾಜೆಕ್ಟನ್ನು ಜಾರಿಗೊಳಿಸುವಾಗ ಪಂಚಾಯತ್ ಸದಸ್ಯನಾಗಿ ಅವನು ತನ್ನ ಅಧಿಕಾರವನ್ನು ಅಥವಾ ಪ್ರಾಧಿಕಾರವನ್ನು ದುರುಪಯೋಗ ಅಥವಾ ದುರ್ಬಳಕೆ ಮಾಡಿಕೊಳ್ಳುವ ಯಾವುದೇ ಕೃತ್ಯದಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿರುವ ತಪ್ಪಿತಸ್ಥನೆಂದು ಕಂಡುಬಂದರೆ.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

-ಅನರ್ಹನಾಗತಕ್ಕದ್ದು.

ಪರಂತು,-

(ಎ) (ಸಿ) ಖಂಡದಲ್ಲಿನ ಅನರ್ಹತೆಯು, ಭದ್ರತೆಯನ್ನು ಒದಗಿಸಲು ವ್ಯಕ್ತಿಗೆ ಆದೇಶಿಸಿದಂಥ ಅವಧಿಯ ಮುಕ್ತಾಯದ ತರುವಾಯ, ಜಾರಿಯಲ್ಲಿರುವುದು ನಿಂತುಹೋಗುತ್ತದೆ;

(ಬಿ) (ಬಿ), (ಡಿ) ಅಥವಾ (ಇ) ಖಂಡಗಳಲ್ಲಿನ, ಅನರ್ಹತೆಯು, ಅಂಥ ಶಿಕ್ಷೆಯ ಅಥವಾ ಹಾಗೆ ವಜಾ ಮಾಡಿದ ಅಥವಾ ಪಟ್ಟಿಯಿಂದ ತೆಗೆದುಹಾಕಿದ ದಿನಾಂಕದಿಂದ [1][ಆರು ವರ್ಷ][1]ಗಳು ಮುಕ್ತಾಯವಾದ ತರುವಾಯ ಅಥವಾ ಸರ್ಕಾರವು ಇನ್ನು ಮುಂಚೆಯೇ ಆದೇಶ ಮಾಡಿದರೆ ಜಾರಿಯಲ್ಲಿರುವುದು ನಿಂತುಹೋಗುತ್ತದೆ;

(ಸಿ) (ಎಫ್) ಖಂಡದಲ್ಲಿರುವ ಅನರ್ಹತೆಯು, ಹಾಗೆ ತೆಗೆದುಹಾಕಿದ ದಿನಾಂಕದಿಂದ [1][ಆರು ವರ್ಷ][1]ಗಳು ಮುಕ್ತಾಯವಾದ ತರುವಾಯ ಜಾರಿಯಲ್ಲಿರುವುದು ನಿಂತುಹೋಗುತ್ತದೆ;

(ಡಿ) ಒಬ್ಬ ವ್ಯಕ್ತಿಯು, (ಹೆಚ್) ಖಂಡದಡಿಯಲ್ಲಿನ ಅನರ್ಹತೆಗೆ, ಆತನು,-

(i) ಗ್ರಾಮ ಪಂಚಾಯತಿಯೊಂದಿಗೆ ಅಥವಾ ಗ್ರಾಮ ಪಂಚಾಯತಿಯ ಪರವಾಗಿ ಕರಾರು ಮಾಡಿಕೊಳ್ಳುವ ಅಥವಾ ಅದರಿಂದ ಅಥವಾ ಅದರ ಪರವಾಗಿ ನಿಯೋಜಿತವಾದ ಯಾವುದೇ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿ ಷೇರನ್ನು ಅಥವಾ 1960ರ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದ (ಕರ್ನಾಟಕ ಅಧಿನಿಯಮ 1960ರ 17) ಅಡಿಯಲ್ಲಿ ನೋಂದಾಯಿತವಾದ ಯಾವುದೇ ಸಂಘದಲ್ಲಿ ಅಥವಾ ಯಾವುದೇ ಸಹಕಾರ ಸಂಘದಲ್ಲಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ii) ಗ್ರಾಮ ಪಂಚಾಯಿಯ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಪ್ರಕಟಿಸಿರುವಂಥ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿ ಹೊಂದಿರುವ; ಅಥವಾ

(iii) ಡಿಬೆಂಚರು ಪತ್ರವನ್ನು ಹೊಂದಿರುವ ಅಥವಾ ಗ್ರಾಮ ಪಂಚಾಯತಿಯು ಅಥವಾ ಅದರ ಪರವಾಗಿ ಎತ್ತಿದ ಯಾವುದೇ ಸಾಲದಲ್ಲಿ ಅನ್ಯಥಾ ಸಂಬಂಧಪಟ್ಟಿರುವ,

-ಕಾರಣದಿಂದಾಗಿಯೇ ಗುರಿಯಾಗಿದ್ದಾನೆಂದು ಭಾವಿಸತಕ್ಕದ್ದಲ್ಲ.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**13. ಸದಸ್ಯರ ಸ್ಥಾನವು ಖಾಲಿಯಾಗುವುದು.-** (1) ಗ್ರಾಮ ಪಂಚಾಯತಿಯ ಸದಸ್ಯನು,-

(ಎ) 12ನೇ ಪ್ರಕರಣದಲ್ಲಿ ಹೇಳಿರುವ ಯಾವುವೇ ಅನರ್ಹತೆಗಳಿಗೊಳಗಾಗಿದ್ದರೆ ಅಥವಾ ಒಳಗಾದರೆ; ಅಥವಾ

(ಬಿ) 53ನೇ ಪ್ರಕರಣದ (4) ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮತ ಚಲಾಯಿಸಿದರೆ ಅಥವಾ ಚರ್ಚೆಯಲ್ಲಿ ಭಾಗವಹಿಸಿದರೆ; ಅಥವಾ

[2][XXX][2]

-ಸಂದರ್ಭಾನುಸಾರ ಅವನ ಸ್ಥಾನವು ಖಾಲಿಯಾಗಿರುವುದಾಗಿ ಅಥವಾ ಖಾಲಿಯಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, ಗೈರುಹಾಜರಾಗಲು ಅನುಮತಿಗಾಗಿ ಸದಸ್ಯನು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಮತ್ತು ಅರ್ಜಿಯ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ಆ ಅರ್ಜಿಯ ಸಂಬಂಧದಲ್ಲಿ ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ಗ್ರಾಮ ಪಂಚಾಯತಿಯು ತಪ್ಪಿದಲ್ಲಿ, ಕೋರಲಾದ ಅನುಮತಿಯನ್ನು ಗ್ರಾಮ ಪಂಚಾಯತಿಯು ಮಂಜೂರ್ಮಾಡಿರುವುದಾಗಿ ಭಾವಿಸತಕ್ಕದ್ದು.

(2) ಒಬ್ಬ ವ್ಯಕ್ತಿಯು, (1)ನೇ ಉಪ-ಪ್ರಕರಣದ ಅಡಿಯಲ್ಲಿನ ಅನರ್ಹತೆಗಳಿಗೊಳಗಾಗಿದ್ದಾನೆಯೇ ಅಥವಾ ಒಳಗಾಗಿರುವನೇ ಎಂಬ ಪ್ರಶ್ನೆ ಉದ್ಭವಿಸಿದರೆ, [1][ರಾಜ್ಯ ಚುನಾವಣಾ ಆಯೋಗವು][1] [1][ಆದಾಗಿಯೇ ಅಥವಾ ಅದಕ್ಕೆ ಸಲ್ಲಿಸಿರುವ ವರದಿಯ ಆಧಾರದ ಮೇಲೆ][1] ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಆ ಪ್ರಶ್ನೆಯನ್ನು ತೀರ್ಮಾನಿಸಬಹುದು.

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.
2. 2017ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 12-07-2017ರಿಂದ ಬಿಟ್ಟುಬಿಡಲಾಗಿದೆ.

**14. ಏಕಕಾಲದ ಸದಸ್ಯತ್ವದ ನಿಷೇದ.-** (1) ಒಬ್ಬ ವ್ಯಕ್ತಿಯು, ಗ್ರಾಮ ಪಂಚಾಯತಿಯ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಿಂದ ಚುನಾಯಿತನಾದರೆ ಅವನು, ತಾನು ಸಹಿ ಹಾಕಿರುವ ಲಿಖಿತ ನೋಟೀಸನ್ನು ಡೆಪ್ಯುಟಿ ಕಮಿಷನರಿಗೆ ನಿರ್ದಿಷ್ಟ ಪಡಿಸಿರುವ ಕಾಲದೊಳಗೆ ರವಾನಿಸಿ, ತಾನು ಸೇವೆಸಲ್ಲಿಸತಕ್ಕಂಥ ಯಾವುದೇ ಒಂದು ಚುನಾವಣಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು ಮತ್ತು ಆ ಆಯ್ಕೆಯು ಅಂತಿಮವಾದುದಾಗಿರತಕ್ಕದ್ದು.

(2) ವ್ಯಕ್ತಿಯು, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಆಯ್ಕೆಯನ್ನು ಮಾಡದಿದ್ದರೆ, ಡೆಪ್ಯುಟಿ ಕಮಿಷನರ್ ಅವರು, ಚೀಟಿ ಎತ್ತುವ ಮೂಲಕ ಅದನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಸೇವೆ ಸಲ್ಲಿಸತಕ್ಕ ಚುನಾವಣಾ ಕ್ಷೇತ್ರವನ್ನು ಅಧಿಸೂಚಿಸತಕ್ಕದ್ದು.

(3) ಅಂಥ ವ್ಯಕ್ತಿಯು, ಸಂದರ್ಭಾನುಸಾರ, ಹಾಗೆ ಆಯ್ಕೆ ಮಾಡಿಕೊಂಡ ಅಥವಾ ಅಧಿಸೂಚಿಸಿದ ಚುನಾವಣಾ ಕ್ಷೇತ್ರಕ್ಕಾಗಿ ಮಾತ್ರವೇ ಚುನಾಯಿತನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಆ ರೀತಿ ಇತರ ಚುನಾವಣಾ ಕ್ಷೇತ್ರಕ್ಕೆ ಅಥವಾ ಚುನಾವಣಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಖಾಲಿ ಸ್ಥಾನವನ್ನು ಅಥವಾ ಖಾಲಿ ಸ್ಥಾನಗಳನ್ನು ಚುನಾವಣೆಯ ಮೂಲಕ ಭರ್ತಿ ಮಾಡತಕ್ಕದ್ದು.

**15. ಚುನಾವಣಾ ತಕರಾರು ಅರ್ಜಿ.-** (1) ಗ್ರಾಮ ಪಂಚಾಯತಿಯ ಸ್ಥಾನವನ್ನು ಅಥವಾ ಸ್ಥಾನಗಳನ್ನು ಭರ್ತಿ ಮಾಡಲು ನಡೆಸಿದ ಯಾವುದೇ ಚುನಾವಣೆಯನ್ನು, 19ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಮತ್ತು 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಅಂಥ ಚುನಾವಣೆಯಲ್ಲಿನ ಯಾವನೇ ಅಭ್ಯರ್ಥಿಯು ಅಥವಾ ಅಂಥ ಚುನಾವಣೆಯಲ್ಲಿ ಮತ ನೀಡಲು ಅರ್ಹನಾದ ಯಾವನೇ ಮತದಾರನು, ಖರ್ಚುಗಳಿಗೆ ಭದ್ರತೆಯಾಗಿ ಐದುನೂರು ರೂಪಾಯಿಗಳ ಠೇವಣಿ ಇಟ್ಟು ಆ ಚುನಾವಣೆಯಲ್ಲಿ ಚುನಾಯಿತನಾದ ಅಭ್ಯರ್ಥಿಯ ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ದಿನಾಂಕದಿಂದ, ಆದರೆ, ಅದಕ್ಕಿಂತಲೂ ಮುಂಚಿತವಾಗಿ ಅಲ್ಲದೆ, ಆ ಚುನಾವಣೆಯಲ್ಲಿ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಚುನಾಯಿತರಾಗಿದ್ದರೆ ಮತ್ತು ಅವರ ಚುನಾವಣಾ ಫಲಿತಾಂಶಗಳ ಘೋಷಣೆಯ ದಿನಾಂಕಗಳು ಬೇರೆ ಬೇರೆಯಾಗಿದ್ದರೆ ಆ ದಿನಾಂಕಗಳ ಕೊನೆಯ ದಿನಾಂಕದಿಂದ ಮೂವತ್ತು ದಿವಸಗಳ ಒಳಗೆ, ಸಂಬಂಧಪಟ್ಟ ಪಂಚಾಯತಿಯ ಪ್ರದೇಶವು ಅಥವಾ ಸಂಬಂಧಪಟ್ಟ ಪಂಚಾಯತಿ ಪ್ರದೇಶದ ಬಹಳಷ್ಟು ಭಾಗವು ಯಾರ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯ ಒಳಗೆ ಇರುವುದೋ ಆ [2][[1][ಗೊತ್ತುಪಡಿಸಿದ ನ್ಯಾಯಾಲಯ]][1]]2ಕ್ಕೆ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸುವ ಮೂಲಕ ಹೊರತು ಬೇರೆ ಯಾವ ರೀತಿಯಲ್ಲೂ ಪ್ರಶ್ನಿಸತಕ್ಕದ್ದಲ್ಲ.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(2) ಅರ್ಜಿದಾರನು, ತನ್ನ ಅರ್ಜಿಗೆ ಪ್ರತಿವಾದಿಗಳಾಗಿ,-

(ಎ) ಅರ್ಜಿದಾರನು, ಚುನಾಯಿತರಾದ ಅಭ್ಯರ್ಥಿಗಳೆಲ್ಲರ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವೆಂದು, ಘೋಷಿಸಬೇಕೆಂದು ಕೇಳುವುದರ ಜೊತೆಗೆ ತಾನು ಅಥವಾ ಯಾವನೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸಬೇಕೆಂದು ಸಹ ಕೇಳಿದ್ದರೆ, ಅರ್ಜಿದಾರನನ್ನು ಹೊರತುಪಡಿಸಿ, ಸ್ಪರ್ಧಿಸಿದ ಇತರ ಎಲ್ಲ ಅಭ್ಯರ್ಥಿಗಳನ್ನು ಮತ್ತು ಯಾವುದೇ ಅಂಥ ಇನ್ನೊಂದು ಘೋಷಣೆಯನ್ನು ಕೇಳಿಲ್ಲದಿದ್ದರೆ, ಚುನಾಯಿತರಾದ ಎಲ್ಲ ಅಭ್ಯರ್ಥಿಗಳನ್ನು; ಮತ್ತು

(ಬಿ) ಅರ್ಜಿಯಲ್ಲಿ ಯಾವ ಅಭ್ಯರ್ಥಿಯ ವಿರುದ್ಧ ಯಾವುದೇ ಭ್ರಷ್ಟಾಚಾರದ ಆರೋಪವನ್ನು ಮಾಡಲಾಗಿದೆಯೋ ಆ ಯಾವನೇ ಇತರ ಅಭ್ಯರ್ಥಿಯನ್ನು,

-ಸೇರಿಸಿಕೊಳ್ಳತಕ್ಕದ್ದು.

(3) ಪ್ರತಿಯೊಂದು ಚುನಾವಣಾ ತಕರಾರು ಅರ್ಜಿಯಲ್ಲಿ ಎಷ್ಟು ಜನ ಪ್ರತಿವಾದಿಗಳನ್ನು ಹೇಳಲಾಗಿದೆಯೋ ಅದರ ಅಷ್ಟೇ ಪ್ರತಿಗಳು ಆ ಅರ್ಜಿಯ ಜತೆ ಇರತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪ್ರತಿಗೆ ಅರ್ಜಿದಾರನು ಅದು ಅರ್ಜಿಯ ಯಥಾಪ್ರತಿಯೆಂದು ದೃಢೀಕರಿಸಿ ಸಹಿ ಹಾಕಿರತಕ್ಕದ್ದು.

**ವಿವರಣೆ.-** "ಚುನಾಯಿತನಾದ ಅಭ್ಯರ್ಥಿ" ಪದಾವಳಿಗೆ ಕ್ರಮಬದ್ಧವಾಗಿ ಚುನಾಯಿತನಾಗಿರುವನೆಂದು ಘೋಷಿತನಾದ ಅಭ್ಯರ್ಥಿ ಎಂದು ಅರ್ಥ.

**16. ತಕರಾರು ಅರ್ಜಿಯ ಒಳಾಂಶಗಳು ಮತ್ತು ಕೋರಬಹುದಾದ ಪರಿಹಾರ.-** (1) ಚುನಾವಣಾ ತಕರಾರು ಅರ್ಜಿಯಲ್ಲಿ,-

(ಎ) ಅರ್ಜಿದಾರನು ಆಧರಿಸುವಂಥ ಮುಖ್ಯ ಸಂಗತಿಗಳ ಸಂಕ್ಷಿಪ್ತ ನಿರೂಪಣೆ ಇರತಕ್ಕದ್ದು;

(ಬಿ) ಯಾವ ಪಕ್ಷಕಾರರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಲಾಗಿದೆಯೋ ಆ ಪಕ್ಷಕಾರರ ಹೆಸರುಗಳು ಮತ್ತು ಅಂಥ ಪ್ರತಿಯೊಂದು ಭ್ರಷ್ಟಾಚಾರವನ್ನು ಮಾಡಿದ ದಿನಾಂಕ ಮತ್ತು ಸ್ಥಳದ ಬಗ್ಗೆ ಸಾಧ್ಯವಾದಷ್ಟು ಪೂರ್ಣ ವಿವರಣೆ ಸೇರಿದಂತೆ, ಅರ್ಜಿದಾರನು ಆರೋಪಿಸುವ ಯಾವುದೇ ಅಂಥ ಭ್ರಷ್ಟಾಚಾರದ ಪೂರ್ಣ ವಿವರಗಳ ನಿರೂಪಣೆ ಇರತಕ್ಕದ್ದು;

(ಸಿ) ಅರ್ಜಿದಾರನು ಅದಕ್ಕೆ ಸಹಿ ಹಾಕಿರತಕ್ಕದ್ದು ಮತ್ತು ವಾದ ಪ್ರತಿವಾದ ಪತ್ರಗಳ ಸತ್ಯಾಪನೆಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (ಕೇಂದ್ರಾಧಿನಿಯಮ 1908ರ 5) ರಲ್ಲಿ ವಿಧಿಸಿರುವ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡಿರತಕ್ಕದ್ದು:

ಪರಂತು, ಅರ್ಜಿದಾರನು ಯಾವುದೇ ಭ್ರಷ್ಟಾಚಾರವನ್ನು ಆರೋಪಿಸಿದರೆ, ಅರ್ಜಿಯೊಂದಿಗೆ, ಅಂಥ ಭ್ರಷ್ಟಾಚಾರದ ಆರೋಪ ಮತ್ತು ಅದರ ವಿವರಣೆಗಳನ್ನು ಸಮರ್ಥಿಸುವ ಗೊತ್ತುಪಡಿಸಿರುವ ನಮೂನೆಯಲ್ಲಿ ಶಪಥ ಪತ್ರವು ಸಹ ಇರತಕ್ಕದ್ದು.

(2) ಅರ್ಜಿಯ ಯಾವುದೇ ಅನುಸೂಚಿ ಅಥವಾ ಅನುಬಂಧಕ್ಕೂ ಸಹ ಅರ್ಜಿದಾರನು ಸಹಿ ಹಾಕತಕ್ಕದ್ದು ಮತ್ತು ಅರ್ಜಿಯನ್ನು ಸತ್ಯಾಪನೆ ಮಾಡಿದ ರೀತಿಯಲ್ಲಿ ಅದನ್ನೂ ಸತ್ಯಾಪನೆ ಮಾಡತಕ್ಕದ್ದು.

(3) ಅರ್ಜಿದಾರನು ಚುನಾಯಿತನಾದ ಎಲ್ಲ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವೆಂದು ಘೋಷಿಸಬೇಕೆಂದು ಕೋರುವುದರ ಜೊತೆಗೆ, ತಾನು ಅಥವಾ ಯಾವನೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿರುವನೆಂಬ ಹೆಚ್ಚಿನ ಘೋಷಣೆಯನ್ನು ಕೋರಬಹುದು.

**17. ಚುನಾವಣಾ ತಕರಾರು ಅರ್ಜಿಯ ವಿಚಾರಣೆ.-** (1) [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ವು, 15ನೇ ಪ್ರಕರಣದ ಉಪಬಂಧಗಳನ್ನು ಪಾಲಿಸದಿರುವ ಚುನಾವಣಾ ತಕರಾರು ಅರ್ಜಿಗಳನ್ನು ವಜಾ ಮಾಡತಕ್ಕದ್ದು.

**ವಿವರಣೆ.-** ಈ ಉಪಪ್ರಕರಣದ ಅಡಿಯಲ್ಲಿ ಚುನಾವಣಾ ತಕರಾರು ಅರ್ಜಿಯನ್ನು ವಜಾ ಮಾಡುವ [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ವು ಆದೇಶವನ್ನು, 18ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿ ಮಾಡಿದ ಆದೇಶವೆಂದು ಭಾವಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(2) ಒಂದೇ ಚುನಾವಣೆಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಚುನಾವಣಾ ತಕರಾರು ಅರ್ಜಿಗಳನ್ನು [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ಕ್ಕೆ ಸಲ್ಲಿಸಿರುವಲ್ಲಿ, [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ವು ತಮ್ಮ ವಿವೇಚನೆಯ ಮೇರೆಗೆ ಅವುಗಳನ್ನು ಪ್ರತ್ಯೇಕವಾಗಿ ಅಥವಾ ಒಂದು ಅಥವಾ ಹೆಚ್ಚಿನ ಗುಂಪುಗಳಲ್ಲಿ ವಿಚಾರಣೆ ಮಾಡಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(3) ಈಗಾಗಲೇ ಪ್ರತಿವಾದಿಯಾಗಿರದ ಯಾವನೇ ಅಭ್ಯರ್ಥಿಯು, ವಿಚಾರಣೆಯ ಪ್ರಾರಂಭದ ದಿನಾಂಕದಿಂದ ಹದಿನಾಲ್ಕು ದಿವಸಗಳೊಳಗೆ [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ಕ್ಕೆ, ಅವನು ಮಾಡಿಕೊಂಡ ಅರ್ಜಿಯ ಮೇಲೆ ಮತ್ತು ಖರ್ಚುಗಳಿಗಾಗಿ ಭದ್ರತೆಯ ಬಗ್ಗೆ ಆ [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ವು ಮಾಡಬಹುದಾದಂಥ ಯಾವುದೇ ಆದೇಶಕ್ಕೊಳಪಟ್ಟು ಪ್ರತಿವಾದಿಯಾಗಿ ಸೇರಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ, ತಕರಾರು ಅರ್ಜಿಯ ವಿಚಾರಣೆಯು, ಪ್ರತಿವಾದಿಗಳು [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ವು ಮುಂದೆ ಹಾಜರಾಗಲು ಮತ್ತು ಅರ್ಜಿಯಲ್ಲಿ ಮಾಡಿಕೊಂಡ ಕೋರಿಕೆಗೆ ಅಥವಾ ಕೋರಿಕೆಗಳಿಗೆ ಉತ್ತರಿಸಲು ನಿಗದಿಪಡಿಸಿದ ದಿನಾಂಕದಂದು ಪ್ರಾರಂಭವಾಗುವುದೆಂದು ಭಾವಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(4) [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ವು, ಖರ್ಚುಗಳ ಸಂಬಂಧದಲ್ಲಿ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ಸೂಕ್ತವೆಂದು ತಾವು ಭಾವಿಸಬಹುದಾದಂಥ ನಿಬಂಧನೆಗಳನ್ನು ವಿಧಿಸಿ, ತಮ್ಮ ಅಭಿಪ್ರಾಯದಲ್ಲಿ, ಅರ್ಜಿಯ ನಿಷ್ಪಕ್ಷಪಾತ ಮತ್ತು ಪರಿಣಾಮಕಾರಿ ವಿಚಾರಣೆಯಾಗುವುದನ್ನು ಖಾತ್ರಿ ಮಾಡಿಕೊಳ್ಳುವುದಕ್ಕೆ ಅವಶ್ಯವಾಗಬಹುದಾದಂಥ ರೀತಿಯಲ್ಲಿ, ಅರ್ಜಿಯಲ್ಲಿ ಆರೋಪಿಸಲಾದ ಯಾವುವೇ ಭ್ರಷ್ಟಾಚಾರದ ವಿವರಗಳನ್ನು, ತಿದ್ದುಪಡಿ ಮಾಡಲು ಅಥವಾ ವಿಶದೀಕರಿಸಲು ಅನುಮತಿ ಕೊಡಬಹುದು. ಆದರೆ, ಆ ಅರ್ಜಿಯಲ್ಲಿ ಹಿಂದೆ ಆರೋಪಿಸಿಲ್ಲದ ಭ್ರಷ್ಟಾಚಾರದ ವಿವರಗಳನ್ನು ಸೇರಿಸುವ ಪರಿಣಾಮವನ್ನು ಹೊಂದಿರುವಂಥ ಯಾವುದೇ ತಿದ್ದುಪಡಿಗೆ ಅನುಮತಿ ಕೊಡತಕ್ಕದ್ದಲ್ಲ.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(5) ಚುನಾವಣಾ ತಕರಾರು ಅರ್ಜಿಯ ವಿಚಾರಣೆಯನ್ನು, ದಾಖಲ್ಮಾಡಬೇಕಾದ ಕಾರಣಗಳಿಗಾಗಿ ಆ ವಿಚಾರಣೆಯನ್ನು ಮಾರನೆಯ ದಿನವನ್ನು ಮೀರಿ ಮುಂದೂಡುವುದು ಅವಶ್ಯವೆಂದು [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ಕ್ಕೆ ಕಂಡುಬಂದ ಹೊರತು, ಆ ವಿಚಾರಣೆಗೆ ಸಂಬಂಧಿಸಿದಂತೆ ನ್ಯಾಯೋದ್ದೇಶದೊಂದಿಗೆ ಕಾರ್ಯಸಾಧ್ಯವಾದಷ್ಟುಮಟ್ಟಿಗೆ ಸುಸಂಗತವಾಗುವ ಹಾಗೆ ಅದು ಮುಕ್ತಾಯವಾಗುವವರೆಗೆ, ದಿನ ದಿನವೂ ಮುಂದುವರಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(6) ಪ್ರತಿಯೊಂದು ಚುನಾವಣಾ ತಕರಾರು ಅರ್ಜಿಯನ್ನು ಸಾಧ್ಯವಾದಷ್ಟು ಶೀಘ್ರವಾಗಿ ವಿಚಾರಣೆ ಮಾಡತಕ್ಕದ್ದು ಮತ್ತು ವಿಚಾರಣೆಗಾಗಿ ಚುನಾವಣಾ ತಕರಾರು ಅರ್ಜಿಯನ್ನು [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2] ಕ್ಕೆ ಸಲ್ಲಿಸಿದ ದಿನಾಂಕದಿಂದ ಆರು ತಿಂಗಳೊಳಗೆ ವಿಚಾರಣೆಯನ್ನು ಮುಕ್ತಾಯಗೊಳಿಸಲು ಪ್ರಯತ್ನಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(7) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪ್ರತಿಯೊಂದು ಚುನಾವಣಾ ತಕರಾರು ಅರ್ಜಿಯನ್ನು ಸಾಧ್ಯವಾದಷ್ಟು ಮಟ್ಟಿಗೆ, 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (ಕೇಂದ್ರಾಧಿನಿಯಮ 1908ರ 5) ಅಡಿಯಲ್ಲಿ ದಾವೆಗಳ ವಿಚಾರಣೆಗೆ ಅನ್ವಯವಾಗುವ ಕಾರ್ಯವಿಧಾನಕ್ಕನುಸಾರವಾಗಿ, [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2]ಗಳು ವಿಚಾರಣೆ ಮಾಡತಕ್ಕದ್ದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

ಪರಂತು, [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ವು, ಅರ್ಜಿಯ ತೀರ್ಮಾನಕ್ಕಾಗಿ ಯಾವನೇ ಸಾಕ್ಷಿದಾರನ ಅಥವಾ ಸಾಕ್ಷಿದಾರರ ಸಾಕ್ಷವು ಮುಖ್ಯವಾದುದಲ್ಲವೆಂದು ಅಥವಾ ಅಂಥ ಸಾಕ್ಷಿಯನ್ನು ಅಥವಾ ಸಾಕ್ಷಿದಾರರನ್ನು ಕರೆತಂದಿರುವ ಪಕ್ಷಕಾರನು, ಕ್ಷುಲ್ಲಕ ಕಾರಣಗಳ ಮೇಲೆ ಅಥವಾ ವ್ಯವಹರಣೆಯನ್ನು ವಿಳಂಬಗೊಳಿಸುವ ದೃಷ್ಟಿಯಿಂದ ಹಾಗೆ ಮಾಡುತ್ತಿರುವನೆಂದು ಅಭಿಪ್ರಾಯಪಟ್ಟರೆ, ಅವರು ಕಾರಣಗಳನ್ನು ದಾಖಲ್ಮಾಡಿ ಅಂಥ ಸಾಕ್ಷಿದಾರನನ್ನು ಅಥವಾ ಸಾಕ್ಷಿದಾರರನ್ನು ನಿರಾಕರಿಸುವ ವಿವೇಚನೆಯನ್ನು ಹೊಂದಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(8) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, 1872ರ ಭಾರತ ಸಾಕ್ಷ್ಯ ಅಧಿನಿಯಮದ ಉಪಬಂಧಗಳು ಚುನಾವಣಾ ತಕರಾರು ಅರ್ಜಿಯ ವಿಚಾರಣೆಗೆ ಎಲ್ಲ ರೀತಿಯಲ್ಲಿ ಅನ್ವಯವಾಗುವುದೆಂದು ಭಾವಿಸತಕ್ಕದ್ದು.

(9) ಯಾವುದೇ ಅಧಿನಿಯಮದಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಯಾವುದೇ ದಸ್ತಾವೇಜು ಚುನಾವಣಾ ತಕರಾರು ಅರ್ಜಿಯ ವಿಚಾರಣೆಯಲ್ಲಿ, ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪು ಹಾಕಿಲ್ಲವೆಂಬ ಅಥವಾ ಅದನ್ನು ನೋಂದಾಯಿಸಿಲ್ಲವೆಂಬ ಕಾರಣದಿಂದಾಗಿ ಸಾಕ್ಷ್ಯದಲ್ಲಿ ಅನಂಗೀಕಾರಾರ್ಹವಾಗತಕ್ಕದ್ದಲ್ಲ.

**18. [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2]ದ ತೀರ್ಮಾನ.-** (1) ಚುನಾವಣಾ ತಕರಾರು ಅರ್ಜಿಯ ವಿಚಾರಣೆಯು ಮುಕ್ತಾಯವಾದಾಗ, [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ವು,-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(ಎ) ಚುನಾವಣಾ ತಕರಾರು ಅರ್ಜಿಯನ್ನು ವಜಾ ಮಾಡುವ; ಅಥವಾ

(ಬಿ) ಚುನಾಯಿತರಾದ ಎಲ್ಲ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವೆಂದು ಘೋಷಿಸುವ; ಅಥವಾ

(ಸಿ) ಚುನಾಯಿತರಾದ ಎಲ್ಲ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವೆಂದು ಮತ್ತು ಅರ್ಜಿದಾರನು ಅಥವಾ ಯಾರೇ ಇತರ ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿರುವುದಾಗಿ ಘೋಷಿಸುವ,

-ಆದೇಶವನ್ನು ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ, ಆದೇಶವನ್ನು ಮಾಡುವ ಕಾಲದಲ್ಲಿ [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ವು,-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(ಎ) ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರವು ನಡೆದ ಬಗ್ಗೆ ಅರ್ಜಿಯಲ್ಲಿ ಯಾವುದೇ ಆರೋಪವನ್ನು ಮಾಡಿರುವಲ್ಲಿ,-

(i) ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರವು ನಡೆದಿದೆ ಎಂಬುದು ರುಜುವಾತಾಗಿದೆ ಅಥವಾ ರುಜುವಾತಾಗಿಲ್ಲ ಎಂಬ ನಿರ್ಣಯವನ್ನು ಮತ್ತು ಆ ಭ್ರಷ್ಟಾಚಾರದ ಸ್ವರೂಪವನ್ನು; ಮತ್ತು

(ii) ವಿಚಾರಣೆಯಲ್ಲಿ, ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥರೆಂದು ರುಜುವಾತಾದ ವ್ಯಕ್ತಿಗಳು, ಯಾರಾದರೂ ಇದ್ದರೆ, ಅವರೆಲ್ಲರ ಹೆಸರುಗಳನ್ನು ಮತ್ತು ಭ್ರಷ್ಟಾಚಾರದ ಸ್ವರೂಪವನ್ನು, ದಾಖಲು ಮಾಡಿ; ಮತ್ತು

(ಬಿ) ಸಂದಾಯ ಮಾಡಬೇಕಾದ ಖರ್ಚುಗಳ ಒಟ್ಟು ಮೊಬಲಗನ್ನು ನಿಗದಿಪಡಿಸಿ ಮತ್ತು ಖರ್ಚುಗಳನ್ನು ಯಾರು ಮತ್ತು ಯಾರಿಗೆ ಸಂದಾಯ ಮಾಡಬೇಕೆಂಬುದನ್ನು ನಿರ್ದಿಷ್ಟಪಡಿಸಿ,

-ಆದೇಶವನ್ನು ಸಹ ಮಾಡತಕ್ಕದ್ದು:

ಪರಂತು, ಆ ಅರ್ಜಿಗೆ ಪಕ್ಷಕಾರನಲ್ಲದ ಯಾವನೇ ವ್ಯಕ್ತಿಯನ್ನು, (ಎ) ಖಂಡದ (ii)ನೇ ಉಪ ಖಂಡದ ಅಡಿಯಲ್ಲಿನ ಆದೇಶದಲ್ಲಿ,-

(i) [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ದ ಮುಂದೆ ಹಾಜರಾಗುವಂತೆ ಮತ್ತು ಅವನನ್ನು ಹಾಗೆ ಏಕೆ ಹೆಸರಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ಅವನಿಗೆ ನೋಟೀಸನ್ನು ಕೊಟ್ಟಿದ್ದ ಹೊರತು; ಮತ್ತು

(ii) ಆ ನೋಟೀಸಿಗೆ ಅನುಸಾರವಾಗಿ ಅವನು ಹಾಜರಾದರೆ, [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ವು ಈಗಾಗಲೇ ಪರೀಕ್ಷೆ ಮಾಡಿದ ಮತ್ತು ಅವನ ವಿರುದ್ಧ ಸಾಕ್ಷ್ಯವನ್ನು ಕೊಟ್ಟಿರುವ ಯಾವನೇ ಸಾಕ್ಷಿದಾರನನ್ನು ಪಾಟೀ ಸವಾಲು ಮಾಡಲು, ತನ್ನ ಪ್ರತಿವಾದದಲ್ಲಿ ಸಾಕ್ಷ್ಯವನ್ನು ಕೊಡಲು ಮತ್ತು ಅಹವಾಲು ಹೇಳಿಕೊಳ್ಳಲು ಅವನಿಗೆ ಅವಕಾಶ ಕೊಡಲಾಗಿದ್ದ ಹೊರತು,

-ಹೆಸರಿಸತಕ್ಕದ್ದಲ್ಲ.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**19. ಚುನಾವಣೆಯು ಅನೂರ್ಜಿತವೆಂದು ಘೋಷಿಸಲು ಕಾರಣಗಳು.-** (1) (2)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ವು,-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(ಎ) ಚುನಾಯಿತನಾದ ಅಭ್ಯರ್ಥಿಯು, ಅವನು ಚುನಾಯಿತನಾದ ದಿನಾಂಕದಂದು ಈ ಅಧಿನಿಯಮದ ಅಡಿಯಲ್ಲಿ ಸದಸ್ಯನಾಗಿ ಆಯ್ಕೆಯಾಗಲು ಅರ್ಹನಾಗಿರಲಿಲ್ಲವೆಂದು ಅಥವಾ ಅನರ್ಹಗೊಂಡಿದ್ದನೆಂದು; ಅಥವಾ

(ಬಿ) ಚುನಾಯಿತ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಚುನಾಯಿತ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಯಾವುದೇ ಭ್ರಷ್ಟಾಚಾರವನ್ನು ಮಾಡಿರುವನೆಂದು; ಅಥವಾ

(ಸಿ) ಯಾವುದೇ ನಾಮಪತ್ರವನ್ನು ಅನುಚಿತವಾಗಿ ತಿರಸ್ಕರಿಸಲಾಗಿದೆ ಎಂದು; ಅಥವಾ

(ಡಿ) ಚುನಾಯಿತ ಅಭ್ಯರ್ಥಿಗೆ ಅದು ಸಂಬಂಧಪಡುವಷ್ಟರಮಟ್ಟಿಗೆ ಚುನಾವಣಾ ಫಲಿತಾಂಶದ ಮೇಲೆ,-

(i) ಯಾವುದೇ ನಾಮಪತ್ರವನ್ನು ಅನುಚಿತವಾಗಿ ಅಂಗೀಕರಿಸಿರುವುದು; ಅಥವಾ

(ii) ಚುನಾಯಿತನಾದ ಅಭ್ಯರ್ಥಿಯ ಹಿತದೃಷ್ಟಿಯಿಂದ ಏಜೆಂಟನು ಮಾಡಿದ ಯಾವುದೇ ಭ್ರಷ್ಟಾಚಾರವು; ಅಥವಾ

(iii) ಯಾವುದೇ ಮತವನ್ನು ಅನುಚಿತವಾಗಿ ಅಂಗೀಕರಿಸಿರುವುದು, ನಿರಾಕರಿಸಿರುವುದು ಅಥವಾ ತಿರಸ್ಕರಿಸಿರುವುದು ಅಥವಾ ಯಾವುದೇ ಶೂನ್ಯವಾದಂಥ ಮತವನ್ನು ಅಂಗೀಕರಿಸಿರುವುದು; ಅಥವಾ

(iv) ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ಮಾಡಿದ ಯಾವುವೇ ನಿಯಮಗಳನ್ನು ಅಥವಾ ಆದೇಶಗಳನ್ನು ಪಾಲಿಸದೇ ಇರುವುದು,

-ಮುಖ್ಯವಾಗಿ ಪ್ರಭಾವ ಬೀರಿದೆಯೆಂದು ಅಭಿಪ್ರಾಯಪಟ್ಟರೆ, ಅವರು, ಚುನಾಯಿತ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವೆಂದು ಘೋಷಿಸತಕ್ಕದ್ದು.

(2) [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ವು, ಯಾವನೇ ಏಜೆಂಟನು ಅಥವಾ ಚುನಾಯಿತನಾದ ಅಭ್ಯರ್ಥಿಯು ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥನಾಗಿರುವನೆಂದು ಅಭಿಪ್ರಾಯಪಟ್ಟರೆ, ಆದರೆ, [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ಗಳಿಗೆ,-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(ಎ) ಚುನಾವಣೆಯಲ್ಲಿ ಅಂಥ ಯಾವುದೇ ಭ್ರಷ್ಟಾಚಾರವನ್ನು ಅಭ್ಯರ್ಥಿಯು ಮಾಡಲಿಲ್ಲವೆಂದು ಮತ್ತು ಅಂಥ ಪ್ರತಿಯೊಂದು ಭ್ರಷ್ಟಾಚಾರವನ್ನು ಅಭ್ಯರ್ಥಿಯ ಆದೇಶಗಳಿಗೆ ವಿರುದ್ಧವಾಗಿ ಮತ್ತು ಅವನ ಸಮ್ಮತಿಯಿಲ್ಲದೆ ಮಾಡಲಾಯಿತೆಂದು; ಮತ್ತು

(ಬಿ) ಅಭ್ಯರ್ಥಿಯು ಚುನಾವಣೆಯಲ್ಲಿ ಭ್ರಷ್ಟಾಚಾರಗಳು ನಡೆಯುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಕ್ರಮಗಳನ್ನು ಕೈಗೊಂಡಿದ್ದನೆಂದು; ಮತ್ತು

(ಸಿ) ಇತರ ಎಲ್ಲ ವಿಷಯಗಳಿಗೆ ಸಂಬಂಧಪಟ್ಟಂತೆ ಚುನಾವಣೆಯು ಅಭ್ಯರ್ಥಿಯಿಂದ ಅಥವಾ ಏಜೆಂಟನಿಂದ ಯಾವುದೇ ಭ್ರಷ್ಟಾಚಾರ ನಡೆಯದೆ ಮುಕ್ತವಾಗಿತ್ತೆಂದು,

-ಮನದಟ್ಟಾದರೆ ಆಗ [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ವು ಚುನಾಯಿತ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವಾಗಿಲ್ಲವೆಂದು ತೀರ್ಮಾನಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**20. ಚುನಾಯಿತ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದಂಥ ಕಾರಣಗಳು.-** (1) ಚುನಾವಣಾ ತಕರಾರು ಅರ್ಜಿಯನ್ನು ದಾಖಲು ಮಾಡಿರುವ ಯಾವನೇ ವ್ಯಕ್ತಿಯು ಚುನಾಯಿತನಾದ ಅಭ್ಯರ್ಥಿಯ ಚುನಾವಣೆಯನ್ನು ಪ್ರಶ್ನಿಸುವುದರ ಜೊತೆಗೆ, ತಾನೇ ಅಥವಾ ಇತರ ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿರುವನೆಂದು ಘೋಷಣೆ ಮಾಡಬೇಕೆಂದು ಕೋರಿಕೊಂಡಿದ್ದರೆ ಮತ್ತು [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ವು,-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(ಎ) ವಾಸ್ತವವಾಗಿ, ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಬಹು ಸಂಖ್ಯೆಯ ಮತಗಳನ್ನು ಪಡೆದಿದ್ದಾನೆಂದು; ಅಥವಾ

(ಬಿ) ಭ್ರಷ್ಟಾಚಾರದ ಮೂಲಕ ಚುನಾಯಿತನಾದ ಅಭ್ಯರ್ಥಿಯು ಮತಗಳನ್ನು ಪಡೆದುಕೊಳ್ಳದೇ ಇರುತ್ತಿದ್ದರೆ ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಬಹುಸಂಖ್ಯೆಯ ಮತಗಳನ್ನು ಪಡೆಯುತ್ತಿದ್ದನೆಂದು,

-ಅಭಿಪ್ರಾಯಪಟ್ಟರೆ ಅವರು ಚುನಾಯಿತ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತವೆಂದು ಘೋಷಿಸಿದ ತರುವಾಯ, ಸಂದರ್ಭಾನುಸಾರ, ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿರುವುದಾಗಿ ಘೋಷಿಸತಕ್ಕದ್ದು.

(2) [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2] ದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**21. ಸಮಾನ ಮತಗಳು ಬಂದ ಸಂದರ್ಭದಲ್ಲಿ ಕಾರ್ಯವಿಧಾನ.-** ಚುನಾವಣಾ ತಕರಾರು ಅರ್ಜಿಯ ವಿಚಾರಣೆಯ ಕಾಲದಲ್ಲಿ ಆ ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಗಳಿಗೆ ಸಮಾನ ಮತಗಳು ಬಂದಿವೆಯೆಂದು ಮತ್ತು ಒಂದು ಮತವು ಸೇರಿದರೆ, ಆ ಅಭ್ಯರ್ಥಿಗಳಲ್ಲಿ ಒಬ್ಬನು ಚುನಾಯಿತನಾಗಿದ್ದಾನೆಂದು ಘೋಷಿತನಾಗಲು ಹಕ್ಕುಳ್ಳವನಾಗುತ್ತಾನೆಂದು ಕಂಡುಬಂದರೆ, ಆಗ [2][[1][ಗೊತ್ತುಪಡಿಸಿದ ನ್ಯಾಯಾಲಯ]][1]][2]ವು ಅವರ ನಡುವೆ ಚೀಟಿ ಎತ್ತುವ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಚೀಟಿಯು ಯಾರಿಗೆ ಬರುವುದೋ ಅವನು ಒಂದು ಹೆಚ್ಚಿನ ಮತವನ್ನು ಪಡೆದಿದ್ದರೆ ಹೇಗೋ ಹಾಗೆ ಮುಂದುವರೆಯತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**22. ಭ್ರಷ್ಟಾಚಾರಗಳು.-** ಈ ಅಧಿಯನಿಯಮದ ಉದ್ದೇಶಗಳಿಗಾಗಿ, ಈ ಕೆಳಕಂಡವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕದ್ದು, ಎಂದರೆ:-

(i) ತತ್ಕಾಲದಲ್ಲಿ ಜಾರಿಯಲ್ಲಿರುವ 1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ (1951ರ ಕೇಂದ್ರಾಧಿನಿಯಮ 48) 123ನೇ ಪ್ರಕರಣದ (1)ನೇ ಖಂಡದಲ್ಲಿ ಅರ್ಥವಿವರಿಸಿರುವಂತೆ ಲಂಚಗುಳಿತನ;

[1][(iಎ) ಚುನಾವಣೆ ಸಂದರ್ಭದಲ್ಲಿ ಪರಿಗಣನೆಗಾಗಿ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿಯ ಸದಸ್ಯ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಹುದ್ದೆಯ ವ್ಯಾಪಾರಕ್ಕೆ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿಯ ಯಾವುದೇ ಮತದಾರ ಅಥವಾ ಸದಸ್ಯನನ್ನು ಸೆಳೆಯುವುದು ಅಥವಾ ದಬ್ಬಾಳಿಕೆ ಅಥವಾ ವಂಚನೆ ಮಾಡುವುದು][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(ii) ತತ್ಕಾಲದಲ್ಲಿ ಜಾರಿಯಲ್ಲಿರುವ ಸದರಿ ಪ್ರಕರಣದ (ii)ನೇ ಖಂಡದಲ್ಲಿ ಅರ್ಥವಿವರಿಸಿರುವಂತೆ ಅನುಚಿತ ಪ್ರಭಾವ;

(iii) ಅಭ್ಯರ್ಥಿಯು ಚುನಾವಣೆಯಲ್ಲಿ ಜಯಗಳಿಸುವ ಸಂಭವನೀಯತೆಯನ್ನು ಹೆಚ್ಚಿಸಲು ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಗೆ ಪ್ರತಿಕೂಲ ಪ್ರಭಾವವನ್ನು ಉಂಟುಮಾಡಲು, ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಯಾವನೇ ವ್ಯಕ್ತಿಗೆ ಮತದಾನ ಮಾಡುವಂತೆ ಅಥವಾ ಮಾಡದಿರುವಂತೆ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಒಪ್ಪಿಗೆಯೊಡನೆ ಯಾವನೇ ಇತರ ವ್ಯಕ್ತಿಯು ಮಾಡಿದ ಮನವಿ ಅಥವಾ ಧಾರ್ಮಿಕ ಸಂಕೇತಗಳ ಬಳಕೆ ಅಥವಾ ಅವುಗಳನ್ನು ಉದ್ದೇಶಿಸಿ ಮನವಿ, ಅಥವಾ ರಾಷ್ಟ್ರಧ್ವಜ, ರಾಷ್ಟ್ರ ಲಾಂಛನಗಳಂಥ ರಾಷ್ಟ್ರದ ಸಂಕೇತಗಳ ಬಳಕೆ ಅಥವಾ ಅವುಗಳನ್ನು ಉದ್ದೇಶಿಸಿ ಮನವಿ;

(iv) ಅಭ್ಯರ್ಥಿಯು ಚುನಾವಣೆಯಲ್ಲಿ ಜಯಗಳಿಸುವ ಸಂಭವನೀಯತೆಯನ್ನು ಹೆಚ್ಚಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಗೆ ಪ್ರತಿಕೂಲ ಪ್ರಭಾವ ಉಂಟುಮಾಡುವುದಕ್ಕಾಗಿ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಭಾರತದ ಪ್ರಜೆಗಳ ವಿವಿಧ ವರ್ಗಗಳ ನಡುವೆ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ವೈರತ್ವ ಅಥವಾ ದ್ವೇಷದ ಭಾವನೆಗಳನ್ನು ಉಂಟುಮಾಡಲು ಉತ್ತೇಜನ ನೀಡುವುದು ಅಥವಾ ಉತ್ತೇಜನ ನೀಡಲು ಪ್ರಯತ್ನಿಸುವುದು;

(v) ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಸಮ್ಮತಿಯಿಂದ ಇತರ ಯಾವನೇ ವ್ಯಕ್ತಿಯು, ಯಾವನೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ನಡತೆಯ ಸಂಬಂಧದಲ್ಲಿ ಅಥವಾ ಉಮೇದುವಾರಿಕೆಗೆ ಅಥವಾ ಯಾವುದೇ ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಸುಳ್ಳು ವಿವರಣೆಯನ್ನು ಅಥವಾ ತಾನು ಸುಳ್ಳೆಂದು ನಂಬುವ ಅಥವಾ ಸತ್ಯವೆಂದು ನಂಬದ, ಅಭ್ಯರ್ಥಿಯು ಚುನಾವಣೆಯಲ್ಲಿ ಗೆದ್ದುಬರುವುದಕ್ಕೆ ಸಮಂಜಸ ರೀತಿಯಲ್ಲಿ ಪ್ರತಿಕೂಲ ಪ್ರಭಾವ ಬೀರಬಹುದಾದಂಥ ವಿಷಯವನ್ನು ಪ್ರಕಟಿಸುವುದು;

(vi) ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು, ಯಾವುದೇ ವಾಹನವನ್ನು ಅಥವಾ ನಾವೆಯನ್ನು (ಸ್ವತಃ ಅಭ್ಯರ್ಥಿ, ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟನನ್ನು ಹೊರತುಪಡಿಸಿ) ಯಾವನೇ ಮತದಾರನನ್ನು ಉಚಿತವಾಗಿ ಈ ಅಧಿನಿಯಮದ ಅಡಿಯಲ್ಲಿ ನಿಯಮಗಳಿಗನುಸಾರವಾಗಿ ಏರ್ಪಡಿಸಿರುವ ಯಾವುದೇ ಮತದಾನ ಕೇಂದ್ರಕ್ಕೆ ಬರಲು ಅಥವಾ ಮತದಾನ ಕೇಂದ್ರದಿಂದ ಹಿಂದುರುಗಿ ಹೋಗಲು ಆ ವಾಹನ ಅಥವಾ ನಾವೆಯನ್ನು ಹಣ ಸಂದಾಯದ ಮೇಲಾಗಲಿ ಅಥವಾ ಅನ್ಯಥಾ ಬಾಡಿಗೆಗೆ ಗೊತ್ತುಪಡಿಸುವುದು ಅಥವಾ ಪಡೆಯುವುದು:

ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನ ಮಾಡಲು ನಿಗದಿಪಡಿಸಿದ ಸ್ಥಳಕ್ಕೆ ಬರಲು ಅಥವಾ ಅಲ್ಲಿಂದ ಹಿಂದಿರುಗಲು ಯಾವುದೇ ಸಾರ್ವಜನಿಕ ಸಾರಿಗೆ ವಾಹನವನ್ನು ಅಥವಾ ನಾವೆಯನ್ನು ಅಥವಾ ರೈಲು ಕ್ಯಾರೇಜನ್ನು ಮತದಾರನು ಅವನ ಖರ್ಚಿನಲ್ಲಿ ಉಪಯೋಗಿಸುವುದನ್ನು ಈ ಖಂಡದ ಅಡಿಯಲ್ಲಿ ಭ್ರಷ್ಟಾಚಾರವೆಂದು ಭಾವಿಸತಕ್ಕದ್ದಲ್ಲ.

**ವಿವರಣೆ.-** ಈ ಖಂಡದಲ್ಲಿ "ವಾಹನ" ಎಂದರೆ, ಯಂತ್ರ ಚಾಲಿತವಾದುದಾಗಿರಬಹುದು ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು ಅಥವಾ ಇತರ ವಾಹನಗಳನ್ನು ಎಳೆಯಲು ಉಪಯೋಗಿಸಬಹುದಾದುದಾಗಿರಬಹುದು ಅಥವಾ ಅನ್ಯಥಾ ಉಪಯೋಗಿಸಬಹುದಾದುದಾಗಿರ ಬಹುದು, ರಸ್ತೆ ಸಾರಿಗೆಯ ಉದ್ದೇಶಕ್ಕಾಗಿ ಬಳಸಿದ ಅಥವಾ ಬಳಕೆಗೆ ಯೋಗ್ಯವಾದ ಯಾವುದೇ ವಾಹನ.

(vii) ಯಾವುದೇ ಸಭೆಯನ್ನು ನಡೆಸುವುದು, ಅಲ್ಲಿ ಮಾದಕ ಪಾನೀಯಗಳನ್ನು ಸರಬರಾಜು ಮಾಡುವುದು;

(viii) ಮುದ್ರಕ ಮತ್ತು ಪ್ರಕಾಶಕರ ಹೆಸರು ಮತ್ತು ವಿಳಾಸವನ್ನು ಹೊಂದಿರದ, ಯಾವುದೇ ಸುತ್ತೋಲೆ, ಪ್ರಕಟಣಾ ಪತ್ರ ಅಥವಾ ಭಿತ್ತಿ ಪತ್ರಗಳನ್ನು ಚುನಾವಣೆಯ ಸಂಬಂಧದಲ್ಲಿ ಹೊರಡಿಸುವುದು;

(ix) ಸರ್ಕಾರವು, ನಿಯಮದ ಮೂಲಕ ಭ್ರಷ್ಟಾಚಾರವೆಂದು ನಿರ್ದಿಷ್ಟಪಡಿಸಬಹುದಾದಂಥ ಇತರ ಯಾವುದೇ ಆಚರಣೆ.

**23. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆದೇಶ.-** 22ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಭ್ರಷ್ಟಾಚಾರಗಳು, ಈ ಅಧಿನಿಯಮದ ಅಡಿಯಲ್ಲಿ ಅಂಥ ಭ್ರಷ್ಟಾಚಾರ ನಡೆದಿರುವ ಬಗೆಗಿನ [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2]ವು ನಿರ್ಣಯದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯತ್ವಕ್ಕೆ ಅನರ್ಹನನ್ನಾಗಿ ಮಾಡತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦-1೦-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**24. ಆದೇಶಗಳನ್ನು ತಿಳಿಸುವುದು.-** [2][[1][ಗೊತ್ತುಪಡಿಸಿದ ನ್ಯಾಯಾಲಯ][1]][2]ವು, 18 ಮತ್ತು 19ನೇ ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶಗಳನ್ನು ಪ್ರಕಟಿಸಿದ ತರುವಾಯ ಅದರ ಒಂದು ಪ್ರತಿಯನ್ನು [2][ರಾಜ್ಯ ಚುನಾವಣಾ ಆಯುಕ್ತರು ಮತ್ತು ಸಂಬಂಧಪಟ್ಟ ಪಂಚಾಯತ್‌ಗೆ][2] ಕಳುಹಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997 ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**24ಎ. ಬಾಕಿ ಪ್ರಕರಣಗಳ ವರ್ಗಾವಣೆ.-** ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015ರ ಪ್ರಾರಂಭದ ದಿನಾಂಕಕ್ಕೆ ಮೊದಲು ಚುನಾವಣೆ ವಿವಾದಗಳಿಗೆ ಸಂಬಂಧಿಸಿದಂತೆ ಸಿವಿಲ್ ಜಡ್ಜ್(ಕಿರಿಯ ವಿಭಾಗ) ಮತ್ತು ಸಿವಿಲ್ ಜಡ್ಜ್(ಹಿರಿಯ ವಿಭಾಗ) ಈಗ ಕರೆಯಲಾಗಿರುವಂತೆ ಸಿವಿಲ್ ಜಡ್ಜ್ ರವರ ನ್ಯಾಯಾಲಯ ಅಥವಾ ಹಿರಿಯ ಸಿವಿಲ್ ಜಡ್ಜ್‌ರವರ ನ್ಯಾಯಾಲಯಗಳಲ್ಲಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಸಂಬಂಧಿಸಿದ ಗೊತ್ತುಪಡಿಸಿದ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು ಮತ್ತು ಅವುಗಳನ್ನು ಅದರಲ್ಲಿಯೇ ಬಾಕಿ ಇರುವುದಾಗಿ ವಿಲೇ ಮಾಡತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**25. ಸ್ಥಾನವು ಖಾಲಿಯಾದರೆ ಹೊಸ ಚುನಾವಣೆ.-** ಯಾವನೇ ಸದಸ್ಯನ ಸ್ಥಾನವು ಖಾಲಿಯಾದರೆ ಅಥವಾ 13ನೇ ಪ್ರಕರಣದ ಅಡಿಯಲ್ಲಿ ಖಾಲಿಯಾಗಿದೆ ಎಂದು ಭಾವಿಸಲಾದರೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಹಾಗೆ ಖಾಲಿಯಾದ ಸ್ಥಾನಕ್ಕೆ ಹೊಸ ಚುನಾವಣೆಯನ್ನು ನಡೆಸತಕ್ಕದ್ದು.

**26. ಮತದಾನದ ಕೇಂದ್ರದಲ್ಲಿ ಅಥವಾ ಅದರ ಬಳಿಯಲ್ಲಿ ಚುನಾವಣಾ ಪ್ರಚಾರದ ನಿಷೇಧ.-** (1) ಯಾವನೇ ವ್ಯಕ್ತಿಯು, ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕದಂದು ಅಥವಾ ದಿನಾಂಕಗಳಲ್ಲಿ ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದಿಂದ ನೂರು ಮೀಟರುಗಳ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೆಳಕಂಡ ಯಾವುವೇ ಕಾರ್ಯಗಳನ್ನು ಮಾಡತಕ್ಕದ್ದಲ್ಲ, ಎಂದರೆ:-

(ಎ) ಮತಗಳಿಗಾಗಿ ಪ್ರಚಾರ ಮಾಡುವುದು; ಅಥವಾ

(ಬಿ) ಯಾವನೇ ಮತದಾರನ ಮತವನ್ನು ಕೋರುವುದು; ಅಥವಾ

(ಸಿ) ಯಾವನೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡಬಾರದೆಂದು ಯಾವನೇ ಮತದಾರನ ಮನ ಒಲಿಸುವುದು; ಅಥವಾ

(ಡಿ) ಚುನಾವಣೆಯಲ್ಲಿ ಮತ ನೀಡದಂತೆ ಯಾವನೇ ಮತದಾರನ ಮನ ಒಲಿಸುವುದು; ಅಥವಾ

(ಇ) ಯಾವುದೇ ನೋಟೀಸು (ಚುನಾವಣೆಗೆ ಸಂಬಂಧಿಸಿದ ಅಧಿಕೃತ ನೋಟೀಸಿನ ಹೊರತು) ಅಥವಾ ಚಿನ್ಹೆಯನ್ನು ಪ್ರದರ್ಶಿಸುವುದು.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**27. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರ ಅನುಚಿತ ನಡತೆಗಾಗಿ ದಂಡನೆ.-**(1) ಯಾವನೇ ವ್ಯಕ್ತಿಯು, ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವಂಥ ದಿನಾಂಕದಂದು ಅಥವಾ ದಿನಾಂಕಗಳಂದು,-

(ಎ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ದ್ವಾರದಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮನುಷ್ಯನ ಧ್ವನಿಯನ್ನು ವರ್ಧಿಸಲು ಅಥವಾ ಯಥಾವತ್ತಾಗಿ ನಿರೂಪಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕದಂಥ ಯಾವುದೇ ಸಲಕರಣೆಯನ್ನು ಉಪಯೋಗಿಸತಕ್ಕದ್ದಲ್ಲ ಅಥವಾ ಚಾಲನೆ ಮಾಡತಕ್ಕದ್ದಲ್ಲ; ಅಥವಾ

(ಬಿ) ಮತದಾನ ಕೇಂದ್ರದಲ್ಲಿ ಅಥವಾ ಅದರ ಪ್ರವೇಶ ದ್ವಾರದಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮತದಾನಕ್ಕಾಗಿ ಮತದಾನ ಕೇಂದ್ರಕ್ಕೆ ಭೇಟಿ ಕೊಡುವ ಯಾವನೇ ವ್ಯಕ್ತಿಗೆ ಕಿರುಕುಳ ಉಂಟು ಮಾಡುವ ಹಾಗೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ

ಅಧಿಕಾರಿಗಳ ಮತ್ತು ಇತರ ವ್ಯಕ್ತಿಗಳ ಕೆಲಸಕ್ಕೆ ಅಡ್ಡಿಯುಂಟುಮಾಡುವ ಹಾಗೆ ಗಟ್ಟಿಯಾಗಿ ಕೂಗಾಡತಕ್ಕದ್ದಲ್ಲ ಅಥವಾ ಅನ್ಯಥಾ ಅನುಚಿತ ರೀತಿಯಲ್ಲಿ ನಡೆದುಕೊಳ್ಳತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಉದ್ದೇಶ ಪೂರ್ವಕವಾಗಿ ಸಹಾಯ ಮಾಡುವ ಅಥವಾ ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರ್ ಅವರು, ಯಾವನೇ ವ್ಯಕ್ತಿಯು, ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡುತ್ತಿರುವನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣವಿದ್ದರೆ, ಅವರು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡುವಂತೆ ಯಾವನೇ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಆ ತರುವಾಯ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕದ್ದು.

(4) ಯಾವನೇ ಪೊಲೀಸು ಅಧಿಕಾರಿಯು (1)ನೇ ಉಪ-ಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಂಥ ಬಲವನ್ನು ಪ್ರಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಉಪಯೋಗಿಸಿದ ಯಾವುದೇ ಸಲಕರಣೆಯನ್ನು ವಶಪಡಿಸಿಕೊಳ್ಳಬಹುದು.

**28. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡನೆ.**– (1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕಾಗಿ ನಿಗದಿಪಡಿಸಿದ ವೇಳೆಗಳಲ್ಲಿ ಯಾವನೇ ವ್ಯಕ್ತಿಯು ದುರ್ವರ್ತಿಸಿದರೆ ಅಥವಾ ಪ್ರಿಸೈಡಿಂಗ್ ಆಫೀಸರ್ ಅವರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ, ಪ್ರಿಸೈಡಿಂಗ್ ಆಫೀಸರ್ ಅವರು ಅಥವಾ ಕರ್ತವ್ಯ ನಿರ್ವಹಿಸುತ್ತಿರುವ ಯಾವನೇ ಪೊಲೀಸ್ ಅಧಿಕಾರಿಯು ಅಥವಾ ಆ ಬಗ್ಗೆ ಪ್ರಿಸೈಡಿಂಗ್ ಆಫೀಸರ್ ಅವರು ಅಧಿಕಾರ ನೀಡಿರುವಂಥ ಯಾವನೇ ವ್ಯಕ್ತಿಯು, ಅವನನ್ನು ಮತದಾನ ಕೇಂದ್ರದಿಂದ ಹೊರಹಾಕಬಹುದು.

(2) (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಮತದಾನ ಕೇಂದ್ರದಲ್ಲಿ ಮತ ನೀಡಲು ಅಥವಾ ಅನ್ಯಥಾ ಹಕ್ಕುಳ್ಳವನಾಗಿರುವ ಯಾವನೇ ಮತದಾರನನ್ನು ಆ ಕೇಂದ್ರದಲ್ಲಿ ಮತ ನೀಡುವ ಅವಕಾಶವನ್ನು ಹೊಂದಿರುವುದನ್ನು ಅಡ್ಡಿಪಡಿಸುವ ಹಾಗೆ ಚಲಾಯಿಸತಕ್ಕದ್ದಲ್ಲ.

(3) ಮತದಾನ ಕೇಂದ್ರದಿಂದ ಹಾಗೆ ಹೊರಹಾಕಲಾದ ಯಾವನೇ ವ್ಯಕ್ತಿಯು, ಪ್ರಿಸೈಡಿಂಗ್ ಆಫೀಸರನ ಅನುಮತಿಯಿಲ್ಲದೆ ಮತದಾನ ಕೇಂದ್ರವನ್ನು ಪುನಃ ಪ್ರವೇಶಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) (3)ನೇ ಉಪ-ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**29. ಮತದಾನದ ರಹಸ್ಯವನ್ನು ಕಾಪಾಡುವುದು.**- (1) ಯಾವುದೇ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಮತ್ತು ಎಣಿಸುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು, ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಕಾಪಾಡಲು ಸಹಾಯ ಮಾಡತಕ್ಕದ್ದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಅಧಿಕೃತಗೊಳಿಸಿದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಭಂಗಗೊಳಿಸುವುದೆಂದು ಪರಿಗಣಿಸುವಂಥ ಯಾವುದೇ ಮಾಹಿತಿಯನ್ನು ಯಾವನೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು, ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**30. ಚುನಾವಣೆಯಲ್ಲಿ ಅಧಿಕಾರಿಗಳು ಮೊದಲಾದವರು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡತಕ್ಕದ್ದಲ್ಲ ಅಥವಾ ಮತದಾನದ ಮೇಲೆ ಪ್ರಭಾವ ಬೀರತಕ್ಕದ್ದಲ್ಲ.**- (1) ಯಾವುದೇ ಚುನಾವಣೆಯಲ್ಲಿ ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸೈಡಿಂಗ್ ಆಫೀಸರ್ ಆಗಿರುವ ಅಥವಾ ಪೋಲಿಂಗ್ ಆಫೀಸರ್ ಆಗಿರುವ ಯಾವನೇ ವ್ಯಕ್ತಿಯು ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಯಾವುವೇ ಕರ್ತವ್ಯಗಳನ್ನು ನೆರವೇರಿಸಲು ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸೈಡಿಂಗ್ ಆಫೀಸರ್ ನೇಮಕ ಮಾಡಿದ ಯಾವನೇ ಅಧಿಕಾರಿ ಅಥವಾ ಗುಮಾಸ್ತನು (ಮತ ಕೊಡುವುದನ್ನು ಹೊರತುಪಡಿಸಿ) ಅಭ್ಯರ್ಥಿಯು ಚುನಾವಣೆಯಲ್ಲಿ ಗೆಲ್ಲುವ ಸಂಭವವನ್ನು ಹೆಚ್ಚಿಸುವುದಕ್ಕಾಗಿ ಆ ಚುನಾವಣೆಯನ್ನು ನಡೆಸುವಲ್ಲಿ ಅಥವಾ ಅದರ ಮೇಲ್ವಿಚಾರಣೆಯಲ್ಲಿ ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ.

(2) ಹಿಂದೆ ಹೇಳಿದಂಥ ಯಾವನೇ ಅಂಥ ವ್ಯಕ್ತಿಯು ಮತ್ತು ಪೊಲೀಸು ದಳದ ಯಾವನೇ ಸದಸ್ಯನು,-

(ಎ) ಚುನಾವಣೆಯಲ್ಲಿ ಅವನ ಮತವನ್ನು ಕೊಡಲು ಯಾವನೇ ವ್ಯಕ್ತಿಯ ಮನವೊಲಿಸಲು; ಅಥವಾ

(ಬಿ) ಚುನಾವಣೆಯಲ್ಲಿ ಅವನ ಮತ ನೀಡದಂತೆ ಯಾವನೇ ವ್ಯಕ್ತಿಯನ್ನು ವಿಮುಖಗೊಳಿಸಲು; ಅಥವಾ

(ಸಿ) ಯಾವುದೇ ರೀತಿಯಲ್ಲಿ ಚುನಾವಣೆಯಲ್ಲಿ ಯಾವನೇ ವ್ಯಕ್ತಿಯ ಮತದಾನದ ಮೇಲೆ ಪ್ರಭಾವ ಬೀರಲು,

-ಪ್ರಯತ್ನಿಸತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) (2)ನೇ ಉಪ-ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**31. ಚುನಾವಣೆಗಳಿಗೆ ಸಂಬಂಧಿಸಿದ ಸರ್ಕಾರಿ ಕರ್ತವ್ಯದ ಭಂಗ.**- (1) ಈ ಪ್ರಕರಣವು ಅನ್ವಯವಾಗುವ ಯಾವನೇ ವ್ಯಕ್ತಿಯು, ಯುಕ್ತ ಕಾರಣವಿಲ್ಲದೆ ತನ್ನ ಸರ್ಕಾರಿ ಕರ್ತವ್ಯವನ್ನು ಭಂಗ ಮಾಡಿ, ಯಾವುದೇ ಕಾರ್ಯದ

ಅಥವಾ ಲೋಪದ ತಪ್ಪಿತಸ್ಥನಾಗಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿನ ಅಪರಾಧವು ಸಂಜ್ಞೆಯವಾಗಿರತಕ್ಕದ್ದು.

(3) ಹಿಂದೆ ಹೇಳಿದಂಥ ಯಾವುದೇ ಕಾರ್ಯಕ್ಕೆ ಅಥವಾ ಲೋಪಕ್ಕೆ ಸಂಬಂಧಿಸಿದಂತೆ ಹಾನಿ ಪರಿಹಾರಕ್ಕಾಗಿ ಯಾವನೇ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(4) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳು ಯಾರೆಂದರೆ, ರಿಟರ್ನಿಂಗ್ ಆಫೀಸರ್‌ಗಳು, ಪ್ರಿಸೈಡಿಂಗ್ ಆಫೀಸರ್‌ಗಳು, ಪೋಲಿಂಗ್ ಆಫೀಸರ್‌ಗಳು ಮತ್ತು ನಾಮಪತ್ರಗಳನ್ನು ಸ್ವೀಕರಿಸುವ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಅಥವಾ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವ ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಪಟ್ಟ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ನಿಯೋಜಿತನಾದ ಯಾವನೇ ವ್ಯಕ್ತಿ ಮತ್ತು ಈ ಪ್ರಕರಣದ ಉದ್ದೇಶಕ್ಕಾಗಿ "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಕ್ಕಾಗಿ, ತದನುಸಾರವಾಗಿ ಅರ್ಥೈಸತಕ್ಕದ್ದು. ಆದರೆ, ಅದು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಲ್ಲದೆ ಬೇರೆ ರೀತಿಯಲ್ಲಿ ವಿಧಿಸಿದ ಕರ್ತವ್ಯಗಳನ್ನು ಒಳಗೊಳ್ಳತಕ್ಕದ್ದಲ್ಲ.

[1][**31ಎ. ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ.**- ಮತಗಟ್ಟೆಯನ್ನು ವಶಪಡಿಸಿಕೊಳ್ಳುವ ಅಪರಾಧವನ್ನು ಮಾಡುವ ಯಾವೊಬ್ಬ ವ್ಯಕ್ತಿಯು, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ ಎರಡು ವರ್ಷಗಳವರೆಗಿರಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಅಪರಾಧವನ್ನು ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಯು ಮಾಡಿರುವಲ್ಲಿ, ಆತನು ಒಂದು ವರ್ಷಕ್ಕೆ ಕಡಿಮೆಯಿಲ್ಲದ ಆದರೆ ಮೂರು ವರ್ಷಗಳವರೆಗಿರಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. ಪ್ರಕರಣ 31ಎ ಮತ್ತು 31ಬಿ 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997 ರಿಂದ ಸೇರಿಸಲಾಗಿದೆ.

**ವಿವರಣೆ.**- ಈ ಪ್ರಕರಣದ ಉದ್ದೇಶಕ್ಕಾಗಿ "ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು" ಎಂಬುದರಲ್ಲಿ ಇತರ ವಿಷಯಗಳ ಜೊತೆಗೆ ಈ ಮುಂದಿನ ಎಲ್ಲ ಅಥವಾ ಯಾವುವೇ ಕಾರ್ಯ ಚಟುವಟಿಕೆಗಳು ಸೇರುತ್ತವೆ, ಎಂದರೆ:-

(ಎ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳವನ್ನು ವಶಕ್ಕೆ ತೆಗೆದುಕೊಂಡು, ಮತದಾನ ಕೇಂದ್ರದ ಅಧಿಕಾರಿಗಳು ಮತ ಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಒಪ್ಪಿಸುವಂತೆ ಮಾಡುವುದು ಮತ್ತು ಕ್ರಮಬದ್ಧವಾಗಿ ನಡೆಯುತ್ತಿರುವ ಚುನಾವಣೆಗಳ ಮೇಲೆ ಪರಿಣಾಮ ಬೀರುವಂಥ ಇತರ ಯಾವುದೇ ಕೃತ್ಯವನ್ನು ಮಾಡುವುದು;

(ಬಿ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳವನ್ನು ಸ್ವಾಧೀನಕ್ಕೆ ತೆಗೆದುಕೊಂಡು ತನ್ನ ಅಥವಾ ತಮ್ಮ ಬೆಂಬಲಿಗರಿಗೆ ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಮತಿಸಿ, ಇತರರು ಮತ ನೀಡದಂತೆ ಅಡ್ಡಿಪಡಿಸುವುದು;

(ಸಿ) ಯಾವೊಬ್ಬ ಮತದಾರನನ್ನು ಬೆದರಿಸಿ ಆತನು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳಕ್ಕೆ ಹೋಗಿ ತನ್ನ ಮತ ನೀಡದಂತೆ ಅಡ್ಡಿಪಡಿಸುವುದು;

(ಡಿ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆ ನಡೆಯುತ್ತಿರುವ ಸ್ಥಳವನ್ನು ವಶಕ್ಕೆ ತೆಗೆದುಕೊಂಡು, ಮತಗಳ ಎಣಿಕೆ ಮಾಡುತ್ತಿರುವ ಅಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಒಪ್ಪಿಸುವಂತೆ ಮಾಡುವುದು ಮತ್ತು ಕ್ರಮಬದ್ಧವಾಗಿ ನಡೆಯುತ್ತಿರುವ ಮತಗಳ ಎಣಿಕೆಯ ಮೇಲೆ ಪರಿಣಾಮ ಬೀರುವಂಥ ಯಾವುದಾದರೂ ಕೃತ್ಯವನ್ನು ಮಾಡುವುದು;

(ಇ) ಸರ್ಕಾರದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಸದರಿ ಕಾರ್ಯ ಚಟುವಟಿಕೆಗಳಲ್ಲಿ ಎಲ್ಲ ಅಥವಾ ಯಾವುದೇ ಕಾರ್ಯ ಚಟುವಟಿಕೆಯನ್ನು ಮಾಡುವುದು ಅಥವಾ ಅಭ್ಯರ್ಥಿಯು ಚುನಾಯಿತನಾಗುವ ಸಾಧ್ಯತೆಯನ್ನು ಹೆಚ್ಚಿಸುವಂಥ ಯಾವುವೇ ಕಾರ್ಯ ಚಟುವಟಿಕೆಗಳಿಗೆ ನೆರವು ನೀಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

**31ಬಿ. ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟರಾಗಿ ಕಾರ್ಯನಿರ್ವಹಿಸುವ ಸರ್ಕಾರಿ ನೌಕರರುಗಳಿಗೆ ದಂಡನೆ ವಿಧಿಸುವುದು.**- ಸರ್ಕಾರದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಚುನಾವಣೆಯಲ್ಲಿ ಅಭ್ಯರ್ಥಿಯ ಚುನಾವಣಾ ಏಜೆಂಟ್ ಅಥವಾ ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟನಾಗಿ ಕೆಲಸ ಮಾಡಿದರೆ, ಆತನು ಮೂರು ತಿಂಗಳುಗಳವರೆಗಿರಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.][1]

**32. ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವುದು ಅಪರಾಧ.**- (1) ಯಾವುದೇ ಚುನಾವಣೆಯಲ್ಲಿ ಯಾವನೇ ವ್ಯಕ್ತಿಯು ಮತದಾನ ಕೇಂದ್ರದಿಂದ ಮತಪತ್ರವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡಲು ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರ್ ಅವರಿಗೆ, ಯಾವನೇ ವ್ಯಕ್ತಿಯು, (1)ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡುತ್ತಿರುವನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣವಿದ್ದರೆ, ಅಂಥ ಅಧಿಕಾರಿಯು ಅಂಥ ವ್ಯಕ್ತಿಯು ಮತದಾನ ಕೇಂದ್ರವನ್ನು ಬಿಡುವುದಕ್ಕೆ ಮುಂಚೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡಲು ಪೊಲೀಸು ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಅಥವಾ ಪೊಲೀಸು ಅಧಿಕಾರಿಯು ಅವನನ್ನು ಶೋಧಿಸುವಂತೆ ಮಾಡಬಹುದು:

ಪರಂತು, ಮಹಿಳೆಯ ಶೋಧನೆಯನ್ನು ಮಾಡಿಸುವ ಅವಶ್ಯಕತೆಯುಂಟಾದಾಗ ಶೋಧನೆಯನ್ನು, ಬೇರೊಬ್ಬ ಮಹಿಳೆಯಿಂದ, ಸಭ್ಯತೆಗೆ ಕಟ್ಟುನಿಟ್ಟಾಗಿ ಗಮನಕೊಟ್ಟು ಮಾಡಿಸತಕ್ಕದ್ದು.

(3) ಶೋಧನೆಯ ತರುವಾಯ ದಸ್ತಗಿರಿಯಾದ ವ್ಯಕ್ತಿಯ ಬಳಿ ಸಿಕ್ಕಿದ ಯಾವುದೇ ಮತಪತ್ರವನ್ನು ಪ್ರಿಸೈಡಿಂಗ್ ಆಫೀಸರ್ ಅವರು, ಪೊಲೀಸು ಅಧಿಕಾರಿಯ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯೇ ಶೋಧನೆ ಮಾಡಿದಾಗ, ಅಂಥ ಅಧಿಕಾರಿಯು ಅದನ್ನು, ಸುರಕ್ಷಿತ ಅಭಿರಕ್ಷೆಯಲ್ಲಿಟ್ಟುಕೊಳ್ಳತಕ್ಕದ್ದು.

(4) (1)ನೇ ಉಪ-ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**33. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡನೆಗಳು.**- (1) ಯಾವುದೇ ಚುನಾವಣೆಯಲ್ಲಿ ವ್ಯಕ್ತಿಯು, ಅವನು,-

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಬಿ) ರಿಟರ್ನಿಂಗ್ ಆಫೀಸರನು ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಅಂಟಿಸಿದ ಯಾವುದೇ ಪಟ್ಟಿಯನ್ನು, ನೋಟೀಸನ್ನು, ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಸಿ) ಯಾವುದೇ ಮತಪತ್ರವನ್ನು ಅಥವಾ ಯಾವುದೇ ಮತಪತ್ರದ ಮೇಲಿನ ಅಧಿಕೃತ ಚಿನ್ಹೆಯನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಡಿ) ಕ್ರಮಬದ್ಧವಾದ ಅಧಿಕಾರವಿಲ್ಲದೆ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಗೆ ಸರಬರಾಜು ಮಾಡಿದರೆ ಅಥವಾ ಯಾವನೇ ವ್ಯಕ್ತಿಯಿಂದ ಯಾವುದೇ ಮತಪತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರದ ಸ್ವಾಧೀನವನ್ನು ಹೊಂದಿದ್ದರೆ; ಅಥವಾ

(ಇ) ಕಾನೂನು ಮೂಲಕ ತಾನು ಹಾಕಲು ಅಧಿಕೃತನಾಗಿರುವ ಮತಪತ್ರದ ಹೊರತು ಬೇರೆ ಯಾವುದನ್ನಾದರೂ ಮತಪೆಟ್ಟಿಗೆಯೊಳಗೆ ಮೋಸದಿಂದ ಹಾಕಿದರೆ; ಅಥವಾ

(ಎಫ್) ಕ್ರಮಬದ್ಧವಾದ ಅಧಿಕಾರವಿಲ್ಲದೆ, ಚುನಾವಣೆ ಉದ್ದೇಶಗಳಿಗಾಗಿ ಆಗ ಉಪಯೋಗದಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ನಾಶಪಡಿಸಿದರೆ, ತೆಗೆದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ; ಅಥವಾ

(ಜಿ) ಸಂದರ್ಭಾನುಸಾರ, ಮೋಸದಿಂದ ಅಥವಾ ಕ್ರಮಬದ್ಧವಾದ ಅಧಿಕಾರವಿಲ್ಲದೆ ಹಿಂದೆ ಹೇಳಿದ ಯಾವುದೇ ಕಾರ್ಯವನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಯಾವುದೇ ಅಂಥ ಕಾರ್ಯಗಳನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ,

- ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ಅಪರಾಧದ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು,-

(ಎ) ಅವನು ಮತದಾನ ಕೇಂದ್ರದ ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸೈಡಿಂಗ್ ಆಫೀಸರ್ ಆಗಿದ್ದರೆ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಸರ್ಕಾರಿ ಕರ್ತವ್ಯದ ಮೇಲೆ ನಿಯೋಜನೆಗೊಂಡ ಇತರ ಯಾವನೇ ಅಧಿಕಾರಿಯಾಗಿದ್ದರೆ ಅಥವಾ ಗುಮಾಸ್ತನಾಗಿದ್ದರೆ, ಅವನು, ಅಪರಾಧ ನಿರ್ಣಯವಾದ ಮೇಲೆ, ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಅವನು ಇತರ ಯಾವನೇ ವ್ಯಕ್ತಿಯಾಗಿದ್ದರೆ, ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಕ್ಕಾಗಿ, ವ್ಯಕ್ತಿಯನ್ನು, ಚುನಾವಣೆಯನ್ನು ನಡೆಸುವುದರಲ್ಲಿ ಅಥವಾ ಮತಗಳ ಎಣಿಕೆಯು ಸೇರಿದಂತೆ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಪಾಲ್ಗೊಳ್ಳುವುದು ಅಥವಾ ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಉಪಯೋಗಿಸಿದ ಮತ ಪತ್ರಗಳಿಗೆ ಅಥವಾ ಇತರ ದಸ್ತಾವೇಜುಗಳಿಗೆ ಚುನಾವಣೆ ನಡೆದ ತರುವಾಯ ಜವಾಬ್ದಾರನಾಗಿರುವುದು ಅವನ ಕರ್ತವ್ಯವಾಗಿದ್ದರೆ "ಸರ್ಕಾರಿ ಕರ್ತವ್ಯ"ದಲ್ಲಿ ನಿರತನಾಗಿರುವುದಾಗಿ ಭಾವಿಸತಕ್ಕದ್ದು. ಆದರೆ "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯು, ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಲ್ಲದೆ ಅನ್ಯಥಾ ವಿಧಿಸಿದ ಯಾವುದೇ ಕರ್ತವ್ಯವನ್ನು ಒಳಗೊಳ್ಳತಕ್ಕದ್ದಲ್ಲ.

(4) (2)ನೇ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**34. ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರತ್ವವನ್ನು ಉತ್ತೇಜಿಸುವುದು.**- ಈ ಅಧಿನಿಯಮದ ಅಡಿಯಲ್ಲಿ, ಚುನಾವಣೆಯ ಸಂಬಂಧದಲ್ಲಿ ಯಾವನೇ ವ್ಯಕ್ತಿಯು, ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಭಾರತದ ನಾಗರಿಕರ ವಿಭಿನ್ನ ವರ್ಗಗಳ ನಡುವೆ ವೈರತ್ವದ ಅಥವಾ ದ್ವೇಷದ ಭಾವನೆಗಳನ್ನು ಉತ್ತೇಜಿಸಿದರೆ ಅಥವಾ ಉತ್ತೇಜಿಸಲು ಪ್ರಯತ್ನಿಸಿದರೆ ಅಪರಾಧ ನಿರ್ಣಯವಾದ ಮೇಲೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**35. ಚುನಾವಣಾ ದಿವಸದ ಹಿಂದಿನ ದಿವಸದಂದು ಮತ್ತು ಚುನಾವಣಾ ದಿವಸದಂದು ಸಾರ್ವಜನಿಕ ಸಭೆಗಳ ನಿಷೇಧ.**- (1) ಯಾವನೇ ವ್ಯಕ್ತಿಯು, ಮತದಾನವು ಪ್ರಾರಂಭವಾಗುವ ದಿನಾಂಕಕ್ಕೆ ಮುಂಚೆ ನಲವತ್ತೆಂಟು ಗಂಟೆಗಳೊಳಗೆ ಅಥವಾ ಆ ಮತದಾನ ಕ್ಷೇತ್ರದಲ್ಲಿ ಚುನಾವಣೆಗಾಗಿ ಮತದಾನ ನಡೆಯುವಂಥ ದಿನಾಂಕದಂದು ಅಥವಾ ದಿನಾಂಕಗಳಂದು ಯಾವುದೇ ಸಾರ್ವಜನಿಕ ಸಭೆಯನ್ನು ಕರೆಯತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ ಅಥವಾ ಅದಕ್ಕೆ ಹಾಜರಾಗತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**36. ಚುನಾವಣೆಯ ದಿನದಂದು ಜಾತ್ರೆ ಇತ್ಯಾದಿಗಳನ್ನು ನಿಷೇಧಿಸಲು ಡೆಪ್ಯುಟಿ ಕಮಿಷನರ್ ಅವರಿಗಿರುವ ಅಧಿಕಾರ.**- ಡೆಪ್ಯುಟಿ ಕಮಿಷನರ್ ಅವರು, ಮುಕ್ತ ಮತ್ತು ನ್ಯಾಯೋಚಿತ ಚುನಾವಣೆಯನ್ನು ಖಚಿತಪಡಿಸುವುದಕ್ಕಾಗಿ, ಪಂಚಾಯತಿ ಪ್ರದೇಶದಲ್ಲಿ ಯಾವುದೇ ಜಾತ್ರೆ (ದನಗಳ ಜಾತ್ರೆಯೂ ಸೇರಿದಂತೆ) ಅಥವಾ ಸಂತೆಯನ್ನು ಅಂಥ ಪ್ರದೇಶದ ಗ್ರಾಮ ಪಂಚಾಯತಿಗೆ ನಡೆಯುವ ಚುನಾವಣೆಯ ದಿನದಂದು ನಿಷೇಧಿಸಬಹುದು.

**37. ಚುನಾವಣಾ ಸಭೆಗಳಲ್ಲಿ ಗಲಭೆ.**- (1) ಈ ಅಧಿನಿಯಮದ ಅಡಿಯಲ್ಲಿನ ಚುನಾವಣೆಯ ಸಂಬಂಧದಲ್ಲಿ ನಡೆಸಿದ ಸಾರ್ವಜನಿಕ ಸಭೆಯಲ್ಲಿ ಯಾವನೇ ವ್ಯಕ್ತಿಯು ಯಾವ ವ್ಯವಹಾರಕ್ಕಾಗಿ ಸಭೆಯನ್ನು ಕರೆಯಲಾಗಿದೆಯೋ ಆ ವ್ಯವಹಾರ ನಡೆಸುವುದನ್ನು ತಡೆಗಟ್ಟುವ ಉದ್ದೇಶದಿಂದ ಅನುಚಿತವಾಗಿ ನಡೆದುಕೊಂಡರೆ ಅಥವಾ ನಡೆದುಕೊಳ್ಳಲು ಇತರರನ್ನು ಪ್ರಚೋದಿಸಿದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವನೇ ಪೊಲೀಸ್ ಅಧಿಕಾರಿಯು, ಯಾವನೇ ವ್ಯಕ್ತಿಯು, (1)ನೇ ಉಪಪ್ರಕರಣದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಮಾಡಿರುವನೆಂದು ಯುಕ್ತವಾಗಿ ಸಂಶಯ ಪಟ್ಟರೆ, ಸಭೆಯ ಅಧ್ಯಕ್ಷನು ಹಾಗೆ ಮಾಡಲು ಕೋರಿದರೆ, ಅವನು, ಆ ವ್ಯಕ್ತಿಯನ್ನು ಅವನ ಹೆಸರು ಮತ್ತು ವಿಳಾಸವನ್ನು ಕೂಡಲೇ ತಿಳಿಸಲು ಅಗತ್ಯಪಡಿಸಬಹುದು ಮತ್ತು ಆ ವ್ಯಕ್ತಿಯು, ಅವನ ಹೆಸರು ಮತ್ತು ವಿಳಾಸವನ್ನು ಹಾಗೆ ತಿಳಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ ಅಥವಾ ಅವನು ಸುಳ್ಳು ಹೆಸರು ಮತ್ತು ವಿಳಾಸವನ್ನು ಕೊಟ್ಟಿರುವನೆಂದು ಪೊಲೀಸ್ ಅಧಿಕಾರಿಯು ಸಂಶಯಪಟ್ಟರೆ, ಪೊಲೀಸು ಅಧಿಕಾರಿಯು ವಾರಂಟಿಲ್ಲದೆ ಅವನನ್ನು ದಸ್ತಗಿರಿ ಮಾಡಬಹುದು.

**38. ಕಿರು ಹೊತ್ತಿಗೆಗಳು, ಭಿತ್ತಿಪತ್ರಗಳು, ಮುಂತಾದವುಗಳನ್ನು ಮುದ್ರಿಸುವುದರ ಬಗ್ಗೆ ನಿರ್ಬಂಧಗಳು.**- (1) ಯಾವನೇ ವ್ಯಕ್ತಿಯು, ಮುದ್ರಕ ಮತ್ತು ಪ್ರಕಾಶಕನ ಹೆಸರುಗಳು ಮತ್ತು ವಿಳಾಸಗಳು ಇಲ್ಲದಿರುವಂಥ ಯಾವುದೇ ಚುನಾವಣಾ ಕಿರು ಹೊತ್ತಿಗೆಗಳು ಅಥವಾ ಭಿತ್ತಿಪತ್ರವನ್ನು ಮುದ್ರಿಸತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದಲ್ಲ.

(2) ಯಾವನೇ ವ್ಯಕ್ತಿಯು ಯಾವುದೇ ಚುನಾವಣಾ ಕಿರುಹೊತ್ತಿಗೆಯನ್ನು ಅಥವಾ ಭಿತ್ತಿಪತ್ರವನ್ನು,-

(ಎ) ಅದರ ಪ್ರಕಾಶಕನ ಗುರುತಿನ ಬಗ್ಗೆ ತಾನು ರುಜು ಮಾಡಿರುವ ಮತ್ತು ತನ್ನನ್ನು ವೈಯಕ್ತಿಕವಾಗಿ ಬಲ್ಲ ಇಬ್ಬರು ವ್ಯಕ್ತಿಗಳು ಅನುಪ್ರಮಾಣಿಸಿದ ಘೋಷಣೆಯನ್ನು ಮುದ್ರಕನಿಗೆ ದ್ವಿಪ್ರತಿಯಲ್ಲಿ ಕೊಟ್ಟ ಹೊರತು; ಮತ್ತು

(ಬಿ) ದಸ್ತಾವೇಜುಗಳನ್ನು ಮುದ್ರಿಸಿದ ತರುವಾಯ, ಯುಕ್ತ ಕಾಲದೊಳಗೆ ಘೋಷಣೆಯ ಒಂದು ಪ್ರತಿಯನ್ನು ದಸ್ತಾವೇಜಿನ ಒಂದು ಪ್ರತಿಯೊಂದಿಗೆ ಮುದ್ರಕನು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಕಳುಹಿಸಿದ ಹೊರತು,

-ಮುದ್ರಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಮಾಡತಕ್ಕದ್ದಲ್ಲ.

(3) ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ಕೈಯಿಂದ ಬರೆದು ಪ್ರತಿ ಮಾಡುವುದನ್ನು ಹೊರತುಪಡಿಸಿ, ದಸ್ತಾವೇಜಿನ ಪ್ರತಿಗಳನ್ನು ಹೆಚ್ಚು ಮಾಡುವ ಯಾವುದೇ ಕಾರ್ಯವಿಧಾನವನ್ನು "ಮುದ್ರಣ"ವೆಂದು ಭಾವಿಸತಕ್ಕದ್ದು ಮತ್ತು "ಮುದ್ರಣಕಾರ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು; ಮತ್ತು

(ಬಿ) ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿಪತ್ರ ಎಂದರೆ ಯಾವೊಬ್ಬ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಒಂದು ಗುಂಪಿನ ಚುನಾವಣೆಗೆ ಉತ್ತೇಜನ ನೀಡುವ ಅಥವಾ ಪ್ರತಿಕೂಲ ಪ್ರಭಾವ ಉಂಟುಮಾಡುವ ಉದ್ದೇಶಕ್ಕಾಗಿ ಹಂಚಿರುವ ಯಾವುದೇ ಮುದ್ರಿತ ಕಿರುಪುಸ್ತಕ, ಕರಪತ್ರ ಅಥವಾ ಇತರ ದಸ್ತಾವೇಜು ಅಥವಾ ಚುನಾವಣೆಗೆ ಸಂಬಂಧಪಟ್ಟ ಯಾವುದೇ ಪ್ರಕಟಣಾ ಪತ್ರ ಅಥವಾ ಭಿತ್ತಿಪತ್ರ; ಆದರೆ, ಅದು ಚುನಾವಣಾ ಸಭೆಯ ದಿನಾಂಕ, ವೇಳೆ, ಸ್ಥಳ ಮತ್ತು ಇತರ ವಿವರಗಳನ್ನು ಅಥವಾ ಚುನಾವಣಾ ಏಜೆಂಟರಿಗಾಗಿ ಅಥವಾ ಕಾರ್ಯಕರ್ತರಿಗಾಗಿ ನಿಯತ ಸೂಚನೆಗಳನ್ನು ಮಾತ್ರ ತಿಳಿಸುವ ಯಾವುದೇ ಕರಪತ್ರ, ಪ್ರಕಟಣಾ ಪತ್ರ ಅಥವಾ ಭಿತ್ತಿಪತ್ರವನ್ನು ಒಳಗೊಳ್ಳುವುದಿಲ್ಲ.

(4) (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಯಾವುದೇ ಉಪಬಂಧವನ್ನು, ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**39. ಚುನಾವಣೆಯಲ್ಲಿ ಕಾನೂನು ವಿರುದ್ಧವಾಗಿ ವಾಹನವನ್ನು ಬಾಡಿಗೆಗಾಗಿ ಪಡೆಯುವುದಕ್ಕೆ ಅಥವಾ ಒದಗಿಸುವುದಕ್ಕೆ ದಂಡನೆ.**- ಯಾವನೇ ವ್ಯಕ್ತಿಯು, ಚುನಾವಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ 22ನೇ ಪ್ರಕರಣದ (ತು)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿರುವಂತಹ ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥನಾಗಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ, ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**40. ಕೆಲವು ಅಪರಾಧಗಳ ಸಂಬಂಧದಲ್ಲಿ ಪ್ರಾಸಿಕ್ಯೂಷನ್.**- ಡೆಪ್ಯುಟಿ ಕಮಿಷನರ್ ಅವರ ಆದೇಶದ ಮೂಲಕ ಅಥವಾ ಅವರ ಅಧಿಕಾರದ ಮೇರೆಗೆ ಮಾಡಿದ ದೂರು ಇದ್ದ ಹೊರತು, ಯಾವ ನ್ಯಾಯಾಲಯವೂ 33ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**41. ಹುದ್ದೆಯ ಅವಧಿ.**- ಗ್ರಾಮ ಪಂಚಾಯತಿಯ ಸದಸ್ಯರು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಐದು ವರ್ಷಗಳವರೆಗೆ ಹುದ್ದೆಯನ್ನು ಧಾರಣ ಮಾಡತಕ್ಕದ್ದು.

**42. ಹುದ್ದೆಯ ಅವಧಿಯ ಪ್ರಾರಂಭ.**- (1) ಸಾರ್ವತ್ರಿಕ ಚುನಾವಣೆಯಲ್ಲಿ ಅಥವಾ 5ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ನಡೆಸಲಾದ ಎರಡನೇ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರ ಹುದ್ದೆಯ ಅವಧಿಯು, ಗ್ರಾಮ ಪಂಚಾಯತಿಯ ಪ್ರಥಮ ಸಭೆಗೆ ಗೊತ್ತುಪಡಿಸಿದ ದಿನಾಂಕದಂದು ಪ್ರಾರಂಭವಾಗತಕ್ಕದ್ದು.

(2) ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು 5ನೇ ಪ್ರಕರಣದ ಅಡಿಯಲ್ಲಿ ಚುನಾಯಿತನಾದ ಸದಸ್ಯನ ಹುದ್ದೆಯ ಅವಧಿಯು, 5ನೇ ಪ್ರಕರಣದ (8)ನೇ ಉಪ-ಪ್ರಕರಣದ ಅಡಿಯಲ್ಲಿ ಅವರ ಹೆಸರನ್ನು ಪ್ರಕಟಿಸಿದ ದಿನಾಂಕದಂದು ಪ್ರಾರಂಭವಾಗತಕ್ಕದ್ದು.

**43. ಸದಸ್ಯರ ರಾಜೀನಾಮೆ.**- ಗ್ರಾಮ ಪಂಚಾಯಿತಿಯ ಸದಸ್ಯನು ತನ್ನ ಸದಸ್ಯತ್ವಕ್ಕೆ ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳು ಮುಕ್ತಾಯವಾದ ಮೇಲೆ, ಅವನು ಸದರಿ ಹದಿನೈದು ದಿವಸಗಳ ಆ ಅವಧಿಯೊಳಗೆ ಆ ರಾಜೀನಾಮೆಯನ್ನು ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ಹಿಂತೆಗೆದುಕೊಂಡಿದ್ದ ಹೊರತು, ಅವನ ಸ್ಥಾನವು ತೆರವಾಗತಕ್ಕದ್ದು. [1][ಅಧ್ಯಕ್ಷನು ರಾಜೀನಾಮೆ ಪತ್ರವನ್ನು ಗ್ರಾಮ ಪಂಚಾಯತಿಯ ಮುಂದಿನ ಸಭೆಯಲ್ಲಿ ಮಂಡಿಸುವಂತೆ ಮಾಡತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

[2][[1][**43ಎ. ಸದಸ್ಯರನ್ನು ತೆಗೆದುಹಾಕುವುದು.**– (1) ಸರ್ಕಾರವು, ಗ್ರಾಮಪಂಚಾಯತ್‌ನ ಶಿಫಾರಸ್ಸಿನಂತೆ ಅಥವಾ ಅನ್ಯಥಾ ಯಾವೊಬ್ಬ ಸದಸ್ಯನನ್ನು,–

(i) ಆತನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ದುರ್ನಡತೆಯ ಅಥವಾ ತಲೆ ತಗ್ಗಿಸುವಂಥ ನಡತೆಯ ತಪ್ಪಿತಸ್ಥನಾಗಿದ್ದಾನೆಂದು,

(ii) (ಎ) ಜಿಲ್ಲಾ ವೈದ್ಯಾಧಿಕಾರಿಯು ಪ್ರಮಾಣೀಕರಿಸಬಹುದಾದಂತೆ ಆ ಹುದ್ದೆಯನ್ನು ಹೊಂದಲು ವೈದ್ಯಕೀಯವಾಗಿ ಅಸಮರ್ಥನಾದ ಸಂದರ್ಭದಲ್ಲಿ,

(ಬಿ) ದಿವಾಳಿ ಅಥವಾ ಅಸ್ವಸ್ಥಚಿತ್ತದವನಾದ ಸಂದರ್ಭದಲ್ಲಿ,

– ಸದಸ್ಯರಾಗಿ ತಮ್ಮ ಕರ್ತವ್ಯ ನಿರ್ವಹಿಸಲು ಅಸಮರ್ಥರಾಗಿರುವರೆಂದು ಅಥವಾ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಅಸಡ್ಡೆ ಉಳ್ಳವರಾಗಿದ್ದಾರೆಂದು;

(iii) ಅವನು ಪಂಚಾಯತ್‌ನ ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳಿಗೆ ಹಾಜರಾಗಲು ತಪ್ಪಿದ್ದರೆ, ಮತ್ತು ಅಧ್ಯಕ್ಷನಾಗಲಿ ಅಥವಾ ಉಪಾಧ್ಯಕ್ಷನಾಗಲಿ ಸಭೆಯನ್ನು ಕರೆಯಬೇಕಾಗಿದ್ದಾಗ ಅಥವಾ ಅಗತ್ಯವಾಗಿದ್ದಾಗ ಒಂದಾದ ಮೇಲೊಂದರಂತೆ ನಡೆಯಬೇಕಾದ ಎರಡು ಸಭೆಗಳನ್ನು ಕರೆಯಲು ತಪ್ಪಿದ್ದಾನೆಂದು; ಅಥವಾ

(iv) ಚುನಾವಣೆ ಸಂದರ್ಭದಲ್ಲಿ ಪರಿಗಣನೆಗಾಗಿ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿಯ ಸದಸ್ಯ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಹುದ್ದೆಯ ವ್ಯಾಪಾರಕ್ಕೆ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿಯ ಯಾವುದೇ ಮತದಾರ ಅಥವಾ ಸದಸ್ಯನನ್ನು ಸೆಳೆಯುವುದು ಅಥವಾ ದಬ್ಬಾಳಿಕೆ ಅಥವಾ ವಂಚನೆ ಮಾಡಿದ್ದಾನೆಂದು;

(v) ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ, ಕರಾರು ಸಂಬಂಧದ ಅಥವಾ ಕಾಮಗಾರಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಯಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ತೊಡಗಿರುವುದು ಕಂಡುಬಂದರೆ ಅಥವಾ ಪಾಲುದಾರನಂತೆ, ನೌಕರನಂತೆ ಅಥವಾ ಅಂಥ ಅನ್ಯಥಾ ಸಂಘಸಂಸ್ಥೆ ಮಂಡಲಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು,

– ಕಂಡು ಬಂದರೆ, ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದುಹಾಕಬಹುದು.

**ವಿವರಣೆ:**– ಈ ಪ್ರಕರಣದ ಉದ್ದೇಶಕ್ಕಾಗಿ, ಕುಟುಂಬದ ಹತ್ತಿರದ ಬಂಧುಗಳು ಎಂದರೆ:–

(ಎ) ಆಕೆಯ ಅಥವಾ ಆತನೊಂದಿಗೆ ವಾಸವಾಗಿರುವ ವ್ಯಕ್ತಿಯ ಪತ್ನಿ ಅಥವಾ ಪತಿ;

(ಬಿ) ಮಗ ಅಥವಾ ಮಗಳು ಅಥವಾ ಮಲಮಗ ಅಥವಾ ಮಲಮಗಳು,

(ಸಿ) ಅಂಥ ವ್ಯಕ್ತಿಯ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿರುವ, ರಕ್ತಸಂಬಂಧವಾಗಿರಲಿ ಅಥವಾ ವಿವಾಹದಿಂದಾಗಲಿ, ಸಂಬಂಧಿಸಿದ ಯಾವೊಬ್ಬ ಇತರ ವ್ಯಕ್ತಿ.

(2) ಯಾವ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಅಥವಾ ಸದಸ್ಯನನ್ನು ಹಾಗೆ ತೆಗೆದು ಹಾಕಲಾಗಿದೆಯೋ ಆ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅಥವಾ ಸದಸ್ಯನು, ಸದಸ್ಯನಾಗಿ ಅಂಥ ಸ್ಥಾನದ ಪ್ರಕಾರ್ಯಗಳನ್ನು ನಿರ್ವಹಿಸುವುದು ನಿಂತು ಹೋಗತಕ್ಕದ್ದು ಮತ್ತು ಅಧಿನಿಯಮದ 12ನೇ ಪ್ರಕರಣದಲ್ಲಿ ಹೇಳಿರುವಂತೆ ಯಾವುದೇ ಪಂಚಾಯತ್‌ಗೆ ಮುಂದಿನ ಆರು ವರ್ಷಗಳವರೆಗೆ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗತಕ್ಕದ್ದು.

**43ಬಿ. ಸದಸ್ಯರಿಂದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆ:** (1) ಪ್ರತಿಯೊಬ್ಬ ಸದಸ್ಯನು, ತಾನು ಮತ್ತು ತನ್ನ ಅವಿಭಕ್ತ ಕುಟುಂಬದ ಎಲ್ಲ ಸದಸ್ಯರು ಎರಡು ಲಕ್ಷಕ್ಕಿಂತ ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯನ್ನು ಮತ್ತು ಹೊಣೆಗಾರಿಕೆಗಳನ್ನು ಹೊಂದಿರುವುದರ ಬಗ್ಗೆ ರಾಜ್ಯ ಚುನಾವಣಾ ಆಯೋಗದ ಮುಂದೆ ಘೋಷಣೆಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ತನ್ನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳ ಒಳಗೆ ಮತ್ತು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಅವನ ಅಧಿಕಾರಾವಧಿ ಮುಗಿಯುವ ತನಕ ಮತ್ತು ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ ಒಂದು ತಿಂಗಳ ಒಳಗೆ ಸಂಬಂಧಪಟ್ಟ ಗ್ರಾಮಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಮೂಲಕ ದಾಖಲು ಮಾಡತಕ್ಕದ್ದು:

ಪರಂತು, ಹಣಕಾಸು ವರ್ಷ ಮುಕ್ತಾಯವಾಗುವ ಎರಡು ತಿಂಗಳಿಗಿಂತ ಮೊದಲು ಅಂಥ ಸದಸ್ಯನ ಪದಾವಧಿಯು ಪ್ರಾರಂಭವಾದರೆ, ಅಂಥ ಸದಸ್ಯನು ಮುಂದಿನ ಹಣಕಾಸು ವರ್ಷ ಪ್ರಾರಂಭವಾದ ನಂತರ ಎರಡು ತಿಂಗಳೊಳಗೆ ತನ್ನ ಘೋಷಣೆಯನ್ನು ದಾಖಲು ಮಾಡತಕ್ಕದ್ದು.

(2) ಆಯಾ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು, ಎಲ್ಲ ಸದಸ್ಯರು ದಾಖಲು ಮಾಡಿದ ಘೋಷಣೆಯನ್ನು ಸ್ವೀಕರಿಸತಕ್ಕದ್ದು ಮತ್ತು ಆ ವರ್ಷದ ಮೇ ಮೊದಲ ವಾರದಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದು ಮತ್ತು ತಡವಾಗಿ ಸಲ್ಲಿಸಿದ ಸಂದರ್ಭದಲ್ಲಿ, ವರ್ಷದ ಜುಲೈ ಮೊದಲನೆ ವಾರದಲ್ಲಿ ಘೋಷಣೆಯನ್ನು, ದಾಖಲು ಮಾಡಿದ ಸದಸ್ಯರ ಪಟ್ಟಿಯನ್ನು ಮತ್ತು ಘೋಷಣೆಯನ್ನು ಮಾಡದೆ ಇರುವಂಥ ಸದಸ್ಯರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ದಾಖಲು ಮಾಡಿರುವಂಥ ಸದಸ್ಯ, ಆನಂತರ ಯಾವುದೇ ಸ್ವತ್ತನ್ನು ಅಥವಾ ಇತರ ಆಸ್ತಿಯನ್ನು ಆರ್ಜಿಸಿದರೆ ಅಥವಾ ವಿಲೆ ಮಾಡಿದರೆ ಸಂದರ್ಭಾನುಸಾರವಾಗಿ ಹಾಗೆ ಸ್ವಾಧೀನಪಡಿಸಿಕೊಂಡ ಅಥವಾ ವಿಲೆ ಮಾಡಿದ ದಿನಾಂಕದಿಂದ ನಲವತ್ತೈದು ದಿವಸಗಳ ಒಳಗಾಗಿ ಆ ಬಗ್ಗೆ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಮೂಲಕ ರಾಜ್ಯ ಚುನಾವಣಾ ಆಯೋಗದ ಮುಂದೆ ಮತ್ತೆ ಘೋಷಣೆಯನ್ನು ದಾಖಲು ಮಾಡತಕ್ಕದ್ದು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು (1)ನೇ ಉಪಪ್ರಕರಣದಲ್ಲಿ ಹೇಳಿರುವ ಅದೇ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(4) ಸದಸ್ಯನು ಘೋಷಣೆಯನ್ನು ನಿಗದಿತ ಅವಧಿಯೊಳಗೆ ದಾಖಲು ಮಾಡದಿದ್ದರೆ ಅಥವಾ ಸುಳ್ಳು ಘೋಷಣೆಯನ್ನು ದಾಖಲು ಮಾಡಿರುವುದು ಕಂಡುಬಂದರೆ, ರಾಜ್ಯ ಚುನಾವಣಾ ಆಯುಕ್ತರು, ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಅವಕಾಶವನ್ನು ನೀಡಿದ ನಂತರ, ಸದಸ್ಯತ್ವದಿಂದ ಅವನನ್ನು ತೆಗೆದುಹಾಕತಕ್ಕದ್ದು ಮತ್ತು ಅವನ ಸ್ಥಾನವು ಖಾಲಿಯಾಗಿದೆ ಎಂದು ಘೋಷಿಸತಕ್ಕದ್ದು.][1]][2]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**44. ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆ.-** (1) ಪ್ರತಿಯೊಂದು ಗ್ರಾಮ ಪಂಚಾಯತಿಯು, [1][5ನೇ ಪ್ರಕರಣದ (8)ನೇ ಉಪ ಪ್ರಕರಣದಡಿ ಚುನಾಯಿತರಾದ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳಿನೊಳಗಾಗಿ][1], [2][ಅಥವಾ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಹುದ್ದೆಯ ಅವಧಿಯ ಮುಕ್ತಾಯದ ನಿಕಟ ಪೂರ್ವದಲ್ಲಿ][2] ಗ್ರಾಮ ಪಂಚಾಯತಿಯ ಇಬ್ಬರು ಸದಸ್ಯರನ್ನು ಅನುಕ್ರಮವಾಗಿ ಅದರ ಅಧ್ಯಕ್ಷನನ್ನಾಗಿ ಮತ್ತು ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು ಮತ್ತು ಮರಣ, ರಾಜೀನಾಮೆ, ತೆಗೆದು ಹಾಕಿದ ಕಾರಣದಿಂದಾಗಿ ಅಥವಾ ಬೇರೆ ರೀತಿಯಲ್ಲಿ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಯಾವುದೇ ಹುದ್ದೆಯು ತೆರವಾದ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಇನ್ನೊಬ್ಬ ಸದಸ್ಯನನ್ನು ಸಂದರ್ಭಾನುಸಾರ ಅಧ್ಯಕ್ಷನನ್ನಾಗಿ ಅಥವಾ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2000ದ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 03-04-2000ರಿಂದ ಸೇರಿಸಲಾಗಿದೆ.

(2) [1][ರಾಜ್ಯ ಚುನಾವಾಣಾ ಆಯೋಗದ][1] ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಒಳಪಟ್ಟು, ಡೆಪ್ಯುಟಿ ಕಮಿಷನರ್ ಅವರು,-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ಎ) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ವ್ಯಕ್ತಿಗಳಿಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಹುದ್ದೆಗಳನ್ನು ಮೀಸಲಿಡತಕ್ಕದ್ದು ಮತ್ತು ರಾಜ್ಯದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ, ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳ ಜನಸಂಖ್ಯೆಯು ಅಥವಾ ರಾಜ್ಯದಲ್ಲಿರುವ ಅನುಸೂಚಿತ ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಅಂಥ ಹುದ್ದೆಗಳ ಸಂಖ್ಯೆಯು ರಾಜ್ಯದಲ್ಲಿರುವ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು:

[1][ಪರಂತುಕ x x x][1]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಬಿಟ್ಟುಬಿಡಲಾಗಿದೆ.

[1][ಪರಂತು, ಅನುಸೂಚಿತ ಜಾತಿಯ ಯಾವೊಬ್ಬ ವ್ಯಕ್ತಿಯು ಲಭ್ಯವಿರದಿದ್ದರೆ, ಆ ವರ್ಗಕ್ಕೆ ಮೀಸಲಾದ ಸ್ಥಾನಗಳನ್ನು ಅನುಸೂಚಿತ ಪಂಗಡಗಳ ವ್ಯಕ್ತಿಯಿಂದ ಮತ್ತು ಅನುಸೂಚಿತ ಪಂಗಡದ ವ್ಯಕ್ತಿಯು ಲಭ್ಯವಿರದಿದ್ದರೆ ಅನುಸೂಚಿತ ಜಾತಿಯ ವ್ಯಕ್ತಿಯಿಂದ ತುಂಬತಕ್ಕದ್ದು.[1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(ಬಿ) ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ, ರಾಜ್ಯದಲ್ಲಿರುವ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಸರಿಸುಮಾರು ಮೂರನೇ ಒಂದರಷ್ಟು ಸಂಖ್ಯೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳನ್ನು ಮೀಸಲಿಡತಕ್ಕದ್ದು: [2][ಆದರೆ ಈ ಖಂಡದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ನಿರ್ಧರಿಸಿ ಮೀಸಲಿರಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಒಟ್ಟು ಹುದ್ದೆಗಳ ಸಂಖ್ಯೆಯು, (ಎ) ಖಂಡದ ಅಡಿಯಲ್ಲಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಮತ್ತು ಈ ಖಂಡದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು ರಾಜ್ಯದಲ್ಲಿ ಆ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು, ಮೀರತಕ್ಕದ್ದಲ್ಲ.][2]

[1][ಪರಂತು, ಈ ಖಂಡದ ಅಡಿಯಲ್ಲಿ ಮೀಸಲಿರಿಸಿದ ಹುದ್ದೆಗಳ ಪೈಕಿ, ಅಂಥ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ಎಂಬತ್ತರಷ್ಟನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇಕಡಾ ಇಪ್ಪತ್ತರಷ್ಟು ಹುದ್ದೆಗಳನ್ನು 'ಬಿ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು:

ಮತ್ತು ಪರಂತು, "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳನ್ನು "ಬಿ" ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು, ಹಾಗೆಯೇ "ಬಿ" ಪ್ರವರ್ಗಕ್ಕೆ

ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.][1]

1. 1995ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 13-01-1995ರಿಂದ ಸೇರಿಸಲಾಗಿದೆ.
2. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.

(ಸಿ) ರಾಜ್ಯದಲ್ಲಿರುವ ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಮತ್ತು ಮೀಸಲಿಟ್ಟಿರದ ಹುದ್ದೆಗಳಲ್ಲಿ [ಶೇಕಡಾ ಐವತ್ತರಷ್ಟಕ್ಕೆ] ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ [2][ಒಟ್ಟಾರೆಯಾಗಿ ಒಟ್ಟು ಸಂಖ್ಯೆಯ ಅರ್ಧದಷ್ಟು ಪರಿಮಿತಿಗೆ ಒಳಪಟ್ಟು ಮುಂದಿನ ಸಂಖ್ಯೆಗೆ ಪೂರ್ಣಾಂಕಗೊಳಿಸಿದಷ್ಟು][2] ಮೀಸಲಿಡತಕ್ಕದ್ದು:

ಅಲ್ಲದೆ, ಈ ಉಪ ಪ್ರಕರಣದ ಅಡಿಯಲ್ಲಿ ಮೀಸಲಿಟ್ಟ ಹುದ್ದೆಗಳನ್ನು ಸರದಿ ಪ್ರಕಾರ ವಿವಿಧ ಗ್ರಾಮ ಪಂಚಾಯತಿಗಳಿಗೆ ಹಂಚಿಕೆ ಮಾಡತಕ್ಕದ್ದು.

***ವಿವರಣೆ.-*** ಸಂದೇಹಗಳ ನಿವಾರಣೆಗಾಗಿ ಈ ಪ್ರಕರಣದ ಅಡಿಯಲ್ಲಿ ಹುದ್ದೆಯ ಮೀಸಲಾತಿಯ ಉದ್ದೇಶಗಳಿಗಾಗಿ ಸರದಿಯ ಸೂತ್ರವು 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಪ್ರಾರಂಭವಾದ ನಂತರ ನಡೆಸುವ ಪ್ರಥಮ ಚುನಾವಣೆಯಿಂದ ಪ್ರಾರಂಭವಾಗತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

**45. ಗ್ರಾಮ ಪಂಚಾಯತಿಯ ಸ್ಥಾಪನೆಯಾದಾಗ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಚುನಾವಣಾ ಕಾರ್ಯವಿಧಾನ ಇತ್ಯಾದಿ.-** [1][(1) ಗ್ರಾಮ ಪಂಚಾಯತಿಯ ಸದಸ್ಯರುಗಳ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ರಚನೆ, ಪುನರ್‌ರಚನೆ ಅಥವಾ ಸ್ಥಾಪನೆಯಾದ ಮೇಲೆ ಮತ್ತು ಯಾವುದೇ ಸಂದರ್ಭದಲ್ಲಿ 5ನೇ ಪ್ರಕರಣದ (8)ನೇ ಉಪ-ಪ್ರಕರಣದಡಿ ಚುನಾಯಿತ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳಿನೊಳಗೆ [2][ಮತ್ತು ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಹುದ್ದೆಯ ಅವಧಿಯ ಮುಕ್ತಾಯದ ನಿಕಟಪೂರ್ವದಲ್ಲಿ][2] ಮತ್ತು ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಹುದ್ದೆಯಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನವುಂಟಾದಾಗಲೆಲ್ಲಾ, ಗೊತ್ತುಪಡಿಸಿರುವ ಅಧಿಕಾರಿಯು ಗ್ರಾಮ ಪಂಚಾಯತಿಯ ಸಭೆಯನ್ನು ಕರೆಯತಕ್ಕದ್ದು ಮತ್ತು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅವನಿಗೆ ಮತ ಚಲಾಯಿಸುವ ಹಕ್ಕು ಇರತಕ್ಕದ್ದಲ್ಲ ಮತ್ತು ಅಂಥ ಸಭೆಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಅಥವಾ ಸಂದರ್ಭಾನುಸಾರ ಇಬ್ಬರನ್ನು ಚುನಾಯಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2000ದ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 03-04-2000ರಿಂದ ಸೇರಿಸಲಾಗಿದೆ.

(2) ಈ ಅಧಿನಿಯಮದ ಅಡಿಯಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯ ಸಿಂಧುತ್ವಕ್ಕೆ ಸಂಬಂಧಪಟ್ಟ ಯಾವುದೇ ವಿವಾದವನ್ನು ಗ್ರಾಮ ಪಂಚಾಯತಿಯ ಪ್ರದೇಶದ ಮೇಲೆ ಅಥವಾ ಗ್ರಾಮ ಪಂಚಾಯತಿ ಪ್ರದೇಶದ ಬಹುಭಾಗದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ, [1][ಗೊತ್ತುಪಡಿಸಿದ ನ್ಯಾಯಾಲಯವು][1] ತೀರ್ಮಾನಿಸತಕ್ಕದ್ದು ಮತ್ತು ಆ ಬಗ್ಗೆ ಆತನ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**46. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿ ಮತ್ತು ಸೇವಾ ಷರತ್ತುಗಳು.-** [1][(1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಲಾದುದನ್ನು ಹೊರತುಪಡಿಸಿ, ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷ ಮತ್ತು ಪ್ರತಿಯೊಬ್ಬ ಉಪಾಧ್ಯಕ್ಷನ ಹುದ್ದೆಯ ಅವಧಿಯು, ಆತನ ಚುನಾವಣೆಯ ದಿನಾಂಕದಿಂದ [2][ಐದು ವರ್ಷಗಳು][2] ಅಥವಾ ಅತನು ಗ್ರಾಮ ಪಂಚಾಯತಿಯ ಸದಸ್ಯನಾಗಿರುವುದು ನಿಂತುಹೋಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯಾಗಿರತಕ್ಕದ್ದು.][1]

1. 2000ದ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 03-04-2000ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಪ್ರತಿಯೋಜಿಸಲಾಗಿದೆ.

(2) ಅಧ್ಯಕ್ಷನ [1][ಉಪಾಧ್ಯಕ್ಷ ಮತ್ತು ಸ್ಥಾಯಿ ಸಮಿತಿಯ ಅಧ್ಯಕ್ಷ][1] ವೇತನ ಮತ್ತು ಸೇವಾ ಷರತ್ತುಗಳು ಗೊತ್ತುಪಡಿಸಿರುವಂತೆ ಇರತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**47. ಹುದ್ದೆಯು ಖಾಲಿ ಇರುವ ಅವಧಿಯಲ್ಲಿ ಅಧ್ಯಕ್ಷನ ನೇಮಕ.-** ಗ್ರಾಮ ಪಂಚಾಯತಿಯ ಅಧ್ಯಕ್ಷನ ಹುದ್ದೆಯು ಖಾಲಿ ಇರುವ ಅವಧಿಯಲ್ಲಿ ಉಪಾಧ್ಯಕ್ಷನು, ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಇಲ್ಲದಿದ್ದಾಗ [1][ಸಂಬಂಧಿಸಿದ ಗ್ರಾಮಪಂಚಾಯತ್‌ನ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷನು, ಅಂಥ ಅಧ್ಯಕ್ಷನು ಇಲ್ಲದಿದ್ದಾಗ][1] ಡೆಪ್ಯುಟಿ ಕಮಿಷನರ್ ಅವರು ನೇಮಕ ಮಾಡಿದ ಒಬ್ಬ ಅಧಿಕಾರಿಯು, ಅಧ್ಯಕ್ಷನು ಕ್ರಮಬದ್ಧವಾಗಿ ಚುನಾಯಿತನಾಗುವವರೆಗೆ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅವನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**48. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ತೆಗೆದುಹಾಕುವಿಕೆ.-** (1) ಗ್ರಾಮ ಪಂಚಾಯತಿಯ ಅಧ್ಯಕ್ಷನು, ತನ್ನ ಸಹಿ ಸಹಿತ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು ಮತ್ತು ಗ್ರಾಮ ಪಂಚಾಯತಿಯ ಉಪಾಧ್ಯಕ್ಷನು ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ಮತ್ತು ಅಧ್ಯಕ್ಷನು ಇಲ್ಲದಿದ್ದಾಗ ತನ್ನ ಸಹಿ ಸಹಿತ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು.

[4][[3][ಪರಂತು, ಗ್ರಾಮಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನು,-

(i) ದೈಹಿಕ ಅಥವಾ ಮಾನಸಿಕ ಅಶಕ್ತತೆ ಉಳ್ಳವನೆಂದು, ರಾಜ್ಯ ಚುನಾವಣಾ ಆಯೋಗವು ಅನುಮೋದಿಸಿರುವ ಸಕ್ಷಮ ಪ್ರಾಧಿಕಾರವು ಪ್ರಮಾಣೀಕರಿಸಿರುವುದರ ರುಜುವಾತಿನ ಆಧಾರದ ಮೇಲೆ; ಅಥವಾ

(ii) ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಉದ್ಯೋಗದಲ್ಲಿರುವುದರ ಆಧಾರದ ಮೇಲೆ;

– ತನ್ನ ಪದಕ್ಕೆ ಅಥವಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡತಕ್ಕದ್ದು, ಅಥವಾ ಆತನನ್ನು ತೆಗೆದುಹಾಕಲು ಬದ್ಧನಾಗಿರತಕ್ಕದ್ದು.][4]

ಮತ್ತು ಪರಂತು, ಅಸಿಸ್ಟೆಂಟ್ ಕಮೀಷನರುನು, ರಾಜೀನಾಮೆಯ ಕಾರಣವನ್ನು ವಿಚಾರಣೆ ಮಾಡತಕ್ಕದ್ದು ಮತ್ತು ಬೆದರಿಕೆ, ಒತ್ತಾಯ, ಅನುಚಿತ ಪ್ರಭಾವ ಮತ್ತು ಪ್ರಲೋಭನೆಯಿಂದಾಗಿ ರಾಜೀನಾಮೆಯನ್ನು ಸಲ್ಲಿಸಿಲ್ಲವೆಂದು ಮತ್ತು ಸ್ವಇಚ್ಛೆಯಿಂದ ಸಲ್ಲಿಸಿದ್ದಾನೆಂದು ಮನಗಾಣತಕ್ಕದ್ದು:

ಮತ್ತೂ ಪರಂತು, ಡೆಪ್ಯುಟಿ ಕಮೀಷನರರು, ದೂರನ್ನು ಸ್ವೀಕರಿಸಿದ ತರುವಾಯ, ಬೆದರಿಕೆ, ಒತ್ತಾಯ ಅನುಚಿತ ಪ್ರಭಾವ ಮತ್ತು ಪ್ರಲೋಭನೆಯಿಂದಾಗಿ ರಾಜೀನಾಮೆಯನ್ನು ಸಲ್ಲಿಸಲಾಗಿದೆ ಮತ್ತು ಸ್ವಇಚ್ಛೆಯಿಂದ ಸಲ್ಲಿಸಲಾಗಿಲ್ಲವೆಂಬ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ಅಂಥ ರಾಜೀನಾಮೆಯನ್ನು ಸ್ವೀಕರಿಸತಕ್ಕದ್ದಲ್ಲ][3]

(2) ಗ್ರಾಮಪಂಚಾಯತಿಯ, ಪ್ರತಿಯೊಬ್ಬ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅವನು ಗ್ರಾಮ ಪಂಚಾಯತಿಯ ಸದಸ್ಯನಾಗಿರುವುದು ನಿಂತುಹೋದಾಗ ತನ್ನ ಹುದ್ದೆಯನ್ನು ತೆರವು ಮಾಡತಕ್ಕದ್ದು.

(3) (1)ನೇ ಉಪ ಪ್ರಕರಣದ ಅಡಿಯ ಪ್ರತಿಯೊಂದು ರಾಜೀನಾಮೆಯು ಸಂದರ್ಭಾನುಸಾರ ಅಸಿಸ್ಟೆಂಟ್ ಕಮಿಷನರ್ ಅಥವಾ ಅಧ್ಯಕ್ಷನು ಅದನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳು ಮುಗಿದ ನಂತರ, ಆ ಹತ್ತು ದಿನಗಳ ಅವಧಿಯೊಳಗೆ ಆತ ಆ ರಾಜೀನಾಮೆಯನ್ನು ಸಂದರ್ಭಾನುಸಾರ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಅಥವಾ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ಹಿಂತೆಗೆದುಕೊಳ್ಳದಿದ್ದರೆ, ಜಾರಿಗೆ ಬರತಕ್ಕದ್ದು.

(4) ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು, ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರ ಅಲಕ್ಷ್ಯತೆ ತೋರುತ್ತಿರುವುದಕ್ಕಾಗಿ [1][ಅಥವಾ ದುರ್ನಡತೆಯ ತಪ್ಪಿತಸ್ಥನಾಗಿರುವುದಕ್ಕಾಗಿ][1] ಅಧ್ಯಕ್ಷ ಅಥವಾ ಉಪಾಧ್ಯಕ್ಷ ಹುದ್ದೆಯಿಂದ, ಅವನಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ [1][ಮತ್ತು ಅವಶ್ಯಕವಾದಲ್ಲಿ ತಾಲ್ಲೂಕು ಪಂಚಾಯತಿಯಿಂದ ವರದಿಯೊಂದನ್ನು ಪಡೆದುಕೊಂಡು ಅದನ್ನು ಪರಿಶೀಲಿಸಿದ ತರುವಾಯ][1] [2][ ಸರ್ಕಾರವು][2] ಆ ಹುದ್ದೆಯಿಂದ ತೆಗೆದು ಹಾಕಬಹುದಾಗಿರತಕ್ಕದ್ದು ಮತ್ತು ಹಾಗೆ ತೆಗೆದುಹಾಕಲಾದ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು (2)ನೇ ಉಪಪ್ರಕರಣದ ಅಡಿಯಲ್ಲಿ ಸದಸ್ಯನಾಗಿರುವುದು ನಿಂತುಹೋಗಿರದಿದ್ದಲ್ಲಿ ಅವನು ಅಂಥ ಗ್ರಾಮ ಪಂಚಾಯತಿಯ ಸದಸ್ಯ ಹುದ್ದೆಯ ಉಳಿದ ಅವಧಿಯಲ್ಲಿ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ.

(5) (4)ನೇ ಉಪ ಪ್ರಕರಣದ ಅಡಿಯಲ್ಲಿ ಹುದ್ದೆಯಿಂದ ತೆಗೆದುಹಾಕಲ್ಪಟ್ಟ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು [2][ಸರ್ಕಾರವು][2] ಗ್ರಾಮಪಂಚಾಯತಿಯ ಸದಸ್ಯತ್ವದಿಂದ ಸಹ ತೆಗೆದುಹಾಕಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25-2-2016 ರಿಂದ ಸೇರಿಸಲಾಗಿದೆ.
4. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 12.07.2017ರಿಂದ ಪ್ರತಿಯೋಜಿಸಲಾಗಿದೆ.

**49. ಗ್ರಾಮಪಂಚಾಯತಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ಸೂಚನೆ.-** [2][1][2] ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು, ಅವನಲ್ಲಿ ವಿಶ್ವಾಸವಿಲ್ಲವೆಂಬ ನಿರ್ಣಯವನ್ನು ಗೊತ್ತುಪಡಿಸಬಹುದಾದಂತಹ ಕಾರ್ಯವಿಧಾನಕ್ಕನುಸಾರವಾಗಿ, ಆ ಉದ್ದೇಶಕ್ಕಾಗಿ ವಿಶೇಷವಾಗಿ ಕರೆದ ಸಭೆಯಲ್ಲಿ ಗ್ರಾಮ ಪಂಚಾಯತಿಯ ಒಟ್ಟು ಸದಸ್ಯರ ಸಂಖ್ಯೆಯ ಮೂರನೇ ಎರಡರಷ್ಟಕ್ಕಿಂತ ಕಡಿಮೆಯಿಲ್ಲದಷ್ಟು ಸಂಖ್ಯೆಯ ಬಹುಮತದಿಂದ ಅಂಗೀಕರಿಸಿದರೆ ತಕ್ಷಣವೇ ತನ್ನ ಸ್ಥಾನವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು:

ಪರಂತು, ಒಟ್ಟು ಸದಸ್ಯರ [3][ಅರ್ಧಕ್ಕಿಂತ][3] ಕಡಿಮೆಯಿಲ್ಲದಷ್ಟು ಸದಸ್ಯರು ನಿರ್ಣಯದ ನೋಟೀಸಿಗೆ ಸಹಿ ಮಾಡಿರದಿದ್ದರೆ ಮತ್ತು ನಿರ್ಣಯವನ್ನು ಮಂಡಿಸುವ ಉದ್ದೇಶದ ನೋಟೀಸನ್ನು ಕನಿಷ್ಠಪಕ್ಷ ಹತ್ತು ದಿನಗಳ ಮುಂಚೆ ಕೊಟ್ಟಿರದಿದ್ದರೆ ಅಂತಹ ಯಾವುದೇ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ:

[1][ಮತ್ತು ಪರಂತು ಅಧ್ಯಕ್ಷ ಅಥವಾ ಉಪಾಧ್ಯಕ್ಷನ ವಿರುದ್ಧವಾಗಿ ಅವಿಶ್ವಾಸವನ್ನು ಸೂಚಿಸುವ ಯಾವ ನಿರ್ಣಯವನ್ನೂ ಆತನು ಚುನಾಯಿತನಾದ ದಿನಾಂಕದಿಂದ [3][ಮೊದಲ ಮೂವತ್ತು ತಿಂಗಳುಗಳ ಒಳಗೆ][3] ಮಂಡಿಸತಕ್ಕದ್ದಲ್ಲ:

ಇದೂ ಅಲ್ಲದೆ, ಯಾವೊಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು, ಗ್ರಾಮ ಪಂಚಾಯತಿಯು ಪರಿಶೀಲಿಸಿ ಅದನ್ನು ಅಂಗೀಕರಿಸದಿರುವಲ್ಲಿ, ಅದೇ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸಂಬಂಧದಲ್ಲಿ ಗ್ರಾಮ ಪಂಚಾಯತಿಯು ತನ್ನ ನಿರ್ಣಯವನ್ನು ನೀಡಿದ ದಿನಾಂಕದಿಂದ [3][ಎರಡು ವರ್ಷಗಳ ಒಳಗೆ][3] ಅದೇ ರೀತಿಯ ನಿರ್ಣಯದ ನೋಟೀಸನ್ನು ನೀಡತಕ್ಕದ್ದಲ್ಲ ಅಥವಾ ಮಂಡಿಸತಕ್ಕದ್ದಲ್ಲ.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರನ್ವಯ ಮರು ಸಂಖ್ಯೆ ನೀಡಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][(2) (1) ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಪಂಚಾಯತ್‌ನ ಯಾವುದೇ ಸ್ಕೀಮು, ಕ್ರಿಯಾಯೋಜನೆಯನ್ನು ಅಥವಾ ಸರ್ಕಾರದ ನಿರ್ದೇಶನವನ್ನು ಅಥವಾ ಪಂಚಾಯತ್‌ನ ಪ್ರಾಜೆಕ್ಟ್‌ನ್ನು ಕಾರ್ಯಗತಗೊಳಿಸುವಾಗ ಅಥವಾ ತನ್ನ ಅಧಿಕಾರವನ್ನು ಅಥವಾ ಪ್ರಾಧಿಕಾರವನ್ನು ದುರ್ಬಳಕೆ ಅಥವಾ ದುರುಪಯೋಗ ಮಾಡಿಕೊಂಡಿದ್ದಾನೆಂಬ ಅಥವಾ ತನ್ನ ಸದಸ್ಯತ್ವದ ಕಾಲಾವಧಿಯಲ್ಲಿ ಪಂಚಾಯತ್‌ನ ನಿಧಿಗಳನ್ನು ಅಥವಾ ಇತರ ಆಸ್ತಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾನೆಂಬ ಅಥವಾ ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ಅನ್ಯಥಾ ಭ್ರಷ್ಟಾಚಾರದಲ್ಲಿ ತೊಡಗಿದ್ದಾನೆಂಬ ನಿರ್ದಿಷ್ಟ ಆಪಾದನೆ ಮೇಲೆ ಹೊರತು, ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**50. ಸಭೆಗಳ ಕಾರ್ಯವಿಧಾನ.-** ಗ್ರಾಮ ಪಂಚಾಯಿತಿ ಸಭೆಯಲ್ಲಿನ ಕಾರ್ಯವಿಧಾನವು ಗೊತ್ತುಪಡಿಸಿರುವಂತೆ ಇರತಕ್ಕದ್ದು.

**51. ಆಕಸ್ಮಿಕ ಖಾಲಿ ಸ್ಥಾನಗಳು.-** ಗ್ರಾಮ ಪಂಚಾಯತಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಅಥವಾ ಸದಸ್ಯನ ಹುದ್ದೆಯಲ್ಲಾಗುವ ಆಕಸ್ಮಿಕ ಖಾಲಿಸ್ಥಾನವನ್ನು, ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಅಥವಾ ಸದಸ್ಯನನ್ನು ಚುನಾಯಿಸುವ ಮೂಲಕ ಭರ್ತಿ ಮಾಡತಕ್ಕದ್ದು. ಅವನು, ಯಾರ ಸ್ಥಾನಕ್ಕೆ ಚುನಾಯಿತನಾಗಿರುವನೋ ಆ ಸ್ಥಾನ ತೆರವಾಗದೇ ಇದ್ದಿದ್ದರೆ ಅಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಹುದ್ದೆಯನ್ನು ಯಾವ ಅವಧಿಗೆ ಧಾರಣ ಮಾಡಬಹುದಾಗಿತ್ತೋ ಆ ಅವಧಿಯವರೆಗೆ ಹುದ್ದೆಯನ್ನು ಧಾರಣ ಮಾಡತಕ್ಕದ್ದು.

**52. ಗ್ರಾಮ ಪಂಚಾಯತಿಯ ಸಭೆ.-** (1) ಗ್ರಾಮ ಪಂಚಾಯತಿಯು, ಕಾರ್ಯಕಲಾಪವನ್ನು ನಡೆಸುವುದಕ್ಕಾಗಿ, ಗ್ರಾಮ ಪಂಚಾಯತಿಯ ಕಛೇರಿಯಲ್ಲಿ ಕನಿಷ್ಠಪಕ್ಷ [1][ಒಂದು ತಿಂಗಳಿಗೊಮ್ಮೆ][1] ಮತ್ತು ಅಧ್ಯಕ್ಷನು ನಿರ್ಧರಿಸಬಹುದಾದಂಥ ಕಾಲದಲ್ಲಿ ಸಭೆ ಸೇರತಕ್ಕದ್ದು.

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(2) ಅಧ್ಯಕ್ಷನು, ಸೂಕ್ತವೆಂದು ತಾನು ಯೋಚಿಸಿದಾಗಲೆಲ್ಲಾ ಮತ್ತು ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಬರಹದಲ್ಲಿ ಕೋರಿದಾಗ ಮತ್ತು ಅಂಥ ಕೋರಿಕೆಯು ತಲುಪಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಒಂದು ದಿನ ವಿಶೇಷ ಸಭೆಯನ್ನು ಕರೆಯತಕ್ಕದ್ದು.

(3) ಗ್ರಾಮ ಪಂಚಾಯತಿಯ ಕಾರ್ಯದರ್ಶಿಯು, ಸದಸ್ಯರಿಗೆ ಮತ್ತು ಸರ್ಕಾರ ಗೊತ್ತುಪಡಿಸಬಹುದಾದಂಥ ಅಧಿಕಾರಿಗಳಿಗೆ ಅಂಥ ಸಭೆಯ ಸ್ಥಳ, ದಿನಾಂಕ ಮತ್ತು ವೇಳೆ ಮತ್ತು ಅಲ್ಲಿ ನಡೆಯಲಿರುವ ಕಾರ್ಯಕಲಾಪವನ್ನು ನಿರ್ದಿಷ್ಟಪಡಿಸಿ ಸಾಮಾನ್ಯ ಸಭೆಯ ಬಗ್ಗೆ ಏಳು ಪೂರ್ಣ ದಿವಸಗಳ ನೋಟೀಸನ್ನು ಮತ್ತು ವಿಶೇಷ ಸಭೆಯ ಬಗ್ಗೆ ಮೂರು ಪೂರ್ಣ ದಿವಸಗಳ ನೋಟೀಸನ್ನು ಕೊಡತಕ್ಕದ್ದು ಮತ್ತು ಅದನ್ನು ಗ್ರಾಮ ಪಂಚಾಯತಿಯ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಅಂಟಿಸತಕ್ಕದ್ದು.

(4) (3)ನೇ ಉಪ ಪ್ರಕರಣದ ಅಡಿಯಲ್ಲಿ ನೋಟೀಸನ್ನು ಯಾರಿಗೆ ಕೊಡಲಾಗಿದೆಯೋ ಆ ಅಧಿಕಾರಿಗಳು ಮತ್ತು ಪಂಚಾಯತಿ ಪ್ರದೇಶದ ಮೇಲೆ ಅಥವಾ ಅದರ ಯಾವುದೇ ಭಾಗದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಇತರ ಸರ್ಕಾರಿ ಅಧಿಕಾರಿಗಳು ಗ್ರಾಮ ಪಂಚಾಯತಿಯ ಪ್ರತಿಯೊಂದು ಸಭೆಗೆ [1][ಹಾಜರಾಗತಕ್ಕದ್ದು ಮತ್ತು ವ್ಯವಹರಣೆಗಳಲ್ಲಿ ಪಾಲ್ಗೊಳ್ಳತಕ್ಕದ್ದು][1] ಆದರೆ ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(5) ಅಧ್ಯಕ್ಷನು, (2)ನೇ ಉಪ ಪ್ರಕರಣದಲ್ಲಿ ಹೇಳಿರುವಂತೆ ವಿಶೇಷ ಸಭೆಯನ್ನು ಕರೆಯಲು ತಪ್ಪಿದರೆ, ಉಪಾಧ್ಯಕ್ಷನು ಅಥವಾ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗದಷ್ಟು ಸದಸ್ಯರು, ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಹದಿನೈದು ದಿವಸಗಳು ಮೀರದಂತೆ ಒಂದು ದಿನ ಅಂಥ ಸಭೆಯನ್ನು ಕರೆಯತಕ್ಕದ್ದು ಮತ್ತು ಸದಸ್ಯರಿಗೆ ನೋಟೀಸು ಕೊಡುವಂತೆ ಮತ್ತು ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಗ್ರಾಮ ಪಂಚಾಯತಿಯ ಕಾರ್ಯದರ್ಶಿಗೆ ಅಗತ್ಯಪಡಿಸಬಹುದು.

[1][**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ ಅಂಥ ಸಾಮಾನ್ಯ ಸಭೆ ಅಥವಾ ವಿಶೇಷ ಸಭೆ ಎಂಬ ಪದವು ಅಂಥ ಸಾಮಾನ್ಯ ಸಭೆಯ ಅಥವಾ ಸಂದರ್ಭಾನುಸಾರವಾಗಿ ವಿಶೇಷ ಸಭೆಯ ವಿಸ್ತರಿಸಿದ ಸಭೆಯನ್ನು ಒಳಗೊಳ್ಳುತ್ತದೆ.

(6) ಗ್ರಾಮಪಂಚಾಯತ್ ಕಾರ್ಯಕಲಾಪಗಳನ್ನು ಪ್ರಸಾರ ಮಾಡಬೇಕೆಂದು ಪಂಚಾಯತ್ ಅಭಿಪ್ರಾಯಪಟ್ಟರೆ, ಪ್ರತಿಯೊಂದು ಸಭೆಯ ಕಾರ್ಯಕಲಾಪಗಳನ್ನು ಪ್ರಸಾರ ಮಾಡಲು ಅನುಮತಿಸಬಹುದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**53. ಕೋರಂ ಮತ್ತು ಕಾರ್ಯವಿಧಾನ.-** (1) ಗ್ರಾಮ ಪಂಚಾಯತಿಯ ಸಭೆಗಾಗಿ ಕೋರಂ, ಸದಸ್ಯರ ಒಟ್ಟು ಸಂಖ್ಯೆಯ [1][ಅರ್ಧದಷ್ಟು][1] ಆಗಿರತಕ್ಕದ್ದು. ಸಭೆಗೆ ಗೊತ್ತುಪಡಿಸಿರುವ ಕಾಲದಲ್ಲಿ ಕೋರಂ ಇರದಿದ್ದರೆ, ಅಧ್ಯಕ್ಷತೆ ವಹಿಸುವ ಪ್ರಾಧಿಕಾರಿಯು ಮೂವತ್ತು ನಿಮಿಷಗಳವರೆಗೆ ಕಾಯತಕ್ಕದ್ದು ಮತ್ತು ಅಂಥ ಅವಧಿಯಲ್ಲೂ ಕೋರಂ ಇಲ್ಲದಿದ್ದರೆ ಅಧ್ಯಕ್ಷತೆ ವಹಿಸುವ ಪ್ರಾಧಿಕಾರಿಯು ಸಭೆಯನ್ನು ಮಾರನೇ ದಿನದಂದು ಅಥವಾ ತರುವಾಯದ ದಿನದಂದು ಅವರು ನಿಗದಿಪಡಿಸಬಹುದಾದಂಥ ಕಾಲಕ್ಕೆ ಮುಂದೂಡತಕ್ಕದ್ದು. ಅದು ಪ್ರಾರಂಭವಾದ ತರುವಾಯ ಯಾವುದೇ ಕಾಲದಲ್ಲಿ ಕೋರಂ ಇಲ್ಲದಿರುವುದರ ಬಗ್ಗೆ ಅವರ ಗಮನ ಸೆಳೆದರೆ ಅವರು ಮೂವತ್ತು ನಿಮಿಷಗಳವರೆಗೆ ಕಾಯ್ದು ತರುವಾಯ ಅದೇ ಪ್ರಕಾರ ಸಭೆಯನ್ನು ಮುಂದೂಡತಕ್ಕದ್ದು. ಹಾಗೆ ನಿಗದಿಪಡಿಸಿದ ಸಭೆಯ ಬಗ್ಗೆ ನೋಟೀಸನ್ನು ಗ್ರಾಮ ಪಂಚಾಯತಿಯ ಕಛೇರಿಯಲ್ಲಿ ಅಂಟಿಸತಕ್ಕದ್ದು. ಕೋರಂನ ಅಭಾವದಿಂದಾಗಿ ಹಾಗೆ ಮುಂದೂಡಲಾದ ಸಭೆಯಲ್ಲಿ ಪರ್ಯಾಲೋಚಿಸಲು ಆಗದಿದ್ದಂಥ ಕಾರ್ಯಕಲಾಪವನ್ನು ಹಾಗೆ ನಿಗದಿಪಡಿಸಿದ ಸಭೆಯ ಅಥವಾ ಮುಂದೂಡಿದ ಯಾವುದೇ ತರುವಾಯದ ಕೋರಂ ಇರುವಂಥ ಸಭೆಯ ಮುಂದೆ ತರತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು:

[3][[2][ಪರಂತು, ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯ ಉದ್ದೇಶಕ್ಕಾಗಿ ಕರೆದ ಯಾವುದೇ ಸಭೆಯಲ್ಲಿ ಸಭೆಗೆ ಗೊತ್ತುಪಡಿಸಿದ ಸಮಯದಲ್ಲಿ ಕೋರಂ ಇಲ್ಲದಿದ್ದರೆ, ಅಧ್ಯಕ್ಷತೆ ವಹಿಸುವ ವ್ಯಕ್ತಿಯು ಮೂವತ್ತು ನಿಮಿಷಗಳ ತನಕ ಕಾಯತಕ್ಕದ್ದು ಮತ್ತು ಅಂಥ ಸಮಯದೊಳಗೂ ಕೋರಂ ಇಲ್ಲದಿದ್ದರೆ, ಸಾರ್ವಜನಿಕ ರಜೆ ದಿನ ಅಲ್ಲದ ಕೆಲಸದ ದಿನದಂದು ಅಂಥ ಸಮಯಕ್ಕೇ ಸಭೆಯನ್ನು ಆತನು/ಆಕೆಯು ಮುಂದೂಡಬಹುದು ಮತ್ತು ಮುಂದೂಡಿದ ಎರಡನೇ ದಿನವೂ ಕೋರಂ ಇರದಿದ್ದರೆ, ಚುನಾವಣೆಯನ್ನು ನಡೆಸತಕ್ಕದ್ದು. ಇದಕ್ಕೆ ಕೋರಂ ಅಗತ್ಯ ಇರತಕ್ಕದ್ದಲ್ಲ.][2]][3]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.
2. 1996ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 23-09-1996ರಿಂದ ಸೇರಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅನ್ಯಥಾ ಉಪ ಬಂಧಿಸಿರುವಂತೆ ಹೊರತು, ಗ್ರಾಮ ಪಂಚಾಯತಿಯ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷ ಅಥವಾ ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಇವರಿಬ್ಬರ ಗೈರುಹಾಜರಿಯಲ್ಲಿ ಹಾಜರಿರುವ ಸದಸ್ಯರು, ತಮ್ಮಲ್ಲೇ ಒಬ್ಬರನ್ನು ಆ ಸಂದರ್ಭದಲ್ಲಿ ಸಭೆಯ ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡತಕ್ಕದ್ದು.

(3) ಎಲ್ಲ ವಿಷಯಗಳನ್ನು, ಅನ್ಯಥಾ ನಿರ್ದಿಷ್ಟವಾಗಿ ಉಪಬಂಧಿಸಿದ್ದ ಹೊರತು, ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು. ಸಂದರ್ಭಾನುಸಾರ, ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅಥವಾ ಅಧ್ಯಕ್ಷತೆ ವಹಿಸುವ ವ್ಯಕ್ತಿಯು, ತಾನು ಮತ ನೀಡುವುದರಿಂದ ವಿಮುಖನಾದ ಹೊರತು, ವಿಷಯದ ಪರವಾಗಿ ಮತ್ತು ವಿರುದ್ಧವಾಗಿ ಬಂದ ಮತಗಳ ಸಂಖ್ಯೆಯನ್ನು ಘೋಷಿಸುವುದಕ್ಕೆ ಮುಂಚೆ ತನ್ನ ಮತವನ್ನು ಕೊಡತಕ್ಕದ್ದು ಮತ್ತು ಸಮಾನ ಮತಗಳು ಬಂದ ಸಂದರ್ಭದಲ್ಲಿ ಅವನು ತನ್ನ ನಿರ್ಣಾಯಕ ಮತವನ್ನು ಕೊಡಬಹುದು.

(4) ಗ್ರಾಮ ಪಂಚಾಯತಿಯ ಯಾರೇ ಸದಸ್ಯನು, ಗ್ರಾಮ ಪಂಚಾಯತಿಯ ಸಭೆಯಲ್ಲಿ ಪರ್ಯಾಲೋಚನೆಗಾಗಿ ಬರುವ ಯಾವುದೇ ವಿಷಯದ ಸಂಬಂಧದಲ್ಲಿ ಆ ವಿಷಯವು ಸಾರ್ವಜನಿಕರಿಗೆ ಸಾಮಾನ್ಯವಾಗಿ ಅನ್ವಯವಾಗುವುದಾದರೂ ಅದರಲ್ಲಿ ಅವನಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಣಕಾಸಿನ ಹಿತಾಸಕ್ತಿ ಇದ್ದರೆ, ಮತ ಕೊಡತಕ್ಕದ್ದಲ್ಲ ಅಥವಾ ಅದರ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ ಮತ್ತು ಅಧ್ಯಕ್ಷತೆ ವಹಿಸುವ ವ್ಯಕ್ತಿಗೆ ಅಂಥ ಹಿತಾಸಕ್ತಿ ಇದ್ದರೆ ಅಂಥ ವಿಷಯ ಪರ್ಯಾಲೋಚನೆಗಾಗಿ ಬಂದಾಗ ಅವನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದಲ್ಲ.

[1][(4ಎ) ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು ಗ್ರಾಮ ಪಂಚಾಯತಿಯ ಸಭೆಯಲ್ಲಿ ಪರಿಗಣನೆಗಾಗಿ ಬರುವ ಯಾವುದೇ ವಿಷಯದಲ್ಲಿ ತಾನು ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಯಾವುದೇ ಹಣಕಾಸಿನ ರೂಪದ ಹಿತಾಸಕ್ತಿ ಹೊಂದಿರುವುದನ್ನು ಗ್ರಾಮ ಪಂಚಾಯತಿಗೆ ತಿಳಿಸುವುದು ಕರ್ತವ್ಯವಾಗಿರತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(5) ಅಧ್ಯಕ್ಷತೆ ವಹಿಸಿರುವ ವ್ಯಕ್ತಿಗೆ ಚರ್ಚೆಯಲ್ಲಿರುವ ಯಾವುದೇ ವಿಷಯದಲ್ಲಿ ಯಾವುದೇ ಹಣಕಾಸಿನ ಹಿತಾಸಕ್ತಿ ಇದೆಯೆಂದು ಸಭೆಯಲ್ಲಿ ಹಾಜರಿರುವ ಯಾವನೇ ಸದಸ್ಯನು ಅಭಿಪ್ರಾಯಪಟ್ಟರೆ ಮತ್ತು ಆ ಬಗ್ಗೆ ಒಂದು ಸೂಚನೆಯನ್ನು ಅಂಗೀಕರಿಸಿದರೆ, ಅವನು ಅಂಥ ಚರ್ಚೆಯು ನಡೆಯುತ್ತಿರುವಾಗ ಆ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದಲ್ಲ ಅಥವಾ ಮತ ಕೊಡತಕ್ಕದ್ದಲ್ಲ ಅಥವಾ ಅದರಲ್ಲಿ ಭಾಗವಹಿಸತಕ್ಕದ್ದಲ್ಲ. ಅಂಥ ಚರ್ಚೆಯು ಮುಂದುವರಿಯುತ್ತಿರುವ ಕಾಲದಲ್ಲಿ ಆ ಸಭೆಯಲ್ಲಿ ಸಭೆಯ ಅಧ್ಯಕ್ಷತೆ ವಹಿಸಲು ಗ್ರಾಮಪಂಚಾಯತಿಯ ಯಾವನೇ ಸದಸ್ಯನನ್ನು ಆಯ್ಕೆ ಮಾಡಬಹುದು.

[1][(6)ಗ್ರಾಮ ಪಂಚಾಯತಿಯ ಅಥವಾ ಅದರ ಯಾವುದೇ ಸಮಿತಿಯ ಸಭೆಗೆ ಹಾಜರಾಗುವುದಕ್ಕಾಗಿ ಪ್ರತಿಯೊಬ್ಬ ಸದಸ್ಯನಿಗೆ ಉಪವೇಶನದ ಪ್ರತಿ ದಿವಸಕ್ಕೆ ನಿಯಮಿಸಬಹುದಾದಂತೆ ಅಂತಹ ಉಪವೇಶನ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

**54. ನಿರ್ಣಯವನ್ನು ಮಾರ್ಪಾಟು ಮಾಡುವುದು ಅಥವಾ ರದ್ದುಪಡಿಸುವುದು.**- ಗ್ರಾಮ ಪಂಚಾಯತಿಯ ಯಾವುದೇ ನಿರ್ಣಯವನ್ನು, ಅದನ್ನು ಅಂಗೀಕರಿಸಿದ ತರುವಾಯ ಆರು ತಿಂಗಳೊಳಗೆ 52ನೇ ಪ್ರಕರಣದ (3)ನೇ ಉಪ ಪ್ರಕರಣದ ಅಗತ್ಯತೆಗಳನ್ನು ಪೂರೈಸುವ ಅಂಥ ಸಭೆಯಲ್ಲಿ ಮಾರ್ಪಡಿಸಲು ಅಥವಾ ರದ್ದುಪಡಿಸಲು ಪ್ರಸ್ತಾವಿಸಿರುವಂಥ ನಿರ್ಣಯವನ್ನು ಮತ್ತು ಅಂಥ ನಿರ್ಣಯದ ಮಾರ್ಪಾಟು ಅಥವಾ ರದ್ದಿಯಾತಿ ಸೂಚನೆಯನ್ನು ಅಥವಾ ಪ್ರಸ್ತಾವವನ್ನು ಪೂರ್ಣವಾಗಿ ವಿವರಿಸಿ ನೋಟೀಸನ್ನು ಕೊಡಲಾಗಿರುವ ಸಾಮಾನ್ಯ ಅಥವಾ ವಿಶೇಷ ಸಭೆಯಲ್ಲಿ ಸದಸ್ಯರ ಒಟ್ಟು ಸಂಖ್ಯೆಯ ಅರ್ಧಕ್ಕಿಂತ ಕಡಿಮೆಯಲ್ಲದಷ್ಟು ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕವಲ್ಲದೆ ಮಾರ್ಪಾಡು ಮಾಡತಕ್ಕದ್ದಲ್ಲ ಅಥವಾ ರದ್ದುಪಡಿಸತಕ್ಕದ್ದಲ್ಲ.

**55. ನಡವಳಿಕೆ ಪುಸ್ತಕ.**- (1) ಗ್ರಾಮ ಪಂಚಾಯತಿಯ ಪ್ರತಿಯೊಂದು ಸಭೆಯಲ್ಲಿ ಹಾಜರಿರುವ ಸದಸ್ಯರ ಮತ್ತು ಯಾರಾದರೂ ಅಧಿಕಾರಿಗಳು ಹಾಜರಿದ್ದರೆ ಅವರ ಹೆಸರುಗಳನ್ನು ಮತ್ತು ವ್ಯವಹರಣೆಗಳನ್ನು ಮತ್ತು ಅನುಕ್ರಮವಾಗಿ ಯಾವುದೇ ನಿರ್ಣಯದ ಪರ ಅಥವಾ ವಿರುದ್ಧ ಮತ ಕೊಡುವ ಸದಸ್ಯರ ಹೆಸರುಗಳನ್ನು ಬರೆದಿಡಬೇಕೆಂದು ಸಭೆಯಲ್ಲಿ ಹಾಜರಿರುವ ಯಾವನೇ ಸದಸ್ಯನು ಇಚ್ಛಿಸಿದರೆ ಹೆಸರುಗಳನ್ನು, ನಡವಳಿಕೆಗಳನ್ನು ಆ ಉದ್ದೇಶಕ್ಕಾಗಿ ಒದಗಿಸಿದ ಪುಸ್ತಕದಲ್ಲಿ ಬರೆದಿಡತಕ್ಕದ್ದು ಮತ್ತು ಅವುಗಳನ್ನು ಓದಿ ಹೇಳಿದ ಮತ್ತು ಒಪ್ಪಿಕೊಂಡ ತರುವಾಯ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆ ವಹಿಸಿದ ವ್ಯಕ್ತಿಯು ಅದಕ್ಕೆ ರುಜು ಮಾಡತಕ್ಕದ್ದು. ಅವುಗಳು ಎಲ್ಲ ಯುಕ್ತ ಕಾಲಗಳಲ್ಲಿ ಗ್ರಾಮ ಪಂಚಾಯಿತಿಯ ಯಾವನೇ ಸದಸ್ಯ ಅಥವಾ ಗ್ರಾಮ ಪಂಚಾಯತಿಗೆ ನಡೆಯುವ ಚುನಾವಣೆಯಲ್ಲಿ ಮತ ನೀಡಲು ಹಕ್ಕುಳ್ಳವನಾದ ಯಾವನೇ ವ್ಯಕ್ತಿಯ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು. [1][ಸಭೆಗಳಲ್ಲಿ ಅಂಗೀಕರಿಸಲಾದ ನಿರ್ಣಯಗಳ ಪರವಾಗಿ ಅಥವಾ ವಿರುದ್ಧವಾಗಿ ಅನುಕ್ರಮವಾಗಿ ಮತ ನೀಡಿದ ಸದಸ್ಯರುಗಳ ಹೆಸರುಗಳ ವಿವರಗಳನ್ನು ಒಳಗೊಂಡಂತೆ ವ್ಯವಹರಣೆಗಳ ಒಂದು ಪ್ರತಿಯನ್ನು ಗ್ರಾಮ ಪಂಚಾಯತಿಯ ಸೂಚನಾ ಫಲಕದ ಮೇಲೆ ಸಭೆ ನಡೆದ ಮೂರು ದಿವಸಗಳೊಳಗಾಗಿ ಪ್ರದರ್ಶಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(2) ಗ್ರಾಮ ಪಂಚಾಯತಿಯು ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಒಂದು ಪ್ರತಿಯನ್ನು ಸಭೆಯ ದಿನಾಂಕದಿಂದ ಹತ್ತು ದಿವಸಗಳೊಳಗೆ ಕಾರ್ಯದರ್ಶಿಯು ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು. [1][ಮತ್ತು ಎಲ್ಲಾ ಸದಸ್ಯರುಗಳಿಗೆ ಸಭೆಯ ನಡವಳಿಯ ಪ್ರತಿಗಳನ್ನು ಒದಗಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

**56. ಅಡ್ಡಪ್ರಶ್ನೆಗಳು ಮತ್ತು ನಿರ್ಣಯಗಳು.**- (1) ಯಾರೇ ಸದಸ್ಯನು ಗ್ರಾಮ ಪಂಚಾಯಿತಿಯ ಕಾಮಗಾರಿಯ ನಿರ್ವಹಣೆಯಲ್ಲಿನ ಯಾವುದೇ ನಿರ್ಲಕ್ಷತೆ, ಗ್ರಾಮ ಪಂಚಾಯಿತಿಯ ಸ್ವತ್ತಿನ ಯಾವುದೇ ಪೋಲು ಅಥವಾ ಯಾವುದೇ ಸ್ಥಳೀಯ ಪ್ರದೇಶದ ಬೇಡಿಕೆಗಳ ಬಗ್ಗೆ ಅಧ್ಯಕ್ಷನ ಗಮನವನ್ನು ಸೆಳೆಯಬಹುದು ಮತ್ತು ಅಪೇಕ್ಷಣೀಯವೆಂದು ಕಂಡುಬರಬಹುದಾದಂಥ ಯಾವುವೇ ಸುಧಾರಣೆಗಳ ಬಗ್ಗೆ ಸಲಹೆ ಕೊಡಬಹುದು.

(2) ಪ್ರತಿಯೊಬ್ಬ ಸದಸ್ಯನು, ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಪಂಚಾಯತಿಯ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಿರ್ಣಯಗಳನ್ನು ಮಂಡಿಸಲು ಮತ್ತು ಅಧ್ಯಕ್ಷರಿಗೆ ಅಡ್ಡ ಪ್ರಶ್ನೆ ಹಾಕಲು ಹಕ್ಕನ್ನು ಹೊಂದಿರತಕ್ಕದ್ದು.

**57. ವ್ಯವಹರಣೆಗಳ ವಿಧಿಮಾನ್ಯತೆ.-** (1) ಗ್ರಾಮ ಪಂಚಾಯತಿಯ ಸದಸ್ಯನಾಗಿ ಅಥವಾ ಅಧ್ಯಕ್ಷನಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ರಚಿಸಿರುವ ಗ್ರಾಮ ಪಂಚಾಯತಿಯ ಸಮಿತಿಯ ಸದಸ್ಯನಾಗಿ ಕಾರ್ಯ ನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯ ಚುನಾವಣೆ ಮತ್ತು ನೇಮಕದಲ್ಲಿನ ಯಾವುದೇ ಅನರ್ಹತೆಯು ಮತ್ತು ದೋಷವು ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಅಥವಾ ಯಾವುದೇ ಸಮಿತಿಯ ಕಾರ್ಯವನ್ನು ಅಥವಾ ವ್ಯವಹರಣೆಯನ್ನು, ಅಂಥ ಯಾವುದೇ ಕಾರ್ಯದಲ್ಲಿ ಅಥವಾ ವ್ಯವಹರಣೆಯಲ್ಲಿ ಕಾರ್ಯನಿರ್ವಹಿಸಲು ಹಕ್ಕುಳ್ಳವರಾಗಿದ್ದ ಸದಸ್ಯರಲ್ಲಿ ಬಹು ಸಂಖ್ಯಾತರು ಭಾಗವಹಿಸಿ ನಿರ್ವಹಿಸಿರುವಲ್ಲಿ ನಿರರ್ಥಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

[1][ಪರಂತು, ಸಂಬಂಧಪಟ್ಟ ಗ್ರಾಮಪಂಚಾಯತ್ ಅಂಗೀಕರಿಸಿದ ಯಾವುದೇ ನಿರ್ಣಯವು ಅಧಿನಿಯಮದ ಅಥವಾ ನಿಯಮಗಳ ನಿಬಂಧನೆಗಳನ್ನು ಉಲ್ಲಂಘಿಸಿದೆಯೆಂದು ಸಂಬಂಧಿಸಿದ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯು ತೀರ್ಮಾನಿಸಿದರೆ, ಅದನ್ನು ಅಧಿನಿಯಮದ 237ನೇ ಪ್ರಕರಣದ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕಾಗಿ ತಾಲ್ಲೂಕು ಪಂಚಾಯತ್ ಅಧ್ಯಕ್ಷನಿಗೆ ಕಳುಹಿಸಿಕೊಡತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಯಾವುದೇ ಗ್ರಾಮ ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ಯಾವುವೇ ಸಮಿತಿಗಳ ಯಾವುದೇ ನಿರ್ಣಯವನ್ನು, ಯಾವನೇ ಸದಸ್ಯನಿಗೆ ನೋಟೀಸನ್ನು ಜಾರಿ ಮಾಡುವುದರಲ್ಲಾದ ಯಾವುದೇ ಅಕ್ರಮತೆಯ ಕಾರಣದಿಂದಾಗಿ ಅಸಿಂಧುವೆಂದು ಭಾವಿಸತಕ್ಕದ್ದಲ್ಲ. ಪರಂತು, ಗ್ರಾಮ ಪಂಚಾಯತಿಯ ಅಥವಾ ಸಮಿತಿಯ ವ್ಯವಹರಣೆಗಳಿಗೆ ಅಂಥ ಅಕ್ರಮತೆಯಿಂದ ಪ್ರತಿಕೂಲ ಪರಿಣಾಮ ಉಂಟಾಗಿರಕೂಡದು.

(3) ತದ್ವಿರುದ್ಧವಾಗಿ ರುಜುವಾತಾಗುವವರೆಗೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಗ್ರಾಮ ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ಸಮಿತಿಯ ಪ್ರತಿಯೊಂದು ಸಭೆಯ ಯಾವ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮಕ್ಕೆ ಅನುಸಾರವಾಗಿ ನಡವಳಿಕೆಯನ್ನು ಬರೆಯಲಾಗಿದೆಯೋ ಮತ್ತು ಸಹಿ ಮಾಡಲಾಗಿದೆಯೋ ಆ ವ್ಯವಹರಣೆಗಳಿಗೆ ಸಂಬಂಧಿಸಿದ ಪ್ರತಿಯೊಂದು ಸಭೆಯನ್ನು ಕ್ರಮಬದ್ಧವಾಗಿ ಕರೆಯಲಾಗಿತ್ತೆಂದು ಮತ್ತು ನಡೆಸಲಾಯಿತೆಂದು ಮತ್ತು ಸಭೆಯ ಎಲ್ಲ ಸದಸ್ಯರು ಕ್ರಮಬದ್ಧವಾಗಿ ಅರ್ಹತೆಹೊಂದಿದ್ದರೆಂದು ಭಾವಿಸತಕ್ಕದ್ದು ಮತ್ತು ಆ ವ್ಯವಹರಣೆಗಳು ಸಮಿತಿಯ ವ್ಯವಹರಣೆಗಳಾಗಿದ್ದರೆ ಅಂಥ ಸಮಿತಿಯನ್ನು ಕ್ರಮಬದ್ಧವಾಗಿ ರಚಿಸಲಾಗಿತ್ತೆಂದು ಮತ್ತು ಆ ನಡವಳಿಕೆಯಲ್ಲಿ ಉಲ್ಲೇಖಿಸಿದ ವಿಷಯಗಳನ್ನು ವ್ಯವಹರಿಸಲು ಅದು ಅಧಿಕಾರವನ್ನು ಹೊಂದಿತ್ತು ಎಂದು ಭಾವಿಸತಕ್ಕದ್ದು.

(4) ಗ್ರಾಮ ಪಂಚಾಯತಿಯಲ್ಲಿ ಅಥವಾ ಗ್ರಾಮ ಪಂಚಾಯತಿಯ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನವು ಉಂಟಾದ ಅವಧಿಯಲ್ಲಿ, ಮುಂದುವರೆದಿರುವ ಸದಸ್ಯರು, ಆ ಯಾವುದೇ ಖಾಲಿ ಸ್ಥಾನವು ಉಂಟಾಗದಿರುತ್ತಿದ್ದರೆ ಹೇಗೋ ಹಾಗೆ ಕಾರ್ಯ ನಿರ್ವಹಿಸಬಹುದು.

## ಅಧ್ಯಾಯ IV

### ಗ್ರಾಮ ಪಂಚಾಯತಿಯ, ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು

**58. ಗ್ರಾಮ ಪಂಚಾಯತಿಯ ಪ್ರಕಾರ್ಯಗಳು.-** [1][(1) ಗ್ರಾಮ ಪಂಚಾಯತಿಯು ಅನುಸೂಚಿ Iರಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಪ್ರಕಾರ್ಯದ ನಿರ್ವಹಣೆಗಾಗಿ ನಿಧಿಯನ್ನು ಒದಗಿಸಿರುವಲ್ಲಿ ಗ್ರಾಮ ಪಂಚಾಯತಿಯು ಅಂಥ ಪ್ರಕಾರ್ಯವನ್ನು ನಿರ್ವಹಿಸಲು ನಿರೂಪಿಸಲಾಗಿರುವ ಮಾರ್ಗದರ್ಶನಗಳಿಗೆ ಅಥವಾ ಸೂತ್ರಗಳಿಗನುಸಾರವಾಗಿ ಅಂಥ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು.

(1ಎ) (1)ನೇ ಉಪ-ಪ್ರಕರಣದಲ್ಲಿ ಮತ್ತು ಅನುಸೂಚಿ-I ರಲ್ಲಿ ಏನೇ ಇದ್ದರೂ, ಗ್ರಾಮ ಪಂಚಾಯತಿಯ ವಶದಲ್ಲಿರುವ ಗ್ರಾಮ ಪಂಚಾಯತಿ ನಿಧಿಯು ಅನುಮತಿಸುವಷ್ಟರಮಟ್ಟಿಗೆ ಗ್ರಾಮ ಪಂಚಾಯತಿಯು ಈ ಕೆಳಗಿನ ವಿಷಯಗಳ ಬಗ್ಗೆ ಪಂಚಾಯತಿ ಪ್ರದೇಶದೊಳಗೆ ಸೂಕ್ತವಾಗಿ ಅವಕಾಶ ಕಲ್ಪಿಸುವುದು ಕಡ್ಡಾಯವಾಗತಕ್ಕದ್ದು, ಎಂದರೆ:-

- (i) ಪ್ರತಿ ವರ್ಷ ಶೇಕಡಾ ಹತ್ತರಷ್ಟು ಮನೆಗಳಿಗೆ ಕಡಿಮೆ ಇಲ್ಲದಂತೆ ಶೌಚಗೃಹಗಳನ್ನು ಒದಗಿಸುವುದು ಮತ್ತು ಸಾಧ್ಯವಾದಷ್ಟು ಬೇಗನೆ ಎಲ್ಲ ಮನೆಗಳಿಗೂ ಈ ಸೌಲಭ್ಯವನ್ನು ಒದಗಿಸುವ ಗುರಿ ಸಾಧಿಸುವುದು;
- (ii) ಪುರುಷರು ಮತ್ತು ಮಹಿಳೆಯರಿಗಾಗಿ ಸಾಕಷ್ಟು ಸಮುದಾಯ ಶೌಚಗೃಹಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು;
- (iii) ಸಾಕಷ್ಟು ಸಂಪನ್ಮೂಲಗಳನ್ನು ಸೃಜಿಸಿ ತಾನೇ ಅಥವಾ ವಾರ್ಷಿಕ ಕರಾರಿನ ಮೂಲಕವಾಗಲಿ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ವಹಿಸುವುದು;
- (iv) ಈ ಅಧಿನಿಯಮದಡಿ ವಿಧಿಸಬಹುದಾದ ತೆರಿಗೆಗಳು, ದರಗಳು ಮತ್ತು ಶುಲ್ಕಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು ಮತ್ತು ವಸೂಲು ಮಾಡುವುದು;
- (v) ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು;
- (vi) ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗನಿರೋಧಕ ಚುಚ್ಚು ಮದ್ದು ನೀಡುವ ಕಾರ್ಯಕ್ರಮಗಳನ್ನು ಸಾಧಿಸುವುದು;
- (vii) ಜನನ ಮತ್ತು ಮರಣಗಳ ತ್ವರಿತ ನೋಂದಣಿ ಮತ್ತು ಅದನ್ನು ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು;

(viii) ನೈರ್ಮಲ್ಯ ವ್ಯವಸ್ಥೆ ಮತ್ತು ಸರಿಯಾದ ಚರಂಡಿ ವ್ಯವಸ್ಥೆಯನ್ನು ಒದಗಿಸುವುದು;

(ix) ಸಾರ್ವಜನಿಕ ರಸ್ತೆಗಳ ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆ;

(x) ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಸ್ಥಳಗಳ ಮೇಲಿನ ಒತ್ತುವರಿಗಳನ್ನು ತೆಗೆದುಹಾಕುವುದು;

(xi) ಸಾಕಷ್ಟು ರಸ್ತೆ ದೀಪಗಳನ್ನು ಒದಗಿಸುವುದು ಮತ್ತು ವಿದ್ಯುತ್ ಶುಲ್ಕಗಳನ್ನು ನಿಯತವಾಗಿ ಸಂದಾಯ ಮಾಡುವುದು;

(xii) ಅನೈರ್ಮಲ್ಯಕರ ಗುಂಡಿಗಳನ್ನು ತುಂಬಿಸುವುದು ಮತ್ತು ಅನಾರೋಗ್ಯಕರ ಪ್ರದೇಶಗಳನ್ನು ಆರೋಗ್ಯಕರವನ್ನಾಗಿ ಮಾಡುವುದು;

(xiii) ಹುಚ್ಚುನಾಯಿಗಳನ್ನು ಮತ್ತು ಮಾಲೀಕರಿಲ್ಲದ ನಾಯಿಗಳನ್ನು ಸಾಯಿಸುವುದು;

(xiv) ಅದರಲ್ಲಿ ನಿಹಿತವಾಗಿರುವ ಎಲ್ಲ ಸಮುದಾಯ ಆಸ್ತಿಗಳನ್ನು ನಿರ್ವಹಿಸುವುದು;

(xv) ಜನಗಣತಿ, ಬೆಳೆ-ಗಣತಿ, ಜಾನುವಾರು-ಗಣತಿ, ನಿರುದ್ಯೋಗಿಗಳ ಮತ್ತು ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳ ಗಣತಿಗೆ ಸಂಬಂಧಪಟ್ಟ ದಾಖಲೆಗಳನ್ನು ನಿರ್ವಹಿಸುವುದು;

(xvi) ನಿರುಪಯುಕ್ತ ವಸ್ತುಗಳನ್ನು ಮತ್ತು ಗೊಬ್ಬರವನ್ನು ರಾಶಿ ಹಾಕುವುದಕ್ಕೆ ವಾಸದ ಮನೆಗಳಿಂದ ದೂರದಲ್ಲಿರುವ ಜಾಗಗಳನ್ನು ಪ್ರತ್ಯೇಕವಾಗಿ ಗುರುತಿಸುವುದು.][1]

[2][(xvii) ಜೈವಿಕ ವೈವಿಧ್ಯತೆಯನ್ನು ಸಂರಕ್ಷಿಸುವುದು.][2]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(2) ಗ್ರಾಮ ಪಂಚಾಯತಿಯು, ಪಂಚಾಯತಿ ಪ್ರದೇಶದಲ್ಲಿ ಪಂಚಾಯತಿ ಪ್ರದೇಶದ ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ, ಸುಖ ಸೌಖ್ಯ, ಸೌಕರ್ಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ಉನ್ನತಿಯನ್ನು ವೃದ್ಧಿಸುವಂತಹ ಇತರ ಕೆಲಸಗಳನ್ನು ಅಥವಾ ಮಾರ್ಗೋಪಾಯಗಳನ್ನು ನಿರ್ವಹಿಸಲು ಸಹ ಏರ್ಪಾಟು ಮಾಡಬಹುದು.

(3) ಗ್ರಾಮ ಪಂಚಾಯತಿಯು, ತನ್ನ ಸಭೆಯಲ್ಲಿ ಅಂಗೀಕರಿಸಿದ ಮತ್ತು ತನ್ನ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಸದಸ್ಯರು ಸಮರ್ಥಿಸಿದ ನಿರ್ಣಯದಿಂದ [1][xxx][1],-

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಬಿಟ್ಟುಬಿಡಲಾಗಿದೆ.

(ಎ) ಪಂಚಾಯತಿ ಪ್ರದೇಶದೊಳಗೆ ಅಥವಾ ಹೊರಗಡೆ, ಆದರೆ ಜಿಲ್ಲೆಯ ಒಳಗಡೆ, ಯಾವುದೇ ವಸ್ತು ಪ್ರದರ್ಶನ, ಸಮ್ಮೇಳನ ಅಥವಾ ವಿಚಾರ ಸಂಕಿರಣದ ಬಗ್ಗೆ ವ್ಯವಸ್ಥೆ ಮಾಡಬಹುದು ಅಥವಾ ಅದಕ್ಕೆ ವಂತಿಗೆ ಕೊಡಬಹುದು, ಅಥವಾ

(ಬಿ) ಪಂಚಾಯತಿ ಪ್ರದೇಶದೊಳಗಡೆ, 1961ರ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾಗಿರುವ ಯಾವುದೇ ವೈದ್ಯಕೀಯ, ಶೈಕ್ಷಣಿಕ ಅಥವಾ ಧರ್ಮಾರ್ಥ ಸಂಸ್ಥೆಗಳಿಗೆ ಅಥವಾ ಸಾರ್ವಜನಿಕ ಉಪಯುಕ್ತತೆಯ ಇತರ ಯಾವುವೇ ಸಂಸ್ಥೆಗಳಿಗೆ ವಂತಿಗೆಗಳನ್ನು ಕೊಡಬಹುದು.

[1][(4) ಗ್ರಾಮಪಂಚಾಯತ್‌ವು ಸ್ಥಳೀಯ ಸ್ವಯಮಾಡಳಿತ ಸಂಸ್ಥೆಯಾಗಿರತಕ್ಕದ್ದು ಮತ್ತು ಸ್ವಯಮಾಡಳಿತದ ಸ್ಥಳೀಯ ಸಂಸ್ಥೆಯಂತೆಯೇ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಅಗತ್ಯವೆನಿಸಬಹುದಾದಂಥ ಅಧಿಕಾರಗಳನ್ನು, ಪ್ರಾಧಿಕಾರವನ್ನು, ಪ್ರಕಾರ್ಯಗಳನ್ನು, ಕಾರ್ಯನಿರ್ವಾಹಕರನ್ನು ಮತ್ತು ನಿಧಿಗಳನ್ನು ರಾಜ್ಯವು ಗ್ರಾಮಪಂಚಾಯತ್‌ಗೆ ಪ್ರದಾನ ಮಾಡತಕ್ಕದ್ದು.

(5) ಪಂಚಾಯತ್ ಪ್ರದೇಶದ ಜನರ ಅಗತ್ಯತೆಗಳನ್ನು ಈಡೇರಿಸುವುದು ಪ್ರತಿಯೊಂದು ಗ್ರಾಮ ಪಂಚಾಯತ್‌ನ ಕರ್ತವ್ಯವಾಗಿರತಕ್ಕದ್ದು ಮತ್ತು Iನೇ ಅನುಸೂಚಿಯಲ್ಲಿ ಹೇಳಿರುವ ವಿಷಯಗಳನ್ನು ಮತ್ತು ಗ್ರಾಮಪಂಚಾಯತ್‌ಗೆ ಸಂಬಂಧಿಸಿದಂತೆ ಜವಾಬ್ದಾರಿ ನಕ್ಷೆಯಲ್ಲಿ ನಿರೂಪಿಸಿರುವುದನ್ನು ನಿರ್ವಹಿಸಲು ಅಧಿಕಾರಗಳನ್ನು ಗ್ರಾಮ ಪಂಚಾಯತ್ ಹೊಂದಿರತಕ್ಕದ್ದು ಮತ್ತು ಗ್ರಾಮ ಪಂಚಾಯತ್ ತನ್ನ ಸುಪರ್ದಿನಲ್ಲಿರುವ ನಿಧಿಯ ಲಭ್ಯತೆಗೆ ಒಳಪಟ್ಟು ಎಲ್ಲರಿಗೂ ಸಾಮಾಜಿಕ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬೆಳವಣಿಗೆಗಾಗಿ ಕಾರ್ಯಕ್ರಮಗಳನ್ನು ಸಿದ್ಧಪಡಿಸಲು ಮತ್ತು ಅನುಷ್ಠಾನಗೊಳಿಸಲು ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಪಂಚಾಯತ್ ಪ್ರದೇಶದೊಳಗೆ ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಎಂದರೆ,-

(i) ಮುಕ್ತ ಮತ್ತು ಸ್ವತಂತ್ರ ಪರಿಸರದಲ್ಲಿ ತಮ್ಮ ಹಕ್ಕುಗಳನ್ನು ಚಲಾಯಿಸುವುದಕ್ಕೆ ಅನುವು ಮಾಡಿಕೊಡುವಂಥ ಎಲ್ಲಾ ನಾಗರಿಕರು ಸುರಕ್ಷಿತವಾಗಿರುವಂಥ ಮತ್ತು ಹಿತಕರವಾದ ಪರಿಸರ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಮತ್ತು ತನ್ನ ಜನರಿಗೆ ಯಾವುದೇ ಬಗೆಯ ದುರುಪಯೋಗ ಆಗದಂತೆ ಮತ್ತು ಶೋಷಣೆ ಆಗದಂತೆ ರಕ್ಷಿಸಲು ಆಯಾ ಜನವಸತಿಸಭಾ, ವಾರ್ಡ್‌ಸಭಾ ಮತ್ತು ಗ್ರಾಮಸಭಾ ಸಲಹೆ ಮಾಡಿದ ಕ್ರಮಗಳ ಪ್ರಕಾರ ಕಾರ್ಯಗಳನ್ನು ನಿರ್ವಹಿಸುವುದಕ್ಕೆ;

(ii) ಜನವಸತಿಸಭಾ, ವಾರ್ಡ್‌ಸಭಾ ಮತ್ತು ಗ್ರಾಮಸಭಾಗಳು ಗುರುತಿಸಿದ ಅಪಾಯಕಾರಕಗಳ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಪಂಚಾಯತ್‌ನಲ್ಲಿ ವಾಸಿಸುತ್ತಿರುವ ಎಲ್ಲಾ ನಾಗರಿಕರ ಸುರಕ್ಷತೆಗೆ, ಭದ್ರತೆಗೆ ಮತ್ತು ಸ್ವಾತಂತ್ರ್ಯಕ್ಕೆ ಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ;

(iii) ಸಮಾಜದ ಸುರಕ್ಷಿತವಲ್ಲದ ವರ್ಗಗಳ ಜನರ ಹಕ್ಕುಗಳನ್ನು ಮತ್ತು ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಮತ್ತು ಅವರ ಹಕ್ಕುಗಳ ಉಲ್ಲಂಘನೆಗೆ ಆಸ್ಪದ ಕೊಡುವಂಥ ಆಚರಣೆಗಳ ಮೇಲೆ ನಿಗಾ ಇಡುವುದಕ್ಕೆ ಮತ್ತು ತಡೆಗಟ್ಟುವುದಕ್ಕೆ ಮತ್ತು ವ್ಯಕ್ತಿಗಳ ಘನತೆ ಮತ್ತು ಸ್ವಾತಂತ್ರವನ್ನು ರಕ್ಷಿಸುವ ದೃಷ್ಟಿಯಿಂದ ತನ್ನ ವ್ಯಾಪ್ತಿಗೊಳಪಡುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ;

(iv) ಯಾರೇ ವ್ಯಕ್ತಿಯು ಅಥವಾ ಗುಂಪು ಅಥವಾ ಕಾರ್ಯಸಂಸ್ಥೆಯು ಪಂಚಾಯತ್‌ನ ಯಾವೊಬ್ಬ ನಾಗರಿಕನನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಲೈಂಗಿಕವಾಗಿ ಶೋಷಣೆ ಮಾಡುವುನ್ನು ತಡೆಗಟ್ಟಲು ಪ್ರಯತ್ನಗಳನ್ನು ಮಾಡುವುದಕ್ಕೆ;

(v) ಎಲ್ಲಾ ಗುಂಪುಗಳಲ್ಲಿ ಕೋಮು ಸೌಹಾರ್ದತೆಗೆ ಮತ್ತು ಒಗ್ಗಟ್ಟಿಗೆ ಉತ್ತೇಜನ ನೀಡುವುದಕ್ಕೆ;

(vi) ಜನವಸತಿಸಭಾಗಳು, ವಾರ್ಡ್‌ಸಭಾಗಳು ಮತ್ತು ಗ್ರಾಮಸಭಾಗಳು ಸೇರಿದಂತೆ ಗ್ರಾಮಪಂಚಾಯತ್‌ನ ಎಲ್ಲಾ ಪ್ರಕಾರ್ಯಗಳನ್ನು, ಸಭೆಗಳನ್ನು ಮತ್ತು ವ್ಯವಹಾರಗಳನ್ನು ಮಹಿಳೆಯರು ಮತ್ತು ದುರ್ಬಲ ವರ್ಗದವರು ಮುಕ್ತವಾಗಿ ಮತ್ತು ಸಕ್ರಿಯವಾಗಿ ಪಾಲ್ಗೊಳ್ಳುವಂಥ ಪರಿಸರದಲ್ಲಿ ನಡೆಸಲಾಗುತ್ತಿದೆಯೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು ಮತ್ತು ಪಂಚಾಯತ್‌ನ ಪ್ರತಿಯೊಂದು ಕಚೇರಿಯಲ್ಲಿ ಮಹಿಳೆಯರು, ಅನುಸೂಚಿತ ಜಾತಿಯವರು ಮತ್ತು ಅನುಸೂಚಿತ ಪಂಗಡದವರು, ಹಿಂದುಳಿದ ವರ್ಗದವರು ಪಾಲ್ಗೊಳ್ಳಲು ಅನುಕೂಲವಾಗುವಂಥ ವಾತಾವರಣವನ್ನು ಕಲ್ಪಿಸುವುದಕ್ಕೆ;

(vii) ಪಂಚಾಯತ್‌ನ ಚುನಾಯಿತ ಸದಸ್ಯರ ಮತ್ತು ಸಿಬ್ಬಂದಿಯ ಕೌಶಲ್ಯ ಅಭಿವೃದ್ಧಿ ಅಗತ್ಯಗಳನ್ನು ಗುರುತಿಸುವುದು, ಸೂಕ್ತ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ಅಗತ್ಯಬಿದ್ದರೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ನ ನೆರವಿನೊಂದಿಗೆ ಅವರ ಕೌಶಲದಲ್ಲಿ ಅಭಿವೃದ್ಧಿಯಾಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ;

(viii) ಎಲ್ಲಾ ಪಂಚಾಯತ್‌ಗಳ ಕಚೇರಿಯಲ್ಲಿ ಮತ್ತು ಅದರ ನಿರ್ವಹಣೆ ಮತ್ತು ನಿಯಂತ್ರಣದಲ್ಲಿರುವ ಸಾರ್ವಜನಿಕ ಕಟ್ಟಡಗಳಲ್ಲಿ ವಿಕಲಚೇತನರಿಗೆ ಗಾಲಿಕುರ್ಚಿಗಳಿಗೆ ಇಳಿಜಾರು ಸೌಲಭ್ಯವನ್ನು ಒದಗಿಸಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ;

(ix) ಅಗತ್ಯವಾದ ಕಡೆ ಪಂಚಾಯತ್ ಪ್ರದೇಶದ ಒಳಗೆ ಕಟ್ಟಡಗಳಲ್ಲಿ ಅಥವಾ ಕಾಂಪ್ಲೆಕ್ಸ್‌ಗಳಲ್ಲಿ ಶಿಶು ಪಾಲನಾ ಕೇಂದ್ರಗಳನ್ನು ಅಥವಾ ಶಿಶುವಿಹಾರಗಳನ್ನು ಒದಗಿಸುವುದಕ್ಕೆ;

(x) ಸಾಂಸ್ಕೃತಿಕ ಹಬ್ಬಗಳನ್ನು, ಸಾಹಿತ್ಯ ಚಟುವಟಿಕೆಗಳನ್ನು ಮತ್ತು ಕ್ರೀಡೆಗಳನ್ನು ಸಂಘಟಿಸುವುದಕ್ಕೆ ಮತ್ತು ಅವುಗಳಿಗೆ ಉತ್ತೇಜನ ನೀಡುವುದಕ್ಕೆ ಆ ಪ್ರದೇಶದಲ್ಲಿ ದೈಹಿಕ ಶಿಕ್ಷಣಕ್ಕೆ ಮತ್ತು ಕಲೆಗಳಿಗೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು ಮತ್ತು ಪಂಚಾಯತ್ ಜನರ ಪ್ರತಿಭೆ ಅಭಿವ್ಯಕ್ತಗೊಳ್ಳಲು ಅವಕಾಶ ಕಲ್ಪಿಸುವುದಕ್ಕೆ ಮತ್ತು ಅಧಿನಿಯಮಕ್ಕೆ ಮತ್ತು ನಿಯಮಗಳಿಗೆ ಅನುಸಾರವಾಗಿ ಪಂಚಾಯತ್‌ನ ವ್ಯವಹರಣೆಗಳ ನಿರ್ವಹಣೆ ಕೌಶಲ್ಯದೊಂದಿಗೆ ಅವರನ್ನು ಸಜ್ಜುಗೊಳಿಸುವುದಕ್ಕೆ;

(xi) ಪಂಚಾಯತ್ ಪ್ರದೇಶದೊಳಗೆ ವಯಸ್ಕರ ಶಿಕ್ಷಣಕ್ಕೆ, ಚಟಮುಕ್ತಗೊಳಿಸುವುದಕ್ಕೆ (de-addiction) ಮತ್ತು ಕೌಟುಂಬಿಕ ಸಮಾಲೋಚನಾ ಕೇಂದ್ರಗಳಿಗೆ ಉತ್ತೇಜನ ನೀಡುವುದಕ್ಕೆ;

(xii) ಸಗಣಿ ಗುಂಡಿಗಳನ್ನು ಮತ್ತು ಕೃಷಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸುವುದಕ್ಕೆ ಉತ್ತೇಜನ ನೀಡುವುದಕ್ಕೆ;

(xiii) ನೀರಿನ ಸಂರಕ್ಷಣೆ, ನೈಸರ್ಗಿಕ ಪರಿಸರ ನಿವಾಸದ ರಕ್ಷಣೆ ಮತ್ತು ಜೈವಿಕವಾಗಿ ವಿಘಟಿಸಬಹುದಾದ ತ್ಯಾಜ್ಯಗಳ (bio-degradable) ಮರುಬಳಕೆಯ ಬಗ್ಗೆ ಜಾಗೃತಿ ಮೂಡಿಸುವುದಕ್ಕೆ;

(xiv) ಕೃಷಿಗೆ, ಗ್ರಾಮೀಣ ಕೈಗಾರಿಕೆಗಳಿಗೆ, ಸಣ್ಣ ಉದ್ಯಮಗಳಿಗೆ ಮತ್ತು ಸಹಕಾರ ಸಂಘಗಳಿಗೆ ಉತ್ತೇಜನ ನೀಡಿ ಮಹಿಳೆಯರಿಗೆ, ಯುವಕರಿಗೆ, ಅನುಸೂಚಿತ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಮತ್ತು ದುರ್ಬಲ ವರ್ಗಗಳಿಗೆ ವಿಶೇಷ ಗಮನ ನೀಡಿ ಎಲ್ಲರ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡುವುದಕ್ಕೆ;

(xv) ನಿವಾಸಿಗಳಲ್ಲಿ ಸಹಕಾರ ಭಾವನೆಗೆ ಉತ್ತೇಜನ ನೀಡುವುದಕ್ಕೆ, ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಸೌಹಾರ್ದತೆ ದೃಷ್ಟಿಯಿಂದ ಆ ಪ್ರದೇಶದಲ್ಲಿ ಎಲ್ಲಾ ಸಹಕಾರಿಗಳಿಗೆ ಉತ್ತೇಜನ ನೀಡುವುದಕ್ಕೆ;

(xvi) ಮಹಿಳೆಯರು, ರೈತರು ಮತ್ತು ಕಾರ್ಮಿಕರು ಸಾಮಾಜಿಕವಾಗಿ ಮುಂದುವರಿಯಲು ಮತ್ತು ಆರ್ಥಿಕವಾಗಿ ಸಬಲರಾಗಲು ಸ್ವ–ಸಹಾಯ ಗುಂಪುಗಳ ರಚನೆಗೆ ಸೌಲಭ್ಯ ಕಲ್ಪಿಸುವುದಕ್ಕೆ;

(xvii) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ ಮತ್ತು ಲೇವಾದೇವಿದಾರರ ಅಧಿನಿಯಮದ ಉಲ್ಲಂಘನೆಗೆ ಆಸ್ಪದ ಕೊಡುವ ಚಟುವಟಿಕೆಗಳನ್ನು ನಿಯಂತ್ರಿಸುವುದು ಮತ್ತು ಅಂಥ ಚಟುವಟಿಕೆಗಳ ಮೇಲೆ ನಿಗಾ ಇಡುವುದು ಮತ್ತು ಪಂಚಾಯತ್ ಪ್ರದೇಶದಲ್ಲಿ ಜನರ ಶೋಷಣೆ ಆಗುವುದನ್ನು ತಡೆಗಟ್ಟುವುದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಆ ಬಗ್ಗೆ ವರದಿ ಮಾಡುವುದಕ್ಕೆ;

(xviii) ಜ್ಞಾನ ನಿರ್ವಹಣೆಗೆ ಸಿಸ್ಟಂಗಳನ್ನು ರೂಪಿಸುವುದಕ್ಕೆ ಮತ್ತು ಆ ಬಗ್ಗೆ ವ್ಯವಸ್ಥೆ ಮಾಡುವುದಕ್ಕೆ ಮತ್ತು ಜಾತಿವಾರು ಜನಗಣತಿ, ಬೆಳೆ ಗಣತಿ, ಜಾನುವಾರು ಗಣತಿ, ನಿರುದ್ಯೋಗ ವ್ಯಕ್ತಿಗಳ ಮತ್ತು ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳ ಜಾತಿವಾರು ಗಣತಿಗೆ ಸೇರಿದಂತೆ ಎಲ್ಲಾ ದಾಖಲೆಗಳನ್ನು ನಿರ್ವಹಿಸುವುದಕ್ಕೆ;

(xix) ಗ್ರಾಮಪಂಚಾಯತಿಯ ಪ್ರದೇಶಗಳ ಜನರ ಎಲ್ಲ ಅಧಿಕೃತ ಕೆಲಸ ಕಾರ್ಯಗಳಿಗಾಗಿ 'ಮುಂಚೂಣಿ ಕಾರ್ಯಾಲಯ" ವನ್ನಾಗಿಸುವುದಕ್ಕೆ ಮತ್ತು ಅಂಥ ಅಗತ್ಯತೆಗಳು ಗ್ರಾಮ ಪಂಚಾಯತ್‌ನ ವ್ಯಾಪ್ತಿಯೊಳಗೆ ಇದ್ದರೆ ಅವುಗಳನ್ನು ಪರಾಮರ್ಶಿಸಿ ಅವರ ಅಗತ್ಯತೆಗಳಿಗೆ ಗಮನ ಕೊಡುವುದಕ್ಕೆ ಅಥವಾ ಇತರ ಪಂಚಾಯತ್‌ಗಳೊಂದಿಗೆ, ಸರ್ಕಾರಿ ಏಜೆನ್ಸಿಗಳೊಂದಿಗೆ ಅನುಸರಣಾ ಕ್ರಮ ಕೈಗೊಳ್ಳುವುದಕ್ಕೆ;

(xx) ಪ್ರಾಣಿಗಳ ಮೃತದೇಹವನ್ನು ವಿಲೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ; ಮತ್ತು

(xxi) ಆ ಪ್ರದೇಶದ ಜೀವಿ ವೈವಿಧ್ಯದ ರಕ್ಷಣೆ ಮಾಡುವುದಕ್ಕೆ ಮತ್ತು ಪೋಷಣೆ ಮಾಡುವುದಕ್ಕೆ;

(6) ಗ್ರಾಮ ಪಂಚಾಯತಿಯು,–

(i) ಜನವಸತಿ ಸಭಾದ, ವಾರ್ಡ್‌ಸಭಾದ ಮತ್ತು ಗ್ರಾಮ ಸಭಾದ ನೆರವಿನೊಂದಿಗೆ ದೂರದೃಷ್ಟಿ ಯೋಜನೆ ಎಂದು ಕರೆಯಲಾಗುವ ಮುನ್ನೋಟ ಯೋಜನೆಯನ್ನು ಸಂಕಲಿಸುವ ಮತ್ತು ರೂಪಿಸುವ ಸಲುವಾಗಿ ಅವುಗಳ ಪ್ರದೇಶದ ಅಭಿವೃದ್ಧಿಗಾಗಿ ಎಲ್ಲಾ ನಿವಾಸಿಗಳ ಅಗತ್ಯತೆಗಳನ್ನು ಮತ್ತು ಅವಶ್ಯಕತೆಗಳನ್ನು ಪ್ರತಿಬಿಂಬಿಸುವ ಗ್ರಾಮಸಭಾ ಯೋಜನೆಗಳನ್ನು ಐದು ವರ್ಷಗಳಿಗೆ ಒಂದು ಬಾರಿ ಪರಿಶೀಲಿಸತಕ್ಕದ್ದು.

(ii) ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳ ಮತ್ತು ಗ್ರಾಮಪಂಚಾಯತ್‌ನ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮಗಳ ಆದ್ಯತೆಯನ್ನು ನಿರ್ಧರಿಸುವ ನಿಟ್ಟಿನಲ್ಲಿ, ದೂರದೃಷ್ಟಿ ಯೋಜನೆಯಲ್ಲಿ ಮತ್ತು ಗ್ರಾಮ ಪಂಚಾಯತ್‌ನ ವಾರ್ಷಿಕ ಅಭಿವೃದ್ಧಿ ಯೋಜನೆಗಳಲ್ಲಿ ಸೇರಿಸುವ ವಿಷಯದಲ್ಲಿ ಗ್ರಾಮ ಪಂಚಾಯತ್‌ನಲ್ಲಿರುವ ಪ್ರತಿಯೊಂದು ಗುಂಪಿನ ಹಿತಾಸಕ್ತಿಗಳನ್ನು ಗಣನೆಗೆ ತೆಗೆದುಕೊಂಡು ಗ್ರಾಮಸಭಾ ಅನುಮೋದಿಸಿದ ಎಲ್ಲಾ ಯೋಜನೆಗಳನ್ನು ಪರಿಶೀಲಿಸತಕ್ಕದ್ದು ಮತ್ತು ಈ ಯೋಜನೆಯನ್ನು ಗ್ರಾಮಪಂಚಾಯತ್ ಮುಂದೆ ಇಡತಕ್ಕದ್ದು ಮತ್ತು ಅದನ್ನು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ (ಟಿ.ಪಿ.ಡಿ.ಸಿ) ಕಳುಹಿಸತಕ್ಕದ್ದು. ಈ ಯೋಜನೆಯ ಪ್ರತಿಯನ್ನು ತಾಲೂಕು ಪಂಚಾಯತ್‌ಗೆ ಸಹ ಕಳುಹಿಸತಕ್ಕದ್ದು.

(iii) ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ, ನೆಮ್ಮದಿ, ನಿವಾಸಿಗಳಿಗೆ ಅನುಕೂಲಗಳು ಅಥವಾ ಸಾಮಾಜಿಕ ಅಥವಾ ಆರ್ಥಿಕ ಉನ್ನತಿಗೆ ಉತ್ತೇಜನ ನೀಡಲು ಯಾವುದೇ ಇತರ ಕೆಲಸವನ್ನು ಅಥವಾ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವ ಸಲುವಾಗಿ ಅವಕಾಶಗಳನ್ನು ಕಲ್ಪಿಸತಕ್ಕದ್ದು ಮತ್ತು ಪಂಚಾಯತ್ ಪ್ರದೇಶದ ಒಳಗೆ ಪರಿಸರ ಸಂರಕ್ಷಣೆಗೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(iv) ಹಣಕಾಸಿನ ಲಭ್ಯತೆಗೆ ಮತ್ತು ಸರ್ಕಾರವು ನೀಡಿದ ಮಾರ್ಗದರ್ಶನಗಳಿಗೆ ಒಳಪಟ್ಟು ಗ್ರಾಮಸಭಾ ಅನುಮೋದಿಸಿದ ಯೋಜನೆಗಳನ್ನು ಗ್ರಾಮ ಪಂಚಾಯಿತಿಯು ಪರಿಗಣಿಸತಕ್ಕದ್ದು.

(v) ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಆದ್ಯತಾ ಕ್ರಮ ನಿಗದಿ ಮಾಡಿರುವುದನ್ನು ಮತ್ತು ಆ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಸ್ಕೀಮುಗಳನ್ನು 'ಆದ್ಯತಾ ಶ್ರೇಯಾಂಕ' ವಿಧಾನದ ಮೇಲೆ ಆಧಾರಿತವಾಗಿವೆಯೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು ಮತ್ತು ಪ್ರದೇಶವು ಹಿಂದುಳಿದಿರುವುದಕ್ಕೆ, ಜನರ ತುರ್ತು ಅಗತ್ಯತೆಯನ್ನು ಮತ್ತು ಆಗುವ ಪರಿಣಾಮದ ಪ್ರಮಾಣವನ್ನು ಮತ್ತು ವ್ಯಾಪ್ತಿಗೆ ಒಳಪಡಿಸಿರುವುದನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಇವೆಲ್ಲವಕ್ಕೂ ಸೂಕ್ತ ಗಮನ ನೀಡತಕ್ಕದು.

(7) ನಿಧಿಯ ಲಭ್ಯತೆಗೆ ಒಳಪಟ್ಟು, ಗ್ರಾಮಪಂಚಾಯತ್‌ಗೆ ಪ್ರತಿಯೊಂದು ಕಾರ್ಯವನ್ನು ವಹಿಸಿದಾಗ ಆ ಗ್ರಾಮ ಪಂಚಾಯತ್‌ನಲ್ಲಿ ಸಂಬಂಧಿಸಿದ ಕಾರ್ಯನಿರ್ವಾಹಕರು ಮತ್ತು ನಿಧಿಗಳು ನಿಹಿತವಾಗಿರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

[1][**58ಎ. ಜೀತಗಾರಿಕೆ ಪದ್ಧತಿ ಸಂಬಂಧದಲ್ಲಿ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರತಕ್ಕದ್ದು:**– ಜೀತಗಾರಿಕೆ ಪದ್ಧತಿ (ನಿರ್ಮೂಲನ) ಅಧಿನಿಯ, 1976ರ (1976ರ ಕೇಂದ್ರ ಅಧಿನಿಯಮ 19) ಅಡಿಯಲ್ಲಿ ನಿರ್ಮೂಲನಗೊಂಡ ಜೀತಗಾರಿಕೆ ಪದ್ಧತಿಯು ಪಂಚಾಯತಿ ಪ್ರದೇಶದಲ್ಲಿ ಪ್ರವರ್ತನಗೊಂಡ ಯಾವುದೇ ಪ್ರಕರಣದ ಬಗ್ಗೆ, ನಿಯಮಿಸಬಹುದಾದಂತೆ ಅಂಥ ನಮೂನೆಯಲ್ಲಿ ಮತ್ತು ಅಂಥ ಅಂತರದ ಅವಧಿಗಳಲ್ಲಿ ಡಿಪ್ಯೂಟಿ ಕಮೀಷನರಿಗೆ ಅಥವಾ ಈ ಸಂಬಂಧದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು ಗ್ರಾಮಪಂಚಾಯತಿಗೆ ಕಡ್ಡಾಯವಾಗಿರತಕ್ಕದ್ದು, ಹೀಗೆ ಮಾಡಲು ತಪ್ಪಿದರೆ, 268ನೇ ಪ್ರಕರಣದ ಅಡಿಯಲ್ಲಿ ಅದಕ್ಕೆ ವಿಧಿಸಲಾದ ಕರ್ತವ್ಯಗಳ ನೆರವೇರಿಕೆಯಲ್ಲಿ ಆದ ತಪ್ಪು ಎಂದು ಅರ್ಥೈಸತಕ್ಕದ್ದು.][1]

1. ೨೦೦೧ರ ಅಧಿನಿಯಮ ಸಂಖ್ಯೆ: ೩೦ರ ಮೂಲಕ ದಿನಾಂಕ: ೧೩–೦೯–೨೦೦೧ರಿಂದ ಸೇರಿಸಲಾಗಿದೆ.

[1][**58ಬಿ. ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂಧಿಸಲು ಗ್ರಾಮಪಂಚಾಯತಿಯ ಕರ್ತವ್ಯ.**– ಪ್ರತಿಯೊಂದು ಗ್ರಾಮಪಂಚಾಯತಿಯು,–

(i) ವ್ಯಕ್ತಿಗಳ ವಿಶೇಷವಾಗಿ ಮಹಿಳೆಯರ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮತ್ತು ದುರ್ಬಲ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಹಕ್ಕುಗಳು, ಘನತೆ ಮತ್ತು ಸ್ವಾತಂತ್ರ್ಯಕ್ಕೆ ಕಳಂಕ ತರುವ ಯಾವುದೇ ಪಾರಂಪರಿಕ ಅಥವಾ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಯನ್ನು ಗ್ರಾಮಗಳಲ್ಲಿ ಆಚರಿಸತಕ್ಕದ್ದಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(ii) ಅಸ್ಪೃಶ್ಯತೆ, ಸಾಮಾಜಿಕ ಬಹಿಷ್ಕಾರ ಹಾಕುವಿಕೆ ಮತ್ತು ಇತರ ವಿಧವಾದ ಸಾಮಾಜಿಕವಾಗಿ ಹೊರಹಾಕುವ ಆಚರಣೆಯ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು;

– ನಿರ್ವಹಿಸಬೇಕಾದ ಕರ್ತವ್ಯವಾಗಿರತಕ್ಕದ್ದು.

**58ಸಿ. ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು ಗ್ರಾಮ ಪಂಚಾಯತ್‌ನ ಕರ್ತವ್ಯ.**– ಗ್ರಾಮಪಂಚಾಯತ್ ಪ್ರದೇಶದ ಒಳಗಿರುವ ಕೆಲಸದ ಸ್ಥಳಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಯಾವುದೇ ಇತರ ಸಾರ್ವಜನಿಕ

ಸ್ಥಳಗಳಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳವನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ವರದಿ ಮಾಡುವುದು ಪ್ರತಿಯೊಂದು ಗ್ರಾಮ ಪಂಚಾಯತ್‌ನ ಕರ್ತವ್ಯವಾಗಿರತಕ್ಕದ್ದು.

**58ಡಿ. ಕಂದಾಯ ಭೂಮಿಯನ್ನು ಹೊರತುಪಡಿಸಿ ಒತ್ತುವರಿ ಮಾಡಿಕೊಂಡಿರುವ ಗ್ರಾಮ ಪಂಚಾಯತಿಯ ಸ್ವತ್ತನ್ನು ಪುನಃ ಸ್ವಾಧೀನ ಪಡೆಯುವ ಕರ್ತವ್ಯ.**-ಪ್ರತಿಯೊಂದು ಗ್ರಾಮಪಂಚಾಯತ್, ವ್ಯಕ್ತಿಗಳಿಂದಾಗಲಿ ಅಥವಾ ಸಂಸ್ಥೆಗಳಿಂದಾಗಲಿ ಒತ್ತುವರಿಯಾಗಿರುವ ಕಂದಾಯ ಭೂಮಿಗಳನ್ನು ಹೊರತುಪಡಿಸಿದ ಗ್ರಾಮಪಂಚಾಯತಿಯ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**58ಇ. ಸ್ವಚ್ಛ ಪರಿಸರವನ್ನು ಕಾಪಾಡುವ ಕರ್ತವ್ಯ.**- ಪ್ರತಿಯೊಂದು ಗ್ರಾಮಪಂಚಾಯತಿಯು,-

(ಎ) ಪಂಚಾಯತ್ ಪ್ರದೇಶದಲ್ಲಿ ಸ್ವಚ್ಛ ಪರಿಸರ ಕಾಪಾಡುವ ಉದ್ದೇಶಕ್ಕಾಗಿ ಆಹಾರ, ನೀರು ಮತ್ತು ಗ್ರಾಹಕರು ಬಳಸುವ ಇತರ ವಸ್ತುಗಳನ್ನು ಸರಬರಾಜು ಮಾಡುವುದರಲ್ಲಿ ನಿರತರಾಗಿರುವ ವ್ಯಕ್ತಿಗಳ ಅಥವಾ ಸಂಸ್ಥೆಗಳ ಚಟುವಟಿಕೆಗಳನ್ನು ಪರಿಶೀಲಿಸುವುದು ಮತ್ತು ನಿಯಂತ್ರಿಸುವುದು ;

(ಬಿ) ಬಯಲು ಬಹಿರ್ದೆಸೆ ಮುಕ್ತಗೊಳಿಸಿ ಮತ್ತು ತ್ಯಾಜ್ಯ ಮುಕ್ತವಾದ ಸ್ವಚ್ಛ ಪರಿಸರವನ್ನು ಉಂಟು ಮಾಡುವುದು;

– ಅದರ ಕರ್ತವ್ಯವಾಗಿರತಕ್ಕದ್ದು.

**58ಎಫ್. ಅಪಾಯಕಾರಿ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳನ್ನು, ತೆರೆದ ಬಾವಿಗಳನ್ನು ತೋಡುವುದು ಮತ್ತು ಹೊಂಡಗಳನ್ನು ನಿರ್ಮಿಸುವುದು.**- ನಿವಾಸಿಗಳಿಗೆ ತೊಂದರೆ ಆಗುವುದನ್ನು ಅಥವಾ ಅಪಾಯವನ್ನು ತಡೆಗಟ್ಟುವ ಸಲುವಾಗಿ ಕಲ್ಲುಗಣಿಗಾರಿಕೆ, ಕೊಳವೆ ಬಾವಿಗಳನ್ನು, ತೆರೆದ ಬಾವಿಗಳನ್ನು ಕೊರೆಯುವುದನ್ನು ಅಥವಾ ಹೊಂಡಗಳನ್ನು ನಿರ್ಮಿಸುವುದನ್ನು ತಡೆಗಟ್ಟುವುದು ಮತ್ತು ಸಂಬಂಧಪಟ್ಟ ಸರ್ಕಾರದ ಇಲಾಖೆಗಳ ಜೊತೆ ಸೇರಿ ಕ್ರಮಗಳನ್ನು ತೆಗೆದುಕೊಳ್ಳುವುದು ಪ್ರತಿಯೊಂದು ಗ್ರಾಮ ಪಂಚಾಯತ್‌ನ ಕರ್ತವ್ಯವಾಗಿರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**59. ಕಾರ್ಯಗಳನ್ನು ವಹಿಸಿಕೊಡುವುದು.**- (1) ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು,-

(ಎ) ಪಂಚಾಯತಿ ಪ್ರದೇಶದಲ್ಲಿರುವ ಅರಣ್ಯದ ವ್ಯವಸ್ಥಾಪನೆ ಮತ್ತು ನಿರ್ವಹಣೆಯನ್ನು ಯಾವುದೇ ಗ್ರಾಮ ಪಂಚಾಯತಿಗೆ ವರ್ಗಾಯಿಸಬಹುದು;

(ಬಿ) ಪಂಚಾಯತಿ ಪ್ರದೇಶದೊಳಗೆ ಇರುವ ಸರ್ಕಾರಕ್ಕೆ ಸೇರಿದ ಬಂಜರು ಭೂಮಿ, ಗೋಮಾಳಗಳು ಅಥವಾ ಖಾಲಿ ಇರುವ ಭೂಮಿಗಳ ವ್ಯವಸ್ಥಾಪನೆಯನ್ನು ಗ್ರಾಮ ಪಂಚಾಯಿಗೆ ಒಪ್ಪಿಸಬಹುದು;

(ಸಿ) ಸರ್ಕಾರದ ಪರವಾಗಿ, ಭೂ ಕಂದಾಯದ ಸಂಗ್ರಹಣೆಯನ್ನು ಮತ್ತು ಅದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ಇಟ್ಟುಕೊಂಡು ಬರುವುದನ್ನು ಗ್ರಾಮ ಪಂಚಾಯತಿಗೆ ವಹಿಸಿಕೊಡಬಹುದು;

(ಡಿ) ಗೊತ್ತುಪಡಿಸಿರುವಂತಹ ಇತರ ಕಾರ್ಯಗಳನ್ನು ವಹಿಸಿಕೊಡಬಹುದು:

ಪರಂತು, ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಸಹಮತಿಯಿಲ್ಲದೆ (ಸಿ) ಖಂಡದ ಅಡಿಯಲ್ಲಿನ ಯಾವುದೇ ಕಾರ್ಯವನ್ನು ವಹಿಸಿಕೊಡತಕ್ಕದ್ದಲ್ಲ:

ಅಷ್ಟೇ ಅಲ್ಲದೆ, (ಎ) ಖಂಡದ ಅಡಿಯಲ್ಲಿ, ಅರಣ್ಯದ ವ್ಯವಸ್ಥಾಪನೆ ಮತ್ತು ನಿರ್ವಹಣೆಯನ್ನು ವರ್ಗಾವಣೆ ಮಾಡಿದಾಗ ಸರ್ಕಾರವು ಅಂಥ ವ್ಯವಸ್ಥಾಪನೆ ಮತ್ತು ನಿರ್ವಹಣೆಗೆ ಅಗತ್ಯವಾದ ಯಾವುದೇ ಮೊಬಲಗನ್ನು ಅಥವಾ ಅಂಥ ಅರಣ್ಯದಿಂದ ಬರುವ ಆದಾಯದ ಸಾಕಷ್ಟು ಭಾಗವನ್ನು ಗ್ರಾಮ ಪಂಚಾಯತಿಯ ವಶಕ್ಕೆ ಒಪ್ಪಿಸಬೇಕೆಂದು ನಿರ್ದೇಶಿಸತಕ್ಕದ್ದು.

(2) ಸರ್ಕಾರವು ಈ ಪ್ರಕರಣದ ಅಡಿಯಲ್ಲಿ ವಹಿಸಿದ ಕಾರ್ಯಗಳನ್ನು ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

**60. ಗ್ರಾಮ ಪಂಚಾಯತಿಯ ಸಾಮಾನ್ಯ ಅಧಿಕಾರಗಳು.**- ಗ್ರಾಮ ಪಂಚಾಯತಿಯು ತನಗೆ ವಹಿಸಿಕೊಟ್ಟ, ನೇಮಿಸಿರುವ ಅಥವಾ ಪ್ರತ್ಯಾಯೋಜಿಸಿದ ಕಾರ್ಯಗಳನ್ನು ನಿರ್ವಹಿಸಲು ಮತ್ತು ಅದರಲ್ಲೂ ವಿಶೇಷವಾಗಿ ಮತ್ತು ಈ ಮೊದಲೇ ಹೇಳಿರುವ ಅಧಿಕಾರಗಳಿಗೆ ಭಾಧಕವಾಗದಂತೆ, ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು ಅವಶ್ಯಕವಾದ ಅಥವಾ ಪ್ರಾಸಂಗಿಕವಾದ ಎಲ್ಲ ಕಾರ್ಯಗಳನ್ನು ಮಾಡಲು ಅಧಿಕಾರ ಹೊಂದಿರತಕ್ಕದ್ದು.

[1][**60-ಎ. ಗುತ್ತಿಗೆಗಳನ್ನು ಮಾಡಿಕೊಳ್ಳಲು ವಿಧಾನ.**- (1) ಕಾಮಗಾರಿಗಳ ನಿರ್ವಹಣೆಗೆ ಅಥವಾ ಸರಕುಗಳು ಅಥವಾ ಸೇವೆಗಳನ್ನು ಒದಗಿಸುವುದಕ್ಕಾಗಿ ಗ್ರಾಮ ಪಂಚಾಯತ್ ಪರವಾಗಿ ಮಾಡಿಕೊಳ್ಳುವ ಪ್ರತಿಯೊಂದು ಗುತ್ತಿಗೆ ಅಥವಾ ಒಪ್ಪಂದವು ಈ ಪ್ರಕರಣ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಉಪಬಂಧಗಳೊಂದಿಗೆ ಅನುಸಾರವಾಗಿರತಕ್ಕದ್ದು.

(2) ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ನಿಬಂಧನೆಗಳ ಮೇರೆಗೆ ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ಗ್ರಾಮಪಂಚಾಯತ್‌ನ ಪರವಾಗಿ ಗುತ್ತಿಗೆಯನ್ನು ಅಥವಾ ಒಪ್ಪಂದವನ್ನು ಮಾಡಿಕೊಳ್ಳಲು ಅಧಿಕಾರ ಹೊಂದಿರುವನೋ ಆ ವಿಷಯಗಳಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತ್‌ನ ಪರವಾಗಿ ಗುತ್ತಿಗೆಯನ್ನು ಅಥವಾ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ಗುತ್ತಿಗೆಗೆ ಅಥವಾ ಒಪ್ಪಂದಕ್ಕೆ ಎಷ್ಟು ಮೌಲ್ಯದ ಹಣವನ್ನು ನಿಗದಿ ಮಾಡುತ್ತದೋ ಅಷ್ಟು ಹಣಕ್ಕೆ ನಿಯಮಿಸಬಹುದಾದ ಅಂಥ ಗುತ್ತಿಗೆಯನ್ನು ಮತ್ತು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

**60ಬಿ. ಸಮುದಾಯಿಕ ಗುತ್ತಿಗೆಗಳು.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಗ್ರಾಮ ಪಂಚಾಯತಿಯು, ಗ್ರಾಮ ಸಭೆಯ ಶಿಫಾರಸ್ಸಿನ ಮೇಲೆ, ಪ್ರಥಮ ಆಯ್ಕೆಯಾಗಿ ಸರ್ಕಾರವು ನಿಗದಿಪಡಿಸಿದ ದರಗಳಲ್ಲಿ ಇಪ್ಪತ್ತು ಲಕ್ಷಗಳವರೆಗಿನ ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಕಾರ್ಯಗತಗೊಳಿಸಲು, ಗ್ರಾಮ ಪಂಚಾಯತಿಗಳ ಅಂಥ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕಾಮಗಾರಿ ಮೌಲ್ಯದ ಶೇಕಡಾ ಹತ್ತಕ್ಕಿಂತ ಕಡಿಮೆಯಿಲ್ಲದಂತೆ ಕೊಡುಗೆ ನೀಡಿರುವ ಪಂಚಾಯತ್ ಪ್ರದೇಶದ ಒಳಗೆ ಫಲಾನುಭವಿಗಳ ಸ್ವ-ಸಹಾಯ ಸಮೂಹ

ಹೊಂದಿರುವ ಯಾವುದೇ ನಿವಾಸಿಗಳ ಸಮೂಹಕ್ಕೆ ಪಂಚಾಯತಿಯ ಯಾವುದೇ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಥವಾ ಯಾವುದೇ ಸರಕುಗಳು ಅಥವಾ ಸೇವೆಗಳನ್ನು ಒದಗಿಸುವುದಕ್ಕಾಗಿ ಯಾವುದೇ ಗುತ್ತಿಗೆಯನ್ನು ನೀಡತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

[1][**61. ಸ್ಥಾಯಿ ಸಮಿತಿಗಳು.**– (1) ಪ್ರತಿಯೊಂದು ಗ್ರಾಮ ಪಂಚಾಯತ್ ಸದಸ್ಯರಗಳು ಚುನಾಯಿಸಿದ ಸದಸ್ಯರನ್ನು ಒಳಗೊಂಡಿರುವ ಈ ಮುಂದಿನ ಸ್ಥಾಯಿ ಸಮಿತಿಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮೀಣ ಕೈಗಾರಿಕೆಗಳು ಮತ್ತು ಬಡತನ ನಿರ್ಮೂಲನೆ ಕಾರ್ಯಕ್ರಮಗಳು, ಶಿಕ್ಷಣ, ಲೋಕೋಪಯೋಗಿ ಕಾಮಗಾರಿಗಳು ಮತ್ತು ಗ್ರಾಮಪಂಚಾಯತ್‌ನ ಇತರೆ ಪ್ರಕಾರ್ಯಗಳು, ಸಾರ್ವಜನಿಕ ಕಾಮಗಾರಿಗಳ ಮೇಲ್ವಿಚಾರಣೆ, ಮತ್ತು ಕಾಮಗಾರಿಗಳ ಕಳಪೆ ಗುಣಮಟ್ಟ ಕಾಮಗಾರಿಯ ನಿರ್ವಹಣೆಯಲ್ಲಿ ನಿಧಿಗಳ ಸಣ್ಣಪುಟ್ಟ ಕಳವು ಮತ್ತು ದುರ್ವಿನಿಯೋಗದ ಬಗ್ಗೆ ಗ್ರಾಮಸಭೆಯು ಎತ್ತುವ ದೂರುಗಳ ಮೇಲೆ ತನಿಖೆ ಮಾಡುವುದು ಮತ್ತು ವರದಿ ಮಾಡುವುದಕ್ಕಾಗಿ ಸಾಮಾನ್ಯ ಸ್ಥಾಯಿ ಸಮಿತಿ;

(ii) ಗ್ರಾಮಪಂಚಾಯತ್‌ಗಳ ಹಣಕಾಸು, ಆಯವ್ಯಯಗಳನ್ನು ರೂಪಿಸುವುದು, ರಾಜಸ್ವವನ್ನು ಹೆಚ್ಚಿಸುವುದಕ್ಕಾಗಿನ ಪ್ರಸ್ತಾವನೆಗಳ ಪರಿಶೀಲನೆ, ಸ್ವೀಕೃತಿ ಮತ್ತು ವೆಚ್ಚಗಳ ತಃಖ್ತೆಗಳ ಪರಿಶೀಲನೆ, ಗ್ರಾಮ ಪಂಚಾಯತಿಗಳ ಹಣಕಾಸಿಗೆ ಬಾಧಕವಾಗುವ ಎಲ್ಲಾ ಪ್ರಸ್ತಾವನೆಗಳನ್ನು ಪರಿಗಣಿಸುವುದು ಮತ್ತು ಗ್ರಾಮಪಂಚಾಯತ್‌ಗಳ ರಾಜಸ್ವ ಮತ್ತು ವೆಚ್ಚದ ಸಾಮಾನ್ಯ ಮೇಲ್ವಿಚಾರಣೆ ಮತ್ತು ಗ್ರಾಮಪಂಚಾಯತ್‌ನ ಯೋಜನೆಯ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಇತರ ಕರ್ತವ್ಯ, ಮಾಹಿತಿ ಮತ್ತು ಅಂಕಿಅಂಶಗಳಿಗೆ ಸಂಬಂಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವುದು ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯೀ ಸಮಿತಿಯ ನಿರ್ವಹಿಸಬೇಕಾದ ಪ್ರಕಾರ್ಯಗಳಾಗಿರತಕ್ಕದ್ದು. ಪ್ರತಿಯೊಂದು ಗ್ರಾಮಪಂಚಾಯತಿಯು ಜನಗಣತಿ, ನಡೆಸಲಾದ ಸರ್ವೆಗಳು, ಪಿಆರ್‌ಎಗಳು ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ದತ್ತಾಂಶಗಳು, ಪ್ರಗತಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸ್ಕೀಮುಗಳು ವಿವರಗಳು, ಕೃಷಿ ಪದ್ಧತಿಗಳಿಗೆ ಸಂಬಂಧಿಸಿದ ದತ್ತಾಂಶ ಮತ್ತು ರೈತರಿಗೆ ಮುಖ್ಯವಾದ ಇತರ ಮಾಹಿತಿ, ಭೌತಿಕ ಮೂಲಸೌಕರ್ಯ ಸೂಚ್ಯಂಕಕ್ಕೆ ಸಂಬಂಧಿಸಿದ ದತ್ತಾಂಶ ಮತ್ತು ಸಾಮಾನ್ಯವಾಗಿ ಪಂಚಾಯತ್ ರಾಜ್ ಪದ್ಧತಿಗೆ ಸಂಬಂಧಿಸಿದ ಸ್ವತ್ತುಗಳು ಮತ್ತು ಸಂಪನ್ಮೂಲಗಳು ಹಾಗೂ ವಿಶೇಷವಾಗಿ ಗ್ರಾಮಪಂಚಾಯತ್‌ಗೆ ತಮ್ಮ ಯೋಜನೆಗಳು ಮತ್ತು ಆಯವ್ಯಯ ವೆಚ್ಚಗಳನ್ನು ಸುಗಮಗೊಳಿಸಲು ಗ್ರಾಮಪಂಚಾಯತ್‌ಗೆ ನೆರವು ನೀಡುವುದಕ್ಕೆ, ಸಂಬಂಧಿಸಿದ ದೂರದೃಷ್ಟಿತ್ವ ಮತ್ತು ವಾರ್ಷಿಕ ಯೋಜನೆಗಳು ಇವುಗಳನ್ನು ತಾಳೆ ನೋಡುವುದು ಮತ್ತು ಸಂಗ್ರಹಿಸತಕ್ಕದ್ದು.

(iii) ಸಾಮಾಜಿಕ ನ್ಯಾಯ ಸಮಿತಿಯು ಈ ಮುಂದಿನ ವಿಷಯಗಳಿಗೆ, ಎಂದರೆ .–

(ಎ) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತಾಸಕ್ತಿಗಳಿಗೆ ಉತ್ತೇಜನ ನೀಡುವುದು ಮತ್ತು ಸಾಮಾಜಿಕವಾಗಿ ಅನ್ಯಾಯ ಆಗದಂತೆ ಮತ್ತು ಯಾವುದೇ ವಿಧವಾದ ಶೋಷಣೆ ಆಗದಂತೆ ಅಂತಹ ಜಾತಿಗಳು ಮತ್ತು ವರ್ಗಗಳನ್ನು ರಕ್ಷಿಸುವುದು;

(ಬಿ) ಮಹಿಳಾ ಮತ್ತು ಮಕ್ಕಳ ಕಲ್ಯಾಣ: ಸಾಮಾಜಿಕ ನ್ಯಾಯ ಸಮಿತಿಯು ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೆ ಅನುವು ಮಾಡಿಕೊಟ್ಟು ಮಹಿಳಾ ಸಬಲೀಕರಣದಂಥ ಮಹಿಳೆಯರಿಗೆ ಸಂಬಂಧಪಡುವ ಹಿತಾಸಕ್ತಿಗಳನ್ನು ಮತ್ತು ವಿಷಯಗಳನ್ನು ಪರಾಮರ್ಶಿಸತಕ್ಕದ್ದು ಮತ್ತು ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಇರುವ ಮಹಿಳೆಯರಿಗೆ ಕೌಟುಂಬಿಕ ಹಿಂಸೆ ಮತ್ತು ಲೈಂಗಿಕ ಕಿರುಕುಳಗಳಂಥ ಮುಂತಾದ ಅಪರಾಧಗಳ ವಿರುದ್ಧ ರಕ್ಷಣೆ ಒದಗಿಸತಕ್ಕದ್ದು. ಸಾಮಾಜಿಕ ನ್ಯಾಯ ಸಮಿತಿಯ ಪ್ರಕಾರ್ಯಗಳು ಮಹಿಳೆಯರಿಗೆ ಶಾಲೆಗಳಲ್ಲಿ, ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ಆಸ್ಪತ್ರೆಗಳಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಸಾಕಷ್ಟು ಅನುಕೂಲಗಳನ್ನು ಮತ್ತು ಅವರ ನಿತ್ಯ ಜೀವನದಲ್ಲಿ ಸ್ವಾತಂತ್ರ್ಯ ಮತ್ತು ಘನತೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಪಂಚಾಯತಿಗೆ ಸಲಹೆ ನೀಡುವುದನ್ನು ಒಳಗೊಳ್ಳತಕ್ಕದ್ದು:

ಪರಂತು, ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕಡೇ ಪಕ್ಷ ಒಬ್ಬರು ಮಹಿಳಾ ಸದಸ್ಯರು ಇರತಕ್ಕದ್ದು ಮತ್ತು ಚುನಾಯಿತ, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಪೈಕಿ ಅನುಸೂಚಿತ ಜಾತಿ ಸದಸ್ಯರ ಸಂಖ್ಯೆ ಹೆಚ್ಚಿಗೆ ಇದ್ದರೆ, ಆ ಅನುಸೂಚಿತ ಜಾತಿ ಪೈಕಿ ಒಬ್ಬರು ಅಥವಾ ಅನುಸೂಚಿತ ಪಂಗಡದವರ ಸದಸ್ಯರ ಸಂಖ್ಯೆ ಹೆಚ್ಚಿಗೆ ಇದ್ದರೆ, ಅನುಸೂಚಿತ ಪಂಗಡದ ಪೈಕಿ ಒಬ್ಬರು ಸದಸ್ಯರು ಈ ಸಮಿತಿಯಲ್ಲಿ ಇರತಕ್ಕದ್ದು. ಸಾಮಾಜಿಕ ನ್ಯಾಯ ಸಮಿತಿಯು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಚುನಾಯಿತ ಸದಸ್ಯರ ಪೈಕಿ ಒಬ್ಬರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಹೇಳಲಾದ ಸಮಿತಿಯು, ವೆಬ್ ವಿನ್ಯಾಸಗೊಳಿಸಲು ಮತ್ತು ಎಲೆಕ್ಟ್ರಾನಿಕ್ ಪೋರ್ಟಲ್‌ಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಗೊತ್ತಿರುವ ಒಬ್ಬರು ಅಥವಾ ಇಬ್ಬರು ಕಂಪ್ಯೂಟರ್ ಟೆಕ್ನೀಷಿಯನ್‌ಗಳನ್ನು ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಪದನಿಮಿತ್ತ ಛೇರ್ಮನಾಗಿರತಕ್ಕದ್ದು. ಉಪಾಧ್ಯಕ್ಷನು ಸಾಮಾನ್ಯ ಸ್ಥಾಯಿ ಸಮಿತಿಯ ಛೇರ್ಮನಾಗಿರತಕ್ಕದ್ದು.

(4) ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆಯನ್ನು ಗ್ರಾಮಪಂಚಾಯತ್ ಸದಸ್ಯರ ಸಾಮಾನ್ಯ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದ ಅಡಿಯಲ್ಲಿ ಇದರ ಪುನಾರಚನೆ ಅಥವಾ ಸ್ಥಾಪನೆಯಾದಾಗ ಆದಷ್ಟು ಬೇಗನೆ ಅಥವಾ ಸ್ಥಾಯಿ ಸಮಿತಿಯ ಸದಸ್ಯರ ಪದಾವಧಿಯು ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

(5) ಪದನಿಮಿತ್ತ ಚೇರ್ಮನ್‌ನನ್ನು ಹೊರತುಪಡಿಸಿ, ಸ್ಥಾಯಿ ಸಮಿತಿಯ ಪ್ರತಿಯೊಬ್ಬ ಸದಸ್ಯನ ಪದಾವಧಿಯು, ಚುನಾವಣೆಯ ದಿನಾಂಕದಿಂದ ಮೂವತ್ತು ತಿಂಗಳುಗಳ ಅಥವಾ ಆತನು ಗ್ರಾಮಪಂಚಾಯತ್‌ನ ಸದಸ್ಯನಾಗಿರುವುದು ಸ್ಥಗಿತಗೊಳ್ಳುವವರೆಗೂ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಇರತಕ್ಕದ್ದು.

(6) (ಎ) ಪ್ರತಿಯೊಂದು ಸಮಿತಿಯು ಅಧ್ಯಕ್ಷ ಮತ್ತು ಸಂದರ್ಭಾನುಸಾರವಾಗಿ ಉಪಾಧ್ಯಕ್ಷನು ಒಳಗೊಂಡಂತೆ ಮೂರಕ್ಕಿಂತ ಕಡಿಮೆಯಲ್ಲದ ಮತ್ತು ಐದಕ್ಕಿಂದ ಹೆಚ್ಚಲ್ಲದ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(ಬಿ) ಪ್ರತಿಯೊಂದು ಸಮಿತಿಯು, ರೈತರ ಕ್ಲಬ್‌ಗಳ, ಮಹಿಳಾ ಮಂಡಳಗಳ, ಯುವ ಮಂಡಳಗಳ ಮತ್ತು ಸರ್ಕಾರವು ಗುರುತಿಸಲಾದ ಇತರ ಅಂತಹುದೇ ನಿಕಾಯಗಳ ಸದಸ್ಯರನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಸಹಸದಸ್ಯರನ್ನಾಗಿ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು. ಪಂಚಾಯತ್ ಪ್ರದೇಶದಲ್ಲಿ ಸಹಕಾರ ಸಂಘಗಳ ಪ್ರತಿನಿಧಿಯು ಸ್ಥಾಯಿಸಮಿತಿಗೆ ಸಹಸದಸ್ಯನಾಗತಕ್ಕದ್ದು. ಸಹಸದಸ್ಯನ ಹಕ್ಕುಗಳ ಮತ್ತು ಹೊಣೆಗಾರಿಕೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(7) ಸ್ಥಾಯೀ ಸಮಿತಿಗಳು, ಗ್ರಾಮಪಂಚಾಯತ್‌ಗಳು ತಮಗೆ ಪ್ರತ್ಯಾಯೋಜಿಸಿದ ಅಧಿಕಾರಗಳಷ್ಟರ ಮಟ್ಟಿಗೆ ಮೇಲೆ ಉಲ್ಲೇಖಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**61ಎ. ಇತರ ಸಮಿತಿಗಳು.**- (1) ಗ್ರಾಮ ಪಂಚಾಯತಿಯು, 61ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕಾಗಿ, ಅದು ನಿರ್ಧರಿಸಬಹುದಾದಂಥ ಸದಸ್ಯರುಗಳನ್ನು ಒಳಗೊಂಡಿರುವ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಮಿತಿಗಳನ್ನು ನೇಮಕ ಮಾಡಬಹುದು ಮತ್ತು ಹಾಗೆ ನೇಮಕಮಾಡಲಾದ ಸಮಿತಿಗಳಲ್ಲಿ ಯಾವ ಉದ್ದೇಶಕ್ಕಾಗಿ ಅದನ್ನು ನೇಮಕಮಾಡಲಾಗಿದೆಯೋ ಅದನ್ನು ಈಡೇರಿಸುವುದಕ್ಕೆ ಅವಶ್ಯಕ ಅಥವಾ ಯುಕ್ತವಾಗಬಹುದಾದಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿಹಿತಗೊಳಿಸಬಹುದು.

(2) (1)ನೇ ಉಪ-ಪ್ರಕರಣದಡಿ ನೇಮಕಮಾಡಲಾದ ಸಮಿತಿಯು, ನಿಯಮಿಸಬಹುದಾದಂಥ ವಿಧಾನದಲ್ಲಿ, ಪಂಚಾಯತಿ ಪ್ರದೇಶದ ಅಂಥ ನಿವಾಸಿಗಳನ್ನು ಸಹ-ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು.

(3) ಸಮಿತಿಯ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.][1]

1. 61ಎ ಮತ್ತು 61ಬಿ 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

[1][**61ಬಿ.**][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಬಿಟ್ಟುಬಿಡಲಾಗಿದೆ.

**62. ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳು.**- (1) ಗ್ರಾಮ ಪಂಚಾಯತಿಯ ಅಧ್ಯಕ್ಷನು [1][ಗ್ರಾಮ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು ಮತ್ತು ಅವನು][1] ಅಧಿನಿಯಮದ ಯಾವುದೇ ಇತರ ಉಪಬಂಧದ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಅಡಿಯಲ್ಲಿ ಚಲಾಯಿಸಬಹುದಾದ ಪ್ರಕಾರ್ಯಗಳು ಮತ್ತು ಅಧಿಕಾರಗಳ ಜೊತೆಗೆ,-

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಎ) ಗ್ರಾಮ ಪಂಚಾಯತಿಯ ಸಭೆಗಳನ್ನು ಕರೆಯತಕ್ಕದ್ದು;

(ಬಿ) ಗ್ರಾಮ ಪಂಚಾಯತಿಯ ದಾಖಲೆಗಳನ್ನು ನೋಡುವ ಅವಕಾಶವಿರತಕ್ಕದ್ದು; [1][ಮತ್ತು ದಾಖಲೆಗಳು ಮತ್ತು ಕಡತಗಳನ್ನು ತರಿಸಬಹುದು ಮತ್ತು ಈ ಅಧಿನಿಯಮ, ನಿಯಮಗಳು ಮತ್ತು ಇತರೆ ಸ್ಥಾಯೀ ಆದೇಶಗಳ ಉಪಬಂದಗಳಿಗನುಸಾರವಾಗಿ ಮತ್ತು ಆ ಬಗ್ಗೆ ಗ್ರಾಮ ಪಂಚಾಯಿತಿಯು ಜಾರಿಗೊಳಿಸಿದ ನಿರ್ಣಯವನ್ನು ಅನುಸರಿಸಿ ಅವುಗಳ ಮೇಲೆ ಆದೇಶಗಳನ್ನು ಹೊರಡಿಸಬಹುದು ಮತ್ತು

ಪರಂತು, ಕಾರ್ಯದರ್ಶಿಯು ಅಥವಾ ಗ್ರಾಮ ಪಂಚಾಯತಿಯ ಇತರೆ ಯಾವೊಬ್ಬ ಅಧಿಕಾರಿಯು ಸ್ವತಂತ್ರವಾಗಿ ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸುವುದಕ್ಕೆ ನೇರವಾಗಿ ಸಂಬಂಧಪಟ್ಟ ಕಡತಗಳು ಅಥವಾ ದಾಖಲೆಗಳನ್ನು ಅಧ್ಯಕ್ಷನು ತರಿಸಿಕೊಳ್ಳತಕ್ಕದ್ದಲ್ಲ.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಸಿ) ಗ್ರಾಮ ಪಂಚಾಯತಿಯ [1][ಕಾರ್ಯದರ್ಶಿಯೂ ಸೇರಿದಂತೆ][1] ಅಧಿಕಾರಿಗಳ ಮತ್ತು ನೌಕರರ ಕಾರ್ಯಗಳ ಮೇಲೆ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ನಿಯಂತ್ರಣವನ್ನು ಹೊಂದಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

[1][(ಡಿ) ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಯಾವೊಬ್ಬ ಅಧಿಕಾರಿಯನ್ನು ಅಥವಾ ನೌಕರನನ್ನು ಅವನ ವಿರುದ್ಧ ಒಂದು ಶಿಸ್ತು ವ್ಯವಹರಣೆಯನ್ನು ಹೂಡಲು ಉದ್ದೇಶಿಸಲಾಗಿದ್ದರೆ ಅಥವಾ ಅದು ಇತ್ಯರ್ಥದಲ್ಲಿದ್ದರೆ ಅಥವಾ ಯಾವುದೇ ಕ್ರಿಮಿನಲ್ ಅಪರಾಧದ ಬಗ್ಗೆ ಅವನ ವಿರುದ್ಧದ ಒಂದು ಮೊಕದ್ದಮೆಯ ಸಂಬಂಧದಲ್ಲಿ ತನಿಖೆ ಅಥವಾ ಅಧಿವಿಚಾರಣೆ ನಡೆಯುತ್ತಿದ್ದರೆ ಅವನನ್ನು ಅಮಾನತ್ತಿನಲ್ಲಿ ಇಡಲು ಅಧಿಕಾರ ಹೊಂದಿರತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(2) ಅಧ್ಯಕ್ಷನು, ಸಮಿತಿಯ ಅಥವಾ ಗ್ರಾಮ ಪಂಚಾಯತಿಯ ಮಂಜೂರಾತಿಯು ಅಗತ್ಯವಿರುವಂಥ ಯಾವುದೇ ಕಾಮಗಾರಿಯನ್ನು ತಕ್ಷಣವೇ ನಿರ್ವಹಿಸುವುದು ಅಥವಾ ಯಾವುದೇ ಕಾರ್ಯವನ್ನು ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆಂದು ಅಭಿಪ್ರಾಯಪಟ್ಟರೆ ಆ ಉದ್ದೇಶಕ್ಕಾಗಿ ಇಪ್ಪತ್ನಾಲ್ಕು ಗಂಟೆಗಳ ನೋಟೀಸನ್ನು ಕೊಟ್ಟು ಸಭೆಯನ್ನು ಕರೆಯಬಹುದು.

(3) ಗ್ರಾಮ ಪಂಚಾಯತಿಯ ಉಪಾಧ್ಯಕ್ಷನು, ಅಧ್ಯಕ್ಷನು ರಜೆಯ ಮೇಲೆ ಹೋದ ಕಾರಣ, ಗೈರು ಹಾಜರಿಯಾದಾಗ ಅಥವಾ ಕೆಲಸವನ್ನು ಮಾಡಲು ಅಸಮರ್ಥನಾದಾಗ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕಾರ್ಯವನ್ನು ನೆರವೇರಿಸತಕ್ಕದ್ದು.

**63. ರಸ್ತೆಗಳು, ಸೇತುವೆಗಳು ಮುಂತಾದವುಗಳ ಬಗ್ಗೆ ಗ್ರಾಮ ಪಂಚಾಯತಿಯ ಅಧಿಕಾರ.**- ಖಾಸಗಿ ಸ್ವತ್ತು ಅಲ್ಲದ ಮತ್ತು ಜಿಲ್ಲಾ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ, ಮುನಿಸಿಪಲ್ ಕೌನ್ಸಿಲ್‌ನ, [1][ಪಟ್ಟಣ ಪಂಚಾಯತಿಯ, ಕೈಗಾರಿಕಾ ಉಪನಗರದ][1] ಅಥವಾ ಸರ್ಕಾರದ ನಿಯಂತ್ರಣದಲ್ಲಿ ಅಥವಾ ವ್ಯವಸ್ಥಾಪನೆಯಲ್ಲಿ ಇಲ್ಲದ, ಪಂಚಾಯತಿ ಪ್ರದೇಶದಲ್ಲಿರುವ ಎಲ್ಲಾ ಗ್ರಾಮ ರಸ್ತೆಗಳು ಮತ್ತು ಅವುಗಳ ಮೇಲಿನ ಸೇತುವೆಗಳು, ಬಂಡಿ ದಾರಿಗಳು, ಚರಂಡಿ, ಬಾವಿ ಮತ್ತು ಇತರ ಸಾರ್ವಜನಿಕ ಸ್ಥಳಗಳು ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಗ್ರಾಮ ಪಂಚಾಯತಿಯು ಅವುಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ಅವಶ್ಯವಾದ ಎಲ್ಲಾ ಕಾರ್ಯಗಳನ್ನು ಮಾಡಬಹುದು ಮತ್ತು,-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ಎ) ಲೇಔಟುಗಳನ್ನು ಮತ್ತು ಹೊಸ ರಸ್ತೆಗಳನ್ನು ಮಾಡಬಹುದು;

(ಬಿ) ಹೊಸ ಸೇತುವೆಗಳನ್ನು ನಿರ್ಮಿಸಬಹುದು;

(ಸಿ) ಯಾವುವೇ ಅಂಥ ರಸ್ತೆಗಳನ್ನು ಮತ್ತು ಸೇತುವೆಗಳನ್ನು ಅಗಲ ಮಾಡಬಹುದು, ತೆರೆಯಬಹುದು, ವಿಸ್ತರಿಸಬಹುದು ಅಥವಾ ಅನ್ಯಥಾ ಇತರ ಸುಧಾರಣೆ ಮಾಡಬಹುದು;

(ಡಿ) [1][xxx][1] ಯಾವುದೇ ರಸ್ತೆಯನ್ನು ಅಥವಾ ಸೇತುವೆಯನ್ನು ಮಾರ್ಗಪಲ್ಲಟ ಮಾಡಬಹುದು, ಮುಂದುವರಿಸದಿರಬಹುದು ಅಥವಾ ಮುಚ್ಚಬಹುದು; ಮತ್ತು

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಬಿಟ್ಟುಬಿಡಲಾಗಿದೆ.

(ಇ) ಯಾವುದೇ ಜಲ ಮಾರ್ಗವನ್ನು ಆಳಗೊಳಿಸಬಹುದು ಅಥವಾ ಇತರ ರೀತಿಯಲ್ಲಿ ಸುಧಾರಣೆ ಮಾಡಬಹುದು:

[1][ಪರಂತು, ಯಾವುದೇ ರಸ್ತೆಯನ್ನು ಅಥವಾ ಸೇತುವೆಯನ್ನು ಮಾರ್ಗಪಲ್ಲಟ ಮಾಡುವ, ಬಳಕೆಯನ್ನು ನಿಲ್ಲಿಸುವ ಅಥವಾ ಮುಚ್ಚುವ ತನ್ನ ಉದ್ದೇಶವನ್ನು ಪ್ರಕಟಿಸುವುದಕ್ಕೆ ಮುಂಚೆಯೇ ಹಾಗೆ ಮಾಡತಕ್ಕದ್ದಲ್ಲ.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

**64. ಕಟ್ಟಡಗಳ ನಿರ್ಮಾಣದ ಬಗ್ಗೆ ನಿಯಂತ್ರಣ.-** (1) ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು ಯಾವನೇ ವ್ಯಕ್ತಿಯು, ಗ್ರಾಮ ಪಂಚಾಯತಿಯಿಂದ ಬರಹದ ಅನುಮತಿಯಿಲ್ಲದೆ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡವನ್ನು ಬದಲಾಯಿಸತಕ್ಕದ್ದಲ್ಲ [3][[2][XXX][3] ಅಥವಾ ಆವರಣಗಳ ಒಳಗೆ ಖಾಲಿ ಇರುವ ಯಾವುದೇ ಜಾಗದಲ್ಲಿ ಅಥವಾ ಆ ಸ್ಥಳಕ್ಕೆ ಹೊಂದಿಕೊಂಡಿರುವ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲು][2] ಅದಕ್ಕೆ ಸೇರ್ಪಡೆ ಮಾಡತಕ್ಕದ್ದಲ್ಲ ಅಥವಾ ಯಾವುದೇ ಕಟ್ಟಡವನ್ನು ಪುನರ್‌ನಿರ್ಮಿಸತಕ್ಕದ್ದಲ್ಲ. ಉಪವಿಧಿಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅನುಮತಿಯನ್ನು ನೀಡಬಹುದು.

(2) ಗ್ರಾಮ ಪಂಚಾಯತಿಯು ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅರವತ್ತು ದಿವಸಗಳೊಳಗಾಗಿ ಅಂಥ ಅನುಮತಿಯನ್ನು ಕೊಡಬಹುದೋ ಅಥವಾ ಕೊಡಕೂಡದೋ ಎಂಬುದನ್ನು ನಿರ್ಧರಿಸದಿದ್ದರೆ ಮತ್ತು ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸದಿದ್ದರೆ ಅಂಥ ಅನುಮತಿಯನ್ನು ಕೊಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅರ್ಜಿದಾರನು ಆ ಕೆಲಸವನ್ನು ನಿರ್ವಹಿಸಲು ಉದ್ಯುಕ್ತನಾಗಬಹುದು. ಆದರೆ, ಈ ಅಧಿನಿಯಮದ ಯಾವುದೇ ಉಪಬಂಧದ ಅಥವಾ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳ ಅಥವಾ ಉಪವಿಧಿಗಳ ಉಲ್ಲಂಘನೆಯಾಗುವ ಹಾಗೆ ನಿರ್ವಹಿಸತಕ್ಕದ್ದಲ್ಲ.

(3) ಅಂಥ ಅನುಮತಿಯಿಲ್ಲದೆ ಅಥವಾ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ನಿಯಮಗಳಿಗೆ ಅಥವಾ ಅನುಮತಿಯಲ್ಲಿ ವಿಧಿಸಿರುವ ಯಾವುವೇ ಷರತ್ತುಗಳಿಗೆ ತದ್ವಿರುದ್ಧವಾಗಿ ಯಾವುದೇ ಕಟ್ಟಡವನ್ನು ನಿರ್ಮಿಸಿದರೆ ಅದಕ್ಕೆ ಸೇರ್ಪಡೆ ಮಾಡಿದರೆ ಅಥವಾ ಅದನ್ನು ಪುನರ್ನಿರ್ಮಿಸಿದರೆ, ಗ್ರಾಮ ಪಂಚಾಯತಿಯು ಅಂಥ ವ್ಯಕ್ತಿಯ ವಿರುದ್ಧ 298ನೇ ಪ್ರಕರಣದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಂಡಿರಲಿ ಅಥವಾ ಕೈಗೊಳ್ಳದೇ ಇರಲಿ,-

(ಎ) ಆ ನಿರ್ಮಾಣವನ್ನು, ಬದಲಾವಣೆಯನ್ನು ಅಥವಾ ಸೇರ್ಪಡೆಯನ್ನು ನಿಲ್ಲಿಸಲು ನಿರ್ದೇಶಿಸಬಹುದು, ಅಥವಾ

(ಬಿ) ಸಾರ್ವಜನಿಕ ಆರೋಗ್ಯದ ಸಂವರ್ಧನೆಗೆ ಅಥವಾ ಜೀವಕ್ಕೆ ಅಥವಾ ಸ್ವತ್ತಿಗೆ ಆಗುವ ಅಪಾಯವನ್ನು ತಡೆಗಟ್ಟುವುದಕ್ಕಾಗಿ ಅಂಥ ನಿರ್ಮಾಣವನ್ನು, ಬದಲಾವಣೆಯನ್ನು ಅಥವಾ ಸೇರ್ಪಡೆಯನ್ನು, ಬದಲಾವಣೆ ಮಾಡುವುದು ಅಥವಾ ಕೆಡವಿಹಾಕುವುದು ಅವಶ್ಯವೆಂದು ಅದು ಭಾವಿಸಿದ್ದೇ ಆದರೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಯುಕ್ತ ಅವಧಿಯೊಳಗೆ ಹಾಗೆ ಮಾಡಬೇಕೆಂದು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

(4) ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯೊಳಗೆ (3)ನೇ ಉಪಪ್ರಕರಣದ (ಬಿ) ಖಂಡದ ಅಡಿಯ ಯಾವುದೇ ನೋಟೀಸಿನ ನಿಬಂಧನೆಗಳನ್ನು ಪಾಲಿಸದೇ ಇದ್ದ ಸಂದರ್ಭದಲ್ಲಿ, ಮಾಡಬೇಕೆಂದು ಆ ಮೂಲಕ ಅಗತ್ಯಪಡಿಸಿದ್ದ ಕಾರ್ಯವನ್ನು ಪೂರ್ಣಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳುವುದು ಗ್ರಾಮ ಪಂಚಾಯತಿಗೆ ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಆ ಬಗ್ಗೆ ಗ್ರಾಮ ಪಂಚಾಯತಿಯು ವಹಿಸಿದ ಎಲ್ಲ ವೆಚ್ಚಗಳನ್ನು ಆ ನೋಟೀಸನ್ನು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಜಾರಿಗೊಳಿಸಲಾಗಿದೆಯೋ ಆ ವ್ಯಕ್ತಿಯು ಅಥವಾ ವ್ಯಕ್ತಿಗಳು ಸಂದಾಯ ಮಾಡತಕ್ಕದ್ದು ಮತ್ತು ಅವುಗಳು 199ನೇ ಪ್ರಕರಣದ ಅಡಿಯಲ್ಲಿ ವಿಧಿಸಿದ ತೆರಿಗೆಯ ಹಾಗೆ ವಸೂಲು ಮಾಡಬಹುದಾದವುಗಳಾಗಿರತಕ್ಕದ್ದು.

(5) (1), (2) ಅಥವಾ (3)ನೇ ಉಪ-ಪ್ರಕರಣಗಳ ಅಡಿಯಲ್ಲಿನ ಗ್ರಾಮ ಪಂಚಾಯತಿಯ ಯಾವುದೇ ಆದೇಶ ಅಥವಾ ನಿರ್ದೇಶನ ಅಥವಾ ನೋಟೀಸಿನ ಬಗ್ಗೆ [1][ಕಾರ್ಯನಿರ್ವಾಹಕ ಅಧಿಕಾರಿಗೆ][1] ಅವರಿಗೆ ಅಪೀಲು ಸಲ್ಲಿಸತಕ್ಕದ್ದು ಮತ್ತು ಅಂಥ ಅಪೀಲಿನ ಬಗ್ಗೆ ಅವರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

[2][(5ಎ) ಗ್ರಾಮಪಂಚಾಯತ್‌ಗಳು, ಕಟ್ಟಡದ ಲೈಸೆನ್ಸು ಅಥವಾ ವಸತಿ ಅಥವಾ ವಾಸಸ್ಥಳಗಳ ಲೇಔಟ್‌ಗಳ ಅನುಮೋದನೆಗಳನ್ನು ನೀಡುವ ವಿಷಯದಲ್ಲಿ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ ಉಪಬಂಧಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಯಾವುದೇ ಅನುಮೋದನೆಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ ಉಪಬಂಧಗಳ ಯಾವುದೇ ಉಲ್ಲಂಘನೆಯು "ದುರ್ನಡತೆ" ಯೆಂದು ಅರ್ಥೈಸತಕ್ಕದ್ದು ಮತ್ತು ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿ ಅಥವಾ ಸಿಬ್ಬಂದಿಯು ಶಿಸ್ತುಕ್ರಮಕ್ಕೆ ಹೊಣೆಗಾರನಾಗತಕ್ಕದ್ದು.][2]

(6) (5)ನೇ ಉಪ-ಪ್ರಕರಣದ ಅಡಿಯಲ್ಲಿ, ಜಿಲ್ಲಾ ಪರಿಷತ್ತಿನ ಲೋಕೋಪಯೋಗಿ ಕಾಮಗಾರಿ ಮತ್ತು ಸೌಲಭ್ಯ ಸಮಿತಿಯ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಅಪೀಲು, 1993ರ ಕರ್ನಾಟಕ ಪಂಚಾಯತಿ ರಾಜ್

ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸಿಸ್ಟೆಂಟ್ ಕಮಿಷನರ್ ಅವರಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅಂತಹ ಅಪೀಲನ್ನು, ಅವರ ಮುಂದೆಯೇ ಅದನ್ನು ದಾಖಲ್ಮಾಡಿದ್ದರೆ ಹೇಗೋ ಹಾಗೆ, ತೀರ್ಮಾನಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.
3. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 12.07.2017ರಿಂದ ಬಿಟ್ಟುಬಿಡಲಾಗಿದೆ.

**65. ಕೆಲವು ಪ್ರದೇಶಗಳಲ್ಲಿ ಅನುಮತಿಯಿಲ್ಲದೆ ಕಟ್ಟಡಗಳ ನಿರ್ಮಾಣವನ್ನು ನಿಷೇಧಿಸಲು ಮತ್ತು ನಿಯಂತ್ರಿಸಲು ಸರ್ಕಾರದ ಅಧಿಕಾರ.**- (1) 64ನೇ ಪ್ರಕರಣದಲ್ಲಿ ಏನೇ ಇದ್ದರೂ, ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯತಿಯೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆಯ ಮೂಲಕ, ಸರ್ಕಾರ ಅಥವಾ ಈ ಬಗ್ಗೆ ಸರ್ಕಾರವು ಅಧಿಕಾರ ನೀಡಿರುವ ಯಾವನೇ ಅಧಿಕಾರಿಯು (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ "ಅಧಿಕೃತ ಅಧಿಕಾರಿ" ಎಂದು ಉಲ್ಲೇಖಿಸಲಾಗಿದೆ) ಕೊಟ್ಟ ಅನುಮತಿಯಿಂದಲ್ಲದೇ ಗ್ರಾಮ ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗಿರುವ ನಿರ್ದಿಷ್ಟ ಪ್ರದೇಶದೊಳಗೆ ಯಾವುದೇ ಕಟ್ಟಡದ ನಿರ್ಮಾಣವನ್ನು ನಿಷೇಧಿಸಬಹುದು:

ಪರಂತು, ಅಂಥ ನಿಷೇಧವನ್ನು ಅಂಥ ಅಧಿಸೂಚನೆಯ ದಿನಾಂಕಕ್ಕೆ ಮುಂಚೆ, ಸರ್ಕಾರವು ಅಥವಾ ಗ್ರಾಮ ಪಂಚಾಯತಿಯು, ಕಟ್ಟಡದ ನಿವೇಶನವೆಂದು ಪ್ರತ್ಯೇಕವಾಗಿ ಇರಿಸಿರುವಂಥ ಭೂಮಿಗೆ ಸಂಬಂಧಿಸಿದಂತೆ ಮಾಡತಕ್ಕದ್ದಲ್ಲ.

(2) (3)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, (1)ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ಅನುಮತಿಯನ್ನು ಕೊಡುವುದು, ಪ್ರತಿಯೊಂದು ಪ್ರಕರಣದಲ್ಲಿ ಅಥವಾ ಸಾಮಾನ್ಯವಾಗಿ ನಿರ್ದಿಷ್ಟಪಡಿಸಿದ ಪ್ರಕರಣಗಳಲ್ಲಿ ಸರ್ಕಾರವು ಅಥವಾ ಅಧಿಕೃತ ಅಧಿಕಾರಿಯು ವಿಧಿಸಬಹುದಾದಂಥ ಷರತ್ತುಗಳಿಗೊಳಪಡಬಹುದು.

(3) ಗೊತ್ತುಪಡಿಸಬಹುದಾದಂಥ ಕಾರ್ಯ ವಿಧಾನವನ್ನು ಅನುಸರಿಸಿದ ತರುವಾಯ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ಪ್ರದೇಶಕ್ಕೆ ಸಂಬಂಧಿಸಿದಂತೆ, ಸರ್ಕಾರವು ಅಭಿವೃದ್ಧಿ ಯೋಜನೆಯನ್ನು ಪ್ರಕಟಿಸಬಹುದು ಮತ್ತು ಅಂಥ ಯೋಜನೆಯು ಪ್ರಕಟವಾದ ಮೇಲೆ ಅಂಥ ಪ್ರದೇಶದಲ್ಲಿ ಅಂಥ ಅಭಿವೃದ್ಧಿ ಯೋಜನೆಯಲ್ಲಿ ನಿರ್ದಿಷ್ಟಪಡಿಸಿದ ತಪಸೀಲುಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ಅಲ್ಲದೆ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ರಚಿಸತಕ್ಕದ್ದಲ್ಲ.

(4) (2)ನೇ ಅಥವಾ (3)ನೇ ಉಪ-ಪ್ರಕರಣದ ಉಪಬಂಧಗಳಿಗೆ ತದ್ವಿರುದ್ಧವಾಗಿ ಯಾವುದೇ ಕಟ್ಟಡವನ್ನು ಯಾರಾದರೂ ನಿರ್ಮಿಸಿದರೆ, ಅವನು ಅಪರಾಧವು ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(5) ಸಂದರ್ಭಾನುಸಾರ, ಸರ್ಕಾರವು ಅಥವಾ ಅಧಿಕೃತ ಅಧಿಕಾರಿಯು, (1)ನೇ ಅಥವಾ (3)ನೇ ಉಪ-ಪ್ರಕರಣದ ಉಪಬಂಧಗಳಿಗೆ ತದ್ವಿರುದ್ಧವಾಗಿ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ವಿಧಿಸಿದ ಷರತ್ತುಗಳನ್ನು ಉಲ್ಲಂಘಿಸಿ ನಿರ್ಮಿಸಿದ ಯಾವುದೇ ಕಟ್ಟಡವನ್ನು ಕೆಡವಿಹಾಕಿಸಬಹುದು.

**66. ಕಾರ್ಖಾನೆಗಳನ್ನು ನಿರ್ಮಿಸಲು ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲು ಅನುಮತಿ.**- ಯಾವನೇ ವ್ಯಕ್ತಿಯು, ಗ್ರಾಮ ಪಂಚಾಯತಿಯ ಅನುಮತಿಯಿಲ್ಲದೆ ಮತ್ತು ಅಂಥ ಅನುಮತಿಯಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗನುಸಾರವಾಗಿಯಲ್ಲದೆ,-

(ಎ) ಯಾವುದರಲ್ಲಿ ಉಗಿಶಕ್ತಿ, ಜಲಶಕ್ತಿ ಅಥವಾ ಇತರ ಯಾಂತ್ರಿಕ ಶಕ್ತಿ ಅಥವಾ ವಿದ್ಯುಚ್ಛಕ್ತಿಯನ್ನು ಬಳಸಲು ಉದ್ದೇಶಿಸಲಾಗಿದೆಯೋ ಆ ಯಾವುದೇ ಕಾರ್ಖಾನೆ, ಕಾರ್ಯಾಗಾರವನ್ನು ಅಥವಾ ಕೆಲಸದ ಸ್ಥಳವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಸ್ಥಾಪಿಸತಕ್ಕದ್ದಲ್ಲ; ಅಥವಾ

(ಬಿ) ಈ ಅಧಿನಿಯಮದ ಅಡಿಯಲ್ಲಿ ಸರ್ಕಾರವು ರಚಿಸಿದ ನಿಯಮಗಳ ಮೂಲಕ ವಿನಾಯಿತಿಗೊಳಿಸಿದ ಯಂತ್ರೋಪಕರಣ ಅಥವಾ ತಯಾರಿಕಾ ಸ್ಥಾವರವಾಗಿಲ್ಲದ, ಮೇಲೆ ಹೇಳಿದ ಯಾವುದೇ ಶಕ್ತಿಯ ಮೂಲಕ ಚಾಲಿತವಾದ ಇತರ ಯಾವುದೇ ಯಂತ್ರೋಪಕರಣ ಅಥವಾ ತಯಾರಿಕಾ ಸ್ಥಾವರವನ್ನು ಯಾವುದೇ ಆವರಣದಲ್ಲಿ ಸ್ಥಾಪಿಸತಕ್ಕದ್ದಲ್ಲ.

**67. ಲೈಸೆನ್ಸಿಲ್ಲದೆ ಉಪದ್ರವಕಾರಿ ಅಥವಾ ಅಪಾಯಕಾರಿ ವ್ಯಾಪರದ ನಿಷೇಧ.**- ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯೊಳಗಿರುವ ಯಾವುದೇ ಸ್ಥಳವನ್ನು ಗ್ರಾಮಪಂಚಾಯಿತಿಯು ಕೊಟ್ಟ ಅಥವಾ ನವೀಕರಿಸಿದ ಲೈಸೆನ್ಸಿನ ಮೇರೆಗಲ್ಲದೆ ಮತ್ತು ಆ ಲೈಸೆನ್ಸಿನಲ್ಲಿ ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಸರ್ಕಾರವು ಅಧಿಸೂಚನೆಯ ಮೂಲಕ ಉಪದ್ರವಕಾರಿ ಅಥವಾ ಅಪಾಯಕಾರಿಯೆಂದು ಘೋಷಿಸಬಹುದಾದಂಥ ಯಾವುದೇ ವ್ಯಾಪಾರಕ್ಕಾಗಿ ಅಥವಾ ವ್ಯವಹಾರಕ್ಕಾಗಿ ಅಥವಾ ಉದ್ಯಮದ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

**68. ಹೋಟೇಲು ಮುಂತಾದವುಗಳ ನಿಯಂತ್ರಣ.**- ಗ್ರಾಮ ಪಂಚಾಯಿಯ ಅಧಿಕಾರ ವ್ಯಾಪ್ತಿಯೊಳಗೆ ಇರುವ ಯಾವುದೇ ಸ್ಥಳವನ್ನು, ಗ್ರಾಮ ಪಂಚಾಯಿತಿಯು ಕೊಟ್ಟ ಅಥವಾ ನವೀಕರಿಸಿದ ಲೈಸೆನ್ಸಿನ ಮೇರೆಗೆ ಅಲ್ಲದೆ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗನುಸಾರವಾಗಿಯಲ್ಲದೆ, ಹೋಟೇಲು, ಉಪಹಾರ ಗೃಹ, ಭೋಜನ ಗೃಹ, ಕಾಫಿ ಮಂದಿರ, ಮಿಠಾಯಿ ಅಂಗಡಿ, ಬೇಕರಿ, ಊಟದ ಗೃಹ ಅಥವಾ ವಸತಿ ಗೃಹ (ಸರ್ಕಾರವು ಮಾನ್ಯತೆ ಮಾಡಿದ ಹಾಸ್ಟಲ್‌ನ್ನು ಹೊರತುಪಡಿಸಿ) ಅಥವಾ ಧರ್ಮಶಾಲೆ ಅಥವಾ ಉಸು ಅಥವಾ ಇಂಗಾಲಾಮ್ಲ ಮಿಶ್ರಿತ ನೀರಿನ ತಯಾರಿಕೆಗಾಗಿ ಉಪಯೋಗಿಸತಕ್ಕದ್ದಲ್ಲ.

**69. ಅಂಗಡಿಗಳಿಗೆ ಲೈಸೆನ್ಸು ಕೊಡುವುದು.**- ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯೊಳಗೆ ಇರುವ ಯಾವುದೇ ಸ್ಥಳವನ್ನು, ಗ್ರಾಮ ಪಂಚಾಯಿತಿಯು ಕೊಟ್ಟ ಅಥವಾ ನವೀಕರಿಸಿದ ಲೈಸೆನ್ಸಿನ ಮೇರೆಗೆ ಅಲ್ಲದೆ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗನುಸಾರವಾಗಿಯಲ್ಲದೆ, 67 ಮತ್ತು 68ನೇ ಪ್ರಕರಣಗಳಲ್ಲಿ ಉಲ್ಲೇಖಿಸಿದ ಅಂಗಡಿಗಳನ್ನು ಹೊರತುಪಡಿಸಿ, ಖಾಯಂ ಆಗಿಯೇ ಆಗಲಿ ಅಥವಾ ತಾತ್ಕಾಲಿಕವಾಗಿಯೇ ಆಗಲಿ ಅಂಗಡಿಯಾಗಿ ಉಪಯೋಗಿಸತಕ್ಕದ್ದಲ್ಲ.

**70. 66,67,68 ಮತ್ತು 69ನೇ ಪ್ರಕರಣಗಳ ಅಡಿಯಲ್ಲಿ ಅನುಮತಿಗಳಿಗೆ ಮತ್ತು ಲೈಸೆನ್ಸುಗಳಿಗೆ ಅನ್ವಯವಾಗುವ ಉಪಬಂಧಗಳು.**- (1) ಗೊತ್ತುಪಡಿಸಬಹುದಾಂಥ ಫೀಜನ್ನು ಮುಂಗಡವಾಗಿ ಸಂದಾಯ ಮಾಡಿದ ಮೇಲೆ ಮಾತ್ರವೇ 66ನೇ ಪ್ರಕರಣದ ಅಡಿಯಲ್ಲಿ ಅನುಮತಿಯನ್ನು ಕೊಡತಕ್ಕದ್ದು ಮತ್ತು 67,68 ಮತ್ತು 69ನೇ ಪ್ರಕರಣಗಳ ಅಡಿಯಲ್ಲಿ ಲೈಸೆನ್ಸನ್ನು ಕೊಡತಕ್ಕದ್ದು ಅಥವಾ ನವೀಕರಿಸತಕ್ಕದ್ದು.

(2) ಗ್ರಾಮ ಪಂಚಾಯಿತಿಯು, ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, 66ನೇ ಪ್ರಕರಣದ ಅಡಿಯಲ್ಲಿ ಅನುಮತಿಯನ್ನು ಕೊಡಲು ಅಥವಾ 67,68 ಮತ್ತು 69ನೇ ಪ್ರಕರಣಗಳ ಅಡಿಯಲ್ಲಿ ಲೈಸೆನ್ಸನ್ನು ಕೊಡಲು ಅಥವಾ ನವೀಕರಿಸಲು ನಿರಾಕರಿಸಬಹುದು ಅಥವಾ ಕೊಟ್ಟ ಅಥವಾ ನವೀಕರಿಸಿದ ಲೈಸೆನ್ಸನ್ನು, ಯಾವ ಷರತ್ತುಗಳಿಗೊಳಪಟ್ಟು ಆ ಲೈಸೆನ್ಸನ್ನು ಕೊಡಲಾಯಿತೋ ಆ ಯಾವುದೇ ಷರತ್ತನ್ನು ಪಾಲಿಸದೇ ಇರುವುದಕ್ಕಾಗಿ ಅಮಾನತ್ತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

[1][(2ಎ) ಈ ಅಧಿನಿಯಮದಲ್ಲಿ ಉಪಬಂಧಿಸಿದುದನ್ನು ಉಳಿದು, ಈ ಅಧಿನಿಯಮ ಅಥವಾ ಅದರಡಿಯಲ್ಲಿನ ನಿಯಮ, ಉಪವಿಧಿ ಅಥವಾ ವಿಷಯಗಳಡಿಯಲ್ಲಿ ಲೈಸೆನ್ಸ್ ಅಥವಾ ಅನುಮತಿಗಾಗಿನ ಅಥವಾ ಅದರ ನವೀಕರಣಕ್ಕಾಗಿನ ಪ್ರತಿಯೊಂದು ಅರ್ಜಿಯನ್ನು, ಅಗತ್ಯವಾದ ಲೈಸೆನ್ಸು ಅಥವಾ ಅನುಮತಿಯು ಜಾರಿಯಾಗುವ ದಿನಾಂಕದಿಂದ ಅಥವಾ ಅವಧಿಯ (ಒಂದು ವರ್ಷ ಅಥವಾ ಅರ್ಜಿಯಲ್ಲಿ ಹೇಳಲಾದ ಅವಧಿಗಿಂತ ಅಂಥ ಕಡಿಮೆ ಅವಧಿ) ಆದಷ್ಟು ಮೊದಲು ಮೂವತ್ತು ದಿನಗಳಿಗಿಂತ ಕಡಿಮೆಯಲ್ಲಿ ಮತ್ತು ತೊಂಬತ್ತು ದಿನಗಳಿಗಿಂತ ಹೆಚ್ಚಲ್ಲದಂಥ ಅವಧಿಯಲ್ಲಿ ಸಲ್ಲಿಸತಕ್ಕದ್ದು.

(2ಬಿ) ಪ್ರತಿಯೊಂದು ಲೈಸೆನ್ಸು ಅಥವಾ ಅನುಮತಿಗಾಗಿ ಅಂಥ ಯೂನಿಟ್ಟುಗಳ ಮೇಲೆ ಗ್ರಾಮ ಪಂಚಾಯತ್ ನಿಗದಿಪಡಿಸಬಹುದಾದಂತೆ ನಿಯಮಿಸಲಾದ ಗರಿಷ್ಠಕ್ಕೆ ಮೀರದಂಥ ದರಗಳಲ್ಲಿ ಶುಲ್ಕವನ್ನು ಚಾರ್ಜು ಮಾಡಬಹುದು:

ಪರಂತು ಹೋರ್ಡಿಂಗ್‌ನ ಪ್ರತಿಯೊಂದು ಲೈಸೆನ್ಸಗೆ, ಅನುಸೂಚಿ-IVರಲ್ಲಿ ನಿರ್ದಿಷ್ಟಪಡಿಸಬಹುದಾಂಥ ದರಗಳಲ್ಲಿ ಶುಲ್ಕವನ್ನು ಚಾರ್ಜು ಮಾಡತಕ್ಕದ್ದು.

(2ಸಿ) (2ಎ) ಉಪ ಪ್ರಕರಣದ ಅಡಿಯಲ್ಲಿನ ಅರ್ಜಿಯ ಮೇಲಿನ ಆದೇಶಗಳನ್ನು ಅರವತ್ತು ದಿನಗಳೊಳಗೆ ಅರ್ಜಿದಾರನಿಗೆ ತಿಳಿಸಲಾಗದಿದ್ದಲ್ಲಿ, ಅದು ಸಾಮಾನ್ಯವಾಗಿ ಮಂಜೂರು ಮಾಡುವ, ಅವಧಿಗಾಗಿ, ಯಾವುದಾದರೂ ಇದ್ದಲ್ಲಿ, ಸಾಮಾನ್ಯವಾಗಿ ವಿಧಿಸುವಂತಹ ಷರತ್ತುಗಳಿಗೆ ಒಳಪಟ್ಟು ಅರ್ಜಿಯನ್ನು ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು :

ಪರಂತು, ಚುನಾವಣೆಯ ಸಮಯದಲ್ಲಿ ಅಥವಾ ಅನ್ಯಥಾ ಅರ್ಜಿಯನ್ನು ಪರಿಷ್ಕರಿಸಲಾಗದಿದ್ದಲ್ಲಿ ಅರ್ಜಿಯ ಆದೇಶವನ್ನು ತೊಂಬತ್ತು ದಿನಗಳ ಅವಧಿಯಲ್ಲಿ ತಿಳಿಸತಕ್ಕದ್ದು.

(2ಡಿ) (2ಸಿ) ಉಪ ಪ್ರಕರಣದ ಅಡಿಯಲ್ಲಿ ಭಾವಿತ ಮಂಜೂರಾತಿಯ ಆದೇಶವನ್ನು ಹೊರಡಿಸಿದಲ್ಲಿ ಮತ್ತು ಸಂಬಂಧಪಟ್ಟ ಅಧ್ಯಕ್ಷ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಅಂಥ ಆದೇಶವನ್ನು ಹೊರಡಿಸುವುದಕ್ಕೆ ಜವಾಬ್ದಾರನಾಗಿದ್ದಲ್ಲಿ ಅದನ್ನು ದುರ್ನಡತೆ ಎಂದು ಪರಿಗಣಿಸತಕ್ಕದ್ದು ಮತ್ತು 48ನೇ ಪ್ರಕರಣದ ಅಡಿಯಲ್ಲಿ ಅಧ್ಯಕ್ಷನ ಮೇಲೆ ಕ್ರಮ ಜರುಗಿಸತಕ್ಕದ್ದು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಮೇಲೆ ಆತನಿಗೆ ಅನ್ವಯವಾಗುವ ಸಂಬಂಧಪಟ್ಟ ಸೇವಾ ಕಾನೂನಿನ ಅಡಿಯಲ್ಲಿ ಕ್ರಮ ಜರುಗಿಸತಕ್ಕದ್ದು"

(2ಇ) ಯಾವುದೇ ಅಂಥ ಲೈಸೆನ್ಸ್ ಅಥವಾ ಅನುಮತಿಗಾಗಿ ಶುಲ್ಕದ ಪೂರ್ವ-ಸಂದಾಯ ಸ್ವಿಕೃತಿಯು ಲೈಸೆನ್ಸು ಅಥವಾ ಅನುಮತಿಯ ಅಂಥ ಪೂರ್ವ ಸಂದಾಯವನ್ನು ಮಾಡುವುದಕ್ಕೆ ವ್ಯಕ್ತಿಯು ಅರ್ಹನಾಗತಕ್ಕದ್ದಲ್ಲ, ಆದರೆ ಲೈಸೆನ್ಸು ಅಥವಾ ಅನುಮತಿಯನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಶುಲ್ಕವನ್ನು ಮರು ಪಾವತಿಸುವುದಕ್ಕೆ ಮಾತ್ರ ಅರ್ಹನಾಗತಕ್ಕದ್ದು.

(2ಎಫ್) ಯಾವುದೇ ಅಂಥ ಲೈಸೆನ್ಸ್ ಅಥವಾ ಅನುಮತಿಯು ಅವಶ್ಯವಾಗಿರುವ ಒಂದು ಕಾರ್ಯವನ್ನು ಅಂಥ ಲೈಸೆನ್ಸು ಅಥವಾ ಅನುಮತಿಯಿಲ್ಲದೇ ಅಥವಾ ಪಡೆಯಲಾದ ಲೈಸೆನ್ಸು ಅಥವಾ ಅನುಮತಿಯ ಷರತ್ತುಗಳಿಗೆ ಅಸಂಗತವಾದ ವಿಧಾನದಲ್ಲಿ ಮಾಡಲಾಗಿದ್ದಲ್ಲಿ, ಗ್ರಾಮ ಪಂಚಾಯಿತಿಯ ಲೈಸೆನ್ಸು ಪ್ರಾಧಿಕಾರವು ನೋಟೀಸಿನ ಮೂಲಕ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಅದರಿಂದ ಬಾಧಿತವಾದ ಚರ ಅಥವಾ ಸ್ಥಿರ, ಸಾರ್ವಜನಿಕ ಅಥವಾ ಖಾಸಗಿಯ ಯಾವುದೇ ಸ್ವತ್ತಿನ ಪೂರ್ಣ ಅಥವಾ ಯಾವುದೇ ಭಾಗವನ್ನು ಬದಲಾಯಿಸುವಂತೆ, ತೆಗೆದುಹಾಕುವಂತೆ ಅಥವಾ ಸಾಧ್ಯವಾದಷ್ಟು ಅದನ್ನು ಅದರ ಮೂಲ ಸ್ವರೂಪಕ್ಕೆ ತರುವಂತೆ ಆ ವ್ಯಕ್ತಿಗೆ ಅಗತ್ಯಪಡಿಸಬಹುದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(3) 66ನೇ ಪ್ರಕರಣದ ಅಡಿಯಲ್ಲಿ ಅನುಮತಿಯನ್ನು ಕೊಡಲು ಅಥವಾ (2) ನೇ ಉಪ-ಪ್ರಕರಣದ ಅಡಿಯಲ್ಲಿ ಲೈಸೆನ್ಸನ್ನು ಕೊಡಲು ಅಥವಾ ನವೀಕರಿಸಲು ನಿರಾಕರಿಸುವ ಮೂಲಕ ಅಥವಾ ಲೈಸೆನ್ಸಿನ ಅಮಾನತು ಅಥವಾ ರದ್ದಿಯಾತಿಯ ಮೂಲಕ ಬಾಧಿತನಾದ ಯಾವನೇ ವ್ಯಕ್ತಿಯು, ಆ ಆದೇಶವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿವಸದೊಳಗೆ [1][ಕಾರ್ಯನಿರ್ವಾಹಕ ಅಧಿಕಾರಿಗೆ][1] ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿಗೆ ಸಂಬಂಧಪಟ್ಟಂತೆ ಆತನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(4) ಜಿಲ್ಲಾ ಪರಿಷತ್ತಿನ ಸಾಮಾನ್ಯ ಸ್ಥಾಯಿ ಸಮಿತಿಯಲ್ಲಿ ಇತ್ಯರ್ಥವಾಗಬೇಕಾಗಿರುವ (3)ನೇ ಉಪ-ಪ್ರಕರಣದಲ್ಲಿನ ಯಾವುದೇ ಅಪೀಲನ್ನು, 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಅಸಿಸ್ಟೆಂಟ್ ಕಮೀಷನರ್ ಅವರಿಗೆ ವರ್ಗಾಯಿಸತಕ್ಕದ್ದು ಮತ್ತು ಅಂಥ ಅಪೀಲು ತನ್ನ ಮುಂದೆ ಸಲ್ಲಿಸಿದ್ದರೆ ಹೇಗೋ ಹಾಗೆ ತೀರ್ಮಾನಿಸತಕ್ಕದ್ದು.

**71. ಗ್ರಾಮ ಪಂಚಾಯಿತಿಗಳಿಗೆ, ಸಂಸ್ಥೆಗಳು ಅಥವಾ ಕಾಮಗಾರಿಗಳ ವರ್ಗಾವಣೆ.**-ಸರ್ಕಾರವು ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು, ಡೆಪ್ಯುಟಿ ಕಮೀಷನರ್ ಅವರು ಅಥವಾ ಜಿಲ್ಲಾ ಪಂಚಾಯಿತಿಯು ಅಥವಾ ತಾಲ್ಲೂಕು ಪಂಚಾಯಿತಿಯು ಅಥವಾ ಯಾವನೇ ಖಾಸಗೀ ವ್ಯಕ್ತಿಯು ಅಥವಾ ವ್ಯಕ್ತಿಗಳ

ನಿಕಾಯವು, ಗ್ರಾಮ ಪಂಚಾಯಿತಿಯ ಸಮ್ಮತಿಯಿಂದ ಮತ್ತು ಒಪ್ಪಿಕೊಳ್ಳಬಹುದಾದಂಥ ಷರತ್ತುಗಳಿಗೊಳಪಟ್ಟು, ತನ್ನ ನಿಯಂತ್ರಣಕ್ಕೆ ಒಳಪಟ್ಟಿರುವಂಥ ಪ್ರದೇಶದೊಳಗೆ ಇರುವ ಯಾವುದೇ ಸಂಸ್ಥೆಯ ವ್ಯವಸ್ಥಾಪನೆಯನ್ನು ಅಥವಾ ಕಾಮಗಾರಿಯನ್ನು ಕಾರ್ಯಗತಗೊಳಿಸುವುದನ್ನು ಅಥವಾ ಅದರ ನಿರ್ವಹಣೆಯನ್ನು ಅಥವಾ ಯಾವುದೇ ಕರ್ತವ್ಯದ ನಿರ್ವಹಣೆಯನ್ನು ಅದಕ್ಕೆ ಒಪ್ಪಿಸಬಹುದು.

**72. ಸಾರ್ವಜನಿಕ ಬೀದಿಗಳು ಮತ್ತು ಖಾಲಿ ನಿವೇಶನಗಳ ಮೇಲಿನ ಅಡತಡೆ ಮತ್ತು ಒತ್ತುವರಿಗಳು.**- (1) ಪಂಚಾಯಿತಿ ಪ್ರದೇಶದ ಪರಿಮಿತಿಯೊಳಗೆ ಈ ಬಗ್ಗೆ ಯುಕ್ತವಾಗಿ ಅಧಿಕಾರ ಪಡೆದಿಲ್ಲದ ಯಾರೇ ಆಗಲಿ,-

(ಎ) ಯಾವುದೇ ಗೋಡೆ, ಬೇಲಿ, ಕಂಬಿ, ಕಂಬ, ಅಂಗಡಿ, ವರಾಂಡ,ವೇದಿಕೆ, ಮೇಲ್ಛಾಯ, ಮೆಟ್ಟಿಲು, ಅಥವಾ ಯಾವುದೇ ಮುಂಚಾಚಿರುವ ರಚನೆ ಅಥವಾ ಇತರ ಒತ್ತುವರಿ ಅಥವಾ ಅಡೆತಡೆಯನ್ನು ಕಟ್ಟಿದ್ದರೆ ಅಥವಾ ಸ್ಥಾಪಿಸಿದ್ದರೆ ಅಥವಾ ಕಟ್ಟಿದರೆ ಅಥವಾ ಸ್ಥಾಪಿಸಿದರೆ; ಅಥವಾ

(ಬಿ) ಯಾವುದೇ ಸಾರ್ವಜನಿಕ ಬೀದಿ ಅಥವಾ ಸ್ಥಳದಲ್ಲಿ ಯಾವುದೇ ಪೆಟ್ಟಿಗೆ, ಬೇಲು, ಪ್ಯಾಕೇಜು ಅಥವಾ ವ್ಯಾಪಾರ ಸರಕುಗಳು ಅಥವಾ ಯಾವುದೇ ಇತರ ಪದಾರ್ಥವನ್ನು ಅಂಥ ಬೀದಿ ಅಥವಾ ಸ್ಥಳಗಳಲ್ಲಿರುವ ಯಾವುದೇ ತೆರೆದ ಚರಂಡಿ, ಗಟಾರ, ಗ್ರಾಮಸಾರ ಚರಂಡಿ ಅಥವಾ ಮೇಲು ಕಾಲುವೆಯಲ್ಲಿ ಅಥವಾ ಅವುಗಳ ಹೊರಗೆ ಅಥವಾ ಮೇಲೆ ಇಟ್ಟರೆ ಅಥವಾ ಇಡುವಂತೆ ಮಾಡಿದರೆ ಅಥವಾ ಶೇಖರಿಸುವಂತೆ ಮಾಡಿದರೆ,

-ಅಪರಾಧ ನಿರ್ಣಯವಾದ ಮೇಲೆ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅಂಥ ಅಪರಾಧದ ಮೊದಲ ನಿರ್ಣಯದ ದಿನಾಂಕದ ತರುವಾಯ ಅಂಥ ಮುಂಚಾಚುವಿಕೆ, ಒತ್ತುವರಿ, ಅಡೆತಡೆ ಅಥವಾ ಇಡುವಿಕೆಯು ಮುಂದುವರಿಯುವಂಥ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಗ್ರಾಮ ಪಂಚಾಯತಿಯು ಅಂಥ ಅಡೆತಡೆ ಅಥವಾ ಒತ್ತುವರಿಯನ್ನು ತೆಗೆದು ಹಾಕುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಖಾಸಗಿ ಸ್ವತ್ತಾಗಿಲ್ಲದ ಯಾವುದೇ ತೆರೆದ ನಿವೇಶನದಲ್ಲಿ, ಅಂಥ ನಿವೇಶನವು ಗ್ರಾಮ ಪಂಚಾಯಿತಿಯಲ್ಲಿ ನಿಹಿತವಾಗಿರಲಿ ಅಥವಾ ಇಲ್ಲದಿರಲಿ, ಅದೇ ಸ್ವರೂಪದ ಯಾವುದೇ ಅನಧಿಕೃತ ಅಡೆತಡೆ ಅಥವಾ ಒತ್ತುವರಿಯನ್ನು ತೆಗೆದುಹಾಕಲು ಅಂಥದೇ ಅಧಿಕಾರವನ್ನು ಹೊಂದಿರತಕ್ಕದ್ದು. ಅಂಥ ತೆಗದು ಹಾಕುವಿಕೆಯ ಬಗೆಗಿನ ವೆಚ್ಚವನ್ನು ಸದರಿ ಅಡೆತಡೆ ಅಥವಾ ಒತ್ತುವರಿಯನ್ನುಂಟುಮಾಡಿದ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು ಅದನ್ನು 199ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆಯಂತೆಯೇ ವಸೂಲು ಮಾಡತಕ್ಕದ್ದು.

(3) ಈ ಬಗ್ಗೆ ಯುಕ್ತವಾಗಿ ಅಧಿಕಾರ ಪಡೆಯದೇ ಇರುವ ಯಾರೇ ಆಗಲಿ ಖಾಸಗಿ ಸ್ವತ್ತಾಗಿಲ್ಲದೆ ಇರುವಂಥ ಯಾವುದೇ ಖಾಲಿ ನಿವೇಶನದಿಂದ, ಪಂಚಾಯತಿ ಪ್ರದೇಶದ ನಿವಾಸಿಗಳು ಗೃಹ ಬಳಕೆಗಾಗಿ ಉಪಯೋಗಿಸುವ ಮರಳನ್ನು ಹೊರತುಪಡಿಸಿ, ಮಣ್ಣು, ಮರಳು ಅಥವಾ ಇತರ ಸಾಮಗ್ರಿಗಳನ್ನು ತೆಗೆದುಹಾಕಿದರೆ ಅಥವಾ ಅದರಲ್ಲಿ ಅಥವಾ ಅದರ ಮೇಲೆ ಯಾವುದೇ ಒತ್ತುವರಿಯನ್ನು ಮಾಡಿದರೆ, ಅಪರಾಧ ನಿರ್ಣಯವಾದ ಮೇಲೆ, ಎರಡುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು, ಮತ್ತು,-

(i) ಒತ್ತುವರಿಯ ಸಂದರ್ಭದಲ್ಲಿ, ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯ ಒತ್ತುವರಿಯು ಮುಂದುವರಿಯುವಂಥ ಪ್ರತಿಯೊಂದು ದಿವಸಕ್ಕೆ, ಎರಡು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು;

(ii) ಮಣ್ಣು, ಮರಳು ಅಥವಾ ಇತರ ವಸ್ತುಗಳನ್ನು ತೆಗೆದು ಹಾಕಿದ ಸಂದರ್ಭದಲ್ಲಿ, ಅಂಥ ಮಣ್ಣು, ಮರಳು ಅಥವಾ ಇತರ ವಸ್ತುವಿನ ಬೆಲೆಯ ಎರಡರಷ್ಟನ್ನು ಸಹ ಜುಲ್ಮಾನೆಯಂತೆ ವಸೂಲು ಮಾಡತಕ್ಕದ್ದು.

(4) ಈ ಪ್ರಕರಣದಲ್ಲಿ ಏನೇ ಇದ್ದರೂ, ಗ್ರಾಮ ಪಂಚಾಯತಿಯು, ಉತ್ಸವಗಳು ಮತ್ತು ಸಮಾರಂಭಗಳ ಸಂದರ್ಭಗಳಲ್ಲಿ, ನಾಲ್ಕು ದಿವಸಗಳಿಗೆ ಮೀರದಂತೆ ಯಾವುದೇ ಸಾರ್ವಜನಿಕ ಬೀದಿಯ ತಾತ್ಕಾಲಿಕ ಬಳಕೆಗಾಗಿ ಅಥವಾ ಅದರಲ್ಲಿ ತಾತ್ಕಾಲಿಕವಾಗಿ ರಚನೆಗಳನ್ನು ಮಾಡುವುದಕ್ಕಾಗಿ ಮತ್ತು ಸಾರ್ವಜನಿಕರಿಗೆ ಅಥವಾ ಯಾವನೇ ವ್ಯಕ್ತಿಗೆ ಅನನುಕೂಲವಾಗದ ರೀತಿಯಲ್ಲಿ ಉಪ ಬೀದಿಗಳಲ್ಲಿ ಮತ್ತು ನಿವೇಶನಗಳಲ್ಲಿ ಉರುವಲನ್ನು ಪೇರಿಸಲು ಅನುಮತಿ ನೀಡುವುದಕ್ಕೆ ಪ್ರತಿಬಂಧಿಸತಕ್ಕದ್ದಲ್ಲ.

**73. ಬೀದಿಗಳಿಗೆ ಹೆಸರಿಡಲು ಮತ್ತು ಕಟ್ಟಡಗಳಿಗೆ ಸಂಖ್ಯೆಯನ್ನು ಕೊಡಲು ಅಧಿಕಾರ.**- (1) ಗ್ರಾಮ ಪಂಚಾಯತಿಯು, ಯಾವುದೇ ಬೀದಿಗೆ ಹೆಸರನ್ನು ಕೊಡುವ ಮತ್ತು ಯಾವುದೇ ಕಟ್ಟಡಕ್ಕೆ ಅಥವಾ ಕಟ್ಟಡದ ಭಾಗಕ್ಕೆ ಸಂಖ್ಯೆಯನ್ನು ಹಾಕುವಂತೆ ಮತ್ತು ಕಾಲಕಾಲಕ್ಕೆ ಅಂಥ ಹೆಸರು ಅಥವಾ ಸಂಖ್ಯೆಯನ್ನು ಬದಲಾಯಿಸುವಂತೆ ವ್ಯವಸ್ಥೆ ಮಾಡಬಹುದು.

(2) ಯಾವನೇ ವ್ಯಕ್ತಿಯು, ಅಂಥ ಯಾವುದೇ ಹೆಸರನ್ನು ಅಥವಾ ಸಂಖ್ಯೆಯನ್ನು ನಾಶಪಡಿಸತಕ್ಕದ್ದಲ್ಲ, ತೆಗೆದುಹಾಕತಕ್ಕದ್ದಲ್ಲ, ವಿರೂಪಗೊಳಿಸತಕ್ಕದ್ದಲ್ಲ ಅಥವಾ ಯಾವುದೇ ಇತರ ರೀತಿಯಲ್ಲಿ ಹಾನಿಗೊಳಿಸತಕ್ಕದ್ದಲ್ಲ ಅಥವಾ ಬದಲಾಯಿಸತಕ್ಕದ್ದಲ್ಲ ಅಥವಾ ಗ್ರಾಮ ಪಂಚಾಯತಿಯ ಆದೇಶದ ಮೂಲಕ ಹಾಕಿದ ಅಥವಾ ಬಣ್ಣ ಹಚ್ಚಲಾದ ಹೆಸರಿಗೆ ಅಥವಾ ಸಂಖ್ಯೆಗೆ ಭಿನ್ನವಾದ ಯಾವುದೇ ಹೆಸರನ್ನು ಅಥವಾ ಸಂಖ್ಯೆಯನ್ನು ಹಾಕತಕ್ಕದ್ದಲ್ಲ ಅಥವಾ ಬಣ್ಣ ಹಚ್ಚತಕ್ಕದ್ದಲ್ಲ.

(3) ಯಾವುದೇ ಅಂಥ ಹೆಸರನ್ನು ಅಥವಾ ಸಂಖ್ಯೆಯನ್ನು ನಾಶಪಡಿಸುವ, ತೆಗೆದುಹಾಕುವ, ಹಾನಿಗೊಳಿಸುವ ಬದಲಾಯಿಸುವ ಅಥವಾ ವಿರೂಪಗೊಳಿಸುವ ಅಥವಾ ಗ್ರಾಮ ಪಂಚಾಯತಿಯ ಆದೇಶದ ಮೂಲಕ ಹಾಕಿದ ಹೆಸರಿಗೆ ಅಥವಾ ಸಂಖ್ಯೆಗೆ ಭಿನ್ನವಾದ ಯಾವುದೇ ಹೆಸರನ್ನು ಅಥವಾ ಸಂಖ್ಯೆಯನ್ನು ಹಾಕುವ ಯಾವನೇ ವ್ಯಕ್ತಿಯು ಮತ್ತು ಅದನ್ನು ಹಾಕಿದ ತರುವಾಯ ಅದನ್ನು ತನ್ನ ಖರ್ಚಿನಲ್ಲಿ ಸುಸ್ಥಿತಿಯಲ್ಲಿಡದ ಯಾವುದೇ ಆವರಣದ ಯಾವನೇ ಮಾಲೀಕನು, ಅಪರಾಧ ನಿರ್ಣಯವಾದ ಮೇಲೆ, ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**74. ಹಾಳು ಬಿದ್ದ ಅಥವಾ ಬೀಳುವ ಸಂಭವವಿರುವ ರಚನೆಗಳು, ಮರಗಳು ಮುಂತಾದವುಗಳನ್ನು ತೆಗೆದುಹಾಕುವುದು.**- (1) ಯಾವುದೇ ಕಾಲದಲ್ಲಿ, ಗ್ರಾಮ ಪಂಚಾಯತಿಗೆ ಯಾವುದೇ ಕಟ್ಟಡ ಅಥವಾ ಅದರ

ಯಾವುದೇ ಭಾಗ ಅಥವಾ ಯಾವುದೇ ಮರ ಅಥವಾ ಆ ಮರದ ಕೊಂಬೆಯು ಹಾಳಾದ ಸ್ಥಿತಿಯಲ್ಲಿರುವುದೆಂದು ಅಥವಾ ಬೀಳುವ ಸಂಭವವಿದೆಯೆಂದು ಅಥವಾ ಅಂಥ ಕಟ್ಟಡ ಅಥವಾ ಅದರ ಭಾಗ ಅಥವಾ ಆ ಮರ ಅಥವಾ ಆ ಮರದ ಕೊಂಬೆಯನ್ನು ಬಳಸುವ, ಅಲ್ಲಿಗೆ ಹೋಗುವ ಅಥವಾ ಆ ಮೂಲಕ ಹಾದು ಹೋಗುವ ಯಾವನೇ ವ್ಯಕ್ತಿಯ ಮೇಲೆ ಬೀಳುವ ಸಂಭವಿರುವುದೆಂದು ಅಥವಾ ಯಾವುದೇ ಇತರ ರೀತಿಯಲ್ಲಿ ಅಪಾಯಕಾರಿಯಾಗಿದೆ ಎಂದು ಕಂಡು ಬಂದರೆ ಗ್ರಾಮ ಪಂಚಾಯತಿಯು ಸಂದರ್ಭಾನುಸಾರ, ಅಂಥ ಕಟ್ಟಡದ ಅಥವಾ ಮರದ ಮಾಲೀಕನನ್ನು ಅಥವಾ ಅನುಭವದಾರನನ್ನು ಲಿಖಿತ ನೋಟೀಸಿನ ಮೂಲಕ, ಸಂದರ್ಭಾನುಸಾರ, ಅಂಥ ಕಟ್ಟಡ ಅಥವಾ ಅದರ ಭಾಗ ಅಥವಾ ಮರ ಅಥವಾ ಆ ಮರದ ಕೊಂಬೆಯನ್ನು,-

(i) ಕೆಡವಿಹಾಕಲು, ಸವರಲು ಅಥವಾ ಕತ್ತರಿಸಿಹಾಕಲು; ಅಥವಾ

(ii) ಭದ್ರಪಡಿಸಲು; ಅಥವಾ

(iii) ತೆಗೆದುಹಾಕಲು; ಅಥವಾ

(iv) ದುರಸ್ತಿ ಮಾಡಲು,

-ಮತ್ತು ಅಪಾಯಕ್ಕೆ ಕಾರಣವಾದವುಗಳನ್ನೆಲ್ಲ ನಿವಾರಿಸಲು ಅಗತ್ಯಪಡಿಸಬಹುದು.

(2) ಗ್ರಾಮ ಪಂಚಾಯತಿಗೆ, ಹಾಳು ಬಿದ್ದಿರುವ ಅಥವಾ ಬೀಳಲಿರುವಂಥ ಕಟ್ಟಡ ಅಥವಾ ಮರದಿಂದ ಅಪಾಯವು ಸನ್ನಿಹಿತವಾಗಿದೆಯೆಂದು ಕಂಡುಬಂದರೆ, ಅದು, ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕಿಂತ ಮುಂಚೆ, ಸಂದರ್ಭಾನುಸಾರ, ಸದರಿ ಕಟ್ಟಡದ ಅಥವಾ ಮರದ ಸುತ್ತ ಬೇಲಿಯನ್ನು ಹಾಕಬಹುದು, ಅದನ್ನು ಕೆಡವಿ ಹಾಕಬಹುದು ಅಥವಾ ಸವರಬಹುದು ಅಥವಾ ಕತ್ತರಿಸಿ ಹಾಕಬಹುದು, ಭದ್ರಪಡಿಸಬಹುದು ಅಥವಾ ದುರಸ್ತಿಗೊಳಿಸಬಹುದು ಅಥವಾ ಅಪಾಯವನ್ನು ತಡೆಗಟ್ಟಲು ಅಗತ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು.

(3) ಈ ಬಗ್ಗೆ ಗ್ರಾಮ ಪಂಚಾಯತಿಯು ವಹಿಸಿದ ಯಾವುವೇ ವೆಚ್ಚಗಳನ್ನು, ಸಂದರ್ಭಾನುಸಾರ, ಕಟ್ಟಡದ ಅಥವಾ ಮರದ ಮಾಲೀಕನಿಂದ ಅಥವಾ ಅನುಭವದಾರನಿಂದ ಅದು 199ನೇ ಪ್ರಕರಣದ ಅಡಿಯಲ್ಲಿ ವಿಧಿಸಿದ ತೆರಿಗೆಯಂತೆ ವಸೂಲು ಮಾಡಬಹುದು.

(4) ಗ್ರಾಮ ಪಂಚಾಯತಿಯು, ಸಂದರ್ಭಾನುಸಾರ, ಮಾಲೀಕನಿಗೆ ಅಥವಾ ಅನುಭವದಾರನಿಗೆ ಯಾವುದೇ ಆಕ್ಷೇಪಣೆಯನ್ನು ಎತ್ತಲು ಯಾವುದಾದರೂ ಸಾಕ್ಷ್ಯ ಇದ್ದರೆ, ಅದನ್ನು ಒದಗಿಸಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ಎತ್ತಲಾದಂಥ ಆಕ್ಷೇಪಣೆಯು ಅಸಿಂಧು ಮತ್ತು ಸಾಕಷ್ಟಿಲ್ಲವೆಂದು ಮನದಟ್ಟು ಮಾಡಿಕೊಂಡ ತರುವಾಯ, (1)ನೇ ಉಪ-ಪ್ರಕರಣದ ಅಡಿಯಲ್ಲಿ ನೋಟೀಸನ್ನು ನೀಡತಕ್ಕದ್ದು.

**75. ನೈರ್ಮಲ್ಯ, ನಿರ್ಮಲೀಕರಣ ಮತ್ತು ಚರಂಡಿ ವ್ಯವಸ್ಥೆಯ ಬಗ್ಗೆ ಅಧಿಕಾರ.**- (1) ಗ್ರಾಮ ಪಂಚಾಯತಿಗೆ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ಪ್ರದೇಶದಲ್ಲಿ ನೈರ್ಮಲ್ಯ ಪರಿಸ್ಥಿತಿಯನ್ನು ಸುಧಾರಿಸುವುದು ಅವಶ್ಯವೆಂದು ಕಂಡು ಬಂದರೆ, ಅದು ಲಿಖಿತ ನೋಟೀಸಿನ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬೇಕಾದ ಯುಕ್ತ ಅವಧಿಯೊಳಗೆ,-

(i) ಯಾವುದೇ ಕಟ್ಟಡದ ಅಥವಾ ಗುಡಿಸಲಿನ ಮಾಲೀಕನನ್ನು ಅಥವಾ ಅನುಭವದಾರನನ್ನು ಅಥವಾ ಯಾವುದೇ ಶೌಚಗೃಹದ ಮಾಲೀಕನನ್ನು, ಅಂಥ ಗುಡಿಸಲನ್ನು ಅಥವಾ ಶೌಚಗೃಹವನ್ನು ಪೂರ್ಣವಾಗಿಯೇ ಆಗಲಿ ಅಥವಾ ಭಾಗಶಃವಾಗಿಯೇ ಆಗಲಿ ತೆಗೆದು ಹಾಕಲು;

(ii) ಯಾವುದೇ ಕಟ್ಟಡದ ಮಾಲೀಕನನ್ನು ಅಥವಾ ಅನುಭವದಾರನನ್ನು, ಅದಕ್ಕಾಗಿ ಖಾಸಗಿ ಚರಂಡಿಗಳನ್ನು ನಿರ್ಮಿಸಲು ಅಥವಾ ಅದರ ಖಾಸಗಿ ಚರಂಡಿಗಳನ್ನು ಬದಲಾಯಿಸಲು ಅಥವಾ ತೆಗೆದುಹಾಕಲು;

(iii) ಸ್ವಚ್ಛಗೊಳಿಸಬೇಕಾಗಿರುವಂಥ ಯಾವುದೇ ಭೂಮಿಯ ಅಥವಾ ಕಟ್ಟಡದ ಮಾಲೀಕನನ್ನು ಅಥವಾ ಅನುಭವದಾರನನ್ನು ಗ್ರಾಮ ಪಂಚಾಯಿತಿಗೆ ತೃಪ್ತಿಯಾಗುವ ಹಾಗೆ ಅದನ್ನು ಸ್ವಚ್ಛಗೊಳಿಸುವಂತೆ ಮಾಡಲು;

(iv) ಆರೋಗ್ಯಕ್ಕೆ ಹಾನಿಕರವಾದ ಅಥವಾ ನೆರೆಹೊರೆಯವರಿಗೆ ಅಸಹ್ಯಕರವಾಗಿರುವ ಅಥವಾ ಅನ್ಯಥಾ ಉಪದ್ರವದ ಮೂಲವಾಗಿರುವಂಥ ಬಾವಿ, ಕುಂಟೆ, ಹಳ್ಳ, ಗುಂಡಿ, ಕೊಳ, ಕೆರೆ ಇರುವ ಅಥವಾ ಯಾವುದೇ ಚರಂಡಿ ನೀರು, ಹೊಲಸು ಸಂಗ್ರಹಣೆಗಾಗಿ ಉಪಯೋಗಿಸಿದ ಅಥವಾ ನಿಂತ ನೀರಿರುವ ಯಾವುದೇ ಭೂಮಿಯ ಮಾಲೀಕನನ್ನು ಅಥವಾ ಅನುಭವದಾರನನ್ನು ಅದನ್ನು ಮುಚ್ಚಿಸುವಂತೆ, ಸ್ವಚ್ಛಗೊಳಿಸುವಂತೆ, ಆಳಗೊಳಿಸುವಂತೆ ಮಾಡಲು ಅಥವಾ ಅದರಿಂದ ನೀರನ್ನು ತೆಗೆದುಹಾಕುವಂತೆ ಅಥವಾ ಹರಿದು ಹೋಗುವಂತೆ ಮಾಡಲು ಅಥವಾ ಗ್ರಾಮ ಪಂಚಾಯತಿಯು ಅವಶ್ಯವೆಂದು ಭಾವಿಸಬಹುದಾದಂಥ ಇತರ ಕ್ರಮವನ್ನು ಕೈಗೊಳ್ಳಲು;

(v) ಯಾವುದೇ ರೀತಿಯಲ್ಲಿ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕರವಾದ ಅಥವಾ ಅಪಾಯಕಾರಿಯಾದ ಅಥವಾ ನೆರೆಹೊರೆಯವರಿಗೆ ಅಸಹ್ಯಕರವಾದ ಅಥವಾ ಸಾಕಷ್ಟು ವಾಯು ಸಂಚಾರಕ್ಕೆ ಅಡ್ಡಿ ಉಂಟುಮಾಡುವ ಸಸ್ಯ, ಕುರುಚಲು ಗಿಡಗಳು, ಪಾಪಾಸುಕಳ್ಳಿ ಅಥವಾ ದಟ್ಟ ಮರಗಳು ಬೆಳೆದ ಯಾವುದೇ ಭೂಮಿಯ ಮಾಲೀಕನನ್ನು ಅಥವಾ ಅನುಭವದಾರನನ್ನು ಅಂಥ ಸಸ್ಯ, ಕುರುಚಲು, ಪಾಪಾಸುಕಳ್ಳಿ ಅಥವಾ ದಟ್ಟವಾದ ಮರಗಳನ್ನು ಅದರಿಂದ ತೆಗೆದುಹಾಕುವಂತೆ ಮಾಡಲು,

-ಅಗತ್ಯಪಡಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗಿನ ನೋಟೀಸಿನ ಮೂಲಕ ಅಗತ್ಯಪಡಿಸಿದ, ಯಾವುದೇ ಕೆಲಸವನ್ನು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ನಿರ್ವಹಿಸದಿದ್ದರೆ, ಗ್ರಾಮ ಪಂಚಾಯತಿಯು, ತಾನೇ ಅಂಥ ಕೆಲಸವನ್ನು ಮಾಡಿಸಬಹುದು ಮತ್ತು ಅಂಥ ಕೆಲಸ ಅಥವಾ ಅದರ ಭಾಗದ ಖರ್ಚನ್ನು (1)ನೇ ಉಪ-ಪ್ರಕರಣದಲ್ಲಿ

ಉಲ್ಲೇಖಿಸಿದ ಮಾಲೀಕನಿಂದ ಅಥವಾ ಅನುಭವದಾರನಿಂದ 199ನೇ ಪ್ರಕರಣದ ಅಡಿಯಲ್ಲಿ ವಿಧಿಸಿದ ತೆರಿಗೆಯಂತೆ ವಸೂಲು ಮಾಡಬಹುದು.

**76. ಯಾತ್ರಾಸ್ಥಳ ಮುಂತಾದವುಗಳ ಮೇಲೆ ನಿಯಂತ್ರಣ ಹೊಂದಿರುವ ವ್ಯಕ್ತಿಗಳಿಂದ ವಂತಿಗೆ.**- (1) ಚರ್ಚ್, ಮಸೀದಿ, ದೇವಸ್ಥಾನ, ಮಠ ಅಥವಾ ಧಾರ್ಮಿಕ ಆರಾಧನೆಯ ಯಾವುದೇ ಸ್ಥಳ ಅಥವಾ ಸಂಸ್ಥೆ ಅಥವಾ ಜಾತ್ರೆಗಳನ್ನು, ಉತ್ಸವಗಳನ್ನು ನಡೆಸುವುದಕ್ಕಾಗಿ ಅಥವಾ ಇತರ ಅಂಥ ಉದ್ದೇಶಗಳಿಗಾಗಿ ಉಪಯೋಗಿಸುವಂಥ ಯಾವುದೇ ಸ್ಥಳವು ಗ್ರಾಮ ಪಂಚಾಯತಿಯ ಪರಿಮಿತಿಗಳೊಳಗೆ ಅಥವಾ ಅದರ ಆಸುಪಾಸಿನಲ್ಲಿ ಇದ್ದರೆ ಮತ್ತು ಅವು, ವರ್ಷಪೂರ್ತಿ ಅಥವಾ ವಿಶಿಷ್ಟ ಸಂದರ್ಭಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿದ್ದರೆ, ಸಾರ್ವಜನಿಕ ಆರೋಗ್ಯ, ಸುರಕ್ಷತೆ ಅಥವಾ ಸೌಲಭ್ಯಕ್ಕಾಗಿ, ಖಾಯಂ ಆಗಿ ಅಥವಾ ತಾತ್ಕಾಲಿಕವಾಗಿಯಾಗಲಿ, ಯಾವುದೇ ವಿಶೇಷ ವ್ಯವಸ್ಥೆಗಳನ್ನು ಗ್ರಾಮ ಪಂಚಾಯತಿಯು ಮಾಡತಕ್ಕದ್ದು. ಡೆಪ್ಯುಟಿ ಕಮೀಷನರ್ ಅವರು ಅಂಥ ಸ್ಥಳದ ಮೇಲೆ ನಿಯಂತ್ರಣವನ್ನು ಹೊಂದಿರುವ ಟ್ರಸ್ಟಿಗಳ ಮಂಡಲಿಗೆ ಅಥವಾ ಇತರ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸಾಕಷ್ಟು ಅವಕಾಶ ಕೊಟ್ಟ ತರುವಾಯ, ತಾನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ನಿರ್ಧರಿಸಬಹುದಾದಂಥ ಆವರ್ತಕ ಅಥವಾ ಅನಾವರ್ತಕ ವಂತಿಗೆಯನ್ನು ಗ್ರಾಮ ಪಂಚಾಯತಿಯ ನಿಧಿಗಳಿಗೆ ಕೊಡಲು ಅದನ್ನು ಅಥವಾ ಅವನನ್ನು ಅಗತ್ಯಪಡಿಸಬಹುದು.

(2) (1)ನೇ-ಉಪ-ಪ್ರಕರಣದ ಮೇರೆಗೆ ವಂತಿಗೆಯನ್ನು ಕೊಡಲು ಅಗತ್ಯಪಡಿಸಲಾದ ಟ್ರಸ್ಟಿಗಳ ಮಂಡಲಿಯು ಅಥವಾ ಇತರ ವ್ಯಕ್ತಿಯು ಡೆಪ್ಯುಟಿ ಕಮಿಷನರ್ ಅವರು ಮಾಡಿದ ಯಾವುದೇ ನಿರ್ಧರಣೆಯ ವಿರುದ್ಧ ಕಮಿಷನರಿಗೆ ಅಪೀಲನ್ನು ಮಾಡಿಕೊಳ್ಳಬಹುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಬೇಕೆಂದು ನಿರ್ದೇಶಿಸಿದ ಯಾವುದೇ ವಂತಿಗೆಯು ಭೂ ಕಂದಾಯದ ಬಾಕಿಯಂತೆ ವಸೂಲಿಯಾಗತಕ್ಕದ್ದು.

**77. ಸಾಕಷ್ಟು ನೀರು ಸರಬರಾಜು ವ್ಯವಸ್ಥೆ ಮಾಡಲು ಅಧಿಕಾರ.**- (1) ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಪ್ರದೇಶ ಅಥವಾ ಅದರ ಯಾವುದೇ ಭಾಗಕ್ಕೆ ಸಾರ್ವಜನಿಕ ಮತ್ತು ಖಾಸಗಿ ಉದ್ದೇಶಗಳಿಗಾಗಿ ಶುದ್ಧವಾದ ಮತ್ತು ಸಾಕಷ್ಟು ನೀರು ಸರಬರಾಜು ವ್ಯವಸ್ಥೆ ಮಾಡುವುದಕ್ಕಾಗಿ ಗ್ರಾಮ ಪಂಚಾಯತಿಯು,-

(ಎ) ಕೆರೆಗಳನ್ನು ಅಥವಾ ಬಾವಿಗಳನ್ನು ನಿರ್ಮಿಸಬಹುದು, ದುರಸ್ತಿಗೊಳಿಸಬಹುದು ಮತ್ತು ಅವು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬಹುದು ಮತ್ತು ತೊರೆಗಳು ಮತ್ತು ಜಲಮಾರ್ಗಗಳನ್ನು ಸ್ವಚ್ಛಗೊಳಿಸಬಹುದು.

(ಬಿ) ಯಾವುದೇ ಕೆರೆ, ಬಾವಿ, ತೊರೆ ಅಥವಾ ಜಲ ಮಾರ್ಗವನ್ನು ಅಥವಾ ತನ್ನ ನಿಯಂತ್ರಣದಲ್ಲಿರುವ ಪ್ರದೇಶದೊಳಗೆ ಅಥವಾ ಹೊರಗೆ ನೀರನ್ನು ತೆಗೆದುಕೊಳ್ಳುವ ಅಥವಾ ಸಾಗಿಸುವ ಯಾವುದೇ ಹಕ್ಕನ್ನು ಕೊಂಡುಕೊಳ್ಳಬಹುದು ಅಥವಾ ದಾನದ ಮೂಲಕ ಅಥವಾ ಇತರ ರೀತಿಯಲ್ಲಿ ಆರ್ಜಿಸಬಹುದು.

(ಸಿ) ಯಾವುದೇ ಕೆರೆ, ಬಾವಿ, ತೊರೆ ಅಥವಾ ಜಲಮಾರ್ಗವನ್ನು ಅದರ ಮಾಲೀಕರ ಸಮ್ಮತಿಯೊಂದಿಗೆ ಉಪಯೋಗಿಸಬಹುದು, ಸ್ವಚ್ಛಗೊಳಿಸಬಹುದು ಅಥವಾ ದುರಸ್ತಿಗೊಳಿಸಬಹುದು ಅಥವಾ ಅವುಗಳಿಂದ ನೀರನ್ನು ಪಡೆದುಕೊಳ್ಳುವುದಕ್ಕಾಗಿ ಸೌಲಭ್ಯಗಳನ್ನು ಒದಗಿಸಬಹುದು;

(ಡಿ) ನೀರನ್ನು ಸರಬರಾಜು ಮಾಡುವುದಕ್ಕಾಗಿ ಯಾವನೇ ವ್ಯಕ್ತಿಯೊಂದಿಗೆ ಕರಾರು ಮಾಡಿಕೊಳ್ಳಬಹುದು; ಅಥವಾ

(ಇ) ಈ ಪ್ರಕರಣದ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಅವಶ್ಯವಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು.

(2) ಗ್ರಾಮ ಪಂಚಾಯತಿಯು, ಯೋಗ್ಯವೆಂದು ತಾನು ಭಾವಿಸಬಹುದಾದಂಥ ಸ್ಥಳದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಕುಡಿಯುವ ಮತ್ತು ಅಡುಗೆಯ ಉದ್ದೇಶಗಳಿಗಾಗಿ ಸಾರ್ವಜನಿಕರಿಗೆ ನೀರು ಸರಬರಾಜು ಮಾಡಲು, (1)ನೇ ಉಪ-ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಿದ ಮಾಲೀಕನು ಗ್ರಾಮ ಪಂಚಾಯತಿಯ ಸಮ್ಮತಿಯಿಂದ ಉಳಿಸಿಕೊಳ್ಳಬಹುದಾದ ಯಾವುವೇ ಹಕ್ಕುಗಳಿಗೆ ಒಳಪಟ್ಟು (1)ನೇ ಉಪ ಪ್ರಕರಣದ (ಎ) ಅಥವಾ (ಬಿ) ಅಥವಾ (ಸಿ) ಖಂಡದ ಅಡಿಯಲ್ಲಿ ಕೈಗೊಳ್ಳಲಾದ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಕೆರೆ, ಬಾವಿ, ತೊರೆ ಅಥವಾ ಜಲ ಮಾರ್ಗವನ್ನು ಪ್ರತ್ಯೇಕವಾಗಿರಿಸಬಹುದು.

(3) ಗ್ರಾಮ ಪಂಚಾಯತಿಯು, ಯೋಗ್ಯವೆಂದು ತಾನು ಭಾವಿಸಬಹುದಾದಂಂಥ ಸ್ಥಳದಲ್ಲಿ ಪ್ರಕಟಿಸಿದ ಆದೇಶದ ಮೂಲಕ,-

(ಎ) (2)ನೇ ಉಪ-ಪ್ರಕರಣದ ಅಡಿಯಲ್ಲಿ ಕುಡಿಯುವ ಅಥವಾ ಅಡುಗೆಯ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಇರಿಸಿದ ಯಾವುದೇ ಕೆರೆ, ಬಾವಿ, ತೊರೆ ಅಥವಾ ಜಲಮಾರ್ಗದಲ್ಲಿ ಸ್ನಾನಮಾಡುವುದನ್ನು, ಬಟ್ಟೆ ಒಗೆಯುವುದನ್ನು ಮತ್ತು ಪ್ರಾಣಿಗಳನ್ನು ತೊಳೆಯುವುದನ್ನು ಅಥವಾ ನೀರನ್ನು ಕಲುಷಿತಗೊಳಿಸುವ ಸಂಭವವಿರುವ ಯಾವುದೇ ಇತರ ಕಾರ್ಯಗಳನ್ನು; ಮತ್ತು

(ಬಿ) ಸಾಂಕ್ರಾಮಿಕ ರೋಗವಿರುವ ಕಾಲದಲ್ಲಿ ಕುಡಿಯುವ ಅಥವಾ ಅಡುಗೆಯ ಉದ್ದೇಶಗಳಿಗಾಗಿ ಅಥವಾ ಬಟ್ಟೆ ಒಗೆಯುವುದಕ್ಕಾಗಿ ನೀರು ಸರಬರಾಜಿನ ಯಾವುದೇ ಮೂಲದ ಉಪಯೋಗವನ್ನು,

-ನಿಷೇಧಿಸಬಹುದು.

**78. ನೀರು ಸರಬರಾಜಿನ ವ್ಯವಸ್ಥೆಗಳ ಬಗ್ಗೆ ಉಪ-ವಿಧಿಗಳನ್ನು ರಚಿಸಲು ಗ್ರಾಮ ಪಂಚಾಯತಿಯ ಅಧಿಕಾರ.**- ಈ ಬಗ್ಗೆ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ಗ್ರಾಮ ಪಂಚಾಯತಿಯು, ಗ್ರಾಮ ಪಂಚಾಯತಿಯ ಪರಿಮಿತಿಗಳೊಳಗೆ ಆಗಲಿ ಅಥವಾ ಅದರ ಹೊರಗೆ ಆಗಲಿ ನೀರು ಸರಬರಾಜಿನ ಮೂಲಗಳು ಮತ್ತು ಸಾಧನಗಳು ಮತ್ತು ನೀರಿನ ವಿತರಣೆ ಸಾಧನ ಸಾಮಗ್ರಿಗಳನ್ನು ಸಂರಕ್ಷಿಸುವುದಕ್ಕಾಗಿ ಮತ್ತು ಅವುಗಳಿಗೆ ಹಾನಿಯುಂಟಾಗುವುದನ್ನು ತಡೆಯಲು ಮತ್ತು ನೀರಿನ ಸರಬರಾಜು ಮತ್ತು ಉಪಯೋಗ ಮತ್ತು ನೀರು ಒದಗಿಸುವ ಅಥವಾ ನಿಲ್ಲಿಸುವುದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ನಿಯಂತ್ರಿಸುವುದಕ್ಕಾಗಿ ಮತ್ತು ನೀರು ಪೋಲಾಗುವುದನ್ನು ತಡೆಗಟ್ಟುವುದಕ್ಕಾಗಿ ಮತ್ತು ಗ್ರಾಮ ಪಂಚಾಯತಿಯ ಸ್ವತ್ತಾಗಿರಲಿ ಅಥವಾ ಆಗಿಲ್ಲದಿರಲಿ, ಗ್ರಾಮ ಪಂಚಾಯತಿಯ ನೀರು ಪೂರೈಕೆ

ಕಾಮಗಾರಿಗಳು ಮತ್ತು ಅದಕ್ಕೆ ಸಂಬಂಧಿಸಿದ ಕೊಳವೆಗಳು ಮತ್ತು ಜೋಡಣೆಗಳ ರಚನೆ, ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ ಉಪ ವಿಧಿಗಳನ್ನು ರಚಿಸಬಹುದು.

[1][**79. ಜಂಟಿ ಸಮಿತಿಗಳ ನೇಮಕ.**- (1) ಒಂದು ತಾಲ್ಲೂಕಿನೊಳಗಿನ ಅಥವಾ ಒಂದು ಜಿಲ್ಲೆಯಲ್ಲಿಯ ಎರಡು ಅಥವಾ ಹೆಚ್ಚು ತಾಲ್ಲೂಕುಗಳೊಳಗಿನ ಎರಡು ಅಥವಾ ಹೆಚ್ಚು ಗ್ರಾಮ ಪಂಚಾಯಿತಿಗಳು ಅಥವಾ ಒಂದು ಗ್ರಾಮ ಪಂಚಾಯತಿ ಮತ್ತು ಒಂದು ಅಥವಾ ಹೆಚ್ಚು ಇತರ ಸ್ಥಳೀಯ ಪ್ರಾಧಿಕಾರಗಳು ಅಥವಾ ಶಾಸನಬದ್ಧ ನಿಕಾಯಗಳು, ಆವೆಲ್ಲವುಗಳಿಗೆ ಸಾಮಾನ್ಯವಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಅಥವಾ ಅವುಗಳು ಜಂಟಿಯಾಗಿ ಹಿತಾಸಕ್ತಿಯನ್ನು ಹೊಂದಿರುವ ಅಥವಾ ಅವುಗಳು ಜಂಟಿಯಾಗಿ ಹೊಣೆಯಾಗಿರುವ ಯಾವುದೇ ಉದ್ದೇಶಕ್ಕಾಗಿ ಅವುಗಳಲ್ಲಿ ಪ್ರತಿಯೊಂದು ಅಂಗೀಕರಿಸಿದ ಅದೇ ರೀತಿಯ ನಿರ್ಣಯದ ಮೂಲಕ ಅಂಥ ಉದ್ದೇಶಕ್ಕಾಗಿ ಒಂದು ಜಂಟಿ ಸಮಿತಿಯನ್ನು ನೇಮಕಮಾಡಬಹುದು.

1. 79ನೇ ಪ್ರಕರಣ, ಉಪಪ್ರಕರಣ (1) ರಿಂದ (6), 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ರಚಿಸಲಾದ ಸಮಿತಿಯು ನಿಯಮಿಸಬಹುದಾದ ಅಂತಹ ವಿಧಾನದಲ್ಲಿ ಸಂಬಂಧಪಟ್ಟ ಪಂಚಾಯಿತಿ ಪ್ರದೇಶದ ನಿವಾಸಿಗಳನ್ನು ಕೋಆಪ್ಟ್ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು.

(3) ಜಂಟಿ ಸಮಿತಿಯು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳ ಅಥವಾ ಶಾಸನಬದ್ಧ ನಿಕಾಯಗಳ ಸದಸ್ಯರಾಗಿರದ, ಆದರೆ ಅಂತಹ ಸಮಿತಿಗಳಲ್ಲಿ ಸೇವೆ ಸಲ್ಲಿಸುವುದಕ್ಕಾಗಿ ವಿಶೇಷ ಅರ್ಹತೆ ಅಥವಾ ವಿಶೇಷ ಹಿತಾಸಕ್ತಿಯನ್ನು ಪಡೆದಿರುವರೆಂದು ಅದು ಅಭಿಪ್ರಾಯಪಡುವ ಅಂತಹ ವ್ಯಕ್ತಿಗಳನ್ನು ಸೇರಿಸಿಕೊಳ್ಳಬಹುದು:

ಪರಂತು, ಅಂತಹ ವ್ಯಕ್ತಿಗಳ ಸಂಖ್ಯೆಯು ಜಂಟಿ ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ.

(4) ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು,-

(ಎ) ಜಂಟಿ ಸಮಿತಿಯ ಕಾರ್ಯವಿಧಾನ;

(ಬಿ) ಸಮಿತಿಯ ಸದಸ್ಯರ ಒಟ್ಟು ಸಂಖ್ಯೆ;

(ಸಿ) (2) ಮತ್ತು (3)ನೇ ಉಪಪ್ರಕರಣಗಳ ಅಡಿಯಲ್ಲಿ ನೇಮಕ ಮಾಡಬೇಕಾದ ಅಥವಾ ಚುನಾಯಿಸಬೇಕಾದ ಸದಸ್ಯರ ಸಂಖ್ಯೆ;

(ಡಿ) (2) ಮತ್ತು (3)ನೇ ಉಪ ಪ್ರಕರಣಗಳ ಅಡಿಯಲ್ಲಿ ಚುನಾವಣೆ ಅಥವಾ ನೇಮಕದ ವಿಧಾನ;

(ಇ) ಪದಾವಧಿ;

(ಎಫ್) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳು ಅಥವಾ ಶಾಸನಬದ್ಧ ನಿಕಾಯಗಳು ಚಲಾಯಿಸಬಹುದಾದಂಥ ಅಧಿಕಾರಗಳನ್ನು ಮೀರತಕ್ಕದ್ದಲ್ಲದ ಸಮಿತಿಯ ಅಧಿಕಾರಗಳು;

(ಜಿ) ಜಂಟಿ ಸಮಿತಿಗೆ ನಿಧಿಗಳ ಏರ್ಪಾಡುಗಳು ಮತ್ತು ಅದರ ನಿರ್ವಹಣೆ;

(ಹೆಚ್) ಜಂಟಿ ಸಮಿತಿಯ ಅಧ್ಯಕ್ಷರ ಆಯ್ಕೆಯ ವಿಧಾನ.

(5) ಜಂಟಿ ಸಮಿತಿಯನ್ನು ಯಾವ ಉದ್ದೇಶಕ್ಕಾಗಿ ರಚಿಸಲಾಗಿತ್ತೋ ಆ ಉದ್ದೇಶವು ಈಡೇರಿದ ತರುವಾಯ ಅದನ್ನು ವಿಸರ್ಜಿಸಬಹುದು.

(6) ಸರ್ಕಾರವು, ಸಮಿತಿಯನ್ನು ವಿಸರ್ಜಿಸಿದಾಗ ಅದರ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ವಿತರಣೆಯ ಸಂಬಂಧದಲ್ಲಿ ತಾನು ಅವಶ್ಯಕವೆಂದು ಭಾವಿಸುವಂತೆ ಅಂಥ ನಿರ್ದೇಶನವನ್ನು ನೀಡಬಹುದು.][1]

**80. ಪ್ರವೇಶಾಧಿಕಾರ.**- ಗ್ರಾಮ ಪಂಚಾಯತಿಯ ಯಾವನೇ ಸದಸ್ಯನು, ಅಧಿಕಾರಿಯು ಅಥವಾ ನೌಕರನು ಈ ಅಧಿನಿಯಮದ ಯಾವುದೇ ಉದ್ದೇಶಕ್ಕಾಗಿ ಯಾವುದೇ ಪರಿಶೀಲನೆ ಮಾಡಲು ಅಥವಾ ಯಾವುವೇ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ, ಸಹಾಯಕರು ಅಥವಾ ಕೆಲಸಗಾರರೊಂದಿಗೆ ಅಥವಾ ಅವರಿಲ್ಲದೆಯೇ ಯಾವುದೇ ಕಟ್ಟಡ ಅಥವಾ ಭೂಮಿಯೊಳಗೆ ಅಥವಾ ಅದರ ಮೇಲೆ ಪ್ರವೇಶಿಸಬಹುದು:

ಪರಂತು,-

(ಎ) ಅಂಥ ಯಾವುದೇ ಪ್ರವೇಶವನ್ನು ಸೂರ್ಯಾಸ್ತ ಮತ್ತು ಸೂರ್ಯೋದಯದ ನಡುವೆ ಮಾಡತಕ್ಕದ್ದಲ್ಲ;

(ಬಿ) ಅದರ ಅನುಭವದಾರನ ಸಮ್ಮತಿಯಿಂದ ಪ್ರವೇಶವನ್ನು ಮಾಡಿದ ಹೊರತು ಯಾವುದೇ ವಾಸದ ಮನೆಯನ್ನು ಹಾಗೆ ಪ್ರವೇಶಿಸುವ ಉದ್ದೇಶದ ಬಗ್ಗೆ ಅಧ್ಯಕ್ಷನು ಅಥವಾ ಈ ಬಗ್ಗೆ ಅವನು ಅಧಿಕಾರ ನೀಡಿರುವಂಥ ವ್ಯಕ್ತಿಯು ರುಜು ಮಾಡಿದ ಯುಕ್ತ ನೋಟೀಸನ್ನು ಮೊದಲೇ ಕೊಡದೆ, ಪ್ರವೇಶಿಸತಕ್ಕದ್ದಲ್ಲ; ಮತ್ತು

(ಸಿ) ಅಂಥ ಪ್ರವೇಶವನ್ನು ಮಾಡುವಾಗ ಪ್ರವೇಶಿಸಲಾದ ಆವರಣದ ಅನುಭವದಾರರ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳಿಗೆ ತಕ್ಕ ಗಮನ ಕೊಡತಕ್ಕದ್ದು.

**81. ಹೊಲಸು ಕಟ್ಟಡಗಳು ಮುಂತಾದುವು.**- ಬಾಡಿಗೆಗೆ ಕೊಡಬಹುದಾದಂಥ ಅಥವಾ ಅಲ್ಲದ ಯಾವುದೇ ಕಟ್ಟಡದ ಅಥವಾ ಭೂಮಿಯ ಮಾಲೀಕ ಅಥವಾ ಅನುಭವದಾರನಾಗಿರುವ ಯಾರೇ ಆಗಲಿ ಅದನ್ನು ಹೊಲಸು ಅಥವಾ ಅನಾರೋಗ್ಯಕರವಾದ ಸ್ಥಿತಿಯಲ್ಲಿಟ್ಟಿದ್ದರೆ ಅಥವಾ ಅದು, ಗ್ರಾಮ ಪಂಚಾಯತಿಯ ಅಭಿಪ್ರಾಯದಲ್ಲಿ, ನೆರೆಹೊರೆಯಲ್ಲಿ ವಾಸಿಸುವ ವ್ಯಕ್ತಿಗಳಿಗೆ ಉಪದ್ರವಕಾರಿಯೆಂದು ತೋರಿದರೆ ಅಥವಾ ಅದರಲ್ಲಿ ಪಾಪಾಸುಕಳ್ಳಿ, ಕಳೆಗಳು ಅಥವಾ ಹಾನಿಕರ ಸಸ್ಯಗಳು ದಟ್ಟವಾಗಿ ಬೆಳೆದಿದ್ದರೆ ಮತ್ತು ಈ ಸಂಬಂಧವಾಗಿ ಗ್ರಾಮ ಪಂಚಾಯತಿಯು ಅಧಿಕಾರ ನೀಡಿರುವ ಯಾವನೇ ವ್ಯಕ್ತಿಯಿಂದ ಲಿಖಿತ ನೋಟೀಸನ್ನು ಸ್ವೀಕರಿಸಿದ ತರುವಾಯ, ಅವನು ಸೂಕ್ತ ಕಾಲದಲ್ಲಿ ಅದನ್ನು ಸ್ವಚ್ಛಗೊಳಿಸದಿದ್ದರೆ, ತೆಗೆದು ಹಾಕದಿದ್ದರೆ ಅಥವಾ ಅನ್ಯಥಾ ಅದನ್ನು ಸರಿಯಾದ ಸ್ಥಿತಿಯಲ್ಲಿಡದಿದ್ದರೆ ಅಥವಾ ಅಂಥ ನೋಟೀಸಿನಲ್ಲಿನ ಅಗತ್ಯತೆಯನ್ನು ಪಾಲಿಸದಿದ್ದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಆ ಅಪರಾಧವು ಮುಂದುವರಿಯುತ್ತಿದ್ದರೆ, ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯ, ಸದರಿ ಅಪರಾಧವನ್ನು ಮುಂದುವರಿಸುತ್ತಿರುವಂಥ ಕಾಲದಲ್ಲಿ ಪ್ರತಿದಿನಕ್ಕೆ ಐದು ರೂಪಾಯಿವರೆಗೆ ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**82. ನೀರು ಸರಬರಾಜಿನ ಮೂಲಗಳ ಬಗ್ಗೆ ಅಧಿಕಾರಗಳು ಮತ್ತು ಕರ್ತವ್ಯಗಳು.**- ಕಾರ್ಯದರ್ಶಿಯು ಅಥವಾ ಈ ಬಗ್ಗೆ ಗ್ರಾಮ ಪಂಚಾಯತಿಯು ಅಧಿಕಾರ ನೀಡಿರುವ ಯಾವನೇ ಅಧಿಕಾರಿಯು, ಯಾವುದೇ ಕಾಲದಲ್ಲಿ ಬರಹದಲ್ಲಿನ ನೋಟೀಸಿನ ಮೂಲಕ, ಅದು ಖಾಸಗಿ ಸ್ವತ್ತಾಗಿರಲಿ ಅಥವಾ ಇಲ್ಲದಿರಲಿ, ಯಾವುದೇ ಬಾವಿ, ತೊರೆ, ಕಾಲುವೆ, ಕೆರೆ ಅಥವಾ ನೀರು ಸರಬರಾಜಿನ ಇತರ ಮೂಲದ ಮಾಲೀಕನನ್ನು ಅಥವಾ ಅದರ ಮೇಲೆ ನಿಯಂತ್ರಣವನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು,-

(ಎ) ನೀರನ್ನು ಕುಡಿಯುವುದಕ್ಕಾಗಿ ಉಪಯೋಗಿಸುತ್ತಿದ್ದರೆ,-

(i) ತೊರೆಯನ್ನು ಹೊರತುಪಡಿಸಿ ನೀರು ಸರಬರಾಜಿನ ಯಾವುದೇ ಅಂಥ ಮೂಲವನ್ನು ಸುಸ್ಥಿತಿಯಲ್ಲಿಡಲು ಮತ್ತು ನಿರ್ವಹಿಸಲು; ಅಥವಾ

(ii) ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಯುಕ್ತ ಕಾಲದೊಳಗೆ ಯಾವುದೇ ಅಂಥ ನೀರು ಸರಬರಾಜು ಮೂಲವನ್ನು ಹೂಳು, ಕಸ ಮತ್ತು ಕೊಳೆಯುತ್ತಿರುವ ಸಸ್ಯಗಳನ್ನು ತೆಗೆದು ಸ್ವಚ್ಛ ಮಾಡಲು; ಅಥವಾ

(iii) ಗ್ರಾಮ ಪಂಚಾಯತಿಯು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಯಾವುದೇ ಅಂಥ ನೀರು ಸರಬರಾಜು ಮೂಲವನ್ನು ಮೇಲ್ಮೈಚರಂಡಿ ನೀರಿನಿಂದ ಮಲಿನವಾಗದಂತೆ ಸಂರಕ್ಷಿಸಲು; ಅಥವಾ

(iv) ನೈಸರ್ಗಿಕವಾಗಿ ಹರಿಯುವ ನೀರು ಝರಿಯಲ್ಲಿನ ಯಾವುದೇ ಅಂಥ ನೀರುಸರಬರಾಜು ಮೂಲಗಳು ಕುಡಿಯುವುದಕ್ಕೆ ಯೋಗ್ಯವಾಗಿಲ್ಲವೆಂದು ಗ್ರಾಮ ಪಂಚಾಯತಿಯು ಅಭಿಪ್ರಾಯಪಟ್ಟರೆ, ಕುಡಿಯುವ ಉದ್ದೇಶಗಳಿಗಾಗಿ ಉಪಯೋಗಿಸದಿರಲು ಮತ್ತು ಇತರರು ಉಪಯೋಗಿಸಲು ಅನುಮತಿ ಕೊಡದೆ ಇರಲು; ಅಥವಾ

(v) (iv)ನೇ ಉಪ-ಖಂಡದ ಅಡಿಯಲ್ಲಿನ ಯಾವುದೇ ಅಂಥ ನೋಟೀಸು ನೀಡಲಾಗಿದ್ದರೂ, ಅಂಥ ಉಪಯೋಗವು ಮುಂದುವರಿದರೆ ಮತ್ತು ಗ್ರಾಮ ಪಂಚಾಯತಿಯು ಅದನ್ನು ಇತರ ರೀತಿಯಲ್ಲಿ ತಡೆಗಟ್ಟಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟರೆ ಅದನ್ನು ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿಯಾಗಲಿ ಮುಚ್ಚಲು ಅಥವಾ ಭರ್ತಿಮಾಡಲು ಅಥವಾ ಗ್ರಾಮ ಪಂಚಾಯತಿಯು, ಅಂಥ ಉಪಯೋಗವನ್ನು ತಡೆಗಟ್ಟಲು ಸಾಕಷ್ಟೆಂದು ಭಾವಿಸುವಂಥ ರೀತಿಯಲ್ಲಿ ಅಂಥ ನೀರು ಸರಬರಾಜಿನ ಮೂಲಕ್ಕೆ ಆವರಣ ಹಾಕಲು ಅಥವಾ ಬೇಲಿ ಹಾಕಲು; ಅಥವಾ

(vi) ಆರೋಗ್ಯಕ್ಕೆ ಹಾನಿಕರವೆಂದು ಅಥವಾ ನೆರೆಹೊರೆಯವರಿಗೆ ಅಸಹ್ಯಕರವೆಂದು ಗ್ರಾಮಪಂಚಾಯತಿಯು ಭಾವಿಸುವಂಥ ಯಾವುದೇ ನಿಂತ ನೀರನ್ನು, ಯಾವುದೇ ಅಂಥ ನೀರು ಸರಬರಾಜು ಮೂಲದಿಂದ ಅಥವಾ ಅದಕ್ಕೆ ಲಗತ್ತಾದ ಅಥವಾ ಹೊಂದಿಕೊಂಡಿರುವ ಯಾವುದೇ ಭೂಮಿಯಿಂದ ಅಥವಾ ಆ ಆವರಣದಿಂದ ಅಥವಾ ಜಲಾಗಾರ ಅಥವಾ ಜಲಾಶಯದಿಂದ ಹರಿದು ಹೋಗುವಂತೆ ಮಾಡಲು ಅಥವಾ ಇತರ ರೀತಿಯಲ್ಲಿ ತೆಗೆದು ಹಾಕಲು,

-ಅಗತ್ಯಪಡಿಸಬಹುದು.

(ಬಿ) ನೈಸರ್ಗಿಕವಾಗಿ ಹರಿಯುತ್ತಿರುವ ನೀರು ಝರಿಯ ಹೊರತಾಗಿ, ಇತರ ನೀರು ಸರಬರಾಜು ಮೂಲದ ನೀರನ್ನು ಕುಡಿಯಲು ಉಪಯೋಗಿಸಲಿ ಅಥವಾ ಉಪಯೋಗಿಸದಿರಲಿ, ಅದನ್ನು ಸಾಕಷ್ಟು ದುರಸ್ತಿ, ರಕ್ಷಣೆ ಅಥವಾ ಅದಕ್ಕೆ ಆವರಣ ಕಟ್ಟದೇ ಇದ್ದುದರಿಂದ, ಅಂಥ ನೀರಿನ ಸರಬರಾಜಿನ ಮೂಲವು ಜನಾರೋಗ್ಯ ರಕ್ಷಣೆಗೆ ಅಪಾಯವಿರುವುದೆಂದು ಅಥವಾ ಅದನ್ನು, ಉಪಯೋಗಿಸುವ ಸಂಭವವಿರುವ ಅಥವಾ ಅದರ ಪಕ್ಕದಲ್ಲಿ ಹಾಯ್ದುಹೋಗುವ ಅಥವಾ ಅದರ ಸಮಿಪಕ್ಕೆ ಹೋಗುವ ಜನರ ಸುರಕ್ಷತೆಗೆ ಅಪಾಯವಿರುವುದೆಂದು ಗ್ರಾಮ ಪಂಚಾಯತಿಯು ಅಭಿಪ್ರಾಯಪಟ್ಟರೆ, ಗ್ರಾಮ ಪಂಚಾಯತಿಯು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ನೋಟೀಸು ತಲುಪಿದ ಇಪ್ಪತ್ನಾಲ್ಕು ಗಂಟೆಯೊಳಗೆ ದುರಸ್ತಿ ಮಾಡತಕ್ಕದ್ದು, ರಕ್ಷಿಸತಕ್ಕದ್ದು ಅಥವಾ ಅದಕ್ಕೆ ಬೇಲಿ ಹಾಕತಕ್ಕದ್ದು.

**83. ನೀಡಿದ ನಿರ್ದೇಶನಗಳನ್ನು ಪಾಲಿಸದೆ ಇರುವುದಕ್ಕಾಗಿ ಪರಿಹಾರೋಪಾಯ.**- ಹಿಂದೆ ಹೇಳಿದಂತೆ, ನಿಯಂತ್ರಣವನ್ನು ಹೊಂದಿರುವ ಮಾಲೀಕನು ಅಥವಾ ವ್ಯಕ್ತಿಯು, 82ನೇ ಪ್ರಕರಣದ ಉಪಬಂಧಗಳ ಮೂಲಕ ಅಥವಾ ಅದರ ಅಡಿಯಲ್ಲಿ ಅಗತ್ಯಪಡಿಸಿದ ಕಾಲದೊಳಗೆ ಯಾವುದೇ ಅಂಥ ಕೋರಿಕೆಯನ್ನು ಪಾಲಿಸಲು ತಪ್ಪಿದರೆ ಅಥವಾ ನಿರ್ಲಕ್ಷಿಸಿದರೆ, ಗ್ರಾಮ ಪಂಚಾಯತಿಯು ಅಂಥ ನೋಟೀಸಿನ ಮೂಲಕ ಅಗತ್ಯಪಡಿಸಿದ ಕಾಮಗಾರಿಯನ್ನು ನಿರ್ವಹಿಸಲು ಮುಂದುವರಿಯಬಹುದು ಮತ್ತು ಕಾರ್ಯದರ್ಶಿಯ ಅಭಿಪ್ರಾಯದಲ್ಲಿ ಯಾವನೇ ವ್ಯಕ್ತಿಯ ಆರೋಗ್ಯ ಅಥವಾ ಸುರಕ್ಷತೆಯನ್ನು ಸಂರಕ್ಷಿಸಲು ತಕ್ಷಣದ ಕ್ರಮವು ಅವಶ್ಯವಾದರೆ, ಅವನು ತಕ್ಷಣ ಆ ಕಾಮಗಾರಿಯನ್ನು ನಿರ್ವಹಿಸಲು ಮುಂದುವರಿಯತಕ್ಕದ್ದು ಮತ್ತು ಅದರ ಬಗ್ಗೆ ವಹಿಸಿದ ಎಲ್ಲ ವೆಚ್ಚಗಳನ್ನು ಅಂಥ ನೀರು ಸರಬರಾಜಿನ ಮೂಲದ ಮೇಲೆ ನಿಯಂತ್ರಣವನ್ನು ಹೊಂದಿರುವ ಮಾಲೀಕನು ಅಥವಾ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು ಅದನ್ನು 200ನೇ ಪ್ರಕರಣದ ಮೇರೆಗೆ ವಸೂಲಿಯಾಗಬಹುದಾದ ಯಾವುದೇ ತೆರಿಗೆಯ ಮೊಬಲಗಿನ ಹಾಗೇ ಅದೇ ರೀತಿಯಲ್ಲಿ ವಸೂಲ್ಮಾಡತಕ್ಕದ್ದು:

ಪರಂತು, ಯಾವುದರ ನೀರನ್ನು ಸಾರ್ವಜನಿಕರು ಅಥವಾ ಸಾರ್ವಜನಿಕರ ಯಾವುದೇ ವರ್ಗವು ಹಕ್ಕೆಂದು ಉಪಯೋಗಿಸುತ್ತಿರುವರೋ, ಆ ಯಾವುದೇ ಬಾವಿ ಅಥವಾ ಖಾಸಗಿ ತೊರೆ ಅಥವಾ ಯಾವುದೇ ಖಾಸಗಿ ಕಾಲುವೆ, ಕೆರೆ ಅಥವಾ ನೀರು ಸರಬರಾಜಿನ ಮೂಲದ ಸಂದರ್ಭದಲ್ಲಿ, ಅಂಥ ಮಾಲೀಕನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ವಹಿಸಿದ ವೆಚ್ಚಗಳನ್ನು ಗ್ರಾಮ ಪಂಚಾಯತಿಯು ಹಾಗೆ ನಿರ್ದೇಶಿಸಿದರೆ, ಗ್ರಾಮ ಪಂಚಾಯತಿ ನಿಧಿಯಿಂದ ಸಂದಾಯ ಮಾಡಬಹುದು.

**84. ಸಾರ್ವಜನಿಕರ ಚಿಲುಮೆಗಳು ಮುಂತಾದವುಗಳನ್ನು ಕೆಲವು ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಇರಿಸಲು ಅಧಿಕಾರ.**- ಗ್ರಾಮ ಪಂಚಾಯತಿಯು, ಸಂಬಂಧಪಟ್ಟ ಚಿಲುಮೆ, ಕೆರೆ ಅಥವಾ ಇತರ ಸ್ಥಳದಲ್ಲಿ ಮತ್ತು ಈ ಅಧಿನಿಯಮದ ಮೂಲಕ ಅಗತ್ಯಪಡಿಸಿದಂತೆ ಬೇರೆ ಸ್ಥಳದಲ್ಲಿ ಹಾಕಬೇಕಾದಂಥ ಸಾರ್ವಜನಿಕ ನೋಟೀಸಿನ ಮೂಲಕ, ಕುಡಿಯುವ ಉದ್ದೇಶಗಳಿಗಾಗಿ ಅಥವಾ ಸ್ನಾನ ಮಾಡುವುದಕ್ಕಾಗಿ ಅಥವಾ ಬಟ್ಟೆಗಳನ್ನು ಅಥವಾ

ಪ್ರಾಣಿಗಳನ್ನು ತೊಳೆಯುವುದಕ್ಕಾಗಿ ಅಥವಾ ನಿವಾಸಿಗಳ ಆರೋಗ್ಯ ಅಥವಾ ಸ್ವಚ್ಛತೆ, ಸೌಕರ್ಯ ಅಥವಾ ಅನುಕೂಲವನ್ನು ಸಂವರ್ಧಿಸಲು ಉದ್ದೇಶಿಸಿದ ಯಾವುವೇ ಇತರ ಉದ್ದೇಶಗಳಿಗಾಗಿ, ಸಾರ್ವಜನಿಕ ಚಿಲುಮೆಗಳು, ಕೆರೆಗಳು, ಬಾವಿಗಳು ಅಥವಾ ಇತರ ಸ್ಥಳಗಳನ್ನು ಮತ್ತು ಸಾರ್ವಜನಿಕ ನೀರಿನ ಮೂಲಗಳ ಭಾಗಗಳನ್ನು ಪ್ರತ್ಯೇಕವಾಗಿ ಇರಿಸಬಹುದು ಮತ್ತು ಮಾಲೀಕರ ಸಮ್ಮತಿಯೊಂದಿಗೆ ಯಾವುದೇ ಖಾಸಗಿ ಚಿಲುಮೆಗಳು, ಕೆರೆಗಳು, ಬಾವಿಗಳು ಅಥವಾ ಇತರ ಸ್ಥಳಗಳನ್ನು ಸಹ ಹಿಂದೆ ಹೇಳಿದ ಯಾವುದೇ ಉದ್ದೇಶಕ್ಕಾಗಿ ಪ್ರತ್ಯೇಕವಾಗಿರಿಸಬಹುದು.

**85. ಕೆಲವು ಮೂಲಗಳಿಂದ ನೀರಿನ ಉಪಯೋಗವನ್ನು ನಿಷೇಧಿಸಲು ಅಧಿಕಾರ.**- ಗ್ರಾಮ ಪಂಚಾಯತಿಯು, ಸಾಂಕ್ರಾಮಿಕ ರೋಗಗಳ ಕಾಲದಲ್ಲಿ ತಾಲ್ಲೂಕು ಪಂಚಾಯತಿಯ, ಜಿಲ್ಲಾ ಪಂಚಾಯತಿಯ ಅಥವಾ ಸರ್ಕಾರದ ಉದ್ಯೋಗದಲ್ಲಿರುವ ಯಾವನೇ ವೈದ್ಯಾಧಿಕಾರಿಯು ಅಂಥ ಕ್ರಮವು ಅಪೇಕ್ಷಣೀಯವೆಂದು ತಿಳಿಸಿರುವ ಪ್ರಮಾಣ ಪತ್ರ ತಲುಪಿದ ನಂತರ, ಸಾರ್ವಜನಿಕರಿಗೆ ಪ್ರವೇಶಾವಕಾಶ ಇರುವಂಥ ಯಾವುದೇ ಮೂಲದಿಂದ ನೀರಿನ ಉಪಯೋಗವನ್ನು ನೋಟೀಸಿನ ಮೂಲಕ ಕ್ಷಿಪ್ರವಾಗಿ ನಿಷೇಧಿಸಬಹುದು. ಅಂಥ ನಿಷೇಧವು ಜಾರಿಯಲ್ಲಿರತಕ್ಕಂಥ ದಿವಸಗಳ ಸಂಖ್ಯೆ ಇರುವ ಅಂಥ ನೋಟೀಸನ್ನು ನೀರು ಸರಬರಾಜಿನ ಮೂಲದ ಹತ್ತಿರದ ಸ್ಥಳದಲ್ಲಿ ಅದರ ಪ್ರತಿಯನ್ನು ಅಂಟಿಸುವ ಮೂಲಕ ಜಾರಿ ಮಾಡತಕ್ಕದ್ದು. ಗ್ರಾಮ ಪಂಚಾಯಿತಿಯು ಕಾಲಕಾಲಕ್ಕೆ ನಿಷೇಧದ ಅವಧಿಯನ್ನು ಪುನಃ ಪ್ರಮಾಣಪತ್ರವನ್ನು ಪಡೆಯದೆ ವಿಸ್ತರಿಸಬಹುದು ಅಥವಾ ಮಾರ್ಪಾಡು ಮಾಡಬಹುದು.

**86. ಕೆಲವು ಉದ್ದೇಶಗಳಿಗಾಗಿ ನೀರನ್ನು ಉಪಯೋಗಿಸುವುದಕ್ಕೆ ದಂಡನೆ.**– ಯಾರೇ ಆಗಲಿ,–

(ಎ) ಗ್ರಾಮ ಪಂಚಾಯತಿಯು ಅಥವಾ ಖಾಸಗಿ ಸ್ವತ್ತಾಗಿದ್ದರೆ ಅದರ ಮಾಲೀಕನು ಕುಡಿಯುವ ನೀರಿನ ಉದ್ದೇಶಕ್ಕಾಗಿ ಪ್ರತ್ಯೇಕವಾಗಿರಿಸಿದ ಯಾವುದೇ ಸ್ಥಳದಲ್ಲಿ ಸ್ನಾನವನ್ನು ಮಾಡಿದರೆ ಅಥವಾ ಆ ನೀರನ್ನು ಮಲಿನಗೊಳಿಸಿದರೆ; ಅಥವಾ

(ಬಿ) ಕುಡಿಯುವ ಉದ್ದೇಶಗಳಿಗಾಗಿ ಹಿಂದೆ ಹೇಳಿದಂತೆ ಪ್ರತ್ಯೇಕವಾಗಿರಿಸಲಾದ ಯಾವುದೇ ಸ್ಥಳದ ಒಣಪಾತ್ರದಲ್ಲಿ ಅಸಹ್ಯಕರ ಅಥವಾ ಹಾನಿಕಾರಕ ವಸ್ತುವನ್ನು ಇಟ್ಟರೆ; ಅಥವಾ

(ಸಿ) ಕುಡಿಯುವ ನೀರಿನ ಅಥವಾ ಸ್ನಾನಕ್ಕಾಗಿ ಹಿಂದೆ ಹೇಳಿದಂತೆ ಪ್ರತ್ಯೇಕವಾಗಿರಿಸಲಾದ ಯಾವುದೇ ಸ್ಥಳದಲ್ಲಿ ಬಟ್ಟೆ ಒಗೆದರೆ; ಅಥವಾ

(ಡಿ) ಕುಡಿಯುವ ನೀರಿನ ಉದ್ದೇಶಗಳಿಗಾಗಿ ಅಥವಾ ಸ್ನಾನಕ್ಕಾಗಿ ಅಥವಾ ಬಟ್ಟೆ ಒಗೆಯುವುದಕ್ಕಾಗಿ ಹಿಂದೆ ಹೇಳಿದಂತೆ ಪ್ರತ್ಯೇಕವಾಗಿರಿಸಲಾದ ಯಾವುದೇ ಸ್ಥಳದಲ್ಲಿ ಯಾವುದೇ ಪ್ರಾಣಿ ಅಥವಾ ಯಾವುದೇ ಅಡುಗೆ ಪಾತ್ರೆಗಳು ಅಥವಾ ಮರ, ಚರ್ಮಗಳು ಅಥವಾ ಇತರ ಯಾವುದೇ ನಾರುವ ಅಥವಾ ಅಸಹ್ಯಕರವಸ್ತುಗಳನ್ನು ತೊಳೆದರೆ ಅಥವಾ ಅಸಹ್ಯಕರ ಅಥವಾ ಹಾನಿಕಾರಕ ವಸ್ತುವನ್ನು ಇಟ್ಟರೆ; ಅಥವಾ

(ಇ) ಕುಡಿಯುವ ನೀರಿನ ಉದ್ದೇಶಗಳಿಗಾಗಿ ಅಥವಾ ಸ್ನಾನಕ್ಕಾಗಿ ಅಥವಾ ಬಟ್ಟೆ ಒಗೆಯುವುದಕ್ಕಾಗಿ ಹಿಂದೆ ಹೇಳಿದಂತೆ ಪ್ರತ್ಯೇಕವಾಗಿರಿಸಲಾದ ಯಾವುದೇ ಸ್ಥಳದೊಳಕ್ಕೆ ತನಗೆ ಸೇರಿದ ರೊಚ್ಚು ಗುಂಡಿಯಿಂದ, ಚರಂಡಿಯಿಂದ, ಹೊಲಸು ಕಾಲುವೆಯಿಂದ, ಎಂಜಿನ್‌ನಿಂದ ಅಥವಾ ಬಾಯ್ಲರ್‌ನಿಂದ ನೀರನ್ನು ಹರಿಯ ಬಿಟ್ಟರೆ ಅಥವಾ ತನ್ನ ಅನುಭವದಲ್ಲಿರುವ ಯಾವುದೇ ಕಟ್ಟಡದಿಂದ ಅಥವಾ ಭೂಮಿಯಿಂದ ಯಾವುದೇ ಇತರ ಅಸಹ್ಯಕರ ವಸ್ತುವನ್ನು ಹರಿಯಬಿಟ್ಟರೆ; ಅಥವಾ

(ಎಫ್) 85ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಮೂಲದಿಂದ ನೀರನ್ನು ಉಪಯೋಗಿಸಿದರೆ,

-ಅಪರಾಧ ನಿರ್ಣಯವಾದ ಮೇಲೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಆ ಅಪರಾಧವು ಮುಂದುವರಿಯುತ್ತಿದ್ದರೆ, ಮೊದಲನೇ ಅಪರಾಧ ನಿರ್ಣಯದ ದಿನಾಂಕದ ತರುವಾಯ ಸದರಿ ಅಪರಾಧವನ್ನು ಮುಂದುವರಿಸಿದಂಥ ಪ್ರತಿಯೊಂದು ದಿವಸಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**87. ಹೊಲಸು ನೀರಿನಿಂದಾಗುವ ಉಪದ್ರವವನ್ನು ತಡೆಯುವುದು.**- ಯಾವುದೇ ಕುಂಟೆ, ಗುಂಡಿ, ಕೆರೆ, ಕೊಳ, ಬಾವಿ, ರಂಧ್ರ ಅಥವಾ ನಿರುಪಯುಕ್ತ ಅಥವಾ ನಿಂತ ನೀರು ಅಥವಾ ಹೊಲಸು ನೀರಿನ ಯಾವುದೇ ಕಾಲುವೆ ಅಥವಾ ಜಲಪಾತ್ರ ಅಥವಾ ಇತರ ಅಸಹ್ಯಕರ ಅಥವಾ ಹಾನಿಕಾರಕ ವಸ್ತುವು ಅದು ಯಾವುದೇ ಖಾಸಗಿ ಆವರಣದೊಳಗೆ ಇರಲಿ ಅಥವಾ ಬೇರೆಲ್ಲೇ ಇರಲಿ, ಅದು ನಿವಾಸಿಗಳ ಆರೋಗ್ಯಕ್ಕೆ ಅಪಾಯಕಾರಿಯಾಗುವ ಅಥವಾ ನೆರೆಹೊರೆಯವರಿಗೆ ಅಸಹ್ಯಕರವಾಗುವ ಸಂಭವವಿದೆಯೆಂದು ಕಾರ್ಯದರ್ಶಿಗೆ ಕಂಡುಬಂದರೆ, ಕಾರ್ಯದರ್ಶಿಯು ಅದರ ಮಾಲೀಕನಿಗೆ ಲಿಖಿತ ನೋಟೀಸಿನ ಮೂಲಕ ಅದನ್ನು ಸ್ವಚ್ಛಗೊಳಿಸಲು, ಮುಚ್ಚಿಹಾಕಲು ಹರಿದು ಹೋಗುವಂತೆ ಮಾಡಲು ಅಥವಾ ಅದನ್ನು ತೆಗೆದುಹಾಕಲು ಅಥವಾ ಆ ಉಪದ್ರವವನ್ನು ತಡೆಯಲು ಅಥವಾ ತೆಗೆದು ಹಾಕಲು ಅವನ ಅಭಿಪ್ರಾಯದಲ್ಲಿ ಅವಶ್ಯವಿರತಕ್ಕಂಥ ಕ್ರಮಗಳನ್ನು ಕೈಗೊಳ್ಳಲು ಅವನನ್ನು ಅಗತ್ಯಪಡಿಸಬಹುದು.

**88. ಸ್ಮಶಾನಗಳನ್ನು ಮುಚ್ಚುವುದು.**- (1) ಗ್ರಾಮ ಪಂಚಾಯತಿಯು, ತನ್ನ ಪಂಚಾಯತಿಯ ಪ್ರದೇಶದೊಳಗೆ ಸ್ಮಶಾನ ಸ್ಥಳವಾಗಿ ಉಪಯೋಗಿಸುತ್ತಿರುವಂಥ ಯಾವುದೇ ಸ್ಥಳವು, ಆರೋಗ್ಯಕ್ಕೆ ಹಾನಿಕಾರಕವಾಗಿರುವಂಥ ಅಥವಾ ಹಾನಿಕಾರಕವಾಗುವ ಸಂಭವವಿರುವಂಥ ಸ್ಥಿತಿಯಲ್ಲಿದೆ ಎಂದು ಅಭಿಪ್ರಾಯಪಟ್ಟರೆ ಅದು ಆ ಸಂಬಂಧವಾದ ಕಾರಣಗಳ ಸಹಿತ ತನ್ನ ಅಭಿಪ್ರಾಯವನ್ನು ಅಸಿಸ್ಟೆಂಟ್ ಕಮಿಷನರಿಗೆ ಕಳುಹಿಸಬಹುದು, ಆ ತರುವಾಯ, ಅಸಿಸ್ಟೆಂಟ್ ಕಮಿಷನರ್‌ರವರು ನಡೆಸುವುದು ಯೋಗ್ಯವೆಂದು ತಾನು ಭಾವಿಸತಕ್ಕ ಮತ್ತಷ್ಟು ವಿಚಾರಣೆಯನ್ನು, ಯಾವುದಾದರೂ ಇದ್ದರೆ, ನಡೆಸಿದ ತರುವಾಯ, ಅಧಿಸೂಚನೆಯ ಮೂಲಕ ಅಧಿಸೂಚನೆಯಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಂಥ ಸ್ಥಳವನ್ನು ಹಾಗೆ ಉಪಯೋಗಿಸುವುದು ನಿಂತು ಹೋಗತಕ್ಕದ್ದೆಂದು ನಿರ್ದೇಶಿಸಬಹುದು.

(2) ಸದರಿ ಅಧಿಸೂಚನೆಯ ಒಂದು ಪ್ರತಿಯನ್ನು ಸ್ಥಳೀಯ ವೃತ್ತ ಪತ್ರಿಕೆಗಳು ಯಾವುವಾದರೂ ಇದ್ದರೆ, ಅವುಗಳಲ್ಲಿ ಪ್ರಕಟಿಸತಕ್ಕದು ಮತ್ತು ಅದನ್ನು ಗ್ರಾಮ ಪಂಚಾಯತಿಯ ಕಛೇರಿಯಲ್ಲಿ ಮತ್ತು ಅದು ಸಂಬಂಧಪಡುವಂಥ ಸ್ಥಳದ ಮೇಲೆ ಅಥವಾ ಅದರ ಹತ್ತಿರ ಎದ್ದು ಕಾಣುವ ಒಂದು ಅಥವಾ ಹೆಚ್ಚು ಸ್ಥಳಗಳಲ್ಲಿ ಅಂಟಿಸತಕ್ಕದ್ದು.

(3) ಯಾವನೇ ವ್ಯಕ್ತಿಯು, ಸದರಿ ಅಧಿಸೂಚನೆಯಲ್ಲಿ ಅದನ್ನು ಮುಚ್ಚಲು ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ, ಅಂಥ ಯಾವುದೇ ಸ್ಥಳದಲ್ಲಿ ಯಾವುದೇ ಶವವನ್ನು ಹೂಳಿದರೆ ಅಥವಾ ಬೇರೆ ರೀತಿಯಲ್ಲಿ ವಿಲೆ ಮಾಡಿದರೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಅಡಿಯಲ್ಲಿ ಅಥವಾ ಸ್ಥಾಪಿತ ಆಚರಣೆಯ ಮೂಲಕ ಸತ್ತವರನ್ನು ಹೂಳುವುದಕ್ಕಾಗಿ ಪ್ರತ್ಯೇಕವಾಗಿಟ್ಟಿಲ್ಲದ, ಸ್ವಾಧೀನಾನುಭವಕ್ಕೆ ತೆಗೆದುಕೊಂಡಿರದ ಯಾವುದೇ ಸರ್ಕಾರಿ ಭೂಮಿಯಲ್ಲಿ ಯಾವುದೇ ಶವವನ್ನು ಹೂಳಿದರೆ, ಅಪರಾಧ ನಿರ್ಣಯವಾದ ಮೇಲೆ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**89. ಸಾಂಕ್ರಾಮಿಕ ರೋಗಗಳಿರುವ ಕಟ್ಟಡ ಮುಂತಾದವುಗಳೊಳಗೆ ಪ್ರವೇಶಿಸುವ ಅಧಿಕಾರ.**- ಗ್ರಾಮ ಪಂಚಾಯತಿಯ ಕಾರ್ಯದರ್ಶಿಯು ಅಥವಾ ಆ ಬಗ್ಗೆ ಗ್ರಾಮ ಪಂಚಾಯತಿಯಿಂದ ಅಧಿಕಾರ ಪಡೆದ ಯಾವನೇ ವ್ಯಕ್ತಿಯು, ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಯಾವುದೇ ಕಾಲದಲ್ಲಿ, ಯಾವುದೇ ಸಾಂಕ್ರಾಮಿಕ ರೋಗವು ಹರಡಿದೆಯೆಂದು ವರದಿಯಾಗಿರುವ ಅಥವಾ ಇದೆಯೆಂದು ಶಂಕಿಸಲಾದಂಥ ಯಾವುದೇ ಕಟ್ಟಡ ಅಥವಾ ಆವರಣವನ್ನು ಅಂಥ ಕಟ್ಟಡ ಅಥವಾ ಆವರಣವನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಪ್ರವೇಶಿಸಬಹುದು, ಯಾವುದೇ ಅಂಥ ಪರಿಶೀಲನೆಯನ್ನು ಸೂರ್ಯೋದಯ ಮತ್ತು ಸೂರ್ಯಾಸ್ತಗಳ ನಡುವೆ ಅಲ್ಲದೆ ಬೇರೆ ಕಾಲದಲ್ಲಿ ಮಾಡತಕ್ಕದ್ದಲ್ಲ.

**90. ಕಟ್ಟಡ ಮುಂತಾದವುಗಳ ಸೋಂಕು ನಿವಾರಣೆ.**- ಕಾರ್ಯದರ್ಶಿಯು, ಸೋಂಕು ಉಳಿಯುವ ಸಂಭವವಿರುವ ಕಟ್ಟಡದ ಅಥವಾ ಆವರಣದ ಅಥವಾ ಅದರ ಯಾವುದೇ ಭಾಗದ ಅಥವಾ ಅದರಲ್ಲಿರುವ ಯಾವುದೇ ವಸ್ತುವಿನಿಂದ ಸೋಂಕು ಹರಡುವ ಸಾಧ್ಯತೆ ಇದೆಯೆಂದು ಮತ್ತು ಅದನ್ನು ಸ್ವಚ್ಛಗೊಳಿಸುವುದರಿಂದ ಅಥವಾ ಸೋಂಕು ನಿವಾರಣೆ ಮಾಡುವುದರಿಂದ ಯಾವುದೇ ಸೋಂಕು ರೋಗ ಹರಡುವನ್ನು ನಿವಾರಿಸಬಹುದೆಂದು ಅಥವಾ ತಡೆಯಬಹುದೆಂದು ಅಭಿಪ್ರಾಯಪಟ್ಟರೆ, ಅವನು, ನೋಟೀಸಿನ ಮೂಲಕ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅದನ್ನು ಸ್ವಚ್ಛಗೊಳಿಸಲು ಅಥವಾ ಅದರ ಸೋಂಕು ನಿವಾರಣೆ ಮಾಡಲು ಅದರ ಮಾಲೀಕನನ್ನು ಅಥವಾ ಅನುಭವದಾರನನ್ನು ಅಗತ್ಯಪಡಿಸಬಹುದು:

ಪರಂತು, ಕಾರ್ಯದರ್ಶಿಯು, ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವೆಂದು ಪರಿಗಣಿಸಿದರೆ ಅಥವಾ ಆ ಮಾಲೀಕನು ಅಥವಾ ಅನುಭವದಾರನು, ಬಡತನದ ಅಥವಾ ಅನ್ಯಥಾ ಯಾವುದೇ ಕಾರಣದಿಂದಾಗಿ ಕೋರಿಕೆಯನ್ನು ಪರಿಣಾಮಕಾರಿಯಾಗಿ ಪಾಲಿಸಲು ಅಸಮರ್ಥನಾಗಿದ್ದರೆ, ಕಾರ್ಯದರ್ಶಿಯೇ ಅಂಥ ಕಟ್ಟಡ ಅಥವಾ ಆವರಣ ಅಥವಾ ವಸ್ತುಗಳನ್ನು ಸ್ವಚ್ಛಗೊಳಿಸುವಂತೆ ಅಥವಾ ಸೋಂಕು ನಿವಾರಣೆ ಮಾಡುವಂತೆ ಮಾಡಿಸಬಹುದು ಮತ್ತು ಈ ಉದ್ದೇಶಕ್ಕಾಗಿ ಅಂಥ ವಸ್ತುಗಳನ್ನು ಅಂಥ ಕಟ್ಟಡದಿಂದ ಅಥವಾ ಆವರಣದಿಂದ ಸ್ಥಳಾಂತರಿಸುವಂತೆ ಮಾಡಿಸಬಹುದು ಮತ್ತು ಈ ಪ್ರಕರಣದ ಅಡಿಯಲ್ಲಿ ವಹಿಸಲಾದ ವೆಚ್ಚಗಳನ್ನು ಸದರಿ ಮಾಲೀಕನಿಂದ ಅಥವಾ ಅನುಭವದಾರನಿಂದ ಅವನು ಬಡತನದ ಕಾರಣದಿಂದಾಗಿ ಕೋರಿಕೆಯನ್ನು ಪರಿಣಾಮಕಾರಿಯಾಗಿ ಪಾಲಿಸಲು ಅಸಮರ್ಥನಾಗಿದ್ದ ಹೊರತು, ಘಿಖಖಿಖಿ ನೇ ಅಧ್ಯಾಯದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

**91. ಸೋಂಕು ತಗಲಬಹುದಾದ ವಸ್ತುಗಳು.**- (1) ಕಾರ್ಯದರ್ಶಿಯು, ಕಾಲಕಾಲಕ್ಕೆ ಯಾವುದೇ ಅಪಾಯಕಾರಿಯಾದ ಅಥವಾ ಸಾಂಕ್ರಾಮಿಕ ರೋಗದ ಸೋಂಕು ತಗಲಬಹುದಾದ ಸಾಧ್ಯತೆ ಇರುವ ಬಟ್ಟೆ ಅಥವಾ ಹಾಸಿಗೆ ಅಥವಾ ಇತರ ವಸ್ತುಗಳನ್ನು ಸ್ವಚ್ಛಗೊಳಿಸಬಹುದಾದಂಥ ಅಥವಾ ಸೋಂಕನ್ನು ನಿವಾರಿಸಬಹುದಾದಂಥ ಸ್ಥಳಗಳನ್ನು ಅಧಿಸೂಚಿಸತಕ್ಕದ್ದು.

(2) ಕಾರ್ಯದರ್ಶಿಯು, ಅಂಥ ಸೋಂಕು ಉಳಿಯುವ ಸಂಭವವಿರುವ ಬಟ್ಟೆಬರೆ, ಹಾಸಿಗೆ ಅಥವಾ ಇತರ ವಸ್ತುಗಳನ್ನು ನಾಶಪಡಿಸುವಂತೆ ನಿರ್ದೇಶಿಸಬಹುದು.

(3) ಯಾರೇ ಆಗಲಿ, (1)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿರಿ-ಸಲಾದಂಥವುಗಳನ್ನು ಹೊರತುಪಡಿಸಿ, ಯಾವುದೇ ಸ್ಥಳದಲ್ಲಿ, ಅಂಥ ಬಟ್ಟೆಬರೆ ಅಥವಾ ಹಾಸಿಗೆ ಅಥವಾ ಇತರ ವಸ್ತುಗಳನ್ನು ತೊಳೆದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**92. ಹೂಳುವ ಮತ್ತು ಸುಡುವ ಸ್ಥಳಗಳ ನೋಂದಣಿ.**- (1) ಈ ಅಧಿನಿಯಮದ ಪ್ರಾರಂಭದಲ್ಲಿ ಪಂಚಾಯತಿಯ ಪ್ರದೇಶದಲ್ಲಿ, ಸತ್ತವರನ್ನು ಹೂಳುವ ಅಥವಾ ಸುಡುವ ಅಥವಾ ಇತರ ರೀತಿಯಲ್ಲಿ ಅಂತ್ಯಕ್ರಿಯೆ ಮಾಡುವುದಕ್ಕಾಗಿ ಸಾರ್ವಜನಿಕ ಸ್ಥಳವನ್ನಾಗಿ ಉಪಯೋಗಿಸುತ್ತಿರುವ ಯಾವುದೇ ಸ್ಥಳದ ಪ್ರತಿಯೊಬ್ಬ ಮಾಲೀಕನು ಅಥವಾ ಅದರ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು, ಅದಕ್ಕೆ ಅನ್ವಯವಾಗುವ ಯಾವುದೇ ಕಾನೂನಿನ ಅಡಿಯಲ್ಲಿ ಈಗಾಗಲೇ ಅಂಥ ಸ್ಥಳವನ್ನು ನೋಂದಾಯಿಸಿರದಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಅಂಥ ಸ್ಥಳವನ್ನು ನೋಂದಾಯಿಸಿಕೊಳ್ಳಲು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸತಕ್ಕದ್ದು.

(2) ಅಂಥ ಗ್ರಾಮ ಪಂಚಾಯತಿಗೆ, ಅಂಥ ಸ್ಥಳದ ಮಾಲೀಕನು ಅಥವಾ ಅದರ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಯಾರೂ ಇಲ್ಲವೆಂದು ಕಂಡುಬಂದರೆ, ಗ್ರಾಮ ಪಂಚಾಯತಿಯು, ಅಂಥ ನಿಯಂತ್ರಣವನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಅಂಥ ಸ್ಥಳವನ್ನು ನೋಂದಾಯಿಸತಕ್ಕದ್ದು ಅಥವಾ ಅದನ್ನು ಮುಚ್ಚಬಹುದು.

**93. ಮೃತರ ಅಂತ್ಯಕ್ರಿಯೆಗಾಗಿ ಸ್ಥಳಗಳಿಗೆ ಲೈಸನ್ಸ್ ಕೊಡುವುದು.**- (1) ಮೃತರ ಅಂತ್ಯಕ್ರಿಯೆಗಾಗಿ ಯಾವುದೇ ಹೊಸ ಸ್ಥಳವನ್ನು, ಅದು ಖಾಸಗಿಯಾದುದೇ ಆಗಿರಲಿ ಅಥವಾ ಸಾರ್ವಜನಿಕವಾದದ್ದೇ ಆಗಿರಲಿ, ಆ ಉದ್ದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಿ ಗ್ರಾಮ ಪಂಚಾಯತಿಯಿಂದ ಲೈಸನ್ಸನ್ನು ಪಡೆದುಕೊಂಡ ಹೊರತು, ಆ ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಪ್ರಾರಂಭಿಸತಕ್ಕದ್ದಲ್ಲ, ರಚಿಸತಕ್ಕದ್ದಲ್ಲ, ನಿರ್ಮಿಸತಕ್ಕದ್ದಲ್ಲ ಅಥವಾ ಬಳಸತಕ್ಕದ್ದಲ್ಲ.

(2) ಲೈಸನ್ಸಿಗಾಗಿ ಸಲ್ಲಿಸುವ ಅಂಥ ಅರ್ಜಿಯೊಂದಿಗೆ ಲೈಸನ್ಸನ್ನು ಕೊಡಬೇಕಾದ ಜಾಗ ಇರುವ ಸ್ಥಳ, ಅದರ ಎಲ್ಲೆ ಮತ್ತು ಅದರ ವಿಸ್ತೀರ್ಣವನ್ನು ತೋರಿಸುವ ಆ ಸ್ಥಳದ ನಕ್ಷೆ, ಅದರಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಮಾಲೀಕನ ಅಥವಾ ವ್ಯಕ್ತಿಯ ಅಥವಾ ಸಮುದಾಯದ ಹೆಸರು, ಅದರ ನಿರ್ವಹಣೆ, ಪದ್ಧತಿ ಮತ್ತು ಗ್ರಾಮ ಪಂಚಾಯತಿಯು ಅಗತ್ಯಪಡಿಸಬಹುದಾದಂಥ ಇತರ ವಿವರಗಳು ಇರತಕ್ಕದ್ದು.

(3) ಯಾವ ಗ್ರಾಮ ಪಂಚಾಯತಿಗೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಗ್ರಾಮ ಪಂಚಾಯತಿಯು,-

(ಎ) ಲೈಸನ್ಸನ್ನು ಮಂಜೂರ್ಮಾಡಬಹುದು ಅಥವಾ ನಿರಾಕರಿಸಬಹುದು, ಅಥವಾ

(ಬಿ) ಗ್ರಾಮ ಪಂಚಾಯತಿಯು, ಯುಕ್ತವೆಂದು ಪರ್ಯಾಲೋಚಿಸಿದ ಆ ನಿವೇಶನದ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದರೆ, ಅವುಗಳನ್ನು, ಸೂಕ್ತವಾಗಿ ಪರಿಶೀಲಿಸಿ ಅವುಗಳನ್ನು ತೆಗೆದುಹಾಕುವವರೆಗೆ ಅಥವಾ ಅದು ಕೋರಿರುವ ಯಾವುವೇ ವಿವರಗಳನ್ನು ಒದಗಿಸುವವರೆಗೆ ಲೈಸನ್ಸ್ ಮಂಜೂರಾತಿಯನ್ನು ಮುಂದೂಡಬಹುದು.

**94. ನೋಂದಾಯಿಸಿದ, ಲೈಸನ್ಸನ್ನು ಕೊಟ್ಟ ಅಥವಾ ಒದಗಿಸಿದ ಸ್ಥಳಗಳ ಬಗ್ಗೆ ಪುಸ್ತಕವನ್ನು ಇಡಬೇಕು.**- (1) ಪ್ರತಿಯೊಂದು ಗ್ರಾಮ ಪಂಚಾಯತಿಯ ಕಚೇರಿಯಲ್ಲಿ ಒಂದು ಪುಸ್ತಕವನ್ನು ಇಟ್ಟಿರತಕ್ಕದ್ದು, ಅದರಲ್ಲಿ 92ನೇ ಪ್ರಕರಣದ ಅಥವಾ 93ನೇ ಪ್ರಕರಣದ ಅಡಿಯಲ್ಲಿ ನೋಂದಾಯಿಸಲಾದ, ಲೈಸನ್ಸ್ ಕೊಡಲಾದ ಅಥವಾ ಒದಗಿಸಲಾದ ಸ್ಥಳಗಳನ್ನು ದಾಖಲು ಮಾಡತಕ್ಕದ್ದು.

(2) ಹಿಂದೆ ಹೇಳಿದಂತೆ ಅಂಥ ಸ್ಥಳವನ್ನು ನೋಂದಾಯಿಸಲಾಗಿದೆ, ಅದಕ್ಕೆ ಲೈಸನ್ಸು ಕೊಡಲಾಗಿದೆ ಅಥವಾ ಅದನ್ನು ಒದಗಿಸಲಾಗಿದೆ ಎಂಬ ಬಗ್ಗೆ ನೋಟೀಸನ್ನು ಅಂಥ ಸ್ಥಳದ ಪ್ರವೇಶದ ಜಾಗದಲ್ಲಿ ಅಥವಾ ಅದಕ್ಕೆ ಸಮಿಪದಲ್ಲಿ, ಎದ್ದು ಕಾಣುವಂತೆ ಅಂಟಿಸತಕ್ಕದ್ದು.

**95. ಅನಧಿಕೃತ ಸ್ಥಳಗಳಲ್ಲಿ ಹೂಳುವುದು ಅಥವಾ ಸುಡುವುದಕ್ಕೆ ನಿಷೇಧ.**- ಯಾವನೇ ವ್ಯಕ್ತಿಯು, ಯಾವುದೇ ಗ್ರಾಮ ಪಂಚಾಯತಿಯ ಪ್ರದೇಶದಲ್ಲಿ ಗ್ರಾಮ ಪಂಚಾಯತಿಯು, 92ನೇ ಪ್ರಕರಣದ ಅಡಿಯಲ್ಲಿ ನೋಂದಾಯಿಸಿರುವ ಅಥವಾ 93ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸ್ ನೀಡಿರುವ ಸ್ಥಳವನ್ನು ಹೊರತುಪಡಿಸಿ ಇತರ ವಾಸ ಸ್ಥಳದಿಂದ ಅಥವಾ ಕುಡಿಯುವ ನೀರಿನ ಸರಬರಾಜಿನ ಯಾವುದೇ ಮೂಲದಿಂದ ಒಂದು ನೂರು ಮೀಟರ್ ಪ್ರದೇಶದೊಳಗಿನ ಯಾವುದೇ ಸ್ಥಳದಲ್ಲಿ ಯಾವುದೇ ಶವವನ್ನು ಹೂಳತಕ್ಕದ್ದಲ್ಲ, ಸುಡತಕ್ಕದ್ದಲ್ಲ ಅಥವಾ ಇತರ ರೀತಿಯಲ್ಲಿ ಅಂತ್ಯಕ್ರಿಯೆ ಮಾಡತಕ್ಕದ್ದಲ್ಲ. ಅಥವಾ ಹೂಳಿಸತಕ್ಕದ್ದಲ್ಲ ಸುಡಿಸತಕ್ಕದ್ದಲ್ಲ ಅಥವಾ ಇತರ ರೀತಿಯಲ್ಲಿ ಅಂತ್ಯಕ್ರಿಯೆ ಮಾಡಿಸತಕ್ಕದ್ದಲ್ಲ.

**96. ಹೂಳುವುದು ಇತ್ಯಾದಿಗಳ ಬಗ್ಗೆ ಗ್ರಾಮ ಪಂಚಾಯತಿಗೆ ತಿಳಿಸಬೇಕು.**- ಗ್ರಾಮ ಪಂಚಾಯತಿಯ ಪ್ರದೇಶದಲ್ಲಿ ಶವಗಳ ಅಂತ್ಯಕ್ರಿಯೆ ಮಾಡುವ ಸ್ಥಳಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು, ಅಲ್ಲಿ ಶವವನ್ನು ಹೂಳುವ, ಸುಡುವ ಅಥವಾ ಅದರ ಅಂತ್ಯಕ್ರಿಯೆ ಮಾಡುವ ಪ್ರತಿಯೊಂದರ ಬಗ್ಗೆ ಗ್ರಾಮ ಪಂಚಾಯತಿಯು ನೇಮಿಸಿದ ಯಾವನೇ ವ್ಯಕ್ತಿಗೆ ಮಾಹಿತಿಯನ್ನು ಕೊಡತಕ್ಕದ್ದು.

**97. ಸಾರ್ವಜನಿಕ ಇಳಿದಾಣಗಳು, ಗಾಡಿ ನಿಲ್ದಾಣಗಳು ಇತ್ಯಾದಿ.**- ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು ಮತ್ತು ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು ಗ್ರಾಮ ಪಂಚಾಯತಿಯು,-

(ಎ) ಸಾರ್ವಜನಿಕ ಇಳಿದಾಣಗಳು, ತಂಗುವ ಸ್ಥಳಗಳು ಮತ್ತು ಗಾಡಿ ನಿಲ್ದಾಣಗಳನ್ನು ಒದಗಿಸಬಹುದು (ಕೊನೆಯ ಪದಾವಳಿಯು ಯಾವುದೇ ಪ್ರಾಣಿಗಳ ಮತ್ತು ಯಾವುದೇ ವಿವರಣೆಯ ವಾಹನಗಳಿಗಾಗಿನ ನಿಲ್ದಾಣಗಳನ್ನು ಒಳಗೊಳ್ಳುತ್ತದೆ) ಮತ್ತು ಅವುಗಳ ಬಳಕೆಗಾಗಿ ಫೀಜನ್ನು ವಿಧಿಸಬಹುದು; ಮತ್ತು

(ಬಿ) ಯಾವುದೇ ಅಂಥ ಸ್ಥಳ ಅಥವಾ ನಿಲ್ದಾಣವನ್ನು ಒದಗಿಸಲಾಗಿರುವಲ್ಲಿ 1[x x x]1 ಗ್ರಾಮ ಪಂಚಾಯತಿಯು, ನಿರ್ದಿಷ್ಟಪಡಿಸಬಹುದಾದಂಥ ಅಂತರದೊಳಗೆ,ಯಾವುದೇ ಸಾರ್ವಜನಿಕ ಸ್ಥಳ ಅಥವಾ ರಸ್ತೆಯ ಬದಿಗಳಲ್ಲಿ ಯಾವನೇ ವ್ಯಕ್ತಿಯು ಅದೇ ಉದ್ದೇಶಕ್ಕಾಗಿ ಬಳಸುವುದನ್ನು ನಿಷೇಧಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಬಿಟ್ಟುಬಿಡಲಾಗಿದೆ.

**98. ಗುಡಿಸಲುಗಳನ್ನು ಕ್ರಮಗೊಳಿಸುವುದು.**- ಯಾವನೇ ವ್ಯಕ್ತಿಯು, ಪಂಚಾಯತಿಯ ಪ್ರದೇಶದಲ್ಲಿ, ಪೂರ್ವಾನುಮತಿ ಪಡೆಯದೆ, ಗುಡಿಸಲು, ಜೋಪಡಿ ಅಥವಾ ಗುಡಿಸಲುಗಳ ಅಥವಾ ಜೋಪಡಿ ಸಾಲು ಅಥವಾ ಬ್ಲಾಕ್‌ಗಳನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಈಗಾಗಲೇ ಇರುವ ಗುಡಿಸಲು ಅಥವಾ ಜೋಪಡಿಯನ್ನು ವಿಸ್ತರಿಸತಕ್ಕದ್ದಲ್ಲ. ಅಂಥ ಗುಡಿಸಲುಗಳು ಅಥವಾ ಜೋಪಡಿಗಳು ಒಂದು ಸಾಲಿನಲ್ಲಿರಬೇಕು ಮತ್ತು ಅವುಗಳ ಮುಂದೆ ಮತ್ತು ಮಧ್ಯೆ ಪ್ರತಿ ಎರಡು ಸಾಲುಗಳ ನಡುವೆ ವಾತಾಯನ ವ್ಯವಸ್ಥೆಯ ಬಗ್ಗೆ ಗ್ರಾಮ ಪಂಚಾಯತಿಯವರು ಸೂಕ್ತವೆಂದು ಅಭಿಪ್ರಾಯಪಡುವಷ್ಟು ಅಗಲವಾದ ಹಾಗೂ ಅಡೆತಡೆಗಳಿಲ್ಲದ ರಸ್ತೆ ಅಥವಾ ದಾರಿ ಇರತಕ್ಕದ್ದೆಂದು ಮತ್ತು ಸ್ವಚ್ಛಗೊಳಿಸುವುದಕ್ಕೆ ಅನುಕೂಲವಾಗುವ ಹಾಗೆ ಒಳಚರಂಡಿ ವ್ಯವಸ್ಥೆ ಇರಬೇಕೆಂದು ಗ್ರಾಮ ಪಂಚಾಯತಿಯವರು ಅಗತ್ಯಪಡಿಸಬಹುದು. ಗ್ರಾಮ ಪಂಚಾಯತಿಯ ಪೂರ್ವಾನುಮತಿಯನ್ನು ಪಡೆಯದೆ ಯಾವುದೇ ಗುಡಿಸಲು ಅಥವಾ ಜೋಪಡಿಯನ್ನು ನಿರ್ಮಿಸಿದರೆ, ಗ್ರಾಮ ಪಂಚಾಯತಿಯು ಅದರ ಮಾಲೀಕನಿಗೆ ಅಥವಾ ಅದನ್ನು ನಿರ್ಮಿಸಿದವನಿಗೆ ಅಥವಾ ಅದು ಯಾರ ಭೂಮಿಯ ಮೇಲೆ ನಿರ್ಮಾಣವಾಗಿದೆಯೋ ಅಥವಾ ನಿರ್ಮಾಣವಾಗುತ್ತಿದೆಯೋ ಅಂಥ ಭೂಮಿಯ ಮಾಲೀಕನಿಗೆ ಅಥವಾ ಅನುಭವದಾರನಿಗೆ ತಾನು ಯುಕ್ತವೆಂದು ಭಾವಿಸುವ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅದನ್ನು ಕೆಡವಿಹಾಕಲು ಅಥವಾ ತೆಗೆದು ಹಾಕಲು ಅಥವಾ ನೈರ್ಮಲ್ಯ ವ್ಯವಸ್ಥೆಗನುಸಾರವಾಗಿ ಅದರಲ್ಲಿ ಅಂಥ ಮಾರ್ಪಾಡುಗಳನ್ನು ಮಾಡಬೇಕೆಂದು ಅಥವಾ ಅದನ್ನು ವಿಸ್ತರಿಸಬೇಕೆಂದು, ಅವನನ್ನು ಅಗತ್ಯಪಡಿಸುವ ಲಿಖಿತ ನೋಟೀಸನ್ನು ಗ್ರಾಮ ಪಂಚಾಯತಿಯು ಕೊಡಬಹುದು.

**99. ಚರಂಡಿಗಳನ್ನು ನಿರ್ಮಿಸುವ ಅಧಿಕಾರ.**- (1) ಯಾವುದೇ ಚರಂಡಿ ವ್ಯವಸ್ಥೆಯ ಯೋಜನೆಯನ್ನು ಕಾರ್ಯಗತಮಾಡಲು, ಗ್ರಾಮ ಪಂಚಾಯತಿಯು, ಪಂಚಾಯತಿಯ ಪ್ರದೇಶದಲ್ಲಿರುವ, ಯಾವುದೇ ಭೂಮಿಯ ಮಾಲೀಕನಿಗೆ ಯುಕ್ತ ನೋಟೀಸನ್ನು ಕೊಟ್ಟ ತರುವಾಯ, ಸದರಿ ಭೂಮಿಯ ಮೇಲೆ ಅಥವಾ ಒಳಗೆ ಅಥವಾ ಅದರ ಮೂಲಕ ಯಾವುದೇ ಚರಂಡಿ, ಗ್ರಾಮಸಾರ ಮೋರಿ, ದ್ರವ ಪದಾರ್ಥಗಳನ್ನು ಸಾಗಿಸುವ ನಾಳ, ಸುರಂಗ ದಾರಿ, ಅಡಿಗಾಲುವೆ, ಕೊಳಾಯಿ ಅಥವಾ ತೊರೆಯನ್ನು ಯಾವುದೇ ನೆಲಮಾಳಿಗೆ ಅಥವಾ ಕಮಾನು ಛಾವಣಿಗಳ ಮೂಲಕ ಅಡ್ಡವಾಗಿ ಅಥವಾ ಒಳಗಿನಿಂದ, ತೆಗೆದುಕೊಂಡು ಹೋಗುವುದು ಕಾನೂನುಬದ್ಧವಾಗಿರತಕ್ಕದ್ದು.

(2) ಅಂಥ ಯಾವುದೇ ಉದ್ದೇಶಕ್ಕಾಗಿ, ಗ್ರಾಮ ಪಂಚಾಯತಿಯು ಅಥವಾ ಅದು ನೇಮಕ ಮಾಡಿದ ಯಾವನೇ ಅಧಿಕಾರಿಯು ಈಗಾಗಲೇ ನಿರ್ಮಿಸಿರುವ ಚರಂಡಿಯು ಇರುವ ಯಾವುದೇ ಜಮೀನನ್ನು ಪ್ರವೇಶಿಸಬಹುದು ಮತ್ತು ಗ್ರಾಮ ಪಂಚಾಯತಿಯಲ್ಲಿ ನಿಹಿತವಾದ ಭಾಗದಲ್ಲಿ ಈಗಾಗಲೇ ನಿರ್ಮಿಸಿರುವ ಚರಂಡಿಯ

ಬದಲು ಹೊಸ ಚರಂಡಿಯನ್ನು ನಿರ್ಮಿಸಬಹುದು ಅಥವಾ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿರುವ ಯಾವುದೇ ಚರಂಡಿಯ ದುರಸ್ತಿ ಮಾಡಬಹುದು ಅಥವಾ ಅದರಲ್ಲಿ ಮಾರ್ಪಾಟು ಮಾಡಬಹುದು.

(3) ಈ ಪ್ರಕರಣದ ಅಡಿಯಲ್ಲಿ ಯಾವುದೇ ಅಧಿಕಾರವನ್ನು ಚಲಾಯಿಸುವಾಗ, ಅನಾವಶ್ಯಕವಾದ ಹಾನಿಯನ್ನುಂಟು ಮಾಡತಕ್ಕದ್ದಲ್ಲ, ಅಂಥ ಅಧಿಕಾರವನ್ನು ಚಲಾಯಿಸುವುದರಿಂದಾಗಿ ಹಾನಿಯುಂಟಾಗುವ ಯಾವನೇ ವ್ಯಕ್ತಿಗೆ ಗ್ರಾಮ ಪಂಚಾಯತಿಯು ಸೂಕ್ತ ಪರಿಹಾರ ನೀಡತಕ್ಕದ್ದು.

**100. ಮನೆಗಳಿಗೆ ಸಮರ್ಪಕ ಒಳಚರಂಡಿ ವ್ಯವಸ್ಥೆ.**- (1) ಪಂಚಾಯತಿಯ ಪ್ರದೇಶದಲ್ಲಿರುವ ಯಾವುದೇ ಕಟ್ಟಡ ಅಥವಾ ಭೂಮಿಯ ಸಂಬಂಧದಲ್ಲಿ ಸಮರ್ಪಕವಾದ ಒಳಚರಂಡಿ ವ್ಯವಸ್ಥೆ ಇರದಿದ್ದರೆ ಅಥವಾ ಗ್ರಾಮ ಪಂಚಾಯತಿಗೆ ತೃಪ್ತಿಕರವಾದಂಥ ವ್ಯವಸ್ಥೆ ಇರದಿದ್ದರೆ, ಗ್ರಾಮ ಪಂಚಾಯತಿಯು, ಲಿಖಿತ ನೋಟೀಸಿನ ಮೂಲಕ ಅಂಥ ಕಟ್ಟಡ ಅಥವಾ ಭೂಮಿಯ ಚರಂಡಿ ನೀರು,-

(ಎ) ಅಂಥ ಕಟ್ಟಡದ ಅಥವಾ ಭೂಮಿಯ ಯಾವುದೇ ಭಾಗದಿಂದ ಹದಿನಾರು ಮೀಟರ್ ದೂರದೊಳಗೆ ಯಾವುದೇ ಚರಂಡಿ ಅಥವಾ ಮೋರಿ ಇದ್ದರೆ ಅಂಥ ಚರಂಡಿ ಅಥವಾ ಮೋರಿಯಲ್ಲಿ; ಅಥವಾ

(ಬಿ) ಅಂಥ ಮಾಲೀಕನು ಒದಗಿಸಬೇಕಾದ ಯಾವುದೇ ಮುಚ್ಚಲ್ಪಟ್ಟ ರೊಚ್ಚು ಗುಂಡಿಯಲ್ಲಿ,

-ಸೇರುವಂತೆ ಮಾಡಲು ಅವಶ್ಯವೆಂದು ತಾನು ತಿಳಿಯುವಂಥ ಅಳತೆಯ ಮತ್ತು ಸಾಮಗ್ರಿಯನ್ನೊಳಗೊಂಡ, ಅಂಥ ಮಟ್ಟದಲ್ಲಿರುವ ಮತ್ತು ಇಳಿವನ್ನು ಹೊಂದಿರುವ ಯಾವುದೇ ಚರಂಡಿಯನ್ನು ಅಥವಾ ಕೊಳವೆಯನ್ನು ಅಂಥ ಕಟ್ಟಡದಲ್ಲಿ ರಚಿಸಬೇಕೆಂದು ಅಥವಾ ಹಾಕಬೇಕೆಂದು ಮಾಲೀಕನಿಗೆ ತಿಳಿಸಬಹುದು.

(2) ಯಾವುದೇ ಪಂಚಾಯತಿಯ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡವನ್ನು ಕಟ್ಟುವುದು ಅಥವಾ ಯಾವುದೇ ಕಟ್ಟಡವನ್ನು ಪುನಃ ಕಟ್ಟುವುದು ಅಥವಾ ಯಾವುದೇ ಹೊಸ ಕಟ್ಟಡದಲ್ಲಿ ಅಥವಾ ಪುನಃ ಕಟ್ಟಿದ ಕಟ್ಟಡದಲ್ಲಿ ವಾಸಿಸುವುದು,-

(ಎ) ಅಂಥ ಕಟ್ಟಡದಲ್ಲಿ ಸಮರ್ಪಕವಾಗಿ ಇರಬೇಕಾದ ಒಳಚರಂಡಿ ವ್ಯವಸ್ಥೆಗಾಗಿ ಗ್ರಾಮ ಪಂಚಾಯತಿಯು, ಅಗತ್ಯವೆಂದು ಭಾವಿಸುವ ಪ್ರಮಾಣದ ಸಾಮಗ್ರಿಗಳನ್ನು ಮತ್ತು ವಿವರಗಳನ್ನೊಳಗೊಂಡ ಅಂಥ ಮಟ್ಟದಲ್ಲಿ ಮತ್ತು ಇಳಿವನ್ನು ಹೊಂದಿರುವ ಚರಂಡಿಯನ್ನು ನಿರ್ಮಿಸಿದ ಹೊರತು ಮತ್ತು ಆವರೆಗೆ, ಅಥವಾ

(ಬಿ) ಅಂಥ ಕಟ್ಟಡ ಮತ್ತು ಅದಕ್ಕೆ ಸೇರಿದ ಭೂಮಿಯಲ್ಲಿ, ಸದರಿ ಕಟ್ಟಡದಿಂದ ಹಾಗೂ ಸದರಿ ಭೂಮಿಯಿಂದ ಚರಂಡಿ ನೀರನ್ನು ಸಂಗ್ರಹಿಸಿ ಅದನ್ನು ಸಾಗಿಸುವ ಹಾಗೂ ಸದರಿ ಕಟ್ಟಡದ ಚರಂಡಿಯನ್ನು ಸಮರ್ಪಕವಾಗಿ ಸ್ವಚ್ಛಗೊಳಿಸುವ ಉದ್ದೇಶಗಳಿಗಾಗಿ ಅವಶ್ಯಕವೆಂದು ಗ್ರಾಮ ಪಂಚಾಯತಿಗೆ ಕಂಡುಬರುವ ಎಲ್ಲ ಸಲಕರಣೆಗಳು ಮತ್ತು ಜೋಡಣೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಪ್ರತಿಯೊಂದು ಉಪಕರಣವನ್ನು ಒದಗಿಸಿದ್ದ ಹೊರತು ಮತ್ತು ಅದರಲ್ಲಿ ವ್ಯವಸ್ಥೆ ಮಾಡಿದ ಹೊರತು ಮತ್ತು ಆವರೆಗೆ,

-ಕಾನೂನು ಬದ್ಧವಾಗಿರತಕ್ಕದ್ದು.

(3) ಮೇಲೆ ಹೇಳಿದಂತೆ ನಿರ್ಮಿಸಬೇಕಾದ ಚರಂಡಿಯು, ಗ್ರಾಮ ಪಂಚಾಯತಿಯ ಚರಂಡಿಯನ್ನು ಅಥವಾ ಅಂಥ ಕಟ್ಟಡದಿಂದ ಹದಿನಾರು ಮೀಟರ್‌ಗಳಿಗಿಂತ ಹೆಚ್ಚು ದೂರದಲ್ಲಿರುವ ಮತ್ತು ಚರಂಡಿ ನೀರನ್ನು ಹೊರಹಾಕುವುದಕ್ಕೆ ಕಾನೂನು ಮೇರೆಗೆ ಪ್ರತ್ಯೇಕವಾಗಿ ಇಡಲಾದ ಯಾವುದೇ ಸ್ಥಳದಲ್ಲಿ ಸೇರತಕ್ಕದು; ಆದರೆ, ಇಂಥ ಚರಂಡಿ ಅಥವಾ ಅಂಥ ಅಂತರದಲ್ಲಿ ಸ್ಥಳವು ಇರದಿದ್ದರೆ, ಅಂಥ ಚರಂಡಿಯ ನೀರು, ಗ್ರಾಮ ಪಂಚಾಯತಿಯು, ನಿರ್ದೇಶಿಸುವ ಯಾವುದೇ ರೊಚ್ಚುಗುಂಡಿಯನ್ನು ಸೇರತಕ್ಕದ್ದು.

**101. ಚರಂಡಿ ನೀರನ್ನು ಗ್ರಾಮ ಪಂಚಾಯತಿಯ ಚರಂಡಿಗೆ ಹರಿಯಬಿಡಲು, ಕಟ್ಟಡಗಳ ಅಥವಾ ಭೂಮಿಗಳ ಮಾಲೀಕರ ಅಥವಾ ಅನುಭವದಾರರ ಅಧಿಕಾರ.**- ಪಂಚಾಯತಿಯ ಪ್ರದೇಶದೊಳಗಿರುವ ಯಾವುದೇ ಕಟ್ಟಡ ಅಥವಾ ಭೂಮಿಯ ಮಾಲೀಕನು ಅಥವಾ ಅನುಭವದಾರನು, ತನ್ನ ಚರಂಡಿ ನೀರನ್ನು ಗ್ರಾಮ ಪಂಚಾಯತಿಯ ಮೋರಿಗೆ ಹರಿಯಬಿಡಲು ಹಕ್ಕುಳ್ಳವನಾಗಿರತಕ್ಕದ್ದು, ಪರಂತು, ಆ ಬಗ್ಗೆ ಅವನು, ಈ ಮೊದಲು ಗ್ರಾಮ ಪಂಚಾಯತಿಯ ಲಿಖಿತ ಅನುಮತಿಯನ್ನು ಪಡೆಯತಕ್ಕದ್ದು ಮತ್ತು ಗ್ರಾಮ ಪಂಚಾಯತಿಗೆ ಸೇರಿದ ಮತ್ತು ಸೇರಿರದಂಥ ಚರಂಡಿಗಳಲ್ಲಿ ಪರಸ್ಪರ ಸಂಪರ್ಕವನ್ನೇರ್ಪಡಿಸುವ ಕಾರ್ಯವು ಯಾರ ಮೇಲ್ವಿಚಾರಣೆಯಲ್ಲಿ ನಡೆಯಬೇಕು ಮತ್ತು ಯಾವ ರೀತಿಯಲ್ಲಿ ನಡೆಯಬೇಕು ಎಂಬ ಬಗ್ಗೆ ಗ್ರಾಮ ಪಂಚಾಯತಿಯು ಗೊತ್ತುಪಡಿಸಬಹುದಾದಂಥ ಷರತ್ತುಗಳನ್ನು ಪಾಲಿಸತಕ್ಕದ್ದು.

**102. ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಗೆ ಅಥವಾ ಚರಂಡಿಗೆ, ಚರಂಡಿ ನೀರನ್ನು ಸೇರಿಸುವ ಹಕ್ಕು.**- (1) ಪಂಚಾಯತಿಯ ಪ್ರದೇಶದೊಳಗಿನ ಯಾವುದೇ ಕಟ್ಟಡ ಅಥವಾ ಭೂಮಿಯ ಮಾಲೀಕನು ಅಥವಾ ಅನುಭವದಾರನು ಬೇರೆ ಇತರ ವ್ಯಕ್ತಿಗೆ ಸೇರಿದ ಅಥವಾ ವ್ಯಕ್ತಿಯ ಸ್ವಾಧೀನತೆಯಲ್ಲಿರುವ ಅಥವಾ ಅವನ ಉಪಯೋಗದಲ್ಲಿರುವಂಥ ಭೂಮಿಯ ಮೂಲಕ ಚರಂಡಿಯನ್ನು ನಿರ್ಮಿಸುವ ಮೂಲಕ ಅಥವಾ ಚರಂಡಿಗೆ ಜೋಡಿಸುವ ಮೂಲಕ ಗ್ರಾಮ ಪಂಚಾಯತಿಯ ಯಾವುದೇ ಚರಂಡಿಗೆ ಸಂಪರ್ಕ ಕಲ್ಪಿಸಲು ಇಚ್ಛಿಸಿದರೆ, ಆ ಬಗ್ಗೆ ಅವನು ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸತಕ್ಕದ್ದು.

(2) ಆ ತರುವಾಯ ಗ್ರಾಮ ಪಂಚಾಯತಿಯು, ಅಂಥ ಬೇರೆ ವ್ಯಕ್ತಿಗೆ ತನ್ನ ಆಕ್ಷೇಪಣೆಗಳನ್ನು ತಿಳಿಸಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಯಾವುವೇ ಆಕ್ಷೇಪಣೆಗಳು ಬರದಿದ್ದರೆ, ಅಥವಾ ಸಲ್ಲಿಸಿದ ಆಕ್ಷೇಪಣೆಗಳು ಅಸಮರ್ಪಕವಾಗಿದ್ದರೆ, ಸಾಕಷ್ಟು ಮತ್ತು ಕಾನೂನು ಸಮ್ಮತವೆಂದು ಅದು ಅಭಿಪ್ರಾಯಪಡುವ ರೀತಿಯಲ್ಲಿ ಮತ್ತು ಬಾಡಿಗೆ ಅಥವಾ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಮತ್ತು ಅದರ ನಿರ್ವಹಣೆ ಮತ್ತು ದುರಸ್ತಿ ಇವುಗಳ ಸಂಬಂಧದಲ್ಲಿ ಪಕ್ಷಕಾರರ ಅನುಕ್ರಮ ಹೊಣೆ ಇವುಗಳ ಬಗೆಗಿನ ಆ ಷರತ್ತುಗಳಿಗೆ ಒಳಪಟ್ಟು ಅರ್ಜಿದಾರನು, ತನ್ನ ಚರಂಡಿಯನ್ನು ಈ ಭೂಮಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಕೆಳಗೆ ಹಾಯ್ದು ಹೋಗಲು ಅಥವಾ ಸದರಿ ಚರಂಡಿಯೊಡನೆ ಜೋಡಿಸಲು, ಅವನಿಗೆ ಅಧಿಕಾರ ನೀಡಬಹುದು.

(3) ಅಂಥ ಪ್ರತಿಯೊಂದು ಆದೇಶವು, ಯಾವ ವ್ಯಕ್ತಿಯ ಹೆಸರಿನಲ್ಲಿ ಆದೇಶವನ್ನು ನೀಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ಆ ಉದ್ದೇಶಕ್ಕೆ, ಆ ವ್ಯಕ್ತಿಯು ನೇಮಕ ಮಾಡಿದ ಏಜೆಂಟನಿಗೆ ಅಥವಾ ಬೇರೆ ವ್ಯಕ್ತಿಗೆ, ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ನಷ್ಟ ಪರಿಹಾರ ಮತ್ತು ಬಾಡಿಗೆ ಯಾವುದಾದರೂ ಇದ್ದರೆ, ಅದನ್ನು, ಭೂಮಿಯ ಅಥವಾ ಚರಂಡಿಯ ಮಾಲೀಕನಿಗೆ, ಅನುಭವದಾರನಿಗೆ ಅಥವಾ ಭೂಮಿಯನ್ನು ಅಥವಾ ಚರಂಡಿಯನ್ನು ಉಪಯೋಗಿಸುವ ವ್ಯಕ್ತಿಗೆ ಕೊಟ್ಟ ಅಥವಾ ಸಂದಾಯ ಮಾಡಿದ ಮತ್ತು ಬೇರೆ ರೀತಿಯಲ್ಲಿ ಸದರಿ ಆದೇಶದಲ್ಲಿರುವ ಷರತ್ತುಗಳನ್ನು ಸಾಧ್ಯವಿರುವಷ್ಟುಮಟ್ಟಿಗೆ ಪಾಲಿಸಿದ ಮತ್ತು ಸದರಿ ಮಾಲೀಕನಿಗೆ, ಅನುಭವದಾರನಿಗೆ ಅಥವಾ ಉಪಯೋಗಿಸುತ್ತಿರುವ ವ್ಯಕ್ತಿಗೆ, ಸೂಕ್ತ ಲಿಖಿತ ನೋಟೀಸನ್ನು ಕೊಟ್ಟ ತರುವಾಯ, ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಭೂಮಿಯಲ್ಲಿ ಸೂರ್ಯೋದಯ ಸೂರ್ಯಾಸ್ತಗಳ ನಡುವಿನ ಯಾವುದೇ ಸಮಯದಲ್ಲಿ ತನ್ನ ಸಹಾಯಕರು ಮತ್ತು ಕೆಲಸಗಾರರೊಡನೆ ಪ್ರವೇಶಿಸಲು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು,-

(ಎ) ಸದರಿ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಚರಂಡಿಯ ನಿರ್ಮಾಣಕ್ಕೆ ಅಥವಾ ಜೋಡಣೆಗೆ,

(ಬಿ) ಕಾಲಕಾಲಕ್ಕೆ ಅಗತ್ಯವಾದ ನವೀಕರಣ, ದುರಸ್ತಿ ಅಥವಾ ಬದಲಾವಣೆಗೆ, ಅಥವಾ

(ಸಿ) ಆದೇಶದ ನಿಬಂಧನೆಗಳಿಗನುಸಾರವಾಗಿ ಸದರಿ ಚರಂಡಿಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿರ್ವಹಿಸುವ, ದುರಸ್ತಿ ಮಾಡುವ, ನೀರು ಹರಿಸಿ ಸ್ವಚ್ಛಗೊಳಿಸುವ, ಚೊಕ್ಕಟಗೊಳಿಸುವ ಅಥವಾ ಅದನ್ನು ಖಾಲಿ ಮಾಡುವ ಸಂಬಂಧದಲ್ಲಿ ಯಾವುದೇ ಹೊಣೆಯ ನಿರ್ವಹಣೆಗೆ,

-ಅವಶ್ಯವಿರುವ ಎಲ್ಲ ಕಾರ್ಯಗಳನ್ನು ನಿರ್ವಹಿಸಲು ಸಂಪೂರ್ಣ ಅಧಿಕಾರ ಇರತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ಯಾವುದೇ ಕಾಮಗಾರಿಯನ್ನು ಕೈಕೊಳ್ಳುವಾಗ ಆದಷ್ಟು ಹೆಚ್ಚು ಹಾನಿಯುಂಟಾಗದಂತೆ ಕೈಕೊಳ್ಳತಕ್ಕದ್ದು. ಮತ್ತು ಯಾವ ಕಟ್ಟಡ ಅಥವಾ ಭೂಮಿಯ ಪ್ರಯೋಜನದ ಸಲುವಾಗಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೋ, ಆ ಕಟ್ಟಡದ ಅಥವಾ ಭೂಮಿಯ ಮಾಲೀಕನು ಅಥವಾ ಅನುಭವದಾರನು, ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ವಿಳಂಬ ಮಾಡಿ ಆ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು ಮತ್ತು ಸದರಿ ಕಾಮಗಾರಿಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಅಗೆದು ತೆಗೆದ, ಒಡೆದ ಅಥವಾ ತೆಗೆದು ಹಾಕಲಾದ ಭೂಮಿಯ ಅಥವಾ ಕಟ್ಟಡದ ಯಾವುದೇ ಭಾಗದ ಅಥವಾ ರಚನೆಯ ಸಂಭಂದದಲ್ಲಿಯ ಹಾನಿಯನ್ನು ತನ್ನ ಸ್ವಂತ ಖರ್ಚಿನಿಂದ ತುಂಬಿಕೊಡತಕ್ಕದ್ದು, ಅದನ್ನು ಪೂರ್ವಸ್ಥಿತಿಗೆ ತರತಕ್ಕದ್ದು ಮತ್ತು ಸದರಿ ಕಾಮಗಾರಿಯ ನಿರ್ವಹಣೆಯಿಂದಾಗಿ ಯಾವನೇ ವ್ಯಕ್ತಿಗೆ ನಷ್ಟವುಂಟಾದರೆ ಅವನಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

**103. ಯಾವ ಭೂಮಿಯ ಮೂಲಕ ಚರಂಡಿಯನ್ನು ಹಾಕಲಾಗಿದೆಯೋ ಅಂಥ ಭೂಮಿಯ ಮೇಲೆ ಆ ತರುವಾಯ ಕಟ್ಟಡವನ್ನು ಕಟ್ಟುವ ಬಗ್ಗೆ ಮಾಲೀಕನ ಹಕ್ಕು.**- 102ನೇ ಪ್ರಕರಣದ ಅಡಿಯಲ್ಲಿ ಯಾವುದೇ ಭೂಮಿಯಲ್ಲಿ, ಅದರಲ್ಲಿ, ಅದರ ಮೂಲಕ ಅಥವಾ ಅದರೊಳಗೆ ಹಾಯ್ದುಹೋಗುವ ಚರಂಡಿಯನ್ನು ನಿರ್ಮಿಸಲಾಗಿದೆಯೋ ಅಂಥ ಯಾವುದೇ ಭೂಮಿಯ ಮಾಲೀಕನು ಅಂಥ ಭೂಮಿಯ ಮೇಲೆ ಯಾವುದೇ ಕಟ್ಟಡವನ್ನು ನಿರ್ಮಿಸಿರದಿದ್ದಾಗ, ಆ ತರುವಾಯ ಯಾವುದೇ ಕಾಲದಲ್ಲಿ ಅದರ ಮೇಲೆ ಕಟ್ಟಡವನ್ನು ಕಟ್ಟಲು ಇಚ್ಛಿಸಿದರೆ, ಅಂಥ ಕಟ್ಟಡ ಕಟ್ಟಲು ಗ್ರಾಮ ಪಂಚಾಯತಿಯು ಮಂಜೂರಾತಿ ನೀಡಿದರೆ, ಲಿಖಿತ ನೋಟೀಸಿನ ಮೂಲಕ, ಯಾವ ಶೌಚಗೃಹದ ಪ್ರಯೋಜನಕ್ಕಾಗಿ ಅಂಥ ಚರಂಡಿಯನ್ನು ನಿರ್ಮಿಸಲಾಗಿದೆಯೋ, ಅದರ ಮಾಲೀಕನಿಗೆ ಅವನ್ನು ಕೆಡವಲು ಅಥವಾ ಮುಚ್ಚಲು, ಉದ್ದೇಶಿಸಿದ ಕಟ್ಟಡವನ್ನು ಕಟ್ಟಲು ಅಥವಾ ಸುರಕ್ಷಿತವಾಗಿ ಅದನ್ನು ಬಳಸಲು ಅವಶ್ಯಕವೆಂದು ಅಭಿಪ್ರಾಯಪಡುವ ರೀತಿಯಲ್ಲಿ ಅದನ್ನು ಮುಚ್ಚಲು, ತೆಗೆದು ಹಾಕಲು, ಅಥವಾ ಬೇರೆಡೆಗೆ ತಿರುಗಿಸಲು ಮತ್ತು ಅವನ್ನು ತುಂಬಲು, ಮೊದಲಿನ ಸ್ಥಿತಿಗೆ ತರಲು ಮತ್ತು ಕಟ್ಟಡ ನಿರ್ಮಾಣಯೋಗ್ಯವನ್ನಾಗಿ ಮಾಡಲು ಆದೇಶಿಸತಕ್ಕದ್ದು.

**104. ಶೌಚಗೃಹ ಮುಂತಾದವುಗಳನ್ನು ಒದಗಿಸುವುದು.**- (1) ಯಾವುದೇ ಶೌಚಗೃಹ ಅಥವಾ ರೊಚ್ಚುಗುಂಡಿಯನ್ನು ಅಥವಾ ಹೆಚ್ಚಿಗೆ ಶೌಚಗೃಹಗಳನ್ನು ಅಥವಾ ರೊಚ್ಚುಗುಂಡಿಗಳನ್ನು ಯಾವುದೇ ಕಟ್ಟಡದ ಅಥವಾ ಭೂಮಿಯ ಒಳಗೆ ಅಥವಾ ಮೇಲೆ ಒದಗಿಸಬೇಕೆಂದು ಅಥವಾ ಯಾವುದೇ ಕಟ್ಟಡದಿಂದ ಅಥವಾ ಭೂಮಿಯಿಂದ ಸ್ಥಳಾಂತರಿಸತಕ್ಕದ್ದೆಂದು ಅಥವಾ ತೆಗೆದುಹಾಕತಕ್ಕದೆಂದು ಅಥವಾ ಯಾವ ಪ್ರದೇಶದಲ್ಲಿ ನೀರು ಹರಿಸಿ ಸ್ವಚ್ಛಗೊಳಿಸುವ ಶೌಚಗೃಹಗಳು ಇರುತ್ತವೆಯೋ ಅಂಥ ಪ್ರದೇಶದಲ್ಲಿ ಆ ರೀತಿಯ ಶೌಚಗೃಹಗಳನ್ನು ಸದ್ಯಕ್ಕಿರುವ ಶೌಚಗೃಹಗಳ ಬದಲಾಗಿ ಆ ಕಟ್ಟಡಗಳ ಅಥವಾ ಭೂಮಿಗಳ ಒಳಗೆ ಒದಗಿಸತಕ್ಕದ್ದೆಂದು ಗ್ರಾಮ ಪಂಚಾಯತಿಯು ಅಭಿಪ್ರಾಯಪಟ್ಟರೆ, ಗ್ರಾಮ ಪಂಚಾಯತಿಯು, ಲಿಖಿತ ನೋಟೀಸಿನ ಮೂಲಕ ಸೂಕ್ತವೆಂದು ತಾನು ಭಾವಿಸುವ ಅಂಥ ಶೌಚಗೃಹಗಳನ್ನು, ರೊಚ್ಚುಗುಂಡಿಗಳನ್ನು ಅಥವಾ ನೀರು ಹರಿಸಿ ಸ್ವಚ್ಛಗೊಳಿಸುವ ಶೌಚಗೃಹಗಳನ್ನು ಕಲ್ಪಿಸಲು ಅಂತ ಕಟ್ಟಡದ ಅಥವಾ ಭೂಮಿಯ ಮಾಲೀಕನಿಗೆ ತಿಳಿಸತಕ್ಕದ್ದು.

(2) ಇಪ್ಪತ್ತಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಗಾರರನ್ನು ಅಥವಾ ಕಾರ್ಮಿಕರನ್ನು ನೇಮಿಸಿಕೊಳ್ಳಲು ಅಥವಾ ಯಾವುದೇ ಮಾರುಕಟ್ಟೆಯನ್ನು, ಶಾಲೆಯನ್ನು ಅಥವಾ ಚಿತ್ರಮಂದಿರ ಅಥವಾ ಸಾರ್ವಜನಿಕರ ಮನರಂಜನೆಯ ಇತರ ಸ್ಥಳಗಳನ್ನು ಹೊಂದಿರುವ, ಅಥವಾ ಅದನ್ನು ನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಗ್ರಾಮ ಪಂಚಾಯತಿಯು ಲಿಖಿತ ನೋಟೀಸನ್ನು ಕೊಟ್ಟು, ಗ್ರಾಮ ಪಂಚಾಯತಿಯು ನಿರ್ದೇಶಿಸಬಹುದಾದಂಥ ಶೌಚ ಗೃಹಗಳನ್ನು ಮತ್ತು ಮೂತ್ರ ವಿಸರ್ಜನೆ ಜಾಗಗಳನ್ನು ವ್ಯವಸ್ಥೆ ಮಾಡಲು ಮತ್ತು ಅವುಗಳನ್ನು ಸುಸ್ಥಿತಿಯಲ್ಲಿಡಲು ಮತ್ತು ಪ್ರತಿದಿನ ಸ್ವಚ್ಛಗೊಳಿಸಲು ಆದೇಶಿಸಬಹುದು.

(3) ಗ್ರಾಮ ಪಂಚಾಯತಿಯು ಯಾವ ಭೂಮಿಯಲ್ಲಿ ಯಾವುದೇ ಶೌಚಗೃಹ ಅಥವಾ ಮೂತ್ರ ವಿಸರ್ಜನೆ ಜಾಗವು ಇರುವುದೋ ಅದರ ಸಮಿಪದಲ್ಲಿ ಹಾದು ಹೋಗುವ ವ್ಯಕ್ತಿಗಳ ಅಥವಾ ಅದರ ನೆರೆಹೊರೆಯಲ್ಲಿ ವಾಸಿಸುವ ವ್ಯಕ್ತಿಗಳ ದೃಷ್ಟಿಗೆ ಅದು ಬೀಳದಂತೆ, ಅದರ ಮೇಲೆ ಸಾಕಷ್ಟು ಮೇಲ್ಹಾವಣಿ ಹಾಕಲು ಮತ್ತು ಸುತ್ತಲೂ ಗೋಡೆ ಅಥವಾ ಬೇಲಿ ಹಾಕಿ ಮರೆ ಮಾಡಬೇಕೆಂದು, ಅಥವಾ ಶೌಚಗೃಹದ ಬಾಗಿಲು ಅಥವಾ ಮೂತ್ರ ವಿಸರ್ಜನೆ ಸ್ಥಳದ ಸಣ್ಣ ಬಾಗಿಲು ಬೀದಿಗೆ ಎದುರಾಗಿದ್ದು ಮತ್ತು ಅದು ಅಸಹ್ಯಕರವಾಗಿದೆ ಎಂದು ಭಾವಿಸಿದರೆ, ಗ್ರಾಮ ಪಂಚಾಯತಿಯು ನಿರ್ದೇಶಿಸುವ ಹಾಗೆ ಮಾರ್ಪಾಟು ಮಾಡಬೇಕೆಂದು ಆ ಯಾವುದೇ ಭೂಮಿಯ ಮಾಲೀಕರನ್ನು ಅಥವಾ ಅನುಭವದಾರರನ್ನು ಲಿಖಿತ ನೋಟೀಸಿನ ಮೂಲಕ ಅಗತ್ಯಪಡಿಸತಕ್ಕದ್ದು.

**105. ಶೌಚಗೃಹ ಮೊದಲಾದವುಗಳನ್ನು ಮಾರ್ಪಡಿಸುವ, ದುರಸ್ತಿ ಮಾಡುವ ಮತ್ತು ಸುಸ್ಥಿತಿಯಲ್ಲಿಡುವ ಸಂಬಂಧದ ವೆಚ್ಚ.-** (1) ಪಂಚಾಯತಿಯ ಪ್ರದೇಶದೊಳಗಿರುವ ಎಲ್ಲ ಮೋರಿ, ಚರಂಡಿ, ಶೌಚಗೃಹಗಳು, ನೀರು ಹರಿಸಿ ಸ್ವಚ್ಛಗೊಳಿಸುವ ಶೌಚಗೃಹಗಳು, ಮನೆಯ ರೊಚ್ಚು ನೀರು ಹರಿಯುವ ಮೋರಿ ಮತ್ತು ರೊಚ್ಚುಗುಂಡಿಗಳನ್ನು ಗ್ರಾಮ ಪಂಚಾಯತಿಯ ವೆಚ್ಚದಿಂದ ಕಟ್ಟಿದ ಸಂದರ್ಭದ ಹೊರತಾಗಿ, ಅವು ಯಾವ ಭೂಮಿ ಅಥವಾ ಕಟ್ಟಡಕ್ಕೆ ಸೇರಿವೆಯೋ, ಅಥವಾ ಅಂಥ ಭೂಮಿ ಅಥವಾ ಕಟ್ಟಡಗಳ ಉಪಯೋಗಕ್ಕೆ ರಚಿಸಲಾಗಿದೆಯೋ ಅಥವಾ ಅದಕ್ಕಾಗಿ ಮುಂದುವರಿಸಲಾಗುತ್ತಿದೆಯೋ, ಆ ಭೂಮಿಯ ಅಥವಾ ಕಟ್ಟಡದ ಮಾಲೀಕರ ಖರ್ಚಿನಿಂದ ಅಥವಾ ವೆಚ್ಚದಿಂದ ಮಾರ್ಪಾಡು ಮಾಡತಕ್ಕದ್ದು, ದುರಸ್ತಿ ಮಾಡತಕ್ಕದ್ದು ಮತ್ತು ಸುಸ್ಥಿತಿಯಲ್ಲಿಡತಕ್ಕದ್ದು ಮತ್ತು ಗ್ರಾಮ ಪಂಚಾಯತಿಯು, ಲಿಖಿತ ನೋಟೀಸಿನ ಮೂಲಕ ತಾನು ಸೂಕ್ತವೆಂದು ಅಭಿಪ್ರಾಯಪಡುವ ರೀತಿಯಲ್ಲಿ ಅದನ್ನು ಮಾರ್ಪಾಡು ಮಾಡಬೇಕೆಂದು, ದುರಸ್ತಿ ಮಾಡಬೇಕೆಂದು ಅಥವಾ ಸುಸ್ಥಿತಿಯಲ್ಲಿಡಬೇಕೆಂದು ಅಗತ್ಯಪಡಿಸಬಹುದು.

(2) ಈ ಅಧಿನಿಯಮವು ಜಾರಿಗೆ ಬರುವ ಮೊದಲು ಅಥವಾ ಅನಂತರ ನಿರ್ಮಿಸಲಾದ ಯಾವುದೇ ಶೌಚಗೃಹವು ಅಥವಾ ರೊಚ್ಚುಗುಂಡಿಯು, ಅಸಹ್ಯಕರವಾದ ರೀತಿಯಲ್ಲಿದೆ ಎಂದು ಅಥವಾ ಸ್ವಚ್ಛಗೊಳಿಸುವ ಉದ್ದೇಶಕ್ಕಾಗಿ ಅದರಲ್ಲಿ ಪ್ರವೇಶಿಸಲು ಅಥವಾ ಸುಸ್ಥಿತಿಯಲ್ಲಿಡಲು ಸಾಧ್ಯವಾಗದ ರೀತಿಯಲ್ಲಿ ಇದೆ ಎಂದು ಗ್ರಾಮ ಪಂಚಾಯತಿಯು ಅಭಿಪ್ರಾಯಪಟ್ಟರೆ, ಆ ಯಾವುದೇ ಶೌಚಗೃಹವನ್ನು ಅಥವಾ ರೊಚ್ಚುಗುಂಡಿಯನ್ನು, ಕೆಡವುವಂತೆ ಅಥವಾ ಮುಚ್ಚುವಂತೆ, ಅದರ ಮಾಲೀಕನನ್ನು ಗ್ರಾಮ ಪಂಚಾಯತಿಯು ಲಿಖಿತ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

**106. ಚರಂಡಿ ಮೊದಲಾದವುಗಳ ಪರಿವೀಕ್ಷಣೆ.-** (1) ಗ್ರಾಮ ಪಂಚಾಯತಿಯು ಅಥವಾ ಪರಿವೀಕ್ಷಣೆಯ ಉದ್ದೇಶಗಳಿಗಾಗಿ ನೇಮಕನಾದ ಯಾವನೇ ಅಧಿಕಾರಿಯು, ಯಾವುದೇ ಮೋರಿ, ಚರಂಡಿ, ಶೌಚಗೃಹ, ನೀರು ಹರಿಸಿ ಸ್ವಚ್ಛಗೊಳಿಸುವ ಶೌಚಗೃಹ, ಬಚ್ಚಲು ಮೋರಿ, ಅಥವಾ ರೊಚ್ಚುಗುಂಡಿಯನ್ನು ಪರಿವೀಕ್ಷಿಸಬಹುದು ಮತ್ತು ಆ ಉದ್ದೇಶಕ್ಕಾಗಿ, ಸೂರ್ಯೋದಯ ಮತ್ತು ಸೂರ್ಯಾಸ್ತಗಳ ನಡುವಿನ ಯಾವುದೇ ಕಾಲದಲ್ಲಿ, ತನ್ನ ಸಹಾಯಕರೊಡನೆ ಮತ್ತು ಕೆಲಸಗಾರರೊಡನೆ, ಯಾವುದೇ ಭೂಮಿ ಅಥವಾ ಕಟ್ಟಡಗಳನ್ನು ಪ್ರವೇಶಿಸಬಹುದು ಮತ್ತು ಅವನು ಅಥವಾ ಅದು ಸೂಕ್ತವೆಂದು ಭಾವಿಸುವಂಥ ಸ್ಥಳದಲ್ಲಿ ಹೆಚ್ಚು ಹಾನಿಯುಂಟಾಗದಂತೆ ಭೂಮಿಯನ್ನು ಅಗೆದು ತೆಗೆಯುವಂತೆ ಮಾಡಬಹುದು.

(2) ಅಂಥ ಪರಿವೀಕ್ಷಣೆಗೆ ಮತ್ತು ನೆಲವನ್ನು ಅಗೆದ ಸ್ಥಳವನ್ನು ಮುಚ್ಚಲು ಮತ್ತು ನೆಲವು ಮೊದಲಿನ ಸ್ಥಿತಿಯಲ್ಲಿ ಇರುವಂತೆ ಮಾಡುವ ಸಂಬಂಧದಲ್ಲಿ ತಗಲುವ ವೆಚ್ಚವನ್ನು, ಅಂಥ ಮೋರಿ, ಚರಂಡಿ, ಶೌಚಗೃಹ, ನೀರು ಹರಿಸಿ ಸ್ವಚ್ಛಗೊಳಿಸುವ ಶೌಚಗೃಹ, ಮನೆಯ ಬಚ್ಚಲು ಮೋರಿ, ಅಥವಾ ರೊಚ್ಚುಗುಂಡಿಯು ಸರಿಯಾದ ರೀತಿಯಲ್ಲಿ ಅಥವಾ ಸ್ಥಿತಿಯಲ್ಲಿ ಇಲ್ಲವೆಂದು ಕಂಡುಬಂದ ಹೊರತು, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಥವಾ ಗ್ರಾಮ ಪಂಚಾಯತಿಯ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ರಚಿಸಿದ ಸಂದರ್ಭಗಳಲ್ಲಿ ಹೊರತಾಗಿ, ಗ್ರಾಮ ಪಂಚಾಯತಿಯು ಸಂದಾಯ ಮಾಡತಕ್ಕದ್ದು ಮತ್ತು ಉಳಿದ ಸಂದರ್ಭಗಳಲ್ಲಿ ಅಂಥ ವೆಚ್ಚಗಳನ್ನು, ಅಂಥ ಮೋರಿ, ಚರಂಡಿ, ಶೌಚಗೃಹ, ನೀರು ಹರಿಸಿ ಸ್ವಚ್ಛಗೊಳಿಸುವ ಶೌಚಗೃಹ, ಮನೆಯ ಬಚ್ಚಲು ಮೋರಿ ಅಥವಾ ರೊಚ್ಚುಗುಂಡಿಯ ಮಾಲೀಕನು ಸಂದಾಯ ಮಾಡತಕ್ಕದ್ದು ಮತ್ತು ಗ್ರಾಮ ಪಂಚಾಯತಿಗೆ ಬಾಕಿಯಿದ್ದ ತೆರಿಗೆ, ಫೀಜುಗಳನ್ನು ವಸೂಲು ಮಾಡುವ ರೀತಿಯಲ್ಲಿ ಆ ವೆಚ್ಚಗಳನ್ನು ವಸೂಲು ಮಾಡತಕ್ಕದ್ದು.

**107. ಅಪಾಯಕಾರಿ ಕಲ್ಲು ಗಣಿ ಕೆಲಸ.-** ಯಾವುದೇ ಕಲ್ಲು ಗಣಿಯ ಕೆಲಸವು ಅಥವಾ ಯಾವುದೇ ಸ್ಥಳದಲ್ಲಿ ಭೂಮಿಯಿಂದ ಕಲ್ಲು, ಮಣ್ಣು ಅಥವಾ ಇತರ ವಸ್ತುಗಳನ್ನು ಸಾಗಿಸುವುದು, ಅದರ ನೆರೆಹೊರೆಯಲ್ಲಿ ವಾಸಿಸುವ ಜನರಿಗೆ ಅಥವಾ ಆ ಪ್ರದೇಶದಲ್ಲಿ ಪ್ರವೇಶಿಸಲು ಶಾಸನಬದ್ಧವಾಗಿ ಹಕ್ಕು ಇರುವ ವ್ಯಕ್ತಿಗಳಿಗೆ ಅಪಾಯಕರವಾಗಿದೆ ಎಂದು ಅಥವಾ ಉಪದ್ರವವನ್ನುಂಟು ಮಾಡುತ್ತಿದೆ ಎಂದು ಅಥವಾ ಉಪದ್ರವವನ್ನುಂಟು ಮಾಡುವ ಸಂಭವವಿದೆ ಎಂದು ಗ್ರಾಮ ಪಂಚಾಯತಿಯು ಅಭಿಪ್ರಾಯಪಟ್ಟರೆ, ಗ್ರಾಮ ಪಂಚಾಯತಿಯು, ಆ ಕಲ್ಲು ಗಣಿಯಿಂದ ಉಂಟಾಗುವ ಅಥವಾ ಉಂಟಾಗುವ ಸಂಭವವಿರುವ ಉಪದ್ರವವನ್ನು ನಿವಾರಿಸುವ ಅಥವಾ ಅಪಾಯಗಳನ್ನು ತಡೆಯುವ ಉದ್ದೇಶಕ್ಕಾಗಿ ಅಂಥ ಕಲ್ಲುಗಣಿಯ ಅಥವಾ ಸ್ಥಳದ ಸಂಬಂಧವಾಗಿ ಗ್ರಾಮ ಪಂಚಾಯತಿಯು ನಿರ್ದೇಶನ ನೀಡುವ ಹಾಗೆ ಕಲ್ಲುಗಣಿಯ ಅಥವಾ ಸ್ಥಳದ ಮಾಲೀಕನಿಗೆ ಅಥವಾ ಅಂಥ ಕೆಲಸದ ಅಥವಾ ಅದನ್ನು ತೆಗೆಯಲು ಹೊಣೆಗಾರರಾದ ವ್ಯಕ್ತಿಗಳಿಗೆ, ಅದನ್ನು ಮುಂದುವರಿಸಕೂಡದೆಂದು ಅಥವಾ ಅದಕ್ಕೆ ಅನುಮತಿ ಕೊಡಕೂಡದೆಂದು ಮತ್ತು ಅಂಥ ಕೆಲಸಕ್ಕೆ ಆದೇಶಗಳನ್ನು ತೆಗೆದುಕೊಳ್ಳಕೂಡದೆಂದು ಲಿಖಿತ ನೋಟೀಸಿನ ಮೂಲಕ ಅಗತ್ಯಪಡಿಸಬಹುದು:

ಪರಂತು, ಕಲ್ಲುಗಣಿಯು, ಅಥವಾ ಅಂಥ ಸ್ಥಳವು ಸರ್ಕಾರದಲ್ಲಿ ನಿಹಿತವಾಗಿದ್ದರೆ ಅಥವಾ ಅದರ ಮೇಲೆ ತಿಳಿಸಿದಂಥ ಕೆಲಸವನ್ನು ಅಥವಾ ತೆಗೆಯುವಿಕೆಯನ್ನು ಸರ್ಕಾರವು ಅಥವಾ ಅದರ ಪರವಾಗಿ ಅಥವಾ ಸರ್ಕಾರದ ಅನುಮತಿಯಿಂದ ಅಥವಾ ಸರ್ಕಾರವು ಅಧಿಕಾರ ನೀಡಿರುವ ಯಾವನೇ ವ್ಯಕ್ತಿ, ಅಥವಾ ಹಾಗೆ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಯಾವನೇ ಅಧಿಕಾರಿಯ ಅನುಮತಿ ಪಡೆದು ನಡೆಸಲಾಗುತ್ತಿದ್ದರೆ, ಗ್ರಾಮ ಪಂಚಾಯತಿಯು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರ ಅಥವಾ ಈ ಬಗ್ಗೆ ಅವರು ಅಧಿಕಾರ ನೀಡಿರುವ ಅದಿಕಾರಿಯ ಒಪ್ಪಿಗೆಯನ್ನು ಪಡೆಯದ ಹೊರತು, ಅಂಥ ಕ್ರಮ ಕೈಗೊಳ್ಳತಕ್ಕದ್ದಲ್ಲ:

ಅಷ್ಟೇ ಅಲ್ಲದೆ, ಈ ಪ್ರಕರಣದಲ್ಲಿ ತಿಳಿಸಿದ ಯಾವುದೇ ಸಂದರ್ಭದಲ್ಲಿ, ಆ ಕೂಡಲೇ ಸಂಭವವಿರುವ ಅಪಾಯವನ್ನು ತಡೆಗಟ್ಟಲು, ಗ್ರಾಮ ಪಂಚಾಯತಿಯು ಅಂಥ ಕಲ್ಲುಗಣಿಯ ಅಥವಾ ಸ್ಥಳದ ಸಮೀಪದಲ್ಲಿ ಹಾಯ್ದು ಹೋಗುವವರ ರಕ್ಷಣೆಗಾಗಿ ಸೂಕ್ತ ರೀತಿಯಲ್ಲಿ ಬೇಲಿ ಅಥವಾ ತಂತಿ ಬೇಲಿಯನ್ನು ಸುತ್ತಲೂ ಹಾಕುವುದು ಅವಶ್ಯವೆಂದು ಅಬಿಪ್ರಾಯಪಟ್ಟರೆ, ಆ ಕೂಡಲೇ ಆ ಬಗ್ಗೆ ಕ್ರಮಕೈಗೊಳ್ಳತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಆ ಬಗ್ಗೆ ಕ್ರಮಕೈಗೊಳ್ಳುವ ಸಂಬಂಧದಲ್ಲಿ ಗ್ರಾಮ ಪಂಚಾಯತಿಯು ವಹಿಸಿದ ವೆಚ್ಚಗಳನ್ನು ಮೇಲೆ ಹೇಳಿದ ಮಾಲೀಕನು ಅಥವಾ ಇತರ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು ಗ್ರಾಮ ಪಂಚಾಯತಿಗೆ ಬಾಕಿ ಇದ್ದ ಯಾವುದೇ ತೆರಿಗೆಯ ನಿಮಿತ್ತ ಕ್ಲೇಮು ಮಾಡಿದ ಮೊಬಲಗಿನಂತೆ ಅದೇ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.

**108. ಅಸಹ್ಯಕರ ಪದಾರ್ಥ ಇತ್ಯಾದಿಗಳನ್ನು ಉಪಯೋಗಿಸುವುದು.**- ಗ್ರಾಮ ಪಂಚಾಯತಿಯ ಲಿಖಿತ ಅನುಮತಿಯ ಹೊರತಾಗಿ, ಮತ್ತು ಅಂಥ ಅನುಮತಿಯಲ್ಲಿ ಯಾವುದೇ ರೀತಿಯನ್ನು ತಿಳಿಸಿದ್ದರೆ ಅದರ ಹೊರತಾಗಿ, ಜಾನುವಾರು ಗೊಬ್ಬರದ ಹೊರತಾಗಿ, ಅಸಹ್ಯಕರವಾದ ವಾಸನೆಯಿಂದ ಕೂಡಿದ ಮಲವನ್ನು ಅಥವಾ ಇತರ ಪದಾರ್ಥವನ್ನು ಸಂಗ್ರಹಿಸುವ ಅಥವಾ ಉಪಯೋಗಿಸುವ ಯಾವನೇ ವ್ಯಕ್ತಿಯು, ಅಪರಾಧ ರುಜುವಾತಾದ ತರುವಾಯ, ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**109. ಹೊಗೆ ಹೊರಸೂಸುವಿಕೆ.**- (1) ಗ್ರಾಮ ಪಂಚಾಯತಿಯ ಪರಿಮಿತಿಯೊಳಗೆ ಯಾವುದೇ ವ್ಯಾಪಾರದ ಅಥವಾ ಯಾವುದೇ ತಯಾರಿಕೆಯ ಉದ್ದೇಶಕ್ಕಾಗಿ ಬಳಸುವ ಯಾವುದೇ ಕಾಮಗಾರಿಯಲ್ಲಿ ಅಥವಾ ಕಟ್ಟಡದಲ್ಲಿ ಅಳವಡಿಸಿರುವ ಅಥವಾ ಅಳವಡಿಸಿಕೊಳ್ಳುವ ಪ್ರತಿಯೊಂದು ಕುಲುಮೆಯನ್ನು, ಅದರಲ್ಲಿ ಉಗಿಯಂತ್ರವನ್ನು ಬಳಸಿರಲಿ ಅಥವಾ ಇಲ್ಲದಿರಲಿ ಅಥವಾ ಅಳವಡಿಸಿರಲಿ ಅಥವಾ ಇಲ್ಲದಿರಲಿ, ಎಲ್ಲ ಸಂದರ್ಭಗಳಲ್ಲಿಯೂ ಅಂಥ ಕುಲುಮೆಯಿಂದ ಹೊರಬರುವ ಹೊಗೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಆ ಉಗಿಯಂತ್ರವು ನಾಶ ಮಾಡುವ ಹಾಗೆ ಅಥವಾ ಸುಡುವ ಅಥವಾ ಕಡಿಮೆ ಮಾಡುವ ಹಾಗೆ ಅದನ್ನು ನಿರ್ಮಿಸತಕ್ಕದ್ದೆಂದು, ಅದಕ್ಕೆ ಪೂರಕವಾಗಿ ಬೇರೇನನ್ನಾದರೂ ನಿರ್ಮಿಸತಕ್ಕದ್ದೆಂದು ಅಥವಾ ಅದನ್ನು ಮಾರ್ಪಡಿಸತಕ್ಕದ್ದೆಂದು ಸಾರ್ವಜನಿಕ ನೋಟೀಸು ನೀಡುವ ಮೂಲಕ ಗ್ರಾಮ ಪಂಚಾಯತಿಯು ನಿರ್ದೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

(2) ಅಂಥ ನಿರ್ದೇಶನವನ್ನು ನೀಡಿದ ತರುವಾಯ ಯಾವನೇ ವ್ಯಕ್ತಿಯು, ಹಾಗೆ ನಿರ್ಮಿಸಿರದ, ಅದಕ್ಕೆ ಪೂರಕವಾಗಿ ನಿರ್ಮಿಸಿರದ ಅಥವಾ ಮಾರ್ಪಾಟುಗೊಳಿಸದ ಯಾವುದೇ ಅಂಥ ಕುಲುಮೆಯನ್ನು ಉಪಯೋಗಿಸಿದರೆ ಅಥವಾ ಉಪಯೋಗಿಸಲು ಅನುಮತಿ ನೀಡಿದರೆ ಅಥವಾ ಕುಲುಮೆಯಿಂದ ಹೊರ ಬರುವ ಹೊಗೆಯನ್ನು ಸಾಧ್ಯವಾದಷ್ಟುಮಟ್ಟಿಗಾದರೂ ಪರಿಣಾಮಕಾರಿಯಾಗುವಂತೆ ನಾಶಮಾಡದ ಅಥವಾ ಸುಡದ ಯಾವುದೇ ಅಂಥ ಕುಲುಮೆಯನ್ನು ನಿರ್ಲಕ್ಷ್ಯದಿಂದ ಉಪಯೋಗಿಸಿದರೆ ಅಥವಾ ಉಪಯೋಗಿಸಲು ಅನುಮತಿ ನೀಡಿದರೆ ಸದರಿ ಕಾಮಗಾರಿ ಅಥವಾ ಕಟ್ಟಡಗಳ ಮಾಲೀಕ ಅಥವಾ ಅನುಭವದಾರ ಅಥವಾ ಅಂಥ ಕಾಮಗಾರಿ ಅಥವಾ ಕಟ್ಟಡಗಳ ನಿರ್ವಹಣೆಯ ಉಸ್ತುವಾರಿ ನೋಡಿಕೊಳ್ಳಲು ಅಂಥ ಮಾಲೀಕನಿಂದ ಅಥವಾ ಅನುಭವದಾರನಿಂದ ನೇಮಕಗೊಂಡ ಏಜೆಂಟ್ ಅಥವಾ ಇತರ ವ್ಯಕ್ತಿಗಳ ಪೈಕಿ ನಿರ್ದೇಶನವನ್ನು ಉಲ್ಲಂಘಿಸುವ ಪ್ರತಿಯೊಬ್ಬ ವ್ಯಕ್ತಿಯೂ, ಅಪರಾಧ ರುಜುವಾತಾದ ಮೇಲೆ ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಯಾವುದೇ ತರುವಾಯದ ಅಪರಾಧಕ್ಕೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಯಾವುದೇ ರೈಲು ಮಾರ್ಗದ ಮೇಲೆ ಸಂಚಾರದ ಉದ್ದೇಶಕ್ಕಾಗಿ ಅಥವಾ ರಸ್ತೆಗಳ ರಿಪೇರಿಗಾಗಿ ಉಪಯೋಗಿಸುವ ಸಂಚಾರಿ ಯಂತ್ರಗಳಿಗೆ ಅನ್ವಯಿಸತಕ್ಕದ್ದಲ್ಲ.

**110. ಉಪದ್ರವಕಾರಿ ಕೆಲಸಗಳ ನಿಷೇಧ.**-ಯಾವನೇ ವ್ಯಕ್ತಿ, ಗ್ರಾಮ ಪಂಚಾಯತಿ ಪ್ರದೇಶದೊಳಗಿನ,-

(ಎ) ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ,-

(i) ಮಲ ಮೂತ್ರ ವಿಸರ್ಜಿಸಿದರೆ; ಅಥವಾ

(ii) ಬಿಕ್ಷೆಗಾಗಿ ಅಲ್ಲಲ್ಲಿ ಸುತ್ತುತ್ತಿದ್ದರೆ ಅಥವಾ ಒತ್ತಾಯಪೂರ್ವಕವಾಗಿ ಬೇಡುತ್ತಿದ್ದರೆ; ಅಥವಾ

(iii) ಅನುಕಂಪ ಪಡೆಯುವ ಉದ್ದೇಶದಿಂದ ಯಾವುದೇ ಕುರೂಪತನವನ್ನು ಅಥವಾ ಕಾಯಿಲೆಯನ್ನು ಅಥವಾ ಯಾವುದೇ ಅಸಹ್ಯಕರ ಹುಣ್ಣು ಅಥವಾ ಗಾಯವನ್ನು ಪ್ರದರ್ಶಿಸಿದರೆ ಅಥವಾ ತೋರಿಸಿದರೆ; ಅಥವಾ

(iv) ಸಾರ್ವಜನಿಕರ ದೃಷ್ಟಿಗೆ ಬೀಳುವ ಹಾಗೆ ಮಾಂಸವನ್ನು ಒಯ್ದರೆ; ಅಥವಾ

(v) ಸೂಕ್ತ ಪ್ರಾಧಿಕಾರಿಯ ಅನುಮತಿಯಿಲ್ಲದೆ ಗೂಟ ಹೊಡೆದು ದನಕರುಗಳನ್ನು ಅವುಗಳಿಗೆ ಕಟ್ಟಿದರೆ ಅಥವಾ ಗಾಡಿಗಳನ್ನು ಒಂದು ಕಡೆ ನಿಲ್ಲಿಸಿದರೆ; ಅಥವಾ

(vi) ಸೂಕ್ತ ಪ್ರಾಧಿಕಾರಿಯ ಅನುಮತಿಯಿಲ್ಲದೆ ಯಾವುದೇ ಕಟ್ಟಡ, ಸ್ಮಾರಕ, ಅಂಚೆ ಕಛೇರಿ, ಗೋಡೆ, ಬೇಲಿ, ಮರ ಅಥವಾ ಇತರ ವಸ್ತುವಿನ ಮೇಲೆ ಯಾವುದೇ ಬಿಲ್, ನೋಟೀಸ್, ಅಥವಾ ಇತರ ದಸ್ತಾವೇಜನ್ನು ಅಂಟಿಸಿದರೆ; ಅಥವಾ

(vii) ಸೂಕ್ತ ಪ್ರಾಧಿಕಾರಿಯ ಅನುಮತಿಯಿಲ್ಲದೆ ಯಾವುದೇ ಕಟ್ಟಡ, ಸ್ಮಾರಕ, ಕಂಬ, ಗೋಡೆ, ಬೇಲಿ, ಮರ ಅಥವಾ ಇತರ ವಸ್ತುವನ್ನು ವಿರೂಪಗೊಳಿಸಿದರೆ ಅಥವಾ ಅದರ ಮೇಲೆ ಬರೆದರೆ ಅಥವಾ ಅನ್ಯಥಾ ಗುರುತು ಮಾಡಿದರೆ; ಅಥವಾ

(viii) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಅಥವಾ ಉಪವಿಧಿಗಳ ಅಡಿಯಲ್ಲಿ ಹಾಕಿದ ಅಥವಾ ಪ್ರದರ್ಶಿಸಿದ ಯಾವುದೇ ನೋಟೀಸನ್ನು ಅಥವಾ ಇತರ ದಸ್ತಾವೇಜನ್ನು ಸೂಕ್ತ ಪ್ರಾಧಿಕಾರಿಯ ಅನುಮತಿಯಿಲ್ಲದೆ ತೆಗೆದು ಹಾಕಿದರೆ, ನಾಶಪಡಿಸಿದರೆ, ವಿರೂಪಗೊಳಿಸಿದರೆ ಅಥವಾ ಅನ್ಯಥಾ ಅಳಿಸಿ ಹಾಕಿದರೆ; ಅಥವಾ

(ಬಿ) ಸಾರ್ವಜನಿಕ ಅಥವಾ ವಿಶೇಷ ನೋಟೀಸ್ ಮೂಲಕ ಗ್ರಾಮ ಪಂಚಾಯತಿಯು ನಿಷೇಧಿಸಿರುವ ಸಮಯದಲ್ಲಿ ಅಥವಾ ಸ್ಥಳದಲ್ಲಿ ಯಾವುದೇ ಡೋಲು ಅಥವಾ ಡಂಗುರ ಬಡಿದರೆ ಅಥವಾ ಕೊಂಬು ಅಥವಾ ಕಹಳೆ ಊದಿದರೆ ಅಥವಾ ಯಾವುದೇ ಪಾತ್ರೆ ಬಾರಿಸಿದರೆ ಅಥವಾ ಯಾವುದೇ ಕಂಚಿನ ವಸ್ತು ಅಥವಾ ಇತರ ವಸ್ತುವಿನಿಂದ ಸಪ್ಪಳ ಮಾಡಿದರೆ ಅಥವಾ ಯಾವುದೇ ಸಂಗೀತ ನುಡಿಸಿದರೆ; ಅಥವಾ

(ಸಿ) ಸೂಕ್ತ ಪ್ರಾಧಿಕಾರಿಯ ಅನುಮತಿಯಿಲ್ಲದೆ ಹಾಡುವ, ಕಿರುಚುವ ಅಥವಾ ಕೂಗುವ ಮೂಲಕ ಅಥವಾ ಮನುಷ್ಯರ ಧ್ವನಿಯನ್ನು ವರ್ಧಿಸುವ ಅಥವಾ ಪ್ರತಿಧ್ವನಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕಗಳಂತಹ ಯಾವುದೇ ಸಲಕರಣೆಯನ್ನು ಉಪಯೋಗಿಸಿ ಸಾರ್ವಜನಿಕ ಶಾಂತಿ ಅಥವಾ ಸುವ್ಯವಸ್ಥೆಯನ್ನು ಕದಡಿದರೆ; ಅಥವಾ

(ಡಿ) ಯಾವುನೇ ವ್ಯಕ್ತಿಗೆ ಗಾಯ, ಆಪತ್ತು, ಭಯ ಅಥವಾ ಕಿರುಕುಳವನ್ನುಂಟು ಮಾಡುವಂತೆ ಯಾವುದೇ ಪ್ರಾಣಿಯನ್ನು ಛೂಬಿಟ್ಟರೆ ಅಥವಾ ನಿರ್ಲಕ್ಷ್ಯದಿಂದ ಯಾವುದೇ ಪ್ರಾಣಿಯು ಹಾಗೆ ಮಾಡಲು ಅವಕಾಶ ಮಾಡಿಕೊಟ್ಟರೆ; ಅಥವಾ

(ಇ) ಶೌಚ ಮಾಡುವ ಉದ್ದೇಶಕ್ಕಾಗಿ ಇರದ ಯಾವುದೇ ಸ್ಥಳವನ್ನು ಶೌಚಗೃಹವಾಗಿ ಉಪಯೋಗಿಸಿದರೆ ಅಥವಾ ಉಪಯೋಗಿಸಲು ಅನುಮತಿ ನೀಡಿದರೆ,

-ಅವನು, [1][ಗ್ರಾಮ ಪಂಚಾಯತ್‌ಗೆ ಐದು ನೂರು ರೂಪಾಯಿಗಳ ಆಡಳಿತಾತ್ಮಕ ವೆಚ್ಚವನ್ನು ಸಂದಾಯ ಮಾಡತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

## [1][ಅಧ್ಯಾಯ IV ಎ

## ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

**110ಎ. ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು.**-ಪಂಚಾಯತ್‌ನ ಪ್ರತಿಯೊಬ್ಬ ಸದಸ್ಯನು ಈ ಮುಂದಿನ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಪಂಚಾಯಿತಿಯ ಪ್ರತಿಯೊಂದು ವರ್ಗ ಮತ್ತು ಸ್ಥಳೀಯ ಮತದಾನ ಕ್ಷೇತ್ರಗಳ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವುದು;

(ಬಿ) ಪಂಚಾಯಿತಿಯ ನಿವಾಸಿಯು ಮಾಡಿದ ವಿಚಾರಣೆಗಳಿಗೆ ಮತ್ತು ಮನವಿಗಳಿಗೆ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ಪ್ರತಿಕ್ರಿಯಿಸುವುದು;

(ಸಿ) ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸುವ ಮೂಲಕ ಸಮುದಾಯ ಮುಂದಾಳತ್ವವನ್ನು ಕಲ್ಪಿಸುವುದು;

(ಡಿ) ನಡತೆ ಮತ್ತು ನೈತಿಕತೆಯ ಗರಿಷ್ಠ ಗುಣಮಟ್ಟವನ್ನು ನಿರ್ವಹಿಸುವುದು;

(ಇ) ಸಾರ್ವಜನಿಕ ಹಿತಾಸಕ್ತಿಯಲ್ಲಿ ಮಾತ್ರವೇ ಸೇವೆ ಮಾಡುವುದು ಮತ್ತು ಯಾವುದೇ ವ್ಯಕ್ತಿಯ ಅನುಕೂಲ ಅಥವಾ ಅನಾನುಕೂಲವನ್ನು ಪ್ರದಾನ ಮಾಡುವಲ್ಲಿ ಬೇಧಭಾವ ತೋರಿಸಬಾರದು;

(ಎಫ್) ಯಾವುದೇ ವ್ಯಕ್ತಿಯ ವಿರುದ್ಧ ಬೇಧಭಾವ ತೋರದೇ ಸಮಾನತೆಯನ್ನು ಪ್ರೋತ್ಸಾಹಿಸುವುದು ಮತ್ತು ಅವರ ಮತ, ವಯಸ್ಸು, ಧರ್ಮ, ಲಿಂಗ ಅಥವಾ ಅಸಮರ್ಥತೆಯನ್ನು ಪರಿಗಣಿಸದೆ (regardless) ಅವರನ್ನು ಗೌರವದಿಂದ ಕಾಣುವುದು;

(ಜಿ) ಜನರಿಗೆ ಅವರು ಅರ್ಹನಾಗಿರುವ ಮಾಹಿತಿಯನ್ನು ಪಡೆಯುವುದಕ್ಕೆ ಅವಕಾಶವನ್ನು ಕಲ್ಪಿಸುವುದು;

(ಎಚ್) ಯಾವುದೇ ವಿಷಯದಲ್ಲಿ ಆತನು ಹಣಕಾಸಿನ (pecuniary) ಆಸಕ್ತಿಯನ್ನು ಹೊಂದಿರುವಾಗ ಆತನನ್ನು ಯಾವುದೇ ಚರ್ಚೆ ಅಥವಾ ಮತದಾನದಲ್ಲಿ ಭಾಗವಹಿಸುವುದರಿಂದ ಅಂಥ ವಿಷಯದ ಪರಿಗಣನೆಯಲ್ಲಿ ಸಭೆಯಿಂದ ಹಿಂತೆಗೆದುಕೊಳ್ಳುವಲ್ಲಿ ಸ್ವಯಂ ನಿಯಂತ್ರಣ ಹೊಂದುವುದು;

(ಐ) ಆದ್ಯತೆಗಳು ಮತ್ತು ಗುರಿಗಳನ್ನು ಸಾಧಿಸುವಲ್ಲಿ ಪಂಚಾಯತ್‌ನ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸುವುದು.

(ಜೆ) ಸರ್ಕಾರವು ಮಾಡಿದ ಆದ್ಯತೆಗಳನ್ನು ನಿರ್ವಹಿಸುವುದು ಮತ್ತು ಸ್ಥಳೀಯ ಸಂದರ್ಭದಲ್ಲಿ ಆ ಆದ್ಯತೆಗಳನ್ನು ಎಷ್ಟು ಅತ್ಯುತ್ತಮವಾಗಿ ನೀಡಬಹುದು ಎಂಬುದನ್ನು ತೀರ್ಮಾನಿಸುವುದು;

(ಕೆ) ಪ್ರದೇಶದ ಉತ್ತಮ ಆಡಳಿತದಲ್ಲಿ ಭಾಗವಹಿಸುವುದು ಮತ್ತು ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಪಂಚಾಯಿತಿ ನಿವಾಸಿಗಳ ಪಾಲ್ಗೊಳ್ಳುವಿಕೆಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವುದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

## ಅಧ್ಯಾಯ V

## ಗ್ರಾಮ ಪಂಚಾಯತಿಗಳ ಸಿಬ್ಬಂದಿ [1][ಮತ್ತು ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆ][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

[2][[1][**111. ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಇತರ ಅಧಿಕಾರಿಗಳು**][2].- [3][(1) ಪ್ರತಿಯೊಂದು ಗ್ರಾಮ ಪಂಚಾಯತಿಯು, ಸರ್ಕಾರದ ಅಧಿಕಾರಿಗಳಾಗಿರುವ ಒಬ್ಬರು ಪೂರ್ಣಕಾಲಿಕ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಯನ್ನು ಮತ್ತು ಸರ್ಕಾರವು ನೇಮಕ ಮಾಡಿದ ಅಂಥ ಇತರ ನೌಕರರನ್ನು ಹೊಂದಿರತಕ್ಕದ್ದು ಮತ್ತು ಅವರು ತಮ್ಮ ವೇತನ ಮತ್ತು ಭತ್ಯೆಗಳನ್ನು ಸರ್ಕಾರವು ಗ್ರಾಮ ಪಂಚಾಯತಿ ನಿಧಿಗೆ ಅವುಗಳನ್ನು ಜಮೆ ಮಾಡಿದ ತರುವಾಯ ಆ ಗ್ರಾಮ ಪಂಚಾಯತಿ ನಿಧಿಯಿಂದ ಪಡೆದುಕೊಳ್ಳತಕ್ಕದ್ದು.][3]

(2) [2][ಪಂಚಾಯತಿ ಅಭಿವೃದ್ಧಿ ಅಧಿಕಾರಿಯು,][2] ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳ ಅಥವಾ ಉಪ ವಿಧಿಗಳ ಮೂಲಕ ಅಥವಾ ಅಡಿಯಲ್ಲಿ ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಅಥವಾ ಪ್ರದಾನ ಮಾಡಲಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿಯ ಉಪಬಂಧಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ, [2][ಪಂಚಾಯತಿ ಅಭಿವೃದ್ಧಿ ಅಧಿಕಾರಿಯು,][2] ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಗ್ರಾಮ ಪಂಚಾಯತಿಯ ಮಾಸಿಕ ಲೆಕ್ಕ ಪತ್ರಗಳನ್ನು ಮುಂಬರುವ ತಿಂಗಳ ಹತ್ತನೇ ದಿನಾಂಕದ ಒಳಗೆ ಗ್ರಾಮ ಪಂಚಾಯತಿಗೆ ಸಲ್ಲಿಸುವುದು;

(ಬಿ) ಸರ್ಕಾರವು ಅಥವಾ ಲೆಕ್ಕ ಪರಿಶೋಧಕರು ಕೋರುವ ವಿವರಣಾ ಪಟ್ಟಿಕೆಗಳು, ಲೆಕ್ಕ ಪತ್ರಗಳ ವಿವರಣ ಪಟ್ಟಿಗಳು ಹಾಗೂ ಅಂತಹ ಇತರ ಮಾಹಿತಿಯನ್ನು ಸಲ್ಲಿಸುವುದು;

[3][ಕಾರ್ಯದರ್ಶಿ ಮತ್ತು ಇತರ ನೌಕರರು ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಆತನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ನೆರವಾಗತಕ್ಕದ್ದು.][3]

(ಸಿ) ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಸಂಸ್ಥೆಗಳ ಲೆಕ್ಕ ಪತ್ರಗಳನ್ನು ಪರೀಕ್ಷಿಸುವುದು ಅಥವಾ ಪರೀಕ್ಷಿಸುವಂತೆ ಮಾಡುವುದು;

(ಡಿ) ಗ್ರಾಮ ಪಂಚಾಯತಿಯ, ಸ್ಥಾಯಿ ಸಮಿತಿಗಳ ಮತ್ತು ಇತರ ಸಮಿತಿಗಳ, ಗ್ರಾಮ ಸಭೆಯ ಹಾಗೂ ವಾರ್ಡ್ ಸಭೆಯ ದಾಖಲೆಗಳನ್ನು ಇಡುವುದು;

(ಇ) ಅನುಮೋದಿತ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿಗೆ ಸಕಾಲದಲ್ಲಿ ಸಲ್ಲಿಸಲು ಅನುವಾಗುವಂತೆ, ವಾರ್ಷಿಕ ಯೋಜನೆ ಹಾಗೂ ಪಂಚವಾರ್ಷಿಕ ಯೋಜನೆಯ ತಯಾರಿಕೆಯಲ್ಲಿ ಸಮನ್ವಯವನ್ನು ಸಾಧಿಸುವುದು;

(ಎಫ್)ಗ್ರಾಮ ಪಂಚಾಯತಿ ಮತ್ತು ಯೋಜನಾ ನಿಧಿಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಹಂಚಿಕೆ ಮಾಡುವುದು ಮತ್ತು ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಬಳಕೆ ಪ್ರಮಾಣ ಪತ್ರವನ್ನು ಒದಗಿಸುವುದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.

**112. ಸಿಬ್ಬಂದಿ ಸ್ವರೂಪ ಮತ್ತು ಉದ್ಯೋಗಿಗಳ ಪಟ್ಟಿ.-** (1) ಸರ್ಕಾರವು, ಆದೇಶದ ಮೂಲಕ, ಗ್ರಾಮ ಪಂಚಾಯತಿಗಳ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು ಮತ್ತು ನೇಮಕಾತಿ ವಿಧಾನವನ್ನು ನಿರ್ದಿಷ್ಟಪಡಿಸಬಹುದು.

(2) (1)ನೆಯ ಉಪಪ್ರಕರಣಕ್ಕೆ ಒಳಪಟ್ಟು, ಗ್ರಾಮ ಪಂಚಾಯತಿಯು [1][ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕನನ್ನು] [1] ಹೊರತುಪಡಿಸಿ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಗ್ರಾಮ ಪಂಚಾಯತಿಗೆ ವಿಧಿಸಿರುವ ಕರ್ತವ್ಯಗಳನ್ನು ನೆರವೇರಿಸಲು ಅಗತ್ಯವಾದ ತನ್ನ ಅಧಿಕಾರಿಗಳ ಪದನಾಮ ಮತ್ತು ದರ್ಜೆಗಳು ಮತ್ತು ಅವರಿಗೆ ಸಂದಾಯವಾಗತಕ್ಕ ವೇತನಗಳು ಮತ್ತು ಭತ್ಯೆಗಳನ್ನು ನಮೂದಿಸಿ, ಉದ್ಯೋಗಿಗಳ ಒಂದು ಪಟ್ಟಿಯನ್ನು ನಿರ್ಧರಿಸತಕ್ಕದ್ದು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಅನುಮೋದನೆಗಾಗಿ ಅದನ್ನು ಸಲ್ಲಿಸತಕ್ಕದ್ದು.

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.

**113. ನೌಕರರ ನೇಮಕಾತಿ ಮತ್ತು ನಿಯಂತ್ರಣ.-** (1) 111ನೇ ಮತ್ತು 112ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಗ್ರಾಮ ಪಂಚಾಯತಿಯು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪೂರ್ವಾನುಮೋದನೆಯೊಂದಿಗೆ ಗ್ರಾಮ ಪಂಚಾಯತಿಯ ಇತರ ನೌಕರರನ್ನು ನೇಮಕ ಮಾಡಿಕೊಳ್ಳಬಹುದು ಮತ್ತು ಗ್ರಾಮ ಪಂಚಾಯತಿ ನಿಧಿಯಿಂದ ಅವರ ಸಂಬಳಗಳನ್ನು ಸಂದಾಯ ಮಾಡಬಹುದು:

ಪರಂತು, ನೇಮಕಾತಿಗಳನ್ನು ಮಾಡುವಾಗ ನೇಮಕಾತಿ ಪ್ರಾಧಿಕಾರಿಯು, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇಮಕಾತಿಗೆ ಅನ್ವಯವಾಗುವಂಥ ರೀತಿಯಲ್ಲಿಯೇ ಮತ್ತು ಅದೇ ಪ್ರಮಾಣದಲ್ಲಿಯೇ, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಇತರ ವರ್ಗಗಳ ನಾಗರಿಕರಿಗೆ ಹುದ್ದೆಗಳನ್ನು ಮೀಸಲಿರಿಸತಕ್ಕದ್ದು.

(2) [2][ಪಂಚಾಯತಿ ಅಭಿವೃದ್ಧಿ ಅಧಿಕಾರಿಯು,][2] ಆದೇಶದ ಮೂಲಕ ಗ್ರಾಮ ಪಂಚಾಯತಿಯು ನೇಮಕ ಮಾಡಿಕೊಂಡ ಯಾವನೇ ನೌಕರನಿಗೆ ದಂಡ ವಿಧಿಸಬಹುದು, [1][xxx][1] ಅಥವಾ ಅವನ ವಾರ್ಷಿಕ ಬಡ್ತಿಯನ್ನು ತಡೆಹಿಡಿಯಬಹುದು.

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಬಿಟ್ಟುಬಿಡಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.

(3) ಗ್ರಾಮ ಪಂಚಾಯತಿಯು, ತಾನು ನೇಮಕ ಮಾಡಿದ ಯಾರೇ ನೌಕರರನ್ನು, ದರ್ಜೆಯಲ್ಲಿ ಇಳಿಸಬಹುದು, ಕೆಲಸದಿಂದ ತೆಗೆದುಹಾಕಬಹುದು ಅಥವಾ ವಜಾ ಮಾಡಬಹುದು.

(4) (2)ನೇ ಉಪ-ಪ್ರಕರಣದ ಅಡಿಯಲ್ಲಿ [2][ಪಂಚಾಯತಿ ಅಭಿವೃದ್ಧಿ ಅಧಿಕಾರಿಯು][2] ಮಾಡಿದ ಆದೇಶದ ವಿರುದ್ಧ ಕಾರ್ಯನಿರ್ವಾಹಕ ಅಧಿಕಾರಿಗೆ ಮತ್ತು (3)ನೇ ಉಪ-ಪ್ರಕರಣದ ಅಡಿಯಲ್ಲಿ ಗ್ರಾಮ ಪಂಚಾಯತಿಯು ಮಾಡಿದ ಆದೇಶದ ವಿರುದ್ಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಪೀಲು ಮಾಡಿಕೊಳ್ಳುವ ಅವಕಾಶ ಇರತಕ್ಕದ್ದು [1][xxx][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಬಿಟ್ಟುಬಿಡಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.

(5) 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮವು, ಜಾರಿಗೆ ಬರುವ ದಿನಾಂಕದಂದು ಮಂಡಲ ಪಂಚಾಯತಿಯ ಅಥವಾ ಜಿಲ್ಲಾ ಪರಿಷತ್ತಿನ ಮುಂದೆ ಬಾಕಿ ಇರುವ (4)ನೇ ಉಪಪ್ರಕರಣದ ಅಡಿಯ ಯಾವುದೇ ಅಪೀಲು ಅನುಕ್ರಮವಾಗಿ ಕಾರ್ಯನಿರ್ವಾಹಕ ಅಧಿಕಾರಿಗೆ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ವರ್ಗಾಯಿಸಲ್ಪಡತಕ್ಕದ್ದು ಮತ್ತು ಅಂಥ ಅಪೀಲನ್ನು ತಮಗೇ ಸಲ್ಲಿಸಿದುದು ಎಂಬಂತೆ ಅವರು ನಿರ್ಣಯಿಸತಕ್ಕದ್ದು.

[1]**[113ಎ. ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿಯ ವ್ಯವಸ್ಥೆ.-** (1) ಸರ್ಕಾರವು ಅಗತ್ಯವಿದ್ದಲ್ಲಿ, ಇಂಜಿನಿಯರಿಂಗ್ ಅಥವಾ ತಾಂತ್ರಿಕ ಸಿಬ್ಬಂದಿಯನ್ನು ಒಳಗೊಂಡಂತೆ ರಾಜ್ಯ ಸಿವಿಲ್ ಸೇವೆಗಳ ಅಧಿಕಾರಿಗಳು ಮತ್ತು ನೌಕರರನ್ನು ಒಟ್ಟುಗೂಡಿಸಬಹುದು ಮತ್ತು ಅವರನ್ನು ಒಂದು ಅಥವಾ ಹೆಚ್ಚು ಗ್ರಾಮ ಪಂಚಾಯಿತಿಗಳಿಗೆ ನಿಯೋಜಿಸಬಹುದು:

1. 113ಎ ಪ್ರಕರಣವನ್ನು ಉಪಪ್ರಕರಣ (1) ರಿಂದ (4)ರ 2003ರ ಅಧಿನಿಯಮ ಸಂಖ್ಯೆ:37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಅಂಥ ನಿಯೋಜನೆಗೆ ಅಧಿಕಾರಿಗಳ ಅಥವಾ ನೌಕರರ ಕೊರತೆ ಇದ್ದಲ್ಲಿ, ಗ್ರಾಮ ಪಂಚಾಯತಿಯು, ಸೇವೆಯ ತುರ್ತು ಸಂದರ್ಭದಲ್ಲಿ ನಿರ್ದಿಷ್ಟ ಕಾಮಗಾರಿಗಾಗಿ ರಾಜ್ಯ ಸಿವಿಲ್ ಸೇವೆಗಳಿಗೆ ಸೇರಿಲ್ಲದ ಇಂಜಿನಿಯರುಗಳನ್ನು ಒಳಗೊಂಡಂತೆ ತಾಂತ್ರಿಕ ಸಿಬ್ಬಂದಿಯ ಸೇವೆಗಳನ್ನು ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಷರತ್ತುಗಳು ಮತ್ತು ನಿಬಂಧನೆಗಳ ಮೇಲೆ ಬಳಸಿಕೊಳ್ಳಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಗ್ರಾಮ ಪಂಚಾಯತಿಗೆ ನಿಯೋಜಿಸಲಾದ ಅಧಿಕಾರಿಗಳು ಮತ್ತು ನೌಕರರು ಅವರು ಆ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ನೌಕರರಾಗಿದ್ದರೆ ಹೇಗೋ ಹಾಗೆ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಹಾಗೂ ಅವರು ತಮ್ಮ ಸಾಮಾನ್ಯ ಕರ್ತವ್ಯಗಳಿಗೆ ಹೆಚ್ಚುವರಿಯಾಗಿ, ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳು ಯಾವುದಾದರೂ ಇದ್ದಲ್ಲಿ ಅವುಗಳಿಗೆ ಒಳಪಟ್ಟು, ಗ್ರಾಮ ಪಂಚಾಯತಿಯಿಂದ ಅವರಿಗೆ ವಹಿಸಲಾದ ಯಾವುದೇ ಇತರ ಕರ್ತವ್ಯವನ್ನು ನಿರ್ವಹಿಸತಕ್ಕದ್ದು.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಗ್ರಾಮ ಪಂಚಾಯತಿಗೆ ನಿಯೋಜಿಸಲಾದ ಅಧಿಕಾರಿಗಳು ಹಾಗೂ ನೌಕರರು ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಗ್ರಾಮ ಪಂಚಾಯತಿಗೆ ವಹಿಸಿರದ, ಸರ್ಕಾರದ ಯಾವುದೇ ಸ್ಕೀಮು, ಪ್ರಾಜೆಕ್ಟ್ ಅಥವಾ ಯೋಜನೆಯ ಅನುಷ್ಠಾನವನ್ನು ಒಳಗೊಂಡಿರುವ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು, ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಅಥವಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(4) ಸರ್ಕಾರವು, (1)ನೇ ಉಪ ಪ್ರಕರಣದ ಅಡಿಯಲ್ಲಿ ಗ್ರಾಮ ಪಂಚಾಯತಿಗೆ ನಿಯೋಜಿಸಲಾದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ವೇತನ, ಭತ್ಯೆಗಳು ಹಾಗೂ ಇತರ ಬಾಕಿಗಳನ್ನು ನೀಡುವುದನ್ನು ಮುಂದುವರೆಸತಕ್ಕದ್ದು.][1]

## ಅಧ್ಯಾಯ VI

### [1][ಚಿಕ್ಕನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶದ]1 ಪರಿವರ್ತನೆ ಮತ್ತು ಸಂಯೋಜನೆ

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

**114. ಅರ್ಥ ವಿವರಣೆ.**- ಈ ಅಧ್ಯಾಯದ ಉದ್ದೇಶಕ್ಕಾಗಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿದ್ದ ಹೊರತು,-

(ಎ) "ಮುನಿಸಿಪಲ್ ಕೌನ್ಸಿಲ್" ಎಂಬುದು ಮುನಿಸಿಪಲ್ ಕೌನ್ಸಿಲ್ಲಿನ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ನೇಮಕಗೊಂಡ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ;

[1][(ಬಿ) "ಪಟ್ಟಣ ಪಂಚಾಯತಿ" ಎಂದರೆ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ 350ನೇ ಪ್ರಕರಣದಡಿ ರಚಿತವಾದ ಪಟ್ಟಣ ಪಂಚಾಯತಿ;][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ (ಬಿ) ಮತ್ತು (ಸಿ) ಖಂಡಗಳ ಬದಲು ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ಡಿ) "ಗ್ರಾಮ ಪಂಚಾಯತಿ" ಎಂಬುದು 8ನೇ ಪ್ರಕರಣದ ಅಡಿಯಲ್ಲಿ ಗ್ರಾಮ ಪಂಚಾಯತಿಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ನೇಮಕಗೊಂಡ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

**115.** 1[**ಚಿಕ್ಕನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ**]1 **ಪರಿವರ್ತಿಸುವುದರ ಪರಿಣಾಮ.**- (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸರ್ಕಾರವು ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ (ಇದರಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಲಾದ ದಿನಾಂಕವೆಂದು ಉಲ್ಲೇಖಿಸಲಾಗಿದೆ) [1][ಯಾವುದೇ ಚಿಕ್ಕ ನಗರ ಪ್ರದೇಶಕ್ಕೆ][1] ಸೇರಿರುವ ಸ್ಥಳೀಯ ಪ್ರದೇಶವು ಪಂಚಾಯತಿ ಪ್ರದೇಶವಾಗತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂಥ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ದಿನಾಂಕದಿಂದ ಅದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ಎ) ಅಂಥ ಸ್ಥಳೀಯ ಪ್ರದೇಶದ ಮುನಿಸಿಪಲ್ ಕೌನ್ಸಿಲ್ಲು ಅಸ್ತಿತ್ವದಲ್ಲಿರುವುದು ಅಥವಾ ಕೆಲಸ ನಿರ್ವಹಿಸುವುದು ನಿಂತು ಹೋಗತಕ್ಕದ್ದು;

(ಬಿ) ಪೌರಸಭೆಯ ಕೌನ್ಸಿಲರುಗಳಾಗಿ ಹುದ್ದೆಯನ್ನು ತೆರವು ಮಾಡುವ ವ್ಯಕ್ತಿಗಳನ್ನೊಳಗೊಂಡ ಒಂದು ಮಧ್ಯಕಾಲೀನ ಗ್ರಾಮ ಪಂಚಾಯತಿಯನ್ನು ಆ ಪಂಚಾಯತಿಗಾಗಿ ರಚಿಸತಕ್ಕದ್ದು ಮತ್ತು ಮುನಿಸಿಪಲ್ ಕೌನ್ಸಿಲ್ಲಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ, ಅನುಕ್ರಮವಾಗಿ ಮಧ್ಯಕಾಲೀನ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿರುವುದಾಗಿ ಭಾವಿಸತಕ್ಕದ್ದು;

(ಸಿ) ಮುನಿಸಿಪಲ್ ಕೌನ್ಸಿಲಿಗೆ ಸೇರಿದ ಮುನ್ಸಿಪಲ್ ನಿಧಿಯಲ್ಲಿ ಖರ್ಚು ಮಾಡದೆ ಉಳಿದಿರುವ ಶಿಲ್ಕು ಮತ್ತು ಅದರ ಸ್ವತ್ತುಗಳು (ದರಗಳು, ತೆರಿಗೆಗಳು ಮತ್ತು ಫೀಜುಗಳ ಬಾಕಿಯೂ ಸೇರಿದಂತೆ) ಮತ್ತು ಅಂಥ ಅಧಿಸೂಚನೆಗೆ ಮುಂಚೆ ಮುನಿಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿದ್ದ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು, ಅವುಗಳಿಗೆ ಪರಿಣಾಮ ಬೀರುವ ಎಲ್ಲ ಋಣ ಭಾರಗಳು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟು 116ನೇ ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧಗಳ ಅನುಸರಣೆಯಲ್ಲಿ ಒಂದು ಹೊಸ ಗ್ರಾಮ ಪಂಚಾಯತಿಯು ರಚಿತವಾಗುವವರೆಗೆ ಗ್ರಾಮ ಪಂಚಾಯತಿಯ ನಿಧಿಯಾಗಿ ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದು;

(ಡಿ) ಅಂಥ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಮುನಿಸಿಪಲ್ ಕಾನೂನಿನ ಅಡಿಯಲ್ಲಿ ಮಾಡಿದ, ಹೊರಡಿಸಿದ ವಿಧಿಸಿದ ಅಥವಾ ಮಂಜೂರ್ಮಾಡಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸನ್ಸ್, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಗಳು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜಾರ್ಮಾಡಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸನ್ನು, ಉಪವಿಧಿ ಅಥವಾ ನಮೂನೆ ಇವುಗಳ ಮೂಲಕ ರದ್ದಾಗುವವರೆಗೆ ಅಥವಾ ಮಾರ್ಪಾಡುಮಾಡುವವರೆಗೆ ಪಂಚಾಯತಿ ಪ್ರದೇಶದ ಸಂಬಂಧದಲ್ಲಿ ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರ್ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

(ಇ) ಅಂಥ ಸ್ಥಳೀಯ ಪ್ರದೇಶದ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಮುನಿಸಿಪಲ್ ಕಾನೂನಿನ ಮೇರೆಗೆ ಮಾಡಲಾದ ಅಥವಾ ಅಧಿಪ್ರಮಾಣಿಸಿದ ಎಲ್ಲ ಬಜೆಟ್ ಅಂದಾಜುಗಳು, ತೆರಿಗೆ

ನಿರ್ಧರಣೆಗಳು, ನಿರ್ಧರಣೆಗಳ ಪಟ್ಟಿಗಳು, ವತಾಲ್ಯ ನಿರ್ಣಯಗಳು ಅಥವಾ ಅಳತೆಗಳನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಅಧಿಪ್ರಮಾಣಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಎಫ್) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಮತ್ತು ನಿರ್ದಿಷ್ಟಪಡಿಸಿದ ದಿನಾಂಕದಂದು ಅಸ್ತಿತ್ವದಲ್ಲಿದ್ದು ಮುನಿಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ವಹಿಸಿದ ಎಲ್ಲ ಋಣಗಳು ಮತ್ತು ಬಾಧ್ಯತೆಗಳು ಮತ್ತು ಮಾಡಿಕೊಂಡ ಎಲ್ಲ ಕರಾರುಗಳನ್ನು, ಈ ಅಧಿನಿಯಮದ ಅಡಿಯಲ್ಲಿ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಗ್ರಾಮ ಪಂಚಾಯತಿಯು ವಹಿಸಿರುವುದಾಗಿ ಮತ್ತು ಮಾಡಿರುವುದಾಗಿ ಭಾವಿಸತಕ್ಕದ್ದು;

(ಜಿ) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಮುನಿಸಿಪಲ್ ಕೌನ್ಸಿಲಿನ ನಿಯೋಜನೆಯಲ್ಲಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಅಡಿಯಲ್ಲಿ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ನೌಕರರಾಗಿರತಕ್ಕದ್ದು ಮತ್ತು ಅವರು ಈ ಅದಿನಿಯಮದ ಉಪಬಂಧಗಳಿಗನುಸಾರವಾಗಿ, ಇತರ ವ್ಯವಸ್ಥೆಯನ್ನು ಮಾಡುವವರೆಗೆ ಅಂಥ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಯಾವ ಸಂಬಳ ಮತ್ತು ಭತ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿದ್ದರೋ ಆ ಸಂಬಳ ಮತ್ತು ಭತ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಯಾವ ಸೇವಾ ಷರತ್ತುಗಳಿಗೆ ಅವರು ಒಳಪಟ್ಟಿದ್ದರೋ ಆ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟು ಗ್ರಾಮ ಪಂಚಾಯತಿ ಸೇವೆಯ ಅಗತ್ಯಗಳಿಗೆ ಅವಶ್ಯವಿಲ್ಲವೆಂದು ಅಥವಾ ಸೂಕ್ತವಲ್ಲವೆಂದು ಅದು ಅಭಿಪ್ರಾಯಪಟ್ಟರೆ, ಆ ಯಾವನೇ ಅಧಿಕಾರಿ ಅಥವಾ ನೌಕರನ ಸೇವೆಗಳನ್ನು ಅಂಥ ಅಧಿಕಾರಿ ಅಥವಾ ನೌಕರನಿಗೆ ಅವನ ನಿಯೋಜನೆಯ ನಿಬಂಧನೆಗಳ ಮೇರೆಗೆ ಕೊಡಬೇಕೆಂದು ಅಗತ್ಯಪಡಿಸಿದಂಥ ನೋಟೀಸನ್ನು ಕೊಟ್ಟ ತರುವಾಯ, ಮುಂದುವರೆಸದಿರಲು ಗ್ರಾಮ ಪಂಚಾಯತಿಯು ಸಕ್ಷಮವಾಗಿರತಕ್ಕದ್ದು ಮತ್ತು ಯಾರ ಸೇವೆಗಳನ್ನು ಮುಂದುವರಿಸಲಾಗಿಲ್ಲವೋ ಆ ಪ್ರತಿಯೊಬ್ಬ ಅಧಿಕಾರಿ ಅಥವಾ ನೌಕರನು ಅವನು ಕೆಲಸ ಮಾಡುತ್ತಿದ್ದಂಥ ಮುನಿಸಿಪಲ್ ಕೌನ್ಸಿಲ್ಲು ಅಸ್ತಿತ್ವದಲ್ಲಿರುವುದು ನಿಂತುಹೋಗಿಲ್ಲದಿದ್ದರೆ ಹೇಗೋ ಹಾಗೆ ಅಶಕ್ತತೆಯಿಂದ ಸೇವೆಯನ್ನು ಬಿಟ್ಟಮೇಲೆ ಅವನು ಪಡೆಯಲು ಅಥವಾ ಸ್ವೀಕರಿಸಲು ಹಕ್ಕುಳ್ಳವನಾಗಿರುತ್ತಿದ್ದಂಥ ರಜೆ, ಪಿಂಚಣಿ, ಭವಿಷ್ಯ ನಿಧಿ, ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು;

(ಹೆಚ್) ಮುನಿಸಿಪಲ್ ಕೌನ್ಸಿಲಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳನ್ನು ಗ್ರಾಮ ಪಂಚಾಯತಿಗೆ ವರ್ಗಾಯಿಸಲಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅವುಗಳನ್ನು ಗ್ರಾಮ ಪಂಚಾಯತಿಯು ಮುಂದುವರಿಸತಕ್ಕದ್ದು;

(ಐ) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಮುನಿಸಿಪಲ್ ಕೌನ್ಸಿಲಿನಲ್ಲಿ ಇತ್ಯರ್ಥದಲ್ಲಿರುವ ಎಲ್ಲ ಅಪೀಲುಗಳನ್ನು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಅವುಗಳನ್ನು ದಾಖಲು ಮಾಡುವಾಗ ಅಂಥ ಸ್ಥಳೀಯ ಪ್ರದೇಶವು ಗ್ರಾಮ ಪಂಚಾಯತಿಯಲ್ಲಿ ಸೇರಿಸಲಾಗಿದ್ದರೆ ಹೇಗೋ ಹಾಗೆ ವಿಲೆ ಮಾಡತಕ್ಕದ್ದು;

(ಜೆ) ನಿರ್ದಿಷ್ಟಪಡಿಸಲಾದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಇತ್ಯರ್ಥದಲ್ಲಿರುವ, ಮುನಿಸಿಪಲ್ ಕೌನ್ಸಿಲು ಅಥವಾ ಅದರ ಪರವಾಗಿ ಮಾಡಿದ ಎಲ್ಲ ಪ್ರಾಸಿಕ್ಯೂಷನ್‌ಗಳು ಮತ್ತು ಅಂಥ ಮುನಿಸಿಪಲ್ ಕೌನ್ಸಿಲು ಅಥವಾ ಅಂಥ ಮುನಿಸಿಪಲ್ ಕೌನ್ಸಿಲಿನ ಯಾವನೇ ಅಧಿಕಾರಿಯು ಅಥವಾ ಅವರ ವಿರುದ್ಧವಾಗಿ ಹೂಡಿದ ಎಲ್ಲ ದಾವೆಗಳು ಅಥವಾ ಇತರ ಕಾನೂನು ವ್ಯವಹರಣೆಗಳು, ಅಂಥ ಪ್ರಾಸಿಕ್ಯೂಷನ್‌ಗಳು, ದಾವೆಗಳು ಅಥವಾ ವ್ಯವಹರಣೆಗಳನ್ನು ಹೂಡಿದಾಗ ಅಂಥ ಸ್ಥಳೀಯ ಪ್ರದೇಶವು ಪಂಚಾಯತಿ ಪ್ರದೇಶದಲ್ಲಿ ಸೇರಿಸಲಾಗಿದ್ದರೆ ಹೇಗೋ ಹಾಗೆ ಗ್ರಾಮ ಪಂಚಾಯತಿಯ ಅಥವಾ ಅದರ ವಿರುದ್ಧರಾಗಿ ಮುಂದುವರಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ [1][ಪರಿವರ್ತಿತವಾಗಲಿರುವ ಪ್ರದೇಶವನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸುವುದಕ್ಕೆ][1] ಅನ್ವಯವಾಗತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

**116. ಮಧ್ಯಕಾಲೀನ ಗ್ರಾಮ ಪಂಚಾಯತಿಯ ಸದಸ್ಯರ ಹುದ್ದೆಯ ಅವಧಿ ಮತ್ತು ಅವರ ಅಧಿಕಾರಗಳು.-** (1) ಸರ್ಕಾರವು, 115ನೇ ಪ್ರಕರಣದ ಅಡಿಯಲ್ಲಿ ಮಧ್ಯಕಾಲೀನ ಗ್ರಾಮ ಪಂಚಾಯತಿಯು ರಚನೆಯಾದಂಥ ದಿನಾಂಕದಿಂದ ಐದು ವರ್ಷಗಳಿಗೆ ಮೀರದ ಅವಧಿಯೊಳಗಾಗಿ ಒಂದು ಹೊಸ ಗ್ರಾಮ ಪಂಚಾಯತಿಗಾಗಿ ಚುನಾವಣೆಯನ್ನು ನಡೆಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿ, ಗ್ರಾಮ ಪಂಚಾಯತಿಗಳಿಗೆ ಮೊದಲ ಚುನಾವಣೆಗಳು ನಡೆದಂಥ ದಿನಾಂಕಕ್ಕೆ ಮುಂಚೆ 115ನೇ ಪ್ರಕರಣದ ಅಡಿಯಲ್ಲಿ ಪರಿವರ್ತಿಸಿದ ಪಂಚಾಯತಿಗೆ ಮಧ್ಯಕಾಲೀನ ಗ್ರಾಮ ಪಂಚಾಯತಿಯನ್ನು ರಚಿಸಲಾಗಿರುವಲ್ಲಿ ಅಂಥ ಪಂಚಾಯತಿಗಾಗಿ ಹೊಸ ಗ್ರಾಮ ಪಂಚಾಯತಿಯನ್ನು ರಚಿಸಲು ಯಾವುದೇ ಚುನಾವಣೆಯನ್ನು ಸಂದರ್ಭಾನುಸಾರ, [1][ಪುರಸಭಾ ಪರಿಷತ್ತಿನ ಅಥವಾ ಪಟ್ಟಣ ಪಂಚಾಯತಿಯ ಕೌನ್ಸಿಲರುಗಳ][1] ಹುದ್ದೆಯ ಅವಧಿಯ ಉಳಿದಿರುವ ಭಾಗವು ಕೊನೆಗೊಳ್ಳಬಹುದಾಗಿದ್ದ ದಿನಾಂಕಕ್ಕೆ ಮುಂಚೆ ನಡೆಸತಕ್ಕದ್ದಲ:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

ಅಷ್ಟೇ ಅಲ್ಲದೆ, ಮೇಲ್ಕಂಡ ಪರಂತುಕದಲ್ಲಿರುವುದಾವುದೂ, ಯಾವ ಪಂಚಾಯತಿ ಪ್ರದೇಶದ ಪರಿಮಿತಿಗಳನ್ನು ಅಂಥ ಪರಿಮಿತಿಗಳೊಳಗೆ ಯಾವುದೇ ಗ್ರಾಮ ಅಥವಾ ಗ್ರಾಮಗಳ ಸಮೂಹವನ್ನು ಸೇರಿಸುವ ಮೂಲಕ ಬದಲಾಯಿಸಲಾಗಿದೆಯೋ ಆ ಗ್ರಾಮ ಪಂಚಾಯತಿ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ.

(2) ಮಧ್ಯಕಾಲೀನ ಗ್ರಾಮ ಪಂಚಾಯತಿಯ ಸದಸ್ಯರು, ಹೊಸ ಗ್ರಾಮ ಪಂಚಾಯತಿಯ ಮೊದಲ ಸಭೆಯ ದಿನಾಂಕಕ್ಕೆ ನಿಕಟ ಪೂರ್ವದ ದಿನಾಂಕದವರೆಗೆ ಪದಧಾರಣ ಮಾಡತಕ್ಕದ್ದು.

(3) ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಡೆಪ್ಯುಟಿ ಕಮಿಷನರು ಸಾಧ್ಯವಾದಷ್ಟು ಬೇಗನೆ ನೇಮಕ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.

(4) ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿರುವ ಎಲ್ಲ ದರಗಳು, ತೆರಿಗೆಗಳು ಮತ್ತು ಫೀಜುಗಳ ಬಾಕಿಗಳನ್ನು ಈ ಅಧಿನಿಯಮದ ಅಡಿಯಲ್ಲಿ ಅಂಥ ದರಗಳು, ತೆರಿಗೆಗಳು ಮತ್ತು ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ ಸಹ ಈ ಅಧಿನಿಯಮದ 199ನೇ ಪ್ರಕರಣದ ಅಡಿಯಲ್ಲಿ ವಿಧಿಸಿದ ತೆರಿಗೆಯಂತೆ ಅದೇ ರೀತಿಯಲ್ಲಿ ವಸೂಲು ಮಾಡತಕ್ಕದ್ದು:

ಪರಂತು, ದರಗಳು, ತೆರಿಗೆಗಳು, ಫೀಜುಗಳ ಬಾಕಿಗಳನ್ನು ವಸೂಲು ಮಾಡಲು ಕ್ರಮಗಳನ್ನು ಅವು ಮಧ್ಯಕಾಲೀನ ಗ್ರಾಮ ಪಂಚಾಯತಿಯಲ್ಲಿ ನಿಹಿತವಾದಂಥ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗಾಗಿ ತೆಗೆದುಕೊಳ್ಳತಕ್ಕದ್ದು.

(5) ಇತರ ವಿಷಯಗಳಲ್ಲಿ ಈ ಅಧಿನಿಯಮದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಮಧ್ಯಕಾಲೀನ ಗ್ರಾಮ ಪಂಚಾಯತಿ ಮತ್ತು ಅದರ ಸದಸ್ಯರಿಗೆ ಅನ್ವಯವಾಗತಕ್ಕದ್ದು.

(6) (i) ಮಧ್ಯಕಾಲೀನ ಗ್ರಾಮ ಪಂಚಾಯತಿ ಅಥವಾ ಅದರ ಸ್ಥಾನದಲ್ಲಿ ಬರುವ ಹೊಸ ಗ್ರಾಮ ಪಂಚಾಯತಿಯ ರಚನೆಯಲ್ಲಿ, ಅಥವಾ

(ii) 115ನೇ ಪ್ರಕರಣದ ಮತ್ತು ಈ ಪ್ರಕರಣದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ,

-ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ಆದೇಶ ಹೊರಡಿಸುವ ಮೂಲಕ ತೊಂದರೆಯನ್ನು ನಿವಾರಿಸಬಹುದು.

[1][**117. ಪಂಚಾಯತಿ ಪ್ರದೇಶಗಳ ಸಂಯೋಜನೆಯ ಪರಿಣಾಮ.**- (1) 4ನೇ ಪ್ರಕರಣದಡಿಯಲ್ಲಿನ ಅಧಿಸೂಚನೆಯ ಕಾರಣದಿಂದ [2][ಗ್ರಾಮ ಪಂಚಾಯತಿಗಳ ಸದಸ್ಯರುಗಳ ಹುದ್ದೆಯ ಅವಧಿಯಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಕಪಕ್ಕದಲ್ಲಿರುವ ಪಂಚಾಯತಿ ಪ್ರದೇಶಗಳನ್ನು][2] ಸಂಯೋಜಿಸಿ ಪಂಚಾಯತಿ ಪ್ರದೇಶವೆಂದು (ಈ ಪ್ರಕರಣದಲ್ಲಿ ಇನ್ನು ಮುಂದೆ ಸಂಯೋಜಿತ ಪಂಚಾಯತಿ ಪ್ರದೇಶವೆಂದು ಉಲ್ಲೇಖಿಸಲಾಗುವುದು) ಘೋಷಿಸಿದಾಗ, ಅಂಥ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ (ಈ ಪ್ರಕರಣದಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ದಿನಾಂಕವೆಂದು ಉಲ್ಲೇಖಿಸಲಾಗುವುದು) [3][ಈ ಅಧಿನಿಯಮದಲ್ಲಿ ಏನೇ ಇದ್ದರೂ ಜಾರಿಗೆ ಬರುವಂತೆ][3] ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

1. ಉಪಪ್ರಕರಣ 1 ರಿಂದ 1೦ರವರೆಗೆ 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 29-1೦-1997 ರಿಂದ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 1೦ರ ಮೂಲಕ ದಿನಾಂಕ: 14-08-1997ರಿಂದ ಪ್ರತಿಯೋಜಿಸಲಾಗಿದೆ.
3. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦-1೦-1997ರಿಂದ ಪ್ರತಿಯೋಜಿಸಲಾಗಿದೆ.

(ಎ) ಅಂಥ ಸ್ಥಳೀಯ ಪ್ರದೇಶದ ಗ್ರಾಮ ಪಂಚಾಯತಿಗಳು (ಈ ಪ್ರಕರಣದಲ್ಲಿ ಇನ್ನು ಮುಂದೆ ಅಸ್ತಿತ್ವದಲ್ಲಿದ್ದ ಗ್ರಾಮಪಂಚಾಯತಿಗಳೆಂದು ಉಲ್ಲೇಖಿಸಲಾಗುವುದು) ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಗ್ರಾಮ ಪಂಚಾಯತಿಗಳ ಎಲ್ಲ ಸದಸ್ಯರುಗಳು ಹುದ್ದೆಯನ್ನು ತೆರವು ಮಾಡತಕ್ಕದ್ದು;

(ಬಿ) ಸಂಯೋಜಿತ ಪಂಚಾಯತಿ ಪ್ರದೇಶಕ್ಕಾಗಿ ಡೆಪ್ಯುಟಿ ಕಮೀಷನರಿಂದ ನಾಮನಿರ್ದೇಶಿಸಲ್ಪಟ್ಟ ಸದಸ್ಯರುಗಳನ್ನೊಳಗೊಂಡ ಗ್ರಾಮ ಪಂಚಾಯತಿಯು (ಈ ಪ್ರಕರಣದಲ್ಲಿ ಇನ್ನು ಮುಂದೆ ಮಧ್ಯಕಾಲೀನ ಗ್ರಾಮ ಪಂಚಾಯತಿಯೆಂದು ಉಲ್ಲೇಖಿಸಲಾಗುವುದು) ರಚಿತವಾಗತಕ್ಕದ್ದು ಮತ್ತು ಅಂಥ ಸದಸ್ಯರುಗಳು, ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳ ಸದಸ್ಯರುಗಳಾಗಿರತಕ್ಕದ್ದು;

[1][(ಸಿ) ಮಧ್ಯಕಾಲೀನ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಮತ್ತು ಸ್ಥಾಯಿ ಸಮಿತಿಯ ಸದಸ್ಯರುಗಳನ್ನು ನಿರ್ದಿಷ್ಟಪಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಅಧಿನಿಯಮದಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ಚುನಾಯಿಸತಕ್ಕದ್ದು;

(ಡಿ) ಹಾಗೆ ರಚಿಸಲಾದ ಮಧ್ಯಕಾಲೀನ ಪಂಚಾಯತಿಯ ಸದಸ್ಯರುಗಳು, 12, 13, 43 ಮತ್ತು 43ಎ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಈ ಪ್ರಕರಣದಡಿ ಪಂಚಾಯತಿ ಪ್ರದೇಶಗಳ ಸಂಯೋಜನೆಯಾಗಿರದಿದ್ದರೆ ಅಸ್ತಿತ್ವದಲ್ಲಿದ್ದ ಎಲ್ಲಾ ಗ್ರಾಮ ಪಂಚಾಯತಿಗಳು ಯಾವ ಅವಧಿಯವರೆಗೆ ಮುಂದುವರಿದಿರುತ್ತಿತ್ತೋ ಆ ಉಳಿದ ಅವಧಿಯವರೆಗೆ ಅಥವಾ ಉಳಿದ ಅವಧಿಯು ಅಸ್ತಿತ್ವದಲ್ಲಿದ್ದ ಬೇರೆ ಬೇರೆ ಗ್ರಾಮ ಪಂಚಾಯತಿಗಳ ಸಂಬಂಧದಲ್ಲಿ ಬೇರೆ ಬೇರೆಯಾಗಿರುವಲ್ಲಿ, ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳಲ್ಲಿ ಕೊನೆಯ ಗ್ರಾಮ ಪಂಚಾಯತಿಯ ಉಳಿದ ಅವಧಿಯು ಎಂದಿಗೆ ಮುಕ್ತಾಯವಾಗುತ್ತಿತ್ತೋ ಆ ಅವಧಿಯವರೆಗೆ, ಹುದ್ದೆಯನ್ನು ಹೊಂದಿರತಕ್ಕದ್ದು;][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦-1೦-1997ರಿಂದ ಪ್ರತಿಯೋಜಿಸಲಾಗಿದೆ.

(ಇ) (ಡಿ) ಖಂಡದ ಉಪಬಂಧಗಳಿಗನುಸಾರವಾಗಿ ಮಧ್ಯಕಾಲೀನ ಗ್ರಾಮ ಪಂಚಾಯತಿಯ ಅವಧಿ ಮುಕ್ತಾಯವಾಗುವುದಕ್ಕೆ ಮೊದಲು ಒಂದು ಗ್ರಾಮ ಪಂಚಾಯತಿಯನ್ನು (ಇಲ್ಲಿ ಇನ್ನು ಮುಂದೆ "ಸಂಯೋಜಿತ ಗ್ರಾಮ ಪಂಚಾಯತಿಯೆಂದು" ಉಲ್ಲೇಖಿಸಲಾಗುವುದು) ಈ ಅಧಿನಿಯಮದಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ರಚಿಸತಕ್ಕದ್ದು.

[1][(ಎಫ್) xxx][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦-1೦-1997ರಿಂದ ಬಿಟ್ಟುಬಿಡಲಾಗಿದೆ.

(2) ಈ ಪ್ರಕರಣದಡಿ ಸಂಯೋಜಿತ ಗ್ರಾಮ ಪಂಚಾಯತಿಯನ್ನು ರಚಿಸಿರುವಾಗ ಈ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಗ್ರಾಮ ಪಂಚಾಯತಿಯಲ್ಲಿ ಡೆಪ್ಯುಟಿ ಕಮೀಷನರನು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಪಂಚಾಯಿತಿ ನಿಧಿಯಲ್ಲಿ ಎಷ್ಟು ಮೊಬಲಗು ನಿಹಿತವಾಗಿದೆಯೋ ಅದನ್ನು ಮತ್ತು ಇತರ ಸ್ವತ್ತನ್ನು ನಿಹಿತಗೊಳಿಸತಕ್ಕದ್ದು ಮತ್ತು ಸಾಲಗಳು ಮತ್ತು ಹೊಣೆಗಾರಿಕೆಗಳಲ್ಲಿ ಎಷ್ಟು ಭಾಗವನ್ನು ವರ್ಗಾಯಿಸಬಹುದೋ ಅಂಥ ಭಾಗವನ್ನು ಅದಕ್ಕೆ ವರ್ಗಾಯಿಸತಕ್ಕದ್ದು.

(3) ಸಂಯೋಜಿತ ಪಂಚಾಯತಿ ಪ್ರದೇಶದಲ್ಲಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಉದ್ಭವಿಸುವ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳು, ಕರಾರುಗಳು, ಒಪ್ಪಂದಗಳು ಮತ್ತು ವಿಷಯಗಳು ಅಥವಾ ಸಂಗತಿಗಳಿಗೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಈ ಪ್ರಕರಣದಡಿ ಸ್ಥಾಪಿತವಾದ ಗ್ರಾಮ ಪಂಚಾಯತಿಯಲ್ಲಿ ನಿಹಿತಗೊಂಡಿರತಕ್ಕದ್ದು.

(4) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳು ಮಾಡಿದ ಅಥವಾ ಪ್ರಮಾಣೀಕರಿಸಿದ ಎಲ್ಲ ಬಜೆಟ್ ಅಂದಾಜುಗಳನ್ನು, ನಿರ್ಧರಣೆ ಮತ್ತು ನಿರ್ಧರಣೆ ಪಟ್ಟಿಗಳನ್ನು, ಮೌಲ್ಯ ನಿರ್ಣಯ

ಅಥವಾ ಅಳತೆಗಳನ್ನು, ಸಂಯೋಜಿತ ಪಂಚಾಯತಿ ಪ್ರದೇಶದ ಸಂಬಂಧದಲ್ಲಿ ಸ್ಥಾಪಿತವಾದ ಗ್ರಾಮ ಪಂಚಾಯತಿಯ ಬಗ್ಗೆ ಮಾಡಲಾಗಿದೆಯೆಂದು ಅಥವಾ ಪ್ರಮಾಣೀಕರಿಸಲಾಗಿದೆಯೆಂದು ಭಾವಿಸತಕ್ಕದ್ದು.

(5) ಅಂಥ ಸ್ಥಳೀಯ ಪ್ರದೇಶಗಳ ಸಂಬಂಧದಲ್ಲಿ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ನೀಡಿದ ಮತ್ತು ನಿರ್ದಿಷ್ಟಪಡಿಸಿದ ದಿನಾಂಕದಂದು ಜಾರಿಯಲ್ಲಿದ್ದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ವಿನಿಯಮ, ಉಪವಿಧಿ ಅಥವಾ ನಮೂನೆಯು ಈ ಅಧಿನಿಯಮದಡಿಯಲ್ಲಿ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ನೀಡಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ವಿನಿಯಮ, ಉಪವಿಧಿ ಅಥವಾ ನಮೂನೆಯಿಂದ ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡು ಮಾಡುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಸಂಯೋಜಿತ ಪಂಚಾಯತಿ ಪ್ರದೇಶದ ಸಂಬಂಧದಲ್ಲಿ ಮಾಡಲಾಗಿದೆ, ಹೊರಡಿಸಲಾಗಿದೆ ಅಥವಾ ನೀಡಲಾಗಿದೆಯೆಂದು ಭಾವಿಸತಕ್ಕದ್ದು.

(6) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳ ಉದ್ಯೋಗದಲ್ಲಿರುವ ಎಲ್ಲ ಅಧಿಕಾರಿಗಳು ಮತ್ತು ನೌಕರರು, ಸಂಯೋಜಿತ ಪಂಚಾಯತಿ ಪ್ರದೇಶದ ಸಂಬಂಧದಲ್ಲಿ ರಚಿಸಲಾದ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ನೌಕರರು ಆಗಿರತಕ್ಕದ್ದು ಮತ್ತು ಈ ಅಧಿನಿಯಮದನುಸಾರವಾಗಿ ಅಂಥ ಇತರ ಉಪಬಂಧವನ್ನು ಕಲ್ಪಿಸುವವರೆಗೆ, ಅಂಥ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅವರು ಯಾವ ವೇತನಗಳನ್ನು ಮತ್ತು ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿದ್ದರೋ ಅವುಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು ಅಥವಾ ಯಾವ ಸೇವಾ ಷರತ್ತುಗಳಿಗೆ ಒಳಪಟ್ಟಿದ್ದರೋ ಅವುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಡೆಪ್ಯುಟಿ ಕಮೀಷನರನ ಪೂರ್ವ ಮಂಜೂರಾತಿಗೆ ಒಳಪಟ್ಟು ಮಧ್ಯಕಾಲೀನ ಗ್ರಾಮ ಪಂಚಾಯತಿಯು ಅಥವಾ ಸಂದರ್ಭಾನುಸಾರವಾಗಿ ಸಂಯೋಜಿತ ಗ್ರಾಮ ಪಂಚಾಯತಿಯು, ಸಂಯೋಜಿತ ಪಂಚಾಯತಿಯ ಪ್ರದೇಶದ ಸಂಬಂಧದಲ್ಲಿ ಗ್ರಾಮ ಪಂಚಾಯತಿಯ ಸೇವೆಗೆ ಯಾವೊಬ್ಬ ಅಧಿಕಾರಿ ಅಥವಾ ನೌಕರನ ಅವಶ್ಯಕತೆಯಿಲ್ಲ ಅಥವಾ ಅವನು ಸೂಕ್ತನಲ್ಲವೆಂದು ಅಭಿಪ್ರಾಯಪಟ್ಟರೆ, ಅಂಥ ಅಧಿಕಾರಿ ಅಥವಾ ನೌಕರನ ಉದ್ಯೋಗದ ನಿಬಂಧನೆಗಳ ಮೂಲಕ ನೀಡುವಂತೆ ಅಗತ್ಯಪಡಿಸಲಾದಂಥ ನೋಟೀಸನ್ನು ಆತನಿಗೆ ನೀಡಿದ ತರುವಾಯ, ಆ ಅಧಿಕಾರಿ ಅಥವಾ ನೌಕರನ ಸೇವೆಗಳನ್ನು ಮುಂದುವರೆಸದಿರಲು ಸಕ್ಷಮವಾಗಿರತಕ್ಕದ್ದು ಮತ್ತು ಸೇವೆಗಳನ್ನು ಹಾಗೆ ಮುಂದುವರೆಸದಿರುವ ಪ್ರತಿಯೊಬ್ಬ ಅಧಿಕಾರಿ ಅಥವಾ ನೌಕರನು ಯಾವ ಗ್ರಾಮ ಪಂಚಾಯತಿಯಲ್ಲಿ ಆತನು ಉದ್ಯೋಗದಲ್ಲಿರುವನೋ ಅದರ ಸೇವೆಯಲ್ಲಿರುವುದು ನಿಂತುಹೋಗಿರದಿದ್ದರೆ ಹೇಗೋ ಹಾಗೆ ಸೇವೆಯಿಂದ ಅನೂರ್ಜಿತಗೊಳಿಸಿದ ಮೇಲೆ ತೆಗೆದುಕೊಳ್ಳಲು ಅಥವಾ ಪಡೆದುಕೊಳ್ಳಲು ಹಕ್ಕುಳ್ಳಂಥ ರಜೆ, ವಿಶ್ರಾಂತಿವೇತನ ಮತ್ತು ಉಪದಾನವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(7) ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯ ಮುಂದಿರುವ ನಿರ್ದಿಷ್ಟಪಡಿಸಲಾದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಇತ್ಯರ್ಥದಲ್ಲಿದ್ದ ಎಲ್ಲ ವ್ಯವಹರಣೆಗಳು, ಮಧ್ಯಕಾಲೀನ ಗ್ರಾಮ ಪಂಚಾಯತಿಗೆ ಅಥವಾ ಸಂದರ್ಭಾನುಸಾರವಾಗಿ ಸಂಯೋಜಿತ ಗ್ರಾಮ ಪಂಚಾಯತಿಗೆ ವರ್ಗಾಯಿಸಲಾಗಿದೆಯೆಂದು ಮತ್ತು ಅದರ ಮುಂದೆ ಮುಂದುವರಿಸಲಾಗಿದೆಯೆಂದು ಭಾವಿಸತಕ್ಕದ್ದು.

(8) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ಗ್ರಾಮ ಪಂಚಾಯತಿಯ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲ ಅಪೀಲುಗಳು, ಕಾರ್ಯಸಾಧ್ಯವಾಗಬಹುದಾದಷ್ಟುಮಟ್ಟಿಗೆ, ಮಧ್ಯಕಾಲೀನ ಗ್ರಾಮ ಪಂಚಾಯತಿಯು ಅಥವಾ ಸಂದರ್ಭಾನುಸಾರವಾಗಿ ಸಂಯೋಜಿತ ಗ್ರಾಮ ಪಂಚಾಯತಿಯು ವಿಲೇವಾರಿಗೊಳಿಸತಕ್ಕದ್ದು.

(9) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಇತ್ಯರ್ಥದಲ್ಲಿದ್ದ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳಿಂದ ಅಥವಾ ಅದರ ಪರವಾಗಿ ಅಥವಾ ಅಂಥ ಗ್ರಾಮ ಪಂಚಾಯತಿಗಳ ಯಾವೊಬ್ಬ ಅಧಿಕಾರಿಯಿಂದ ಅಥವಾ ಅವನ ಪರವಾಗಿ ಹೂಡಲಾದ ಎಲ್ಲ ಪ್ರಾಸಿಕ್ಯೂಷನ್‌ಗಳನ್ನು ಮಧ್ಯಕಾಲೀನ ಗ್ರಾಮ ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಸಂಯೋಜಿತ ಗ್ರಾಮ ಪಂಚಾಯತಿಯಿಂದ ಅಥವಾ ಅದರ ವಿರುದ್ಧವಾಗಿ ಮುಂದುವರಿಸತಕ್ಕದ್ದು.

(10) ಹಿಂದಿನ ಉಪ-ಪ್ರಕರಣಗಳ ಉಪಬಂಧಗಳನ್ನು ಪರಿಣಾಮಕಾರಿಯನ್ನಾಗಿ ಮಾಡುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು, ಸಂದರ್ಭವು ಅಗತ್ಯಪಡಿಸಿದಂತೆ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ತೊಂದರೆಯನ್ನು ನಿವಾರಿಸಲು ಅದಕ್ಕೆ ಅವಶ್ಯಕವೆಂದು ಕಂಡುಬರುವಂಥ ಏನನ್ನಾದರೂ ಮಾಡಬಹುದು.]1

[1][**118. ಪಂಚಾಯತಿ ಪ್ರದೇಶದ ವಿಭಜನೆಯ ಪರಿಣಾಮ.**- (1) ಪಂಚಾಯತಿ ಪ್ರದೇಶದ ಪರಿಮಿತಿಯಲ್ಲಿ ಒಳಗೊಂಡಿರುವ ಯಾವುದೇ ಸ್ಥಳೀಯ ಪ್ರದೇಶವು ಗ್ರಾಮ ಪಂಚಾಯತಿಯ ಸದಸ್ಯರ ಹುದ್ದೆಯ ಅವಧಿಯಲ್ಲಿ ಪಂಚಾಯತಿ ಪ್ರದೇಶವಾಗಿರುವುದು ನಿಂತು ಹೋಗಿರುವಾಗ ಮತ್ತು 4ನೇ ಪ್ರಕರಣದಡಿಯಲ್ಲಿನ ಅಧಿಸೂಚನೆಯ ಕಾರಣದಿಂದಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಹೊಸ ಪಂಚಾಯತಿ ಪ್ರದೇಶಗಳನ್ನಾಗಿ ರಚಿಸಲಾಗಿದೆಯೆಂದು ಘೋಷಿಸಿರುವಾಗ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ಅಂಥ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ (ಈ ಪ್ರಕರಣದಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ದಿನಾಂಕವೆಂದು ಉಲ್ಲೇಖಿಸಲಾಗುವುದು) ಜಾರಿಗೆ ಬರುವಂತೆ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಅಂಥ ಸ್ಥಳೀಯ ಪ್ರದೇಶದ ಸಂಬಂಧದಲ್ಲಿ ರಚಿಸಲ್ಪಟ್ಟ ಗ್ರಾಮ ಪಂಚಾಯತಿಯು (ಇಲ್ಲಿ ಇನ್ನು ಮುಂದೆ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯೆಂದು ಉಲ್ಲೇಖಿಸಲಾಗುವುದು) ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಗ್ರಾಮ ಪಂಚಾಯತಿಯ ಎಲ್ಲ ಸದಸ್ಯರುಗಳು ತಮ್ಮ ಹುದ್ದೆಯನ್ನು ತೆರವು ಮಾಡತಕ್ಕದ್ದು;

(ಬಿ) ಹೊಸ ಪಂಚಾಯತಿ ಪ್ರದೇಶಗಳಿಗಾಗಿ, ಡೆಪ್ಯುಟಿ ಕಮೀಷನರು ನಾಮನಿರ್ದೇಶಿಸಿದ ಸದಸ್ಯರುಗಳನ್ನು ಒಳಗೊಂಡಿರುವ ಗ್ರಾಮ ಪಂಚಾಯತಿಗಳು (ಈ ಪ್ರಕರಣದಲ್ಲಿ ಇನ್ನು ಮುಂದೆ ಮಧ್ಯಕಾಲೀನ ಗ್ರಾಮ ಪಂಚಾಯತಿಗಳೆಂದು ಉಲ್ಲೇಖಿಸಲಾಗುವುದು) ರಚಿತವಾಗತಕ್ಕದ್ದು ಮತ್ತು ಅಂಥ ಸದಸ್ಯರುಗಳು,

ಕಾರ್ಯಸಾಧ್ಯ- ವಾಗುವಷ್ಟರಮಟ್ಟಿಗೆ, ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯ ಸದಸ್ಯರುಗಳಾಗಿರುವ ವ್ಯಕ್ತಿಗಳಾಗಿರತಕ್ಕದ್ದು:

ಪರಂತು ನಿರ್ದಿಷ್ಟಪಡಿಸಿದ ದಿನಾಂಕದಂದು ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯಲ್ಲಿ ಯಾರೇ ಚುನಾಯಿತ ಸದಸ್ಯರುಗಳು ಇರದಿದ್ದರೆ, ಡೆಪ್ಯುಟಿ ಕಮಿಷನರು ಆದೇಶದ ಮೂಲಕ ಗ್ರಾಮ ಪಂಚಾಯತಿಯ ಎಲ್ಲ ಅಧಿಕಾರಗಳನ್ನು ಚಲಾಯಿಸುವಂಥ ಮತ್ತು ಎಲ್ಲ ಕರ್ತವ್ಯಗಳನ್ನು ನಿರ್ವಹಿಸುವಂಥ ವ್ಯಕ್ತಿಯನ್ನು (ಇಲ್ಲಿ ಇನ್ನು ಮುಂದೆ ಆಡಳಿತಗಾರನೆಂದು ಉಲ್ಲೇಖಿಸಲಾಗುವುದು) ನಿರ್ದಿಷ್ಟಪಡಿಸಬಹುದಾದಂಥ ಆದರೆ ಆರು ತಿಂಗಳುಗಳಿಗೆ ಮೀರದ ಅವಧಿಗೆ ನೇಮಕ ಮಾಡಬಹುದು;

(ಸಿ) ಮಧ್ಯಕಾಲೀನ ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಮತ್ತು ಸ್ಥಾಯಿ ಸಮಿತಿಯ ಸದಸ್ಯರುಗಳನ್ನು ನಿರ್ದಿಷ್ಟಪಡಿಸಿದ ದಿನಾಂಕದಿಂದ ಒಂದು ತಿಂಗಳಿನೊಳಗೆ ಈ ಅಧಿನಿಯಮದಡಿ ಉಪಬಂಧಿಸಲಾದ ವಿಧಾನದಲ್ಲಿ ಚುನಾಯಿಸತಕ್ಕದ್ದು;

(ಡಿ) ಹಾಗೆ ರಚಿಸಲಾದ ಮಧ್ಯಕಾಲೀನ ಗ್ರಾಮ ಪಂಚಾಯತಿಯ ಸದಸ್ಯರುಗಳು 12, 13, 43 ಮತ್ತು 43ಎ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯತಿಯಲ್ಲಿ ತಮ್ಮ ಹುದ್ದೆಯ ಉಳಿದ ಅವಧಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು;

(ಇ) (ಬಿ) ಅಥವಾ (ಡಿ) ಖಂಡದ ಉಪಬಂಧಗಳಿಗನುಸಾರವಾಗಿ ಮಧ್ಯಕಾಲೀನ ಗ್ರಾಮ ಪಂಚಾಯತಿಯ ಸದಸ್ಯರ ಹುದ್ದೆಯ ಅವಧಿ ಅಥವಾ ಆಡಳಿತಗಾರನ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ಮೊದಲು ಪ್ರತಿಯೊಂದು ಹೊಸ ಪಂಚಾಯತಿ ಪ್ರದೇಶಗಳಿಗಾಗಿ ಗ್ರಾಮ ಪಂಚಾಯತಿಗಳನ್ನು (ಇಲ್ಲಿ ಇನ್ನು ಮುಂದೆ ಹೊಸ ಗ್ರಾಮ ಪಂಚಾಯತಿಗಳೆಂದು ಉಲ್ಲೇಖಿಸಲಾಗುವುದು) ಈ ಅಧಿನಿಯಮದಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ರಚಿಸತಕ್ಕದ್ದು;

(2) ಈ ಪ್ರಕರಣದಡಿ ಹೊಸ ಪಂಚಾಯತಿ ಪ್ರದೇಶಗಳನ್ನು ಘೋಷಿಸಿರುವಾಗ ಈ ಪ್ರಕರಣದಡಿಯಲ್ಲಿ ಸ್ಥಾಪಿತವಾದ ಗ್ರಾಮ ಪಂಚಾಯತಿಯಲ್ಲಿ ಅಥವಾ ನೇಮಕಗೊಂಡ ಆಡಳಿತಗಾರನಲ್ಲಿ ಡೆಪ್ಯುಟಿ ಕಮೀಷನರನು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯಲ್ಲಿ, ಗ್ರಾಮ ಪಂಚಾಯತಿ ನಿಧಿಯಲ್ಲಿ ಎಷ್ಟು ಮೊಬಲಗು ನಿಹಿತವಾಗಿದೆಯೋ ಅದನ್ನು ಮತ್ತು ಇತರ ಸ್ವತ್ತನ್ನು ನಿಹಿತಗೊಳಿಸತಕ್ಕದ್ದು ಮತ್ತು ಸಾಲಗಳು ಮತ್ತು ಹೊಣೆಗಾರಿಕೆಗಳಲ್ಲಿ ಎಷ್ಟು ಭಾಗವನ್ನು ವರ್ಗಾಯಿಸಬಹುದೋ ಅಂಥ ಭಾಗವನ್ನು ವರ್ಗಾಯಿಸತಕ್ಕದ್ದು.

(3) ಹೊಸ ಪಂಚಾಯತಿ ಪ್ರದೇಶಗಳೆಂಬುದಾಗಿ ಘೋಷಿಸಲ್ಪಟ್ಟಂಥ ಸ್ಥಳೀಯ ಪ್ರದೇಶದಲ್ಲಿ ಮತ್ತು ಅದಕ್ಕೆ ಸಂಬಂದಪಟ್ಟಂತೆ ಉದ್ಭವಿಸುವ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳು, ಕರಾರುಗಳು, ಒಪ್ಪಂದಗಳು ಮತ್ತು ವಿಷಯಗಳು ಅಥವಾ ಸಂಗತಿಗಳಿಗೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಗಳ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಡೆಪ್ಯುಟಿ ಕಮೀಷನರು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಈ ಪ್ರಕರಣದಡಿ ರಚಿತವಾದ ಗ್ರಾಮ ಪಂಚಾಯತಿಯಲ್ಲಿ ಅಥವಾ ನೇಮಕಗೊಂಡ ಆಡಳಿತಗಾರನಲ್ಲಿ ನಿಹಿತಗೊಂಡಿರತಕ್ಕದ್ದು.

(4) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯು ಮಾಡಿದ ಅಥವಾ ಪ್ರಮಾಣೀಕರಿಸಿದ ಎಲ್ಲ ಬಜೆಟ್ ಅಂದಾಜುಗಳನ್ನು, ನಿರ್ಧರಣೆ ಮತ್ತು ನಿರ್ಧರಣೆ ಪಟ್ಟಿಗಳನ್ನು, ಮೌಲ್ಯ ನಿರ್ಣಯ ಅಥವಾ ಅಳತೆಗಳನ್ನು ಹೊಸ ಪಂಚಾಯತಿ ಪ್ರದೇಶಗಳ ಸಂಬಂಧದಲ್ಲಿ ಸ್ಥಾಪಿತವಾದ ಗ್ರಾಮ ಪಂಚಾಯತಿಗಳ ಬಗ್ಗೆ ಡೆಪ್ಯುಟಿ ಕಮೀಷನರು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಮಾಡಲಾಗಿದೆಯೆಂದು ಅಥವಾ ಪ್ರಮಾಣೀಕರಿಸಲಾಗಿದೆಯೆಂದು ಭಾವಿಸತಕ್ಕದ್ದು.

(5) ಅಂಥ ಸ್ಥಳೀಯ ಪ್ರದೇಶಗಳ ಸಂಬಂಧದಲ್ಲಿ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ನೀಡಿದ ಮತ್ತು ನಿರ್ದಿಷ್ಟಪಡಿಸಿದ ದಿನಾಂಕದಂದು ಜಾರಿಯಲ್ಲಿದ್ದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ವಿನಿಯಮ, ಉಪವಿಧಿ ಅಥವಾ ನಮೂನೆಯು ಈ ಅಧಿನಿಯಮದಡಿಯಲ್ಲಿ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ನೀಡಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ವಿನಿಯಮ, ಉಪವಿಧಿ ಅಥವಾ ನಮೂನೆಯಿಂದ ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡು ಮಾಡುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಅಂಥ ಹೊಸ ಪಂಚಾಯತಿ ಪ್ರದೇಶದ ಸಂಬಂಧದಲ್ಲಿ ಡೆಪ್ಯುಟಿ ಕಮೀಷನರು ಆದೇಶದ ಮೂಲಕ ನಿರ್ದೇಸಿಸಬಹುದಾದಂತೆ ಮಾಡಲಾಗಿದೆ, ಹೊರಡಿಸಲಾಗಿದೆ ಅಥವಾ ನೀಡಲಾಗಿದೆಯೆಂದು ಭಾವಿಸತಕ್ಕದ್ದು.

(6) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಗ್ರಾಮ ಪಂತಾಯತಿಯ ಉದ್ಯೋಗದಲ್ಲಿರುವ ಎಲ್ಲ ಅಧಿಕಾರಿಗಳು ಮತ್ತು ನೌಕರರು ಡೆಪ್ಯುಟಿ ಕಮೀಷನರು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಹೊಸ ಪಂಚಾಯತಿ ಪ್ರದೇಶಗಳ ಸಂಬಂಧದಲ್ಲಿ ರಚಿಸಲಾದ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ನೌಕರರು ಆಗಿರತಕ್ಕದ್ದು ಮತ್ತು ಈ ಅಧಿನಿಯಮದನುಸಾರವಾಗಿ ಅಂಥ ಇತರ ಉಪಬಂಧವನ್ನು ಕಲ್ಪಿಸುವವರೆಗೆ, ಅಂಥ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅವರು ಯಾವ ವೇತನಗಳನ್ನು ಮತ್ತು ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿದ್ದರೋ ಅವುಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು ಅಥವಾ ಯಾವ ಸೇವಾ ಷರತ್ತುಗಳಿಗೆ ಒಳಪಟ್ಟಿದ್ದರೋ ಅವುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಡೆಪ್ಯುಟಿ ಕಮೀಷನರ ಪೂರ್ವ ಪಂಜೂರಾತಿಗೆ ಒಳಪಟ್ಟು ಮಧ್ಯಕಾಲೀನ ಗ್ರಾಮ ಪಂಚಾಯತಿಯು, ಆಡಳಿತಗಾರನು ಅಥವಾ ಸಂದರ್ಭಾನುಸಾರವಾಗಿ ಹೊಸ ಗ್ರಾಮ ಪಂಚಾಯತಿಗಳು, ಹೊಸ ಪಂಚಾಯತಿ ಪ್ರದೇಶದ ಸಂಬಂಧದಲ್ಲಿ ಗ್ರಾಮ ಪಂಚಾಯತಿಯ ಸೇವೆಗೆ ಯಾವೊಬ್ಬ ಅಧಿಕಾರಿ ಅಥವಾ ನೌಕರನ ಅವಶ್ಯಕತೆಯಿಲ್ಲ ಅಥವಾ ಅವನು ಸೂಕ್ತನಲ್ಲವೆಂದು ಅದು ಅಥವಾ ಅವನು ಅಭಿಪ್ರಾಯಪಟ್ಟರೆ, ಅಂಥ ಅಧಿಕಾರಿ ಅಥವಾ ನೌಕರನ ಉದ್ಯೋಗದ ನಿಬಂಧನೆಗಳ ಮೂಲಕ ನೀಡುವಂತೆ ಅಗತ್ಯಪಡಿಸಲಾದಂಥ ನೋಟೀಸನ್ನು ಆತನಿಗೆ ನೀಡಿದ ತರುವಾಯ, ಆ ಅಧಿಕಾರಿ ಅಥವಾ ನೌಕರನ ಸೇವೆಗಳನ್ನು ಮುಂದುವರಿಸದಿರಲು ಸಕ್ಷಮವಾಗಿರತಕ್ಕದ್ದು ಅಥವಾ

ಸಕ್ಷಮನಾಗಿರತಕ್ಕದ್ದು ಮತ್ತು ಸೇವೆಗಳನ್ನು ಹಾಗೆ ಮುಂದುವರಿಸದಿರುವ ಪ್ರತಿಯೊಬ್ಬ ಅಧಿಕಾರಿ ಅಥವಾ ನೌಕರನು ಯಾವ ಗ್ರಾಮ ಪಂಚಾಯತಿಯಲ್ಲಿ ಆತನು ಉದ್ಯೋಗದಲ್ಲಿರುವನೋ ಆ ಗ್ರಾಮ ಪಂಚಾಯತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗಿರದಿದ್ದರೆ ಹೇಗೋ ಹಾಗೆ ಸೇವೆಯಿಂದ ಅನೂರ್ಜಿತಗೊಳಿಸಿದ ಮೇಲೆ ಪಡೆದುಕೊಳ್ಳಲು ಹಕ್ಕುಳ್ಳಂಥ ರಜೆ, ವಿಶ್ರಾಂತಿ ವೇತನ ಮತ್ತು ಉಪದಾನವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(7) ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯ ಮುಂದಿರುವ ನಿರ್ದಿಷ್ಟಪಡಿಸಲಾದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಇತ್ಯರ್ಥದಲ್ಲಿದ್ದ ಎಲ್ಲ ವ್ಯವಹರಣೆಗಳು, ಮಧ್ಯಕಾಲೀನ ಗ್ರಾಮ ಪಂಚಾಯತಿಗೆ ಅಥವಾ ಆಡಳಿತಗಾರನಿಗೆ ಅಥವಾ ಸಂದರ್ಭಾನುಸಾರವಾಗಿ ಹೊಸ ಗ್ರಾಮ ಪಂಚಾಯತಿಗೆ ಡೆಪ್ಯುಟಿ ಕಮೀಷನರು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ವರ್ಗಾಯಿಸಲಾಗಿದೆಯೆಂದು ಮತ್ತು ಅದರ ಮುಂದೆ ಮುಂದುವರಿಸಲಾಗಿದೆಯೆಂದು ಭಾವಿಸತಕ್ಕದ್ದು.

(8) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲ ಅಪೀಲುಗಳು, ಕಾರ್ಯಸಾಧ್ಯವಾಗಬಹುದಾದಷ್ಟುಮಟ್ಟಿಗೆ, ಡೆಪ್ಯುಟಿ ಕಮಿಷನರು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಮಧ್ಯಕಾಲೀನ ಗ್ರಾಮ ಪಂಚಾಯತಿಯು ಅಥವಾ ಆಡಳಿತಗಾರನು ಅಥವಾ ಸಂದರ್ಭಾನುಸಾರವಾಗಿ ಹೊಸ ಗ್ರಾಮ ಪಂಚಾಯತಿಯು ವಿಲೇವಾರಿಗೊಳಿಸತಕ್ಕದ್ದು.

(9) ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಇತ್ಯರ್ಥದಲ್ಲಿದ್ದ ಅಸ್ತಿತ್ವದಲ್ಲಿದ್ದ ಗ್ರಾಮ ಪಂಚಾಯತಿಯಿಂದ ಅಥವಾ ಅದರ ಪರವಾಗಿ ಹೂಡಲಾದ ಎಲ್ಲ ಪ್ರಾಸಿಕ್ಯೂಷನ್‌ಗಳನ್ನು ಡೆಪ್ಯುಟಿ ಕಮಿಷನರು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಮಧ್ಯಕಾಲೀನ ಗ್ರಾಮ ಪಂಚಾಯತಿಗಳಿಂದ ಅಥವಾ ಆಡಳಿತಗಾರನಿಂದ ಅಥವಾ ಸಂದರ್ಭಾನುಸಾರವಾಗಿ ಹೊಸ ಗ್ರಾಮ ಪಂಚಾಯತಿಯಿಂದ ಅಥವಾ ಅದರ ಪರವಾಗಿ ಮುಂದುವರಿಸತಕ್ಕದ್ದು.

(10) ಹಿಂದಿನ ಉಪ-ಪ್ರಕರಣಗಳ ಉಪಬಂಧಗಳನ್ನು ಪರಿಣಾಮಕಾರಿಯನ್ನಾಗಿ ಮಾಡುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು, ಸಂದರ್ಭವು ಅಗತ್ಯಪಡಿಸಿದಂತೆ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ತೊಂದರೆಯನ್ನು ನಿವಾರಿಸಲು ಅದಕ್ಕೆ ಅವಶ್ಯಕವೆಂದು ಕಂಡುಬರುವಂಥ ಏನನ್ನಾದರೂ ಮಾಡಬಹುದು.][1]

1. ಉಪಪ್ರಕರಣ 1 ರಿಂದ 10ರವರೆಗೆ 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997 ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ VII

## ತಾಲ್ಲೂಕು ಪಂಚಾಯತಿಯ ರಚನೆ

**119. ತಾಲ್ಲೂಕು ಪಂಚಾಯತಿಯ ಸ್ಥಾಪನೆ ಮತ್ತು ಅದರ ನಿಗಮನ.-** (1) ಪ್ರತಿಯೊಂದು ತಾಲ್ಲೂಕಿಗೆ, ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಿದ [1][ಚಿಕ್ಕ ನಗರ ಪ್ರದೇಶದಲ್ಲಿ][1] ಸೇರ್ಪಡೆಯಾದ ಅಥವಾ ಪೌರನಿಗಮ, [1][ಪಟ್ಟಣ ಪಂಚಾಯತಿ ಅಥವಾ ಕೈಗಾರಿಕಾ ಉಪ-ನಗರದ][1] ಪ್ರಾಧಿಕಾರದ ಅಡಿಯಲ್ಲಿ ಇರುವ ತಾಲೂಕಿನ ಅಂಥ ಭಾಗಗಳನ್ನು ಹೊರತುಪಡಿಸಿ ಇಡೀ ತಾಲ್ಲೂಕಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ತಾಲ್ಲೂಕು ಪಂಚಾಯತಿ ಇರತಕ್ಕದ್ದು:

ಪರಂತು, ತಾಲ್ಲೂಕು ಪಂಚಾಯತಿಯು, ತಾಲ್ಲೂಕಿನಿಂದ ಹೊರತುಪಡಿಸಿದ ಭಾಗದಲ್ಲಿ ಒಳಗೊಂಡಿರುವ ಯಾವುದೇ ಪ್ರದೇಶದಲ್ಲಿ ಅದರ ಕಛೇರಿಯನ್ನು ಹೊಂದಿರಬಹುದು ಮತ್ತು ಅಂಥ ಪ್ರದೇಶದಲ್ಲಿ ಅದರ ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಶಾಲೆಗಳು, [2][ಆಸ್ಪತ್ರೆಗಳು][2] ಮತ್ತು ಇತರ ಸಂಸ್ಥೆಗಳ ಮೇಲೆ ಅದರ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸಬಹುದು, ಮತ್ತು ನಿರ್ವಹಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(2) ಪ್ರತಿಯೊಂದು ತಾಲ್ಲೂಕು ಪಂಚಾಯತಿ "...............ತಾಲ್ಲೂಕು ಪಂಚಾಯತಿ" ಎಂಬ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು, ಅದು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು, ಮತ್ತು ಈ ಅಧಿನಿಯಮಿತಿ ಅಥವಾ ಯಾವುದೇ ಇತರ ಅಧಿನಿಯಮಿತಿಯ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಲಾದಂಥ ನಿರ್ಬಂಧಗಳಿಗೆ ಒಳಪಟ್ಟು, ಅದರ ನಿಗಮಿತ ಹೆಸರಿನಲ್ಲಿ ದಾವೆ ಹೂಡುವ ಅಥವಾ ದಾವೆಗೆ ಗುರಿಯಾಗುವ, ಅದು ಅಧಿಕಾರವನ್ನು ಹೊಂದಿರುವಂಥ ಪ್ರದೇಶದ ಪರಿಮಿತಿಗಳೊಳಗೆ ಆಗಲಿ ಅಥವಾ ಅದರ ಹೊರಗೇ ಆಗಲಿ ಚರ ಅಥವಾ ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವರ್ಗಾವಣೆ ಮಾಡುವ, ಕರಾರುಗಳನ್ನು ಮಾಡಿಕೊಳ್ಳುವ ಮತ್ತು ಅದನ್ನು ರಚಿಸಲಾಗಿರುವಂಥ ಉದ್ದೇಶಕ್ಕೆ ಅವಶ್ಯ, ಸರಿ, ಅಥವಾ ವಿಹಿತವಾದ ಎಲ್ಲ ಕಾರ್ಯಗಳನ್ನು ಮಾಡುವ ಸಾಮರ್ಥ್ಯವು ಅದರಲ್ಲಿ ನಿಹಿತವಾಗಿರತಕ್ಕದ್ದು.

**120. ತಾಲ್ಲೂಕು ಪಂಚಾಯತಿ ರಚನೆ.-** (1) ಪ್ರತಿಯೊಂದು ತಾಲ್ಲೂಕು ಪಂಚಾಯತಿಯು,-

(i) 121ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿರುವಂತೆ ಚುನಾಯಿತ ಸದಸ್ಯರನ್ನು;

(ii) ಯಾವ ಲೋಕಸಭಾ ಮತ್ತು ರಾಜ್ಯ ವಿಧಾನಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳು ತಾಲ್ಲೂಕಿನ ಒಳಗೆ ಇದ್ದ ತಾಲ್ಲೂಕನ್ನು ಪೂರ್ತಿ ಅಥವಾ ಭಾಗಶಃ ಪ್ರತಿನಿಧಿಸುತ್ತಾರೋ ಆ ಸದಸ್ಯರನ್ನು;

(iii) ತಾಲ್ಲೂಕಿನಲ್ಲಿ ಮತದಾರರಾಗಿ ನೋಂದಾಯಿತವಾಗಿರುವ ರಾಜ್ಯ ಸಭಾ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ; ಮತ್ತು

(iv) [1][ತಾಲ್ಲೂಕು ಪಂಚಾಯತಿಯ ಅಧ್ಯಕ್ಷನು][1] ಚೀಟಿ ಎತ್ತುವ ಮೂಲಕ ನಿರ್ಧರಿಸುವಂತೆ, ಒಂದು ವರ್ಷದ ಅವಧಿಗೆ, ಸರದಿಯ ಪ್ರಕಾರ ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳ ಸಂಖ್ಯೆಯ ಐದನೆಯ ಒಂದರಷ್ಟು, [2][ಈ ಪೈಕಿ ಒಬ್ಬರು ಮಹಿಳೆ ಇರತಕ್ಕದ್ದು ಮತ್ತು ಅನುಸೂಚಿತ ಜಾತಿಗಳಿಂದ ಮತ್ತು ಅನುಸೂಚಿತ ಪಂಗಡಗಳಿಂದ ಒಬ್ಬೊಬ್ಬರಂತೆ][2] ಅಧ್ಯಕ್ಷರುಗಳನ್ನು,

-ಒಳಗೊಂಡಿರತಕ್ಕದ್ದು:

ಪರಂತು, ಈ ಖಂಡದ ಮೇರೆಗೆ ಒಬ್ಬ ಸದಸ್ಯನಾಗಿದ್ದ ಅಧ್ಯಕ್ಷನು, ಅಧ್ಯಕ್ಷನಾಗಿ ತನ್ನ ಅಧಿಕಾರ ಅವಧಿಯ ಉಳಿಕೆ ಅವಧಿಯಲ್ಲಿ ಎರಡನೆ ಅವಧಿಗೆ ಸದಸ್ಯನಾಗಲು ಅರ್ಹನಾಗತಕ್ಕದ್ದಲ್ಲ.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

[1][(2) (1)ನೇ ಉಪ-ಪ್ರಕರಣದ (ii), (iii) ಮತ್ತು (iv) ಖಂಡಗಳಲ್ಲಿ ಉಲ್ಲೇಖಿಸಲಾದ ಲೋಕಸಭೆಯ, ರಾಜ್ಯ ವಿಧಾನ ಸಭೆಯ, ರಾಜ್ಯ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಮತ್ತು ಗ್ರಾಮ ಪಂಚಾಯತಿಗಳ ಅಧ್ಯಕ್ಷರು, 138ನೇ ಪ್ರಕರಣದ (1)ನೇ ಉಪ-ಪ್ರಕರಣದಡಿ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ಅಥವಾ 140ನೇ ಪ್ರಕರಣದ (3)ನೇ ಉಪ-ಪ್ರಕರಣದಡಿ ಅವಿಶ್ವಾಸ ನಿರ್ಣಯವನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಕರೆದ ವಿಶೇಷ ಸಭೆಗಳನ್ನು ಹೊರತುಪಡಿಸಿ, ತಾಲೂಕು ಪಂಚಾಯತಿಯ ಯಾವುವೇ ಸಭೆಗಳ ವ್ಯವಹರಣೆಗಳಲ್ಲಿ ಭಾಗವಹಿಸಲು ಮತ್ತು ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(3) ಈ ಪ್ರಕರಣದಲ್ಲಿ ಅಥವಾ 121, 122 ಮತ್ತು 123ನೇ ಪ್ರಕರಣಗಳಲ್ಲಿ ಏನೇ ಇದ್ದರೂ ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಚುನಾಯಿಸಬೇಕೆಂದು ಅಗತ್ಯಪಡಿಸಿದ ಯಾವುದೇ ತಾಲ್ಲೂಕು ಪಂಚಾಯತಿಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಸದಸ್ಯರು ಚುನಾಯಿತರಾಗಿರುವಲ್ಲಿ ತಾಲ್ಲೂಕು ಪಂಚಾಯತಿಯನ್ನು ಈ ಅಧಿನಿಯಮದ ಅಡಿಯಲ್ಲಿ ಕ್ರಮಬದ್ಧವಾಗಿ ರಚಿಸಲಾಗಿದೆಯೆಂದು ಭಾವಿಸತಕ್ಕದ್ದು.

**121. ಚುನಾಯಿತ ಸದಸ್ಯರು.-** ತಾಲ್ಲೂಕು ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯು, [1][ರಾಜ್ಯ ಚುನಾವಣಾ ಆಯೋಗದಿಂದ][1] ಕಾಲಕಾಲಕ್ಕೆ ಅಧಿಸೂಚಿಸಲಾಗುವ ತಾಲ್ಲೂಕಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ, ತಾಲ್ಲೂಕಿನ [2][ಪ್ರತಿ ಹನ್ನೆರಡು ಸಾವಿರದ ಐದುನೂರು ಮತ್ತು ಹದಿನೈದು ಸಾವಿರ ಈ ನಡುವಣ ಜನಸಂಖ್ಯೆಗೆ][2] ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನಂತೆ ಚುನಾಯಿತರಾದ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು:

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಒಂದು ಲಕ್ಷಕ್ಕಿಂತ ಹೆಚ್ಚಿಲ್ಲದ ಜನಸಂಖ್ಯೆ ಇರುವ ತಾಲ್ಲೂಕುಗಳಿಗೆ ಕನಿಷ್ಠ ಹನ್ನೊಂದು ಮಂದಿ ಚುನಾಯಿತ ಸದಸ್ಯರಿರತಕ್ಕದ್ದು.

**122. ಪ್ರತಿಯೊಂದು ಜನಗಣತಿಯ ತರುವಾಯ ಚುನಾಯಿತ ಸದಸ್ಯರುಗಳ ಬಗ್ಗೆ ನಿರ್ಧರಣೆ.-** ಪ್ರತಿಯೊಂದು ಜನಗಣತಿಯ ಅಂಕಿ ಅಂಶಗಳನ್ನು ಪ್ರಕಟಿಸಿದ ಮೇಲೆ ತಾಲ್ಲೂಕು ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು, ಆ ಜನಗಣತಿಯಲ್ಲಿ ಖಚಿತ ಪಡಿಸಿಕೊಂಡಂತೆ ತಾಲ್ಲೂಕಿನ ಜನಸಂಖ್ಯೆಯ ಆಧಾರದ ಮೇಲೆ [1][[2][ರಾಜ್ಯ ಚುನಾವಣಾ ಆಯೋಗವು][2] ನಿರ್ಧರಿಸತಕ್ಕದ್ದು:][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಹಿಂದೆ ಹೇಳಿದಂತೆ ಜನಸಂಖ್ಯೆಯ ನಿರ್ಧರಣೆಯು, ಆಗ ಅಧಿಕಾರದಲ್ಲಿದ್ದ ಚುನಾಯಿತ ಸದಸ್ಯರ ಪದಾವಧಿಯು, ಮುಕ್ತಾಯವಾಗುವವರೆಗೆ ತಾಲ್ಲೂಕು ಪಂಚಾಯತಿಯ ಆಗಿನ ರಚನೆಯನ್ನು ಬಾಧಿಸತಕ್ಕದ್ದಲ್ಲ.

**123. ಸ್ಥಾನಗಳ ಮೀಸಲಾತಿ.-** (1) ತಾಲ್ಲೂಕು ಪಂಚಾಯತಿಯಲ್ಲಿ,-

(ಎ) ಅನುಸೂಚಿತ ಜಾತಿಗಳಿಗಾಗಿ, ಮತ್ತು

(ಬಿ) ಅನುಸೂಚಿತ ಪಂಗಡಗಳಿಗಾಗಿ ಸ್ಥಾನಗಳನ್ನು [1][[2][ರಾಜ್ಯ ಚುನಾವಣಾ ಆಯೋಗವು][2] ಮೀಸಲಿರಿಸತಕ್ಕದ್ದು][1] ಮತ್ತು ಹಾಗೆ ಮೀಸಲಿರಿಸಲಾದ ಸ್ಥಾನಗಳ ಸಂಖ್ಯೆಯು, ತಾಲ್ಲೂಕಿನಲ್ಲಿನ ಅನುಸೂಚಿತ ಜಾತಿಗಳ ಅಥವಾ ತಾಲ್ಲೂಕಿನಲ್ಲಿನ ಅನುಸೂಚಿತ ಪಂಗಡಗಳ ಜನಸಂಖ್ಯೆಯು, ತಾಲ್ಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಯಾವ ಅನುಪಾತದಲ್ಲಿರುವುದೋ ಆದಷ್ಟುಮಟ್ಟಿಗೆ ತಾಲ್ಲೂಕು ಪಂಚಾಯತಿಯಲ್ಲಿ ನೇರ ಚುನಾವಣೆಯ ಮೂಲಕ ತುಂಬಬಹುದಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಅದೇ ಅನುಪಾತದಲ್ಲಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

[1][ಪರಂತುಕ x x x][1]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಬಿಟ್ಟುಬಿಡಲಾಗಿದೆ.

[1][ಪರಂತು, ಪ್ರತಿ ತಾಲ್ಲೂಕು ಪಂಚಾಯತಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು.][1]

1. 2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 25-04-2000ರಿಂದ ಸೇರಿಸಲಾಗಿದೆ.

(2) ತಾಲ್ಲೂಕು ಪಂಚಾಯತಿಯಲ್ಲಿನ ಒಟ್ಟು ಸಂಖ್ಯೆಯ ಸ್ಥಾನಗಳ ಮೂರನೇ ಒಂದರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ [1][[2][ರಾಜ್ಯ ಚುನಾವಣಾ ಆಯೋಗವು][2] ಮೀಸಲಿರಿಸತಕ್ಕದ್ದು][1]: [3][ಆದರೆ ಈ ಉಪ ಪ್ರಕರಣದಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ನಿರ್ಧರಿಸಿ ಮೀಸಲಿರಿಸಿದ ಒಟ್ಟು ಸ್ಥಾನಗಳ ಸಂಖ್ಯೆಯು, (1)ನೇ ಉಪ ಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಮತ್ತು ಈ ಉಪ ಪ್ರಕರಣದಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು, ತಾಲ್ಲೂಕು ಪಂಚಾಯತಿಯಲ್ಲಿಯ ಸ್ಥಾನಗಳ ಒಟ್ಟು ಸಂಖ್ಯೆ ಶೇಕಡಾ ಐವತ್ತನ್ನು, ಮೀರತಕ್ಕದ್ದಲ್ಲ.][3]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.

[1][ಪರಂತು, ಈ ಉಪ-ಪ್ರಕರಣದಡಿಯಲ್ಲಿ ಮೀಸಲಿರಿಸಿದ ಸ್ಥಾನಗಳ ಪೈಕಿ ಅಂಥ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ಎಂಬತ್ತರಷ್ಟು ಸ್ಥಾನಗಳನ್ನು 'ಎ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ [2][[3][ರಾಜ್ಯ ಚುನಾವಣಾ ಆಯೋಗವು][3]

ಮೀಸಲಿರಿಸತಕ್ಕದ್ದು][2] ಮತ್ತು ಉಳಿದ ಶೇಕಡಾ ಇಪ್ಪತ್ತರಷ್ಟು ಸ್ಥಾನಗಳನ್ನು 'ಬಿ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ [2][[3][ರಾಜ್ಯ ಚುನಾವಣಾ ಆಯೋಗವು]][3] ಮೀಸಲಿರಿಸತಕ್ಕದ್ದು.][2]][1]

1. 1995ರ ಅಧಿನಿಯಮ ಸಂಖ್ಯೆ: 1೦ರ ಮೂಲಕ ದಿನಾಂಕ: 13–೦1–1995ರಿಂದ ಸೇರಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦–1೦–1997ರಿಂದ ಪ್ರತಿಯೋಜಿಸಲಾಗಿದೆ.
3. 2೦೦3ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: ೦1–1೦–2೦೦3ರಿಂದ ಪ್ರತಿಯೋಜಿಸಲಾಗಿದೆ.

(3) ತಾಲ್ಲೂಕು ಪಂಚಾಯತಿಯಲ್ಲಿ, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಪ್ರತಿಯೊಂದು ಪ್ರವರ್ಗಕ್ಕೆ ಮೀಸಲಿರಿಸಲಾದ ಹಾಗೂ ಮೀಸಲಿರಿಸದ ಸ್ಥಾನಗಳ [3][ಶೇಕಡಾ ಐವತ್ತರಷ್ಟಕ್ಕೆ][3] ಕಡಿಮೆಯಿಲ್ಲದ ಸ್ಥಾನಗಳ್ನು ಮಹಿಳೆಯರಿಗೆ [4][ಒಟ್ಟಾರೆಯಾಗಿ ಅರ್ಧದಷ್ಟು ಪರಿಮಿತಿಗೆ ಒಳಪಟ್ಟು ಮುಂದಿನ ಸಂಖ್ಯೆಗೆ ಪೂರ್ಣಾಂಕಗೊಳಿಸಿದಷ್ಟು][4] [1][[2][ರಾಜ್ಯ ಚುನಾವಣಾ ಆಯೋಗವು]][2] ಮೀಸಲಿರಿಸತಕ್ಕದ್ದು][1]

ಪರಂತು, (1) (2) ಮತ್ತು (3)ನೇ ಉಪ–ಪ್ರಕರಣಗಳ ಮೇರೆಗೆ ಮೀಸಲಿರಿಸಲಾದ ಸ್ಥಾನಗಳನ್ನು ತಾಲ್ಲೂಕಿನಲ್ಲಿನ ವಿವಿಧ ಚುನಾವಣಾ ಕ್ಷೇತ್ರಗಳಿಗೆ ಸರದಿಯ ಪ್ರಕಾರ ಹಂಚತಕ್ಕದ್ದು [4][ಅಂಥ ಸರದಿಯು ಹತ್ತು ವರ್ಷಗಳ ಅವಧಿಯವರೆಗೆ ಮುಂದುವರೆಯತಕ್ಕದ್ದು][4]:

ಅಷ್ಟೇ ಅಲ್ಲದೆ, ಈ ಪ್ರಕರಣದಲ್ಲಿ ಅಡಕವಾಗಿರುವುದಾವುದೂ ತಾಲ್ಲೂಕು ಪಂಚಾಯತಿಯಲ್ಲಿ ಯಾರಿಗಾಗಿ ಸ್ಥಾನಗಳನ್ನು ಮೀಸಲಿರಿಸಲಾಗಿದೆಯೋ, ಆ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳು ಅಥವಾ ಹಿಂದುಳಿದ ವರ್ಗಗಳು ಅಥವಾ ಮಹಿಳೆಯರನ್ನು ಅಂಥ ತಾಲ್ಲೂಕು ಪಂಚಾಯತಿಯಲ್ಲಿ ಮೀಸಲು ಇರಿಸದೇ ಇರುವ ಸ್ಥಾನಗಳಿಗೆ ಚುನಾವಣೆಗೆ ನಿಲ್ಲುವುದನ್ನು ತಡೆಗಟ್ಟುವುದೆಂದು ಭಾವಿಸತಕ್ಕದ್ದಲ್ಲ.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦–1೦–1997ರಿಂದ ಪ್ರತಿಯೋಜಿಸಲಾಗಿದೆ.
2. 2೦೦3ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: ೦1–1೦–2೦೦3ರಿಂದ ಪ್ರತಿಯೋಜಿಸಲಾಗಿದೆ.
3. 2೦1೦ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23–೦7–2೦1೦ರಿಂದ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

**124. ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ.–** [1][ರಾಜ್ಯ ಚುನಾವಣಾ ಆಯೋಗವು][1] ಅಧಿಸೂಚನೆಯ ಮೂಲಕ, –

1. 2೦೦3ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: ೦1–1೦–2೦೦3ರಿಂದ ಪ್ರತಿಯೋಜಿಸಲಾಗಿದೆ.

(ಎ) ಅಂಥ ತಾಲ್ಲೂಕು ಪಂಚಾಯತಿಗೆ ಚುನಾವಣೆ ನಡೆಸುವ ಉದ್ದೇಶಕ್ಕಾಗಿ ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗಿರುವ ಪ್ರದೇಶವನ್ನು, 121ನೇ ಪ್ರಕರಣದ ಅಡಿಯಲ್ಲಿ ಚುನಾಯಿಸಬೇಕಾಗಿರುವ ಸದಸ್ಯರ ಸಂಖ್ಯೆಗನುಗುಣವಾಗಿ ಏಕಸದಸ್ಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಂಗಡಿಸತಕ್ಕದ್ದು;

(ಬಿ) ಪ್ರತಿಯೊಂದು ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು;

(ಸಿ) ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿರಿಸಿರುವಂಥ ಪ್ರಾದೇಶಿಕ ಚುನಾವಣಾ ಕ್ಷೇತ್ರವನ್ನು ಅಥವಾ ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸತಕ್ಕದ್ದು.

**125. ಮತದಾನದ ಹಕ್ಕು.–** (1) ಒಂದು ಚುನಾವಣಾ ಕ್ಷೇತ್ರಕ್ಕೆ ಸಂಬಂಧಪಟ್ಟ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಯೂ ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಮತದಾರರ ಪಟ್ಟಿಯು ಜಾರಿಯಲ್ಲಿರುವಾಗ ಆ ಚುನಾವಣಾ ಕ್ಷೇತ್ರದಲ್ಲಿ ನಡೆಯುವಂಥ ಯಾವುದೇ ಚುನಾವಣೆಯಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಮತದಾರರ ಪಟ್ಟಿಯಲ್ಲಿ ಹೆಸರು ಇರದಿರುವ ಯಾವ ವ್ಯಕ್ತಿಯೂ ಅಂಥ ಯಾವುದೇ ಚುನಾವಣೆಯಲ್ಲಿ ಮತ ನೀಡತಕ್ಕದ್ದಲ್ಲ.

(2) ಯಾವನೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿನ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಲ್ಲಿ ಅಥವಾ ಅದೇ ಚುನಾವಣಾ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮತ ನೀಡತಕ್ಕದ್ದಲ್ಲ ಮತ್ತು ಅವನು ಹಾಗೆ ಮಾಡಿದರೆ ಅವನ ಎಲ್ಲ ಮತಗಳು ಅಸಿಂಧುವಾಗತಕ್ಕದ್ದು.

[1][(3) ಪಂಚಾಯತಿಯ ಚುನಾವಣೆಯಲ್ಲಿ ಮತನೀಡುವುದು ತಾಲ್ಲೂಕು ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅದು ಕಡ್ಡಾಯವಾಗಿರತಕ್ಕದ್ದು. ಆದಾಗ್ಯೂ, (4)ನೇ ಉಪಪ್ರಕರಣದಲ್ಲಿ ಸೂಚಿಸಿದಂತೆ ಆತನು ತನ್ನ ಮತವನ್ನು ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ಚಲಾಯಿಸಲು ಸ್ವತಂತ್ರನಾಗಿರತಕ್ಕದ್ದು.

(4) ಚುನಾವಣಾ ಆಯುಕ್ತರು ಸೂಕ್ತ ಉಪಬಂಧವನ್ನು ಕಲ್ಪಿಸಿದರೆ, ಆತನು ಯಾವುದೇ ಅಭ್ಯರ್ಥಿಯ ಪರವಾಗಿ ಮತ ನೀಡಲು ಬಯಸದಿದ್ದ ಪಕ್ಷದಲ್ಲಿ, ಅರ್ಹ ಮತದಾರನು ತನ್ನ ಮತವನ್ನು ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ಚಲಾಯಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

**126. ಮತದಾರರ ಪಟ್ಟಿ.–** (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಚುನಾವಣಾ ಕ್ಷೇತ್ರದ ಅಂಥ ಭಾಗಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯು ಅಂಥ ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಾಗಿರುವುದಾಗಿ ಭಾವಿಸತಕ್ಕದ್ದು.

(2) ಚುನಾವಣಾ ಕ್ಷೇತ್ರದಲ್ಲಿ ಯಾವುದೇ ತಾಲ್ಲೂಕು ಪಂಚಾಯತಿಯ ಚುನಾವಣೆಗಾಗಿ ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿರುವ ಕೊನೆಯ ದಿನಾಂಕದ ತರುವಾಯ ಮತ್ತು ಅಂಥ ಚುನಾವಣೆಯು ಮುಕ್ತಾಯವಾಗುವುದಕ್ಕೆ ಮುಂಚೆ ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ಮಾಡಿದ ಯಾವುದೇ ನಮೂದಿನ ಯಾವುದೇ ತಿದ್ದುಪಡಿಯು, ಸ್ಥಾನ ಬದಲಾವಣೆಯು ಅಥವಾ ಬಿಟ್ಟುಬಿಟ್ಟಿರುವುದು ಈ ಪ್ರಕರಣದ ಉದ್ದೇಶಕ್ಕಾಗಿ ಅಂಥ ಚುನಾವಣೆಯ ಮತದಾರರ ಪಟ್ಟಿಯ ಭಾಗವಾಗತಕ್ಕದ್ದಲ್ಲ.

[1][(3) ಸಂಬಂಧಪಟ್ಟ ತಹಶೀಲ್ದಾರನು ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ಚುನಾವಾಣಾ ಕ್ಷೇತ್ರಕ್ಕಾಗಿ ಮತದಾರರ ಪಟ್ಟಿಯನ್ನು ನಿಯಮಿಸಲಾದ ರೀತಿಯಲ್ಲಿ ತಯಾರಿಸತಕ್ಕದ್ದು ಮತ್ತು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು ಅಂಥ ಪಟ್ಟಿಯ ಪ್ರತಿಯೊಂದನ್ನು ಇಟ್ಟುಕೊಂಡು ಬರತಕ್ಕದ್ದು.][1]

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 21-09-1998ರಿಂದ ಪ್ರತಿಯೋಜಿಸಲಾಗಿದೆ.

**127. ಅಭ್ಯರ್ಥಿಯ ಅರ್ಹತೆಗಳು.-** (1) ಒಬ್ಬ ವ್ಯಕ್ತಿಯು ತಾಲ್ಲೂಕು ಪಂಚಾಯತಿಯಲ್ಲಿನ ಒಂದು ಸ್ಥಾನವನ್ನು ತುಂಬಲು ಆಯ್ಕೆಯಾಗಲು ತಾಲ್ಲೂಕಿನಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿ ಇರುವ ತಾಲ್ಲೂಕು ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ಆತನ ಹೆಸರು ಇದ್ದ ಹೊರತು ಅರ್ಹನಾಗತಕ್ಕದ್ದಲ್ಲ.

(2) ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಅಥವಾ ಮಹಿಳೆಯರಿಗಾಗಿ ಮೀಸಲಿರಿಸಿದ ಸ್ಥಾನದ ಸಂಬಂಧದಲ್ಲಿ, ಅಂಥ ವ್ಯಕ್ತಿಯು, ಆ ಜಾತಿಗಳ ಅಥವಾ ಪಂಗಡಗಳ ಅಥವಾ ವರ್ಗಗಳ ವ್ಯಕ್ತಿ ಅಥವಾ ಮಹಿಳೆಯಾಗಿದ್ದ ಹೊರತು, ತಾಲ್ಲೂಕು ಪಂಚಾಯತಿಯಲ್ಲಿನ ಸ್ಥಾನವನ್ನು ತುಂಬಲು ಪ್ರಾದೇಶಿಕ ಚುನಾವಣಾ ಕ್ಷೇತ್ರದಿಂದ ಆಯ್ಕೆಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

**128. ಸದಸ್ಯನಾಗಲು ಅನರ್ಹತೆ.-** (1) ಒಬ್ಬ ವ್ಯಕ್ತಿಯು, ತಾಲ್ಲೂಕು ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು,-

(ಎ) ರಾಜ್ಯ ವಿಧಾನ ಮಂಡಲಕ್ಕೆ ನಡೆಯುವ ಚುನಾವಣೆಗಳ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಿಂದ ಅಥವಾ ಅದರ ಅಡಿಯಲ್ಲಿ ಅನರ್ಹನಾಗಿದ್ದರೆ:

ಪರಂತು, ಯಾವ ವ್ಯಕ್ತಿಯು ಅವನು ಇಪ್ಪತ್ತೊಂದು ವರ್ಷ ವಯಸ್ಸಿನವನಾಗಿದ್ದರೆ, ಅವನು ಇಪ್ಪತ್ತೈದು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವನೆಂಬ ಕಾರಣಕ್ಕಾಗಿ ಅನರ್ಹನಾಗತಕ್ಕದ್ದಲ್ಲ;

(ಬಿ) ಅವನು, 1987ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮದ ಅಡಿಯಲ್ಲಿ ಅನರ್ಹನಾಗಿದ್ದರೆ; ಅಥವಾ

(ಸಿ) 1965ರ ಕರ್ನಾಟಕ ಅಬ್ಕಾರಿ ಅಧಿನಿಯಮದ (1966ರ ಕರ್ನಾಟಕ ಅದಿನಿಯಮ 21) ಅಡಿಯಲ್ಲಿನ ಅಪರಾಧದ ಸಂಬಂಧದಲ್ಲಿ ಕ್ರಿಮಿನಲ್ ನ್ಯಾಯಾಲಯವು ಅವನಿಗೆ ಮೂರು ತಿಂಗಳು ಮೀರಿದ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಿದ್ದರೆ, ಅಂಥ ಶಿಕ್ಷೆಯನ್ನು ಆ ತರುವಾಯ, ವ್ಯತಿರಿಕ್ತಗೊಳಿಸಿರದಿದ್ದರೆ ಅಥವಾ ರದ್ದುಗೊಳಿಸಿರದಿದ್ದರೆ ಅಥವಾ ಅಪರಾಧವನ್ನು ಮನ್ನಿಸಿಲ್ಲದಿದ್ದಲ್ಲಿ; ಅಥವಾ

(ಡಿ) 1973ರ ದಂಡ ಪ್ರಕ್ರಿಯಾ ಸಂಹಿತೆಯ (ಕೇಂದ್ರಾಧಿನಿಯಮ 1974ರ 2) 110ನೇ ಪ್ರಕರಣದ ಅಡಿಯಲ್ಲಿ ಹೂಡಿದ ವ್ಯವಹರಣೆಗಳಲ್ಲಿ ಆ ಸಂಹಿತೆಯ 117ನೇ ಪ್ರಕರಣದ ಅಡಿಯಲ್ಲಿ ಅವನ ವಿರುದ್ಧ ಆದೇಶವನ್ನು ಮಾಡಿದ್ದರೆ, ಅಂಥ ಆದೇಶವನ್ನು ತರುವಾಯ ವ್ಯತಿರಿಕ್ತಗೊಳಿಸಿರದಿದ್ದರೆ, ಅಥವಾ ರದ್ದುಗೊಳಿಸಿರದಿದ್ದರೆ; ಅಥವಾ

(ಇ) ಅವನನ್ನು ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದ ಸೇವೆಯಿಂದ ವಜಾ ಮಾಡಿದ್ದರೆ; ಅಥವಾ

(ಎಫ್) ಲೀಗಲ್ ಅಥವಾ ಮೆಡಿಕಲ್ ಪ್ರಾಕ್ಟೀಶನರ್ ಅಥವಾ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದು, ಸಕ್ಷಮ ಪ್ರಾಧಿಕಾರಿಯ ಆದೇಶದ ಮೂಲಕ ಅವನನ್ನು ಪಟ್ಟಿಯಿಂದ ತೆಗೆದುಹಾಕಿದ್ದರೆ ಅಥವಾ ಅಮಾನತ್ತಿನಲ್ಲಿಟ್ಟಿದ್ದರೆ ಎರಡನೆಯ ಸಂದರ್ಭದಲ್ಲಿನ ಅನರ್ಹತೆಯು ಅಂಥ ಅಮಾನತ್ತಿನ ಅವಧಿಯಲ್ಲಿ ಜಾರಿಯಲ್ಲಿದ್ದರೆ; ಅಥವಾ

(ಜಿ) ಅವನನ್ನು ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯತ್ವದಿಂದ ತೆಗೆದುಹಾಕಿದ್ದರೆ; ಅಥವಾ

(ಹೆಚ್) ಈ ಅಧಿನಿಯಮದ ಅಡಿಯಲ್ಲಿ ರಚಿಸಿರುವ ನಿಯಮಗಳ ಮೂಲಕ ಆ ಹುದ್ದೆಯನ್ನು ಹೊಂದಿರುವವನನ್ನು ಅರ್ಹಗೊಳಿಸತಕ್ಕದ್ದಲ್ಲವೆಂದು ಘೋಷಿಸಿರುವಂಥ ಹುದ್ದೆಗಳನ್ನು ಹೊರತುಪಡಿಸಿ, ಭಾರತ ಸರ್ಕಾರದ ಅಥವಾ ಕರ್ನಾಟಕ ಸರ್ಕಾರದ ಅಥವಾ ಇತರ ಯಾವುದೇ ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟ ಯಾವುದೇ ಸ್ಥಳೀಯ ಅಥವಾ ಯಾವುದೇ ಇತರ ಪ್ರಾಧಿಕಾರದ ಅಡಿಯಲ್ಲಿ ಯಾವುದೇ ಲಾಭದಾಯಕ ಹುದ್ದೆಯನ್ನು ಅವನು ಹೊಂದಿದ್ದರೆ; ಅಥವಾ

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಯು, ಅವನು ಜಿಲ್ಲಾ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿರುವ ಕಾರಣಮಾತ್ರದಿಂದಲೇ ಲಾಭದಾಯಕ ಹುದ್ದೆಯನ್ನು ಹೊಂದಿರುವನೆಂದು ಭಾವಿಸತಕ್ಕದ್ದಲ್ಲ;

(ಐ) ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಹೊರತು, ತಾಲ್ಲೂಕು ಪಂಚಾಯತಿಯ ಆದೇಶದ ಮೂಲಕ ಮಾಡಿದ ಯಾವುದೇ ಕಾಮಗಾರಿಯಲ್ಲಿ ಅಥವಾ ತಾಲ್ಲೂಕು ಪಂಚಾಯತಿಯೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರು ಅಥವಾ ಉದ್ಯೋಗದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ [1][ಅಥವಾ ತಾಲ್ಲೂಕು ಪಂಚಾಯತಿಯ ಪರವಾಗಿ ಯಾವುದೇ ಅಂಥ ಕಾಮಗಾರಿ ಅಥವಾ ಕರಾರನ್ನು ಅಥವಾ ತಾಲ್ಲೂಕು ಪಂಚಾಯತಿಗೆ ಸರಕುಗಳನ್ನು ಮತ್ತು ಸೇವೆಗಳನ್ನು ಪೂರೈಸುವುದಕ್ಕಾಗಿ ಯಾವುದೇ ಕರಾರನ್ನು ಪಡೆದುಕೊಳ್ಳುವಲ್ಲಿ ಅಥವಾ ನಿರ್ವಹಿಸುವಲ್ಲಿ ಆತನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನಾಗಿಯೇ ಆಗಲಿ ಅಥವಾ ತನ್ನ ಏಜೆಂಟ್ ಅಥವಾ ಪಾಲುದಾರ ಅಥವಾ ನೌಕರನ ಮೂಲಕವಾಗಿಯೇ ಆಗಲಿ ತೊಡಗಿದ್ದರೆ;][1] ಅಥವಾ

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

[1][(ಜೆ) ಆತನು ತನ್ನ ಕುಟುಂಬದ ಸದಸ್ಯರುಗಳ ಉಪಯೋಗಕ್ಕಾಗಿ ಶೌಚಗೃಹವನ್ನು, ಒದಗಿಸಿರದಿದ್ದರೆ:

[2][ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಒಬ್ಬ ವ್ಯಕ್ತಿಯು ತನ್ನ ಉಮೇದುವಾರಿಕೆಯನ್ನು ಸಲ್ಲಿಸುವ ಸಮಯದಲ್ಲಿ ಒಬ್ಬ ಸದಸ್ಯನಾಗಿ ತನ್ನ ಹುದ್ದೆಯ ಅವಧಿಯ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ, ತನ್ನ ಕುಟುಂಬದ ಸದಸ್ಯರ ಉಪಯೋಗಕ್ಕಾಗಿ ಶೌಚ ಗೃಹವನ್ನು ನಿರ್ಮಿಸುವುದಾಗಿ ಒಂದು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದರೆ ಹಾಗೂ ಸದಸ್ಯನಾದ ತರುವಾಯ ಅಂಥ ಮುಚ್ಚಳಿಕೆಯಲ್ಲಿರುವುದನ್ನು ಪಾಲಿಸಿದರೆ, ಅವನಿಗೆ ಅನ್ವಯವಾಗತಕ್ಕದ್ದಲ್ಲ;][2]][1]

1.2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.
2.2000ದ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 25-04-2000ದಿಂದ ಪ್ರತಿಯೋಜಿಸಲಾಗಿದೆ.

[1][(ಜೆ-1) ಅವನು, 308ಸಿ ಪ್ರಕರಣದ ಅಡಿಯಲ್ಲಿ ಅನರ್ಹನಾಗಿದ್ದರೆ ಅಥವಾ][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ದಿಂದ ಸೇರಿಸಲಾಗಿದೆ.

[1][(ಕೆ)][1] ತಾಲ್ಲೂಕು ಪಂಚಾಯತಿಯ ಪರವಾಗಿ ವೇತನ ಪಡೆಯುವ ಲೀಗಲ್ ಪ್ರಾಕ್ಟೀಷನರ್ ಆಗಿ ನಿಯೋಜಿತನಾಗಿದ್ದರೆ ಅಥವಾ ತಾಲ್ಲೂಕು ಪಂಚಾಯತಿಯ ವಿರುದ್ಧ ಲೀಗಲ್ ಪ್ರಾಕ್ಟೀಷನರ್ ಆಗಿ ಉದ್ಯೋಗವನ್ನು ಅಂಗೀಕರಿಸಿದ್ದರೆ,

-ಅನರ್ಹನಾಗತಕ್ಕದ್ದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸಂಖ್ಯೆ ನೀಡಲಾಗಿದೆ.

ಪರಂತು,-

(ಎ) (ಡಿ) ಖಂಡದಲ್ಲಿನ ಅನರ್ಹತೆಯು, ಭದ್ರತೆಯನ್ನು ಒದಗಿಸಲು ವ್ಯಕ್ತಿಗೆ ಆದೇಶಿಸಿದಂಥ ಅವಧಿಯ ಮುಕ್ತಾಯದ ತರುವಾಯ, ಜಾರಿಯಲ್ಲಿರುವುದು ನಿಂತುಹೋಗುತ್ತದೆ.

(ಬಿ) (ಸಿ), (ಇ) ಅಥವಾ (ಎಫ್) ಖಂಡಗಳಲ್ಲಿನ, ಅನರ್ಹತೆಯು, ಅಂಥ ಶಿಕ್ಷೆಯ ಅಥವಾ ವಜಾ ಮಾಡಿರುವ ಅಥವಾ ಪಟ್ಟಿಯಿಂದ ತೆಗೆದುಹಾಕಿರುವ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಜಾರಿಯಲ್ಲಿರುವುದು ನಿಂತುಹೋಗುತ್ತದೆ.

(ಸಿ) (ಜಿ) ಖಂಡದಲ್ಲಿರುವ ಅನರ್ಹತೆಯು, ಹಾಗೆ ತೆಗೆದುಹಾಕಿದ ದಿನಾಂಕದದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ನಿಂತುಹೋಗುತ್ತದೆ.

[1][(ಸಿಸಿ) (ಜೆ-1) ಖಂಡದಲ್ಲಿಯ ಅನರ್ಹತೆಯು 308ಸಿ ಪ್ರಕರಣದ ಅಡಿಯಲ್ಲಿ ರಾಜ್ಯ ಚುನಾವಣಾ ಆಯೋಗದ ಆದೇಶದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ದಿಂದ ಸೇರಿಸಲಾಗಿದೆ.

(ಡಿ) (ಐ) ಖಂಡದಲ್ಲಿನ ಅನರ್ಹತೆಗೆ, ವ್ಯಕ್ತಿಯು ಅವನು,-

(i) ತಾಲ್ಲೂಕು ಪಂಚಾಯತಿಯೊಂದಿಗೆ ಕರಾರು ಮಾಡಿಕೊಳ್ಳುವ ಅಥವಾ ಅದರಿಂದ ಅಥವಾ ಅದರ ಪರವಾಗಿ ನಿಯೋಜಿತವಾದ ಯಾವುದೇ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿ ಷೇರು ಅಥವಾ 1960ರ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದ (ಕರ್ನಾಟಕ ಅಧಿನಿಯಮ 1960ರ 17) ಅಡಿಯಲ್ಲಿ ನೋಂದಾಯಿತವಾದ ಯಾವುದೇ ಸಂಘದಲ್ಲಿ ಅಥವಾ ಯಾವುದೇ ಸಹಕಾರ ಸಂಘದಲ್ಲಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ii) ತಾಲ್ಲೂಕು ಪಂಚಾಯತಿಯ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಪ್ರಕಟಿಸಿರುವಂಥ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(iii) ಡಿಬೆಂಚರು ಪತ್ರವನ್ನು ಹೊಂದಿರುವ ಅಥವಾ ತಾಲ್ಲೂಕು ಪಂಚಾಯತಿಯು ಅಥವಾ ಅದರ ಪರವಾಗಿ ಎತ್ತಿದ ಯಾವುದೇ ಸಾಲದಲ್ಲಿ ಅಥವಾ ಅನ್ಯಥಾ ಸಂಬಂಧಪಟ್ಟಿರುವ,

-ಕಾರಣದಿಂದಾಗಿಯೇ ಗುರಿಯಾಗಿದ್ದಾನೆಂದು ಭಾವಿಸತಕ್ಕದ್ದಲ್ಲ.

[1][(2) ತಾಲ್ಲೂಕು ಪಂಚಾಯತಿಯ ಸದಸ್ಯನಾಗಿ ಆಯ್ಕೆಯಾಗಿರುವ ವ್ಯಕ್ತಿಯು, ಲೋಕಸಭೆಯ, ರಾಜ್ಯ ಸಭೆಯ, ರಾಜ್ಯ ವಿಧಾನ ಸಭೆಯ ಅಥವಾ ರಾಜ್ಯ ವಿಧಾನ ಪರಿಷತ್ತಿನ ಸದಸ್ಯನಾಗಿದ್ದರೆ ಅಥವಾ ಸದಸ್ಯನಾದರೆ ಅಥವಾ ಮುನಿಸಿಪಲ್ ಕೌನ್ಸಿಲರ್ ಅಥವಾ ಮುನಿಸಿಪಲ್ ಕಾರ್ಪೋರೇಷನ್ನಿನ ಅಥವಾ ಪಟ್ಟಣ ಪಂಚಾಯತಿಯ ಕೌನ್ಸಿಲರನಾಗಿದ್ದರೆ ಅಥವಾ ಕೌನ್ಸಿಲರನಾದರೆ ಅಥವಾ ಜಿಲ್ಲಾ ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದರೆ ಅಥವಾ ಸದಸ್ಯನಾದರೆ, 133ನೇ ಪ್ರಕರಣದ ಅಡಿಯಲ್ಲಿ ಸದಸ್ಯರುಗಳ ಹೆಸರುಗಳನ್ನು ಅಧಿಸೂಚಿಸಿದ ದಿನಾಂಕದಿಂದ ಹದಿನೈದು ದಿನಗಳ ಅವಧಿಯು ಮುಕ್ತಾಯಗೊಂಡಾಗ ಅಥವಾ ಸಂದರ್ಭಾನುಸಾರ ಲೋಕಸಭೆಯ, ರಾಜ್ಯ ಸಭೆಯ, ರಾಜ್ಯ ವಿಧಾನ ಸಭೆಯ ಅಥವಾ ರಾಜ್ಯವಿಧಾನ ಪರಿಷತ್ತಿನ ಸದಸ್ಯ ಅಥವಾ ಮುನ್ಸಿಪಲ್ ಕೌನ್ಸಿಲರ್ ಅಥವಾ ಮುನ್ಸಿಪಲ್ ಕಾರ್ಪೋರೇಷನ್ನಿನ ಕೌನ್ಸಿಲರ್, ಪಟ್ಟಣ ಪಂಚಾಯತಿಯ ಕೌನ್ಸಿಲರ್ ಅಥವಾ ಜಿಲ್ಲಾ ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ಸದಸ್ಯನ ಹುದ್ದೆಯ ಅವಧಿಯು ಪ್ರಾರಂಭವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅವನು ಸಂದರ್ಭಾನುಸಾರ ಲೋಕಸಭೆಯ, ರಾಜ್ಯ ಸಭೆಯ, ರಾಜ್ಯ ವಿಧಾನ ಸಭೆಯ, ರಾಜ್ಯ ವಿಧಾನ ಪರಿಷತ್ತಿನ, ಮುನಿಸಿಪಲ್ ಕೌನ್ಸಿಲಿನ, ಮುನಿಸಿಪಲ್ ಕಾರ್ಪೋರೇಷನ್ನಿನ, ಪಟ್ಟಣ ಪಂಚಾಯತಿಯ, ಜಿಲ್ಲಾ ಪಂಚಾಯತಿಯ ಅಥವಾ ಗ್ರಾಮಪಂಚಾಯತಿಯ ತನ್ನ ಸ್ಥಾನಕ್ಕೆ ಮೊದಲೇ ರಾಜೀನಾಮೆ ಸಲ್ಲಿಸಿರದಿದ್ದರೆ ತಾಲ್ಲೂಕು ಪಂಚಾಯತಿಯಲ್ಲಿ ಅವನ ಸ್ಥಾನವು ಖಾಲಿಯಾಗತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

**129. ಸ್ಥಾನವು ಖಾಲಿಯಾಗುವುದು.**- (1) ತಾಲ್ಲೂಕು ಪಂಚಾಯತಿಯ ಯಾವನೇ ಸದಸ್ಯನು,-

(ಎ) 128ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಅನರ್ಹತೆಗಳಿಗೊಳಗಾಗಿದ್ದರೆ ಅಥವಾ ಒಳಗಾದರೆ; ಅಥವಾ

(ಬಿ) 128ನೇ ಪ್ರಕರಣದ (1) ನೇ ಉಪಪ್ರಕರಣದ ಪರಂತುಕದ (ಡಿ) ಖಂಡದ (i)ನೇ ಅಥವಾ (ii)ನೇ ಉಪಖಂಡದಲ್ಲಿ ವಿವರಿಸಿದಂತೆ, ಅಥವಾ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಅವನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೊಂದಿರುವಂಥ ಯಾವುದೇ ವಿಷಯದ ಚರ್ಚೆಯಲ್ಲಿ ಸದಸ್ಯನಾಗಿ ಮತ ನೀಡಿದರೆ ಅಥವಾ ಭಾಗವಹಿಸಿದರೆ; ಅಥವಾ

(ಸಿ) 141ನೇ ಪ್ರಕರಣದ (2) ನೇ ಉಪ-ಪ್ರಕರಣದ (ಜಿ) ಖಂಡದ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ವಿಷಯದ ಚರ್ಚೆಯಲ್ಲಿ ಮತ ನೀಡಿದರೆ ಅಥವಾ ಅದರಲ್ಲಿ ಭಾಗವಹಿಸಿದರೆ; ಅಥವಾ

[2][XXX][2]

-ಅವನ ಸ್ಥಾನವು, ಸಂದರ್ಭಾನುಸಾರ ಖಾಲಿಯಾಗಿದೆಯೆಂದು ಅಥವಾ ಖಾಲಿಯಾಗಿರುವುದಾಗಿ ಭಾವಿಸತಕ್ಕದ್ದು:
[2][XXX][2]

(2) [1][ರಾಜ್ಯ ಚುನಾವಣಾ ಆಯೋಗವು][1] ತನಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಸಂಬಂಧಪಟ್ಟ ವ್ಯಕ್ತಿಯ ಸ್ಥಾನವು ಖಾಲಿಯಾಗಿದೆಯೇ ಅಥವಾ ಖಾಲಿಯಾಗಿರುವುದೇ ಎಂಬ ಬಗ್ಗೆ ಘೋಷಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 12.07.2017ರಿಂದ ಬಿಟ್ಟುಬಿಡಲಾಗಿದೆ.

**130. ಮತ ನೀಡುವ ವಿಧಾನ ಮತ್ತು ಚುನಾವಣೆಗಾಗಿ ಪ್ರಕ್ರಿಯೆ.**- (1) ಪ್ರತಿಯೊಬ್ಬ ಮತದಾರನು, ಎಷ್ಟು ಸದಸ್ಯರು ಚುನಾಯಿತರಾಗಬೇಕಾಗಿದೆಯೋ ಅಷ್ಟು ಮತಗಳನ್ನು ಹೊಂದಿರತಕ್ಕದ್ದು. ಯಾವನೇ ಮತದಾರನು, ಯಾವನೇ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತಗಳನ್ನು ಕೊಡತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ತಾಲ್ಲೂಕು ಪಂಚಾಯತಿಗೆ ಚುನಾವಣೆಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರವಾಗಿ ಮತದಾನದ ಮೂಲಕ ನಡೆಸತಕ್ಕದ್ದು.

[1][(2ಎ) ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಏನೇ ಇದ್ದರೂ, ನಿಯಮಿಸಬಹುದಾದಂಥ ವಿಧಾನದಲ್ಲಿ, ಮತದಾನ ಯಂತ್ರಗಳ ಮೂಲಕ, ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಮತಗಳನ್ನು ನೀಡುವುದನ್ನು ಮತ್ತು ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಪರಿಸ್ಥಿತಿಗನುಸಾರವಾಗಿ ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ, "ಮತದಾನ ಯಂತ್ರ" ಎಂದರೆ, ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸಲಾಗುವ, ವಿದ್ಯುನ್ಮಾನ ವಿಧಾನದ ಮೂಲಕವಾಗಲಿ ಅಥವಾ ಅನ್ಯಥಾ, ಕಾರ್ಯ ನಿರ್ವಹಿಸುವ, ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರಕ್ಕೆ ಸಂಬಂಧಿಸಿದ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರಗಳನ್ನು ಬಳಸಿರುವಲ್ಲೆಲ್ಲಾ ಅಂಥ ಮತಯಂತ್ರಕ್ಕೆ ಸಂಬಂಧಿಸಿದ ಉಲ್ಲೇಖವನ್ನು ಒಳಗೊಳ್ಳುತ್ತದೆಂಬುದಾಗಿ ಅರ್ಥೈಸಲಾಗುವುದು.] [1]

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಸೇರಿಸಲಾಗಿದೆ.

(3) 26, 27, 28, 29, 30, 31, 1[31ಎ, 31ಬಿ,]1 32, 33, 34, 35, 36, 37, 38 ,39, ಮತ್ತು 40ನೇ ಪ್ರಕರಣಗಳ ಉಪಬಂಧಗಳು, ಗ್ರಾಮ ಪಂಚಾಯತಿಗಳ ಚುನಾವಣೆಗಳಿಗೆ ಅನ್ವಯವಾಗುವಂತೆಯೇ ತಾಲ್ಲೂಕು ಪಂಚಾಯತಿ ಚುನಾವಣೆಗಳಿಗೆ ಸಬಂಧಿಸಿದಂತೆಯೂ ಅನ್ವಯವಾಗತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

**131. ಏಕಕಾಲದ ಸದಸ್ಯತ್ವದ ನಿಷೇಧ.**- (1) ಒಬ್ಬ ವ್ಯಕ್ತಿಯು,ತಾಲ್ಲೂಕು ಪಂಚಾಯತಿಯ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಿಂದ ಚುನಾಯಿತನಾದರೆ, ತಾನು ಸಹಿ ಹಾಕಿರುವ ಲಿಖಿತ ನೋಟೀಸಿನ ಮೂಲಕ ಡೆಪ್ಯುಟಿ ಕಮಿಷನರಿಗೆ ಅಥವಾ ಗೊತ್ತುಪಡಿಸಿರುವ ಯಾವನೇ ಇತರ ಅಧಿಕಾರಿಗೆ ನಿರ್ದಿಷ್ಟಪಡಿಸಿರುವ ಕಾಲದೊಳಗೆ ರವಾನಿಸಿ, ತಾನು ಸೇವೆ ಸಲ್ಲಿಸತಕ್ಕಂಥ ಯಾವುದೇ ಒಂದು ಚುನಾವಣಾ ಕ್ಷೇತ್ರವನ್ನು ಆಯ್ಕೆ ಮಾಡತಕ್ಕದ್ದು ಮತ್ತು ಆ ಆಯ್ಕೆಯು ಅಂತಿಮವಾದುದಾಗಿರತಕ್ಕದ್ದು.

(2) ಆ ವ್ಯಕ್ತಿಯು, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಆಯ್ಕೆಯನ್ನು ಮಾಡದಿದ್ದರೆ, ಡೆಪ್ಯುಟಿ ಕಮಿಷನರ್ ಅವರು, ಅಥವಾ ಗೊತ್ತುಪಡಿಸಿರುವ ಅಧಿಕಾರಿಯು ಚೀಟಿ ಎತ್ತುವ ಮೂಲಕ ಅದನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಸೇವೆ ಸಲ್ಲಿಸತಕ್ಕಂಥ ಚುನಾವಣಾ ಕ್ಷೇತ್ರವನ್ನು ಅಧಿಸೂಚಿಸತಕ್ಕದ್ದು.

(3) ಅಂಥ ವ್ಯಕ್ತಿಯು, ಸಂದರ್ಭಾನುಸಾರ, ಹಾಗೆ ಆಯ್ಕೆ ಮಾಡಿಕೊಂಡ ಅಥವಾ ಅಧಿಸೂಚಿಸಿದ ಚುನಾವಣಾ ಕ್ಷೇತ್ರಕ್ಕಾಗಿ ಮಾತ್ರವೇ ಚುನಾಯಿತನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಆ ರೀತಿ ಇತರ ಚುನಾವಣಾ ಕ್ಷೇತ್ರಕ್ಕೆ ಅಥವಾ ಚುನಾವಣಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಖಾಲಿ ಸ್ಥಾನವನ್ನು ಅಥವಾ ಖಾಲಿ ಸ್ಥಾನಗಳನ್ನು ಚುನಾವಣೆಯ ಮೂಲಕ ಭರ್ತಿ ಮಾಡತಕ್ಕದ್ದು.

**132. ಚುನಾವಣೆಗಳಿಗೆ ಸಂಬಂಧಪಟ್ಟಂತೆ ಕೆಲವು ಪ್ರಕರಣಗಳ ಅನ್ವಯ.**- (1) 15, 16, 17, 18, 19, 20, 21, 22, 23, ಮತ್ತು 24ನೇ ಪ್ರಕರಣಗಳ ಉಪಬಂಧಗಳು ತಾಲ್ಲೂಕು ಪಂಚಾಯತಿಗೆ ಚುನಾವಣೆಗೆ ಸಂಬಂಧಿಸಿದಂತೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು. ಅರ್ಜಿಯನ್ನು ಅಧಿಕಾರ ವ್ಯಾಪ್ತಿಯುಳ್ಳ 1[ಸಿವಿಲ್ ನ್ಯಾಯಾಧೀಶ (ಹಿರಿಯ ವರ್ಗ)]1ರಿಗೆ ಸಲ್ಲಿಸತಕ್ಕದ್ದು ಮತ್ತು ಖರ್ಚುಗಳಿಗಾಗಿ ಭದ್ರತೆಯೆಂದು ಠೇವಣಿಯು ಒಂದು ಸಾವಿರ ರೂಪಾಯಿಗಳಾಗಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(2) ಈ ಪ್ರಕರಣದ ಅಡಿಯಲ್ಲಿ [1][ಸಿವಿಲ್ ನ್ಯಾಯಾಧೀಶ (ಹಿರಿಯ ವರ್ಗ)][1] ಯಾವುದೇ ತೀರ್ಮಾನದಿಂದ ಅಥವಾ ಆದೇಶದಿಂದ, ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ತೀರ್ಮಾನದ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಜಿಲ್ಲಾ ನ್ಯಾಯಾಧೀಶರಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನ ಮೇಲೆ ಜಿಲ್ಲಾ ನ್ಯಾಯಾಧೀಶನ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

**133. ಸದಸ್ಯರ ಹೆಸರುಗಳ ಪ್ರಕಟಣೆ.**- ಯಾವುದೇ ತಾಲ್ಲೂಕು ಪಂಚಾಯಿತಿಗೆ ಚುನಾಯಿತರಾದ ಸದಸ್ಯರ ಹೆಸರುಗಳನ್ನು [1][ಕಮಿಷನರಿಗೆ ವರದಿ ಮಾಡತಕ್ಕದ್ದು. ಅವರು ಆ ಹೆಸರುಗಳನ್ನು][1] ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸತಕ್ಕದ್ದು.

1. 2೦೦೦ದ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: ೦3-೦4-2೦೦೦ದಿಂದ ಪ್ರತಿಯೋಜಿಸಲಾಗಿದೆ.

**134. ಸದಸ್ಯರ ಪದಾವಧಿ.**- (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ತಾಲ್ಲೂಕು ಪಂಚಾಯತಿಯ ಸದಸ್ಯರು ಐದು ವರ್ಷಗಳ ಅವಧಿಯವರೆಗೆ ಹುದ್ದೆಯ ಧಾರಣ ಮಾಡತಕ್ಕದ್ದು.

(2) ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರ ಹುದ್ದೆಯ ಅವಧಿಯು ತಾಲ್ಲೂಕು ಪಂಚಾಯತಿಯ ಪ್ರಥಮ ಸಭೆಗೆ ಗೊತ್ತುಪಡಿಸಿದ ದಿನಾಂಕದಂದು ಪ್ರಾರಂಭವಾಗತಕ್ಕದ್ದು.

(3) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬಲು ಚುನಾಯಿತನಾದ ಸದಸ್ಯನ ಹುದ್ದೆಯ ಅವಧಿಯು 133ನೇ ಪ್ರಕರಣದ ಅಡಿಯಲ್ಲಿ ಅವನ ಹೆಸರು ಪ್ರಕಟವಾದ ದಿನಾಂಕದಂದು ಪ್ರಾರಂಭವಾಗತಕ್ಕದ್ದು.

**135. ಸದಸ್ಯರ ರಾಜೀನಾಮೆ.**- ತಾಲ್ಲೂಕು ಪಂಚಾಯತಿಯ ಸದಸ್ಯನು, ತನ್ನ ಸದಸ್ಯತ್ವಕ್ಕೆ ತನ್ನ ಸಹಿ ಸಹಿತ ತಾಲ್ಲೂಕು ಪಂಚಾಯತಿಯ ಅಧ್ಯಕ್ಷನಿಗೆ ಬರಹದಲ್ಲಿ ರಾಜೀನಾಮೆ ಕೊಡಬಹುದು. ಮತ್ತು ಅವನ ಸ್ಥಾನವು ಅಂಥ ರಾಜೀನಾಮೆಯ ದಿನಾಂಕದಿಂದ ಹದಿನೈದು ಪೂರ್ಣ ದಿವಸಗಳು ಮುಕ್ತಾಯವಾದ ಮೇಲೆ, ಸದರಿ ಹದಿನೈದು ದಿವಸಗಳ ಅವಧಿಯೊಳಗೆ ಅಧ್ಯಕ್ಷನಿಗೆ ಬರಹದಲ್ಲಿ ಅಂಥ ರಾಜೀನಾಮೆಯನ್ನು ಅವನು ಹಿಂತೆಗೆದುಕೊಂಡ ಹೊರತು, ತೆರವಾಗತಕ್ಕದ್ದು. [1][ಅಧ್ಯಕ್ಷನು ರಾಜೀನಾಮೆ ಪತ್ರವನ್ನು ತಾಲ್ಲೂಕು ಪಂಚಾಯತಿಯ ಮುಂದಿನ ಸಭೆಯಲ್ಲಿ ಮಂಡಿಸುವಂತೆ ಮಾಡತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦-1೦-1997ರಿಂದ ಸೇರಿಸಲಾಗಿದೆ.

[1][**136. ಸದಸ್ಯರನ್ನು ತೆಗೆದುಹಾಕುವುದು.**– (1) ತಾಲ್ಲೂಕು ಪಂಚಾಯತ್‌ನ ಯಾರೇ ಸದಸ್ಯನು,–

(i) ಆತನು ತನ್ನ ಕರ್ತವ್ಯಗಳನ್ನು ನಿರ್ವಹಣೆ ಮಾಡುವಾಗ ದುರ್ನಡತೆಯ ಅಥವಾ/ ಯಾವುದೇ ಅಪಮಾನಕರ ನಡತೆಯ ತಪ್ಪಿತಸ್ಥನಾಗಿದ್ದರೆ,

(ii) ಸದಸ್ಯನಾಗಿ ತನ್ನ ಕರ್ತವ್ಯಗಳ ನಿರ್ವಹಣೆ ಮಾಡಲು ಅಸಮರ್ಥನಾದರೆ ಅಥವಾ, ಆತನು ಕರ್ತವ್ಯಗಳ ನಿರ್ವಹಣೆ ಮಾಡುವಾಗ ನಿರಂತರವಾಗಿ ಅಜಾಗರೂಕರಾಗಿದ್ದರೆ;

(ಎ) ಜಿಲ್ಲಾ ವೈದ್ಯಾಧಿಕಾರಿಯು ಪ್ರಮಾಣೀಕರಿಸಬಹುದಾದಂತೆ ಹುದ್ದೆಯನ್ನು ಹೊಂದಲು ವೈದ್ಯಕೀಯವಾಗಿ ಅನರ್ಹನಾಗಿರುವ ಸಂದರ್ಭದಲ್ಲಿ,

(ಬಿ) ದಿವಾಳಿ ಅಥವಾ ಅಸ್ವಸ್ಥ ಚಿತ್ತದವನಾಗಿದ್ದ ಪರಿಣಾಮವಾಗಿ;

(iii) ಪಂಚಾಯತ್‌ನ ಒಂದಾದ ಮೇಲೋಂದರಂತೆ ಅನುಕ್ರಮವಾಗಿ ಬರುವ ನಾಲ್ಕು ಸಭೆಗಳಿಗೆ ಹಾಜರಾಗಲು ತಪ್ಪಿದರೆ ಮತ್ತು ಅಧ್ಯಕ್ಷನಾಗಲಿ ಅಥವಾ ಉಪಾಧ್ಯಕ್ಷನಾಗಲಿ ಪಂಚಾಯತ್‌ನ ಸಭೆಯನ್ನು ಕರೆಯಬೇಕಿದ್ದಾಗ ಅಥವಾ ಕರೆಯುವ ಅವಶ್ಯಕತೆ ಇದ್ದಾಗ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಸಭೆಗಳನ್ನು ಕರೆಯಲು ತಪ್ಪಿದರೆ; ಅಥವಾ

(iv) ಚುನಾವಣೆ ಸಂದರ್ಭದಲ್ಲಿ ಪರಿಗಣನೆಗಾಗಿ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿಯ ಸದಸ್ಯ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಹುದ್ದೆಯ ವ್ಯಾಪಾರಕ್ಕಾಗಿ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿಯ ಯಾವುದೇ ಮತದಾರ ಅಥವಾ ಸದಸ್ಯನನ್ನು ಸೆಳೆಯುವುದು ಅಥವಾ ದಬ್ಬಾಳಿಕೆ ಅಥವಾ ವಂಚನೆ ಮಾಡಿದ್ದಾನೆಂದು;

(v) ಪಂಚಾಯತ್‌ನ ಯಾವುದೇ ಕಾಮಗಾರಿಯು ಗುತ್ತಿಗೆ ಜನ್ಯವಾದುದಾಗಿರಬಹುದು ಅಥವಾ ಬೇರೆಯ ರೀತಿಯದಾಗಿರಬಹುದು. ಆ ಯಾವುದೇ ಕಾಮಗಾರಿಯ ನಿರ್ವಹಣೆ ಮಾಡುವಾಗ ಪಾಲುದಾರನಾಗಿ, ನೌಕರನಾಗಿ ಅಥವಾ ಸದಸ್ಯನಾಗಿ ಅಂಥ ಸಂಸ್ಥೆಯಲ್ಲಿ ಮಂಡಳಿಯಲ್ಲಿ ಸದಸ್ಯನಾಗಿ ಕುಟುಂಬದ ನಿಕಟ ಸಂಬಂಧಿಯಾಗಿರುವಂಥ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ಭಾಗಿಯಾಗಿರುವುದು ಅಥವಾ ಅಂಥ ಕಾಮಗಾರಿಗೆ ಸಂಬಂಧಪಟ್ಟ ಯಾವುದೇ ವ್ಯವಹಾರದಲ್ಲಿ ಸಹವರ್ತಿಯಾಗಿರುವುದು;

– ಕಂಡು ಬಂದರೆ, ರಾಜ್ಯ ಸರ್ಕಾರವು, ತಾಲ್ಲೂಕು ಪಂಚಾಯತ್ ಶಿಫಾರಸ್ಸು ಮಾಡಿದಾಗ ಅಥವಾ ಅನ್ಯಥಾ, ಯಾವೊಬ್ಬ ಸದಸ್ಯನನ್ನು ತೆಗೆದು ಹಾಕುವುದು ಸೂಕ್ತವೆಂದು ಅಭಿಪ್ರಾಯಪಟ್ಟರೆ, ತನ್ನ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅವಶ್ಯಕವೆಂದು ತಾನು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಆ ಯಾವೊಬ್ಬ ಸದಸ್ಯನನ್ನು ತೆಗೆದುಹಾಕಬಹುದು.

**ವಿವರಣೆ:**– ಈ ಪ್ರಕರಣದ ಉದ್ದೇಶಕ್ಕಾಗಿ, ಕುಟುಂಬದ ಹತ್ತಿರದ ಬಂಧುಗಳು ಎಂದರೆ:–

(ಎ) ಆಕೆಯ ಅಥವಾ ಆತನೊಂದಿಗೆ ವಾಸವಾಗಿರುವ ವ್ಯಕ್ತಿಯ ಪತ್ನಿ ಅಥವಾ ಪತಿ;

(ಬಿ) ಮಗ ಅಥವಾ ಮಗಳು ಅಥವಾ ಮಲಮಗ ಅಥವಾ ಮಲಮಗಳು,

(ಸಿ) ಅಂಥ ವ್ಯಕ್ತಿಯ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿರುವ, ರಕ್ತಸಂಬಂಧವಾಗಿರಲಿ ಅಥವಾ ವಿವಾಹದಿಂದಾಗಲಿ, ಸಂಬಂಧಿಸಿದ ಯಾವೊಬ್ಬ ಇತರ ವ್ಯಕ್ತಿ.

(2) ಯಾವ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಅಥವಾ ಸದಸ್ಯನನ್ನು (1)ನೇ ಉಪಪ್ರಕರಣದ ಅಡಿಯಲ್ಲಿ ಹಾಗೆ ತೆಗೆದುಹಾಕಲಾಗಿದೆಯೋ ಅವನು ಸದಸ್ಯನಾಗಿ ಕಾರ್ಯನಿರ್ವಹಿಸುವುದು ನಿಂತು ಹೋಗತಕ್ಕದ್ದು ಮತ್ತು ಅಧಿನಿಯಮದ 12ನೇ, 128ನೇ ಮತ್ತು 167ನೇ ಪ್ರಕರಣಗಳಲ್ಲಿ ಹೇಳಿರುವಂತೆ ಮುಂದಿನ ಐದು ವರ್ಷಗಳ ಅವಧಿಯವರೆಗೆ, ಯಾವುದೇ ಪಂಚಾಯತಿಯ ಚುನಾವಣೆಗೆ ಸ್ಪರ್ಧಿಸಲು ಅನರ್ಹರಾಗಿರತಕ್ಕದ್ದು.][1].

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**136ಎ. ಸದಸ್ಯರ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಘೋಷಣೆ.**– (1) ಪ್ರತಿಯೊಬ್ಬ ಸದಸ್ಯನು ತನ್ನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ಮತ್ತು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ತನ್ನ ಸ್ಥಾನದ ಅವಧಿ ಮುಗಿಯುವವರೆಗೆ ಹಾಗೂ ಪ್ರತಿಯೊಂದು ಆರ್ಥಿಕ ವರ್ಷ ಮುಕ್ತಾಯವಾದ ಒಂದು ತಿಂಗಳ ಒಳಗೆ ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯ ಮೂಲಕ ರಾಜ್ಯ ಚುನಾವಣಾ ಆಯೋಗದ ಮುಂದೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ತಾನು ಹೊಂದಿರುವ ಮತ್ತು ತನ್ನ ಕುಟುಂಬದ

ಎಲ್ಲ ಸದಸ್ಯರು ಹೊಂದಿರುವ ಎರಡು ಲಕ್ಷಕ್ಕಿಂತ ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯ ಮತ್ತು ಹೊಣೆಗಾರಿಕೆಯ ಘೋಷಣೆ ಮಾಡತಕ್ಕದ್ದು:

ಪರಂತು, ಹಣಕಾಸು ವರ್ಷ ಮುಕ್ತಾಯವಾಗುವ ಎರಡು ತಿಂಗಳ ಮೊದಲು ಅಂಥ ಸದಸ್ಯನ ಪದಾವಧಿಯು ಪ್ರಾರಂಭವಾದರೆ, ಅಂಥ ಸದಸ್ಯನು ಮುಂದಿನ ಹಣಕಾಸು ವರ್ಷ ಪ್ರಾರಂಭವಾದ ನಂತರ ಎರಡು ತಿಂಗಳೊಳಗೆ ಅಂಥ ಘೋಷಣೆಯನ್ನು ಮಾಡತಕ್ಕದ್ದು.

(2) ಸಂಬಂಧಪಟ್ಟ ತಾಲ್ಲುಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು, ಎಲ್ಲ ಸದಸ್ಯರು ಮಾಡಿದ ಘೋಷಣೆಯನ್ನು ಸ್ವೀಕರಿಸತಕ್ಕದ್ದು ಮತ್ತು ಆ ವರ್ಷದ ಮೇ ಮೊದಲ ವಾರದಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದು ಮತ್ತು ಘೋಷಣೆಯನ್ನು ತಡವಾಗಿ ಸಲ್ಲಿಸಿದ್ದ ಸಂದರ್ಭದಲ್ಲಿ ವರ್ಷದ ಜುಲೈ ಮೊದಲನೆ ವಾರದಲ್ಲಿ ಘೋಷಣೆಯನ್ನು ಮಾಡಿದ ಸದಸ್ಯರ ವಿವರ ಪತ್ರವನ್ನು ಮತ್ತು ಘೋಷಣೆಯನ್ನು ಮಾಡದೆ ಇರುವಂಥ ಸದಸ್ಯರ ವಿವರ ಪತ್ರವನ್ನು ಕಳುಹಿಸತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ಮಾಡಿರುವ ಸದಸ್ಯನು, ಆ ನಂತರ ಯಾವುದೇ ಸ್ವತ್ತನ್ನು ಅಥವಾ ಇತರ ಆಸ್ತಿಯನ್ನು ಆರ್ಜಿಸಿದರೆ ಅಥವಾ ಸಂದರ್ಭಾನುಸಾರವಾಗಿ ವಿಲೆ ಮಾಡಿದರೆ ಹಾಗೆ ಆರ್ಜಿಸಿದ ಅಥವಾ ವಿಲೆ ಮಾಡಿದ ದಿನಾಂಕದಿಂದ ನಲವತ್ತೈದು ದಿವಸಗಳ ಒಳಗಾಗಿ ಕಾರ್ಯನಿರ್ವಾಹಕ ಅಧಿಕಾರಿಯ ಮೂಲಕ ರಾಜ್ಯ ಚುನಾವಣಾ ಆಯೋಗದ ಮುಂದೆ ಆ ಬಗ್ಗೆ ಮತ್ತೊಮ್ಮೆ ಘೋಷಣೆಯನ್ನು ಮಾಡತಕ್ಕದ್ದು ಮತ್ತು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು (1)ನೇ ಉಪಪ್ರಕರಣದಲ್ಲಿರುವ ಕಾರ್ಯವಿಧಾನವನ್ನೇ ಅನುಸರಿಸತಕ್ಕದ್ದು.

**136ಬಿ. ಸದಸ್ಯತ್ವವು ನಿಂತುಹೋಗುವುದು.**– (1) ಸದಸ್ಯನು 136ಎ ಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ದಾಖಲು ಮಾಡದಿದ್ದರೆ ಅಥವಾ ಸುಳ್ಳು ಘೋಷಣೆಯನ್ನು ದಾಖಲ್ಮಾಡಿದ್ದಾನೆಂಬುದು ಕಂಡುಬಂದರೆ, ಆತನನ್ನು ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ರಾಜ್ಯ ಚುನಾವಣಾ ಆಯುಕ್ತರು, ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಅವಕಾಶವನ್ನು ನೀಡಿದ ನಂತರ, ಅವನನ್ನು ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು ಮತ್ತು ಸಂದರ್ಭಾನುಸಾರ ಅವನ ಸ್ಥಾನವು ಖಾಲಿಯಾಗಿದೆ ಎಂದು ಘೋಷಿಸತಕ್ಕದ್ದು.

(2) ಸದಸ್ಯನು ಮಾನ್ಯತೆ ಪಡೆದ ರಾಜಕೀಯ ಪಕ್ಷದ ಪ್ರತಿನಿಧಿಯಾಗಿದ್ದು ಆತನ ಪಕ್ಷವು ನೀಡಿದ ವಿಪ್ ನೋಟೀಸನ್ನು ಪಡೆಯುವುದನ್ನು ತಪ್ಪಿಸಿಕೊಂಡಲ್ಲಿ ಅಥವಾ ಯಾವುದೇ ಸಭೆಯಲ್ಲಿ, ಆತನ ಪಕ್ಷವು ನೀಡಿದ ವಿಪ್‌ಗೆ ಅನುಸಾರವಾಗಿ ಮತದಾನ ಮಾಡಲು ನಿರಾಕರಿಸಿದಲ್ಲಿ ಅಥವಾ ವಿಪ್‌ನ್ನು ಉಲ್ಲಂಘನೆ ಮಾಡಿ, ಮತದಾನ ಮಾಡಿದಲ್ಲಿ, ರಾಜ್ಯ ಚುನಾವಣಾ ಆಯೋಗವು ಆತನನ್ನು ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು ಮತ್ತು ಆತನ ಸ್ಥಾನವು ಖಾಲಿಯಾಗಿದೆ ಎಂದು ಘೋಷಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**137. ಆಕಸ್ಮಿಕ ಖಾಲಿ ಸ್ಥಾನಗಳನ್ನು ತುಂಬುವ ವಿಧಾನ.**– ತಾಲ್ಲೂಕು ಪಂಚಾಯತಿ ಸದಸ್ಯನ ಆಕಸ್ಮಿಕ ಖಾಲಿ ಸ್ಥಾನವನ್ನು ಅದಕ್ಕೆ ವ್ಯಕ್ತಿಯನ್ನು ಚುನಾವಣೆ ಮಾಡುವ ಮೂಲಕ ಅನುಕೂಲವಾದಷ್ಟು ಬೇಗ ಭರ್ತಿ ಮಾಡತಕ್ಕದ್ದು. ಅವನು, ಯಾರ ಸ್ಥಾನದಲ್ಲಿ, ಚುನಾಯಿತನಾಗಿರುವನೋ ಆ ಸ್ಥಾನವು ತೆರವಾಗದೇ ಇದ್ದಿದ್ದರೆ ಆ ಸದಸ್ಯನು ಎಲ್ಲಿಯವರೆಗೆ ಹುದ್ದೆಯನ್ನು ಧಾರಣ ಮಾಡುತ್ತಿದ್ದನೋ ಆ ಅವಧಿಯವರೆಗೆ ಮಾತ್ರ ಹುದ್ದೆಯನ್ನು ಧಾರಣ ಮಾಡತಕ್ಕದ್ದು.

**138. ಅಧ್ಯಕ್ಷ, ಉಪಾಧ್ಯಕ್ಷನ ಚುನಾವಣೆ ಮತ್ತು ಹುದ್ದೆಯ ಅವಧಿ.**– (1) 120ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ (i) ಖಂಡದಲ್ಲಿ ಉಲ್ಲೇಖಿಸಿರುವ ತಾಲ್ಲೂಕು ಪಂಚಾಯಿತಿಯ ಚುನಾಯಿತ ಸದಸ್ಯರು [1][ತಾಲ್ಲೂಕು ಪಂಚಾಯತಿಯ ಸದಸ್ಯರುಗಳನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದನ್ನು ಪುನರ್‌ರಚಿಸಿದ ಅಥವಾ ಸ್ಥಾಪಿಸಿದ ಮೇಲೆ [2][133ನೇ ಪ್ರಕರಣದಡಿ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳಿನೊಳಗೆ][2] ಅಥವಾ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ][1] ತಮ್ಮಲ್ಲಿಂದ ಇಬ್ಬರು ಸದಸ್ಯರನ್ನು ಕ್ರಮವಾಗಿ ಅದರ ಅಧ್ಯಕ್ಷನನ್ನಾಗಿ ಅಥವಾ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು ಮತ್ತು ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನಗಳು ಆಕಸ್ಮಿಕವಾಗಿ ತೆರವಾದಾಗ ಇನ್ನೊಬ್ಬ ಸದಸ್ಯನನ್ನು, ಸಂದರ್ಭಾನುಸಾರ, ಅಧ್ಯಕ್ಷನನ್ನಾಗಿ ಅಥವಾ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು:

1. 1996ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 23-09-1996ರಿಂದ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಆ ಖಾಲಿ ಸ್ಥಾನವು, ಒಂದು ತಿಂಗಳಿಗಿಂತ ಕಡಿಮೆ ಅವಧಿಯದಾಗಿದ್ದರೆ ಯಾವುದೇ ಚುನಾವಣೆಯನ್ನು ನಡೆಸತಕ್ಕದ್ದಲ್ಲ.

(2) [1][ಸರ್ಕಾರವು][1] ಗೊತ್ತುಪಡಿಸಿರುವ ರೀತಿಯಲ್ಲಿ,-

1. 2000ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 03-04-2000ರಿಂದ ಪ್ರತಿಯೋಜಿಸಲಾಗಿದೆ.

(ಎ) ರಾಜ್ಯದಲ್ಲಿರುವ ತಾಲ್ಲೂಕು ಪಂಚಾಯತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಲ್ಲಿ ಇಂತಿಷ್ಟು ಸಂಖ್ಯೆಯನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದು ಮತ್ತು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಜನ ಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಅಂಥ ಹುದ್ದೆಗಳ ಸಂಖ್ಯೆಯು ರಾಜ್ಯದಲ್ಲಿರುವ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಸರಿ ಸುಮಾರು ಅದೇ ಅನುಪಾತದಲ್ಲಿರತಕ್ಕದ್ದು;

[1][ಪರಂತುಕ x x x][1]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಬಿಟ್ಟುಬಿಡಲಾಗಿದೆ.

(ಬಿ) ರಾಜ್ಯದಲ್ಲಿರುವ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಮೂರನೇ ಒಂದರಷ್ಟು ಸಂಖ್ಯೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ ಮೀಸಲಿಡತಕ್ಕದ್ದು: [2][ಆದರೆ ಈ ಖಂಡದಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ನಿರ್ಧರಿಸಿ

ಮೀಸಲಿರಿಸಿದ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಒಟ್ಟು ಹುದ್ದೆಗಳ ಸಂಖ್ಯೆಯು, (ಎ) ಖಂಡದ ಅಡಿಯಲ್ಲಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಮತ್ತು ಈ ಖಂಡದಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು, ರಾಜ್ಯದಲ್ಲಿನ ತಾಲ್ಲೂಕು ಪಂಚಾಯತಿಯಲ್ಲಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು, ಮೀರತಕ್ಕದ್ದಲ್ಲ.][2]

[1][ಪರಂತು, ಈ ಖಂಡದ ಅಡಿಯಲ್ಲಿ ಮೀಸಲಿರಿಸಿದ ಹುದ್ದೆಗಳ ಪೈಕಿ, ಅಂಥ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ಎಂಬತ್ತರಷ್ಟು ಹುದ್ದೆಗಳನ್ನು 'ಎ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇಕಡಾ ಇಪ್ಪತ್ತರಷ್ಟು ಹುದ್ದೆಗಳನ್ನು 'ಬಿ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು:

ಮತ್ತು ಪರಂತು 'ಎ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳನ್ನು 'ಬಿ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು. ಹಾಗೆಯೇ 'ಬಿ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳನ್ನು 'ಎ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.][1]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಸೇರಿಸಲಾಗಿದೆ.
2. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.

(ಸಿ) ರಾಜ್ಯದಲ್ಲಿರುವ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ, ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಮತ್ತು ಮೀಸಲಿಟ್ಟಿರದ ಹುದ್ದೆಗಳಲ್ಲಿ [1][ಶೇಕಡಾ ಐವತ್ತರಷ್ಟಕ್ಕೆ][1] ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ [2][ಒಟ್ಟಾರೆಯಾಗಿ ಒಟ್ಟು ಸಂಖ್ಯೆಯ ಅರ್ಧದಷ್ಟು ಪರಿಮಿತಿಗೆ ಒಳಪಟ್ಟು ಮುಂದಿನ ಸಂಖ್ಯೆಗೆ ಪೂರ್ಣಾಂಕಗೊಳಿಸಿದಷ್ಟು][2] ಮೀಸಲಿಡತಕ್ಕದ್ದು:

ಪರಂತು, ಈ ಉಪ ಪ್ರಕರಣದಡಿಯಲ್ಲಿ ಮೀಸಲಿರಿಸಿರುವ ಹುದ್ದೆಗಳನ್ನು ಬೇರೆ ಬೇರೆ ತಾಲ್ಲೂಕು ಪಂಚಾಯತಿಗಳಿಗೆ ಸರದಿಯ ಪ್ರಕಾರ ಹಂಚಿಕೆ ಮಾಡತಕ್ಕದ್ದು.

***ವಿವರಣೆ.-*** ಸಂದೇಹಗಳ ನಿವಾರಣೆಗಾಗಿ, ಈ ಉಪ-ಪ್ರಕರಣದಡಿ ಹುದ್ದೆಗಳ ಮೀಸಲಾತಿಯ ಉದ್ದೇಶಗಳಿಗಾಗಿ, ಸರದಿಯ ಸೂತ್ರವು, 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಪ್ರಾರಂಭವಾದ ತರುವಾಯ ನಡೆಯುವ ಪ್ರಥಮ ಚುನಾವಣೆಯಿಂದ ಪ್ರಾರಂಭವಾಗತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

[2][[1][(3) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ, ತಾಲ್ಲೂಕು ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷ ಮತ್ತು ಪ್ರತಿಯೊಬ್ಬ ಉಪಾಧ್ಯಕ್ಷನ ಹುದ್ದೆಯ ಅವಧಿಯು, ಆತನನ್ನು ಚುನಾಯಿಸಿದ ದಿನಾಂಕದಿಂದ ಐದು ವರ್ಷಗಳು ಅಥವಾ ಅವನು ತಾಲ್ಲೂಕು ಪಂಚಾಯತಿಯ ಸದಸ್ಯನಾಗಿರುವುದು ನಿಂತುಹೋಗುವವರೆಗೆ, ಇದರಲ್ಲಿ ಯಾವುದು ಮೊದಲೋ ಆ ಅವಧಿಯಾಗಿರತಕ್ಕದ್ದು.][1]][2]

1. 1996ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 23-09-1996ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಪ್ರತಿಯೋಜಿಸಲಾಗಿದೆ.

[1][ಪರಂತು ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಹುದ್ದೆಯಲ್ಲಿನ ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವುದಕ್ಕಾಗಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಚುನಾಯಿತನಾದ ಸದಸ್ಯನು, ಯಾವ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸ್ಥಾನಕ್ಕೆ ಆತನು ಚುನಾಯಿತನಾಗಿರುವನೋ ಆ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಖಾಲಿ ಹುದ್ದೆ ಉಂಟಾಗಿರದಿದ್ದರೆ ಯಾವ ಅವಧಿಯವರೆಗೆ ಹುದ್ದೆಯನ್ನು ಹೊಂದಿರುತ್ತಿದ್ದನೋ ಆ ಉಳಿದ ಅವಧಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 23-09-1996ರಿಂದ ಸೇರಿಸಲಾಗಿದೆ.

(4) ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆ ಮತ್ತು ಸದರಿ ಹುದ್ದೆಯಲ್ಲಾಗುವ ಖಾಲಿ ಸ್ಥಾನಗಳನ್ನು ತುಂಬುವುದು ಮತ್ತು ಅಂಥ ಚುನಾವಣೆಗೆ ಸಂಬಂಧಪಟ್ಟ ವಿವಾದಗಳನ್ನು ನಿರ್ಧರಿಸುವುದು ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರವಾಗಿ ಇರತಕ್ಕದ್ದು:

[1][ಪರಂತು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಧೀಶರು (ಹಿರಿಯ ವರ್ಗ) ಅಂಥ ಚುನಾವಣಾ ತಕರಾರು ಅರ್ಜಿಯನ್ನು ತೀರ್ಮಾನಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

**139. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮತ್ತು ಇತರ ಸದಸ್ಯರ ಸಂಬಳ ಮತ್ತು ಭತ್ಯಗಳು.-** (1) ತಾಲ್ಲೂಕು ಪಂಚಾಯತಿಯ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(2) ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು ಹೊರತುಪಡಿಸಿ, ತಾಲ್ಲೂಕು ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು ಗೊತ್ತುಪಡಿಸಬಹುದಾದ ಉಪವೇಶನ ಶುಲ್ಕ ಮತ್ತು ಇತರ ಭತ್ಯಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು.

**140. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ಅವನನ್ನು ತೆಗೆದುಹಾಕುವುದು.-** (1) ತಾಲ್ಲೂಕು ಪಂಚಾಯತಿಯ ಅಧ್ಯಕ್ಷನಾಗಿ ಹುದ್ದೆಯನ್ನು ಧಾರಣ ಮಾಡಿರುವ ಸದಸ್ಯನು ಡೆಪ್ಯುಟಿ ಕಮಿಷನರ್ ಅವರಿಗೆ ತನ್ನ ಸಹಿ ಸಹಿತ ಬರಹದಲ್ಲಿ ಯಾವುದೇ ಕಾಲದಲ್ಲಿ ತನ್ನ ಹುದ್ದೆಗೆ ರಾಜೀನಾಮೆ ಕೊಡಬಹುದು ಮತ್ತು ಉಪಾಧ್ಯಕ್ಷನು ತನ್ನ ಹುದ್ದೆಗೆ ತನ್ನ ಸಹಿ ಸಹಿತ ಬರಹದಲ್ಲಿ ಅಧ್ಯಕ್ಷನಿಗೆ ಅಥವಾ ಅಧ್ಯಕ್ಷನ ಗೈರುಹಾಜರಿಯಲ್ಲಿ ಡೆಪ್ಯುಟಿ ಕಮಿಷನರ್ ಅವರಿಗೆ ತನ್ನ ಹುದ್ದೆಗೆ ಯಾವುದೇ ಕಾಲದಲ್ಲಿ ರಾಜೀನಾಮೆ ಕೊಡಬಹುದು ಮತ್ತು ಆ ಹುದ್ದೆಯು ಅಂಥ ರಾಜೀನಾಮೆ ದಿನಾಂಕದಿಂದ ಹದಿನೈದು ದಿವಸಗಳು ಮುಕ್ತಾಯವಾದ ಮೇಲೆ ಸದರಿ ಹದಿನೈದು ದಿವಸಗಳ ಅವಧಿಯೊಳಗೆ ಸಂದರ್ಭಾನುಸಾರ ಡೆಪ್ಯುಟಿ ಕಮಿಷನರ್ ಅವರಿಗೆ ಅಥವಾ ಅಧ್ಯಕ್ಷನಿಗೆ ತನ್ನ ಸಹಿ ಸಹಿತ ಬರಹದಲ್ಲಿ ಅಂಥ ರಾಜೀನಾಮೆಯನ್ನು ಅವನು ಹಿಂತೆಗೆದುಕೊಂಡಿದ್ದ ಹೊರತು, ಆ ಹುದ್ದೆಯು ತೆರವಾಗತಕ್ಕದ್ದು.

(2) ಪ್ರತಿಯೊಬ್ಬ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು, ಅವನು ತಾಲ್ಲೂಕು ಪಂಚಾಯತಿಯ ಸದಸ್ಯನಾಗಿರುವುದು ನಿಂತು ಹೋದಾಗ ತನ್ನ ಹುದ್ದೆಯನ್ನು ತೆರವು ಮಾಡತಕ್ಕದ್ದು.

(3) ತಾಲ್ಲೂಕು ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅವನಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುವ ನಿರ್ಣಯವನ್ನು [2][ಚುನಾಯಿತ ಸದಸ್ಯರ ಪೈಕಿ ಅರ್ಧದಷ್ಟು ಸದಸ್ಯರು ನೋಟಿಸು ನೀಡಿದ ನಂತರ ಮತ್ತು ಒಟ್ಟು ಚುನಾಯಿತ ಸದಸ್ಯರಲ್ಲಿ ಮೂರನೇ ಎರಡರಷ್ಟು ಸದಸ್ಯರ ಬಹುಮತದಿಂದ][2] ಅಂಗೀಕರಿಸಿದರೆ ಹುದ್ದೆಯನ್ನು ತಕ್ಷಣವೇ ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು:

[1][ಪರಂತು ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸವನ್ನು ಸೂಚಿಸುವ ಯಾವ ನಿರ್ಣಯವನ್ನೂ, ಆತನು ಆಯ್ಕೆಯಾದ ದಿನಾಂಕದಿಂದ [2][ಮೂವತ್ತು ತಿಂಗಳೊಳಗೆ][2] ಮಂಡಿಸತಕ್ಕದ್ದಲ್ಲ:

ಮತ್ತು ಪರಂತು ಯಾವೊಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ತಾಲ್ಲೂಕು ಪಂಚಾಯತಿಯು ಪರಿಶೀಲಿಸಿ ಅದನ್ನು ಅಂಗೀಕರಿಸದಿರುವಲ್ಲಿ, ಅದೇ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸಂಬಂದದಲ್ಲಿ ತಾಲ್ಲೂಕು ಪಂಚಾಯತಿಯು ತನ್ನ ನಿರ್ಣಯವನ್ನು ನೀಡಿದ ದಿನಾಂಕದಿಂದ [2][ಎರಡು ವರ್ಷಗಳೊಳಗೆ][2], ಅದೇ ರೀತಿಯ ನಿರ್ಣಯದ ನೋಟೀಸನ್ನು ನೀಡತಕ್ಕದ್ದಲ್ಲ ಅಥವಾ ಮಂಡಿಸತಕ್ಕದ್ದಲ್ಲ.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(4) ತಾಲ್ಲೂಕು ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು, ಅವನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, [1][ಮತ್ತು ಅವಶ್ಯಕವಾದಲ್ಲಿ ಜಿಲ್ಲಾ ಪಂಚಾಯತಿಯಿಂದ ವರದಿಯೊಂದನ್ನು ಪಡೆದುಕೊಂಡು, ಅದನ್ನು ಪರಿಶೀಲಿಸಿದ ತರುವಾಯ][1] ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿನ ದುರ್ವರ್ತನೆಗಾಗಿ ಅಥವಾ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ಒಂದೇ ಸಮನೆ ಅಲಕ್ಷ್ಯ ತೋರಿಸಿದ್ದಕ್ಕಾಗಿ ಸರ್ಕಾರವು ಆ ಹುದ್ದೆಯಿಂದ ತೆಗೆದುಹಾಕಬಹುದಾಗಿರತಕ್ಕದ್ದು ಮತ್ತು ಹಾಗೆ ತೆಗೆದು ಹಾಕಲಾದ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು (2)ನೇ ಉಪಪ್ರಕರಣದ ಅಡಿಯಲ್ಲಿ ಸದಸ್ಯನಾಗಿರುವುದು ನಿಂತುಹೋಗಿರದಿದ್ದರೆ ಅವನು ತಾಲ್ಲೂಕು ಪಂಚಾಯತಿಯ ಸದಸ್ಯ ಹುದ್ದೆಯ ಉಳಿದ ಅವಧಿಯಲ್ಲಿ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

(5) (4)ನೇ ಉಪ-ಪ್ರಕರಣದ ಅಡಿಯಲ್ಲಿ ಹುದ್ದೆಯಿಂದ ತೆಗೆದುಹಾಕಲಾದ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು, ಸರ್ಕಾರವು, ತಾಲ್ಲೂಕು ಪಂಚಾಯತಿಯ ಸದಸ್ಯತ್ವದಿಂದಲೂ ಸಹ ತೆಗೆದುಹಾಕಬಹುದು.

[1][(6)ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಬ್ಬರ ಹುದ್ದೆಗಳು ಖಾಲಿ ಇದ್ದಲ್ಲಿ, ಸಾಮಾಜಿಕ ನ್ಯಾಯದ ಸ್ಥಾಯಿ ಸಮಿತಿಯ ಅಧ್ಯಕ್ಷನು, ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಯುಕ್ತವಾಗಿ ಚುನಾಯಿಸುವವರೆಗೆ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

**141. ತಾಲ್ಲೂಕು ಪಂಚಾಯತಿಯ ಸಭೆಗಳು.**- (1) ತಾಲ್ಲೂಕು ಪಂಚಾಯತಿಯ ಕಾರ್ಯಕಲಾಪದ ನಿರ್ವಹಣೆಗಾಗಿ ಸಭೆಯನ್ನು (ಈ ಪ್ರಕರಣದಲ್ಲಿ ಇನ್ನು ಮುಂದೆ ಸಾಮಾನ್ಯ ಸಭೆಯೆಂದು ಕರೆಯಲಾಗಿದೆ) ಕನಿಷ್ಠ ಪಕ್ಷ ಎರಡು ತಿಂಗಳಲ್ಲಿ ಒಂದು ಬಾರಿ ನಡೆಸತಕ್ಕದ್ದು ಮತ್ತು ಈ ಕೆಳಕಂಡ ಉಪ-ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಅದರ ಸಭೆಗಳ ದಿನ, ವೇಳೆ, ನೋಟೀಸು, ವ್ಯವಸ್ಥಾಪನೆ ಮತ್ತು ಮುಂದೂಡುವಿಕೆಗಳಿಗೆ ಸಂಬಂಧಿಸಿದಂತೆ ಮತ್ತು ಸಾಮಾನ್ಯವಾಗಿ ಅದರಲ್ಲಿ ಕಾರ್ಯಕಲಾಪದ ನಿರ್ವಹಣೆಗೆ ಸಂಬಂಧಿಸಿದಂತೆ ಈ ಅಧಿನಿಯಮಕ್ಕೆ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳಿಗೆ ಅಸಂಗತವಾಗದಂತೆ ವಿನಿಯಮಗಳನ್ನು ರಚಿಸತಕ್ಕದ್ದು, ತಾಲ್ಲೂಕು ಪಂಚಾಯತಿಯ ಪ್ರತಿಯೊಂದು ಸಭೆಯನ್ನು, ಸಾಮಾನ್ಯವಾಗಿ ತಾಲ್ಲೂಕು ಪಂಚಾಯತಿಯ ಕೇಂದ್ರಕಾರ್ಯಸ್ಥಾನದಲ್ಲಿ ನಡೆಸತಕ್ಕದ್ದು.

(2) (ಎ) ತಾಲ್ಲೂಕು ಪಂಚಾಯತಿಯ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆಯ ಅಥವಾ ಪುನರಚನೆಯ ತರುವಾಯ [1][ಅಥವಾ ಸಂದರ್ಭಾನುಸಾರ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯ ಉದ್ದೇಶಕ್ಕಾಗಿ ನಡೆಸಲಾಗುವ ತರುವಾಯದ ಸಭೆಯ ದಿನಾಂಕವನ್ನು][1] ಅಸಿಸ್ಟೆಂಟ್ ಕಮಿಷನರ್ ಅವರು ಗೊತ್ತುಪಡಿಸತಕ್ಕದ್ದು, ಅವರು ಅಂಥ ಸಭೆಯ ಆಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು [2][ತರುವಾಯದ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಅಧ್ಯಕ್ಷನು ತೀರ್ಮಾನಿಸತಕ್ಕದ್ದು ಹಾಗೂ ಅದನ್ನು ಆತನು ತಕ್ಷಣದ ಹಿಂದಿನ ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ತಿಳಿಸತಕ್ಕದ್ದು][2] ಪರಂತು, ಅಧ್ಯಕ್ಷನು ಸಾಕಷ್ಟು ಕಾರಣಗಳಿಗಾಗಿ ಆ ಸಭೆಯ ದಿವಸವನ್ನು ತರುವಾಯದ ದಿನಾಂಕಕ್ಕೆ ಬದಲಾಯಿಸಬಹುದು. ಅಧ್ಯಕ್ಷನು, ಸೂಕ್ತವೆಂದು ತಾನು ಯೋಚಿಸಿದಾಗಲೆಲ್ಲ ವಿಶೇಷ ಸಬೆಯನ್ನು ಕರೆಯಬಹುದು ಮತ್ತು ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಬರಹದಲ್ಲಿನ ಕೋರಿಕೆಯ ಮೇರೆಗೆ ಮತ್ತು ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಅದನ್ನು ಕರೆಯತಕ್ಕದ್ದು. ಅಂಥ ಕೋರಿಕೆಯಲ್ಲಿ ಯಾವ ಉದ್ದೇಶಕ್ಕಾಗಿ ಆ ಸಭೆಯನ್ನು ಕರೆಯಲು ಉದ್ದೇಶಿಸಲಾಗಿದೆಯೋ ಆ ವಿಷಯವನ್ನು ನಿರ್ದಿಷ್ಟಪಡಿಸತಕ್ಕದ್ದು. ಅಧ್ಯಕ್ಷನು ವಿಶೇಷ ಸಭೆಯನ್ನು ಕರೆಯಲು ತಪ್ಪಿದರೆ, ಉಪಾಧ್ಯಕ್ಷನು ಅಥವಾ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಹದಿನೈದು ದಿವಸಗಳಿಗೆ ಮೀರದ ಒಂದು ದಿನ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರಿಗೆ ನೋಟೀಸನ್ನು ಕೊಡಲು ಮತ್ತು ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಗತ್ಯಪಡಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 26-02-1997ರಿಂದ ಸೇರಿಸಲಾಗಿದೆ.
2. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 12.07.2017ರಿಂದ ಪ್ರತಿಯೋಜಿಸಲಾಗಿದೆ.

(ಬಿ) ಸಾಮಾನ್ಯ ಸಭೆಯ ಬಗ್ಗೆ ಹತ್ತು ಪೂರ್ಣ ದಿನಗಳ ನೋಟೀಸನ್ನು ಮತ್ತು ವಿಶೇಷ ಸಭೆಗೆ ಏಳು ಪೂರ್ಣ ದಿನಗಳ ನೋಟೀಸನ್ನು ಅಂಥ ಸಭೆಯನ್ನು ನಡೆಸಬೇಕಾಗಿರುವಂಥ ಕಾಲ ಮತ್ತು ಅದರಲ್ಲಿ ನಿರ್ವಹಿಸಬೇಕಾಗಿರುವ ಕಾರ್ಯಕಲಾಪವನ್ನು ನಿರ್ದಿಷ್ಟಪಡಿಸಿ ಸದಸ್ಯರಿಗೆ ಕಳುಹಿಸತಕ್ಕದ್ದು ಮತ್ತು ಅದನ್ನು ತಾಲ್ಲೂಕು

ಪಂಚಾಯತಿಯ ಕಚೇರಿಯಲ್ಲಿ ಅಂಟಿಸತಕ್ಕದ್ದು ವಿಶೇಷ ಸಭೆಯ ಸಂದರ್ಭದಲ್ಲಿ ಅಂಥ ನೋಟೀಸು ಅಂಥ ಸಭೆಗಾಗಿ ಬರಹದಲ್ಲಿ ಮಾಡಿದ ಕೋರಿಕೆಯಲ್ಲಿ ಹೇಳಿರುವ ಯಾವುದೇ ಸೂಚನೆ ಅಥವಾ ಪ್ರಸ್ತಾವವನ್ನು ಒಳಗೊಂಡಿರತಕ್ಕದ್ದು.

(ಸಿ) ತಾಲ್ಲೂಕು ಪಂಚಾಯತಿಯ ಸದಸ್ಯರ ಒಟ್ಟು ಸಂಖ್ಯೆಯ [1][ಅರ್ಧದಷ್ಟು][1] ಸದಸ್ಯರ ಸಂಖ್ಯೆಯು ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ಕಾರ್ಯಕಲಾಪವನ್ನು ನಿರ್ವಹಿಸುವುದಕ್ಕಾಗಿ ಕೋರಂ ಆಗಿರತಕ್ಕದ್ದು. ಸಭೆಗೆ ಗೊತ್ತುಪಡಿಸಿದ ಕಾಲದಲ್ಲಿ ಕೋರಂ ಇಲ್ಲದಿದ್ದರೆ, ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಮೂವತ್ತು ನಿಮಿಷಗಳ ಕಾಲ ಕಾಯತಕ್ಕದ್ದು ಮತ್ತು ಅಂಥ ಅವಧಿಯೊಳಗೆ ಕೋರಂ ಇದ್ದರೆ ಸಭೆಯನ್ನು ನಡೆಸತಕ್ಕದ್ದು. ಆದರೆ ಅಂಥ ಅವಧಿಯೊಳಗೆ ಕೋರಂ ಇಲ್ಲದಿದ್ದರೆ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ತಾನು ಗೊತ್ತುಪಡಿಸಬಹುದಾದಂಥ ಇನ್ನೊಂದು ದಿನದಂದು ಅಂಥ ವೇಳೆಗೆ ಸಭೆಯನ್ನು ಮುಂದೂಡತಕ್ಕದ್ದು. ಅದರಂತೆ, ಅದು ಪ್ರಾರಂಭವಾದ ತರುವಾಯ ಯಾವುದೇ ಕಾಲದಲ್ಲಿ ಕೋರಂ ಇಲ್ಲದಿರುವ ಬಗ್ಗೆ ಅವನ ಗಮನವನ್ನು ಸೆಳೆದರೆ, ಅವನು ಸಭೆಯನ್ನು ಮುಂದೂಡತಕ್ಕದ್ದು. ಕೋರಂ ಇರುವಂಥ ಅಂಥ ಮುಂದೂಡಿದ ಸಭೆಗಳಲ್ಲಿ ಮೂಲ ಸಭೆಯ ಮುಂದೆ ತರಬಹುದಾಗಿದ್ದಂಥ ಕಾರ್ಯಕಲಾಪ ನಡೆಸತಕ್ಕದ್ದು.

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(ಡಿ) ತಾಲ್ಲೂಕು ಪಂಚಾಯತಿಯ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವಿಚಾರಣೆ ಅಥವಾ ಚರ್ಚೆಯನ್ನು ರಹಸ್ಯವಾಗಿ ನಡೆಸತಕ್ಕದ್ದೆಂದು ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಪರ್ಯಾಲೋಚಿಸಿದ ಹೊರತು, ಪ್ರತಿಯೊಂದು ಸಭೆಯು ಸಾರ್ವಜನಿಕರಿಗೆ ಮುಕ್ತವಾಗಿರತಕ್ಕದ್ದು ಮತ್ತು ಸದರಿ ಪ್ರಾಧಿಕಾರಿಯು ಯಾವುದೇ ಕಾಲದಲ್ಲಿ ವ್ಯವಹರಣೆಗಳಿಗೆ ಅಡ್ಡಿಯುಂಟು ಮಾಡುವ ಯಾವನೇ ವ್ಯಕ್ತಿಯನ್ನು ಹೊರಹಾಕುವಂತೆ ಮಾಡಬಹುದು.

(ಇ) ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕದ್ದು ಅಥವಾ ಅವನು ಗೈರು ಹಾಜರಿದ್ದರೆ [1][ಅಥವಾ ಅಧ್ಯಕ್ಷನ ಹುದ್ದೆಯು ಖಾಲಿಯಿದ್ದರೆ][1] ಉಪಾಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಬ್ಬರೂ ಗೈರು ಹಾಜರಿದ್ದರೆ [1][ಅಥವಾ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಬ್ಬರ ಹುದ್ದೆಗಳು ಖಾಲಿಯಿದ್ದರೆ][1] ಅಥವಾ ಅಧ್ಯಕ್ಷನು ಗೈರುಹಾಜರಿದ್ದು ಉಪಾಧ್ಯಕ್ಷನು ಇರದಿದ್ದರೆ, ಹಾಜರಿರುವ ಸದಸ್ಯರು ತಮ್ಮಲ್ಲಿಯೇ ಒಬ್ಬನನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 26-02-1997ರಿಂದ ಸೇರಿಸಲಾಗಿದೆ.

(ಎಫ್) ಅನ್ಯಥಾ ವಿಶೇಷವಾಗಿ ಉಪಬಂಧಿಸಿರುವ ಹೊರತು, ಎಲ್ಲ ವಿಷಯಗಳನ್ನೂ ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹು ಮತದ ಮೂಲಕ ತೀರ್ಮಾನಿಸತಕ್ಕದ್ದು. ಅಧ್ಯಕ್ಷತೆ ವಹಿಸಿರುವ ಸದಸ್ಯನು ತಾನು ಮತ ನೀಡುವುದರಿಂದ ವಿಮುಖನಾದ ಹೊರತು ವಿಷಯದ ಪರವಾಗಿ ಮತ್ತು ವಿರುದ್ಧವಾಗಿ ಬಂದ ಮತಸಂಖ್ಯೆಯನ್ನು ಘೋಷಿಸುವುದಕ್ಕೆ ಮುಂಚೆ ತನ್ನ ಮತವನ್ನು ನೀಡತಕ್ಕದ್ದು ಮತ್ತು ಸಮಾನ ಮತಗಳು ಬಂದ ಸಂದರ್ಭದಲ್ಲಿ ಅವನು ತನ್ನ ನಿರ್ಣಾಯಕ ಮತವನ್ನು ನೀಡಬಹುದು.

(ಜಿ) ತಾಲ್ಲೂಕು ಪಂಚಾಯತಿಯ ಯಾವನೇ ಸದಸ್ಯನು ತಾಲ್ಲೂಕು ಪಂಚಾಯತಿಯ ಅಥವಾ ಯಾವುದೇ ಸಮಿತಿಯ ಸಭೆಯಲ್ಲಿ ಪರ್ಯಾಲೋಚನೆಗಾಗಿ ಬರುವ ಯಾವುದೇ ವಿಷಯದ ಸಂಬಂಧದಲ್ಲಿ ಆ ವಿಷಯವು ಸಾರ್ವಜನಿಕರಿಗೆ ಸಾಮಾನ್ಯವಾಗಿ ಅನ್ವಯವಾಗುವುದಾದರೂ, ಅದರಲ್ಲಿ ಅವನು ಪ್ರತ್ಯಕ್ಷವಾಗಿ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿದ್ದರೆ, ಮತ ಕೊಡತಕ್ಕದ್ದಲ್ಲ ಅಥವಾ ಅದರ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ. [1][ತಾಲ್ಲೂಕು ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ಪರಿಗಣನೆಗೆ ಬರುವ ಯಾವುದೇ ವಿಷಯದಲ್ಲಿ ತಾನು ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಯಾವುದೇ ಹಣಕಾಸಿನ ರೂಪದಲ್ಲಿ ಹಿತಾಸಕ್ತಿ ಹೊಂದಿರುವುದನ್ನು ತಾಲ್ಲೂಕು ಪಂಚಾಯತಿಗೆ ತಿಳಿಸುವುದು ಕರ್ತವ್ಯವಾಗಿರತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಹೆಚ್) ಅಧ್ಯಕ್ಷತೆ ವಹಿಸಿರುವ ವ್ಯಕ್ತಿಗೆ ಚರ್ಚೆಯಲ್ಲಿರುವ ಯಾವುದೇ ವಿಷಯದಲ್ಲಿ ಹಣಕಾಸಿನ ಹಿತಾಸಕ್ತಿ ಇದೆಯೆಂದು ಸಭೆಯಲ್ಲಿ ಹಾಜರಿರುವ ಯಾವನೇ ಸದಸ್ಯನು ಅಭಿಪ್ರಾಯಪಟ್ಟರೆ ಮತ್ತು ಆ ಬಗ್ಗೆ ಒಂದು ಸೂಚನೆಯನ್ನು ಅಂಗೀಕರಿಸಿದರೆ, ಅವನು ಅಂಥ ಚರ್ಚೆಯು ನಡೆಯುತ್ತಿರುವಾಗ ಆ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದಲ್ಲ ಅಥವಾ ಮತ ಕೊಡತಕ್ಕದ್ದಲ್ಲ ಅಥವಾ ಅದರಲ್ಲಿ ಭಾಗವಹಿಸತಕ್ಕದಲ್ಲ. ಅಂಥ ಚರ್ಚೆಯು ಮುಂದುವರಿಯುತ್ತಿರುವ ಕಾಲದಲ್ಲಿ ಆ ಸಭೆಯಲ್ಲಿ ಸಭೆಯ ಅದ್ಯಕ್ಷತೆ ವಹಿಸಲು ತಾಲ್ಲೂಕು ಪಂಚಾಯತಿಯ ಯಾವನೇ ಸದಸ್ಯನನ್ನು ಆಯ್ಕೆಮಾಡಬಹುದು.

(ಐ) ಯಾವುದೇ ಪ್ರಸ್ತಾವವನ್ನು, ಯಾವುದೇ ಸಾಮಾನ್ಯ ಸಭೆಯ ಸಂದರ್ಭದಲ್ಲಿ, ಅಂಥ ಸಭೆಯನ್ನು ಕರೆಯುವ ನೋಟೀಸಿನಲ್ಲಿ ಅಥವಾ ವಿಶೇಷ ಸಭೆಯ ಸಂದರ್ಭದಲ್ಲಿ ಅಂಥ ಸಭೆಗಾಗಿ ಬರಹದಲ್ಲಿ ಮಾಡಿದ ಕೋರಿಕೆಯಲ್ಲಿ ಅದನ್ನು ನಮೂದಿಸಿದ್ದ ಹೊರತು ಚರ್ಚಿಸತಕ್ಕದ್ದಲ್ಲ. ಸದಸ್ಯನು ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿರುವ ವಿಷಯಗಳಿಗೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾಗಿ ಯಾವುದೇ ನಿರ್ಣಯವನ್ನು ಸೂಚಿಸಬಹುದು. ಅಧ್ಯಕ್ಷನು, ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿಸಿಲ್ಲದ ವಾಡಿಕೆಯ ಸ್ವರೂಪದ ಯಾವುದೇ ಜರೂರು ವಿಷಯವನ್ನು ಯಾವನೇ ಸದಸ್ಯನು ಆಕ್ಷೇಪಿಸದಿದ್ದರೆ ಸೂಚಿಸಬಹುದು. (ಕೆ) ಖಂಡಕ್ಕೆ ಅನುಸಾರವಾಗಿ ಅಲ್ಲದೆ ಯಾವುದೇ ನಿರ್ಣಯವನ್ನು ಅಂಗೀಕರಿಸಿದ ತರುವಾಯ [1][ಆರು ತಿಂಗಳ ಒಳಗೆ][1] ಅದರ ಮಾರ್ಪಾಟು ಅಥವಾ ರದ್ದಿಗಾಗಿ ಬಂದ ಸೂಚನೆಗೆ ಅಥವಾ ಪ್ರಸ್ತಾವಕ್ಕೆ ಯಾವುದೇ ಅನುಮತಿಯನ್ನು ಕೊಡತಕ್ಕದ್ದಲ್ಲ. ಅಂಥ ಸಭೆಯಲ್ಲಿ ಯಾವುದೇ ಕಾರ್ಯಕಲಾಪವನ್ನು ಅಥವಾ ಪ್ರಸ್ತಾವವನ್ನು ಯಾವ ಕ್ರಮದಲ್ಲಿ ತರಬೇಕೆಂಬುದನ್ನು ಅಧ್ಯಕ್ಷತೆ ವಹಿಸುವ ಅಧಿಕಾರಿಯು ನಿರ್ಧರಿಸತಕ್ಕದ್ದು. ಅಂಥ ಕಾರ್ಯಕಲಾಪದ ಯಾವುದೇ ಪ್ರಸ್ತಾವಕ್ಕೆ ಆದ್ಯತೆ ಕೊಡಲು ಯಾವನೇ ಸದಸ್ಯನು ಸೂಚನೆಯನ್ನು ಕೊಟ್ಟ ಸಂದರ್ಭದಲ್ಲಿ ಅವನು ಈ ಪ್ರಸ್ತಾವವನ್ನು ಸಭೆಯ ಮುಂದಿಡತಕ್ಕದ್ದು ಮತ್ತು ಆ ಪ್ರಸ್ತಾವದ ಪರವಾಗಿ ಅಥವಾ ವಿರುದ್ಧವಾಗಿ ಬಂದ ಬಹುಮತಗಳ ಆಧಾರದ ಮೇಲೆ ನಿರ್ಣಯ ಕೈಗೊಳ್ಳತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ಜೆ) ಯಾವುದೇ ಸಾಮಾನ್ಯ ಸಭೆಯನ್ನು ಹಾಜರಿರುವ ಬಹು ಸಂಖ್ಯೆಯ ಸದಸ್ಯರುಗಳ ಸಮ್ಮತಿಯೊಂದಿಗೆ ಕಾಲಕಾಲಕ್ಕೆ ಮುಂದೂಡಬಹುದು. ಆದರೆ, ಯಾವ ಸಭೆಯನ್ನು ಮುಂದೂಡಲಾಯಿತೋ ಆ

ಸಭೆಯಲ್ಲಿ ವಿಲೆ ಮಾಡದೇ ಬಿಟ್ಟದ್ದನ್ನು ಹೊರತುಪಡಿಸಿ ಯಾವುದೇ ಕಾರ್ಯಕಲಾಪವನ್ನು ಯಾವುದೇ ಮುಂದೂಡಿದ ಸಭೆಯಲ್ಲಿ ನಡೆಸತಕ್ಕದ್ದಲ್ಲ.

(ಕೆ) ತಾಲ್ಲೂಕು ಪಂಚಾಯತಿಯ ಯಾವ ನಿರ್ಣಯವನ್ನೂ, ಅದನ್ನು ಅಂಗೀಕರಿಸಿದ ತರುವಾಯ ಆರು ತಿಂಗಳೊಳಗೆ ಸಾಮಾನ್ಯ ಅಥವಾ ವಿಶೇಷ ಸಭೆಯಲ್ಲಿನ ಸದಸ್ಯರ ಒಟ್ಟು ಸಂಖ್ಯೆಯ ಅರ್ಧಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕವಲ್ಲದೆ, ಮತ್ತು (ಬಿ) ಖಂಡದ ಅಗತ್ಯತೆಗಳನ್ನು ಪೂರೈಸಿ ಮತ್ತು ಅಂಥ ಸಭೆಯಲ್ಲಿ ಪೂರ್ಣವಾಗಿ ಮಾರ್ಪಾಟು ಮಾಡಲು ಮತ್ತು ರದ್ದುಪಡಿಸಲು ಉದ್ದೇಶಿಸಿರುವಂಥ ನಿರ್ಣಯವನ್ನು ಮತ್ತು ಅಂಥ ನಿರ್ಣಯವನ್ನು ಪೂರ್ಣವಾಗಿ ಮಾರ್ಪಾಟು ಮಾಡುವುದಕ್ಕಾಗಿ ಅಥವಾ ರದ್ದು ಪಡಿಸುವುದಕ್ಕಾಗಿ ಬಂದ ಸೂಚನೆಯನ್ನು ಅಥವಾ ಪ್ರಸ್ತಾವವನ್ನು ಸಂಪೂರ್ಣವಾಗಿ ವಿವರಿಸಿರುವ ಯಾವುದೇ ನೋಟೀಸನ್ನು ನೀಡಿದ್ದ ಹೊರತು, ಮಾರ್ಪಾಟು ಅಥವಾ ರದ್ದುಮಾಡತಕ್ಕದ್ದಲ್ಲ.

(3) ಪ್ರತಿಯೊಂದು ಸಭೆಯ ವ್ಯವಹರಣೆಗಳನ್ನು ಆ ಸಭೆಯ ಚರ್ಚೆಗಳ ತರುವಾಯ ಕೂಡಲೇ ನಡವಳಿಕೆ ಪುಸ್ತಕಗಳಲ್ಲಿ ದಾಖಲು ಮಾಡತಕ್ಕದ್ದು ಮತ್ತು ಆ ಸಭೆಯ ಅಧ್ಯಕ್ಷನು ಅವುಗಳನ್ನು ಓದಿದ ತರುವಾಯ ಅವನು ಅದಕ್ಕೆ ಸಹಿ ಮಾಡತಕ್ಕದ್ದು. ತಾಲ್ಲೂಕು ಪಂಚಾಯತಿಯ ತೀರ್ಮಾನಗಳ ಮೇಲೆ ಕೈಗೊಂಡ ಕ್ರಮವನ್ನು ತಾಲ್ಲೂಕು ಪಂಚಾಯತಿಯ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು. ನಡವಳಿಕೆ ಪುಸ್ತಕವನ್ನು ತಾಲ್ಲೂಕು ಪಂಚಾಯತಿಯ ಕಚೇರಿಯಲ್ಲಿ ಯಾವಾಗಲೂ ಇಡತಕ್ಕದ್ದು ನಡವಳಿಕೆ ಪುಸ್ತಕವನ್ನು ಯಾವುದೇ ಪರಿಸ್ಥಿತಿಯಲ್ಲಿ ತಾಲ್ಲೂಕು ಪಂಚಾಯತಿಯ ಕಚೇರಿಯ ಹೊರಗೆ ಕೊಂಡುಹೋಗತಕ್ಕದ್ದಲ್ಲ. ನಡವಳಿಕೆ ಪುಸ್ತಕವು ಕಾರ್ಯನಿರ್ವಾಹಕ ಅಧಿಕಾರಿಯ ಸುಪರ್ದಿನಲ್ಲಿರತಕ್ಕದ್ದು. [1][ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಪರವಾಗಿ ಅಥವಾ ಅನುಕ್ರಮವಾಗಿ ವಿರುದ್ಧ ಮತ ಚಲಾಯಿಸಿದ ಸದಸ್ಯರ ಹೆಸರುಗಳ ವಿವರಗಳೊಡನೆ ವ್ಯವಹರಣೆಗಳ ಒಂದು ಪ್ರತಿಯನ್ನು ತಾಲ್ಲೂಕು ಪಂಚಾಯತಿಯ ಸೂಚನಾ ಫಲಕದ ಮೇಲೆ ಸಭೆ ನಡೆದ ಮೂರು ದಿವಸಗಳೊಳಗಾಗಿ ಪ್ರದರ್ಶಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(4) ಸಭೆಯಲ್ಲಿ ತಾಲ್ಲೂಕು ಪಂಚಾಯತಿ ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಪ್ರತಿಯನ್ನು ಆ ಸಭೆಯು ನಡೆದ ದಿನದಿಂದ ಹತ್ತುದಿನಗಳ ಒಳಗೆ [1][x x x][1] ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸತಕ್ಕದ್ದು. [2][ಮತ್ತು ಎಲ್ಲಾ ಸದಸ್ಯರುಗಳಿಗೆ ಸಭೆಯ ನಡುವಳಿಯ ಪ್ರತಿಯನ್ನು ಒದಗಿಸತಕ್ಕದ್ದು.][2]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಬಿಟ್ಟುಬಿಡಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(5) ತಾಲ್ಲೂಕು ಪಂಚಾಯತಿಯಲ್ಲಿ ಅಥವಾ ಅದರ ಯಾವುದೇ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನವು ಉಂಟಾದ ಅವಧಿಯಲ್ಲಿ, ಮುಂದುವರಿದಿರುವ ಸದಸ್ಯರು ಯಾವುದೇ ಖಾಲಿ ಸ್ಥಾನವು ಉಂಟಾಗಿರದಿದ್ದರೆ ಹೇಗೋ ಹಾಗೆ ಕಾರ್ಯ ನಿರ್ವಹಿಸಬಹುದು.

[1][(6)ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಮುಂದಿನವರಲ್ಲಿ ವಿಶ್ವಾಸವಿಲ್ಲದಿರುವುದನ್ನು ತಿಳಿಸುವ ಸೂಚನೆಯನ್ನು ಪರಿಗಣಿಸುವುದಕ್ಕಾಗಿ ಕರೆಯಲಾಗಿದ್ದಲ್ಲಿ,-

(i) ಅಧ್ಯಕ್ಷನ ಸಂಬಂಧದಲ್ಲಿ, ಉಪಾಧ್ಯಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(ii) ಉಪಾಧ್ಯಕ್ಷನ ಸಂಬಂಧದಲ್ಲಿ, ಅಧ್ಯಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(iii) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇವರಿಬ್ಬರ ಸಂಬಂಧದಲ್ಲಿ, ಸಭೆಯಲ್ಲಿ ಹಾಜರಿರುವ ಚುನಾಯಿತ ಸದಸ್ಯರು ತಮ್ಮಲ್ಲಿಯೇ ಚುನಾಯಿಸಿದ ಒಬ್ಬ ಸದಸ್ಯನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

**142. ಅಡ್ಡ ಪ್ರಶ್ನೆಗಳು ಮತ್ತು ನಿರ್ಣಯಗಳು.**- (1) ತಾಲ್ಲೂಕು ಪಂಚಾಯತಿಯ ಸದಸ್ಯನು ತಾಲ್ಲೂಕು ಪಂಚಾಯತಿಯು ರಚಿಸಬಹುದಾದಂಥ ವಿನಿಯಮಗಳಿಗೆ ಒಳಪಟ್ಟು ಆಡಳಿತಕ್ಕೆ ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ವಿಷಯಗಳ ಬಗ್ಗೆ ನಿರ್ಣಯಗಳನ್ನು ಮಂಡಿಸಬಹುದು ಮತ್ತು ತಾಲ್ಲೂಕು ಪಂಚಾಯತಿಯ ಅಧ್ಯಕ್ಷನಿಗೆ ಅಡ್ಡ ಪ್ರಶ್ನೆಗಳನ್ನು ಹಾಕಬಹುದು.

(2) ತಾಲ್ಲೂಕು ಪಂಚಾಯತಿಯ ಸದಸ್ಯನು, ತಾಲ್ಲೂಕು ಪಂಚಾಯತಿಯ ಕೆಲಸವನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷತೆ, ತಾಲ್ಲೂಕು ಪಂಚಾಯತಿಗೆ ಸೇರಿದ ಸ್ವತ್ತಿನ ಯಾವುದೇ ಪೋಲು ಅಥವಾ ತಾಲ್ಲೂಕಿನೊಳಗಿನ ಯಾವುದೇ ಸ್ಥಳೀಯ ಬೇಡಿಕೆಗಳ ಬಗ್ಗೆ ಅಧ್ಯಕ್ಷನ ಗಮನವನ್ನು ಸಹ ಸೆಳೆಯಬಹುದು ಮತ್ತು ಅಪೇಕ್ಷಣೀಯವೆಂದು ಕಂಡುಬರಬಹುದಾದಂಥ ಯಾವುವೇ ಸುಧಾರಣೆಗಳ ಬಗ್ಗೆ ಸಲಹೆ ಕೊಡಬಹುದು.

**143. ತಾಲ್ಲೂಕು ಪಂಚಾಯತಿಯು, ಸಭೆಗಳಲ್ಲಿ [1][ಸರ್ಕಾರಿ ಅಥವಾ ಸರ್ಕಾರದ ಯಾವುದೇ ಸಮಿತಿ, ಕಂಪನಿ ಅಥವಾ ಸರ್ಕಾರವು ಅಧಿಸೂಚಿಸಿದಂತೆ ಗ್ರಾಮೀಣ ಅಭಿವೃದ್ಧಿಯಲ್ಲಿ ಒಳಗೊಂಡ ನಿಗಮದ ಅಧಿಕಾರಿಗಳ][1] ಹಾಜರಾತಿಯನ್ನು ಅಗತ್ಯಪಡಿಸುವುದು.**- ತಾಲ್ಲೂಕು ಪಂಚಾಯತಿಗೆ, ಒಂದು ಜಿಲ್ಲೆಯ ಮೇಲೆ ಅಥವಾ ಜಿಲ್ಲೆಗಿಂತ ಕಡಿಮೆ ಇರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮತ್ತು ತಾಲ್ಲೂಕು ಪಂಚಾಯತಿಯ ಅಧೀನದಲ್ಲಿ ಕೆಲಸ ಮಾಡುತ್ತಿಲ್ಲದ [1][ಸರ್ಕಾರಿ ಅಥವಾ ಸರ್ಕಾರದ ಯಾವುದೇ ಸಮಿತಿ, ಕಂಪನಿ ಅಥವಾ ಸರ್ಕಾರವು ಅಧಿಸೂಚಿಸಿದಂತೆ ಗ್ರಾಮೀಣ ಅಭಿವೃದ್ಧಿಯಲ್ಲಿ ಒಳಗೊಂಡ ನಿಗಮದ ಅಧಿಕಾರಿಗಳ][1] ಹಾಜರಾತಿಯು ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ಅಪೇಕ್ಷಣೀಯವೆಂದು ಕಂಡುಬಂದರೆ ಕಾರ್ಯನಿರ್ವಾಹಕ ಅಧಿಕಾರಿಯು ಉದ್ದೇಶಿತ ಸಭೆಗೆ ಮುಂಚೆ ಹದಿನೈದು ದಿವಸಗಳಿಗೆ ಕಡಿಮೆ ಇಲ್ಲದಂತೆ, ಅಂಥ ಅಧಿಕಾರಿಗೆ ಪತ್ರ ಬರೆದು, ಆ ಅಧಿಕಾರಿಯನ್ನು ಆ ಸಭೆಯಲ್ಲಿ ಹಾಜರಿರುವಂತೆ ಕೋರತಕ್ಕದ್ದು ಮತ್ತು ಆ ಅಧಿಕಾರಿಯು, ಅನಾರೋಗ್ಯ ಅಥವಾ ಇತರ ಯುಕ್ತ ಕಾರಣದಿಂದ ಆಗದಿದ್ದ ಹೊರತು, ಸಭೆಗೆ ಹಾಜರಾಗತಕ್ಕದ್ದು:

ಪರಂತು, ಅಧಿಕಾರಿಯು, ಅಂಥ ಪತ್ರವನ್ನು ಸ್ವೀಕರಿಸಿದ ಮೇಲೆ ಹಿಂದೆ ಹೇಳಿದ ಯಾವುದೇ ಕಾರಣಕ್ಕಾಗಿ ತಾನೇ ಅಲ್ಲಿ ಖುದ್ದಾಗಿ ಹಾಜರಾಗಲು ಆಗದಿದ್ದರೆ ಆ ಸಭೆಯಲ್ಲಿ ಅವನನ್ನು ಪ್ರತಿನಿಧಿಸಲು ಅವನ ಪ್ರತಿನಿಧಿ ಅಥವಾ ಇತರ ಸಕ್ಷಮ ಅಧೀನ ಅಧಿಕಾರಿಗೆ ಸೂಚಿಸತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**144. ವ್ಯವಹರಣೆಗಳ ವಿಧಿಮಾನ್ಯತೆ.-** (1) ತಾಲ್ಲೂಕು ಪಂಚಾಯತಿಯ ಸದಸ್ಯನಾಗಿ ಅಥವಾ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಿರುವ ಅಥವಾ ಸಾಮಾನ್ಯ ಅಥವಾ ವಿಶೇಷ ಸಭೆಯ ಅಧ್ಯಕ್ಷತೆಯನ್ನು ವಹಿಸುವ ಪ್ರಾಧಿಕಾರಿಯಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಸಮಿತಿಯ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯ ಚುನಾವಣೆ ಅಥವಾ ನೇಮಕದಲ್ಲಿನ ಯಾವುದೇ ಅನರ್ಹತೆಯು ಅಥವಾ ದೋಷವು ಸಂದರ್ಭಾನುಸಾರ, ತಾಲ್ಲೂಕು ಪಂಚಾಯತಿಯ ಅಥವಾ ಯಾವುದೇ ಅಂಥ ಸಮಿತಿಯ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ಅಂಥ ಯಾವುದೇ ಕಾರ್ಯದಲ್ಲಿ ಅಥವಾ ವ್ಯವಹರಣೆಯಲ್ಲಿ ಕಾರ್ಯನಿರ್ವಹಿಸಲು ಹಕ್ಕುಳ್ಳವರಾಗಿದ್ದ ಸದಸ್ಯರಲ್ಲಿ ಬಹುಸಂಖ್ಯಾತರು ಭಾಗವಹಿಸಿ ನಿರ್ವಹಿಸಿರುವಲ್ಲಿ, ನಿರರ್ಥಕಗೊಳಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ತಾಲ್ಲೂಕು ಪಂಚಾಯತಿಯ ಅಥವಾ ಯಾವುದೇ ಸಮಿತಿಯ ಯಾವುದೇ ನಿರ್ಣಯವನ್ನು, ಯಾವನೇ ಸದಸ್ಯನಿಗೆ ನೋಟೀಸನ್ನು ಜಾರಿ ಮಾಡುವುದರಲ್ಲಾದ ಯಾವುದೇ ಅಕ್ರಮತೆಯ ಕಾರಣದಿಂದ ಅಸಿಂಧುವೆಂದು ಭಾವಿಸತಕ್ಕದ್ದಲ್ಲ. ಪರಂತು, ತಾಲ್ಲೂಕು ಪಂಚಾಯತಿಯ ಅಥವಾ ಸಮಿತಿಯ ವ್ಯವಹರಣೆಗಳಿಗೆ ಅಂಥ ಅಕ್ರಮತೆಯಿಂದ ಪ್ರತಿಕೂಲ ಬಾಧಕ ಉಂಟಾಗಿರಕೂಡದು.

(3) ತದ್ವಿರುದ್ಧವಾಗಿ ರುಜುವಾತಾಗುವವರೆಗೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ತಾಲ್ಲೂಕು ಪಂಚಾಯತಿಯ ಅಥವಾ ಸಮಿತಿಯ ಪ್ರತಿಯೊಂದು ಸಭೆಯ ಯಾವ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮಕ್ಕನುಸಾರವಾದ ನಡವಳಿಕೆಯನ್ನು ಬರೆಯಲಾಗಿದೆಯೋ ಮತ್ತು ಸಹಿ ಮಾಡಲಾಗಿದೆಯೋ ಆ ವ್ಯವಹರಣೆಗಳಿಗೆ ಸಂಬಂದಿಸಿದ ಪ್ರತಿಯೊಂದು ಸಭೆಯನ್ನು ಕ್ರಮಬದ್ಧವಾಗಿ ಕರೆಯಲಾಗಿತ್ತೆಂದು ಮತ್ತು ನಡೆಸಲಾಯಿತೆಂದು ಮತ್ತು ಸಭೆಯ ಎಲ್ಲ ಸದಸ್ಯರು ಕ್ರಮಬದ್ಧವಾಗಿ ಅರ್ಹತೆ ಹೊಂದಿದ್ದರೆಂದು ಭಾವಿಸತಕ್ಕದ್ದು ಮತ್ತು ಆ ವ್ಯವಹರಣೆಗಳು ಸಮಿತಿಯ ವ್ಯವಹರಣೆಗಳಾಗಿದ್ದರೆ ಅಂಥ ಸಮಿತಿಯನ್ನು ಕ್ರಮಬದ್ಧವಾಗಿ ರಚಿಸಲಾಗಿತ್ತೆಂದು ಮತ್ತು ಆ ನಡವಳಿಕೆಯಲ್ಲಿ ಉಲ್ಲೇಖಿಸಿದ ವಿಷಯಗಳನ್ನು ವ್ಯವಹರಿಸಲು ಅದು ಅಧಿಕಾರವನ್ನು ಹೊಂದಿತ್ತು ಎಂದು ಭಾವಿಸತಕ್ಕದ್ದು.

(4) ತಾಲ್ಲೂಕು ಪಂಚಾಯತಿಯಲ್ಲಿ ಅಥವಾ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನವು ಉಂಟಾದ ಅವಧಿಯಲ್ಲಿ, ಮುಂದುವರಿದಿರುವ ಸದಸ್ಯ ಅಥವಾ ಸದಸ್ಯರು ಆ ಯಾವುದೇ ಖಾಲಿ ಸ್ಥಾನವು ಉಂಟಾಗಿರದಿದ್ದರೆ ಹೇಗೋ ಹಾಗೇ ಕಾರ್ಯ ನಿರ್ವಹಿಸಬಹುದು.

## ಅಧ್ಯಾಯ VIII

## ತಾಲ್ಲೂಕು ಪಂಚಾಯತಿಯ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು

### ತಾಲ್ಲೂಕು ಪಂಚಾಯತಿಯ ಪ್ರಕಾರ್ಯಗಳು

[1][**145. ತಾಲ್ಲೂಕು ಪಂಚಾಯತಿಯ ಪ್ರಕಾರ್ಯಗಳು.-** (1) ತಾಲ್ಲೂಕು ಪಂಚಾಯತಿಯು ಅನುಸೂಚಿ 2ರಲ್ಲಿ ನಿರ್ದಿಷ್ಟಪಡಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು :

ಪರಂತು ಅನುಸೂಚಿ ಖಖರಲ್ಲಿ ನಿದಿಷ್ಟಪಡಿಸಲಾದ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುವುದಕ್ಕೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ನಿಧಿಗಳನ್ನು ಒದಗಿಸುವಲ್ಲಿ ತಾಲ್ಲೂಕು ಪಂಚಾಯತಿಯು ಅಂಥ ಪ್ರಕಾರ್ಯವನ್ನು ನಿರ್ವಹಿಸುವುದಕ್ಕಾಗಿ ವಿಧಿಸಲಾಗಿರುವ ಮಾರ್ಗದರ್ಶನಗಳಿಗೆ ಅಥವಾ ಸೂತ್ರಗಳಿಗನುಸಾರವಾಗಿ ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪ-ಪ್ರಕರಣ ಅಥವಾ ಅನುಸೂಚಿ ಖಖರಲ್ಲಿ ವ್ಯತಿರಿಕ್ತವಾಗಿ ಏನೇ ಇದ್ದರೂ, ತಾಲೂಕು ಪಂಚಾಯತಿಯ ವಶದಲ್ಲಿರುವ ತಾಲೂಕು ಪಂಚಾಯತಿ ನಿಧಿಯು ಅನುಮತಿಸುವಷ್ಟರಮಟ್ಟಿಗೆ ತಾಲೂಕು ಪಂಚಾಯತಿಗೆ ಈ ಕೆಳಗಿನ ವಿಷಯಗಳ ಬಗ್ಗೆ ಅದರ ಅಧಿಕಾರವ್ಯಾಪ್ತಿಯಲ್ಲಿ ಬರುವ ಪ್ರದೇಶದೊಳಗೆ ಸೂಕ್ತವಾಗಿ ಅವಕಾಶ ಕಲ್ಪಿಸುವುದು ಕಡ್ಡಾಯವಾಗಿರತಕ್ಕದ್ದು, ಎಂದರೆ :-

(i) ದಿನ ಒಂದಕ್ಕೆ ಪ್ರತಿ ವ್ಯಕ್ತಿಗೆ ನಲವತ್ತು ಲೀಟರುಗಳಿಗೆ ಕಡಿಮೆ ಇಲ್ಲದಂತೆ ನೀರು ಪೂರೈಸುವುದಕ್ಕಾಗಿ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ಮಿಸುವುದು ಮತ್ತು ಹೆಚ್ಚಿಸುವುದು;

(ii) ತಾಲೂಕಿನೊಳಗಿನ ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳು, ಎಂದರೆ :-

(ಎ) ಗ್ರಾಮ ಸಭೆಯನ್ನು ನಡೆಸುವುದು;

(ಬಿ) ನೀರು ಪೂರೈಕೆ ಕಾಮಗಾರಿಗಳ ನಿರ್ವಹಣೆ;

(ಸಿ) ವೈಯಕ್ತಿಕ ಮತ್ತು ಸಮುದಾಯ ಶೌಚಗೃಹವನ್ನು ನಿರ್ಮಿಸುವುದು;

(ಡಿ) ತೆರಿಗೆಗಳು, ದರಗಳು ಮತ್ತು ಶುಲ್ಕಗಳನ್ನು ವಸೂಲು ಮಾಡುವುದು ಮತ್ತು ಅವುಗಳ ಪರಿಷ್ಕರಣೆ;

(ಇ) ವಿದ್ಯುತ್ ಶುಲ್ಕಗಳನ್ನು ಸಂದಾಯ ಮಾಡುವುದು;

(ಎಫ್) ಶಾಲೆಗಳಿಗೆ ಸೇರಿಸಿಕೊಳ್ಳುವುದು;

(ಜಿ) ರೋಗ ನಿರೋಧಕ ಚುಚ್ಚು ಮದ್ದುಗಳ ಪ್ರಗತಿ;

-ಇವುಗಳ ಬಗ್ಗೆ ಅರ್ಧ ವಾರ್ಷಿಕ ವರದಿಯನ್ನು ಸಲ್ಲಿಸುವುದು;

(iii) ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಸುಸ್ಥಿತಿಯಲ್ಲಿಡುವುದು ಮತ್ತು ಸಾಕಷ್ಟು ಪಾಠದ ಕೊಠಡಿಗಳನ್ನು ಮತ್ತು ನೀರು ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು;

(iv) ಗ್ರಾಮಗಳಲ್ಲಿ ವಾಸದ ಮನೆಗಳಿಂದ ದೂರದಲ್ಲಿ ಗೊಬ್ಬರದ ಗುಂಡಿಗಳಿಗೆ ಜಾಗ ಗುರುತಿಸುವುದಕ್ಕಾಗಿ ಭೂಮಿಯನ್ನು ಆರ್ಜಿಸುವುದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(3) ತಾಲ್ಲೂಕು ಪಂಚಾಯತಿಯ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯ ಘಟಕವಾಗಿರತಕ್ಕದ್ದು ಮತ್ತು ಸ್ಥಳೀಯ ಸ್ವಯಂ ಆಡಳಿತದ ಸಂಸ್ಥೆಗಳಾಗಿ ಅದು ತನ್ನ ಕೆಲಸ ಕಾರ್ಯವನ್ನು ನಿರ್ವಹಿಸುವುದಕ್ಕೆ ಅನುವು ಮಾಡಿಕೊಡಲು ಅವಶ್ಯಕವಾಗಿರಬಹುದಾದಂಥ ಅಧಿಕಾರಗಳನ್ನು, ಪ್ರಾಧಿಕಾರವನ್ನು, ಸಿಬ್ಬಂದಿಗಳನ್ನು ರಾಜ್ಯವು, ಹಣಕಾಸು ಲಭ್ಯತೆಗೆ ಒಳಪಟ್ಟು ಪ್ರದಾನ ಮಾಡತಕ್ಕದ್ದು.

(4) ಪಂಚಾಯತ್ ಪ್ರದೇಶದೊಳಗೆ ಇರುವ ಸಾರ್ವಜನಿಕರ ಅಗತ್ಯತೆಗಳನ್ನು ಈಡೇರಿಸುವುದು ಪ್ರತಿಯೊಂದು ತಾಲೂಕು ಪಂಚಾಯತ್‌ನ ಕರ್ತವ್ಯವಾಗಿರತಕ್ಕದ್ದು ಮತ್ತು ತಾಲ್ಲೂಕು ಪಂಚಾಯತ್‌ನ ನಿಧಿಗಳ ಲಭ್ಯತೆಗೆ ಒಳಪಟ್ಟು ಅನುಸೂಚಿ–II ರಲ್ಲಿ ನಮೂದಿಸಿರುವ ಮತ್ತು ತಾಲ್ಲೂಕು ಪಂಚಾಯತ್‌ಗೆ ಸಂಬಂಧಿಸಿದ ಜವಾಬ್ದಾರಿ ನಕ್ಷೆಯಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ನಿರ್ವಹಣೆಗೆ ಅದು ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಈ ಮುಂದೆ ಹೇಳಿರುವವುಗಳಿಗೆ ಹೆಚ್ಚುವರಿಯಾಗಿ ಎಲ್ಲರಿಗೂ ಸಾಮಾಜಿಕ ನ್ಯಾಯವನ್ನು ಒದಗಿಸಲು ತಾಲ್ಲೂಕು ಪಂಚಾಯತ್‌ಗಳು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಸ್ಕೀಂಗಳನ್ನು ಸಿದ್ಧಗೊಳಿಸಲು ಮತ್ತು ಕಾರ್ಯಗತಗೊಳಿಸಲು, ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಎಲ್ಲ ಸುಸಂಗತ ಸಮಾಜೋ–ಆರ್ಥಿಕ ಮಾಹಿತಿಗಳ ಡಾಟಾಬೇಸ್‌ನ್ನು ಮತ್ತು ಆ ಪ್ರದೇಶದ ಒಳಗೆ ಇರುವ ಎಲ್ಲಾ ನೈಸರ್ಗಿಕ ಮತ್ತು ಇತರ ಸಂಪನ್ಮೂಲಗಳ ಮತ್ತು ಆಸ್ತಿಗಳ ನಕಾಶೆ ಕ್ರೋಢೀಕರಿಸುವುದು, ನಿರ್ವಹಿಸುವುದು ಮತ್ತು ಇಡುವುದು ಹಾಗೂ ಪ್ರತಿಯೊಂದು ಗ್ರಾಮ ಪಂಚಾಯತ್‌ನಲ್ಲಿ ಸರ್ವೆ ಮಾಡಿದ ಫಲಿತಾಂಶವಾಗಿ ಪಡೆದ ಮಾಹಿತಿಯನ್ನು ಮತ್ತು ಗ್ರಾಮೀಣ ಪರಾಮರ್ಶನದ ಪರಿಣಾಮವಾಗಿ ಹೊಮ್ಮಿದ ಮಾಹಿತಿಯನ್ನು ಮತ್ತು ಪ್ರತಿಯೊಂದು ತಾಲ್ಲೂಕು ಪಂಚಾಯತ್ ನಡೆಸಿದ ಸರ್ವೆಗಳ ಮತ್ತು ದತ್ತಾಂಶಗಳ ಸಂಗ್ರಹಣೆಯ ಪರಿಣಾಮವಾಗಿ ಹೊಮ್ಮಿದ ಮಾಹಿತಿಯನ್ನು ಸೇರಿಸುವ ಸಲುವಾಗಿ ನಿಯತಕಾಲಿಕವಾಗಿ ಆ ಡಾಟಾಬೇಸ್‌ನ್ನು ಇಂದೀಕರಿಸುವುದು;

(ಬಿ) ಎಲ್ಲಾ ನಾಗರಿಕರಿಗೆ ಮತ್ತು ಅದರಲ್ಲೂ ಮುಖ್ಯವಾಗಿ ಸಮಾಜದ ಸುರಕ್ಷಿತವಲ್ಲದ ವರ್ಗಗಳಿಗೆ, ಸುರಕ್ಷತೆ, ಭದ್ರತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳು ಎಲ್ಲವೂ ಇವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಗ್ರಾಮ ಪಂಚಾಯತ್‌ಗಳಿಗೆ ನೆರವಾಗುವುದು;

(ಸಿ) ತಾಲ್ಲೂಕು ಮಟ್ಟದಲ್ಲಿ ಶಿಶು ಬೆಳವಣಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದೂ ಸೇರಿದಂತೆ ಮಹಿಳೆಯರ, ಮಕ್ಕಳ, ವಯೋವೃದ್ಧರ, ಅನಾರೋಗ್ಯದಿಂದ ಬಳಲುತ್ತಿರುವವರ ಮತ್ತು ಅಶಕ್ತರ ಆರೋಗ್ಯದ ಅವಶ್ಯಕತೆಗಳಿಗೆ ವಿಶೇಷ ಕಾಳಜಿ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ, ತಾಲ್ಲೂಕ ಆಸ್ಪತ್ರೆಗಳ, ಪಶು ಚಿಕಿತ್ಸಾಲಯಗಳ ಮತ್ತು ಪಾಲಿಕ್ಲಿನಿಕ್‌ಗಳ ಮೇಲ್ವಿಚಾರಣೆ ಮಾಡುವುದು;

(ಡಿ) ಸರ್ಕಾರಿ ಶಾಲೆಗಳ, ಆಶ್ರಮ ಶಾಲೆಗಳ ಮತ್ತು ವಿದ್ಯಾರ್ಥಿ ನಿಲಯಗಳ, ಅನಾಥಾಶ್ರಮಗಳ, ಸರ್ಕಾರಿ ಕೈಗಾರಿಕೆ, ವೃತ್ತಿ ತರಬೇತಿ ಸಂಸ್ಥೆಗಳ ಮತ್ತು ಶೈಕ್ಷಣಿಕ ಕೇಂದ್ರಗಳ ಮೇಲ್ವಿಚಾರಣೆ ಮತ್ತು ಸಾಕ್ಷರತೆಗೆ ಉತ್ತೇಜನ ಮತ್ತು ಇಂಟರ್‌ನೆಟ್ ಬಳಕೆಗೆ ಅವಕಾಶ ಕಲ್ಪಿಸುವುದರೊಂದಿಗೆ ಗ್ರಂಥಾಲಯಗಳ ಮೂಲಕ ಮಾಹಿತಿ ಪಡೆಯುವುದು ಮುಂತಾದ ಎಲ್ಲಾ ಸಂಬಂಧಿತ ಪ್ರಕಾರ್ಯಗಳನ್ನು ನೆರವೇರಿಸುವುದು;

(ಇ) ಸ್ವಯಂ ಉದ್ಯೋಗಕ್ಕೆ ಅವಕಾಶಗಳನ್ನು ಕಲ್ಪಿಸಲು ಹೋಂ–ಸ್ಟೇಗಳ, ಪ್ರವಾಸಿ ತಾಣಗಳ, ಖಾದಿ ಮತ್ತು ಗ್ರಾಮ ಕೈಗಾರಿಕೆಗಳ, ಆಹಾರ ದಾಸ್ತಾನು, ಆಹಾರ ಸಂಸ್ಕರಣೆ ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳ ಸ್ಥಾಪನೆಗೆ ಹಾಗೂ ಅವುಗಳ ಅಭಿವೃದ್ಧಿಗೆ ನೆರವಾಗುವುದು. ಪಡಿತರ ಪದ್ಧತಿಯ ನಿರ್ವಹಣೆ ಸೇರಿದಂತೆ ಗ್ರಾಮೀಣ ಉದ್ಯಮಗಳ ಮತ್ತು ಸಹಕಾರ ಸಂಘಗಳ ಮೂಲಕ ಬಡತನ ನಿವಾರಣೆಗೆ ನೆರವಾಗುವುದು;

(ಎಫ್) ಸಾಲಗಳನ್ನು ನೀಡುವ ಮತ್ತು ಉಳಿತಾಯ ಉತ್ತೇಜನ ನೀಡುವ ಮೂಲಕ ಸಣ್ಣ ವ್ಯಾಪಾರ ವ್ಯವಹಾರಕ್ಕೆ, ಗೃಹ ಮತ್ತು ಗುಡಿ ಕೈಗಾರಿಕೆಗಳ ಪ್ರೋತ್ಸಾಹ ನೀಡುವುದಕ್ಕಾಗಿ ತಾಲ್ಲೂಕು ಮಟ್ಟದಲ್ಲಿರುವ ಮಹಿಳಾ ಸಹಕಾರ ಬ್ಯಾಂಕುಗಳಿಗೆ ನೆರವು ನೀಡುವುದು ಮತ್ತು ಅದರ ನಿರ್ದೇಶಕರ ಮಂಡಳಿಗೆ ಮೂವರು ಮಹಿಳಾ ಸದಸ್ಯರನ್ನು ಪದನಿಮಿತ್ತ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡುವುದು, ಆ ಮೂವರಲ್ಲಿ ಒಬ್ಬರು ಅನುಸೂಚಿಯ ಜಾತಿಯ ಅಥವಾ ಅನುಸೂಚಿತ ಪಂಗಡದವರಾಗಿರತಕ್ಕದ್ದು;

(ಜಿ) ಪ್ರದೇಶದ ಜೀವ ವೈವಿಧ್ಯತೆಯನ್ನು ಮತ್ತು ಪರಿಸರವನ್ನು ಸಂರಕ್ಷಣೆ ಮಾಡಲು ಮತ್ತು ರಕ್ಷಿಸಲು, ಪೋಷಿಸಲು ಮೂಲ ಸಾಮಗ್ರಿಗಳ ಬೆಂಬಲವನ್ನು ನೀಡುವ ಮೂಲಕ ಮತ್ತು ಸಾಮಾಜಿಕ ಅರಣ್ಯ ನಿರ್ಮಾಣಕ್ಕೆ, ಯೋಜನೆ ರೂಪಿಸುವುದಕ್ಕೆ ಮತ್ತು ಬಹುಗ್ರಾಮ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕಗಳ ನಿರ್ವಹಣೆಯಲ್ಲಿ ಪಂಚಾಯತಿಗಳಿಗೆ ನೆರವಾಗುವುದು;

(ಹೆಚ್) ಜಾನುವಾರು ಜಾತ್ರೆಗಳ, ಮೇಳಗಳ, ವಸ್ತುಪ್ರದರ್ಶನಗಳ ಮತ್ತು ತಾಲ್ಲೂಕು ಮಟ್ಟದ ಸಾರ್ವಜನಿಕ ಮಾರುಕಟ್ಟೆಗಳ ಮೂಲಕ ಗ್ರಾಮೀಣ ಉತ್ಪನ್ನಗಳ, ಉತ್ಪಾದನೆಗಳ ಮತ್ತು ಜಾನುವಾರುಗಳ ಮಾರಾಟಕ್ಕೆ ಉತ್ತೇಜನ ನೀಡುವುದು, ಅದಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸಕಾರ್ಯಗಳನ್ನು ನೆರವೇರಿಸುವುದು;

(ಐ) ಶುದ್ಧ ಕುಡಿಯುವ ನೀರು ಒದಗಿಸಲು ಮತ್ತು ನಿರಂತರ ವಿದ್ಯುತ್ ಪೂರೈಕೆ ಮಾಡಲು ಗ್ರಾಮಪಂಚಾಯತ್‌ಗೆ ಸಾಧ್ಯವಾಗುವಂತೆ ಮಾಡುವುದು. ಮತ್ತು ಇವೆರಡೂ ಲಭ್ಯವಾಗುವುದಕ್ಕೆ ಬೇಕಾಗುವ ತಾಂತ್ರಿಕ ನೆರವನ್ನು ಒದಗಿಸುವುದೂ ಸೇರಿದಂತೆ ಅದನ್ನು ಖಚಿತಪಡಿಸಿಕೊಳ್ಳಲು ಅಗತ್ಯಪಡಿಸಿದ ಮೂಲಸೌಕರ್ಯಗಳನ್ನು ಸ್ಥಾಪಿಸುವುದು;

(ಜೆ) ಸಂಭವನೀಯ ಅಪಾಯಗಳ ಪ್ರಮಾಣವನ್ನು ನಿರ್ಧರಿಸುವುದು ಮತ್ತು ವಿಕೋಪ ನಿರ್ವಹಣೆಯ ವಿಧಿವಿಧಾನಗಳನ್ನು ರೂಪಿಸುವುದು ಮತ್ತು ದಾಖಲಿಸುವುದು ಮತ್ತು ಎಲ್ಲ ಬಗೆಯ ಸಂಭವನೀಯ ವಿಕೋಪಗಳನ್ನು ಎದುರಿಸಲು ಸಾಧ್ಯವಾಗುವ ಹಾಗೆ ಎಲ್ಲ ವಿಧವಾದ ವೈದ್ಯಕೀಯ ಮತ್ತು ಇತರ ಅಗತ್ಯತೆಗಳಂಥ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಈ ಜ್ಞಾನವನ್ನು ಸಂಗ್ರಹಿಸಿ ಮತ್ತು ಪ್ರಸಾರ ಮಾಡಿ ಮತ್ತು ಗ್ರಾಮಪಂಚಾಯತ್‌ಗಳು ಮತ್ತು ಜಿಲ್ಲಾಪಂಚಾಯತ್‌ಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಆಯಾಯ ಕ್ಷೇತ್ರಗಳಲ್ಲಿ

ಪರಿಣಿತರಾದ ವ್ಯಕ್ತಿಗಳು ನೀಡುವ ಸಹಕಾರವನ್ನು ಮತ್ತು ಅವರು ಪಾಲ್ಗೊಳ್ಳುವುದನ್ನು ಪಟ್ಟಿ ಮಾಡಿ ತಾಲ್ಲೂಕಿನಲ್ಲಿ ವಿಕೋಪವನ್ನು ಎದುರಿಸಲು ಸಜ್ಜಾಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದು;

(ಕೆ) ತಾಲ್ಲೂಕು ಮಟ್ಟದಲ್ಲಿ ಸಮಾಜದ ಎಲ್ಲ ವರ್ಗಗಳ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಲಾ ಪ್ರಕಾರಗಳಿಗೆ, ಕ್ರೀಡೆಗಳಿಗೆ, ಕುಶಲಕಲೆಗಳಿಗೆ, ಕೌಶಲ್ಯಗಳಿಗೆ ಮತ್ತು ಆಚರಣೆಗಳಿಗೆ ಉತ್ತೇಜನ ನೀಡುವುದು ಮತ್ತು ಅವೆಲ್ಲವುಗಳನ್ನು ಸಂರಕ್ಷಿಸುವುದು;

(ಎಲ್) ತಾಲ್ಲೂಕು ಪಂಚಾಯತ್ ಪ್ರದೇಶದ ಅಗತ್ಯತೆಗಳನ್ನು ಈಡೇರಿಸುವುದು ಮತ್ತು ಗ್ರಾಮ ಪಂಚಾಯತ್‌ಗಳ ಅಗತ್ಯತೆಗಳಿಗೆ ಮತ್ತು ಕೋರಿಕೆಗಳಿಗೆ ಸ್ಪಂದಿಸುವುದು ಮತ್ತು ಅನುಸೂಚಿ–IIರಲ್ಲಿ ಪಟ್ಟಿ ಮಾಡಿದ ವಿಷಯಗಳಿಗೆ ಸಂಬಂಧಿಸಿದಂತೆ ಆ ಪ್ರದೇಶದಲ್ಲಿ ಅವಶ್ಯಕವಾಗಬಹುದಾದಂತೆ ಅವರಿಗೆ ನೆರವನ್ನು ನೀಡುವುದು;

(ಎಂ) ಸಂಬಂಧಪಟ್ಟ ನಗರ ಸ್ಥಳೀಯ ಆಡಳಿತದೊಂದಿಗೆ ಪ್ರತಿ ಐದು ವರ್ಷಗಳಿಗೊಮ್ಮೆ ಅವಶ್ಯಕ ಸಾಮಾಜಿಕ–ಆರ್ಥಿಕ ಅಂಕಿ ಅಂಶಗಳ ಸಂಗ್ರಹಣೆ, ಬೆಳೆ ಗಣತಿ ಮತ್ತು ಜಾನುವಾರು ಗಣತಿ, ನಿರುದ್ಯೋಗ ವ್ಯಕ್ತಿಗಳ ಗಣತಿ ಮತ್ತು ತಾಲ್ಲೂಕು ಪ್ರದೇಶದಲ್ಲಿ ಬಡತನ ರೇಖೆಯ ಕೆಳಗಿರುವ ವ್ಯಕ್ತಿಗಳ ಗಣತಿಯನ್ನು ಸಮೀಕ್ಷೆ ನಡೆಸುವುದು;

(ಎನ್) ತಾನು ನಡೆಸಿದ ಸಮೀಕ್ಷೆಯನ್ನು ಆಧಾರವಾಗಿಟ್ಟುಕೊಂಡು, ಗ್ರಾಮಪಂಚಾಯತ್‌ನ ನೆರವಿನೊಂದಿಗೆ ಅದರ ಪ್ರದೇಶದೊಳಗಿನ ಎಲ್ಲಾ ಗ್ರಾಮಪಂಚಾಯತ್‌ಗಳ ಯೋಜನೆಗಳನ್ನು ಕ್ರೋಢೀಕರಿಸಿ, ತನ್ನದೇ ಆದ ದೂರದೃಷ್ಟಿ ಯೋಜನೆಯನ್ನು ರೂಪಿಸುವುದು ಮತ್ತು ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳನ್ನು ಹೊರತುಪಡಿಸಿ ತನ್ನದೇ ಆದ ಅಭಿವೃದ್ಧಿ ಯೋಜನೆಯನ್ನು ಆ ದೂರದೃಷ್ಟಿ ಯೋಜನೆಯಲ್ಲಿ ಸೇರಿಸುವುದು;

(ಒ) ಗ್ರಾಮ ಪಂಚಾಯತ್‌ಗಳೇ ಸ್ವತಃ ಕೈಗೊಳ್ಳಲಾಗದಿರುವಂಥ ರಸ್ತೆಗಳ ಮತ್ತು ಸೇತುವೆಗಳ ಮತ್ತು ನೀರಿನ ಕಾಲುವೆಗಳ, ಏತ ನೀರಾವರಿ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಹಣಕಾಸು ಲಭ್ಯತೆಗೆ ಒಳಪಟ್ಟು ಅನುಷ್ಠಾನಗೊಳಿಸುವುದು ಮತ್ತು ನಿರ್ವಹಿಸುವುದು;

(ಪಿ) ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ, ಅಥವಾ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಗೆ ಉತ್ತೇಜನ ನೀಡಲು ಪಂಚಾಯತ್ ಪ್ರದೇಶದ ಒಳಗಿನ ಪರಿಸರದ ಸಂರಕ್ಷಣೆಗೆ ಮತ್ತು ಅದಕ್ಕೆ ಅಗತ್ಯವಾದ ಅಥವಾ ಪ್ರಾಸಂಗಿಕವಾದ ಯಾವುದೇ ಇತರ ಕಾಮಗಾರಿಯನ್ನು ಅಥವಾ ಕಾರ್ಯಕ್ರಮವನ್ನು ಕೈಗೊಳ್ಳುವುದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

[1][**145ಎ. ಯೋಜನೆಗಳ ಕ್ರೋಢೀಕರಣ ಮತ್ತು ಸಮಗ್ರಗೊಳಿಸುವಿಕೆ.**– (1) ತಾಲ್ಲೂಕು ಪಂಚಾಯತಿಯಲ್ಲಿನ ನಿಧಿಗಳ ಲಭ್ಯತೆಗೆ ಒಳಪಟ್ಟು, ತಾಲ್ಲೂಕು ಪಂಚಾಯಿತಿಯು, ಯೋಜನೆಗಳ ಅಂಶಗಳು ಮತ್ತು ಅಗತ್ಯಪಡಿಸಿದ ನಿಧಿಗಳ ಅಂದಾಜನ್ನು ಒಳಗೊಂಡು ಅದರ ಸ್ವಂತ ಅಗತ್ಯತೆಗಳನ್ನು ಸೇರಿಸಿ, ಗ್ರಾಮ ಪಂಚಾಯಿತಿಗಳು ಹಾಜುರುಪಡಿಸಿದ ಯೋಜನೆಗಳನ್ನು, ಕ್ರೋಢೀಕರಿಸುವ ಮೂಲಕ, ಅದರ ಆದ್ಯತಾನುಸಾರದ ಅಗತ್ಯತೆಗಳನ್ನು ಸೂಚಿಸುವ ದೂರದೃಷ್ಟಿ ಯೋಜನೆಯನ್ನು ಮತ್ತು ವಾರ್ಷಿಕ ಅಭಿವೃದ್ಧಿ ಯೋಜನೆಗಳನ್ನು ಸಿದ್ದಪಡಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸಿ, ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಅದನ್ನು ಹಾಜರುಪಡಿಸತಕ್ಕದ್ದು. ಗ್ರಾಮ ಪಂಚಾಯಿತಿಗಳ ಯೋಜನೆಗಳನ್ನು, ನಿಧಿಗಳ ಲಭ್ಯತೆ ಅಥವಾ ಸರ್ಕಾರದ ಮಾರ್ಗಸೂಚಿಗಳು ಅಥವಾ ನಿರ್ದೇಶನಗಳನ್ನು ಹೊರತುಪಡಿಸಿ ಬದಲಾಯಿಸತಕ್ಕದ್ದಲ್ಲ.

(2) ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಸ್ಕೀಮುಗಳ ಆದ್ಯತೆಯನ್ನು ನಿರ್ಧರಿಸುವಲ್ಲಿ, ಪ್ರದೇಶದ ಹಿಂದುಳಿದಿರುವಿಕೆ, ಅಗತ್ಯತೆಯ ತುರ್ತು, ಪರಿಣಾಮದ ಮಟ್ಟ ಮತ್ತು ಜನಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡು ಆದ್ಯತಾ ಶ್ರೇಣಿ ವಿಧಾನವನ್ನು ಅಳವಡಿಸತಕ್ಕದ್ದು.

**145ಬಿ. ಅಪಾಯಕಾರಿ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳು, ತೆರೆದ ಬಾವಿಗಳು ಮತ್ತು ಗುಂಡಿಗಳು.**– ತಾಲ್ಲೂಕು ಪಂಚಾಯಿತಿಯು, ಪ್ರದೇಶದ ನಿವಾಸಿಗಳಿಗೆ ಕೇಡು ಅಥವಾ ಅಪಾಯ ಉಂಟು ಮಾಡುವ ಕಾನೂನುಬಾಹಿರ ಕಲ್ಲು ಗಣಿಗಾರಿಕೆ, ಕೊಳವೆ ಬಾವಿ ಕೊರೆಯುವಿಕೆ, ತೆರದ ಬಾವಿಗಳು ಅಥವಾ ಗುಂಡಿಗಳ ತೋಡುವಿಕೆ ಕಾರ್ಯಗಳನ್ನು ನಿಲ್ಲಿಸುವ ಅಧಿಕಾರವನ್ನು ಹೊಂದಿರುವ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನೆರವು ನೀಡತಕ್ಕದ್ದು ಮತ್ತು ಅವುಗಳಿಗೆ ಸಂಬಂಧಿಸಿದ ವ್ಯಕ್ತಿ ಅಥವಾ ಜನರ ವೆಚ್ಚದಲ್ಲಿ ಅಥವಾ ಸಂದರ್ಭಾನುಸಾರ ಅವರಿಬ್ಬರಿಂದಲೂ ಅವುಗಳಿಗೆ ಭದ್ರತೆ ಮಾಡಲು ಅವುಗಳಿಗೆ ಬೇಲಿ ನಿರ್ಮಿಸುವ ಅಥವಾ ಅವುಗಳನ್ನು ಭರ್ತಿ ಮಾಡುವ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**145ಸಿ. ಜೀವ ವೈವಿಧ್ಯತೆ, ಸಾಮಾಜಿಕ ಅರಣ್ಯ ಮತ್ತು ಪರಿಸರ.**– ತಾಲ್ಲೂಕು ಪಂಚಾಯಿತಿಯು, ಆ ಪ್ರದೇಶದ ಜೀವ ವೈವಿಧ್ಯತೆಯನ್ನು ಮತ್ತು ಪರಿಸರವನ್ನು ಸಂರಕ್ಷಿಸಲು, ಕಾಪಾಡಲು ಮತ್ತು ಪೋಷಿಸಲು ತಾಂತ್ರಿಕ ಮತ್ತು ಮೂರ್ತ ರೂಪದ ಸಹಾಯವನ್ನು ಒದಗಿಸುವ ಮೂಲಕ ಅದರ ಪ್ರದೇಶದೊಳಗಿನ ಗ್ರಾಮ ಪಂಚಾಯಿತಿಗಳಿಗೆ ನೆರವು ನೀಡತಕ್ಕದ್ದು ಮತ್ತು ಸಾಮಾಜಿಕ ಅರಣ್ಯ ಬೆಳೆಸುವುದಕ್ಕಾಗಿ ಯೋಜನೆಯನ್ನು ರೂಪಿಸತಕ್ಕದ್ದು ಮತ್ತು ಬಹುಗ್ರಾಮ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸತಕ್ಕದ್ದು ಮತ್ತು ನಿರ್ವಹಣೆ ಮಾಡತಕ್ಕದ್ದು.

**145ಡಿ. ಮಾಹಿತಿ ನಿರ್ವಹಣೆ.**– ತಾಲ್ಲೂಕು ಪಂಚಾಯಿತಿಯ ತನ್ನ ಪ್ರದೇಶದೊಳಗಿನ ಎಲ್ಲ ಸಂಬಂಧಪಟ್ಟ ಸಮಾಜೋ–ಆರ್ಥಿಕ ಮಾಹಿತಿ, ಎಲ್ಲ ನೈಸರ್ಗಿಕ, ಇತರ ಸಂಪನ್ಮೂಲ ಮತ್ತು ಸಂಪತ್ತಿನ ನಕಾಶೆಯ ದತ್ತಾಂಶವನ್ನು ಕ್ರೋಢೀಕರಿಸಿತಕ್ಕದ್ದು, ನಿರ್ವಹಣೆ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಮತ್ತು ಅದು ನಡೆಸಿದ ಸಮೀಕ್ಷೆಗಳ ಪರಿಣಾಮವಾಗಿ ಪಡೆದ ಮಾಹಿತಿಯನ್ನು ಸಂಗ್ರಹಿಸಿ ಅವರು ನಿಯತಕಾಲಿಕವಾಗಿ ಇಂದಿನವರೆಗೆ ನಿರ್ವಹಿಸತಕ್ಕದ್ದು ಮತ್ತು ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತ್ ರಾಜ್ ಅಂದಾಜು ಸಮೀಕ್ಷೆಗಳನ್ನು ನಡೆಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**146. ಪ್ರಕಾರ್ಯಗಳನ್ನು ವಹಿಸಿಕೊಡುವುದು.**- (1) ಸರ್ಕಾರವು ತಾಲ್ಲೂಕು ಪಂಚಾಯತಿಗೆ, ಸರ್ಕಾರದ ಕಾರ್ಯಾಂಗ ಅಧಿಕಾರ ವರ್ಗವು ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯಗಳನ್ನು ವಿಸ್ತರಿಸಿದೆಯೋ ಆ ಕಾರ್ಯಗಳನ್ನು ಅಥವಾ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ವಹಿಸಿಕೊಡಬಹುದು.

(2) ಈ ಪ್ರಕರಣದ ಅಡಿಯಲ್ಲಿ, ಸರ್ಕಾರವು, ಪ್ರದಾನ ಮಾಡಿದ ಪ್ರಕಾರ್ಯಗಳನ್ನು ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಡು ಮಾಡಬಹುದು.

**147. ತಾಲ್ಲೂಕು ಪಂಚಾಯತಿಯ ಸಾಮಾನ್ಯ ಅಧಿಕಾರಗಳು.-** ತಾಲ್ಲೂಕು ಪಂಚಾಯತಿಯು ತನಗೆ ವಹಿಸಿಕೊಟ್ಟ ಅಥವಾ ಪ್ರತ್ಯಾಯೋಜಿಸಿದ ಕಾರ್ಯಗಳನ್ನು ನಿರ್ವಹಿಸಲು ಮತ್ತು ಅದರಲ್ಲೂ ಮುಖ್ಯವಾಗಿ ಮತ್ತು ಈ ಅಧಿನಿಯಮದ ಅಡಿಯಲ್ಲಿ ಚಲಾಯಿಸಬೇಕಾದ ಅಧಿಕಾರಗಳಿಗೆ ಬಾಧಕವಾಗದಂತೆ ಅವಶ್ಯವಿರುವ ಮತ್ತು ಆನುಷಂಗಿಕವಾದ ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ಅಧಿಕಾರಗಳನ್ನು ಹೊಂದಿರತಕ್ಕದ್ದು.

**148. ಸ್ಥಾಯಿ ಸಮಿತಿ.-** (1) ತಾಲ್ಲೂಕು ಪಂಚಾಯತಿಯು, ಈ ಮುಂದಿನ ಸ್ಥಾಯಿ ಸಮಿತಿಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಮಾನ್ಯ ಸ್ಥಾಯಿ ಸಮಿತಿ,

(ಬಿ) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ,

(ಸಿ) ಸಾಮಾಜಿಕ ನ್ಯಾಯ ಸಮಿತಿ.

[1][(2) ಪ್ರತಿಯೊಂದು ಸ್ಥಾಯಿ ಸಮಿತಿಯು, ತಾಲ್ಲೂಕು ಪಂಚಾಯತಿಯು ನಿರ್ದಿಷ್ಟಪಡಿಸಿದಂತೆ ತಾಲ್ಲೂಕು ಪಂಚಾಯತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷನು ಸೇರಿ ಆರನ್ನು ಮೀರದಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆಯನ್ನು ತಾಲ್ಲೂಕು ಪಂಚಾಯತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯಿ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು:

ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಇವುಗಳಲ್ಲಿ ಯಾವುದು ಹೆಚ್ಚಿನ ಸಂಖ್ಯೆಯ ಚುನಾಯಿತ ಸದಸ್ಯರನ್ನು ಹೊಂದಿರುವುದೋ ಅದರ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: ೨೦-೧೦-1997ರಿಂದ ಪ್ರತಿಯೋಜಿಸಲಾಗಿದೆ.

[1][(2ಎ) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ, ಸ್ಥಾಯಿ ಸಮಿತಿಯ ಪ್ರತಿಯೊಬ್ಬ ಸದಸ್ಯನ ಹುದ್ದೆಯ ಅವಧಿಯು ಆತನನ್ನು ಚುನಾಯಿಸಿದ ದಿನಾಂಕದಿಂದ ಇಪ್ಪತ್ತು ತಿಂಗಳು ಅಥವಾ ಅವನು ತಾಲ್ಲೂಕು ಪಂಚಾಯತಿಯ ಸದಸ್ಯನಾಗಿರುವುದು ನಿಂತುಹೋಗುವವರೆಗೆ, ಇದರಲ್ಲಿ ಯಾವುದು ಮೊದಲೋ ಆ ಅವಧಿ ಆಗಿರತಕ್ಕದ್ದು.][1]

1. 1996ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 23-09-1996ರಿಂದ ಸೇರಿಸಲಾಗಿದೆ.

[1][(3) ಅಧ್ಯಕ್ಷನು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷನೂ ಆಗಿರತಕ್ಕದ್ದು. ಉಪಾಧ್ಯಕ್ಷನು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷನೂ ಆಗಿರತಕ್ಕದ್ದು. ಇತರ ಸ್ಥಾಯಿ ಸಮಿತಿಗಳು ಸದಸ್ಯರುಗಳ ಪೈಕಿ ಒಬ್ಬನನ್ನು ಅಧ್ಯಕ್ಷನನ್ನಾಗಿ ಚುನಾಯಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: ೨೦-೧೦-1997ರಿಂದ ಪ್ರತಿಯೋಜಿಸಲಾಗಿದೆ.

(4) ತಾಲ್ಲೂಕು ಪಂಚಾಯತಿಯ ಯಾವನೇ ಚುನಾಯಿತ ಸದಸ್ಯನು, ಒಂದಕ್ಕಿಂತ ಹೆಚ್ಚು ಸ್ಥಾಯಿ ಸಮಿತಿಯಲ್ಲಿ ಸೇವೆ ಸಲ್ಲಿಸಲು ಅರ್ಹನಾಗಿರತಕ್ಕದ್ದಲ್ಲ.

(5) ಕಾರ್ಯನಿರ್ವಾಹಕ ಅಧಿಕಾರಿಯು ಪ್ರತಿಯೊಂದು ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿ-ಯಾಗಿರತಕ್ಕದ್ದು.

**149. ಸ್ಥಾಯಿ ಸಮಿತಿಗಳ ಪ್ರಕಾರ್ಯಗಳು.-** (1) ಸಾಮಾನ್ಯ ಸ್ಥಾಯಿ ಸಮಿತಿಯು ಸಿಬ್ಬಂದಿ ವಿಷಯಗಳು, ಸಂಪರ್ಕಗಳು, ಕಟ್ಟಡಗಳು, ಗ್ರಾಮೀಣ ಗೃಹ ನಿರ್ಮಾಣ, ಗ್ರಾಮ ವಿಸ್ತರಣಾ ಕಾರ್ಯಗಳು, ನೈಸರ್ಗಿಕ ವಿಪತ್ತುಗಳಿಗೆ ಪರಿಹಾರ, ನೀರು ಸರಬರಾಜು ಮತ್ತು ಎಲ್ಲಾ ಉಳಿದ ಸಂಕೀರ್ಣ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(2) ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸಮಿತಿಯು, ತಾಲ್ಲೂಕು ಪಂಚಾಯತಿಯ ಹಣಕಾಸು, ಬಜೆಟ್ ರೂಪಿಸುವುದು, ಆದಾಯ ಹೆಚ್ಚಿಸುವುದಕ್ಕಾಗಿ ಪ್ರಸ್ತಾವಗಳ ಪರಿಶೀಲನೆ, ಜಮಾ ಮತ್ತು ಖರ್ಚುಗಳ ವಿವರಣೆಯ ಪರಿಶೀಲನೆ, ತಾಲ್ಲೂಕು ಪಂಚಾಯತಿಯ ಹಣಕಾಸಿನ ಮೇಲೆ ಪ್ರಭಾವವನ್ನು ಬೀರುವ ಎಲ್ಲಾ ಪ್ರಸ್ತಾವಗಳ ಪರ್ಯಾಲೋಚನೆ ಮತ್ತು ತಾಲ್ಲೂಕು ಪಂಚಾಯತಿಯ ಆದಾಯ ಮತ್ತು ವೆಚ್ಚದ ಸಾಮಾನ್ಯ ಮೇಲ್ವಿಚಾರಣೆ ಮತ್ತು ಸಹಕಾರ, ಸಣ್ಣ ಉಳಿತಾಯ ಮತ್ತು ತಾಲ್ಲೂಕಿನ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಇತರ ಯಾವುದೇ ಕಾರ್ಯ -ಇವುಗಳನ್ನು ನೆರವೇರಿಸತಕ್ಕದ್ದು.

(3) ಸಾಮಾಜಿಕ ನ್ಯಾಯ ಸಮಿತಿಯು,-

(ಎ) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತದೃಷ್ಟಿಯ ಸಂವರ್ಧನೆ;

(ಬಿ) ಸಾಮಾಜಿಕ ಅನ್ಯಾಯ ಹಾಗೂ ಎಲ್ಲ ಇತರ ರೀತಿಯ ಶೋಷಣೆಯಿಂದ ಅವರನ್ನು ಸಂರಕ್ಷಿಸುವುದು;

(ಸಿ) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಏಳಿಗೆ; ಮತ್ತು

(ಡಿ) ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಪಂಗಡಗಳಿಗೆ, ಮಹಿಳೆಯರಿಗೆ ಮತ್ತು ಸಮಾಜದ ಇತರ ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವುದು.

(4) ಸ್ಥಾಯಿ ಸಮಿತಿಯು, ತಾಲ್ಲೂಕು ಪಂಚಾಯತಿಯು ಅವುಗಳಿಗೆ ವಹಿಸಿಕೊಟ್ಟಿರುವ ಅಧಿಕಾರಗಳಷ್ಟು ಮಟ್ಟಿಗೆ ಮೇಲೆ ಉಲ್ಲೇಖಿಸಿರುವ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**150. ಸಮಿತಿಗಳ ಕಾರ್ಯವಿಧಾನ.**- (1) ತಾಲ್ಲೂಕು ಪಂಚಾಯತಿಯು, ಸಮಿತಿಗಳ ಸದಸ್ಯರ ಚುನಾವಣೆ, ಅವುಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆ ಮತ್ತು ಅವುಗಳಿಗೆ ಸಂಬಂಧಪಟ್ಟ ಎಲ್ಲ ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ವಿನಿಯಮಗಳನ್ನು ರಚಿಸಬಹುದು.

(2) ಪ್ರತಿಯೊಂದು ಸಮಿತಿಯ ಅಧ್ಯಕ್ಷರು, ಆ ಸಮಿತಿಯ ಕೆಲಸಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯತಿಯ ಕಚೇರಿಯಿಂದ ಯಾವುದೇ ಮಾಹಿತಿ, ವಿವರಣ ಪಟ್ಟಿಕೆ, ವಿವರಪತ್ರ, ಲೆಕ್ಕಪತ್ರ ಅಥವಾ ವರದಿಯನ್ನು ತರಿಸಿಕೊಳ್ಳಲು ಮತ್ತು ತಾಲ್ಲೂಕು ಪಂಚಾಯತಿಯ ಯಾವುದೇ ಸ್ಥಿರ ಸ್ವತ್ತನ್ನು ಅಥವಾ ಸಮಿತಿಯ ಕೆಲಸಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಕಾಮಗಾರಿಯನ್ನು ಪ್ರವೇಶಿಸಲು ಮತ್ತು ಅದನ್ನು ಪರಿಶೀಲಿಸಲು ಹಕ್ಕುಳ್ಳವನಾಗಿರತಕ್ಕದ್ದು.

(3) ಪ್ರತಿಯೊಂದು ಸಮಿತಿಯು, ಸಮಿತಿಯ ಕೆಲಸಕ್ಕೆ ಸಂಬಂಧಪಟ್ಟ ಯಾವನೇ ಅಧಿಕಾರಿಯು ಅದರ ಸಭೆಗಳಲ್ಲಿ ಹಾಜರಿರುವಂತೆ ಅಗತ್ಯಪಡಿಸಲು ಹಕ್ಕುಳ್ಳದ್ದಾಗಿರತಕ್ಕದ್ದು. ಕಾರ್ಯದರ್ಶಿಯು ಸಮಿತಿಯ ಸೂಚನೆಯ ಮೇರೆಗೆ ನೋಟೀಸುಗಳನ್ನು ಕೊಡತಕ್ಕದ್ದು ಮತ್ತು ಆ ಅಧಿಕಾರಿಯು ಹಾಜರಾಗುವಂತೆ ನೋಡಿಕೊಳ್ಳತಕ್ಕದ್ದು.

**151. ಅಧಿಕಾರಗಳನ್ನು ವಹಿಸಿಕೊಡುವುದು.**- ತಾಲ್ಲೂಕು ಪಂಚಾಯತಿಯು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ತಾಲ್ಲೂಕು ಪಂಚಾಯತಿಗೆ ಪ್ರದಾನ ಮಾಡಿರುವ ಯಾವುವೇ ಅಧಿಕಾರಗಳನ್ನು ಕಾರ್ಯ ನಿರ್ವಾಹಕ ಅಧಿಕಾರಿಗೆ ವಹಿಸಿಕೊಡಬಹುದು.

**152. ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು.**– [1][ಅಧ್ಯಕ್ಷನು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಅವನು][1],–

1. 1996ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 29–11–1995ರಿಂದ ಪ್ರತಿಯೋಜಿಸಲಾಗಿದೆ.

(ಎ) ತಾಲ್ಲೂಕು ಪಂಚಾಯತಿಯ ಸಭೆಗಳನ್ನು ಸಮಾವೇಶಗೊಳಿಸತಕ್ಕದ್ದು, ಅದರ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅದನ್ನು ನಡೆಸತಕ್ಕದ್ದು;

(ಬಿ) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅಡಿಯಲ್ಲಿ ತನಗೆ ವಿಧಿಸಿದ ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಪ್ರದಾನ ಮಾಡಿದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಸರ್ಕಾರವು ತನಗೆ ವಹಿಸಿಕೊಟ್ಟಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

[1][(ಸಿ) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳ ಉಪಬಂಧಗಳಿಗೆ ಅಸಂಗತವಾಗಿರದ ತಾಲ್ಲೂಕು ಪಂಚಾಯತಿ ಅಥವಾ ಸ್ಥಾಯೀ ಸಮಿತಿಗಳ ನಿರ್ಣಯಗಳನ್ನು ಅಥವಾ ನಿರ್ಧಾರಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಕಾರ್ಯ ನಿರ್ವಹಣಾಧಿಕಾರಿಯ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಡಿ) ತಾಲ್ಲೂಕು ಪಂಚಾಯತಿಯ ಹಣಕಾಸಿನ ಮತ್ತು ಕಾರ್ಯನಿರ್ವಹಣಾ ಆಡಳಿತದ [1][ನಿಯಂತ್ರಣ ಹಾಗೂ][1] ಸಮಗ್ರ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ಅದಕ್ಕೆ ಸಂಬಂಧಪಟ್ಟ, ತಾಲ್ಲೂಕು ಪಂಚಾಯತಿಯ ಆದೇಶಗಳು ಅಗತ್ಯವೆಂದು ತನಗೆ ಕಂಡುಬರುವ ಎಲ್ಲಾ ವಿಷಯಗಳನ್ನು ಅದರ ಮುಂದಿಡತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ತಾಲ್ಲೂಕು ಪಂಚಾಯತಿಯ ದಾಖಲೆಗಳನ್ನು ತರಿಸಿಕೊಳ್ಳಬಹುದು; ಮತಗ

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಇ) ತಾಲ್ಲೂಕಿನಲ್ಲಿ ಉಂಟಾದ ಪ್ರಕೃತಿ ವಿಕೋಪಗಳಿಂದ ತೊಂದರೆಗೊಳಗಾದವರಿಗೆ ತಕ್ಷಣ ಪರಿಹಾರ ಒದಗಿಸುವ ಉದ್ದೇಶಕ್ಕಾಗಿ ವರ್ಷಕ್ಕೆ ಒಟ್ಟು [1][ಒಂದು ಲಕ್ಷ][1] ರೂಪಾಯಿಗಳ ಮೊತ್ತದವರೆಗೆ ಮಂಜೂರಾತಿ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು:

ಪರಂತು ಅಧ್ಯಕ್ಷನು ತಾಲ್ಲೂಕು ಪಂಚಾಯತಿಯ ಮುಂದಿನ ಸಭೆಯಲ್ಲಿ ಅಂತಹ ಮಂಜೂರಾತಿಗಳ ವಿವರಗಳನ್ನು ಅದರ ಸ್ಥಿರೀಕರಣಕ್ಕಾಗಿ ಮಂಡಿಸತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**153. ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು.**- ತಾಲ್ಲೂಕು ಪಂಚಾಯತಿಯ ಉಪಾಧ್ಯಕ್ಷನು,-

(ಎ) ಅಧ್ಯಕ್ಷನು ಗೈರುಹಾಜರಾದಾಗ ಅಥವಾ ರಜೆಯ ಮೇಲಿರುವಾಗ ಅಥವಾ ಕಾರ್ಯ ನಿರ್ವಹಿಸಲು ಅಸಮರ್ಥನಾಗಿರುವಾಗ [1][ಅಥವಾ ಅಧ್ಯಕ್ಷನ ಹುದ್ದೆಯು ಖಾಲಿಯಿದ್ದಾಗ][1] ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಮತ್ತು

1. 1997ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 26-02-1997ರಿಂದ ಸೇರಿಸಲಾಗಿದೆ.

(ಬಿ) ಅಧ್ಯಕ್ಷನ ಗೈರುಹಾಜರಿಯಲ್ಲಿ [1][ಅಥವಾ ಅಧ್ಯಕ್ಷನ ಹುದ್ದೆಯು ಖಾಲಿಯಿದ್ದಲ್ಲಿ][1] ತಾಲ್ಲೂಕು ಪಂಚಾಯತಿಯ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 26-02-1997ರಿಂದ ಸೇರಿಸಲಾಗಿದೆ.

[1][**154. ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.**– (1) ತಾಲ್ಲೂಕು ಪಂಚಾಯಿತಿಯ ಪರವಾಗಿ ಕಾಮಗಾರಿಗಳನ್ನು ನಿರ್ವಹಿಸಲು ಅಥವಾ ಸರಕುಗಳು ಅಥವಾ ಸೇವೆಗಳನ್ನು ಪೂರೈಸಲು, ನಮೂದು ಮಾಡಿರುವ ಪ್ರತಿಯೊಂದು ಕರಾರು ಅಥವಾ ಒಪ್ಪಂದವು, ಈ ಪ್ರಕರಣದ ಉಪಬಂಧಗಳು ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕತೆಯ ಅಧಿನಿಯಮ 1999ರ ಉಪಬಂಧಗಳಿಗನುಸಾರವಾಗಿರತಕ್ಕದ್ದು.

(2) ಕಾರ್ಯನಿರ್ವಹಣಾಧಿಕಾರಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಉಪಬಂಧಗಳ ಅಡಿಯಲ್ಲಿ ಆತನು ಮಾಡಲು ಅಧಿಕಾರವನ್ನು ಹೊಂದಿರುವ ವಿಷಯಗಳ ಸಂಬಂಧದಲ್ಲಿ ತಾಲ್ಲೂಕು ಪಂಚಾಯಿತಿಯ ಪರವಾಗಿ ಕರಾರು ಅಥವಾ ಒಪ್ಪಂದಗಳನ್ನು ಮಾಡತಕ್ಕದ್ದು ಮತ್ತು ಅಂಥ ಕರಾರು ಅಥವಾ ಒಪ್ಪಂದವು ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಕರಾರು ಅಥವಾ ಒಪ್ಪಂದದ ಅಂಥ ಮೌಲ್ಯದ ಮೊಬಲಗಿನವರೆಗೆ ಕಾರ್ಯನಿರ್ವಹಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ IX

### ತಾಲ್ಲೂಕು ಪಂಚಾಯತಿಯ ಸಿಬ್ಬಂದಿ

**155. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಸಿಬ್ಬಂದಿ.-** (1) ಸರ್ಕಾರವು ಅಸಿಸ್ಟೆಂಟ್ ಕಮಿಷನರ್ ದರ್ಜೆಯ ಅಥವಾ ಅದಕ್ಕೆ ಸಮಾನವಾದ ರಾಜ್ಯ ಸರ್ಕಾರಿ ಸೇವೆಯ ಒಬ್ಬ ಗ್ರೂಪ್ "ಎ" ಅಧಿಕಾರಿಯನ್ನು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(2) ಸರ್ಕಾರವು ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ಅಧೀನದಲ್ಲಿ ಕೆಲಸ ಮಾಡುವುದಕ್ಕೆ ಸರ್ಕಾರ ಅವಶ್ಯವೆಂದು ಪರಿಗಣಿಸುವಷ್ಟು ಸಂಖ್ಯೆಯ ರಾಜ್ಯ ಸರ್ಕಾರದ ಎ ಅಥವಾ ಬಿ ಅಥವಾ ಸಿ ಗುಂಪಿನ ಅಥವಾ ಡಿ ಗುಂಪಿನ ಸೇವೆಯ ಅಧಿಕಾರಿಗಳು ಮತ್ತು ನೌಕರರನ್ನು (ಅಂತಹ ಸೇವೆಗೆ ಈಗಿರುವ ಸ್ಥಳೀಯ ಪ್ರಾಧಿಕಾರಗಳು ನೇಮಕ ಮಾಡಿಕೊಂಡಿರುವ ವ್ಯಕ್ತಿಗಳಲ್ಲಿ ಅಂತಹ ಸೇವೆಗೆ ನೇಮಕ ಮಾಡಲಾದ ಯಾರೇ ಅಧಿಕಾರಿಗಳು ಸೇರಿದಂತೆ) ನಿಯುಕ್ತಿಗೊಳಿಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಅಥವಾ ತತ್ಕಾಲಕ್ಕೆ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸರ್ಕಾರವು ಅಥವಾ ಈ ಸಂಬಂಧದಲ್ಲಿ ಅದು ಅಧಿಕಾರ ನೀಡಿರುವ ಯಾವನೇ ಅಧಿಕಾರಿಯು ಅಥವಾ ಇತರ ಪ್ರಾಧಿಕಾರಿಯು ಹಾಗೆ ನಿಯುಕ್ತಿಗೊಳಿಸಿದ ಅಧಿಕಾರಿಯನ್ನು ತಾಲ್ಲೂಕಿನೊಳಗಡೆ ಅಥವಾ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ವರ್ಗಾವಣೆ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

**156. ಕಾರ್ಯನಿರ್ವಾಹಕ ಅಧಿಕಾರಿಯ, ಇತರ ಅಧಿಕಾರಿಗಳ ಹಾಗೂ ಸಿಬ್ಬಂದಿಯ ಪ್ರಕಾರ್ಯಗಳು.-** (1) [1][[2][ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಲಾದ ಹೊರತು][2] ಕಾರ್ಯನಿರ್ವಾಹಕ ಅಧಿಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಎಂದರೆ][1]:-

1. 1996ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 29-11-1995ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(ಎ) ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಅವನಿಗೆ ನಿರ್ದಿಷ್ಟವಾಗಿ ವಿಧಿಸಿರುವ ಅಥವಾ ಪ್ರದತ್ತವಾಗಿರುವ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು;

[1][(ಬಿ) ಅಧ್ಯಕ್ಷನ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ತಾಲ್ಲೂಕು ಪಂಚಾಯತಿಯ ಅಥವಾ ಅದರ ಅಧೀನದಲ್ಲಿನ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಗಳು ಮತ್ತು ನೌಕರರನ್ನು ನಿಯಂತ್ರಿಸತಕ್ಕದ್ದು;][1]

1. 1996ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 29-11-1995ರಿಂದ ಪ್ರತಿಯೋಜಿಸಲಾಗಿದೆ.

[1][(ಬಿಬಿ) ಈ ಅಧಿನಿಯಮದ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಅವನಿಗೆ ನಿರ್ದಿಷ್ಟವಾಗಿ ವಿಧಿಸಿರುವ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಅಥವಾ ಪ್ರದತ್ತವಾಗಿರುವ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ಆತನಿಗೆ ವಹಿಸುವ ಅಂತಹ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಸಿ) ತಾಲ್ಲೂಕು ಪಂಚಾಯತಿಯ ಎಲ್ಲಾ ಕಾಮಗಾರಿಗಳ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ನಿಯಂತ್ರಿಸತಕ್ಕದ್ದು;

(ಡಿ) ತಾಲ್ಲೂಕು ಪಂಚಾಯತಿಯ ಎಲ್ಲಾ ಕಾಮಗಾರಿಗಳನ್ನು ಮತ್ತು ಅಭಿವೃದ್ಧಿ ಯೋಜನೆಗಳನ್ನು ತ್ವರಿತವಾಗಿ ನಿರ್ವಹಿಸಲು ಅವಶ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಇ) ತಾಲ್ಲೂಕು ಪಂಚಾಯತಿಯ ಮತ್ತು ಅಂತಹ ಸಮಿತಿಗಳ ಸಭೆಗಳ ವ್ಯವಹರಣೆಗಳಿಗೆ ಸಂಬಂಧಿಸಿದ ಎಲ್ಲ ಕಾಗದಪತ್ರಗಳ ಮತ್ತು ದಸ್ತಾವೇಜುಗಳ ಸುಪರ್ದನ್ನು ಹೊಂದಿರತಕ್ಕದ್ದು;

(ಎಫ್) ತಾಲ್ಲೂಕು ಪಂಚಾಯತಿ ನಿಧಿಯಿಂದ ಹಣವನ್ನು ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರ ಇರತಕ್ಕದ್ದು; ಮತ್ತು

(ಜಿ) ಗೊತ್ತುಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಕಾರ್ಯನಿರ್ವಾಹಕ ಅಧಿಕಾರಿಯು, ತಾಲ್ಲೂಕು ಪಂಚಾಯತಿಯ ಪ್ರತಿಯೊಂದು ಸಭೆಗೆ ಹಾಜರಾಗತಕ್ಕದ್ದು ಮತ್ತು ಅದರ ಯಾವುದೇ ಸಮಿತಿಯ ಸಭೆಗೆ ಹಾಜರಾಗುವ ಮತ್ತು ಚರ್ಚೆಯಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಯಾವುದೇ ನಿರ್ಣಯವನ್ನು ಮಂಡಿಸುವ ಅಥವಾ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. [1][ತಾಲ್ಲೂಕು ಪಂಚಾಯತಿಯ ಅಥವಾ ಯಾವುದೇ ಸಮಿತಿಯ ಮುಂದಿರುವ ಯಾವುದೇ ಪ್ರಸ್ತಾವ ಅಥವಾ ನಿರ್ಣಯ ಅಥವಾ ಅಧ್ಯಕ್ಷನ ಯಾವುದೇ ಆದೇಶವು, ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧಗಳು ಅಥವಾ ಅದರಡಿ ಮಾಡಲಾದ ಯಾವುದೇ ನಿಯಮ ಅಥವಾ ಆದೇಶ ಅಥವಾ ಯಾವುದೇ ಆರ್ಥಿಕ ವಿನಿಯಮ ಅಥವಾ ಬಜೆಟ್ ಏರ್ಪಾಡು ಇವುಗಳನ್ನು ಉಲ್ಲಂಘಿಸು- ವಂಥದ್ದಾಗಿದೆಯೆಂದು ಅಥವಾ ಅವುಗಳಿಗೆ ಅಸಂಗತವಾಗಿದೆಯೆಂದು ಅಥವಾ ತಾಲ್ಲೂಕು ಪಂಚಾಯತಿಯ ಅಥವಾ ಅದರ ಸಮಿತಿಯ ಅಥವಾ ಅಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ನ್ಯೂನಗೊಳಿಸುವುದೆಂದು ಕಾರ್ಯನಿರ್ವಾಹಕ ಅಧಿಕಾರಿಯು ಅಭಿಪ್ರಾಯಪಟ್ಟರೆ, ತನ್ನ ಅಭಿಪ್ರಾಯಕ್ಕೆ ಕಾರಣಗಳನ್ನು ಒಳಗೊಂಡಿರುವ ಹಾಗೂ ಪ್ರಸ್ತಾವ ಅಥವಾ ನಿರ್ಣಯ ಅಥವಾ ಆದೇಶವು ಯಾವ ಕಾನೂನು, ನಿಯಮ, ಆದೇಶ, ವಿನಿಯಮ ಅಥವಾ ಏರ್ಪಾಡಿಗೆ ಅಸಂಗತವಾಗಿದೆ ಎಂಬುದನ್ನು ಸೂಚಿಸಿ ಲಿಖಿತ ಟಿಪ್ಪಣಿಯ ಮೂಲಕ ತಾಲ್ಲೂಕು ಪಂಚಾಯತಿ ಅಥವಾ ಸಮಿತಿ ಅಥವಾ ಅಧ್ಯಕ್ಷನಿಗೆ ಸಲಹೆ ನೀಡುವುದು ಕಾರ್ಯನಿರ್ವಾಹಕ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅಂಥ ಸಲಹೆ ನೀಡುವುದಕ್ಕೆ ಮುಂಚೆ ತಾಲ್ಲೂಕು ಪಂಚಾಯತಿ ಅಥವಾ ಸಮಿತಿ ಅಥವಾ ಅಧ್ಯಕ್ಷನು ಪ್ರಸ್ತಾವ ಅಥವಾ ನಿರ್ಣಯ ಅಥವಾ ಆದೇಶವನ್ನು ಪರಿಶೀಲಿಸಿ, ಅಂಗೀಕರಿಸಿದ್ದರೆ, ಕಾರ್ಯನಿರ್ವಾಹಕ ಅಧಿಕಾರಿಯು ತಾನು

ಅವಶ್ಯಕವೆಂದು ಭಾವಿಸುವಂಥ ಪರಿವೀಕ್ಷಣೆ ನಡೆಸಿದ ತರುವಾಯ ತನ್ನ ಸಲಹೆಯೊಂದಿಗೆ ಪ್ರಸ್ತಾವ ಅಥವಾ ನಿರ್ಣಯ ಅಥವಾ ಆದೇಶವನ್ನು ಮರಳಿ ಒಪ್ಪಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(3) ತಾಲ್ಲೂಕು ಪಂಚಾಯತಿ ಅಥವಾ ಅದರ ಸಮಿತಿಗಳು ಅಥವಾ ಅಧ್ಯಕ್ಷನು (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅಸಂಗತತೆಯನ್ನು ಪರಿಹರಿಸದೆ ನಿರ್ಣಯ ಅಥವಾ ಆದೇಶವನ್ನು ಅಂಗೀಕರಿಸಿದರೆ ಈ ಅಧಿನಿಯಮದ ಯಾವುವೇ ಇತರ ಉಪಬಂಧಗಳಲ್ಲಿ ಏನೇ ಇದ್ದರೂ, ಕಾರ್ಯ ನಿರ್ವಾಹಕ ಅಧಿಕಾರಿಯು ಸದರಿ ನಿರ್ಣಯ ಅಥವಾ ಆದೇಶದ ಒಂದು ಪ್ರತಿಯನ್ನು ತನ್ನ ಲಿಖಿತ ಟಿಪ್ಪಣಿಯೊಂದಿಗೆ ಅಧ್ಯಕ್ಷನಿಗೆ ತಿಳಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸುವುದು ಆತನ ಕರ್ತವ್ಯವಾಗಿರತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

**157. ದಾಖಲೆ ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರಲು ಕಾರ್ಯನಿರ್ವಾಹಕ ಅಧಿಕಾರಿಯ ಹಕ್ಕು.-** (1) ಗ್ರಾಮ ಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದ ಹಣ, ಲೆಕ್ಕಪತ್ರಗಳು, ದಾಖಲೆಗಳು ಅಥವಾ ಇತರ ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು ಕಾರ್ಯನಿರ್ವಾಹಕ ಅಧಿಕಾರಿಯು ಬರಹದಲ್ಲಿ ಕಡ್ಡಾಯವಾಗಿ ಕೋರಿದಾಗ ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಅದನ್ನು ಸ್ವೀಕರಿಸಲು ಆ ಕಡ್ಡಾಯ ಕೋರಿಕೆಯಲ್ಲಿ ಅಧಿಕಾರ ನೀಡಿರುವಂಥ ವ್ಯಕ್ತಿಗೆ ಅಂಥ ಹಣವನ್ನು ಒಪ್ಪಿಸತಕ್ಕದ್ದು ಅಥವಾ ಅಂಥ ಲೆಕ್ಕಪತ್ರಗಳು, ದಾಖಲೆಗಳು ಅಥವಾ ಇತರ ಸ್ವತ್ತನ್ನು ವಶಾವಣೆ ಮಾಡತಕ್ಕದ್ದು.

(2) ಕಾರ್ಯನಿರ್ವಾಹಕ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿ ಇರುವ ಯಾವುದೇ ಹಣವನ್ನು, ಸುಸ್ತಿದಾರರಿಂದ ಭೂಕಂದಾಯದ ಬಾಕಿಯನ್ನು ವಸೂಲಿ ಮಾಡುವುದಕ್ಕಾಗಿ 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದಲ್ಲಿ (ಕರ್ನಾಟಕ ಅದಿನಿಯಮ 1964ರ 12) ಕಲ್ಪಿಸಿರುವ ಉಪಬಂಧಗಳ ರೀತಿಯಲ್ಲಿ ಮತ್ತು ಅವುಗಳಿಗೆ ಒಳಪಟ್ಟು ವಸೂಲ್ಮಾಡಲು ಕ್ರಮಗಳನ್ನು ಸಹ ಕೈಗೊಳ್ಳಬಹುದು ಮತ್ತು ಗ್ರಾಮ ಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದ ಲೆಕ್ಕಪತ್ರಗಳು, ದಾಖಲೆಗಳು ಅಥವಾ ಇತರ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಸರ್ಚ್ ವಾರಂಟನ್ನು ಹೊರಡಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ 1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ ಕೇಂದ್ರ ಅದಿನಿಯಮ 2)ರ VIIನೇ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ಮ್ಯಾಜಿಸ್ಟ್ರೇಟನು ಕಾನೂನುಬದ್ಧವಾಗಿ ಚಲಾಯಿಸಬಹುದಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು.

(3) ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದ ಯಾವುದೇ ಹಣ, ಲೆಕ್ಕಪತ್ರಗಳು, ದಾಖಲೆಗಳು ಅಥವಾ ಇತರ ಸ್ವತ್ತನ್ನು ಎಲ್ಲಿ ಗೋಪ್ಯವಾಗಿಡಲಾಗಿದೆ ಎಂಬುದನ್ನು ತಿಳಿದಿರುವ ಪ್ರತಿಯೊಬ್ಬ ವ್ಯಕ್ತಿಯು ಕಾರ್ಯನಿರ್ವಾಹಕ ಅಧಿಕಾರಿಗೆ ಆ ಬಗ್ಗೆ ಮಾಹಿತಿಯನ್ನು ಕೊಡಲು ಬದ್ಧನಾಗಿರತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ [1][ಕಾರ್ಯನಿರ್ವಾಹಕ ಅಧಿಕಾರಿಯು][1] ಮಾಡಿದ ಆದೇಶದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಪೀಲು ಮಾಡಿಕೊಳ್ಳಲು ಅವಕಾಶವಿರತಕ್ಕದ್ದು.

1. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 12.07.2017ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ X

## ಜಿಲ್ಲಾ ಪಂಚಾಯತಿ

### ಜಿಲ್ಲಾ ಪಂಚಾಯತಿಯ ರಚನೆ

**158. ಜಿಲ್ಲಾ ಪಂಚಾಯತಿಯ ಸ್ಥಾಪನೆ ಮತ್ತು ಅದರ ನಿಗಮನ.-** (1) ಪ್ರತಿಯೊಂದು ಜಿಲ್ಲೆಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಿದ [1][ಚಿಕ್ಕನಗರ ಪ್ರದೇಶದಲ್ಲಿ][1] ಸೇರ್ಪಡೆಯಾದ ಅಥವಾ ಮುನಿಸಿಪಲ್ ಕಾರ್ಪೋರೇಷನ್, [1][ಪಟ್ಟಣ ಪಂಚಾಯತಿ ಅಥವಾ ಕೈಗಾರಿಕಾ ಉಪ ನಗರದ][1] ಪ್ರಾಧಿಕಾರದ ಅಡಿಯಲ್ಲಿ ಇರುವ ಜಿಲ್ಲೆಯ ಅಂಥ ಭಾಗಗಳನ್ನು ಹೊರತುಪಡಿಸಿ ಇಡೀ ಜಿಲ್ಲೆಯ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ಜಿಲ್ಲಾ ಪಂಚಾಯತಿಯನ್ನು ರಚಿಸತಕ್ಕದ್ದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಜಿಲ್ಲಾ ಪಂಚಾಯತಿಯು, ಜಿಲ್ಲೆಯಿಂದ ಹೊರತುಪಡಿಸಿದ ಭಾಗದಲ್ಲಿ ಒಳಗೊಂಡಿರುವ ಯಾವುದೇ ಪ್ರದೇಶದಲ್ಲಿ ತನ್ನ ಕಚೇರಿಯನ್ನು ಹೊಂದಿರಬಹುದು ಮತ್ತು ಅಂಥ ಪ್ರದೇಶದಲ್ಲಿ ಅದರ ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಶಾಲೆಗಳು ಮತ್ತು ಇತರ ಸಂಸ್ಥೆಗಳ ಮೇಲೆ ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸಬಹುದು ಮತ್ತು ನಿರ್ವಹಿಸಬಹುದು.

(2) ಪ್ರತಿಯೊಂದು ಜಿಲ್ಲಾ ಪಂಚಾಯತಿಯು "............ ಜಿಲ್ಲಾ ಪಂಚಾಯತಿ" ಎಂಬ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು. ಅದು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮಿತಿ ಅಥವಾ ಯಾವುದೇ ಇತರ ಅಧಿನಿಯಮಿತಿಯ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಿರುವಂಥ ನಿರ್ಬಂಧಗಳಿಗೆ ಒಳಪಟ್ಟು ತನ್ನ ನಿಗಮಿತ ಹೆಸರಿನಲ್ಲಿ ದಾವೆ ಹೂಡುವ ಅಥವಾ ದಾವೆಗೆ ಗುರಿಯಾಗುವ, ಅದು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಪ್ರದೇಶದ ಪರಿಮಿತಿಗಳೊಳಗೆ ಆಗಲಿ ಅಥವಾ ಹೊರಗೆ ಆಗಲಿ ಚರ ಅಥರಾ ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವರ್ಗಾವಣೆ ಮಾಡುವ, ಕರಾರುಗಳನ್ನು ಮಾಡಿಕೊಳ್ಳುವ ಮತ್ತು ಅದನ್ನು ರಚಿಸಲಾಗಿರುವಂಥ ಉದ್ದೇಶಗಳಿಗೆ ಅವಶ್ಯವಾದ, ಸರಿ ಕಂಡ ಅಥವಾ ವಿಹಿತವಾದ ಎಲ್ಲ ಕಾರ್ಯಗಳನ್ನು ಮಾಡುವ ಸಾಮರ್ಥ್ಯವು ಅದರಲ್ಲಿ ನಿಹಿತವಾಗಿರತಕ್ಕದ್ದು.

**159. ಜಿಲ್ಲಾ ಪಂಚಾತಿಯ ರಚನೆ.-** (1) ಪ್ರತಿಯೊಂದು ಜಿಲ್ಲಾ ಪಂಚಾಯತಿಯು,-

(i) 160ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿರುವಂತೆ ಚುನಾಯಿತ ಸದಸ್ಯರನ್ನು;

(ii) ಲೋಕಸಭೆಯ ಮತ್ತು ರಾಜ್ಯ ವಿಧಾನ ಸಭೆಯ ಯಾವ ಸದಸ್ಯರ ಚುನಾವಣೆ ಕ್ಷೇತ್ರಗಳು ಜಿಲ್ಲೆಯ ವ್ಯಾಪ್ತಿಯೊಳಗೆ ಇರುವುವೋ ಅಂಥ ಜಿಲ್ಲೆಯ ಒಂದು ಭಾಗವನ್ನು ಅಥವಾ ಸಮಗ್ರ ಜಿಲ್ಲೆಯನ್ನು ಪ್ರತಿನಿಧಿಸುವ ಸದಸ್ಯರನ್ನು;

(iii) ಜಿಲ್ಲೆಯ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ರಾಜ್ಯಸಭೆಯ ಸದಸ್ಯರನ್ನು ಮತ್ತು ರಾಜ್ಯ ವಿಧಾನಪರಿಷತ್ತಿನ ಸದಸ್ಯರನ್ನು; ಮತ್ತು

(iv) ಜಿಲ್ಲೆಯ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರನ್ನು

-ಒಳಗೊಂಡಿರತಕ್ಕದ್ದು.

[1][(2) (1)ನೇ ಉಪ-ಪ್ರಕರಣದ (ii), (iii) ಮತ್ತು (iv)ನೇ ಖಂಡಗಳಲ್ಲಿ ಉಲ್ಲೇಖಿಸಲಾದ ಲೋಕಸಭೆಯ, ರಾಜ್ಯ ವಿಧಾನ ಸಭೆಯ ರಾಜ್ಯ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳು ಮತ್ತು ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರುಗಳು, 177ನೇ ಪ್ರಕರಣದ (1)ನೇ ಉಪ-ಪ್ರಕರಣದಡಿ ಅಧ್ಯಕ್ಷರುಗಳನ್ನು ಮತ್ತು ಉಪಾಧ್ಯಕ್ಷರುಗಳನ್ನು ಚುನಾಯಿಸುವ ಅಥವಾ 179ನೇ ಪ್ರಕರಣದ (3)ನೇ ಉಪ-ಪ್ರಕರಣದಡಿ ಅವಿಶ್ವಾಸ ನಿರ್ಣಯವನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಕರೆದ ವಿಶೇಷ ಸಭೆಗಳನ್ನು ಹೊರತುಪಡಿಸಿ, ಜಿಲ್ಲಾ ಪಂಚಾಯತಿಯ ಯಾವುವೇ ಸಭೆಗಳ ವ್ಯವಹರಣೆಗಳಲ್ಲಿ ಭಾಗವಹಿಸಲು ಮತ್ತು ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(3) ಈ ಪ್ರಕರಣದಲ್ಲಿ ಅಥವಾ 160, 161 ಮತ್ತು 162ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಆದರೆ, ಸರಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಯಾವುದೇ ಜಿಲ್ಲಾ ಪಂಚಾಯತಿಯ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಸದಸ್ಯರು ಚುನಾಯಿತರಾಗಬೇಕಾಗಿದ್ದು, ಹಾಗೆ ಚುನಾಯಿತರಾಗಿರುವ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯು ಈ ಅಧಿನಿಯಮದ ಅಡಿಯಲ್ಲಿ ಯಥೋಚಿತವಾಗಿ ರಚಿತವಾಗಿರುವುದಾಗಿ ಭಾವಿಸತಕ್ಕದ್ದು.

[1][**160. ಚುನಾಯಿತ ಸದಸ್ಯರು.**- ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರಲ್ಲಿ ಜಿಲ್ಲೆಯ ತಾಲೂಕುಗಳಿಂದ ಚುನಾಯಿತರಾದ [5][ಇಪ್ಪತ್ತಕ್ಕಿಂತಲೂ ಕಡಿಮೆಯಲ್ಲದಂತೆ][5] ವ್ಯಕ್ತಿಗಳಿರತಕ್ಕದ್ದು, ಪ್ರತಿಯೊಂದು ತಾಲೂಕಿನಿಂದ ಚುನಾಯಿತರಾಗತಕ್ಕ ಸದಸ್ಯರ ಸಂಖ್ಯೆಯನ್ನು [6][ಮೂವತ್ತೈದು ಸಾವಿರ ಮತ್ತು ನಲವತ್ತೈದು ಸಾವಿರದ ಜನಸಂಖ್ಯೆಯ ನಡುವಣ ಪ್ರತಿಯೊಂದು ಜನಸಂಖ್ಯೆಗೆ][6] ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನಂತೆ [2][[3][ಸರ್ಕಾರ][3]ದಿಂದ ನಿಗದಿಪಡಿಸಲಾಗಿದೆ][2]:

[4][ಪರಂತು,

(i) ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆಯ ಪ್ರತೀ ಮೂವತ್ತು ಸಾವಿರಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬರು ಸದಸ್ಯರಿರತಕ್ಕದ್ದು;

(ii) ಬೆಂಗಳೂರು ನಗರ ಜಿಲ್ಲೆಯ ಸಂದರ್ಭದಲ್ಲಿ, ಜನಸಂಖ್ಯೆಯ ಪ್ರತೀ ಇಪ್ಪತ್ತು ಸಾವಿರಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬರ ಸದಸ್ಯರಿರತಕ್ಕದ್ದು;

(iii) ಕೊಡಗು ಜಿಲ್ಲೆಯ ಸಂದರ್ಭದಲ್ಲಿ, ಜನಸಂಖ್ಯೆಯ ಪ್ರತೀ ಹದಿನೆಂಟು ಸಾವಿರಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬರ ಸದಸ್ಯರಿರತಕ್ಕದ್ದು;][1]][4]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
3. 2003ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 03-04-2000ದಿಂದ ಪ್ರತಿಯೋಜಿಸಲಾಗಿದೆ.
4. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಪ್ರತಿಯೋಜಿಸಲಾಗಿದೆ.
5. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.
6. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**161. ಜನಗಣತಿಯ ತರುವಾಯ ಚುನಾಯಿತ ಸದಸ್ಯರುಗಳ ಸಂಖ್ಯೆಯನ್ನು ನಿರ್ಧರಿಸುವುದು.**- ಪ್ರತಿಯೊಂದು ಜನಗಣತಿಯ ಅಂಕಿಅಂಶಗಳನ್ನು ಪ್ರಕಟಿಸಿದ ಮೇಲೆ, ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಆ ಜನಗಣತಿಯಲ್ಲಿ ಖಚಿತವಾದಂತೆ ಜಿಲ್ಲೆಯ ಜನಸಂಖ್ಯೆಯ ಆಧಾರದ ಮೇಲೆ [1][[2][ರಾಜ್ಯ ಚುನಾವಣಾ ಆಯೋಗವು][2] ನಿರ್ಧರಿಸತಕ್ಕದ್ದು][1]:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಹಿಂದೆ ಹೇಳಿದಂತೆ ಜನಸಂಖ್ಯೆಯ ನಿರ್ಧರಣೆಯು, ಆಗ ಅಧಿಕಾರದಲ್ಲಿದ್ದ ಚುನಾಯಿತ ಸದಸ್ಯರ ಹುದ್ದೆಯ ಅವಧಿಯು ಮುಕ್ತಾಯವಾಗುವವರೆಗೆ ಜಿಲ್ಲಾ ಪಂಚಾಯತಿಯ ಆಗಿನ ರಚನೆಯನ್ನು ಬಾಧಿಸತಕ್ಕದ್ದಲ್ಲ.

**162. ಸ್ಥಾನಗಳ ಮೀಸಲಾತಿ.**- (1) ಜಿಲ್ಲಾ ಪಂಚಾಯತಿಯಲ್ಲಿ,-

(ಎ) ಅನುಸೂಚಿತ ಜಾತಿಗಳಿಗಾಗಿ, ಮತ್ತು

(ಬಿ) ಅನುಸೂಚಿತ ಪಂಗಡಗಳಿಗಾಗಿ ಸ್ಥಾನಗಳನ್ನು [1][[2][ರಾಜ್ಯ ಚುನಾವಣಾ ಆಯೋಗವು][2] ಮೀಸಲಿರಿಸತಕ್ಕದ್ದು][1] ಮತ್ತು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಜಿಲ್ಲೆಯಲ್ಲಿರುವ ಅನುಸೂಚಿತ ಜಾತಿಗಳ ಅಥವಾ ಜಿಲ್ಲೆಯಲ್ಲಿರುವ ಅನುಸೂಚಿತ ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿರುವುದೋ, ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು, ಜಿಲ್ಲಾ ಪಂಚಾಯತಿಯಲ್ಲಿ ನೇರ ಚುನಾವಣೆ ಮೂಲಕ ತುಂಬಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

[1][ಪರಂತುಕ x x x][1]

[2][ಪರಂತು, ಪ್ರತಿ ಜಿಲ್ಲಾ ಪಂಚಾಯತಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು.][2]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಬಿಟ್ಟುಬಿಡಲಾಗಿದೆ.
2. 2000ರ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 25-04-2000ರಿಂದ ಸೇರಿಸಲಾಗಿದೆ.

(2) ಜಿಲ್ಲಾ ಪಂಚಾಯತಿಯಲ್ಲಿರುವ ಒಟ್ಟು ಸ್ಥಾನಗಳ ಸಂಖ್ಯೆಯಲ್ಲಿ ಸರಿಸುಮಾರು ಮೂರನೇ ಒಂದರಷ್ಟು ಅಂಥ ಸ್ಥಾನಗಳನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ [1][[2][ರಾಜ್ಯ ಚುನಾವಣಾ ಆಯೋಗವು][2] ಮೀಸಲಿರಿಸತಕ್ಕದ್ದು][1]: [3][ಆದರೆ ಈ ಉಪ ಪ್ರಕರಣದಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ನಿರ್ಧರಿಸಿ ಮೀಸಲಿರಿಸಿದ ಒಟ್ಟು ಸ್ಥಾನಗಳ ಸಂಖ್ಯೆಯು, (1)ನೇ ಉಪ ಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಮತ್ತು ಈ ಉಪ ಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆ ಜಿಲ್ಲಾ ಪಂಚಾಯತಿಯಲ್ಲಿಯ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು, ಮೀರತಕ್ಕದ್ದಲ್ಲ.][3]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.

[1][ಪರಂತು, ಈ ಪ್ರಕರಣದ ಅಡಿಯಲ್ಲಿ ಮೀಸಲಿರಿಸಿದ ಸ್ಥಾನಗಳ ಪೈಕಿ ಅಂಥ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಶೇಕಡ ಎಂಬತ್ತರಷ್ಟು ಸ್ಥಾನಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇಕಡ ಇಪ್ಪತ್ತರಷ್ಟು ಸ್ಥಾನಗಳನ್ನು "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ [2][[3][ರಾಜ್ಯ ಚುನಾವಣಾ ಆಯೋಗವು][3] ಮೀಸಲಿರಿಸತಕ್ಕದ್ದು][2].][1]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಸೇರಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20.10.1997ರಿಂದ ಪ್ರತಿಯೋಜಿಸಲಾಗಿದೆ.
3. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(3) ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ ಮತ್ತು ಹಿಂದುದಳಿದ ವರ್ಗಗಳ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಮತ್ತು ಮೀಸಲಿಟ್ಟಿರದ ಹುದ್ದೆಗಳಲ್ಲಿ, ಮಹಿಳೆಯರಿಗಾಗಿ, [2][ಒಟ್ಟಾರೆಯಾಗಿ ಅರ್ಧದಷ್ಟು ಪರಿಮಿತಿಗೆ ಒಳಪಟ್ಟು ಮುಂದಿನ ಸಂಖ್ಯೆಗೆ ಪೂರ್ಣಾಂಕಗೊಳಿಸಿದಷ್ಟು][2] [1][ಶೇಕಡಾ ಐವತ್ತಕ್ಕಿಂತ][1] ಕಡಿಮೆ ಅಲ್ಲದಷ್ಟು ಹುದ್ದೆಗಳನ್ನು ಮೀಸಲಿಡತಕ್ಕದ್ದು:

ಪರಂತು, (1)ನೇ, (2)ನೇ ಮತ್ತು (3)ನೇ ಉಪಪ್ರಕರಣಗಳ ಅಡಿಯಲ್ಲಿ ಮೀಸಲಿಟ್ಟಿರುವ ಸ್ಥಾನಗಳನ್ನು ಸರದಿಯ ಪ್ರಕಾರ ಜಿಲ್ಲೆಯಲ್ಲಿರುವ ವಿವಿಧ ಚುನಾವಣಾ ಕ್ಷೇತ್ರಗಳಿಗೆ ಹಂಚಿಕೆ ಮಾಡತಕ್ಕದ್ದು [2][ಅಂಥ ಸರದಿಯು ಹತ್ತು ವರ್ಷಗಳ ಅವಧಿಯವರೆಗೆ ಮುಂದುವರೆಯತಕ್ಕದ್ದು][2]:

ಅಷ್ಟೇ ಅಲ್ಲದೆ, ಈ ಪ್ರಕರಣದಲ್ಲಿರುವುದು ಯಾವುದೂ, ಯಾವ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಅಥವಾ ಹಿಂದುಳಿದ ವರ್ಗಗಳ ಸದಸ್ಯರಿಗಾಗಿ ಅಥವಾ ಮಹಿಳೆಯರಿಗಾಗಿ ಜಿಲ್ಲಾ ಪಂಚಾಯತಿಯಲ್ಲಿ ಸ್ಥಾನಗಳನ್ನು ಮೀಸಲಿಡಲಾಗಿದೆಯೋ ಅಂಥ ಮಹಿಳೆಯರು ಅಥವಾ ಸದಸ್ಯರು, ಅಂಥ ಜಿಲ್ಲಾ ಪಂಚಾಯತಿಯಲ್ಲಿ ಮೀಸಲಿರಿಸಿಲ್ಲದ ಯಾವುವೇ ಸ್ಥಾನಗಳಿಗೆ ಚುನಾವಣೆಗೆ ನಿಲ್ಲದಂತೆ ತಡೆಯುಂಟು ಮಾಡುತ್ತದೆಯೆಂದು ಭಾವಿಸತಕ್ಕದ್ದಲ್ಲ.

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

**163. ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ.-** (1) [1][ರಾಜ್ಯ ಚುನಾವಣಾ ಆಯೋಗವು][1], ಅಧಿಸೂಚನೆಯ ಮೂಲಕ,-

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(ಎ) ಅಂಥ ಜಿಲ್ಲಾ ಪಂಚಾಯತಿಗೆ ಚುನಾವಣೆ ನಡೆಸುವ ಉದ್ದೇಶಕ್ಕಾಗಿ ಪ್ರತಿಯೊಂದು ಜಿಲ್ಲಾ ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗಿರುವ ಪ್ರದೇಶವನ್ನು 160ನೇ ಪ್ರಕರಣದಡಿ ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಗನುಗುಣವಾಗಿ ಏಕ ಸದಸ್ಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸತಕ್ಕದ್ದು;

(ಬಿ) ತಾಲ್ಲೂಕು ಅಥವಾ ತಾಲ್ಲೂಕಿನ ಭಾಗವಾಗತಕ್ಕ ಪ್ರತಿಯೊಂದು ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು; ಮತ್ತು

[1][ಪರಂತು, 124ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿದ ಜಿಲ್ಲಾ ಪಂಚಾಯತ್ ಮತ ಕ್ಷೇತ್ರದಲ್ಲಿ ಒಳಗೊಂಡಿರುವ ಪ್ರದೇಶವನ್ನು, ಪ್ರತಿಯೊಂದು ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯನ್ನು ನಿರ್ಧರಿಸುವಾಗ ವಿಭಜನೆ ಮಾಡತಕ್ಕದ್ದಲ್ಲ.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

[1][(ಸಿ) ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮತ್ತು ಮಹಿಳೆಯರಿಗಾಗಿ ಸ್ಥಾನಗಳನ್ನು ಮೀಸಲಿರಿಸಿದಂಥ ಪ್ರಾದೇಶಿಕ ಚುನಾವಣಾ ಕ್ಷೇತ್ರವನ್ನು ಅಥವಾ ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20.10.1997ರಿಂದ ಪ್ರತಿಯೋಜಿಸಲಾಗಿದೆ.

**164. ಮತದಾನದ ಹಕ್ಕು.-** (1) ಒಂದು ಚುನಾವಣಾ ಕ್ಷೇತ್ರಕ್ಕೆ ಸಂಬಂಧಪಟ್ಟ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಯು ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು ಮತದಾರರ ಪಟ್ಟಿ ಜಾರಿಯಲ್ಲಿರುವಾಗ ಆ ಚುನಾವಣಾ ಕ್ಷೇತ್ರದಲ್ಲಿ ನಡೆಯುವಂಥ ಯಾವುದೇ ಚುನಾವಣೆಯಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಮತದಾರರ ಪಟ್ಟಿಯಲ್ಲಿ ಹೆಸರು ಇರದಿರುವ ಯಾವ ವ್ಯಕ್ತಿಯೂ ಅಂಥ ಯಾವುದೇ ಚುನಾವಣೆಯಲ್ಲಿ ಮತ ನೀಡತಕ್ಕದ್ದಲ್ಲ.

(2) ಯಾವನೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿನ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಲ್ಲಿ ಅಥವಾ ಅದೇ ಚುನಾವಣಾ ಕ್ಷೇತ್ರಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮತ ನೀಡತಕ್ಕದ್ದಲ್ಲ ಮತ್ತು ಅವನು ಹಾಗೆ ಮಾಡಿದರೆ, ಅವನ ಎಲ್ಲ ಮತಗಳು ಅಸಿಂಧುವಾಗತಕ್ಕದ್ದು.

[1][(3) ಪಂಚಾಯತಿಯ ಚುನಾವಣೆಯಲ್ಲಿ ಮತನೀಡುವುದು ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅದು ಕಡ್ಡಾಯವಾಗಿರತಕ್ಕದ್ದು. ಆದಾಗ್ಯೂ,

(4)ನೇ ಉಪಪ್ರಕರಣದಲ್ಲಿ ಸೂಚಿಸಿದಂತೆ ಆತನು ತನ್ನ ಮತವನ್ನು ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ಚಲಾಯಿಸಲು ಸ್ವತಂತ್ರನಾಗಿರತಕ್ಕದ್ದು.

(4) ಚುನಾವಣಾ ಆಯುಕ್ತರು ಸೂಕ್ತ ಉಪಬಂಧವನ್ನು ಕಲ್ಪಿಸಿದರೆ, ಆತನು ಯಾವುದೇ ಅಭ್ಯರ್ಥಿಯ ಪರವಾಗಿ ಮತ ನೀಡಲು ಬಯಸದಿದ್ದ ಪಕ್ಷದಲ್ಲಿ, ಅರ್ಹ ಮತದಾರನು ತನ್ನ ಮತವನ್ನು ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ಚಲಾಯಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

**165. ಮತದಾರರ ಪಟ್ಟಿ.-** ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೊಳಪಟ್ಟು [1][ಅಸಿಸ್ಟೆಂಟ್ ಕಮಿಷನರನು ಸಿದ್ಧಪಡಿಸತಕ್ಕದ್ದು][1]:

1. 1999ರ ಅಧಿನಿಯಮ ಸಂಖ್ಯೆ: 21ರ ಮೂಲಕ ದಿನಾಂಕ: ೦4.೦8.1999ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಜಿಲ್ಲಾ ಪಂಚಾಯತಿಯ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ಸೇರಿಸಿರುವಂಥ ಜಿಲ್ಲೆಯ ಅಂಥ ಭಾಗಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಅಂಥ ಚುನಾವಣಾ ಕ್ಷೇತ್ರಕ್ಕಾಗಿ ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳಬಹುದು:

ಅಷ್ಟೇ ಅಲ್ಲದೆ, ಜಿಲ್ಲಾ ಪಂಚಾಯತಿಯ ಅಂಥ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯು, ಅಂಥ ಚುನಾವಣಾ ಕ್ಷೇತ್ರಕ್ಕೆ ಚುನಾವಣೆಗಾಗಿ ನಾಮಪತ್ರ ಸಲ್ಲಿಸುವುದಕ್ಕಾಗಿ ಇರುವ ಕೊನೆಯ ದಿನಾಂಕದ ತರುವಾಯ ಮತ್ತು ಅಂಥ ಚುನಾವಣೆಯು ಮುಕ್ತಾಯವಾಗುವುದಕ್ಕೆ ಮುಂಚೆ ಮಾಡಿದ ಯಾವುದೇ ನಮೂದಿನ ಯಾವುದೇ ತಿದ್ದುಪಡಿ, ಸ್ಥಾನಪಲ್ಲಟ, ಸೇರ್ಪಡೆ ಅಥವಾ ಬಿಟ್ಟು ಬಿಟ್ಟಿರುವುದನ್ನು ಒಳಗೊಂಡಿರತಕ್ಕದ್ದಲ್ಲ.

**166. ಅಭ್ಯರ್ಥಿಯ ಅರ್ಹತೆಗಳು.-** (1) ಒಬ್ಬ ವ್ಯಕ್ತಿಯು, ಜಿಲ್ಲಾ ಪಂಚಾಯತಿಯಲ್ಲಿನ ಒಂದು ಸ್ಥಾನವನ್ನು ತುಂಬಲು ಆಯ್ಕೆಯಾಗಲು ಜಿಲ್ಲೆಯಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ಅವನ ಹೆಸರನ್ನು ಸೇರಿಸಿದ್ದ ಹೊರತು ಅರ್ಹನಾಗತಕ್ಕದ್ದಲ್ಲ.

(2) ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಅಥವಾ ಮಹಿಳೆಯರಿಗಾಗಿ ಮೀಸಲಿರಿಸಿದ ಸ್ಥಾನದ ಸಂಬಂಧದಲ್ಲಿ ಅಂಥ ವ್ಯಕ್ತಿಯು ಆ ಯಾವುವೇ ಜಾತಿಗಳ ಅಥವಾ ಪಂಗಡಗಳ ಅಥವಾ ವರ್ಗಗಳ ವ್ಯಕ್ತಿ ಅಥವಾ ಮಹಿಳೆಯಾಗಿದ್ದ ಹೊರತು ಜಿಲ್ಲಾ ಪಂಚಾಯತಿಯಲ್ಲಿನ ಸ್ಥಾನವನ್ನು ತುಂಬಲು ಪ್ರಾದೇಶಿಕ ಚುನಾವಣಾ ಕ್ಷೇತ್ರದಿಂದ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ.

**167. ಸದಸ್ಯರಾಗಲು ಅನರ್ಹತೆ.-** (1) ಒಬ್ಬ ವ್ಯಕ್ತಿಯು, ಜಿಲ್ಲಾ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು,-

(ಎ) ಅವನು, ರಾಜ್ಯ ವಿಧಾನಮಂಡಲಗಳಿಗಾಗಿ ನಡೆಯುವ ಚುನಾವಣೆ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ಹಾಗೆ ಅನರ್ಹನಾಗಿದ್ದರೆ:

ಪರಂತು, ಯಾವ ವ್ಯಕ್ತಿಯೂ ಅವನು ಇಪ್ಪತ್ತೊಂದು ವರ್ಷಗಳ ವಯಸ್ಸಿನವನಾಗಿದ್ದರೆ ಅವನು ಇಪ್ಪತ್ತೈದು ವರ್ಷಗಳಿಗಿಂತಲೂ ಕಡಿಮೆ ವಯಸ್ಸಿನವನೆಂಬ ಕಾರಣಕ್ಕಾಗಿ ಅನರ್ಹನಾಗತಕ್ಕದ್ದಲ್ಲ;

(ಬಿ) 1965ರ ಕರ್ನಾಟಕ ಅಬಕಾರಿ ಅಧಿನಿಯಮದಡಿಯ (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ಅಪರಾಧದ ಸಂಬಂಧದಲ್ಲಿ ಕ್ರಿಮಿನಲ್ ನ್ಯಾಯಾಲಯವು ಆತನಿಗೆ ಮೂರು ತಿಂಗಳನ್ನು ಮೀರಿದ ಅವಧಿಗೆ ಕಾರಾವಾಸ ಶಿಕ್ಷೆಯನ್ನು ವಿಧಿಸಿದ್ದರೆ ಅಂಥ ಶಿಕ್ಷೆಯನ್ನು ತರುವಾಯ ವ್ಯತಿರಿಕ್ತಗೊಳಿಸಿರದಿದ್ದರೆ, ರದ್ದುಗೊಳಿಸಿರದಿದ್ದರೆ ಅಥವಾ ಅಪರಾಧವನ್ನು ಮನ್ನಿಸಿರದಿದ್ದರೆ; ಅಥವಾ

(ಸಿ) 1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ ಕೇಂದ್ರ ಅಧಿನಿಯಮ 2) 110ನೇ ಪ್ರಕರಣದಡಿ ಹೂಡಿದ ವ್ಯವಹರಣೆಗಳಲ್ಲಿ ಆ ಸಂಹಿತೆಯ 117ನೇ ಪ್ರಕರಣದಡಿ ಆತನ ವಿರುದ್ಧ ಆದೇಶವನ್ನು ಮಾಡಿದ್ದರೆ, ಅಂಥ ಆದೇಶವನ್ನು ವ್ಯತಿರಿಕ್ತಗೊಳಿಸಿರದಿದ್ದರೆ ಅಥವಾ ರದ್ದುಗೊಳಿಸಿರದಿದ್ದರೆ; ಅಥವಾ

(ಡಿ) ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದ ಸೇವೆಯಿಂದ ಆತನನ್ನು ವಜಾ ಮಾಡಿದ್ದರೆ; ಅಥವಾ

(ಇ) ಲೀಗಲ್ ಅಥವಾ ಮೆಡಿಕಲ್ ಪ್ರಾಕ್ಟೀಷನರ್ ಅಥವಾ ಚಾರ್ಟರ್ಡ್ ಅಕೌಂಟೆಂಟ್‌ನಾಗಿದ್ದು ಸಕ್ಷಮ ಪ್ರಾಧಿಕಾರಿಯ ಆದೇಶದ ಮೂಲಕ ಆತನನ್ನು ಪಟ್ಟಿಯಿಂದ ತೆಗೆದುಹಾಕಿದ್ದರೆ ಅಥವಾ ಅಮಾನತ್ತಿನಲ್ಲಿಟ್ಟಿದ್ದರೆ ಎರಡನೆಯ ಸಂದರ್ಭದಲ್ಲಿನ ಅನರ್ಹತೆಯು ಅಂಥ ಅಮಾನತ್ತಿನ ಅವಧಿಯಲ್ಲಿ ಜಾರಿಯಲ್ಲಿದ್ದರೆ; ಅಥವಾ

(ಎಫ್) ಸ್ಥಳೀಯ ಪ್ರಾಧಿಕಾರದ ಸದಸ್ಯತ್ವದಿಂದ ಆತನನ್ನು ತೆಗೆದುಹಾಕಿದ್ದರೆ; ಅಥವಾ

(ಜಿ) ಈ ಅಧಿನಿಯಮದಡಿಯಲ್ಲಿ ರಚಿಸಿರುವ ನಿಯಮಗಳ ಮೂಲಕ ಘೋಷಿಸಿರುವಂಥ ಹುದ್ದೆಗಳ ಧಾರಕನನ್ನು ಅನರ್ಹಗೊಳಿಸಬಾರದೆಂದು ಘೋಷಿಸಿರುವಂಥ ಹುದ್ದೆಗಳನ್ನು ಹೊರತುಪಡಿಸಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರ ಅಥವಾ ಇತರ ಯಾವುದೇ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುವ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದಡಿ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿದ್ದರೆ; ಅಥವಾ

***ವಿವರಣೆ.-*** ಈ ಖಂಡದ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯು, ಆತನು ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಅಧ್ಯಕ್ಷನೆನ್ನುವ ಅಥವಾ ಉಪಾಧ್ಯಕ್ಷನೆನ್ನುವ ಕಾರಣ ಮಾತ್ರದಿಂದಲೇ ಲಾಭದಾಯಕ ಹುದ್ದೆಯನ್ನು ಹೊಂದಿರುವನೆಂದು ಭಾವಿಸತಕ್ಕದ್ದಲ್ಲ.

(ಎಚ್) ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಹೊರತು, ಜಿಲ್ಲಾ ಪಂಚಾಯತಿಯ ಆದೇಶದ ಮೂಲಕ ಮಾಡಿದ ಯಾವುದೇ ಕಾಮಗಾರಿಯಲ್ಲಿ ಅಥವಾ ಜಿಲ್ಲಾ ಪಂಚಾಯತಿಯೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರು ಅಥವಾ ಉದ್ಯೋಗದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ

ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ [1][ಅಥವಾ ಜಿಲ್ಲಾ ಪಂಚಾಯತಿಯ ಪರವಾಗಿ ಯಾವುದೇ ಅಂಥ ಕಾಮಗಾರಿ ಅಥವಾ ಕರಾರನ್ನು ಅಥವಾ ಜಿಲ್ಲಾ ಪಂಚಾಯತಿಗೆ ಯಾವುವೇ ಸರಕುಗಳನ್ನು ಮತ್ತು ಸೇವೆಗಳನ್ನು ಪೂರೈಸುವುದಕ್ಕಾಗಿ ಯಾವುದೇ ಕರಾರನ್ನು ಪಡೆದುಕೊಳ್ಳುವಲ್ಲಿ ಅಥವಾ ನಿರ್ವಹಿಸುವಲ್ಲಿ ಆತನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನಾಗಿಯೇ ಆಗಲಿ ಅಥವಾ ತನ್ನ ಏಜೆಂಟ್ ಅಥವಾ ಪಾಲುದಾರ ಅಥವಾ ನೌಕರನ ಮೂಲಕವಾಗಿಯೇ ಆಗಲಿ ತೊಡಗಿದ್ದರೆ][1]; ಅಥವಾ

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20.10.1997ರಿಂದ ಸೇರಿಸಲಾಗಿದೆ.

(ಐ) ಜಿಲ್ಲಾ ಪಂಚಾಯತಿಯ ಪರವಾಗಿ ವೇತನ ಪಡೆಯುವ ಲೀಗಲ್ ಪ್ರಾಕ್ಟೀಷನರ್ ಆಗಿ ನಿಯೋಜಿತನಾಗಿದ್ದರೆ ಅಥವಾ ಜಿಲ್ಲಾ ಪಂಚಾಯತಿಯ ವಿರುದ್ಧ ಲೀಗಲ್ ಪ್ರಾಕ್ಟೀಷನರ್ ಆಗಿ ಉದ್ಯೋಗವನ್ನು ಅಂಗೀಕರಿಸಿದ್ದರೆ ;ಅಥವಾ

[1][(ಜೆ) ಆತನು ತನ್ನ ಕುಟುಂಬದ ಸದಸ್ಯರುಗಳ ಉಪಯೋಗಕ್ಕಾಗಿ ಶೌಚ ಗೃಹವನ್ನು ಒದಗಿಸಿರದಿದ್ದರೆ:

[2][ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಒಬ್ಬ ವ್ಯಕ್ತಿಯು ತನ್ನ ಉಮೇದುವಾರಿಕೆಯನ್ನು ಸಲ್ಲಿಸುವ ಸಮಯದಲ್ಲಿ ಒಬ್ಬ ಸದಸ್ಯನಾಗಿ ತನ್ನ ಹುದ್ದೆಯ ಅವಧಿಯ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ, ತನ್ನ ಕುಟುಂಬದ ಸದಸ್ಯರ ಉಪಯೋಗಕ್ಕಾಗಿ ಶೌಚ ಗೃಹವನ್ನು ನಿರ್ಮಿಸುವುದಾಗಿ ಒಂದು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದರೆ ಹಾಗೂ ಸದಸ್ಯನಾದ ತರುವಾಯ ಅಂಥ ಮುಚ್ಚಳಿಕೆಯಲ್ಲಿರುವುದನ್ನು ಪಾಲಿಸಿದರೆ, ಅವನಿಗೆ ಅನ್ವಯವಾಗತಕ್ಕದ್ದಲ್ಲ.][2]][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20.10.1997ರಿಂದ ಸೇರಿಸಲಾಗಿದೆ.
2. 2000ರ ಅಧಿನಿಯಮ ಸಂಖ್ಯೆ: 11ರ ಮೂಲಕ ದಿನಾಂಕ: 25-04-2000ದಿಂದ ಪ್ರತಿಯೋಜಿಸಲಾಗಿದೆ.

[1][(ಜೆ-1) ಅವನು 308ಸಿ ಪ್ರಕರಣದ ಅಡಿಯಲ್ಲಿ ಅನರ್ಹನಾಗಿದ್ದರೆ.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ದಿಂದ ಸೇರಿಸಲಾಗಿದೆ.

[1][(ಕೆ)][1] 1987ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮದಡಿ ಆತನನ್ನು ಅನರ್ಹನಾಗಿಸಿದ್ದರೆ,

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20.10.1997ರಿಂದ ಮರು ಸಂಖ್ಯೆ ನೀಡಲಾಗಿದೆ.

-ಅನರ್ಹನಾಗತಕ್ಕದ್ದು:

ಪರಂತು,-

(ಎ) (ಸಿ) ಖಂಡದಲ್ಲಿನ ಅನರ್ಹತೆಯು ಭದ್ರತೆಯನ್ನು ಒದಗಿಸಲು ವ್ಯಕ್ತಿಗೆ ಆದೇಶಿಸಿದಂಥ ಅವಧಿಯು ಮುಕ್ತಾಯವಾದ ತರುವಾಯ ಜಾರಿಯಲ್ಲಿರುವುದು ನಿಂತುಹೋಗುತ್ತದೆ.

(ಬಿ) (ಬಿ), (ಡಿ) ಅಥವಾ (ಇ) ಖಂಡಗಳಲ್ಲಿನ ಅನರ್ಹತೆಯು ಅಂಥ ಶಿಕ್ಷೆಯ, ವಜಾ ಮಾಡಿರುವ, ಪಟ್ಟಿಯಿಂದ ತೆಗೆದುಹಾಕಿರುವ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಜಾರಿಯಲ್ಲಿರುವುದು ನಿಂತುಹೋಗುತ್ತದೆ.

(ಸಿ) (ಎಫ್) ಖಂಡದಲ್ಲಿರುವ ಅನರ್ಹತೆಯು ಹಾಗೆ ತೆಗೆದುಹಾಕಿರುವ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ನಿಂತುಹೋಗುತ್ತದೆ.

[1][(ಸಿಸಿ) (ಜೆ-1) ಖಂಡದಲ್ಲಿಯ ಅನರ್ಹತೆಯು, 308ಸಿ ಪ್ರಕರಣದ ಅಡಿಯಲ್ಲಿ ರಾಜ್ಯ ಚುನಾವಣಾ ಆಯೋಗದ ಆದೇಶದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ದಿಂದ ಸೇರಿಸಲಾಗಿದೆ.

(ಡಿ) (ಎಚ್) ಖಂಡದಲ್ಲಿನ ಅನರ್ಹತೆಗೆ ವ್ಯಕ್ತಿಯು, ಅದನ್ನು,-

(i) ಜಿಲ್ಲಾ ಪಂಚಾಯತಿಯೊಂದಿಗೆ ಕರಾರು ಮಾಡಿಕೊಳ್ಳುವ ಅಥವಾ ಅದರಿಂದ ಅಥವಾ ಅದರ ಪರವಾಗಿ ನಿಯೋಜಿತವಾದ ಯಾವುದೇ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿನ ಷೇರು ಅಥವಾ 1960ರ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದ (ಕರ್ನಾಟಕ ಅಧಿನಿಯಮ 1960ರ 17) ಅಡಿಯಲ್ಲಿ ನೋಂದಾಯಿತವಾದ ಯಾವುದೇ ಸಂಘದಲ್ಲಿ ಅಥವಾ ಯಾವುದೇ ಸಹಕಾರ ಸಂಘದಲ್ಲಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ii) ಜಿಲ್ಲಾ ಪಂಚಾಯತಿಯ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಪ್ರಕಟಿಸಿರುವಂಥ ಯಾವುದೇ ವೃತ್ತಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(iii) ಡಿಬೆಂಚರು ಪತ್ರವನ್ನು ಹೊಂದಿರುವ ಅಥವಾ ಜಿಲ್ಲಾ ಪಂಚಾಯತಿಯು ಅಥವಾ ಅದರ ಪರವಾಗಿ ಎತ್ತಿದ ಯಾವುದೇ ಸಾಲದಲ್ಲಿ ಅನ್ಯಥಾ ಸಂಬಂಧಪಟ್ಟಿರುವ,

-ಕಾರಣದಿಂದಾಗಿಯೇ ಗುರಿಯಾಗಿದ್ದಾನೆಂದು ಭಾವಿಸತಕ್ಕದ್ದಲ್ಲ.

[1][(2)ಜಿಲ್ಲಾ ಪಂಚಾಯತಿಯ ಸದಸ್ಯನಾಗಿ ಆಯ್ಕೆಯಾಗಿರುವ ವ್ಯಕ್ತಿಯು, ಲೋಕಸಭೆಯ, ರಾಜ್ಯಸಭೆಯ, ರಾಜ್ಯ ವಿಧಾನ ಸಭೆಯ ಅಥವಾ ರಾಜ್ಯ ವಿಧಾನ ಪರಿಷತ್ತಿನ ಸದಸ್ಯನಾಗಿದ್ದರೆ ಅಥವಾ ಸದಸ್ಯನಾದರೆ ಅಥವಾ ಮುನಿಸಿಪಲ್ ಕೌನ್ಸಿಲರ್ ಅಥವಾ ಮುನಿಸಿಪಲ್ ಕಾರ್ಪೋರೇಷನ್ನಿನ ಅಥವಾ ಪಟ್ಟಣ ಪಂಚಾಯತಿಯ ಕೌನ್ಸಿಲರನಾಗಿದ್ದರೆ ಅಥವಾ ಕೌನ್ಸಿಲರನಾದರೆ ಅಥವಾ ತಾಲ್ಲೂಕು ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದರೆ ಅಥವಾ ಸದಸ್ಯನಾದರೆ, 172ನೇ ಪ್ರಕರಣದ ಅಡಿಯಲ್ಲಿ ಸದಸ್ಯರುಗಳ ಹೆಸರುಗಳನ್ನು ಅಧಿಸೂಚಿಸಿದ ದಿನಾಂಕದಿಂದ ಹದಿನೈದು ದಿನಗಳ ಅವಧಿಯು ಮುಕ್ತಾಯಗೊಂಡಾಗ ಅಥವಾ ಸಂದರ್ಭಾನುಸಾರ, ಲೋಕಸಭೆಯ, ರಾಜ್ಯ ಸಭೆಯ, ರಾಜ್ಯ ವಿಧಾನ ಸಭೆಯ ಅಥವಾ ರಾಜ್ಯ ವಿಧಾನ ಪರಿಷತ್ತಿನ ಸದಸ್ಯ ಅಥವಾ ಮುನ್ಸಿಪಲ್ ಕೌನ್ಸಿಲರ್ ಅಥವಾ ಮುನ್ಸಿಪಲ್ ಕಾರ್ಪೋರೇಷನ್ನಿನ ಕೌನ್ಸಿಲರ್, ಪಟ್ಟಣ ಪಂಚಾಯತಿಯ ಕೌನ್ಸಿಲರ್ ಅಥವಾ ತಾಲೂಕು ಪಂಚಾಯತಿಯ ಅಥವಾ

ಗ್ರಾಮ ಪಂಚಾಯತಿಯ ಸದಸ್ಯನ ಹುದ್ದೆಯ ಅವಧಿಯು ಪ್ರಾರಂಭವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅವನು ಸಂದರ್ಭಾನುಸಾರ ಲೋಕಸಭೆಯ, ರಾಜ್ಯ ಸಭೆಯ, ರಾಜ್ಯವಿಧಾನ ಸಭೆಯ, ರಾಜ್ಯ ವಿಧಾನ ಪರಿಷತ್ತಿನ, ಮುನ್ಸಿಪಲ್ ಕೌನ್ಸಿಲಿನ, ಮುನ್ಸಿಪಲ್ ಕಾರ್ಪೊರೇಷನ್ನಿನ, ಪಟ್ಟಣ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ತನ್ನ ಸ್ಥಾನಕ್ಕೆ ಮೊದಲೇ ರಾಜೀನಾಮೆ ಸಲ್ಲಿಸಿರದಿದ್ದರೆ ಜಿಲ್ಲಾ ಪಂಚಾಯತಿಯಲ್ಲಿ ಅವನ ಸ್ಥಾನವು ಖಾಲಿಯಾಗತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦.1೦.1997ರಿಂದ ಪ್ರತಿಯೋಜಿಸಲಾಗಿದೆ.

**168. ಸ್ಥಾನವು ಖಾಲಿಯಾಗಿರುವುದು.-** (1) ಜಿಲ್ಲಾ ಪಂಚಾಯತಿಯ ಯಾವನೇ ಸದಸ್ಯನು,-

(ಎ) 167ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅನರ್ಹತೆಗೆ ಒಳಪಟ್ಟಿದ್ದರೆ ಅಥವಾ ಒಳಪಡುವುದಾದರೆ; ಅಥವಾ

(ಬಿ) 167ನೇ ಪ್ರಕರಣದ (1)ನೇ ಉಪ ಪ್ರಕರಣದ ಪರಂತುಕದ (ಡಿ) ಖಂಡದ (i)ನೇ ಅಥವಾ (ii)ನೇ ಉಪಖಂಡದಲ್ಲಿ ವಿವರಿಸಿದಂತೆ ಅಂಥ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವನು ಹೊಂದಿರುವಂಥ ಯಾವುದೇ ವಿಷಯದ ಚರ್ಚೆಯಲ್ಲಿ ಸದಸ್ಯನಾಗಿ ಮತನೀಡಿದರೆ ಅಥವಾ ಭಾಗವಹಿಸಿದರೆ; ಅಥವಾ

(ಸಿ) 18೦ನೇ ಪ್ರಕರಣದ (2)ನೇ ಉಪ ಪ್ರಕರಣದ (ಜೆ) ಖಂಡದ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ವಿಷಯದ ಚರ್ಚೆಯಲ್ಲಿ ಮತ ನೀಡಿದರೆ ಅಥವಾ ಭಾಗವಹಿಸಿದರೆ; ಅಥವಾ

[2][XXX][2]

-ಅವನ ಸ್ಥಾನವು ಸಂದರ್ಭಾನುಸಾರ ಖಾಲಿಯಾಗಿದೆಯೆಂದು ಅಥವಾ ಖಾಲಿಯಾಗಿರುವುದಾಗಿ ಭಾವಿಸತಕ್ಕದ್ದು:

[2][XXX][2]

(2) [1][ರಾಜ್ಯ ಚುನಾವಣಾ ಆಯೋಗವು][1], ತನಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಸಂಬಂಧಪಟ್ಟ ವ್ಯಕ್ತಿಯ ಸ್ಥಾನವು ಖಾಲಿಯಾಗಿದೆಯೇ ಅಥವಾ ಖಾಲಿಯಾಗಿರುವುದೇ ಎಂಬ ಬಗ್ಗೆ ಘೋಷಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦.1೦.1997ರಿಂದ ಪ್ರತಿಯೋಜಿಸಲಾಗಿದೆ.
2. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ 12.07.2017ರಿಂದ ಬಿಟ್ಟುಬಿಡಲಾಗಿದೆ.

**169. ಮತ ನೀಡುವ ವಿಧಾನ ಮತ್ತು ಚುನಾವಣಾ ಕಾರ್ಯ ವಿಧಾನ.-** (1) ಪ್ರತಿಯೊಬ್ಬ ಮತದಾರನು, ಎಷ್ಟು ಸದಸ್ಯರು ಚುನಾಯಿತರಾಗಬೇಕಾಗಿದೆಯೋ ಅಷ್ಟು ಮತಗಳನ್ನು ಹೊಂದಿರತಕ್ಕದ್ದು. ಯಾವನೇ ಮತದಾರನು ಯಾವನೇ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತಗಳನ್ನು ಕೊಡತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಜಿಲ್ಲಾ ಪಂಚಾಯತಿಗೆ ಚುನಾವಣೆಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರವಾಗಿ ಮತದಾನದ ಮೂಲಕ ನಡೆಸತಕ್ಕದ್ದು.

[1][(2ಎ)ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಏನೇ ಇದ್ದರೂ, ನಿಯಮಿಸಬಹುದಾದಂಥ ವಿಧಾನದಲ್ಲಿ, ಮತದಾನ ಯಂತ್ರಗಳ ಮೂಲಕ, ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಮತಗಳನ್ನು ನೀಡುವುದನ್ನು ಮತ್ತು ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಪರಿಸ್ಥಿತಿಗನುಸಾರವಾಗಿ ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ, "ಮತದಾನ ಯಂತ್ರ" ಎಂದರೆ, ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸಲಾಗುವ, ವಿದ್ಯುನ್ಮಾನ ವಿಧಾನದ ಮೂಲಕವಾಗಲಿ ಅಥವಾ ಅನ್ಯಥಾ, ಕಾರ್ಯ ನಿರ್ವಹಿಸುವ, ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರಕ್ಕೆ ಸಂಬಂಧಿಸಿದ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರಗಳನ್ನು ಬಳಸಿರುವಲ್ಲೆಲ್ಲಾ ಅಂಥ ಮತಯಂತ್ರಕ್ಕೆ ಸಂಬಂಧಿಸಿದ ಉಲ್ಲೇಖವನ್ನು ಒಳಗೊಳ್ಳುತ್ತದೆಂಬುದಾಗಿ ಅರ್ಥೈಸಲಾಗುವುದು.][1]

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಸೇರಿಸಲಾಗಿದೆ.

(3) 26, 27, 28, 29, 3೦, 31, [1][31ಎ, 31ಬಿ][1], 32, 33, 34, 35, 36, 37, 38, 39, ಮತ್ತು 4೦ನೇ ಪ್ರಕರಣಗಳ ಉಪಬಂಧಗಳು ಗ್ರಾಮ ಪಂಚಾಯತಿಗಳ ಚುನಾವಣೆಗಳಿಗೆ ಅನ್ವಯವಾಗುವಂತೆಯೇ ಜಿಲ್ಲಾ ಪಂಚಾಯತಿಯ ಚುನಾವಣೆಗಳಿಗೆ ಸಂಬಂಧಿಸಿದಂತೆಯೂ ಅನ್ವಯವಾಗತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦.1೦.1997ರಿಂದ ಸೇರಿಸಲಾಗಿದೆ.

**170. ಏಕಕಾಲದ ಸದಸ್ಯತ್ವದ ನಿಷೇಧ.-** (1) ಒಬ್ಬ ವ್ಯಕ್ತಿಯು, ಜಿಲ್ಲಾ ಪಂಚಾಯತಿಯ ಒಂದಕ್ಕಿಂತ ಹೆಚ್ಚಿನ ಚುನಾವಣಾ ಕ್ಷೇತ್ರದಿಂದ ಚುನಾಯಿತನಾದರೆ ತಾನು ಸಹಿ ಹಾಕಿರುವ ಲಿಖಿತ ನೋಟೀಸನ್ನು ಡೆಪ್ಯುಟಿ ಕಮಿಷನರಿಗೆ ಅಥವಾ ಸರ್ಕಾರವು ಅಧಿಕಾರ ನೀಡಿರುವ ಯಾರೇ ಇತರ ಅಧಿಕಾರಿಗೆ ನಿರ್ದಿಷ್ಟಪಡಿಸಿರುವ ಕಾಲದೊಳಗೆ ರವಾನಿಸಿ ತಾನು ಸೇವೆ ಸಲ್ಲಿಸತಕ್ಕಂಥ ಯಾವುದೇ ಒಂದು ಚುನಾವಣಾ ಕ್ಷೇತ್ರವನ್ನು ಅವನು ಆಯ್ಕೆ ಮಾಡತಕ್ಕದ್ದು ಮತ್ತು ಆ ಆಯ್ಕೆಯು ಅಂತಿಮವಾದುದಾಗಿರತಕ್ಕದ್ದು.

(2) ವ್ಯಕ್ತಿಯು (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿರುವ ಆಯ್ಕೆಯನ್ನು ಮಾಡದಿದ್ದರೆ, ಡೆಪ್ಯುಟಿ ಕಮಿಷನರ್ ಅವರು ಅಥವಾ ಅಧಿಕೃತ ಅಧಿಕಾರಿಯು ಚೀಟಿ ಎತ್ತುವ ಮೂಲಕ ಅದನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಸೇವೆ ಸಲ್ಲಿಸತಕ್ಕಂಥ ಚುನಾವಣಾ ಕ್ಷೇತ್ರವನ್ನು ಅಧಿಸೂಚಿಸತಕ್ಕದ್ದು.

(3) ಅಂಥ ವ್ಯಕ್ತಿಯು ಸಂದರ್ಭಾನುಸಾರ ಹಾಗೆ ಆಯ್ಕೆ ಮಾಡಿದ ಅಥವಾ ಅಧಿಸೂಚಿಸಿದ ಚುನಾವಣಾ ಕ್ಷೇತ್ರಕ್ಕಾಗಿ ಮಾತ್ರ ಚುನಾಯಿತನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಇತರ ಚುನಾವಣಾ ಕ್ಷೇತ್ರಕ್ಕೆ ಅಥವಾ

ಚುನಾವಣಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಆ ರೀತಿ ಉದ್ಭವಿಸುವ ಖಾಲಿ ಸ್ಥಾನವನ್ನು ಅಥವಾ ಖಾಲಿ ಸ್ಥಾನಗಳನ್ನು ಚುನಾವಣೆಯ ಮೂಲಕ ಭರ್ತಿ ಮಾಡತಕ್ಕದ್ದು.

**171. ಚುನಾವಣೆಗಳಿಗೆ ಸಂಬಂಧಪಟ್ಟಂತೆ ಕೆಲವು ಪ್ರಕರಣಗಳ ಅನ್ವಯ.**- (1) 15, 16, 17, 18, 19 2೦, 21, 22, 23, ಮತ್ತು 24ನೇ ಪ್ರಕರಣಗಳ ಉಪಬಂಧಗಳು ಜಿಲ್ಲಾ ಪಂಚಾಯತಿಗೆ ಚುನಾವಣೆಗೆ ಸಂಬಂಧಿಸಿದಂತೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು. ಅರ್ಜಿಯನ್ನು ಅಧಿಕಾರ ವ್ಯಾಪ್ತಿಯುಳ್ಳ [2][[1][ಗೊತ್ತುಪಡಿಸಲಾದ ನ್ಯಾಯಾಲಯಕ್ಕೆ][1]][2] ಸಲ್ಲಿಸತಕ್ಕದ್ದು ಮತ್ತು ಖರ್ಚುಗಳಿಗಾಗಿ ಭದ್ರತೆಯಾಗಿ ಠೇವಣಿಯು ಎರಡು ಸಾವಿರ ರೂಪಾಯಿಗಳಾಗಿರತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ, [2][[1][ಗೊತ್ತುಪಡಿಸಲಾದ ನ್ಯಾಯಾಲಯಕ್ಕೆ][1]][2] ಯಾವುದೇ ತೀರ್ಮಾನದಿಂದ ಅಥವಾ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಂಥ ತೀರ್ಮಾನದ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಜಿಲ್ಲಾ ನ್ಯಾಯಾಧೀಶನಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನ ಮೇಲೆ ಜಿಲ್ಲಾ ನ್ಯಾಯಾಧೀಶನ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦.1೦.1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**172. ಸದಸ್ಯರ ಹೆಸರುಗಳ ಪ್ರಕಟಣೆ.**- ಯಾವುದೇ ಜಿಲ್ಲಾ ಪಂಚಾಯತಿಗೆ ಚುನಾಯಿತರಾದ ಸದಸ್ಯರ ಹೆಸರುಗಳನ್ನು [1][ಸರ್ಕಾರಕ್ಕೆ ವರದಿ ಮಾಡತಕ್ಕದ್ದು. ಸರ್ಕಾರವು ಆ ಹೆಸರುಗಳನ್ನು][1] ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸತಕ್ಕದ್ದು.

1. 2೦೦೦ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: ೦3-೦4-2೦೦೦ರಿಂದ ಪ್ರತಿಯೋಜಿಸಲಾಗಿದೆ.

**173. ಸದಸ್ಯರ ಹುದ್ದೆಯ ಅವಧಿ.**- (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಜಿಲ್ಲಾ ಪಂಚಾಯತಿಯ ಸದಸ್ಯರು ಐದು ವರ್ಷಗಳ ಅವಧಿಯವರೆಗೆ ಹುದ್ದೆಯ ಧಾರಣ ಮಾಡತಕ್ಕದ್ದು.

(2) ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರುಗಳ ಹುದ್ದೆಯ ಅವಧಿಯು ಜಿಲ್ಲಾ ಪಂಚಾಯತಿಯ ಪ್ರಥಮ ಸಭೆಗೆ ನಿಗದಿಪಡಿಸಿದ ದಿನಾಂಕದಿಂದ ಪ್ರಾರಂಭವಾಗತಕ್ಕದ್ದು.

(3) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬಲು ಚುನಾಯಿತನಾದ ಸದಸ್ಯನ ಹುದ್ದೆಯ ಅವಧಿಯು 172ನೇ ಪ್ರಕರಣದಡಿ ಆತನ ಹೆಸರನ್ನು ಪ್ರಕಟಿಸಿದ ದಿನಾಂಕದಂದು ಪ್ರಾರಂಭವಾಗತಕ್ಕದ್ದು.

**174. ಸದಸ್ಯರ ರಾಜೀನಾಮೆ.**- ಜಿಲ್ಲಾ ಪಂಚಾಯತಿಯ ಸದಸ್ಯನು, ತನ್ನ ಸದಸ್ಯತ್ವಕ್ಕೆ ತನ್ನ ಸಹಿ ಸಹಿತ ಜಿಲ್ಲಾ ಪಂಚಾಯತಿಯ ಅಧ್ಯಕ್ಷನಿಗೆ ಬರಹದಲ್ಲಿ ಬರೆದು ರಾಜೀನಾಮೆ ಕೊಡಬಹುದು. ಮತ್ತು ಅವನ ಸ್ಥಾನವು ಅಂಥ ರಾಜೀನಾಮೆಯ ದಿನಾಂಕದಿಂದ ಹದಿನೈದು ಪೂರ್ಣ ದಿವಸಗಳು ಮುಕ್ತಾಯವಾದ ಮೇಲೆ ಸದರಿ ಹದಿನೈದು ದಿವಸಗಳ ಅವಧಿಯೊಳಗೆ ಅಧ್ಯಕ್ಷನಿಗೆ ಬರಹದಲ್ಲಿ ಬರೆದು ಅಂಥ ರಾಜೀನಾಮೆಯನ್ನು ಅವನು ಹಿಂತೆಗೆದುಕೊಂಡ ಹೊರತು, ತೆರವಾಗತಕ್ಕದ್ದು. [1][ಅಧ್ಯಕ್ಷನು ರಾಜೀನಾಮೆ ಪತ್ರವನ್ನು ಜಿಲ್ಲಾ ಪಂಚಾಯತಿಯ ಮುಂದಿನ ಸಭೆಯಲ್ಲಿ ಮಂಡಿಸುವಂತೆ ಮಾಡತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 2೦.1೦.1997ರಿಂದ ಸೇರಿಸಲಾಗಿದೆ.

[1][**175. ಸದಸ್ಯರನ್ನು ತೆಗೆದುಹಾಕುವುದು.**- (1) ಸರ್ಕಾರವು, ಅದು ಯುಕ್ತವೆಂದು ಭಾವಿಸಿದಲ್ಲಿ ಜಿಲ್ಲಾಪಂಚಾಯತ್‍ನ ಶಿಫಾರಸ್ಸಿನಂತೆ ಯಾವೊಬ್ಬ ಸದಸ್ಯನನ್ನು,-

(i) ಆತನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ದುರ್ನಡತೆಯ ಅಥವಾ ತಲೆ ತಗ್ಗಿಸುವಂಥ ನಡತೆಯ ತಪ್ಪಿತಸ್ಥನಾಗಿದ್ದಾನೆಂದು,

(ii) (ಎ) ಜಿಲ್ಲಾ ವೈದ್ಯಾಧಿಕಾರಿಯು ಪ್ರಮಾಣೀಕರಿಸಬಹುದಾದಂತೆ ಆ ಹುದ್ದೆಯನ್ನು ಹೊಂದಲು ವೈದ್ಯಕೀಯವಾಗಿ ಅಸಮರ್ಥನಾದ ಸಂದರ್ಭದಲ್ಲಿ,

(ಬಿ) ದಿವಾಳಿ ಅಥವಾ ಅಸ್ವಸ್ಥಚಿತ್ತವನಾದ ಸಂದರ್ಭದಲ್ಲಿ,

- ಸದಸ್ಯರಾಗಿ ತಮ್ಮ ಕರ್ತವ್ಯ ನಿರ್ವಹಿಸಲು ಅಸಮರ್ಥರಾಗಿರುವರೆಂದು ಅಥವಾ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಅಸಡ್ಡೆ ಉಳ್ಳವರಾಗಿದ್ದಾರೆಂದು;

(iii) ಅವನು ಪಂಚಾಯತ್‍ನ ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳಿಗೆ ಹಾಜರಾಗಲು ತಪ್ಪಿದ್ದರೆ, ಮತ್ತು ಅಧ್ಯಕ್ಷನಾಗಲಿ ಅಥವಾ ಉಪಾಧ್ಯಕ್ಷನಾಗಲಿ ಸಭೆಯನ್ನು ಕರೆಯಬೇಕಾಗಿದ್ದಾಗ ಅಥವಾ ಅಗತ್ಯವಾಗಿದ್ದಾಗ ಒಂದಾದ ಮೇಲೊಂದರಂತೆ ನಡೆಯಬೇಕಾದ ಎರಡು ಸಭೆಗಳನ್ನು ಕರೆಯಲು ತಪ್ಪಿದ್ದಾನೆಂದು; ಅಥವಾ

(iv) ಚುನಾವಣೆ ಸಂದರ್ಭದಲ್ಲಿ ಪರಿಗಣನೆಗಾಗಿ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿಯ ಸದಸ್ಯ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಹುದ್ದೆಯ ಮಾರಾಟಕ್ಕೆ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿಯ ಯಾವುದೇ ಮತದಾರ ಅಥವಾ ಸದಸ್ಯನನ್ನು ಸೆಳೆಯುವುದು ಅಥವಾ ದಬ್ಬಾಳಿಕೆ ಅಥವಾ ವಂಚನೆ ಮಾಡಿದ್ದಾನೆಂದು;

(v) ಪಂಚಾಯತ್‍ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ, ಕರಾರು ಸಂಬಂಧದ ಅಥವಾ ಕಾಮಗಾರಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಯಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ತೊಡಗಿರುವುದು ಕಂಡುಬಂದರೆ ಅಥವಾ ಪಾಲುದಾರನಂತೆ, ನೌಕರನಂತೆ ಅಥವಾ ಅಂಥ ಅನ್ಯಥಾ ಸಂಘಸಂಸ್ಥೆ ಮಂಡಲಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು,

– ಕಂಡು ಬಂದರೆ, ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದುಹಾಕಬಹುದು.

**ವಿವರಣೆ:**– ಈ ಪ್ರಕರಣದ ಉದ್ದೇಶಕ್ಕಾಗಿ, ಕುಟುಂಬದ ಹತ್ತಿರದ ಬಂಧುಗಳು ಎಂದರೆ:–

(ಎ) ಆಕೆಯ ಅಥವಾ ಆತನೊಂದಿಗೆ ವಾಸವಾಗಿರುವ ವ್ಯಕ್ತಿಯ ಪತ್ನಿ ಅಥವಾ ಪತಿ;

(ಬಿ) ಮಗ ಅಥವಾ ಮಗಳು ಅಥವಾ ಮಲಮಗ ಅಥವಾ ಮಲಮಗಳು,

(ಸಿ) ಅಂಥ ವ್ಯಕ್ತಿಯ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿರುವ, ರಕ್ತಸಂಬಂಧವಾಗಿರಲಿ ಅಥವಾ ವಿವಾಹದಿಂದಾಗಲಿ, ಸಂಬಂಧಿಸಿದ ಯಾವೊಬ್ಬ ಇತರ ವ್ಯಕ್ತಿ.

(2)ಯಾವ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಅಥವಾ ಸದಸ್ಯನನ್ನು ಹಾಗೆ ತೆಗೆದು ಹಾಕಲಾಗಿದೆಯೋ ಆ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅಥವಾ ಸದಸ್ಯನು, ಸದಸ್ಯನಾಗಿ ಅಂಥ ಸ್ಥಾನದ ಪ್ರಕಾರ್ಯಗಳನ್ನು ನಿರ್ವಹಿಸುವುದು ನಿಂತು ಹೋಗತಕ್ಕದ್ದು ಮತ್ತು ಅಧಿನಿಯಮದ 12ನೇ, 124ನೇ ಮತ್ತು 167ನೇ ಪ್ರಕರಣದಲ್ಲಿ ಹೇಳಿರುವಂತೆ ಯಾವುದೇ ಪಂಚಾಯತ್‌ಗೆ ಮುಂದಿನ ಐದು ವರ್ಷಗಳವರೆಗೆ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**175ಎ. ಸದಸ್ಯರಿಂದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆ:** (1) ಪ್ರತಿಯೊಬ್ಬ ಸದಸ್ಯನು, ತನ್ನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳ ಒಳಗೆ ಮತ್ತು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಅವನ ಅಧಿಕಾರಾವಧಿ ಮುಗಿಯುವ ತನಕ ಮತ್ತು ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ ಒಂದು ತಿಂಗಳ ಒಳಗೆ ತಾನು ಮತ್ತು ತನ್ನ ಅವಿಭಕ್ತ ಕುಟುಂಬದ ಎಲ್ಲ ಸದಸ್ಯರು ಎರಡು ಲಕ್ಷಕ್ಕಿಂತ ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯನ್ನು ಮತ್ತು ಹೊಣೆಗಾರಿಕೆಯನ್ನು ಹೊಂದಿರುವುದರ ಬಗ್ಗೆ ರಾಜ್ಯ ಚುನಾವಣಾ ಆಯೋಗದ ಮುಂದೆ ಘೋಷಣೆಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಂಬಂಧಪಟ್ಟ ಜಿಲ್ಲಾಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯ ಮೂಲಕ ದಾಖಲು ಮಾಡತಕ್ಕದ್ದು:

ಪರಂತು, ಹಣಕಾಸು ವರ್ಷ ಮುಕ್ತಾಯವಾಗುವ ಎರಡು ತಿಂಗಳಿಗಿಂತ ಮೊದಲು ಅಂಥ ಸದಸ್ಯನ ಪದಾವಧಿಯು ಪ್ರಾರಂಭವಾದರೆ, ಅಂಥ ಸದಸ್ಯನು ಮುಂದಿನ ಹಣಕಾಸು ವರ್ಷ ಪ್ರಾರಂಭವಾದ ನಂತರ ಎರಡು ತಿಂಗಳೊಳಗೆ ತನ್ನ ಘೋಷಣೆಯನ್ನು ದಾಖಲು ಮಾಡತಕ್ಕದ್ದು.

(2) ಆಯಾ ಜಿಲ್ಲಾಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯು, ಎಲ್ಲ ಸದಸ್ಯರು ದಾಖಲು ಮಾಡಿದ ಘೋಷಣೆಯನ್ನು ಸ್ವೀಕರಿಸತಕ್ಕದ್ದು ಮತ್ತು ಆ ವರ್ಷದ ಮೇ ಮೊದಲ ವಾರದಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದು ಮತ್ತು ತಡವಾಗಿ ಸಲ್ಲಿಸಿದ ಸಂದರ್ಭದಲ್ಲಿ, ವರ್ಷದ ಜುಲೈ ಮೊದಲನೆ ವಾರದಲ್ಲಿ ಘೋಷಣೆಯನ್ನು, ದಾಖಲು ಮಾಡಿದ ಸದಸ್ಯರ ಪಟ್ಟಿಯನ್ನು ಮತ್ತು ಘೋಷಣೆಯನ್ನು ಮಾಡದೆ ಇರುವಂಥ ಸದಸ್ಯರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ದಾಖಲು ಮಾಡಿರುವಂಥ ಸದಸ್ಯನು, ಆನಂತರ ಯಾವುದೇ ಸ್ವತ್ತನ್ನು ಅಥವಾ ಇತರ ಆಸ್ತಿಯನ್ನು ಆರ್ಜಿಸಿದರೆ ಅಥವಾ ವಿಲೆ ಮಾಡಿದರೆ, ಸಂದರ್ಭಾನುಸಾರವಾಗಿ ಹಾಗೆ ಸ್ವಾಧೀನಪಡಿಸಿಕೊಂಡ ಅಥವಾ ವಿಲೆ ಮಾಡಿದ ದಿನಾಂಕದಿಂದ ನಲವತ್ತೈದು ದಿವಸಗಳ ಒಳಗಾಗಿ ಆ ಬಗ್ಗೆ ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಾಹಣಾಧಿಕಾಯ ಮೂಲಕ ರಾಜ್ಯ ಚುನಾವಣಾ ಆಯೋಗದ ಮುಂದೆ ಮತ್ತೆ ಘೋಷಣೆಯನ್ನು ದಾಖಲು ಮಾಡತಕ್ಕದ್ದು ಮತ್ತು ಮುಖ್ಯಕಾರ್ಯನಿರ್ವಾಹಣಾಧಿಕಾಯು (1)ನೇ ಉಪಪ್ರಕರಣದಲ್ಲಿ ಹೇಳಿರುವ ಅದೇ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

**175ಬಿ. ಸದಸ್ಯತ್ವವು ನಿಂತುಹೋಗುವುದು.**– (1) ಸದಸ್ಯನು 175ಎ ಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ದಾಖಲು ಮಾಡದಿದ್ದರೆ ಅಥವಾ ಸುಳ್ಳು ಘೋಷಣೆಯನ್ನು ದಾಖಲ್ಮಾಡಿದ್ದಾನೆಂಬುದು ಕಂಡುಬಂದರೆ, ಆತನನ್ನು ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ರಾಜ್ಯ ಚುನಾವಣಾ ಆಯುಕ್ತರು, ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಅವಕಾಶವನ್ನು ನೀಡಿದ ನಂತರ, ಅವನನ್ನು ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು ಮತ್ತು ಸಂದರ್ಭಾನುಸಾರ ಅವನ ಸ್ಥಾನವು ಖಾಲಿಯಾಗಿದೆ ಎಂದು ಘೋಷಿಸತಕ್ಕದ್ದು.

(2) ಸದಸ್ಯನು ಮಾನ್ಯತೆ ಪಡೆದ ರಾಜಕೀಯ ಪಕ್ಷದ ಪ್ರತಿನಿಧಿಯಾಗಿದ್ದು ಆತನ ಪಕ್ಷವು ನೀಡಿದ ವಿಪ್ ನೋಟೀಸನ್ನು ಪಡೆಯುವುದನ್ನು ತಪ್ಪಿಸಿಕೊಂಡಲ್ಲಿ ಅಥವಾ ಯಾವುದೇ ಸಭೆಯಲ್ಲಿ, ಆತನ ಪಕ್ಷವು ನೀಡಿದ ವಿಪ್‌ಗೆ ಅನುಸಾರವಾಗಿ ಮತದಾನ ಮಾಡಲು ನಿರಾಕರಿಸಿದಲ್ಲಿ ಅಥವಾ ವಿಪ್‌ನ್ನು ಉಲ್ಲಂಘನೆ ಮಾಡಿ, ಮತದಾನ ಮಾಡಿದಲ್ಲಿ, ರಾಜ್ಯ ಚುನಾವಣಾ ಆಯೋಗವು ಆತನನ್ನು ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು ಮತ್ತು ಆತನ ಸ್ಥಾನವು ಖಾಲಿಯಾಗಿದೆ ಎಂದು ಘೋಷಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**176. ಆಕಸ್ಮಿಕ ಖಾಲಿ ಸ್ಥಾನ.**– ಜಿಲ್ಲಾ ಪಂಚಾಯತಿಯ ಸದಸ್ಯನ ಆಕಸ್ಮಿಕ ಖಾಲಿ ಸ್ಥಾನವನ್ನು ವ್ಯಕ್ತಿಯೊಬ್ಬನನ್ನು ಚುನಾಯಿಸುವುದರ ಮೂಲಕ ಸಾಧ್ಯವಾದಷ್ಟು ಬೇಗನೆ ತುಂಬತಕ್ಕದ್ದು. ಅವನು ಯಾರ ಸ್ಥಾನದಲ್ಲಿ ಚುನಾಯಿತನಾಗಿರುವನೋ ಆ ಸ್ಥಾನವು ತೆರವಾಗದೇ ಇದ್ದಿದ್ದರೆ ಆ ಸದಸ್ಯನು ಎಲ್ಲಿಯವರೆಗೆ ಹುದ್ದೆಯನ್ನು ಧಾರಣ ಮಾಡುತ್ತಿದ್ದನೋ ಆ ಅವಧಿಯವರೆಗೆ ಮಾತ್ರ ಹುದ್ದೆಯನ್ನು ಧಾರಣ ಮಾಡತಕ್ಕದ್ದು.

**177. ಅಧ್ಯಕ್ಷ, ಉಪಾಧ್ಯಕ್ಷನ ಚುನಾವಣೆ ಮತ್ತು ಹುದ್ದೆಯ ಅವಧಿ.**– (1) 159ನೇ ಪ್ರಕರಣದ (1)ನೇ ಉಪ ಪ್ರಕರಣದ (i)ನೇ ಖಂಡದಲ್ಲಿ ಉಲ್ಲೇಖಿಸಿರುವ ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರು [1][ಜಿಲ್ಲಾ ಪಂಚಾಯತಿಯ ಸದಸ್ಯರುಗಳನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದನ್ನು ಪುನರ್‌ರಚಿಸಿದ ಅಥವಾ ಸ್ಥಾಪಿಸಿದ ಮೇಲೆ [2][172ನೇ ಪ್ರಕರಣದಡಿ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳಿನೊಳಗೆ][2] ಅಥವಾ ಅಧ್ಯಕ್ಷ

ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ][1] ತಮ್ಮಲ್ಲಿಂದ ಇಬ್ಬರು ಸದಸ್ಯರನ್ನು ಕ್ರಮವಾಗಿ ಅದರ ಅಧ್ಯಕ್ಷನನ್ನಾಗಿ ಅಥವಾ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು ಮತ್ತು ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸ್ಥಾನಗಳು ಆಕಸ್ಮಿಕವಾಗಿ ತೆರವಾದಾಗಲೆಲ್ಲಾ ತಮ್ಮಲ್ಲಿಂದ ಇನ್ನೊಬ್ಬ ಸದಸ್ಯನನ್ನು ಸಂದರ್ಭಾನುಸಾರ ಅಧ್ಯಕ್ಷನನ್ನಾಗಿ ಅಥವಾ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು:

1. 1996ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 23-09-1996ರಿಂದ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಆ ಖಾಲಿ ಸ್ಥಾನವು, ಒಂದು ತಿಂಗಳಿಗಿಂತ ಕಡಿಮೆಯ ಅವಧಿಯದಾಗಿದ್ದರೆ ಯಾವುದೇ ಚುನಾವಣೆಯನ್ನು ನಡೆಸತಕ್ಕದ್ದಲ್ಲ.

(2) [1][ಸರ್ಕಾರವು][1], ಗೊತ್ತುಪಡಿಸಿರುವ ರೀತಿಯಲ್ಲಿ,-

1. 2000ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 03-04-2000ದಿಂದ ಪ್ರತಿಯೋಜಿಸಲಾಗಿದೆ.

(ಎ) ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಲ್ಲಿ ಇಂತಿಷ್ಟು ಸಂಖ್ಯೆಯನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವ್ಯಕ್ತಿಗಳಿಗಾಗಿ ಮೀಸಲಿಡತಕ್ಕದ್ದು ಮತ್ತು ಜಿಲ್ಲೆಯ ಜನಸಂಖ್ಯೆಯಲ್ಲಿ ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಅಂಥ ಹುದ್ದೆಗಳ ಸಂಖ್ಯೆಯು ರಾಜ್ಯದಲ್ಲಿರುವ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು.

[1][ಪರಂತುಕ x x x][1]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಬಿಟ್ಟುಬಿಡಲಾಗಿದೆ.

(ಬಿ) ರಾಜ್ಯದಲ್ಲಿರುವ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಒಟ್ಟು ಸಂಖ್ಯೆಯ ಸರಿಸುಮಾರು ಮೂರನೇ ಒಂದರಷ್ಟು ಸಂಖ್ಯೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ ಮೀಸಲಿಡತಕ್ಕದ್ದು. [2][ಆದರೆ ಈ ಖಂಡದಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ನಿರ್ಧರಿಸಿ ಮೀಸಲಿರಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಒಟ್ಟು ಹುದ್ದೆಗಳ ಸಂಖ್ಯೆಯು, (ಎ) ಖಂಡದ ಅಡಿಯಲ್ಲಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಮತ್ತು ಈ ಖಂಡದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯು, ರಾಜ್ಯದಲ್ಲಿನ ಜಿಲ್ಲಾ ಪಂಚಾಯತಿಯಲ್ಲಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರತಕ್ಕದ್ದಲ್ಲ.][2]

[1][ಪರಂತು, ಈ ಖಂಡದ ಅಡಿಯಲ್ಲಿ ಮೀಸಲಿರಿಸಿದ ಹುದ್ದೆಗಳ ಪೈಕಿ ಅಂಥ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ಎಂಬತ್ತರಷ್ಟನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇಕಡ ಇಪ್ಪತ್ತರಷ್ಟು ಹುದ್ದೆಗಳನ್ನು "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು.][1]

1. 1995ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 13-01-1995ರಿಂದ ಸೇರಿಸಲಾಗಿದೆ.
2. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2011ರಿಂದ ಸೇರಿಸಲಾಗಿದೆ.

(ಸಿ) ರಾಜ್ಯದಲ್ಲಿರುವ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ, ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಮತ್ತು ಮೀಸಲಿಟ್ಟಿರದ ಹುದ್ದೆಗಳಲ್ಲಿ [1][ಶೇಕಡಾ ಐವತ್ತರಷ್ಟಕ್ಕೆ][1] ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ [2][ಒಟ್ಟಾರೆಯಾಗಿ ಅರ್ಧದಷ್ಟು ಪರಿಮಿತಿಗೆ ಒಳಪಟ್ಟು ಮುಂದಿನ ಸಂಖ್ಯೆಗೆ ಪೂರ್ಣಾಂಕಗೊಳಿಸಿದಷ್ಟು][2] ಮೀಸಲಿಡತಕ್ಕದ್ದು:

ಪರಂತು, ಈ ಪ್ರಕರಣದಡಿಯಲ್ಲಿ ಮೀಸಲಿರಿಸಿರುವ ಹುದ್ದೆಯನ್ನು ಬೇರೆ ಬೇರೆ ಜಿಲ್ಲಾ ಪಂಚಾಯತಿಗಳಿಗೆ ಸರದಿ ಪ್ರಕಾರ ಹಂಚಿಕೆ ಮಾಡತಕ್ಕದ್ದು.

***ವಿವರಣೆ.***- ಸಂದೇಹಗಳ ನಿವಾರಣೆಗಾಗಿ, ಈ ಉಪ ಪ್ರಕರಣದಡಿ ಹುದ್ದೆಗಳ ಮೀಸಲಾತಿಯ ಉದ್ದೇಶಗಳಿಗಾಗಿ ಸರದಿಯ ಸೂತ್ರವು 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಪ್ರಾರಂಭವಾದ ತರುವಾಯ ನಡೆಯುವ ಪ್ರಥಮ ಸಾಮಾನ್ಯ ಚುನಾವಣೆಯಿಂದ ಪ್ರಾರಂಭವಾಗತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಸೇರಿಸಲಾಗಿದೆ.

[3][2][1][(3) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ, ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷ ಮತ್ತು ಪ್ರತಿಯೊಬ್ಬ ಉಪಾಧ್ಯಕ್ಷನ ಹುದ್ದೆಯ ಅವಧಿಯು, ಆತನನ್ನು ಚುನಾಯಿಸಿದ ದಿನಾಂಕದಿಂದ ಐದು ವರ್ಷಗಳು ಅಥವಾ ಅವನು ಜಿಲ್ಲಾ ಪಂಚಾಯತಿಯ ಸದಸ್ಯನಾಗಿರುವುದು ನಿಂತುಹೋಗುವವರಗೆ, ಇದರಲ್ಲಿ ಯಾವುದು ಮೊದಲೋ ಆ ಅವಧಿಯಾಗಿರತಕ್ಕದ್ದು.][1]][3]

[2][ಪರಂತು ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಹುದ್ದೆಯಲ್ಲಿನ ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವುದಕ್ಕಾಗಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಚುನಾಯಿತನಾದ ಸದಸ್ಯನು, ಯಾವ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸ್ಥಾನಕ್ಕೆ ಆತನು ಚುನಾಯಿತನಾಗಿರುವನೋ ಆ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಖಾಲಿ ಹುದ್ದೆ ಉಂಟಾಗಿರದಿದ್ದರೆ ಯಾವ ಅವಧಿಯವರೆಗೆ ಹುದ್ದೆಯನ್ನು ಹೊಂದಿರುತ್ತಿದ್ದನೋ ಆ ಉಳಿದ ಅವಧಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು.][2]

1. 1996ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 23-09-1996ರಿಂದ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 23-09-1996ರಿಂದ ಸೇರಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 30.04.2015ರಿಂದ ಪ್ರತಿಯೋಜಿಸಲಾಗಿದೆ.

(4) ಜಿಲ್ಲಾ ಪಂಚಾಯತಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆ ಮತ್ತು ಸದರಿ ಹುದ್ದೆಗಳಲ್ಲಾಗುವ ಖಾಲಿ ಸ್ಥಾನಗಳನ್ನು ತುಂಬುವುದು ಮತ್ತು ಅಂಥ ಚುನಾವಣೆಗೆ ಸಂಬಂಧಪಟ್ಟ ವಿವಾದಗಳನ್ನು ನಿರ್ಧರಿಸುವುದು, ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರವಾಗಿ ಇರತಕ್ಕದ್ದು:

ಪರಂತು, ಅಂಥ ಚುನಾವಣಾ ವಿವಾದಗಳನ್ನು ತೀರ್ಮಾನಿಸುವ ಪ್ರಾಧಿಕಾರಿಯು, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶನಾಗಿರತಕ್ಕದ್ದು.

**178. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮತ್ತು ಇತರ ಸದಸ್ಯರ ಸಂಬಳ ಮತ್ತು ಭತ್ಯೆಗಳು.**- (1) ಅಧ್ಯಕ್ಷನಿಗೆ ಮತ್ತು ಉಪಾಧ್ಯಕ್ಷನಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

[1][ಪರಂತು, ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ರಾಜ್ಯ ಸಚಿವರ ಸ್ಥಾನಮಾನವನ್ನು ಹೊಂದಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಸಂಬಳ, ಅಥವಾ ಇನ್ನಿತರ ಉಪಲಬ್ಧಿಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(2) ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಹೊರತುಪಡಿಸಿ ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು, ಗೊತ್ತುಪಡಿಸಬಹುದಾದಂಥ ಉಪವೇಶನ ಶುಲ್ಕ ಮತ್ತು ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**179. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ಅವನನ್ನು ತೆಗೆದುಹಾಕುವುದು.**- (1) ಅಧ್ಯಕ್ಷನಾಗಿ ಹುದ್ದೆಯನ್ನು ಧಾರಣ ಮಾಡಿರುವ ಸದಸ್ಯನು [1][ಸರ್ಕಾರಕ್ಕೆ][1] ಯಾವುದೇ ಕಾಲದಲ್ಲಿ ತನ್ನ ಸಹಿ ಸಹಿತ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜೀನಾಮೆ ಕೊಡಬಹುದು ಮತ್ತು ಉಪಾಧ್ಯಕ್ಷನು, ತನ್ನ ಸ್ಥಾನಕ್ಕೆ, ತನ್ನ ಸಹಿ ಸಹಿತ ಬರಹದಲ್ಲಿ ಅಧ್ಯಕ್ಷನಿಗೆ ಅಥವಾ ಅಧ್ಯಕ್ಷನ ಗೈರುಹಾಜರಿಯಲ್ಲಿ [1][ಸರ್ಕಾರಕ್ಕೆ][1] ಬರೆದು ಯಾವುದೇ ಕಾಲದಲ್ಲಿ ರಾಜೀನಾಮೆ ಕೊಡಬಹುದು ಮತ್ತು ಆ ಹುದ್ದೆಯು ಅಂಥ ರಾಜೀನಾಮೆ ದಿನಾಂಕದಿಂದ ಹದಿನೈದು ದಿವಸಗಳು ಮುಕ್ತಾಯವಾದ ಮೇಲೆ ಸದರಿ ಹದಿನೈದು ದಿವಸಗಳ ಅವಧಿಯೊಳಗೆ ಸಂದರ್ಭಾನುಸಾರ, [1][ಸರ್ಕಾರಕ್ಕೆ][1] ಅಥವಾ ಅಧ್ಯಕ್ಷನಿಗೆ, ಸಂಬೋಧಿಸಿ ತನ್ನ ಸಹಿ ಸಹಿತ ಬರಹದಲ್ಲಿ ಬರೆದು ಅಂಥ ರಾಜೀನಾಮೆಯನ್ನು ಅವರು ಹಿಂತೆಗೆದುಕೊಂಡಿದ್ದ ಹೊರತು, ಆ ಹುದ್ದೆಯು ತೆರವಾಗತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(2) ಪ್ರತಿಯೊಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಅವನು ಜಿಲ್ಲಾ ಪಂಚಾಯತಿಯ ಸದಸ್ಯನಾಗಿರುವುದು ನಿಂತುಹೋದಾಗ ತನ್ನ ಹುದ್ದೆಯನ್ನು ತೆರವು ಮಾಡತಕ್ಕದ್ದು.

(3) ಜಿಲ್ಲಾ ಪಂಚಾಯತಿಯ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅವನಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುವ ನಿರ್ಣಯವನ್ನು [2][ಅರ್ಧದಷ್ಟು ಚುನಾಯಿತ ಸದಸ್ಯರು ನೋಟೀಸನ್ನು ನೀಡಿದ ತರುವಾಯ ಮತ್ತು ಒಟ್ಟು ಚುನಾಯಿತ ಸದಸ್ಯರ ಪೈಕಿ ಮೂರನೇ ಎರಡು ಭಾಗದಷ್ಟು ಬಹುಮತದಿಂದ][2] ಅಂಗೀಕರಿಸಿದರೆ ಅವನು ಹುದ್ದೆಯನ್ನು ತಕ್ಷಣವೇ ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು:

[1][ಪರಂತು ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸ ಸೂಚಿಸುವ ಯಾವ ನಿರ್ಣಯವನ್ನೂ ಆತನು ಆಯ್ಕೆಯಾದ ದಿನಾಂಕದಿಂದ [2][ಮೂವತ್ತು ತಿಂಗಳೊಳಗೆ][2] ಮಂಡಿಸತಕ್ಕದ್ದಲ್ಲ:

ಮತ್ತು ಪರಂತು ಯಾವೊಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಜಿಲ್ಲಾ ಪಂಚಾಯತಿಯು ಪರಿಶೀಲಿಸಿ ಅದನ್ನು ಅಂಗೀಕರಿಸದಿರುವಲ್ಲಿ, ಅದೇ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸಂಬಂಧದಲ್ಲಿ ಜಿಲ್ಲಾ ಪಂಚಾಯತಿಯು ತನ್ನ ನಿರ್ಣಯವನ್ನು ನೀಡಿದ ದಿನಾಂಕದಿಂದ [2][ಎರಡು ವರ್ಷಗಳೊಳಗೆ][2] ಅದೇ ರೀತಿಯ ನಿರ್ಣಯದ ನೋಟೀಸನ್ನು ನೀಡತಕ್ಕದ್ದಲ್ಲ ಅಥವಾ ಮಂಡಿಸತಕ್ಕದ್ದಲ್ಲ.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(4) ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು, ಅವನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿನ ದುರ್ವರ್ತನೆಗಾಗಿ ಅಥವಾ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ಒಂದೇ ಸಮನೆ ಅಲಕ್ಷ್ಯ ತೋರಿಸಿದ್ದಕ್ಕಾಗಿ ಸರ್ಕಾರವು ಆ ಹುದ್ದೆಯಿಂದ ಅವನನ್ನು ತೆಗೆದುಹಾಕಬಹುದಾಗಿರತಕ್ಕದ್ದು ಮತ್ತು ಹಾಗೆ ತೆಗೆದುಹಾಕಲಾದ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು (2)ನೇ ಉಪ ಪ್ರಕರಣದಡಿಯಲ್ಲಿ ಸದಸ್ಯನಾಗಿರುವುದು ನಿಂತುಹೋಗಿರದಿದ್ದರೆ ಅವನು ಅಂಥ ಜಿಲ್ಲಾ ಪಂಚಾಯತಿ ಸದಸ್ಯ ಹುದ್ದೆಯ ಉಳಿದ ಅವಧಿಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ.

(5) (4)ನೇ ಉಪ ಪ್ರಕರಣದ ಅಡಿಯಲ್ಲಿ ಹುದ್ದೆಯಿಂದ ತೆಗೆದುಹಾಕಲಾದ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು, ಸರ್ಕಾರವು, ಜಿಲ್ಲಾ ಪಂಚಾಯತಿಯ ಸದಸ್ಯತ್ವದಿಂದಲೂ ಸಹ ತೆಗೆದುಹಾಕಬಹುದು.

[1][(6)ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಹುದ್ದೆಗಳೆರಡೂ ತೆರವಾದಲ್ಲಿ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷನು, ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಯುಕ್ತವಾಗಿ ಚುನಾಯಿಸುವವರೆಗೆ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

**180. ಜಿಲ್ಲಾ ಪಂಚಾಯತಿಯ ಸಭೆಗಳು.**- (1) ಜಿಲ್ಲಾ ಪಂಚಾಯತಿಯ ಕಾರ್ಯ ಕಲಾಪ ಸಭೆಯನ್ನು (ಈ ಪ್ರಕರಣದಲ್ಲಿ ಇನ್ನು ಮುಂದೆ ಸಾಮಾನ್ಯ ಸಭೆಯೆಂದು ಕರೆಯಲಾಗಿದೆ) ಕನಿಷ್ಠ ಪಕ್ಷ ಎರಡು ತಿಂಗಳಲ್ಲಿ ಒಂದು ಬಾರಿ ನಡೆಸತಕ್ಕದ್ದು ಮತ್ತು ಈ ಕೆಳಕಂಡ ಉಪ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಸಭೆಗಳ ದಿನ, ವೇಳೆ, ನೋಟೀಸು, ವ್ಯವಸ್ಥಾಪನೆ ಮತ್ತು ಮುಂದೂಡುವಿಕೆಗಳಿಗೆ ಸಂಬಂದಿಸಿದಂತೆ ಮತ್ತು ಸಾಮಾನ್ಯವಾಗಿ ಅದರಲ್ಲಿ ಕಾರ್ಯಕಲಾಪದ ನಿರ್ವಹಣೆಗೆ ಸಂಬಂಧಿಸಿದಂತೆ ಈ ಅಧಿನಿಯಮಕ್ಕೆ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳಿಗೆ ಅಸಂಗತವಾಗದಂತೆ ವಿನಿಯಮಗಳನ್ನು ರಚಿಸತಕ್ಕದ್ದು. ಜಿಲ್ಲಾ ಪಂಚಾಯತಿಯ ಪ್ರತಿಯೊಂದು ಸಭೆಯನ್ನು ಸಾಮಾನ್ಯವಾಗಿ ಜಿಲ್ಲಾ ಪಂಚಾಯತಿಯ ಕೇಂದ್ರ ಕಾರ್ಯಸ್ಥಾನದಲ್ಲಿ ನಡೆಸತಕ್ಕದ್ದು.

(2) (ಎ) ಜಿಲ್ಲಾ ಪಂಚಾಯತಿಯ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆಯ ಅಥವಾ ಪುನರಚನೆಯ ತರುವಾಯ [1][ಅಥವಾ ಸಂದರ್ಭಾನುಸಾರ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯ ಉದ್ದೇಶಕ್ಕಾಗಿ ನಡೆಸಲಾಗುವ ತರುವಾಯದ ಸಭೆಯ ದಿನಾಂಕವನ್ನು][1] ಕಮಿಷನರ್ ಅವರು ಗೊತ್ತುಪಡಿಸತಕ್ಕದ್ದು. ಅವರು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು [2][ತರುವಾಯದ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಅಧ್ಯಕ್ಷನು ತೀರ್ಮಾನಿಸತಕ್ಕದ್ದು ಹಾಗೂ ಅದನ್ನು ಆತನು ತಕ್ಷಣದ ಹಿಂದಿನ ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ತಿಳಿಸತಕ್ಕದ್ದು][2] ಪರಂತು ಅಧ್ಯಕ್ಷನು ಸಾಕಷ್ಟು ಕಾರಣಗಳಿಗಾಗಿ ಆ ಸಭೆಯ ದಿವಸವನ್ನು ತರುವಾಯದ

ದಿನಾಂಕಕ್ಕೆ ಬದಲಾಯಿಸಬಹುದು. ಅಧ್ಯಕ್ಷನು ಸೂಕ್ತವೆಂದು ತಾನು ಯೋಚಿಸಿದಾಗಲೆಲ್ಲಾ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಬರಹದಲ್ಲಿನ ಕೋರಿಕೆಯ ಮೇರೆಗೆ ಮತ್ತು ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಅದನ್ನು ಕರೆಯತಕ್ಕದ್ದು. ಅಂಥ ಕೋರಿಕೆಯಲ್ಲಿ ಯಾವ ಉದ್ದೇಶಕ್ಕಾಗಿ ಆ ಸಭೆಯನ್ನು ಕರೆಯಲು ಉದ್ದೇಶಿಸಲಾಗಿದೆಯೋ ಆ ವಿಷಯವನ್ನು ನಿರ್ದಿಷ್ಟಪಡಿಸತಕ್ಕದ್ದು. ಅಧ್ಯಕ್ಷನು ವಿಶೇಷ ಸಭೆಯನ್ನು ಕರೆಯಲು ತಪ್ಪಿದರೆ ಉಪಾಧ್ಯಕ್ಷನು ಅಥವಾ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಹದಿನೈದು ದಿವಸಗಳಿಗೆ ಮೀರದ ಒಂದು ದಿನ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರಿಗೆ ನೋಟೀಸನ್ನು ಕೊಡಲು ಮತ್ತು ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಗತ್ಯಪಡಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 26-02-1997ರಿಂದ ಸೇರಿಸಲಾಗಿದೆ.
2. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ 12.07.2017ರಿಂದ ಪ್ರತಿಯೋಜಿಸಲಾಗಿದೆ.

(ಬಿ) ಸಾಮಾನ್ಯ ಸಭೆಯ ಬಗ್ಗೆ ಹತ್ತು ಪೂರ್ಣ ದಿವಸಗಳ ನೋಟೀಸನ್ನು ಮತ್ತು ವಿಶೇಷ ಸಭೆಗೆ ಏಳು ಪೂರ್ಣ ದಿವಸಗಳ ನೋಟೀಸನ್ನು ಅಂಥ ಸಭೆಯನ್ನು ನಡೆಸಬೇಕಾಗಿರುವಂಥ ಕಾಲ ಮತ್ತು ಅದರಲ್ಲಿ ನಿರ್ವಹಿಸಬೇಕಾಗಿರುವ ಕಾರ್ಯಕಲಾಪವನ್ನು ನಿರ್ದಿಷ್ಟಪಡಿಸಿ, ಸದಸ್ಯರಿಗೆ ಕಳುಹಿಸತಕ್ಕದ್ದು ಮತ್ತು ಅದನ್ನು ಜಿಲ್ಲಾ ಪಂಚಾಯತಿ ಕಚೇರಿಯಲ್ಲಿ ಅಂಟಿಸತಕ್ಕದ್ದು. ವಿಶೇಷ ಸಭೆಯ ಸಂದರ್ಭದಲ್ಲಿ ಅಂಥ ನೋಟೀಸು ಅಂಥ ಸಭೆಗಾಗಿ ಬರಹದಲ್ಲಿ ಮಾಡಿದ ಕೋರಿಕೆಯಲ್ಲಿ ಹೇಳಿರುವ ಯಾವುದೇ ಸೂಚನೆ ಅಥವಾ ಪ್ರಸ್ತಾವವನ್ನು ಒಳಗೊಂಡಿರತಕ್ಕದ್ದು.

(ಸಿ) ಜಿಲ್ಲಾ ಪಂಚಾಯತಿಯ ಸದಸ್ಯರ ಒಟ್ಟು ಸಂಖ್ಯೆಯ [1][ಅರ್ಧದಷ್ಟು][1] ಸದಸ್ಯರ ಸಂಖ್ಯೆಯು ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ಕಾರ್ಯ ಕಲಾಪವನ್ನು ನಿರ್ವಹಿಸುವುದಕ್ಕಾಗಿ ಕೋರಂ ಆಗಿರತಕ್ಕದ್ದು. ಸಭೆಗೆ ಗೊತ್ತುಪಡಿಸಿದ ಕಾಲದಲ್ಲಿ ಕೋರಂ ಇಲ್ಲದಿದ್ದರೆ, ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು, ಮೂವತ್ತು ನಿಮಿಷಗಳ ಕಾಲ ಕಾಯತಕ್ಕದ್ದು ಮತ್ತು ಅಂಥ ಅವಧಿಯೊಳಗೆ ಕೋರಂ ಇದ್ದರೆ ಸಭೆಯನ್ನು ನಡೆಸತಕ್ಕದ್ದು. ಆದರೆ ಅಂಥ ಅವಧಿಯೊಳಗೆ ಕೋರಂ ಇಲ್ಲದಿದ್ದರೆ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು, ತಾನು ಗೊತ್ತು ಪಡಿಸಬಹುದಾದಂಥ ಇನ್ನೊಂದು ದಿನದಂದು ಅಂಥ ವೇಳೆಗೆ ಸಭೆಯನ್ನು ಮುಂದೂಡತಕ್ಕದ್ದು. ಅದರಂತೆ ಅದು ಪ್ರಾರಂಭವಾದ ತರುವಾಯ ಯಾವುದೇ ಕಾಲದಲ್ಲಿ ಕೋರಂ ಇಲ್ಲದಿರುವ ಬಗ್ಗೆ ಅವನ ಗಮನವನ್ನು ಸೆಳೆದರೆ, ಅವನು ಸಭೆಯನ್ನು ಮುಂದೂಡತಕ್ಕದ್ದು. ಕೋರಂ ಇರುವಂಥ ಅಂಥ ಮುಂದೂಡಿದ ಸಭೆಗಳಲ್ಲಿ ಮೂಲ ಸಭೆಯ ಮುಂದೆ ತರಬಹುದಾಗಿದ್ದಂತೆ ಕಾರ್ಯಕಲಾಪವನ್ನು ನಡೆಸತಕ್ಕದ್ದು.

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(ಡಿ) ಜಿಲ್ಲಾ ಪಂಚಾಯತಿಯ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವಿಚಾರಣೆ ಅಥವಾ ಚರ್ಚೆಯನ್ನು ರಹಸ್ಯವಾಗಿ ನಡೆಸತಕ್ಕದ್ದೆಂದು ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಪರ್ಯಾಲೋಚಿಸಿದ ಹೊರತು, ಪ್ರತಿಯೊಂದು ಸಭೆಯು ಸಾರ್ವಜನಿಕರಿಗೆ ಮುಕ್ತವಾಗಿರತಕ್ಕದ್ದು ಮತ್ತು ಸದರಿ ಪ್ರಾಧಿಕಾರಿಯು, ಯಾವುದೇ ಕಾಲದಲ್ಲಿ ವ್ಯವಹರಣೆಗಳಿಗೆ ಅಡ್ಡಿಯುಂಟು ಮಾಡುವ ಯಾವನೇ ವ್ಯಕ್ತಿಯನ್ನು ಹೊರಹಾಕುವಂತೆ ಮಾಡಬಹುದು.

(ಇ) ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕದ್ದು ಅಥವಾ ಅವನು ಗೈರು ಹಾಜರಿದ್ದರೆ, [1][ಅಥವಾ ಅಧ್ಯಕ್ಷನ ಹುದ್ದೆಯು ಖಾಲಿಯಿದ್ದರೆ][1] ಉಪಾಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಬ್ಬರೂ ಗೈರುಹಾಜರಾಗಿದ್ದರೆ [1][ಅಥವಾ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಬ್ಬರ ಹುದ್ದೆಗಳು ಖಾಲಿಯಿದ್ದರೆ][1] ಅಥವಾ ಅಧ್ಯಕ್ಷನು ಗೈರು ಹಾಜರಿದ್ದು ಉಪಾಧ್ಯಕ್ಷನು ಇರದಿದ್ದರೆ ಹಾಜರಿರುವ ಸದಸ್ಯರು ತಮ್ಮಲ್ಲಿಯೇ ಒಬ್ಬನನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 26-02-1997ರಿಂದ ಸೇರಿಸಲಾಗಿದೆ.

(ಎಫ್) ಅನ್ಯಥಾ ವಿಶೇಷವಾಗಿ ಉಪಬಂಧಿಸಿರುವ ಹೊರತು, ಎಲ್ಲ ವಿಷಯಗಳನ್ನೂ ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು. ಅಧ್ಯಕ್ಷತೆ ವಹಿಸಿರುವ ಸದಸ್ಯನು, ತಾನು ಮತ ನೀಡುವುದರಿಂದ ವಿಮುಖನಾದ ಹೊರತು, ವಿಷಯದ ಪರವಾಗಿ ಮತ್ತು ವಿರುದ್ಧವಾಗಿ ಬಂದ ಮತ ಸಂಖ್ಯೆಯನ್ನು ಘೋಷಿಸುವುದಕ್ಕೆ ಮುಂಚೆ ತನ್ನ ಮತವನ್ನು ಕೊಡತಕ್ಕದ್ದು ಮತ್ತು ಸಮಾನ ಮತಗಳು ಬಂದ ಸಂದರ್ಭದಲ್ಲಿ ಅವನು ತನ್ನ ನಿರ್ಣಾಯಕ ಮತವನ್ನು ನೀಡಬಹುದು.

(ಜಿ) ಜಿಲ್ಲಾ ಪಂಚಾಯತಿಯ ಯಾವನೇ ಸದಸ್ಯನು, ಜಿಲ್ಲಾ ಪಂಚಾಯತಿಯ ಅಥವಾ ಯಾವುದೇ ಸಮಿತಿಯ ಸಭೆಯಲ್ಲಿ ಪರ್ಯಾಲೋಚನೆಗಾಗಿ ಬರುವ ಯಾವುದೇ ವಿಷಯದ ಸಂಬಂಧದಲ್ಲಿ ಆ ವಿಷಯವು ಸಾರ್ವಜನಿಕರಿಗೆ ಸಾಮಾನ್ಯವಾಗಿ ಅನ್ವಯವಾಗುವುದಾದರೂ ಜೊತೆಗೆ, ಅದರಲ್ಲಿ ಅವನು ಪ್ರತ್ಯಕ್ಷವಾಗಿ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿದ್ದರೆ, ಮತ ಕೊಡತಕ್ಕದ್ದಲ್ಲ ಅಥವಾ ಅದರ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ. [1][ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು, ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ಪರ್ಯಾಲೋಚನೆಗಾಗಿ ಬಂದಿರುವ ಯಾವುದೇ ವಿಷಯದಲ್ಲಿ ತಾನು ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಹೊಂದಿದ ಯಾವುದೇ ಹಣಕಾಸಿನ ರೂಪದ ಹಿತಾಸಕ್ತಿ ಹೊಂದಿರುವುದನ್ನು ಜಿಲ್ಲಾ ಪಂಚಾಯತಿಗೆ ತಿಳಿಸುವುದು ಕರ್ತವ್ಯವಾಗಿರತಕ್ಕದ್ದು][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಹೆಚ್) ಅಧ್ಯಕ್ಷತೆ ವಹಿಸಿರುವ ವ್ಯಕ್ತಿಗೆ ಚರ್ಚೆಯಲ್ಲಿರುವ ಯಾವುದೇ ವಿಷಯದಲ್ಲಿ ಹಣಕಾಸಿನ ಹಿತಾಸಕ್ತಿ ಇದೆಯೆಂದು ಸಭೆಯಲ್ಲಿ ಹಾಜರಿರುವ ಯಾವನೇ ಸದಸ್ಯನು ಅಭಿಪ್ರಾಯಪಟ್ಟರೆ ಮತ್ತು ಆ ಬಗ್ಗೆ ಒಂದು ಸೂಚನೆಯನ್ನು ಅಂಗೀಕರಿಸಿದರೆ, ಅವನು ಅಂಥ ಚರ್ಚೆಯು ನಡೆಯುತ್ತಿರುವಾಗ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದಲ್ಲ ಅಥವಾ ಮತ ಕೊಡತಕ್ಕದ್ದಲ್ಲ ಅಥವಾ ಅದರಲ್ಲಿ ಭಾಗವಹಿಸತಕ್ಕದ್ದಲ್ಲ. ಅಂಥ ಚರ್ಚೆಯು ಮುಂದುವರಿಯುತ್ತಿರುವ ಕಾಲದಲ್ಲಿ ಆ ಸಭೆಯಲ್ಲಿ ಸಭೆಯ ಅಧ್ಯಕ್ಷತೆ ವಹಿಸಲು ಜಿಲ್ಲಾ ಪಂಚಾಯತಿಯ ಯಾವನೇ ಸದಸ್ಯನನ್ನು ಆಯ್ಕೆ ಮಾಡಬಹುದು.

(ಐ) ಯಾವುದೇ ಪ್ರಸ್ತಾವವನ್ನು ಯಾವುದೇ ಸಾಮಾನ್ಯ ಸಭೆಯಲ್ಲಿ ಅಂಥ ಸಭೆಯನ್ನು ಕರೆಯುವ ನೋಟೀಸಿನಲ್ಲಿ ಅಥವಾ ವಿಶೇಷ ಸಭೆಯ ಸಂದರ್ಭದಲ್ಲಿ, ಅಂಥ ಸಭೆಗಾಗಿ ಬರಹದಲ್ಲಿ ಮಾಡಿದ ಕೋರಿಕೆಯಲ್ಲಿ

ಅದನ್ನು ನಮೂದಿಸಿದ್ದ ಹೊರತು ಚರ್ಚಿಸತಕ್ಕದ್ದಲ್ಲ. ಸದಸ್ಯನು ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿರುವ ವಿಷಯಗಳಿಗೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾಗಿ ಯಾವುದೇ ನಿರ್ಣಯವನ್ನು ಸೂಚಿಸಬಹುದು. ಅಧ್ಯಕ್ಷನು, ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿಸಿಲ್ಲದ ವಾಡಿಕೆಯ ಸ್ವರೂಪದ ಯಾವುದೇ ಜರೂರು ವಿಷಯವನ್ನು ಯಾವನೇ ಸದಸ್ಯನು ಆಕ್ಷೇಪಿಸದಿದ್ದರೆ, ಪ್ರಸ್ತಾಪಿಸಬಹುದು. (ಕೆ) ಖಂಡಕ್ಕೆ ಅನುಸಾರವಾಗಿ ಅಲ್ಲದೆ, ಯಾವುದೇ ನಿರ್ಣಯವನ್ನು ಅಂಗೀಕರಿಸಿದ ತರುವಾಯ [1][ಆರು ತಿಂಗಳುಗಳೊಳಗೆ][1], ಅದರ ಮಾರ್ಪಾಟಿಗೆ ಅಥವಾ ರದ್ದಿಗೆ ಬಂದ ಸೂಚನೆಗೆ ಅಥವಾ ಪ್ರಸ್ತಾವಕ್ಕೆ ಯಾವುದೇ ಅನುಮತಿಯನ್ನು ಕೊಡತಕ್ಕದ್ದಲ್ಲ. ಅಂಥ ಸಭೆಯಲ್ಲಿ ಯಾವುದೇ ಕಾರ್ಯಕಲಾಪವನ್ನು ಅಥವಾ ಪ್ರಸ್ತಾವವನ್ನು ಯಾವ ಕ್ರಮದಲ್ಲಿ ತರಬೇಕೆಂಬುದನ್ನು ಅಧ್ಯಕ್ಷತೆ ವಹಿಸುವ ಅಧಿಕಾರಿಯು ನಿರ್ಧರಿಸತಕ್ಕದ್ದು. ಅಂಥ ಕಾರ್ಯಕಲಾಪದ ಯಾವುದೇ ನಿರ್ದಿಷ್ಟ ಬಾಬಿಗೆ ಅಥವಾ ಯಾವುದೇ ನಿರ್ದಿಷ್ಟ ಪ್ರಸ್ತಾವಕ್ಕೆ ಆದ್ಯತೆ ಕೊಡಲು ಯಾವನೇ ಸದಸ್ಯನು ಸೂಚನೆಯನ್ನು ಕೊಟ್ಟ ಸಂದರ್ಭದಲ್ಲಿ, ಅವನು ಆ ಪ್ರಸ್ತಾವವನ್ನು ಸಭೆಯ ಮುಂದಿಡತಕ್ಕದ್ದು ಮತ್ತು ಆ ಪ್ರಸ್ತಾವದ ಪರವಾಗಿ ಅಥವಾ ವಿರುದ್ಧವಾಗಿ ಬಂದ ಬಹುಮತಗಳ ಆಧಾರದ ಮೇಲೆ ನಿರ್ಣಯ ಕೈಕೊಳ್ಳತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ಜೆ) ಯಾವುದೇ ಸಾಮಾನ್ಯ ಸಭೆಯನ್ನು ಹಾಜರಿರುವ ಸಂಖ್ಯೆಯ ಸದಸ್ಯರುಗಳ ಸಮ್ಮತಿಯೊಂದಿಗೆ ಕಾಲಕಾಲಕ್ಕೆ ಮುಂದೂಡಬಹುದು. ಆದರೆ ಯಾವ ಸಭೆಯನ್ನು ಮುಂದೂಡಲಾಯಿತೋ ಆ ಸಭೆಯಲ್ಲಿ ವಿಲೆ ಮಾಡದೇ ಇದ್ದುದ್ದನ್ನು ಹೊರತುಪಡಿಸಿ ಯಾವುದೇ ಕಾರ್ಯಕಲಾಪವನ್ನು ಯಾವುದೇ ಮುಂದೂಡಿದ ಸಭೆಯಲ್ಲಿ ನಡೆಸತಕ್ಕದ್ದಲ್ಲ.

(ಕೆ) ಜಿಲ್ಲಾ ಪಂಚಾಯತಿಯ ಯಾವ ನಿರ್ಣಯವನ್ನೂ ಅದನ್ನು ಅಂಗೀಕರಿಸಿದ ತರುವಾಯ ಆರು ತಿಂಗಳೊಳಗೆ ಸಾಮಾನ್ಯ ಅಥವಾ ವಿಶೇಷ ಸಭೆಯಲ್ಲಿನ ಸದಸ್ಯರ ಒಟ್ಟು ಸಂಖ್ಯೆಯ ಅರ್ಧಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕವಲ್ಲದೆ ಮತ್ತು (ಬಿ) ಖಂಡದ ಅಗತ್ಯತೆಗಳನ್ನು ಪೂರೈಸಿ ಮತ್ತು ಅಂಥ ಸಭೆಯಲ್ಲಿ ಪೂರ್ಣವಾಗಿ ಮಾರ್ಪಾಟು ಮಾಡಲು ಮತ್ತು ರದ್ದುಪಡಿಸಲು ಉದ್ದೇಶಿಸಿರುವಂಥ ನಿರ್ಣಯವನ್ನು ಮತ್ತು ಅಂಥ ನಿರ್ಣಯವನ್ನು ಪೂರ್ಣವಾಗಿ ಮಾರ್ಪಾಟು ಮಾಡುವುದಕ್ಕಾಗಿ ಅಥವಾ ರದ್ದುಪಡಿಸುವುದಕ್ಕಾಗಿ ಬಂದ ಸೂಚನೆಯನ್ನು ಅಥವಾ ಪ್ರಸ್ತಾವವನ್ನು ಸಂಪೂರ್ಣವಾಗಿ ವಿವರಿಸಿರುವ ಯಾವುದೇ ನೋಟೀಸನ್ನು ನೀಡಿದ್ದ ಹೊರತು ಮಾರ್ಪಾಟು ಅಥವಾ ರದ್ದು ಮಾಡತಕ್ಕದ್ದಲ್ಲ.

(3) ಪ್ರತಿಯೊಂದು ಸಭೆಯ ವ್ಯವಹರಣೆಗಳನ್ನು ಆ ಸಭೆಯ ಚರ್ಚೆಗಳ ತರುವಾಯ ಕೂಡಲೇ ನಡವಳಿಕೆ ಪುಸ್ತಕದಲ್ಲಿ ದಾಖಲು ಮಾಡತಕ್ಕದ್ದು ಮತ್ತು ಆ ಸಭೆಯ ಅಧ್ಯಕ್ಷನು ಅವುಗಳನ್ನು ಓದಿದ ತರುವಾಯ ಅವನು ಅದಕ್ಕೆ ಸಹಿ ಮಾಡತಕ್ಕದ್ದು. ಜಿಲ್ಲಾ ಪಂಚಾಯತಿಯ ತೀರ್ಮಾನಗಳ ಮೇಲೆ ಕೈಕೊಂಡ ಕ್ರಮವನ್ನು ಜಿಲ್ಲಾ ಪಂಚಾಯತಿಯ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು. ನಡವಳಿಕೆ ಪುಸ್ತಕವು ಯುಕ್ತ ಕಾಲಗಳಲ್ಲಿ ಜಿಲ್ಲಾ ಪಂಚಾಯತಿಯ ಯಾವನೇ ಸದಸ್ಯನು ಪರಿಶೀಲಿಸಲು ಮುಕ್ತವಾಗಿರತಕ್ಕದ್ದು. ನಡವಳಿಕೆ ಪುಸ್ತಕವನ್ನು ಜಿಲ್ಲಾ ಪಂಚಾಯತಿಯ ಕಚೇರಿಯಲ್ಲಿ ಯಾವಾಗಲೂ ಇಡತಕ್ಕದ್ದು ಮತ್ತು ಇದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ವಶದಲ್ಲಿರತಕ್ಕದ್ದು. [1][ಸಭೆಗಳಲ್ಲಿ ಕೈಗೊಂಡ ನಿರ್ಣಯಗಳ ಪರವಾಗಿ ಅಥವಾ ಅನುಕ್ರಮವಾಗಿ ವಿರುದ್ಧ ಮತನೀಡಿದ ಸದಸ್ಯರುಗಳ ಹೆಸರುಗಳ ವಿವರಗಳನ್ನು ಒಳಗೊಂಡಂತೆ ವ್ಯವಹರಣೆಗಳ ಒಂದು ಪ್ರತಿಯನ್ನು ಸಭೆ ನಡೆದ ಮೂರು ದಿವಸಗಳೊಳಗಾಗಿ ಜಿಲ್ಲಾ ಪಂಚಾಯತಿಯ ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(4) ಸಭೆಯಲ್ಲಿ ಜಿಲ್ಲಾ ಪಂಚಾಯತಿಯು ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಪ್ರತಿಯನ್ನು ಆ ಸಭೆಯು ನಡೆದ ದಿನದಿಂದ ಹತ್ತು ದಿನಗಳ ಒಳಗೆ [1][ಸರ್ಕಾರಕ್ಕೆ][1] ಕಳುಹಿಸತಕ್ಕದ್ದು. [2][ಮತ್ತು ಎಲ್ಲಾ ಸದಸ್ಯರುಗಳಿಗೆ ಸಭೆಯ ನಡುವಳಿಯ ಪ್ರತಿಯನ್ನು ಒದಗಿಸತಕ್ಕದ್ದು.][2]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(5) ಜಿಲ್ಲಾ ಪಂಚಾಯತಿಯಲ್ಲಿ ಅಥವಾ ಅದರ ಯಾವುದೇ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನವು ಉಂಟಾದ ಅವಧಿಯಲ್ಲಿ ಮುಂದುವರಿದಿರುವ ಸದಸ್ಯರು ಯಾವುದೇ ಖಾಲೀ ಸ್ಥಾನವು ಉಂಟಾಗಿರದಿದ್ದರೆ ಹೇಗೋ ಹಾಗೆ ಕಾರ್ಯನಿರ್ವಹಿಸಬಹುದು.

[1][(6)ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಮುಂದಿನವರಲ್ಲಿ ವಿಶ್ವಾಸವಿಲ್ಲದಿರುವುದನ್ನು ತಿಳಿಸುವ ಸೂಚನೆಯನ್ನು ಪರಿಗಣಿಸುವುದಕ್ಕಾಗಿ ಕರೆಯಲಾಗಿದ್ದಲ್ಲಿ,-

(i) ಅಧ್ಯಕ್ಷನ ಸಂಬಂಧದಲ್ಲಿ, ಉಪಾಧ್ಯಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(ii) ಉಪಾಧ್ಯಕ್ಷನ ಸಂಬಂಧದಲ್ಲಿ, ಅಧಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(iii) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇವರಿಬ್ಬರ ಸಂಬಂಧದಲ್ಲಿ, ಸಭೆಯಲ್ಲಿ ಹಾಜರಿರುವ ಚುನಾಯಿತ ಸದಸ್ಯರು ತಮ್ಮಲ್ಲಿಯೇ ಚುನಾಯಿಸಿದ ಒಬ್ಬ ಸದಸ್ಯನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

**181. ಅಡ್ಡ ಪ್ರಶ್ನೆಗಳು ಮತ್ತು ನಿರ್ಣಯಗಳು.-** (1) ಜಿಲ್ಲಾ ಪಂಚಾಯತಿಯ ಸದಸ್ಯರು ಜಿಲ್ಲಾ ಪಂಚಾಯತಿಯು ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಆಡಳಿತಕ್ಕೆ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯ ವಿಷಯಗಳ ಬಗ್ಗೆ ನಿರ್ಣಯಗಳನ್ನು ಮಂಡಿಸಬಹುದು ಮತ್ತು ಅಧ್ಯಕ್ಷರಿಗೆ ಅಡ್ಡ ಪ್ರಶ್ನೆಗಳನ್ನು ಹಾಕಬಹುದು.

(2) ಜಿಲ್ಲಾ ಪಂಚಾಯತಿಯ ಸದಸ್ಯನು, ಜಿಲ್ಲಾ ಪಂಚಾಯತಿಯ ಕೆಲಸವನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷ್ಯತೆ, ಜಿಲ್ಲಾ ಪಂಚಾಯತಿಗೆ ಸೇರಿದ ಸ್ವತ್ತಿನ ಯಾವುದೇ ಪೋಲು ಅಥವಾ ಜಿಲ್ಲೆಯೊಳಗೆ ಯಾವುದೇ ಸ್ಥಳೀಯ ಬೇಡಿಕೆಗಳ ಬಗ್ಗೆ ಅಧ್ಯಕ್ಷನ ಗಮನವನ್ನು ಸಹ ಸೆಳೆಯಬಹುದು ಮತ್ತು ಅಪೇಕ್ಷಣೀಯವೆಂದು ಕಂಡುಬರಬಹುದಾದಂಥ ಯಾವುವೇ ಸುಧಾರಣೆಗಳ ಬಗ್ಗೆ ಸಲಹೆ ಕೊಡಬಹುದು.

**182. ಜಿಲ್ಲಾ ಪಂಚಾಯತಿಯು ಸಭೆಗಳಲ್ಲಿ [1][ಸರ್ಕಾರವು ಅಧಿಸೂಚಿಸಬಹುದಾದಂತೆ ಸರ್ಕಾರದ ಅಥವಾ ಯಾವುದೇ ಸರ್ಕಾರಿ ಸಮಿತಿಯ ಅಥವಾ ಕಂಪನಿಯ ಅಥವಾ ನಿಗಮದ ಅಧಿಕಾರಿಗಳ][1] ಹಾಜರಾತಿಯನ್ನು**

**ಅಗತ್ಯಪಡಿಸಬಹುದು.**- ಜಿಲ್ಲಾ ಪಂಚಾಯತಿಯ ಒಂದು ವಿಭಾಗದ ಅಥವಾ ಸರ್ಕಲ್ಲಿನ ಅಥವಾ ಒಂದು ವಿಭಾಗ ಅಥವಾ ಸರ್ಕಲ್ಲಿಗಿಂತ ಕಡಿಮೆ ಇರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಅಥವಾ ಜಿಲ್ಲಾ ಪಂಚಾಯತಿಯ ಅಧೀನದಲ್ಲಿ ಕೆಲಸವನ್ನು ಮಾಡುತ್ತಿಲ್ಲದಿರುವ [1][ಸರ್ಕಾರವು ಅಧಿಸೂಚಿಸಬಹುದಾದಂತೆ ಸರ್ಕಾರದ ಅಥವಾ ಯಾವುದೇ ಸರ್ಕಾರಿ ಸಮಿತಿಯ ಅಥವಾ ಕಂಪನಿಯ ಅಥವಾ ನಿಗಮದ ಅಧಿಕಾರಿಗಳ][1] ಹಾಜರಾತಿಯು ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ಅಪೇಕ್ಷಣೀಯವೆಂದು ಕಂಡುಬಂದರೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಉದ್ದೇಶಿತ ಸಭೆಗೆ ಮುಂಚಿತವಾಗಿ ಹದಿನೈದು ದಿನಗಳಿಗೆ ಕಡಿಮೆಯಿಲ್ಲದಂತೆ ಅಂಥ ಅಧಿಕಾರಿಗೆ ಪತ್ರ ಬರೆಯುವ ಮೂಲಕ ಆ ಅಧಿಕಾರಿಯನ್ನು ಆ ಸಭೆಗೆ ಹಾಜರಾಗುವಂತೆ ಕೋರತಕ್ಕದ್ದು ಮತ್ತು ಆ ಅಧಿಕಾರಿಯು ಅನಾರೋಗ್ಯದ ಅಥವಾ ಇತರ ಯುಕ್ತ ಕಾರಣಗಳಿಂದಾಗಿ ಬರಲಾಗದ ಹೊರತು, ಸಭೆಗೆ ಹಾಜರಾಗತಕ್ಕದ್ದು:

ಪರಂತು, ಅಧಿಕಾರಿಯು ಅಂಥ ಪತ್ರವನ್ನು ಸ್ವೀಕರಿಸಿದಾಗ ಈ ಮೊದಲೇ ಹೇಳಿದ ಯಾವುದೇ ಕಾರಣಕ್ಕಾಗಿ ತಾನೇ ಖುದ್ದಾಗಿ ಹಾಜರಾಗುವುದು ಸಾಧ್ಯವಾಗದಿದ್ದರೆ ಆ ಸಭೆಗೆ ಅವನನ್ನು ಪ್ರತಿನಿಧಿಸಲು ಅವನ ಪ್ರತಿತನಿಧಿ ಅಥವಾ ಇತರ ಸಕ್ಷಮ ಅಧೀನ ಅಧಿಕಾರಿಗೆ ಸೂಚನೆ ನೀಡತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**183. ವ್ಯವಹರಣೆಗಳ ವಿಧಿಮಾನ್ಯತೆ.**- (1) ಜಿಲ್ಲಾ ಪಂಚಾಯತಿಯ ಸದಸ್ಯನಾಗಿ ಅತವಾ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಿರುವ ಅಥವಾ ಸಾಮಾನ್ಯ ಅಥವಾ ವಿಶೇಷ ಸಭೆಗಳಲ್ಲಿ ಅಧ್ಯಕ್ಷತೆಯನ್ನು ವಹಿಸುವ ಪ್ರಾಧಿಕಾರಿಯಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಸಮಿತಿಯ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯ ಚುನಾವಣೆ ಮತ್ತು ನೇಮಕದಲ್ಲಿನ ಯಾವುದೇ ಅನರ್ಹತೆಯು ಅಥವಾ ದೋಷವು ಸಂದರ್ಭಾನುಸಾರ ಜಿಲ್ಲಾ ಪಂಚಾಯತಿಯ ಅಥವಾ ಯಾವುದೇ ಅಂಥ ಸಮಿತಿಯ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ಅಂಥ ಯಾವುದೇ ಕಾರ್ಯದಲ್ಲಿ ಅಥವಾ ವ್ಯವಹರಣೆಯಲ್ಲಿ ಕಾರ್ಯ ನಿರ್ವಹಿಸಲು ಹಕ್ಕುಳ್ಳವರಾಗಿದ್ದ ಬಹುಸಂಖ್ಯಾತರು ಭಾಗವಹಿಸಿ ನಿರ್ವಹಿಸಿರುವಲ್ಲಿ ನಿರರ್ಥಕಗೊಳಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಜಿಲ್ಲಾ ಪಂಚಾಯತಿಯ ಅಥವಾ ಯಾವುದೇ ಸಮಿತಿಯ ಯಾವುದೇ ನಿರ್ಣಯವನ್ನು ಯಾವನೇ ಸದಸ್ಯನಿಗೆ ನೋಟೀಸನ್ನು ಜಾರಿಮಾಡುವುದರಲ್ಲಾದ ಯಾವುದೇ ಅಕ್ರಮತೆಯ ಕಾರಣದಿಂದ ಅಸಿಂಧುವೆಂದು ಭಾವಿಸತಕ್ಕದ್ದಲ್ಲ. ಪರಂತು, ಜಿಲ್ಲಾ ಪಂಚಾಯತಿಯ ಅಥವಾ ಸಮಿತಿಯ ವ್ಯವಹರಣೆಗಳಿಗೆ ಅಂಥ ಅಕ್ರಮತೆಯಿಂದ ಪ್ರತಿಕೂಲ ಬಾಧಕವುಂಟಾಗಿರಕೂಡದು.

(3) ತದ್ವಿರುದ್ಧವಾಗಿ ರುಜುವಾತಾಗುವವರೆಗೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಜಿಲ್ಲಾ ಪಂಚಾಯತಿಯ ಅಥವಾ ಸಮಿತಿಯ ಪ್ರತಿಯೊಂದು ಸಭೆಯ ಯಾವ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮಕ್ಕನುಸಾರವಾದ ನಡವಳಿಕೆಯನ್ನು ಬರೆಯಲಾಗಿದೆಯೋ ಮತ್ತು ಸಹಿ ಮಾಡಲಾಗಿದೆಯೋ ಆ ವ್ಯವಹರಣೆಗಳಿಗೆ ಸಂಬಂಧಿಸಿದ ಪ್ರತಿಯೊಂದು ಸಭೆಯನ್ನು ಕ್ರಮಬದ್ಧವಾಗಿ ಕರೆಯಲಾಗಿತ್ತೆಂದು ಮತ್ತು ನಡೆಸಲಾಯಿತೆಂದು ಮತ್ತು ಸಭೆಯ ಎಲ್ಲ ಸದಸ್ಯರು ಕ್ರಮಬದ್ಧವಾಗಿ ಅರ್ಹತೆ ಹೊಂದಿದ್ದರೆಂದು ಭಾವಿಸತಕ್ಕದ್ದು ಮತ್ತು ಆ ವ್ಯವಹರಣೆಗಳು ಸಮಿತಿಯ ವ್ಯವಹರಣೆಗಳಾಗಿದ್ದರೆ ಅಂಥ ಸಮಿತಿಯನ್ನು ಕ್ರಮಬದ್ಧವಾಗಿ ರಚಿಸಲಾಗಿತ್ತೆಂದು ಮತ್ತು ಆ ನಡವಳಿಕೆಯಲ್ಲಿ ಉಲ್ಲೇಖಿಸಿದ ವಿಷಯಗಳನ್ನು ವ್ಯವಹರಿಸಲು ಅದು ಅಧಿಕಾರವನ್ನು ಹೊಂದಿತ್ತೆಂದು ಭಾವಿಸತಕ್ಕದ್ದು.

(4) ಜಿಲ್ಲಾ ಪಂಚಾಯತಿಯಲ್ಲಿ ಅಥವಾ ಸಮಿತಿಗಳಲ್ಲಿ ಯಾವುದೇ ಖಾಲಿ ಸ್ಥಾನವು ಉಂಟಾದ ಅವಧಿಯಲ್ಲಿ, ಮುಂದುವರಿದಿರುವ ಸದಸ್ಯನು ಅಥವಾ ಸದಸ್ಯರು, ಆ ಯಾವುದೇ ಖಾಲಿ ಸ್ಥಾನವು ಉಂಟಾಗಿರದಿದ್ದರೆ ಹೇಗೋ ಹಾಗೆ ಕಾರ್ಯನಿರ್ವಹಿಸಬಹುದು.

## ಅಧ್ಯಾಯ XI

## ಜಿಲ್ಲಾ ಪಂಚಾಯತಿಯ, ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು, ಅಧಿಕಾರಗಳು

[1][**184. ಜಿಲ್ಲಾ ಪಂಚಾಯತಿಯ ಪ್ರಕಾರ್ಯಗಳು.**- (1) ಜಿಲ್ಲಾ ಪಂಚಾಯತಿಯು ಅನುಸೂಚಿ III ರಲ್ಲಿ ನಿರ್ದಿಷ್ಟಪಡಿಸಿರುವ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:

ಪರಂತು ಅನುಸೂಚಿ IIIರಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುವುದಕ್ಕೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ನಿಧಿಗಳನ್ನು ಒದಗಿಸುವಲ್ಲಿ, ಜಿಲ್ಲಾ ಪಂಚಾಯತಿಯು ಅಂಥ ಪ್ರಕಾರ್ಯವನ್ನು ನಿರ್ವಹಿಸುವುದಕ್ಕಾಗಿ ವಿಧಿಸಲಾಗಿರುವ ಮಾರ್ಗದರ್ಶನಗಳಿಗೆ ಅಥವಾ ಸೂತ್ರಗಳಿಗೆ ಅನುಸಾರವಾಗಿ ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ ಅಥವಾ ಅನುಸೂಚಿ ಖಖಖರಲ್ಲಿ ಏನೇ ಇದ್ದರೂ, ಜಿಲ್ಲಾ ಪಂಚಾಯತಿಯ ವಶದಲ್ಲಿರುವ ನಿಧಿಯು ಅನುಮತಿಸುವಷ್ಟರಮಟ್ಟಿಗೆ, ಜಿಲ್ಲಾ ಪಂಚಾಯತಿಯು ಈ ಕೆಳಗಿನ ವಿಷಯಗಳ ಬಗ್ಗೆ ಅದರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶದೊಳಗೆ ಸೂಕ್ತವಾಗಿ ಅವಕಾಶ ಕಲ್ಪಿಸುವುದು ಕಡ್ಡಾಯವಾಗತಕ್ಕದ್ದು, ಎಂದರೆ:-

(i) ಸರ್ಕಾರವು ವಿಧಿಸಲಾಗಿರುವ ಸೂತ್ರಗಳಿಗೆ ಅನುಸಾರವಾಗಿ ಐದು ವರ್ಷಗಳೊಳಗೆ ಸಂಪೂರ್ಣ ಜನತೆಯನ್ನು ಒಳಗೊಳ್ಳುವಂತೆ ಆರೋಗ್ಯ ಕೇಂದ್ರಗಳನ್ನು ಹಾಗೂ ಪ್ರಸೂತಿ ಕೇಂದ್ರಗಳನ್ನು ಸ್ಥಾಪಿಸುವುದು:

(ii) ಕುಡಿಯುವ ನೀರಿನ ಬಾವಿಗಳಲ್ಲಿ ನೀರು ಇರುವಂತೆ ನೋಡಿಕೊಳ್ಳುವುದಕ್ಕಾಗಿ ಅಂತರ್ಜಲ ಒರತೆ ಬತ್ತಿ ಹೋಗದಂತೆ ನಿರ್ಮಿತಿಗಳನ್ನು ರಚಿಸುವುದು;

(iii) ವಿಶೇಷವಾಗಿ ಕಡಿಮೆ ಮಳೆಯಾಗಿರುವ ಕಾಲದಲ್ಲಿ ಸಾಕಷ್ಟು ಕುಡಿಯುವ ನೀರು ಸಿಗುವಂತೆ ಮಾಡುವುದಕ್ಕಾಗಿ ಕುಡಿಯುವ ನೀರಿನ ಬಾವಿಗಳ ಅಕ್ಕಪಕ್ಕದಲ್ಲಿ ನೀರಾವರಿ ಕೊಳವೆ ಬಾವಿಗಳನ್ನು ಕೊರೆಯುವುದನ್ನು ತಡೆಗಟ್ಟುವುದು;

(iv) ಪ್ರತಿಯೊಂದು ತಾಲೂಕಿನಲ್ಲಿ ಸಾಮಾಜಿಕ ಅರಣ್ಯೋದ್ಯಮದ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವುದು ಮತ್ತು ಪ್ರತಿ ವರ್ಷ ಜಿಲ್ಲಾ ಯೋಜನೆ ಹಂಚಿಕೆಯಲ್ಲಿ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಶೇಕಡಾವಾರಿಗೆ ಕಡಿಮೆ ಇಲ್ಲದಂತೆ ಖರ್ಚು ಮಾಡುವುದು.][1]

[1][(6)ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಮುಂದಿನವರಲ್ಲಿ ವಿಶ್ವಾಸವಿಲ್ಲದಿರುವುದನ್ನು ತಿಳಿಸುವ ಸೂಚನೆಯನ್ನು ಪರಿಗಣಿಸುವುದಕ್ಕಾಗಿ ಕರೆಯಲಾಗಿದ್ದಲ್ಲಿ,-

(i) ಅಧ್ಯಕ್ಷನ ಸಂಬಂಧದಲ್ಲಿ, ಉಪಾಧ್ಯಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(ii) ಉಪಾಧ್ಯಕ್ಷನ ಸಂಬಂಧದಲ್ಲಿ, ಅಧಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(iii) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇವರಿಬ್ಬರ ಸಂಬಂಧದಲ್ಲಿ, ಸಭೆಯಲ್ಲಿ ಹಾಜರಿರುವ ಚುನಾಯಿತ ಸದಸ್ಯರು ತಮ್ಮಲ್ಲಿಯೇ ಚುನಾಯಿಸಿದ ಒಬ್ಬ ಸದಸ್ಯನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(3) ಜಿಲ್ಲಾ ಪಂಚಾಯತಿಯು ಸ್ಥಳೀಯ ಸ್ವಯಮಾಡಳಿತದ ಸರ್ಕಾರದ ಒಂದು ಘಟಕವಾಗಿರತಕ್ಕದ್ದು ಮತ್ತು ರಾಜ್ಯವು, ಜಿಲ್ಲಾ ಪಂಚಾಯತಿಯು ಸ್ವಯಂ-ಸರ್ಕಾರದ ಸಂಸ್ಥೆಯಂತೆ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಅದಕ್ಕೆ ಅವಶ್ಯವಿರಬಹುದಾದ ಅಧಿಕಾರಗಳು, ಪ್ರಾಧಿಕಾರ, ಪ್ರಕಾರ್ಯಗಳು, ಸಿಬ್ಬಂದಿ ವರ್ಗದವರು ಮತ್ತು ನಿಧಿಗಳನ್ನು ಒದಗಿಸತಕ್ಕದ್ದು.

(4) ಪಂಚಾಯತಿ ಪ್ರದೇಶದ ಜನತೆಯ ಅವಶ್ಯಕತೆಗಳನ್ನು ಪೂರೈಸುವುದು ಪ್ರತಿಯೊಂದು ಜಿಲ್ಲಾ ಪಂಚಾಯತಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅನುಸೂಚಿ-IIIರಲ್ಲಿ ನಮೂದಿಸಿರುವ ವಿಷಯಗಳು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸಂಬಂಧಿಸಿದ ಜವಾಬ್ದಾರಿ ನಕ್ಷೆಯಲ್ಲಿ ತಿಳಿಸಲಾದಂತೆ ಮತ್ತು ಜಿಲ್ಲಾ ಪಂಚಾಯತಿ ನಿಧಿ ಅನುಮತಿಸುವಷ್ಟರ ಮಟ್ಟಿಗೆ, ಸರ್ವರಿಗೂ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಭಿವೃದ್ಧಿ ಪರ ಯೋಜನೆಗಳನ್ನು ಸಿದ್ಧಪಡಿಸುವ ಮತ್ತು ಅವುಗಳನ್ನು ಅನುಷ್ಠಾನಗೊಳಿಸುವ ವಿಷಯಗಳನ್ನು ನಿರ್ವಹಿಸುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

(5) ಜಿಲ್ಲಾ ಪಂಚಾಯತಿಯು ಪಂಚಾಯತಿ ಪ್ರದೇಶದ ಅವಶ್ಯಕತೆಗಳನ್ನು ಪೂರೈಸತಕ್ಕದ್ದು ಮತ್ತು ಗ್ರಾಮ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗಳ ಅಗತ್ಯತೆಗಳು ಮತ್ತು ಕೋರಿಕೆಗಳಿಗೆ ಸ್ಪಂದಿಸತಕ್ಕದ್ದು ಮತ್ತು ಅನುಸೂಚಿ-IIIರಲ್ಲಿ ನಮೂದಿಸಲಾಗಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರದೇಶಕ್ಕೆ ಅಗತ್ಯವಿರಬಹುದಾದ ನೆರವನ್ನು ನೀಡತಕ್ಕದ್ದು.

(6) ಅಧಿನಿಯಮದಲ್ಲಿ ಹೇಳಲಾದ ಯೋಜಿತ ಯೋಜನಾ ಪ್ರಕ್ರಿಯೆಗಳಲ್ಲಿ ತಾನಾಗಿಯೇ ತೊಡಗಿಸಿಕೊಳ್ಳುವುದು ಜಿಲ್ಲಾ ಪಂಚಾಯತಿಯ ಹೊಣೆಗಾರಿಕೆಯಾಗಿರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**185. ಪ್ರಕಾರ್ಯಗಳನ್ನು ವಹಿಸಿಕೊಡುವುದು.-** (1) ಸರ್ಕಾರವು ಜಿಲ್ಲಾ ಪಂಚಾಯತಿಗೆ ಸರ್ಕಾರದ ಕಾರ್ಯಾಂಗ ಅಧಿಕಾರವರ್ಗವು ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯಗಳನ್ನು ವಿಸ್ತರಿಸಿದೆಯೋ ಆ ಕಾರ್ಯಗಳನ್ನು ಅಥವಾ ಕೇಂದ್ರ ಸರ್ಕಾರವು ರಾಜ್ಯಸರ್ಕಾರಕ್ಕೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ವಹಿಸಿಕೊಡಬಹುದು.

(2) ಸರ್ಕಾರವು, ಈ ಪ್ರಕರಣದ ಅಡಿಯಲ್ಲಿ ವಹಿಸಿಕೊಟ್ಟಿರುವ ಪ್ರಕಾರ್ಯಗಳನ್ನು ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

**186. ಸ್ಥಾಯಿ ಸಮಿತಿಗಳು.-** (1) ಜಿಲ್ಲಾ ಪಂಚಾಯತಿಯು ಈ ಕೆಳಕಂಡ ಸ್ಥಾಯಿ ಸಮಿತಿಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಮಾನ್ಯ ಸ್ಥಾಯಿ ಸಮಿತಿ.

(ಬಿ) ಹಣಕಾಸು ಮತ್ತು ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ.

(ಸಿ) ಸಾಮಾಜಿಕ ನ್ಯಾಯ ಸಮಿತಿ.

(ಡಿ) ಶಿಕ್ಷಣ ಮತ್ತು ಆರೋಗ್ಯ ಸಮಿತಿ.

(ಇ) ಕೃಷಿ ಮತ್ತು ಕೈಗಾರಿಗಾ ಸಮಿತಿ.

[1][(2) ಪ್ರತಿಯೊಂದು ಸ್ಥಾಯಿ ಸಮಿತಿಯು, ಜಿಲ್ಲಾ ಪಂಚಾಯತಿಯು ನಿರ್ದಿಷ್ಟಪಡಿಸಿದಂತೆ ಜಿಲ್ಲಾ ಪಂಚಾಯತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷನು ಸೇರಿ ಏಳನ್ನು ಮೀರದಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆಯನ್ನು ಜಿಲ್ಲಾ ಪಂಚಾಯತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯಿ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು:

ಪರಂತು ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಇವುಗಳಲ್ಲಿ ಯಾವುದು ಹೆಚ್ಚಿನ ಸಂಖ್ಯೆಯ ಚುನಾಯಿತ ಸದಸ್ಯರನ್ನು ಹೊಂದಿರುವುದೋ ಅದರ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(2ಎ) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ, ಸ್ಥಾಯಿ ಸಮಿತಿಯ ಪ್ರತಿಯೊಬ್ಬ ಸದಸ್ಯನ ಹುದ್ದೆಯ ಅವಧಿಯು ಆತನನ್ನು ಚುನಾಯಿಸಿದ ದಿನಾಂಕದಿಂದ ಇಪ್ಪತ್ತು ತಿಂಗಳು ಅಥವಾ ಅವನು ಜಿಲ್ಲಾ ಪಂಚಾಯತಿಯ ಸದಸ್ಯನಾಗಿರುವುದು ನಿಂತು ಹೋಗುವವರೆಗೆ, ಇದರಲ್ಲಿ ಯಾವುದು ಮೊದಲೋ ಆ ಅವಧಿ ಆಗಿರತಕ್ಕದ್ದು.][1]

1. 1996ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 23-09-1996ರಿಂದ ಸೇರಿಸಲಾಗಿದೆ.

[1][(3) ಅಧ್ಯಕ್ಷನು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷನು ಆಗಿರತಕ್ಕದ್ದು. ಉಪಾಧ್ಯಕ್ಷನು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷನು ಆಗಿರತಕ್ಕದ್ದು. ಇತರ ಸ್ಥಾಯಿ ಸಮಿತಿಗಳು ತಮ್ಮ ಸದಸ್ಯರುಗಳ ಪೈಕಿ ಒಬ್ಬರನ್ನು ಅಧ್ಯಕ್ಷನನ್ನಾಗಿ ಚುನಾಯಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(4) ಜಿಲ್ಲಾ ಪಂಚಾಯತಿಯ ಯಾವ ಸದಸ್ಯನೂ ಎರಡಕ್ಕಿಂತ ಹೆಚ್ಚು ಸ್ಥಾಯಿ ಸಮಿತಿಗಳಲ್ಲಿ ಸೇವೆ ಸಲ್ಲಿಸಲು ಅರ್ಹನಾಗಿರತಕ್ಕದ್ದಲ್ಲ.

(5) ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಅವರು ಉಳಿದ ಪ್ರತಿಯೊಂದು ಸ್ಥಾಯಿ ಸಮಿತಿಗಾಗಿ ಉಪಕಾರ್ಯದರ್ಶಿಗಳನ್ನು ಪದನಿಮಿತ್ತ ಕಾರ್ಯದರ್ಶಿಯಾಗಿ ನಾಮನಿರ್ದೇಶನಮಾಡತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಎಲ್ಲಾ ಸ್ಥಾಯಿ ಸಮಿತಿಗಳ ಸಭೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವರಾಗಿರತಕ್ಕದ್ದು.

**187. ಸ್ಥಾಯಿ ಸಮಿತಿಗಳ ಪ್ರಕಾರ್ಯಗಳು.**- (1) ಸಾಮಾನ್ಯ ಸ್ಥಾಯಿ ಸಮಿತಿಯು ಸಿಬ್ಬಂದಿ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ಮತ್ತು ಸಂಪರ್ಕ, ಕಟ್ಟಡಗಳು, ಗ್ರಾಮೀಣ ಗೃಹ ನಿರ್ಮಾಣ, ಗ್ರಾಮ ವಿಸ್ತರಣೆ, ಪ್ರಕೃತಿ ವಿಕೋಪಗಳಿಗಾಗಿ ಪರಿಹಾರ ಹಾಗೂ ಸಂಬಂಧಪಟ್ಟ ವಿಷಯಗಳ ಮತ್ತು ಉಳಿದ ಎಲ್ಲಾ ಸಂಕೀರ್ಣ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನೆರವೇರಿಸತಕ್ಕದ್ದು.-

(2) ಹಣಕಾಸು ಮತ್ತು ಯೋಜನಾ ಸಮಿತಿಯು,-

(ಎ) ಜಿಲ್ಲಾ ಪಂಚಾಯತಿಯ ಹಣಕಾಸು, ಬಜೆಟ್ ರೂಪಿಸುವುದು, ಆದಾಯ ಹೆಚ್ಚಿಸುವುದಕ್ಕಾಗಿ ಪ್ರಸ್ತಾವಗಳ ಪರಿಶೀಲನೆ ಮತ್ತು ಜಮೆ ಹಾಗೂ ಖರ್ಚುಗಳ ವಿವರ ಪತ್ರಗಳ ಪರಿಶೀಲನೆ, ಜಿಲ್ಲಾ ಪಂಚಾಯತಿಯ ಹಣಕಾಸಿನ ಮೇಲೆ ಪ್ರಭಾವವನ್ನು ಬೀರುವ ಎಲ್ಲ ಪ್ರಸ್ತಾವಗಳ ಪರ್ಯಾಲೋಚನೆ ಮತ್ತು ಜಿಲ್ಲಾ ಪಂಚಾಯತಿಯ ಆದಾಯ ಮತ್ತು ವೆಚ್ಚದ ಸಾಮಾನ್ಯ ಮೇಲ್ವಿಚಾರಣೆಗಳಿಗೆ ಸಂಬಂಧಪಟ್ಟ,

(ಬಿ) ಯೋಜನಾ ಆದ್ಯತೆಗಳು ಅಭಿವೃದ್ಧಿಗಳಿಗೆ ತಗಲುವ ವೆಚ್ಚಗಳನ್ನು ನಿಗದಿಪಡಿಸುವುದು, ಸಂಬಂಧಪಟ್ಟ ಹಾರಿಜಾಂಟಲ್ ಮತ್ತು ವರ್ಟಿಕಲ್ ಲಿಂಕೇಜ್, ಸರ್ಕಾರವು ಕೊಟ್ಟ ಮಾರ್ಗದರ್ಶನಗಳನ್ನು ಕಾರ್ಯಗತ ಮಾಡುವುದು, ಯೋಜಿತ ಕಾರ್ಯಕ್ರಮಗಳ ನಿಯಮಿತ ಪುನರಾವಲೋಕನ, ಮುಖ್ಯ ಕಾರ್ಯಕ್ರಮಗಳ ಮೌಲ್ಯ ನಿರ್ಣಯ ಮತ್ತು ಸಣ್ಣ ಉಳಿತಾಯ ಯೋಜನೆಗಳಿಗೆ ಸಂಬಂಧಪಟ್ಟ,

-ಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ಸಾಮಾಜಿಕ ನ್ಯಾಯ ಸಮಿತಿಯು,-

(ಎ) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತಾಸಕ್ತಿಗಳ ಸಂವರ್ಧನೆ;

(ಬಿ) ಸಾಮಾಜಿಕ ಅನ್ಯಾಯ ಹಾಗೂ ಎಲ್ಲ ರೀತಿಯ ಶೋಷಣೆಯಿಂದ ಅವರನ್ನು ಸಂರಕ್ಷಿಸುವುದು;

(ಸಿ) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಏಳಿಗೆ; ಮತ್ತು

(ಡಿ) ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಪಂಗಡಗಳಿಗೆ, ಮಹಿಳೆಯರಿಗೆ ಮತ್ತು ಸಮಾಜದ ಇತರ ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವುದು,

-ಇವುಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(4) ಶಿಕ್ಷಣ ಮತ್ತು ಆರೋಗ್ಯ ಸಮಿತಿಯು ಈ ಕೆಳಕಂಡ ಕಾರ್ಯಗಳನ್ನು ನೆರವೇರಿಸತಕ್ಕದ್ದು:-

(ಎ) ಜಿಲ್ಲಾ ಪಂಚಾಯತಿಯ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ಹೊಣೆಗಾರಿಕೆ ಹೊಂದಿರುವುದು;

(ಬಿ) ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ರಾಷ್ಟ್ರೀಯ ಮತ್ತು ರಾಜ್ಯ ಯೋಜನೆಗಳ ಚೌಕಟ್ಟಿನೊಳಗೆ ಜಿಲ್ಲೆಯಲ್ಲಿ ಶಿಕ್ಷಣ ಯೋಜನೆಯನ್ನು ಕೈಗೊಳ್ಳುವುದು;

(ಸಿ) ಜಿಲ್ಲಾ ಪಂಚಾಯತಿಯ ಶೈಕ್ಷಣಿಕ ಚಟುವಟಿಕೆಗಳ ಸಮೀಕ್ಷೆ ಮತ್ತು ಮೌಲ್ಯನಿರ್ಣಯ ಮಾಡುವುದು;

(ಡಿ) ಜಿಲ್ಲಾ ಪಂಚಾಯತಿಯು ತನಗೆ ವಹಿಸಿಕೊಡಬಹುದಾದ ಶಿಕ್ಷಣ, ವಯಸ್ಕರ ಸಾಕ್ಷರತೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಪಟ್ಟ ಇತರ ಕರ್ತವ್ಯಗಳನ್ನು, ನೆರವೇರಿಸತಕ್ಕದ್ದು;

(ಇ) ಆರೋಗ್ಯ ಸೇವೆಗಳು, ಆಸ್ಪತ್ರೆಗಳು, ನೀರು ಸರಬರಾಜು, ಕುಟುಂಬ ಕಲ್ಯಾಣ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(5) ಕೃಷಿ ಮತ್ತು ಕೈಗಾರಿಕಾ ಸಮಿತಿಯು,-

(ಎ) ಕೃಷಿ ಉತ್ಪಾದನೆ, ಪಶು ಸಂಗೋಪನೆ, ಸಹಕಾರ, ಬದು ಕಟ್ಟುವುದು ಮತ್ತು ಭೂಮಿಯನ್ನು ಕೃಷಿಯೋಗ್ಯ ಮಾಡುವುದು,

(ಬಿ) ಗ್ರಾಮ ಹಾಗೂ ಗುಡಿ ಕೈಗಾರಿಕೆಗಳು,

(ಸಿ) ಜಿಲ್ಲಾ ಕೈಗಾರಿಕಾ ಅಭಿವೃದ್ಧಿಯನ್ನು ಉತ್ತೇಜಿಸುವುದು,

-ಇವುಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(6) ಸ್ಥಾಯಿ ಸಮಿತಿಗಳು, ಜಿಲ್ಲಾ ಪಂಚಾಯತಿಯು ಅಧಿಕಾರಗಳನ್ನು ವಹಿಸಿಕೊಡುವಷ್ಟರ ಮಟ್ಟಿಗೆ ಮೇಲೆ ಉಲ್ಲೇಖಿಸಿರುವ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(7) ಸಮಿತಿಗಳು ತಮಗೆ ವಹಿಸಿಕೊಟ್ಟಿರುವ ವಿಷಯಗಳ ಸಂಬಂಧದಲ್ಲಿ ಗೊತ್ತುಪಡಿಸಬಹುದಾದಂಥ ಹೆಚ್ಚಿನ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**188. ಸಮಿತಿಗಳ ಕಾರ್ಯವಿಧಾನ.**- (1) ಜಿಲ್ಲಾ ಪಂಚಾಯತಿಯು ಸಮಿತಿಗಳ ಸದಸ್ಯರ ಚುನಾವಣೆ, ಅವುಗಳ ಕಾರ್ಯಕಲಾಪಗಳ ನಿರ್ವಹಣೆ ಮತ್ತು ಅವುಗಳಿಗೆ ಸಂಬಂಧಪಟ್ಟ ಎಲ್ಲ ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ವಿನಿಯಮಗಳನ್ನು ರಚಿಸಬಹುದು.

(2) ಪ್ರತಿಯೊಂದು ಸಮಿತಿಯ ಅಧ್ಯಕ್ಷನು, ಆ ಸಮಿತಿಯ ಕೆಲಸಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿಯ ಕಛೇರಿಯಿಂದ ಯಾವುದೇ ಮಾಹಿತಿ, ವಿವರಣಾಪಟ್ಟಿ, ವಿವರಪತ್ರ, ಅಥವಾ ವರದಿಯನ್ನು ತರಿಸಿಕೊಳ್ಳಲು ಮತ್ತು ಜಿಲ್ಲಾ ಪಂಚಾಯತಿಯ ಯಾವುದೇ ಸ್ಥಿರಸ್ವತ್ತನ್ನು ಅಥವಾ ಸಮಿತಿಯ ಕೆಲಸಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಕಾಮಗಾರಿಯನ್ನು ಪ್ರವೇಶಿಸಲು ಮತ್ತು ಅದನ್ನು ಪರಿಶೀಲಿಸಲು ಹಕ್ಕುಳ್ಳವನಾಗಿರತಕ್ಕದ್ದು.

(3) ಪ್ರತಿಯೊಂದು ಸಮಿತಿಯು, ಸಮಿತಿಯ ಕೆಲಸಕ್ಕೆ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯ ಯಾವನೇ ಅಧಿಕಾರಿಯು ಅದರ ಸಭೆಗಳಲ್ಲಿ ಹಾಜರಿರುವಂತೆ ಅಗತ್ಯಪಡಿಸಲು ಹಕ್ಕುಳ್ಳದ್ದಾಗಿರತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಮಿತಿಯ ಸೂಚನೆಯ ಮೇರೆಗೆ ನೋಟೀಸುಗಳನ್ನು ಕೊಡತಕ್ಕದ್ದು ಮತ್ತು ಆ ಅಧಿಕಾರಿಯು ಹಾಜರಾಗುವಂತೆ ನೋಡಿಕೊಳ್ಳತಕ್ಕದ್ದು.

**189. ಅಧಿಕಾರಗಳ ಪ್ರತ್ಯಾಯೋಜನೆ.**- ಜಿಲ್ಲಾ ಪಂಚಾಯತಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಜಿಲ್ಲಾ ಪಂಚಾಯತಿಗಳಿಗೆ ವಹಿಸಿರುವ ಯಾವುವೇ ಅಧಿಕಾರಗಳನ್ನು, ಅಧಿಸೂಚನೆಯ ಮೂಲಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಇತರ ಅಧಿಕಾರಿಗೆ ವಹಿಸಿಕೊಡಬಹುದು.

**190. ರಸ್ತೆಯನ್ನು ಮಾರ್ಗಪಲ್ಲಟ ಮಾಡುವ, ಮುಂದುವರಿಸದಿರುವ ಅಥವಾ ಮುಚ್ಚುವ ಅಧಿಕಾರ.**- (1) ಜಿಲ್ಲಾ ಪಂಚಾಯತಿಯು ಅಧಿಸೂಚನೆಯ ಮೂಲಕ, ಜಿಲ್ಲಾ ಪಂಚಾಯತಿಯ ನಿಯಂತ್ರಣಕ್ಕೆ ಮತ್ತು ಆಡಳಿತಕ್ಕೆ ಒಳಪಟ್ಟಿರುವ ಅಥವಾ ಅದರಲ್ಲಿ ನಿಹಿತವಾಗಿರುವ ಯಾವುದೇ ರಸ್ತೆಯನ್ನು ಬೇರೆ ಕಡೆಗೆ ತಿರುಗಿಸಬಹುದು. ಮಾರ್ಗಪಲ್ಲಟ ಮಾಡಬಹುದು, ಬಳಸುವುದನ್ನು ನಿಲ್ಲಿಸಬಹುದು ಅಥವಾ ಖಾಯಂ ಆಗಿ ಮುಚ್ಚಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ ಜಿಲ್ಲಾ ಪಂಚಾಯತಿಯು, ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸುವ ಪ್ರಸ್ತಾವದ ನೋಟೀಸನ್ನು ಪ್ರಕಟಿಸತಕ್ಕದ್ದು ಮತ್ತು ಹಾಗೆ ಸ್ವೀಕರಿಸಿದ ಯಾವುವೇ ಆಕ್ಷೇಪಣೆಗಳನ್ನು ಪರಿಶೀಲಿಸತಕ್ಕದ್ದು.

**191. ಜಿಲ್ಲಾ ಪಂಚಾಯತಿಯ ಸಾಮಾನ್ಯ ಅಧಿಕಾರಗಳು.**- (1) ಜಿಲ್ಲಾ ಪಂಚಾಯತಿಯು, ತನಗೆ ವಹಿಸಿಕೊಟ್ಟಿರುವ ಅಥವಾ ಪ್ರತ್ಯಾಯೋಜಿಸಿರುವ ಕಾರ್ಯಗಳನ್ನು ನಿರ್ವಹಿಸಲು ಮತ್ತು ಅದರಲ್ಲೂ ಮುಖ್ಯವಾಗಿ ಈ ಅಧಿನಿಯಮದ ಅಡಿಯಲ್ಲಿ ಚಲಾಯಿಸಬೇಕಾದ ಅಧಿಕಾರಗಳಿಗೆ ಬಾಧಕವಾಗದಂತೆ ಅವಶ್ಯವಿರುವ ಮತ್ತು ಆನುಷಂಗಿಕವಾದ ಎಲ್ಲ ಕಾರ್ಯಗಳನ್ನು ಮಾಡುವುದಕ್ಕೆ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಜಿಲ್ಲಾ ಪಂಚಾಯತಿಯು, –

(ಎ) ತನ್ನ ಅಧಿಕಾರ ವ್ಯಾಪ್ತಿಯಿಂದ ಹೊರಗಿರುವ ಶಿಕ್ಷಣ ಅಥವಾ ವೈದ್ಯಕೀಯ ಪರಿಹಾರದ ಸಂಬಂಧದ ವೆಚ್ಚವನ್ನು ವಹಿಸಬಹುದು;

(ಬಿ) ಜಿಲ್ಲೆಯ ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ, ಸುಖ, ಸೌಖ್ಯ, ಸೌಕರ್ಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ಅಥವಾ ಸಾಂಸ್ಕೃತಿಕ ಉನ್ನತಿಯನ್ನು ವೃದ್ಧಿಸುವಂತಹ ಯಾವುದೇ ಕಾರ್ಯವನ್ನು ಅಥವಾ ಕ್ರಮವನ್ನು ಕಾರ್ಯಗತಗೊಳಿಸುವುದಕ್ಕಾಗಿ ವ್ಯವಸ್ಥೆ ಮಾಡಬಹುದು;

(ಸಿ) ಸ್ಥಳೀಯ ಸರ್ಕಾರದ ಸಂವರ್ಧನೆಗೆ ಸಂಬಂಧಿಸಿದ ಅಖಿಲಭಾರತ ಮಟ್ಟದ, ರಾಜ್ಯ ಮಟ್ಟದ ಅಥವಾ ಅಂತರರಾಜ್ಯಮಟ್ಟದ ಸಂಘಗಳಿಗೆ ಮತ್ತು ಗ್ರಾಮಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಮತ್ತು ಜಿಲ್ಲಾ ಪಂಚಾಯತಿಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಯೊಳಗೆ ನಡೆಯುವ ವಸ್ತು ಪ್ರದರ್ಶನಗಳಿಗೆ, ವಿಚಾರ ಸಂಕಿರಣಗಳಿಗೆ ಮತ್ತು ಸಮ್ಮೇಳನಗಳಿಗೆ ವಂತಿಗೆ ಕೊಡಬಹುದು;

(ಡಿ) ಸದರಿ ನಿಕಾಯಗಳ ಯಾವುದೇ ಕಾರ್ಯಕ್ಕೆ ಸಂಬಂಧಪಟ್ಟಂಥ ಯಾವುದೇ ಚಟುವಟಿಕೆಯನ್ನು ಜಿಲ್ಲೆಯಲ್ಲಿ ನಡೆಸುವುದಕ್ಕಾಗಿ ಯಾವನೇ ವ್ಯಕ್ತಿಗೆ ಹಣಕಾಸಿನ ಅಥವಾ ಇತರ ನೆರವನ್ನು ಕೊಡಬಹುದು.

[1][(ಇ) ಜಿಲ್ಲಾ ಪಂಚಾಯತಿಯು, ಅನುಸೂಚಿ-IIIರಲ್ಲಿ ನಮೂದಿಸಿರುವ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಸರ್ಕಾರದಿಂದ ಹಂಚಿಕೆಯಾದ ನಿಧಿಗಳೊಂದಿಗೆ ತನಗೆ ವಹಿಸಿಕೊಟ್ಟಿರುವ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(i) ಗ್ರಾಮದಲ್ಲಿ ವಾಸಿಸುತ್ತಿರುವ ಎಲ್ಲ ನಿವಾಸಿಗಳ ಸುರಕ್ಷತೆ, ಸುಭದ್ರತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಖಚಿತಪಡಿಸಲು ತಾಲೂಕು ಮತ್ತು ಗ್ರಾಮ ಪಂಚಾಯತಿಗಳಿಗೆ ನೆರವು ನೀಡುವುದು.

(ii) ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಜಿಲ್ಲಾ ಮಟ್ಟದಲ್ಲಿರುವ ಜಿಲ್ಲಾ ಆಸ್ಪತ್ರೆಗಳನ್ನು ನಿರ್ವಹಿಸುವುದು ಮತ್ತು ಜಿಲ್ಲಾ ಮಟ್ಟದಲ್ಲಿ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅವರನ್ನು ಸಬಲರನ್ನಾಗಿ ಮಾಡುವ ಕಾರ್ಯಕ್ರಮಗಳೂ ಸೇರಿದಂತೆ ವಿಶೇಷ ಪ್ರವರ್ಗಗಳ ಹಾಗೂ ವಿಕಲಚೇತನರ ಬಗ್ಗೆ ಕಾಳಜಿ ವಹಿಸುವತ್ತ ಯುಕ್ತ ಗಮನ ನೀಡುವುದರೊಂದಿಗೆ ಅಗತ್ಯವಿರುವ ಎಲ್ಲ ಪೂರಕ ಪ್ರಕಾರ್ಯಗಳನ್ನು ನಿರ್ವಹಿಸುವುದು.

(iii) ಪ್ರಥಮ ದರ್ಜೆ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು, ಕೈಗಾರಿಕಾ ತರಬೇತಿ ಸಂಸ್ಥೆಗಳು, ಆಶ್ರಮ ಶಾಲೆಗಳು, ವಸತಿ ನಿಲಯಗಳು, ಅನಾಥಾಶ್ರಮಗಳು, ಯುವಜನತೆ ಮತ್ತು ಗ್ರಾಮೀಣ ಕುಶಲಕರ್ಮಿಗಳಿಗಾಗಿ ಸರ್ಕಾರಿ ಕೈಗಾರಿಕಾ, ತಾಂತ್ರಿಕ ಮತ್ತು ವೃತ್ತಿ ತರಬೇತಿ ಸಂಸ್ಥೆಗಳು ಹಾಗೂ ಶೈಕ್ಷಣಿಕ ಕೇಂದ್ರಗಳನ್ನು ನಿರ್ವಹಿಸುವುದು ಮತ್ತು ಅಂತರ್ಜಾಲ ಸೌಕರ್ಯಗಳುಳ್ಳ ಗ್ರಂಥಾಲಯಗಳ ಮೂಲಕ ಮಾಹಿತಿಯನ್ನು ಪಡೆಯಲು ಅವಕಾಶವನ್ನು ಕಲ್ಪಿಸುವುದು.

(iv) ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಮತ್ತು ಅವುಗಳನ್ನು ಬಲಪಡಿಸಲು ತಾಲೂಕು ಮತ್ತು ಗ್ರಾಮ ಪಂಚಾಯತಿಗಳಿಗೆ ನೆರವು ನೀಡುವುದು, ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಉತ್ತೇಜನ ನೀಡುವುದು, ಆಹಾರ ದಾಸ್ತಾನು, ಸಂಸ್ಕರಣೆ ಹಾಗೂ ಮಾರುಕಟ್ಟೆ ಮಳಿಗೆಗಳನ್ನು ಸ್ಥಾಪಿಸುವುದು ಮತ್ತು ಸ್ವಯಂ ಉದ್ಯೋಗಾವಕಾಶಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಉದ್ಯಮಗಳು ಹಾಗೂ ಸಹಕಾರ ಸಂಘ ಸಂಸ್ಥೆಗಳ ಮೂಲಕ ಬಡತನವನ್ನು ನಿವಾರಿಸುವುದು.

(v) ಮಹಿಳೆಯರು ನಡೆಸುವ ಸಣ್ಣಪುಟ್ಟ ವ್ಯವಹಾರಗಳು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಉತ್ತೇಜಿಸಲು ತಾಲೂಕು ಮಟ್ಟದಲ್ಲಿ ಮಹಿಳಾ ಸಹಕಾರಿ ಬ್ಯಾಂಕುಗಳು ಅಥವಾ

ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸಲು ತಾಲೂಕು ಪಂಚಾಯತಿಗಳಿಗೆ ಉತ್ತೇಜನ ಮತ್ತು ಬೆಂಬಲ ನೀಡುವುದು.

(vi) ಪ್ರದೇಶದ ಜೀವ ವೈವಿಧ್ಯತೆ ಮತ್ತು ಜೀವಿ ಪರಿಸರವನ್ನು ಸಂರಕ್ಷಿಸಲು, ಕಾಪಾಡಲು ಮತ್ತು ಪೋಷಿಸುವ ನಿಟ್ಟಿನಲ್ಲಿ ತಾಂತ್ರಿಕ ಮತ್ತು ಮೂರ್ತ ಸ್ವರೂಪದ ಬೆಂಬಲವನ್ನು ನೀಡುವ ಮೂಲಕ ತಾಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ನೆರವು ನೀಡುವುದು ಮತ್ತು ಸಾಮಾಜಿಕ ಅರಣ್ಯವನ್ನು ನಿರ್ಮಿಸುವ ನಿಟ್ಟಿನಲ್ಲಿ ಯೋಜಿಸುವುದು ಮತ್ತು ಬಹುಹಳ್ಳಿಗಳ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಸ್ಥಾವರಗಳನ್ನು ನಿರ್ವಹಿಸುವುದು ಮತ್ತು ವಿಶೇಷವಾಗಿ ಬೇಸಿಗೆಕಾಲದಲ್ಲಿ ಸಾಕಷ್ಟು ಕುಡಿಯುವ ನೀರನ್ನು ಖಾತ್ರಿಪಡಿಸಲು ಕುಡಿಯುವ ನೀರಿನ ಬಾವಿಗಳ ಆಸುಪಾಸಿನಲ್ಲಿ ನೀರಾವರಿ ಕೊಳವೆ ಬಾವಿಗಳ ಕೊರೆಯುವುದನ್ನು ತಡೆಗಟ್ಟುವುದು.

(vii) ಜಿಲ್ಲಾ ಮಟ್ಟದಲ್ಲಿ ಜಾತ್ರೆಗಳನ್ನು, ಮೇಳಗಳನ್ನು ಮತ್ತು ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ಗ್ರಾಮೀಣ ಕೃಷಿ ಮತ್ತು ಕೈಗಾರಿಕಾ ಉತ್ಪನ್ನಗಳು, ಉತ್ಪತ್ತಿ ಮತ್ತು ಜಾನುವಾರುಗಳ ವ್ಯಾಪಾರವನ್ನು ಉತ್ತೇಜಿಸುವುದು.

(viii) ಶುದ್ಧ ಕುಡಿಯುವ ನೀರು, ಶೌಚಾಲಯಗಳು ಮತ್ತು ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ತಾಲೂಕು ಮತ್ತು ಗ್ರಾಮ ಪಂಚಾಯತಿಗಳನ್ನು ಸದೃಢಗೊಳಿಸುವುದು ಮತ್ತು ಈ ಮುಂದಿನವುಗಳಿಗಾಗಿ ತಾಂತ್ರಿಕ ನೆರವನ್ನು ಒದಗಿಸುವುದೂ ಸೇರಿದಂತೆ ಅದನ್ನು ಖಾತರಿಪಡಿಸಲು ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವುದು, ಎಂದರೆ:–

(ಎ) ಕುಡಿಯುವ ನೀರಿನ ಬಾವಿಗಳಲ್ಲಿ ನೀರಿನ ಲಭ್ಯತೆಯನ್ನು ಖಚಿತಪಡಿಸಲು ಅಂತರ್ಜಲ ಮರುಪೂರಣ ಸಂರಚನೆಗಳನ್ನು ನಿರ್ಮಿಸುವುದು ;

(ಬಿ) ಕುಡಿಯುವ ನೀರಿನ ಯೋಜನೆಗಳನ್ನು ನಿರ್ವಹಿಸುವುದು, ನೀರು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸುವುದು ಮತ್ತು ಅಂತರ್ಜಲ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು; ಮತ್ತು

(ಸಿ) ಸಣ್ಣ ನೀರಾವರಿ ಯೋಜನೆಗಳನ್ನು ಮತ್ತು ಸಾಂಪ್ರದಾಯಿಕ ಹಾಗೂ ಸಾಂಪ್ರದಾಯಿಕವಲ್ಲದ ಇಂಧನ ಮಾರಾಟವೂ ಸೇರಿದಂತೆ ಸಾಂಪ್ರದಾಯಿಕ ಹಾಗೂ ಸಾಂಪ್ರದಾಯಿಕವಲ್ಲದ ಇಂಧನ ಘಟಕಗಳನ್ನು ನಿರ್ವಹಿಸುವುದು.

(ix) ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯತಿಗಳ ಉಪಯೋಗಕ್ಕಾಗಿ ನಿರ್ಮಿಸುವ ಮನೆ, ಶಾಲೆಗಳ ನಿರ್ಮಾಣ ಹಾಗೂ ಎಲ್ಲ ಲೋಕೋಪಯೋಗಿ ಕಾಮಗಾರಿಗಳನ್ನು ನಿರ್ವಹಿಸಲು ಕಡಿಮೆ ವೆಚ್ಚದ, ದೇಶೀಯ, ಕಾರ್ಯಸಾಧ್ಯವಾದ ಹಾಗೂ ಸುಸ್ಥಿರವಾದ ತಾಂತ್ರಿಕತೆಗಳನ್ನು ಗುರುತಿಸುವುದು, ದಾಖಲಿಸುವುದು ಹಾಗೂ ಪ್ರಚಾರ ಮಾಡುವುದು ಮತ್ತು ರಸ್ತೆ, ಸೇತುವೆಗಳು, ಅಡಿಗಾಲುವೆಗಳು, ಚರಂಡಿಗಳು, ಮೊದಲಾದವುಗಳ ಬಗ್ಗೆ ಯೋಜನೆ ರೂಪಿಸುವುದು, ನಿರ್ಮಾಣ ಮಾಡುವುದು ಮತ್ತು ನಿರ್ವಹಿಸುವುದು ಮತ್ತು ಜಿಲ್ಲಾ ಮಟ್ಟದಲ್ಲಿ ದೋಣಿಗಳು, ದೋಣಿ ದಾಟುವ ಸ್ಥಳಗಳು ಮತ್ತು ಜಲ ಮಾರ್ಗಗಳನ್ನು ನಿರ್ವಹಿಸುವುದು ;

(x) ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಹಾಗೂ ಗ್ರಾಮಗಳಲ್ಲಿ ಸಾಂಕ್ರಾಮಿಕ ರೋಗ ಮತ್ತು ವಿಪತ್ತು ನಿರ್ವಹಣಾ ವ್ಯವಸ್ಥೆಗಳು ಹಾಗೂ ವಿಪತ್ತು ನಿರ್ವಹಣಾ ಸಿದ್ಧತೆಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನೆರವು ನೀಡುವುದು ಮತ್ತು ಅಪಾಯಗಳನ್ನು ನಿರ್ಧರಿಸುವುದು ಮತ್ತು ಸಂಭವನೀಯ ಎಲ್ಲ ಬಗೆಯ ವಿಪತ್ತುಗಳಿಗೆ ವೈದ್ಯಕೀಯ ಮತ್ತಿತರ ಅಗತ್ಯತೆಗಳಾದಂಥ ಸಾಮರ್ಥ್ಯ ಸಂವರ್ಧನೆ ಮತ್ತು ಸಂಪನ್ಮೂಲ ಲಭ್ಯತೆಯನ್ನೊಳಗೊಂಡ ವಿಪತ್ತು ನಿರ್ವಹಣಾ ನೀತಿ ನಿಯಮಾವಳಿಗಳನ್ನು ರೂಪಿಸುವುದು ಮತ್ತು ತಾಲೂಕು ಹಾಗೂ ಗ್ರಾಮ ಪಂಚಾಯತಿಗಳು, ಸರ್ಕಾರೇತರ ಸಂಘಸಂಸ್ಥೆಗಳು ಮತ್ತು ಸಂಬಂಧಪಟ್ಟ ಕ್ಷೇತ್ರಗಳ ತಜ್ಞರ ಸಹಕಾರ ಮತ್ತು ಸಹಯೋಗವನ್ನು ಪಡೆಯುವುದು .

(xi) ಜಿಲ್ಲಾ ಮಟ್ಟದಲ್ಲಿ ಸಮಾಜದ ಎಲ್ಲ ವರ್ಗಗಳ ಪರಂಪರಾನುಗತ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಲಾ ಪ್ರಕಾರಗಳು, ಕ್ರೀಡೆಗಳು, ಕರಕುಶಲಗಳ ಕಲೆಗಳು, ಕೌಶಲಗಳು ಮತ್ತು ಆಚರಣೆಗಳನ್ನು ಉತ್ತೇಜಿಸುವುದು, ಜೋಪಾನ ಮಾಡುವುದು ಮತ್ತು ಪ್ರದರ್ಶಿಸುವುದು.

(xii) ಸಂಬಂಧಪಟ್ಟ ಎಲ್ಲಾ ಸಮಾಜೋ – ಆರ್ಥಿಕ ಮಾಹಿತಿಯ ಡೇಟಾಬೇಸನ್ನು ಕ್ರೋಢೀಕರಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ವಹಿಸುವುದು ಮತ್ತು ಪ್ರದೇಶದಲ್ಲಿರುವ ಎಲ್ಲ ಸ್ವಾಭಾವಿಕ ಹಾಗೂ ಇತರ ಸಂಪನ್ಮೂಲಗಳು ಮತ್ತು ಆಸ್ತಿಗಳ ನಕ್ಷೆಯನ್ನು ರೂಪಿಸುವುದು ಮತ್ತು ಪ್ರತಿಯೊಂದು ಗ್ರಾಮ ಪಂಚಾಯತಿಗಳಲ್ಲಿ ನಡೆಸಲಾಗುವ ಸಮೀಕ್ಷೆಗಳು ಮತ್ತು ಸಹಭಾಗಿತ್ವ ಗ್ರಾಮೀಣ ಪರಾಮರ್ಶೆಗಳ ಫಲಿತಾಂಶವಾಗಿ ಪಡೆಯುವ ಮಾಹಿತಿ ಮತ್ತು ಪ್ರತಿಯೊಂದು ತಾಲೂಕು ಹಾಗೂ ಜಿಲ್ಲಾ ಪಂಚಾಯತಿಯು ನಡೆಸುವ ಸಮೀಕ್ಷೆಗಳು ಮತ್ತು ದತ್ತಾಂಶ ಸಂಗ್ರಹಣೆಯೂ ಸೇರಿದಂತೆ ಅವುಗಳನ್ನು ನಿಯತಕಾಲಿಕವಾಗಿ ಇಂದೀಕರಿಸಿ ಅಳವಡಿಸತಕ್ಕದ್ದು.

(xiii) ತನ್ನ ವ್ಯಾಪ್ತಿಯ ಒಳಗಡೆ ಶಿಕ್ಷಣ ಅಥವಾ ವೈದ್ಯಕೀಯ ಪರಿಹಾರದ ಮೇಲೆ ಮಾಡಿರುವ ವೆಚ್ಚವನ್ನು ಭರಿಸುವುದು;

(xiv) ಜಿಲ್ಲೆಯ ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ, ಸವಲತ್ತು, ಅನುಕೂಲ ಅಥವಾ ಸಾಮಾಜಿಕ ಅಥವಾ ಆರ್ಥಿಕ ಅಥವಾ ಸಾಂಸ್ಕೃತಿಕ ಹಿತಾಸಕ್ತಿಯನ್ನು ಉತ್ತೇಜಿಸುವಂಥ ಯಾವುದೇ ಕಾಮಗಾರಿಯನ್ನು ಕೈಗೊಳ್ಳಲು ಅಥವಾ ತತ್ಸಂಬಂಧ ಕ್ರಮಕೈಗೊಳ್ಳಲು ಅವಕಾಶ ಕಲ್ಪಿಸುವುದು;

(xv) ಸ್ಥಳೀಯ ಸ್ವಯಂ ಸರ್ಕಾರದ ಪ್ರವರ್ತನೆಗೆ ಸಂಬಂಧಪಟ್ಟಂತೆ ರಾಷ್ಟ್ರ, ರಾಜ್ಯ ಅಥವಾ ಅಂತರರಾಜ್ಯ ಮಟ್ಟ ಎಲ್ಲ ಸಂಘಸಂಸ್ಥೆಗಳಿಗೆ ಮತ್ತು ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಜಿಲ್ಲಾ

ಪಂಚಾಯತಿಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಯೊಳಗಿನ ವಸ್ತು ಪ್ರದರ್ಶನಗಳು, ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳನ್ನು ನಡೆಸಲು, ಸಂಬಂಧಪಟ್ಟ ಕೊಡುಗೆಯನ್ನು ನೀಡುವುದು;

(xvi) ಸದರಿ ಸಂಸ್ಥೆಯ ಯಾವುದೇ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಮೇಲೆ ನಿರ್ದಿಷ್ಟಪಡಿಸಿರುವಂಥ ಯಾವುದೇ ಕಾರ್ಯಚಟುವಟಿಕೆಯನ್ನು ಜಿಲ್ಲೆಯಲ್ಲಿ ನಡೆಸಲು ಯಾವೊಬ್ಬ ವ್ಯಕ್ತಿಗೆ ಹಣಕಾಸಿನ ಅಥವಾ ಇನ್ನಿತರ ನೆರವನ್ನು ಒದಗಿಸುವುದು; ಮತ್ತು

(xvii) ಪ್ರದೇಶದ ನಿವಾಸಿಗಳಿಗೆ ಕಿರುಕುಳವನ್ನು ಉಂಟುಮಾಡುವ ಅಥವಾ ಅಪಾಯವನ್ನುಂಟು ಮಾಡುವ ಅಕ್ರಮ ಗಣಿಗಾರಿಕೆ, ಕೊಳವೆ ಬಾವಿಗಳನ್ನು ಕೊರೆಯುವುದು, ತೆರೆದ ಬಾವಿಗಳು ಅಥವಾ ಕೆರೆಗಳನ್ನು ತೋಡುವ ಕೃತ್ಯಗಳನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಮಾಡುವುದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**192. ನಿರ್ವಹಿಸಲಾಗದ ಸಂಚಾರ ನಿಯಂತ್ರಣ.-** 1960ರ ಕರ್ನಾಟಕ ಸಂಚಾರ ನಿಯಂತ್ರಣ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಜಿಲ್ಲಾ ಪಂಚಾಯತಿಯು, ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಮತ್ತು ಜಿಲ್ಲಾ ಪಂಚಾಯತಿಯು ರಚಿಸಿದ ವಿನಿಯಮಗಳಿಗೊಳಪಟ್ಟು ತನ್ನಲ್ಲಿ ನಿಹಿತವಾಗಿರುವ ಯಾವುದೇ ರಸ್ತೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ನೀಡಿದ ಲೈಸೆನ್ಸ್ ಮೇರೆಗೆ ಹೊರತು ಮತ್ತು ವೇಗ, ಕಾಲ, ಫೀಜು, ಎಳೆಯುವ ರೀತಿ ಅಥವಾ ಚಲನ ರೀತಿ, ರಸ್ತೆ ಮಾರ್ಗದ ಸಂರಕ್ಷಣೆಗಾಗಿ ಸಲಕರಣೆಗಳು, ದೀಪಗಳ ಸಂಖ್ಯೆ ಮತ್ತು ಸಹಾಯಕರು ಮತ್ತು ಇತರ ಸಾಮಾನ್ಯ ಮುನ್ನೆಚ್ಚರಿಕೆಗಳ ಬಗ್ಗೆ ಕಾಲಕಾಲಕ್ಕೆ ರಚಿಸಿದ ವಿನಿಯಮಗಳಿಗನುಸಾರವಾಗಲ್ಲದೆ, ರಸ್ತೆ ಮಾರ್ಗಕ್ಕೆ ಅಥವಾ ಅದರ ಮೇಲಿರುವ ಯಾವುದೇ ನಿರ್ಮಾಣಕ್ಕೆ ಹಾನಿಯುಂಟು ಮಾಡುವ ಅಥವಾ ಇತರ ವಾಹನಗಳಿಗೆ ಅಥವಾ ಪಾದಚಾರಿಗಳಿಗೆ ಅಪಾಯ ಅಥವಾ ಅಡ್ಡಿ ಉಂಟುಮಾಡುವ ಸಂಭವವಿದೆ ಎಂದು ಭಾವಿಸಬಹುದಾದಂಥ ನಮೂನೆಯ ರಚನೆಯ ಭಾರದ ಅಥವಾ ಗಾತ್ರದ ಅಥವಾ ಯಂತ್ರಸಾಮಗ್ರಿಗಳ ಅಥವಾ ಇತರ ಅತಿಭಾರದ ವಸ್ತುಗಳನ್ನು ಹೊತ್ತಿರುವ ಯಾವುದೇ ವಾಹನವನ್ನು ಬಳಸತಕ್ಕದ್ದಲ್ಲವೆಂದು ಅಧಿಸೂಚಿಸಬಹುದು.

**193. ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು.-** [1][ಅಧ್ಯಕ್ಷನು ಜಿಲ್ಲಾ ಪಂಚಾಯತಿಯ ಕಾರ್ಯನಿರ್ವಾಹಕ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಅವನು][1],-

1. 1996ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 29-11-1995ರಿಂದ ಪ್ರತಿಯೋಜಿಸಲಾಗಿದೆ.

(ಎ) ಜಿಲ್ಲಾ ಪಂಚಾಯತಿಯ ಸಭೆಗಳನ್ನು ಕರೆಯತಕ್ಕದ್ದು, ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ನಡೆಸತಕ್ಕದ್ದು;

(ಬಿ) ಅಧ್ಯಕ್ಷನು ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ವಿಧಿಸಿದ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ವಹಿಸಿಕೊಟ್ಟಿರುವ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಅಥವಾ ಸರ್ಕಾರವು ಕಾಲಕಾಲಕ್ಕೆ ವಹಿಸಿಕೊಟ್ಟಿರುವ ಕಾರ್ಯಗಳನ್ನು ನೆರವೇರಿಸತಕ್ಕದ್ದು;

[1][(ಸಿ) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳ ಉಪಬಂಧಗಳಿಗೆ ಅಸಂಗತವಲ್ಲದ ಜಿಲ್ಲಾ ಪಂಚಾಯತಿಯ ಅಥವಾ ಸ್ಥಾಯಿ ಸಮಿತಿಗಳ ನಿರ್ಣಗಳು ಅಥವಾ ತೀರ್ಮಾನಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆ ಅಂತಹ ಆಡಳಿತಾತ್ಮಕ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ನಡೆಸತಕ್ಕದ್ದು][1]

1. ಸಿ ಖಂಡವನ್ನು 1996ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 29-11-1995ರಿಂದ ಬಿಟ್ಟುಬಿಡಲಾಗಿದ್ದು ನಂತರ 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಡಿ) ಜಿಲ್ಲಾ ಪಂಚಾಯತಿಯ ಹಣಕಾಸಿನ ವಿಷಯಗಳ ಹಾಗೂ ಕಾರ್ಯನಿರ್ವಹಣಾ ಆಡಳಿತದ ಸಮಗ್ರ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ಜಿಲ್ಲಾ ಪಂಚಾಯತಿಯ ಆದೇಶ ಅಗತ್ಯವಿದೆ ಎಂದು ತನಗೆ ಕಂಡುಬಂದ ವಿಷಯಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಜಿಲ್ಲಾ ಪಂಚಾಯತಿಯ ಮುಂದಿಡತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಜಿಲ್ಲಾ ಪಂಚಾಯತಿಯ ದಾಖಲೆಗಳನ್ನು ತರಿಸಿಕೊಳ್ಳಬಹುದು; ಮತ್ತು

(ಇ) ಜಿಲ್ಲೆಯಲ್ಲಿ ಉಂಟಾದ ಪ್ರಕೃತಿ ವಿಕೋಪಗಳಿಂದ ತೊಂದರೆಗೊಳಗಾದವರಿಗಾಗಿ ತುರ್ತು ಪರಿಹಾರಗಳನ್ನು ಒದಗಿಸುವ ಉದ್ದೇಶಕ್ಕಾಗಿ ಒಂದು ವರ್ಷದಲ್ಲಿ ಒಟ್ಟು [1][ಐದು ಲಕ್ಷ ರೂಪಾಯಿಗಳವರೆಗೆ][1] ಮಂಜೂರಾತಿ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು:

ಪರಂತು, ಅಧ್ಯಕ್ಷನು ಅಂಥ ಮಂಜೂರಾತಿಗಳ ವಿವರಗಳನ್ನು ಸ್ಥಿರೀಕರಣಕ್ಕಾಗಿ ಜಿಲ್ಲಾ ಪಂಚಾಯತಿಯ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**194. ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು.-** ಜಿಲ್ಲಾ ಪಂಚಾಯತಿಯ ಉಪಾಧ್ಯಕ್ಷನು,-

(ಎ) ಅಧ್ಯಕ್ಷನು ರಜೆಯ ಮೇಲಿದ್ದು ಗೈರುಹಾಜರಿಯಾಗಿದ್ದಾಗ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದಾಗ [1][ಅಥವಾ ಅಧ್ಯಕ್ಷನ ಹುದ್ದೆಯು ಖಾಲಿಯಿದ್ದಾಗ][1] ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕಾರ್ಯಗಳನ್ನು ನಿರ್ವಹಿಸತಕ್ಕದ್ದು;

1. 1997ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 26-02-1997ರಿಂದ ಸೇರಿಸಲಾಗಿದೆ.

(ಬಿ) ಅಧ್ಯಕ್ಷನ ಗೈರುಹಾಜರಿಯಲ್ಲಿ [1][ಅಥವಾ ಅಧ್ಯಕ್ಷನ ಹುದ್ದೆಯು ಖಾಲಿಯಿದ್ದಲ್ಲಿ][1] ಜಿಲ್ಲಾ ಪಂಚಾಯತಿಯ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 26-02-1997ರಿಂದ ಸೇರಿಸಲಾಗಿದೆ.

[1][**195. ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.-** (1) ಕಾಮಗಾರಿಗಳ ನಿರ್ವಹಣೆಗೆ ಅಥವಾ ಸರಕುಗಳು ಮತ್ತು ಸೇವೆಗಳನ್ನು ಒದಗಿಸುವುದಕ್ಕಾಗಿ ಜಿಲ್ಲಾ ಪಂಚಾಯತ್ ಪರವಾಗಿ ಮಾಡಿಕೊಳ್ಳುವ ಪ್ರತಿಯೊಂದು ಕರಾರು ಅಥವಾ ಒಪ್ಪಂದವು, ಈ ಪ್ರಕರಣದ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಉಪಬಂಧಗಳ ಅನುಸಾರ ಇರತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಅಡಿಯಲ್ಲಿ ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯತ್‌ನ ಪರವಾಗಿ ಕರಾರನ್ನು ಅಥವಾ ಒಪ್ಪಂದವನ್ನು ಮಾಡಿಕೊಳ್ಳಲು ಅಧಿಕಾರ ಹೊಂದಿರುವನೋ ಆ ವಿಷಯಗಳಿಗೆ ಸಂಬಂಧಪಟ್ಟಂತೆ ಜಿಲ್ಲಾ

ಪಂಚಾಯತ್‌ನ ಪರವಾಗಿ ಕರಾರನ್ನು ಅಥವಾ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ಕರಾರಿಗೆ ಅಥವಾ ಒಪ್ಪಂದಕ್ಕೆ ಎಷ್ಟು ಮೌಲ್ಯದ ಹಣವನ್ನು ನಿಗದಿ ಮಾಡುತ್ತದೋ ಅಷ್ಟು ಹಣಕ್ಕೆ ಅಂಥ ಕರಾರನ್ನು ಮತ್ತು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ XII

## ಜಿಲ್ಲಾ ಪಂಚಾಯತಿಯ ಸಿಬ್ಬಂದಿ

**196. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಇತರ ಅಧಿಕಾರಿಗಳು.-** (1) ಸರ್ಕಾರವು ಜಿಲ್ಲೆಯ ಡೆಪ್ಯುಟಿ ಕಮಿಷನರ್ ದರ್ಜೆಗೆ ಕಡಿಮೆ ಅಲ್ಲದ ಒಬ್ಬ ಅಧಿಕಾರಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡತಕ್ಕದ್ದು:

[1][ಪರಂತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕಗೊಳ್ಳಲು ಜಿಲ್ಲೆಯ ಡೆಪ್ಯುಟಿ ಕಮೀಷನರ್ ದರ್ಜೆಗೆ ಕಡಿಮೆ ಇಲ್ಲದ ಒಬ್ಬ ಸೂಕ್ತ ಅಧಿಕಾರಿಯು ಲಭ್ಯವಿಲ್ಲದಿದ್ದರೆ, ಸರ್ಕಾರವು 1998ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿಗಾಗಿ, ಕರ್ನಾಟಕ ಆಡಳಿತ ಸೇವೆ (ಆಯ್ಕೆ ಶ್ರೇಣಿ)ಯ ಒಬ್ಬ ಅಧಿಕಾರಿಯನ್ನು ಅಥವಾ ಕರ್ನಾಟಕ ಆಡಳಿತ ಸೇವೆ (ಆಯ್ಕೆ ಶ್ರೇಣಿ) ಗೆ ಸಮಾನವಾದ ದರ್ಜೆಯ ಒಂದು ಹುದ್ದೆಯನ್ನು ಧಾರಣ ಮಾಡಿರುವ ಕರ್ನಾಟಕ ಸಾಮಾನ್ಯ ಸೇವೆಗಳ ಅಭಿವೃದ್ಧಿ ಮತ್ತು ಸ್ಥಳೀಯ ಆಡಳಿತ ಶಾಖೆಗೆ ಸೇರಿದ ಒಬ್ಬ ಅಧಿಕಾರಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಕ ಮಾಡಬಹುದು.][1]

1. 1998ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 24-11-1998ರಿಂದ ಸೇರಿಸಲಾಗಿದೆ.

(2) ಸರ್ಕಾರವು ಪ್ರತಿಯೊಂದು ಜಿಲ್ಲಾ ಪಂಚಾಯತಿಗಾಗಿ ಒಬ್ಬ ಮುಖ್ಯ ಲೆಕ್ಕಾಧಿಕಾರಿಯನ್ನು [1][ಒಬ್ಬ ಯೋಜನಾಧಿಕಾರಿಯನ್ನು][1] ಮತ್ತು ಒಬ್ಬರು ಅಥವಾ ಹೆಚ್ಚು ಉಪ ಕಾರ್ಯದರ್ಶಿಗಳನ್ನು ಸಹ ನೇಮಕ ಮಾಡತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

(3) ಸರ್ಕಾರವು, ಕಾಲಕಾಲಕ್ಕೆ ಪ್ರತಿಯೊಂದು ಜಿಲ್ಲಾ ಪಂಚಾಯತಿಯ ಅಧೀನದಲ್ಲಿ ಕಾರ್ಯನಿರ್ವಹಿಸಲು ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದಷ್ಟು ಸಂಖ್ಯೆಯ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯವರನ್ನು (ಈಗಿರುವ ಸ್ಥಳೀಯ ಪ್ರಾಧಿಕಾರಗಳು ನೇಮಕ ಮಾಡಿಕೊಂಡಿರುವ ವ್ಯಕ್ತಿಗಳಿಂದ ಅಂಥ ಸೇವೆಗಳಿಗೆ ನೇಮಕರಾದ ಯಾರೇ ಅಧಿಕಾರಿಗಳು ಮತ್ತು ನೌಕರರು ಸೇರಿದಂತೆ) ಮತ್ತು ಅಖಿಲ ಭಾರತ ಸೇವಾ ಅಧಿಕಾರಿಗಳನ್ನು ನಿಯುಕ್ತಿ ಮಾಡತಕ್ಕದ್ದು.

(4) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸರ್ಕಾರವು ಅಥವಾ ಈ ಸಂಬಂಧದಲ್ಲಿ ಅದು ಅಧಿಕಾರ ನೀಡಿರುವ ಯಾವನೇ ಇತರ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಹಾಗೆ ನಿಯುಕ್ತಿಗೊಂಡಿರುವ ಅಧಿಕಾರಿಗಳನ್ನು ಮತ್ತು ನೌಕರರನ್ನು ಜಿಲ್ಲೆಯೊಳಗೆ ಅಥವಾ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗಾವಣೆ ಮಾಡುವ ಅಧಿಕಾರ ಹೊಂದಿರತಕ್ಕದ್ದು.

(5) ಸರ್ಕಾರವು ನಿರ್ದಿಷ್ಟಪಡಿಸಿರುವ ದಿನಾಂಕದಿಂದ ಪ್ರತಿಯೊಂದು ಜಿಲ್ಲಾ ಪಂಚಾಯತಿಗಾಗಿ ಗೊತ್ತುಪಡಿಸಬಹುದಾದಂಥ ಸೇವೆಗಳನ್ನು ರಚಿಸಬಹುದು.

**197. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಹಾಗೂ ಇತರ ಅಧಿಕಾರಿಗಳ ಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು.-** (1) [1][2[ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದು][2] ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಎಂದರೆ:-][1]

1. 1996ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 29-11-1995ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನಿರ್ದಿಷ್ಟವಾಗಿ ವಿಧಿಸಿರುವ ಅಥವಾ ವಹಿಸಿಕೊಟ್ಟಿರುವ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು;

[1][(ಬಿ) ಅಧ್ಯಕ್ಷನ ಸಾಮಾನ್ಯ ಮೇಲ್ವಿಚಾರಣೆ ಹಾಗೂ ನಿಯಂತ್ರಣಕ್ಕೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಜಿಲ್ಲಾ ಪಂಚಾಯತಿಯ ಅಥವಾ ಅದರ ಅಧೀನದಲ್ಲಿನ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಗಳು ಮತ್ತು ನೌಕರರನ್ನು ನಿಯಂತ್ರಿಸತಕ್ಕದ್ದು;][1]

1. 1996ರ ಅಧಿನಿಯಮ ಸಂಖ್ಯೆ: 9ರ ಮೂಲಕ ದಿನಾಂಕ: 29-11-1995ರಿಂದ ಪ್ರತಿಯೋಜಿಸಲಾಗಿದೆ.

[1][(ಬಿಬಿ) ಈ ಅಧಿನಿಯಮದ ಅಡಿಯಲ್ಲಿ ಮತ್ತು ಅದರಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿ ತನಗೆ ವಹಿಸಲಾದ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಸರ್ಕಾರವು ತನಗೆ ವಹಿಸಿದ ಅಂತಹ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(ಸಿ) ಜಿಲ್ಲಾ ಪಂಚಾಯತಿಯ ಎಲ್ಲ ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡತಕ್ಕದ್ದು;

(ಡಿ) ಜಿಲ್ಲಾ ಪಂಚಾಯತಿಯ ಎಲ್ಲ ಕಾಮಗಾರಿಗಳ ಮತ್ತು ಅಭಿವೃದ್ಧಿ ಯೋಜನೆಗಳ ತ್ವರಿತ ನಿರ್ವಹಣೆಗಾಗಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಇ) ಜಿಲ್ಲಾ ಪಂಚಾಯತಿಯ ಮತ್ತು ಅದರ ಸಮಿತಿಗಳ ಸಭೆಗಳ ವ್ಯವಹರಣೆಗಳಿಗೆ ಸಂಬಂಧಿಸಿದ ಎಲ್ಲ ಕಾಗದಪತ್ರಗಳ ಮತ್ತು ದಸ್ತಾವೇಜುಗಳ ಸುಪರ್ದನ್ನು ಹೊಂದಿರತಕ್ಕದ್ದು;

(ಎಫ್) ಜಿಲ್ಲಾ ಪಂಚಾಯತಿಯ ನಿಧಿಯಿಂದ ಹಣವನ್ನು ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರ ಇರತಕ್ಕದ್ದು;

(ಜಿ) ಗೊತ್ತುಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಜಿಲ್ಲಾ ಪಂಚಾಯತಿಯ ಪ್ರತಿಯೊಂದು ಸಭೆಗೆ ಹಾಜರಾಗತಕ್ಕದ್ದು ಮತ್ತು ಅದರ ಯಾವುದೇ ಸಮಿತಿಯ ಸಭೆಗೆ ಹಾಜರಾಗಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು. ಆದರೆ, ಯಾವುದೇ ನಿರ್ಣಯವನ್ನು ಮಂಡಿಸಲು ಅಥವಾ ಮತ ಚಲಾಯಿಸಲು ಹಕ್ಕನ್ನು ಹೊಂದಿರತಕ್ಕದ್ದಲ್ಲ. [1][ಜಿಲ್ಲಾ ಪಂಚಾಯತಿಯ ಅಥವಾ ಯಾವುದೇ ಸಮಿತಿಯ ಮುಂದಿರುವ ಯಾವುದೇ ಪ್ರಸ್ತಾವ ಅಥವಾ ನಿರ್ಣಯ ಅಥವಾ ಅಧ್ಯಕ್ಷನ ಯಾವುದೇ ಆದೇಶವು, ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಉಪಬಂಧಗಳು ಅಥವಾ ಅದರಡಿ ಮಾಡಲಾದ ಯಾವುದೇ ನಿಯಮ ಅಥವಾ ಆದೇಶ ಅಥವಾ ಯಾವುದೇ ಆರ್ಥಿಕ ವಿನಿಯಮ ಅಥವಾ ಬಜೆಟ್ ಏರ್ಪಾಟು ಇವುಗಳನ್ನು ಉಲ್ಲಂಘಿಸುವಂಥದ್ದಾಗಿದೆ ಅಥವಾ ಅವುಗಳಿಗೆ ಅಸಂಗತವಾಗಿದೆಯೆಂದು ಅಥವಾ ಜಿಲ್ಲಾ ಪಂಚಾಯತಿಯ ಅಥವಾ ಅದರ ಸಮಿತಿಯ ಅಥವಾ ಅಧ್ಯಕ್ಷನ ಪ್ರಕಾರ್ಯಗಳು ಅಥವಾ ಅಧಿಕಾರಗಳನ್ನು ನ್ಯೂನಗೊಳಿಸುವುದೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಅಭಿಪ್ರಾಯಪಟ್ಟರೆ, ತನ್ನ ಅಭಿಪ್ರಾಯಕ್ಕೆ ಕಾರಣಗಳನ್ನು ಒಳಗೊಂಡಿರುವ ಹಾಗೂ ಪ್ರಸ್ತಾವ ಅಥವಾ ನಿರ್ಣಯ ಅಥವಾ ಆದೇಶವು ಯಾವ ಕಾನೂನು, ನಿಯಮ, ಆದೇಶ, ವಿನಿಯಮ ಅಥವಾ ಏರ್ಪಾಡಿಗೆ ಅಸಂಗತವಾಗಿದೆಯೆಂಬುದನ್ನು ಸೂಚಿಸಿ ಲಿಖಿತ ಟಿಪ್ಪಣಿಯ ಮೂಲಕ ಜಿಲ್ಲಾ ಪಂಚಾಯತಿಗೆ ಅಥವಾ ಸಮಿತಿಗೆ ಅಥವಾ ಅಧ್ಯಕ್ಷನಿಗೆ ಸಲಹೆ ನೀಡುವುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅಂಥ ಸಲಹೆ ನೀಡುವುದಕ್ಕೆ ಮುಂಚೆ ಜಿಲ್ಲಾ ಪಂಚಾಯತಿ ಅಥವಾ ಸಮಿತಿ ಅಥವಾ ಅಧ್ಯಕ್ಷನು ಪ್ರಸ್ತಾವ ಅಥವಾ ನಿರ್ಣಯ ಅಥವಾ ಆದೇಶವನ್ನು ಪರಿಶೀಲಿಸಿ ಅಂಗೀಕರಿಸಿದ್ದರೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ತಾನು ಅವಶ್ಯಕವೆಂದು ಭಾವಿಸುವಂಥ ಪರಿವೀಕ್ಷಣೆ ನಡೆಸಿದ ತರುವಾಯ ತನ್ನ ಸಲಹೆಯೊಂದಿಗೆ ಪ್ರಸ್ತಾವ ಅಥವಾ ನಿರ್ಣಯ ಅಥವಾ ಆದೇಶವನ್ನು ಮರಳಿ ಒಪ್ಪಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(3) ಜಿಲ್ಲಾ ಪಂಚಾಯತಿ ಅಥವಾ ಅದರ ಸಮಿತಿಗಳು ಅಥವಾ ಅಧ್ಯಕ್ಷನು (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅಸಂಗತತೆಯನ್ನು ಪರಿಹರಿಸದೇ ನಿರ್ಣಯ ಅಥವಾ ಆದೇಶವನ್ನು ಅಂಗೀಕರಿಸಿದರೆ, ಈ ಅಧಿನಿಯಮದ ಯಾವುವೇ ಇತರ ಉಪಬಂಧಗಳಲ್ಲಿ ಏನೇ ಇದ್ದರೂ, ಸದರಿ ನಿರ್ಣಯ ಅಥವಾ ಆದೇಶದ ಒಂದು ಪ್ರತಿಯನ್ನು ತನ್ನ ಲಿಖಿತ ಟಿಪ್ಪಣಿಯೊಂದಿಗೆ ಅಧ್ಯಕ್ಷನಿಗೆ ತಿಳಿಸಿ ಸರ್ಕಾರಕ್ಕೆ ಕಳುಹಿಸುವುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಸರ್ಕಾರದ ತೀರ್ಮಾನದ ಮೇಲಲ್ಲದೆ ಅನ್ಯಥಾ ಅಂಥ ನಿರ್ಣಯ ಅಥವಾ ಆದೇಶವನ್ನು ಮಂಡಿಸತಕ್ಕದ್ದಲ್ಲ:

ಪರಂತು ಸರ್ಕಾರವು ಅಂಥ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ತನ್ನ ತೀರ್ಮಾನವನ್ನು ತಿಳಿಸದಿದ್ದರೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಜಿಲ್ಲಾ ಪಂಚಾಯತಿ ಅಥವಾ ಸಮಿತಿಯ ಅಂಥ ನಿರ್ಣಯ ಅಥವಾ ಅಧ್ಯಕ್ಷನ ಆದೇಶವನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(4) ಮುಖ್ಯ ಲೆಕ್ಕಾಧಿಕಾರಿಯು ಹಣಕಾಸಿನ ಕಾರ್ಯನೀತಿಯ ವಿಷಯದಲ್ಲಿ ಜಿಲ್ಲಾ ಪಂಚಾಯತಿಗೆ ಸಲಹೆ ನೀಡತಕ್ಕದ್ದು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಬಜೆಟ್‌ಅನ್ನು ಸಿದ್ಧಪಡಿಸುವುದೂ ಸೇರಿದಂತೆ ಜಿಲ್ಲಾ ಪಂಚಾಯತಿಯ ಲೆಕ್ಕಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಹೊಣೆಗಾರನಾಗಿರತಕ್ಕದ್ದು.

(5) ಮುಖ್ಯ ಲೆಕ್ಕಾಧಿಕಾರಿಯು ಸೂಕ್ತ ಮಂಜೂರಾತಿಯ ಹೊರತು, ಮತ್ತು ಈ ಅಧಿನಿಯಮದ ಮತ್ತು ಅದರ ಅಡಿಯ ನಿಯಮಗಳು ಹಾಗೂ ವಿನಿಯಮಗಳಿಗೆ ಅನುಸಾರವಾಗಿಯಲ್ಲದೆ ಯಾವುದೇ ವೆಚ್ಚವನ್ನು ವಹಿಸಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಈ ಅಧಿನಿಯಮದ ಹಾಗೂ ನಿಯಮಗಳ ಮತ್ತು ವಿನಿಯಮಗಳ ಮೂಲಕ ಸಮರ್ಥಿಸಿಲ್ಲದ ಅಥವಾ ಬಜೆಟ್‌ನಲ್ಲಿ ಯಾವುದೇ ಏರ್ಪಾಡುಮಾಡಿಲ್ಲದಂಥ ವೆಚ್ಚದ ಬಗ್ಗೆ ಅನುಮತಿ ನೀಡತಕ್ಕದ್ದಲ್ಲ.

(6) ಉಪಕಾರ್ಯದರ್ಶಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅವರ ಕರ್ತವ್ಯಗಳನ್ನು ನೆರವೇರಿಸುವಲ್ಲಿ ನೆರವಾಗತಕ್ಕದ್ದು.

**198. ದಾಖಲೆ ಮುಂತಾದವುಗಳನ್ನು ಕಡ್ಡಾಯವಾಗಿ ಕೋರುವುದಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಹಕ್ಕು.**- (1) ಗ್ರಾಮಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಅಥವಾ ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದ ಹಣ, ಲೆಕ್ಕಪತ್ರಗಳ, ದಾಖಲೆಗಳ ಅಥವಾ ಇತರ ಸ್ವತ್ತುಗಳ ಸ್ವಾಧೀನತೆ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ಲಿಖಿತದಲ್ಲಿ ಕೋರಿದಾಗ ಈ ಉದ್ದೇಶಕ್ಕಾಗಿ ಕೂಡಲೇ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಅವುಗಳನ್ನು ಸ್ವೀಕರಿಸಲು ಆ ಕೋರಿಕೆಯಲ್ಲಿ ಅಧಿಕಾರ ನೀಡಿರುವಂತಹ ವ್ಯಕ್ತಿಗೆ ಅಂಥ ಹಣವನ್ನು ಒಪ್ಪಿಸತಕ್ಕದ್ದು ಅಥವಾ ಅಂಥ ಲೆಕ್ಕಪತ್ರಗಳನ್ನು, ದಾಖಲೆಗಳನ್ನು ಅಥವಾ ಇತರ ಸ್ವತ್ತುಗಳನ್ನು ಒಪ್ಪಿಸತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಅಂಥ ವ್ಯಕ್ತಿಯಿಂದ ಬಾಕಿ ಇರುವ ಯಾವುದೇ ಹಣವನ್ನು ಸುಸ್ತಿದಾರರಿಂದ ಭೂ ಕಂದಾಯದ ಬಾಕಿಗಳ ವಸೂಲಿಗಾಗಿ 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದಲ್ಲಿ (1964ರ ಕರ್ನಾಟಕ ಅಧಿನಿಯಮ 12) ಕಲ್ಪಿಸಿರುವ ಉಪಬಂಧಗಳ ರೀತಿಯಲ್ಲಿಯೇ ಮತ್ತು ಅವುಗಳಿಗೆ ಒಳಪಟ್ಟು ವಸೂಲ್ಮಾಡಲು ಕ್ರಮ ಕೈಗೊಳ್ಳತಕ್ಕದ್ದು ಮತ್ತು ಗ್ರಾಮ ಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಅಥವಾ ಜಿಲ್ಲಾ ಪಂಚಾಯತಿಗೆ ಸಂಬಂಧಪಡುವ ಲೆಕ್ಕಪತ್ರಗಳನ್ನು, ದಾಖಲೆಗಳನ್ನು ಅಥವಾ ಇತರ ಸ್ವತ್ತುಗಳನ್ನು ವಶಕ್ಕೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಸರ್ಚ್ ವಾರಂಟನ್ನು ಹೊರಡಿಸಬಹುದು ಮತ್ತು ಆ ಸಂಬಂಧದಲ್ಲಿ 1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ ಕೇಂದ್ರಾಧಿನಿಯಮ 2) ಅಧ್ಯಾಯ VIIರ ಉಪಬಂಧಗಳ ಅಡಿಯಲ್ಲಿ ಮ್ಯಾಜಿಸ್ಟ್ರೇಟರು ಕಾನೂನುಬದ್ಧವಾಗಿ ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3) ಗ್ರಾಮಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಅಥವಾ ಜಿಲ್ಲಾ ಪಂಚಾಯತಿಗೆ ಸಂಬಂಧಪಡುವ ಯಾವುದೇ ಹಣವನ್ನು, ಲೆಕ್ಕಪತ್ರಗಳನ್ನು ಅಥವಾ ಇತರ ಸ್ವತ್ತನ್ನು ಎಲ್ಲಿ ಗೋಪ್ಯವಾಗಿಡಲಾಗಿದೆ

ಎಂಬುದನ್ನು ತಿಳಿದಿರುವ ಪ್ರತಿಯೊಬ್ಬ ವ್ಯಕ್ತಿಯು ಆ ಮಾಹಿತಿಯನ್ನು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗೆ ನೀಡಲು ಬದ್ಧನಾಗಿರತಕ್ಕದ್ದು.

(4) ಈ ಉಪ ಪ್ರಕರಣದ ಅಡಿಯಲ್ಲಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯ ಆದೇಶದ ಬಗ್ಗೆ ಅಪೀಲನ್ನು [1][ಸರ್ಕಾರಕ್ಕೆ][1] ಸಲ್ಲಿಸುವ ಅವಕಾಶ ಇರತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ XIII
## ತೆರಿಗೆಗಳು ಮತ್ತು ಫೀಜುಗಳು

**199. ಗ್ರಾಮ ಪಂಚಾಯತಿಗಳು ತೆರಿಗೆಗಳ ದರ ವಿಧಿಸುವುದು ಇತ್ಯಾದಿ.-** (1) ಪ್ರತಿಯೊಂದು ಗ್ರಾಮ ಪಂಚಾಯತಿಯು, ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿನಾಯಿತಿಗೊಳಪಟ್ಟು ಮತ್ತು ಖಗಿನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಗರಿಷ್ಠ ದರವನ್ನು ಮೀರದಂತೆ, ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ, [1][ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ][1] ತೆರಿಗೆ ವಿಧಿಸತಕ್ಕದ್ದು:

ಪರಂತು, ಕಟ್ಟಡದ ಅಥವಾ ಭೂಮಿಯ ಮಾಲೀಕನು ಪಂಚಾಯತಿ ಪ್ರದೇಶವನ್ನು ಬಿಟ್ಟು ಹೋಗಿರುವಲ್ಲಿ ಅಥವಾ ಅನ್ಯಥಾ ಕಂಡುಬರದಿದ್ದಲ್ಲಿ, ಅಂಥ ಕಟ್ಟಡ ಅಥವಾ ಭೂಮಿಯ ಅನುಭವದಾರನು ಅಂಥ ಮಾಲೀಕನ ಮೇಲೆ ವಿಧಿಸಬಹುದಾದ ತೆರಿಗೆಗೆ ಗುರಿಯಾಗತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(2) ಗ್ರಾಮ ಪಂಚಾಯತಿಯು ಕುಡಿಯುವುದಕ್ಕೆ ಮತ್ತು ಇತರ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡಲು ನೀರು ದರವನ್ನು ವಿಧಿಸಬಹುದು.

(3) ಗ್ರಾಮ ಪಂಚಾಯತಿಯು, IVನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಗರಿಷ್ಠ ದರವನ್ನು ಮೀರದಂತೆ ಮತ್ತು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿನಾಯಿತಿಗೊಳಪಟ್ಟು, ಗ್ರಾಮ ಪಂಚಾಯತಿಯು ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂಥ ದರಗಳಲ್ಲಿ ಕೆಳಕಂಡ ಎಲ್ಲ ಅಥವಾ ಯಾವುವೇ ತೆರಿಗೆಗಳು ಅಥವಾ ಫೀಜುಗಳನ್ನು ವಿಧಿಸಬಹುದು, ಎಂದರೆ:-

(ಎ) ಚಲನಚಿತ್ರ ಪ್ರದರ್ಶನಗಳನ್ನು ಹೊರತುಪಡಿಸಿ, ಯಾವುವೇ ಇತರ ಮನರಂಜನೆಗಳ ಮೇಲೆ ತೆರಿಗೆ;

(ಬಿ) ಮೋಟಾರು ವಾಹನಗಳನ್ನು ಹೊರತುಪಡಿಸಿ ಇತರ ವಾಹನಗಳ ಮೇಲೆ ತೆರಿಗೆ;

[2][XXXXXX][2]

(ಡಿ) ಗ್ರಾಮ ಪಂಚಾಯತಿಗಳು ನೀರು ಸರಬರಾಜು, ಆರೋಗ್ಯ ಮತ್ತು ನೈರ್ಮಲ್ಯತೆಗಾಗಿ ಅಗತ್ಯ ವ್ಯವಸ್ಥೆಯನ್ನು ಮಾಡಿರುವಲ್ಲಿ, ಜಾತ್ರೆಗಳು, ಉತ್ಸವಗಳು ಮುಂತಾದವುಗಳಿಗೆ ಬರುವ ವ್ಯಕ್ತಿಗಳಿಗೆ ಪ್ರವಾಸಿ ಫೀಜು:

(ಇ) ಯಾವುದೇ ಮಾರುಕಟ್ಟೆ ಸ್ಥಳದಲ್ಲಿ ಮಾರಾಟಕ್ಕಾಗಿ ತಮ್ಮ ಸರಕುಗಳನ್ನು ಇಡುವ ವ್ಯಕ್ತಿಗಳಿಗೆ ಮಾರುಕಟ್ಟೆ ಫೀಜು;

(ಎಫ್) ಯಾವುದೇ ಮಾರುಕಟ್ಟೆ ಸ್ಥಳದಲ್ಲಿ ಮಾರಾಟಕ್ಕಾಗಿ ತರುವ ಜಾನುವಾರು ನೋಂದಣಿಯ ಮೇಲೆ ಫೀಜು;

(ಜಿ) ಗ್ರಾಮ ಪಂಚಾಯತಿಯು ಪ್ರಯಾಣಿಕರಿಗಾಗಿ, ಸೂಕ್ತ ಸೌಕರ್ಯಗಳನ್ನು ಒದಗಿಸಿದ್ದಲ್ಲಿ ಬಸ್ಸುಗಳು, ಟ್ಯಾಕ್ಸಿಗಳು ಮತ್ತು ಆಟೋ ಸ್ಟ್ಯಾಂಡುಗಳ ಮೇಲೆ ಫೀಜು;

(ಹೆಚ್) ಹುಲ್ಲುಗಾವಲುಗಳಲ್ಲಿ ಜಾನುವಾರುಗಳನ್ನು ಮೇಯಿಸುವುದಕ್ಕೆ ಫೀಜು.

(ಐ) ತೆರಿಗೆ ಮತ್ತು ಶುಲ್ಕ ಅನುಸೂಚಿ-IVರಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು;

(ಜೆ) ನಿಯಮಿಸಬಹುದಾಂಥ ಯಾವುದೇ ಇತರ ಶುಲ್ಕ.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.
2. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ 12.07.2017ರಿಂದ ಬಿಟ್ಟುಬಿಡಲಾಗಿದೆ.

[1][**199ಎ. ತೆರಿಗೆಗಳು ಮತ್ತು ದರಗಳ ಪರಿಷ್ಕರಣೆ.-** ಗ್ರಾಮಪಂಚಾಯತಿಯು 199ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆಗಳು ಮತ್ತು ದರಗಳನ್ನು, ಕಟ್ಟಡಗಳು ಮತ್ತು ಭೂಮಿಯ ಸಂಬಂಧದಲ್ಲಿ ಕನಿಷ್ಠ ಎರಡು ವರ್ಷಗಳಿಗೊಮ್ಮೆ ಮತ್ತು IVನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಇತರ ಬಾಬುಗಳ ಮೇಲೆ ವರ್ಷದಲ್ಲಿ ಕನಿಷ್ಠ ಒಮ್ಮೆ ಪರಿಷ್ಕರಿಸಬಹುದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**200. ತೆರಿಗೆಗಳು ಮತ್ತು ಇತರ ಬಾಕಿಗಳ ವಸೂಲಿ.-** (1) ಯಾವುದೇ ತೆರಿಗೆ, ದರ, ಅಥವಾ ಫೀಜು ಬಾಕಿಯಿರುವಾಗ, ಗ್ರಾಮ ಪಂಚಾಯತಿಯು, ಕಾರ್ಯಸಾಧ್ಯವಾದಷ್ಟು ಕಡಿಮೆ ವಿಳಂಬದೊಂದಿಗೆ, ಅದರ ಸಂದಾಯಕ್ಕೆ ಹೊಣೆಗಾರನಾಗಿರುವ ವ್ಯಕ್ತಿಗೆ ಯಾವ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಹಣ ಸಂದಾಯ ಮಾಡಬೇಕೆಂಬುದನ್ನು ನಿರ್ದಿಷ್ಟಪಡಿಸಿ ಬಾಕಿಯಿರುವ ಮೊಬಲಗಿಗೆ ಒಂದು ಬಿಲ್ಲನ್ನು ಅವನಿಗೆ ಕೊಡತಕ್ಕದ್ದು.

(2) ಯಾವನೇ ವ್ಯಕ್ತಿಯು ಈ ಅಧಿನಿಯಮ ಅಥವಾ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಗ್ರಾಮ ಪಂಚಾಯತಿಗೆ ಬಾಕಿಯಿರುವ ಯಾವುದೇ ತೆರಿಗೆ ಅಥವಾ ಫೀಜು ಅಥವಾ ಇತರ ಯಾವುದೇ ಮೊತ್ತವನ್ನು ಸಂದಾಯ ಮಾಡುವುದಕ್ಕೆ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಸಂದಾಯ ಮಾಡಲು

ತಪ್ಪಿದರೆ, ಗ್ರಾಮ ಪಂಚಾಯತಿಯು ತಪ್ಪಿತಸ್ಥನಿಗೆ ಗೊತ್ತುಪಡಿಸಿದ ನಮೂನೆಯಲ್ಲಿ ತಗಾದೆ ಆದೇಶವನ್ನು ಜಾರಿ ಮಾಡುವಂತೆ ಮಾಡತಕ್ಕದ್ದು.

(3) [1][ಪಂಚಾಯತಿ ಅಭಿವೃದ್ಧಿ ಅಧಿಕಾರಿ][1] ಅಥವಾ ಈ ಬಗ್ಗೆ ಅವನಿಂದ ವಿದ್ಯುಕ್ತವಾಗಿ ಪ್ರಾಧಿಕೃತನಾದ ಅಧಿಕಾರಿಯು (1)ನೇ ಉಪಪ್ರಕರಣದ ಮೇರೆಗೆ ಪ್ರತಿಯೊಂದು ಬಿಲ್ಲು ಕೊಡುವುದನ್ನು ಮತ್ತು (2)ನೇ ಉಪಪ್ರಕರಣದ ಮೇರೆಗೆ ಪ್ರತಿಯೊಂದು ತಗಾದೆ ಆದೇಶ ಜಾರಿಗೊಳಿಸುವುದನ್ನು,-

(ಎ) ಯಾವ ವ್ಯಕ್ತಿಯ ಹೆಸರಿಗೆ ಅದನ್ನು ಕಳುಹಿಸಬೇಕಾಗಿದೆಯೋ ಆ ವ್ಯಕ್ತಿಗೆ ಆ ಬಿಲ್ಲು ಅಥವಾ ಆದೇಶವನ್ನು ಕೊಡುವ ಅಥವಾ ಸಲ್ಲಿಸುವ ಮೂಲಕ, ಅಥವಾ

(ಬಿ) ಅಂಥ ವ್ಯಕ್ತಿಯು ಸಿಕ್ಕದಿದ್ದರೆ, ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗೆ ಆಗಿದ್ದರೆ, ಬಿಲ್ಲು ಅಥವಾ ಆದೇಶವನ್ನು, ಅವನು ವಾಸ ಮಾಡುತ್ತಿದ್ದನೆಂದು ತಿಳಿದುಬಂದ ಕೊನೆಯ ವಾಸ ಸ್ಥಳದಲ್ಲಿ ಅದನ್ನು ಬಿಡುವ ಮೂಲಕ ಅಥವಾ ಬಿಲ್ಲು ಅಥವಾ ಆದೇಶವನ್ನು ಅವನ ಕುಟುಂಬದ ಯಾರೇ ವಯಸ್ಕ ಸದಸ್ಯ ಅಥವಾ ನೌಕರನಿಗೆ ಕೊಡುವ ಅಥವಾ ಸಲ್ಲಿಸುವ ಮೂಲಕ, ಅಥವಾ

(ಸಿ) ಅಂಥ ವ್ಯಕ್ತಿಯು ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗೆ ವಾಸಿಸುತ್ತಿಲ್ಲದಿದ್ದರೆ ಮತ್ತು ಬಿಲ್ಲು ಅಥವಾ ಆದೇಶ ಹೊರಡಿಸುವುದನ್ನು ನಿರ್ದೇಶಿಸುವ ವ್ಯಕ್ತಿಗೆ ವಿಳಾಸವು ತಿಳಿದಿದ್ದರೆ ಬಿಲ್ಲು ಅಥವಾ ಆದೇಶವನ್ನು ಅಂಥ ವ್ಯಕ್ತಿಗೆ ಸದರಿ ವಿಳಾಸವಿರುವ ಒಂದು ಲಕೋಟೆಯನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸುವ ಮೂಲಕ, ಅಥವಾ

(ಡಿ) ಮೇಲೆ ಹೇಳಿದ ಯಾವುದೇ ವಿಧಾನ ಲಭ್ಯವಿಲ್ಲದಿದ್ದರೆ, ಆಗ ಬಿಲ್ಲು ಅಥವಾ ಆದೇಶವು ಯಾವ ಕಟ್ಟಡ ಅಥವಾ ಭೂಮಿಗೆ ಸಂಬಂಧಪಡುವುದೋ ಅದರ ಎದ್ದು ಕಾಣುವ ಭಾಗದಲ್ಲಿ ಅದನ್ನು ಅಂಟಿಸುವಂತೆ ಮಾಡುವ ಮೂಲಕ,

-ಜಾರಿಗೊಳಿಸತಕ್ಕದ್ದು.

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.

(4) ಯಾವ ತೆರಿಗೆ, ದರ, ಫೀಜು ಅಥವಾ ಇತರ ಮೊಬಲಗಿಗಾಗಿ ತಗಾದೆ ಆದೇಶವನ್ನು ಜಾರಿಗೊಳಿಸಲಾಗಿದೆಯೋ ಅದನ್ನು, ಅಂಥ ಜಾರಿಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಂದಾಯ ಮಾಡದಿದ್ದರೆ, ಗ್ರಾಮ ಪಂಚಾಯತಿಯು, ಬಾಕಿ ಇರುವ ಮೊತ್ತದ ಮೇಲೆ ವಿಧಿಸುವ ಶೇಕಡಾ ಹತ್ತರಷ್ಟು ದಂಡದೊಂದಿಗೆ ಬಾಕಿ ಇರುವ ಅಂಥ ಮೊತ್ತವನ್ನು ಗೊತ್ತುಪಡಿಸಲಾದ ರೀತಿಯಲ್ಲಿ ತಪ್ಪಿತಸ್ಥನ ಚರಸ್ವತ್ತನ್ನು ಜಪ್ತಿ ಮಾಡುವ ಮತ್ತು ಮಾರಾಟ ಮಾಡುವ ಮೂಲಕ ವಸೂಲು ಮಾಡಬಹುದು.

(5) (ಎ) (4)ನೇ ಉಪಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಜಪ್ತಿಗೆ;

(ಬಿ) (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ತಗಾದೆ ಆದೇಶಕ್ಕೆ;

(ಸಿ) (4)ನೇ ಉಪಪ್ರಕರಣದ ಮೇರೆಗೆ ವಶಪಡಿಸಿಕೊಳ್ಳಲಾದ ಜಾನುವಾರುಗಳ ನಿರ್ವಹಣೆಯ ಖರ್ಚು,

-ಇವುಗಳಿಗಾಗಿ ಫೀಜನ್ನು ಗೊತ್ತುಪಡಿಸಬಹುದಾದಂಥ ದರಗಳಲ್ಲಿ ವಿಧಿಸತಕ್ಕದ್ದು.

(6) ಮೇಲೆ ಹೇಳಿದ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಗ್ರಾಮ ಪಂಚಾಯತಿಗೆ ಸಂದಾಯವಾಗಬೇಕಾದ ಯಾವುದೇ ತೆರಿಗೆ, ದರ ಅಥವಾ ಫೀಜನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು.

[1][(7)(6)ನೇ ಉಪಪ್ರಕರಣದ ಅಡಿಯಲ್ಲಿಯ ಬಾಕಿಗಳನ್ನು ಹೊರತುಪಡಿಸಿ, ಗ್ರಾಮಪಂಚಾಯತ್‌ಗೆ ಸಲ್ಲಿಕೆ ಆಗಬೇಕಾಗಿರುವ ತೆರಿಗೆಗಳ ವಸೂಲಿ ಮಾಡುವುದು ಪಂಚಾಯತ್‌ಗಳ ಪ್ರಾಥಮಿಕ ಹೊಣೆಗಾರಿಕೆಯಾಗತಕ್ಕದ್ದು ಮತ್ತು ವಸೂಲು ಆಗಬೇಕಾಗಿರುವ ತೆರಿಗೆಯಲ್ಲಿ ಶೇಕಡಾ ಎಂಬತ್ತರಷ್ಟು ಕಡಿಮೆ ವಸೂಲಾತಿ ಆಗಿದ್ದರೆ ಹಾಗೆ ಕಡಿಮೆ ವಸೂಲಾತಿ ಆಗಿರುವುದಕ್ಕೆ ಕಾರಣಗಳ ಬಗ್ಗೆ ಪಂಚಾಯತ್ ತನಿಖೆ ಮಾಡತಕ್ಕದ್ದು ಮತ್ತು ಅವಶ್ಯಕ ಕ್ರಮ ತೆಗೆದುಕೊಳ್ಳತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**201. ತೆರಿಗೆ ನಿರ್ಧರಣೆ ಮುಂತಾದವುಗಳ ವಿರುದ್ಧ ಅಪೀಲು.-** ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು, 199ನೇ ಪ್ರಕರಣದ ಅಡಿಯಲ್ಲಿ ಯಾವುದೇ ತೆರಿಗೆ, ದರ ಅಥವಾ ಫೀಜುಗಳ ನಿರ್ಧರಣೆ, ವಸೂಲಿ ಅಥವಾ ವಿಧಿಸುವಿಕೆಯಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಗೊತ್ತುಪಡಿಸಬಹುದಾದಂತಹ ನಿಯಮಗಳಿಗೆ ಒಳಪಟ್ಟು ಗೊತ್ತುಪಡಿಸಬಹುದಾದಂಥ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು. ಅಂಥ ಅಪೀಲಿನ ಬಗ್ಗೆ ಪ್ರಾಧಿಕಾರದ ತೀರ್ಮಾನವನೇ ಅಂತಿಮವಾಗಿರತಕ್ಕದ್ದು.

**202. ಕಾರ್ಖಾನೆ ಪ್ರದೇಶಗಳಲ್ಲಿ ತೆರಿಗೆಗಳ ಬಗ್ಗೆ ರಾಜಿ ಮಾಡಿಕೊಳ್ಳುವುದು.-** (1) ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಯಾವುದೇ ಪಂಚಾಯತಿ ಪ್ರದೇಶದಲ್ಲಿ ಸ್ಥಾಪಿಸಲಾದ ಯಾವುದೇ ಕೈಗಾರಿಕೆ ಅಥವಾ ಕಾರ್ಖಾನೆಯ ಮಾಲೀಕನು, ಕೈಗಾರಿಕೆಗಾಗಿ ಅಥವಾ ನೌಕರರಿಗೆ ಕಾರ್ಖಾನೆ ವಸತಿಗಳೆಂದು ಮತ್ತು ಉದ್ಯಮಕ್ಕೆ ಸಂಬಂಧಿಸಿದ ಇತರ ಉದ್ದೇಶಗಳಿಗಾಗಿ ಉಪಯೋಗಿಸಿದ ಕಟ್ಟಡಗಳು ಮತ್ತು ಭೂಮಿಗಳಿಗಾಗಿ ನೈರ್ಮಲ್ಯ ಮತ್ತು ಇತರ ಸೌಲಭ್ಯಗಳನ್ನು ಒದಗಿಸಿದರೆ, ಗ್ರಾಮ ಪಂಚಾಯತಿಯು, ಅಂಥ ಕಟ್ಟಡಗಳು ಮತ್ತು ಭೂಮಿಗಳ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಗಳು, ದರಗಳು ಅಥವಾ ಫೀಜುಗಳ ಬದಲಾಗಿ ಗ್ರಾಮ ಪಂಚಾಯತಿ ಮತ್ತು ಅಂಥ ಮಾಲೀಕನ ನಡುವೆ ಒಪ್ಪಿಕೊಳ್ಳಬಹುದಾದಂತೆ ವಾರ್ಷಿಕವಾಗಿ ಅಂಥ ಮೊಬಲಗನ್ನು ಸಂದಾಯ ಮಾಡಬಹುದು.

(2) (1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವಂಥ ಒಪ್ಪಂದಕ್ಕೆ ಬರಲಾಗದಿದ್ದಲ್ಲಿ ವಿಷಯವನ್ನು [1][ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ][1] ಉಲ್ಲೇಖಿಸಬಹುದು ಮತ್ತು [1][ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು][1] ಗ್ರಾಮ ಪಂಚಾಯತಿ ಮತ್ತು ಸಂಬಂಧಪಟ್ಟ ಮಾಲೀಕನಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ತರುವಾಯ, ಅಂಥ ಮಾಲೀಕನು ಸಂದಾಯ ಮಾಡಬೇಕಾದ ಮೊಬಲಗನ್ನು ನಿರ್ಧರಣೆ ಮಾಡಬಹುದು ಮತ್ತು ಅಂಥ ನಿರ್ಧರಣೆಯು ಗ್ರಾಮ ಪಂಚಾಯತಿ ಮತ್ತು ಅಂಥ ಮಾಲೀಕನ ಮೇಲೆ ಬಂಧನಕಾರಿಯಾಗಿರತಕ್ಕದ್ದು. [2][ಸದರಿ ಉಲ್ಲೇಖವನ್ನು ಕಳುಹಿಸುವ ಮುನ್ನ ವಿವಾದಗ್ರಸ್ತ ತೆರಿಗೆಯ, ದರಗಳ ಅಥವಾ ಫೀಜುಗಳ ಶೇಕಡಾ 50 ಭಾಗವನ್ನು ಅಂತಹ ಮಾಲೀಕನು ಕಡ್ಡಾಯವಾಗಿ ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಪಾವತಿಸತಕ್ಕದ್ದು. ಮತ್ತು

ಈ ರೀತಿ ಶೇಕಡಾ 50 ಪಾವತಿಸಿದ ನಂತರವೇ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯು ಉಲ್ಲೇಖವನ್ನು ಸ್ವೀಕರಿಸತಕ್ಕದ್ದು.][2]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

(3) [1][ಸರ್ಕಾರವು][1] ಅಧಿಸೂಚನೆ ಹೊರಡಿಸುವ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಸಂಸ್ಥೆಗಳಿಗೂ ಕೂಡ (1)ನೇ ಉಪ-ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದೆಂಬುದಾಗಿ ನಿರ್ದೇಶಿಸಬಹುದು.

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಪ್ರತಿಯೋಜಿಸಲಾಗಿದೆ.

**203. ಸಂಗ್ರಹಣೆಗಾಗಿ ಏಜೆನ್ಸಿ.-** ಗ್ರಾಮ ಪಂಚಾಯತಿಗೆ ಸಂದಾಯವಾಗಬೇಕಾದ ತೆರಿಗೆ, ದರ, ಫೀಜು ಅಥವಾ ಇತರೆ ಮೊಬಲಗನ್ನು, ಈ ಬಗ್ಗೆ ಗ್ರಾಮ ಪಂಚಾಯತಿಯು ನೇಮಕ ಮಾಡುವಂಥ ಏಜೆನ್ಸಿಯ ಮೂಲಕ ಸಂಗ್ರಹಿಸಬಹುದು ಪರಂತು, ಗೊತ್ತುಪಡಿಸಿದ ನಿಯಮಗಳಿಗೊಳಪಟ್ಟು ಈ ಅಧಿನಿಯಮದಡಿಯಲ್ಲಿ ಗ್ರಾಮ ಪಂಚಾಯತಿಯು ಯಾವುದೇ ತೆರಿಗೆ, ದರ, ಫೀಜು ಅಥವಾ ಇತರ ಮೊಬಲಗನ್ನು ವಿಧಿಸುವ ಹಕ್ಕನ್ನು ಸಾರ್ವಜನಿಕ ಹರಾಜಿನ ಮೂಲಕ ಗುತ್ತಿಗೆಗೆ ಕೊಡುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಅಂಥ ಗುತ್ತಿಗೆಯ ಮೇರೆಗೆ ಬಾಕಿಯಿರುವ ಮೊಬಲಗನ್ನು ಈ ಅಧ್ಯಾಯದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

## ಅಧ್ಯಾಯ XIV

## ಸರ್ಕಾರದಿಂದ ಉಪಕರಗಳು ಮುಂತಾದವುಗಳನ್ನು ವಿಧಿಸುವುದು ಮತ್ತು ಆರ್ಥಿಕ ನೆರವು ನೀಡುವುದು

**204. ಸರ್ಕಾರವು ಸ್ಥಳೀಯ ಉಪಕರ ಮುಂತಾದವುಗಳನ್ನು ವಿಧಿಸುವುದು.-** (1) ಸರ್ಕಾರವು ಭೂ ಕಂದಾಯದ ಎಲ್ಲ ಬಾಬುಗಳಿಗೆ ವಿಧಿಸಲಾಗುವ ಭೂ ಕಂದಾಯಕ್ಕೆ ಸಮಾನವಾದ ದರದಲ್ಲಿ ಸ್ಥಳೀಯ ಉಪಕರವನ್ನು ವಿಧಿಸಬಹುದು.

(2) 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮ 12) ಉಪಬಂಧಗಳು ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳು, ಅಧಿಸೂಚನೆಗಳು ಮತ್ತು ಆದೇಶಗಳು ಸಂಬಂಧಪಟ್ಟ ಭೂಮಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಭೂ ಕಂದಾಯದ ಜೊತೆಗಿನ ಸ್ಥಳೀಯ ಉಪಕರವೆಂಬಂತೆ ಈ ಪ್ರಕರಣದಡಿಯಲ್ಲಿ ವಿಧಿಸಲಾದ ಸ್ಥಳೀಯ ಉಪಕರಗಳ ಸಂದಾಯ ಮತ್ತು ವಸೂಲಿಗಳಿಗೆ ಅನ್ವಯವಾಗತಕ್ಕದ್ದು.

(3) (1)ನೇ ಉಪ-ಪ್ರಕರಣದಡಿ ಒಂದು ಪಂಚಾಯತಿ ಪ್ರದೇಶದಿಂದ ಸಂಗ್ರಹಿಸಲಾದ ಇಡೀ ಮೊತ್ತವನ್ನು ಆ ಪ್ರದೇಶದ ಗ್ರಾಮ ಪಂಚಾಯತಿಗೆ ವರ್ಗಾವಣೆ ಮಾಡತಕ್ಕದ್ದು.

**205. [1][ಸ್ಥಿರ ಸ್ವತ್ತುಗಳ ವರ್ಗಾವಣೆಯ ಮೇಲೆ ಶುಲ್ಕ][1].-** [1][[2][(1) ಸ್ಥಿರ ಸ್ವತ್ತಿನ ವರ್ಗಾವಣೆಯ ಮೇಲೆ ಸುಂಕವನ್ನು, ತಾಲ್ಲೂಕು ಪಂಚಾಯಿತಿ ಪ್ರದೇಶದ ಪರಿಮಿತಿಗಳೊಳಗೆ ಇರುವ ಸ್ಥಿರ ಸ್ವತ್ತಿನ ಮಾರಾಟ, ದಾನ, ಅಡಮಾನ, ವಿನಿಮಯ ಮತ್ತು ಗುತ್ತಿಗೆಯ ಲಿಖಿತ ಪತ್ರದ ಮೇಲೆ ಕರ್ನಾಟಕ ಸ್ಟಾಂಪು ಅಧಿನಿಯಮ 1957ರ ಮೂಲಕ ವಿಧಿಸಲಾದ ಸುಂಕದ ಶೇಕಡಾ ಮೂರರಷ್ಟು ದರದಲ್ಲಿ ಅಧಿಭಾರದ ರೂಪದಲ್ಲಿ ವಿಧಿಸತಕ್ಕದ್ದು.][2]

ಪರಂತು, ಅಡಮಾನದಿಂದ ಪಡೆದುಕೊಂಡ ಮೊಬಲಗು ಎರಡು ಸಾವಿರ ರೂಪಾಯಿಗಳನ್ನು ಮೀರದಿರುವಲ್ಲಿ, ಅಂಥ ಅಡಮಾನಕ್ಕೆ ಸಂಬಂಧಪಟ್ಟಂತೆ ಯಾವ [2][ವರ್ಗಾವಣೆಯ ಮೇಲಿನ ಶುಲ್ಕವನ್ನು][2] ವಿಧಿಸುವಂತಿಲ್ಲ:

ಅಲ್ಲದೆ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ರಡಿ ಸ್ಟಾಂಪು ಶುಲ್ಕದಿಂದ ವಿನಾಯಿತಿ ಪಡೆದಂಥ ಯಾವುದೇ ಲಿಖಿತ ಪತ್ರದ ಸಂದರ್ಭದಲ್ಲಿ ಯಾವ ಹೆಚ್ಚುವರಿ ಸ್ಟಾಂಪು ಶುಲ್ಕವನ್ನು ವಿಧಿಸತಕ್ಕದ್ದಲ್ಲ.][1]

1. 1996ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿನಾಂಕ: 23-09-1996ರಿಂದ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 01-04-2003ರಿಂದ ಪ್ರತಿಯೋಜಿಸಲಾಗಿದೆ.

(2) ಸರ್ಕಾರವು ಒಂದು ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ (1)ನೇ ಉಪಪ್ರಕರಣದ ಮೇರೆಗೆ ವಿಧಿಸಬಹುದಾದ [1][ವರ್ಗಾವಣೆಯ ಮೇಲಿನ ಶುಲ್ಕ][1] ದರವನ್ನು ನಿರ್ದಿಷ್ಟಪಡಿಸಬಹುದು.

1. 2003ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 01-04-2003ರಿಂದ ಪ್ರತಿಯೋಜಿಸಲಾಗಿದೆ.

(3) [1][ವರ್ಗಾವಣೆಯ ಮೇಲಿನ ಶುಲ್ಕವನ್ನು][1] ಜಾರಿಗೆ ತಂದ ಮೇಲೆ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 28ನೇ ಪ್ರಕರಣವನ್ನು, ತಾಲ್ಲೂಕಿನ ಪರಿಮಿತಿಗಳ ಒಳಗೆ ಮತ್ತು ಅದರ ಹೊರಗೆ ಇರುವ ಸ್ವತ್ತಿಗೆ ಸಂಬಂಧಿಸಿದಂತೆ ವಿವರಗಳನ್ನು ಪ್ರತ್ಯೇಕವಾಗಿ ನಮೂದಿಸಬೇಕೆಂದು ನಿರ್ದಿಷ್ಟಪಡಿಸಿದ್ದರೆ ಹೇಗೋ ಹಾಗೆ ಎಂಬಂತೆ ಓದಿಕೊಳ್ಳತಕ್ಕದ್ದು.

1. 2003ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 01-04-2003ರಿಂದ ಪ್ರತಿಯೋಜಿಸಲಾಗಿದೆ.

(4) (1)ನೇ ಉಪಪ್ರಕರಣದ ಮೇರೆಗೆ ಪ್ರತಿಯೊಂದು ತಾಲ್ಲೂಕಿನಲ್ಲಿರುವ ಜಮೀನುಗಳು ಮತ್ತು ಇರತಕ್ಕ ಸ್ವತ್ತುಗಳಿಗೆ ಸಂಬಂಧಿಸಿದಂತೆ [1][ವರ್ಗಾವಣೆ ಮೇಲಿನ ಶುಲ್ಕವಾಗಿ][1] ವಸೂಲು ಮಾಡಲಾದ ಪೂರ್ಣ ಮೊತ್ತವನ್ನು, ತಾಲ್ಲೂಕಿನ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯದಲ್ಲಿನ ತಾಲ್ಲೂಕು ಪಂಚಾಯತಿಗಳಿಗೆ ವರ್ಗಾಯಿಸತಕ್ಕದ್ದು.

1. 2003ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 01-04-2003ರಿಂದ ಪ್ರತಿಯೋಜಿಸಲಾಗಿದೆ.

(5) [1][ವರ್ಗಾವಣೆ ಮೇಲಿನ ಶುಲ್ಕದ][1] ವಸೂಲಿ ಮತ್ತು ಅದರ ಸಂದಾಯದ ವಿನಿಯಮಕ್ಕಾಗಿ ಸರ್ಕಾರವು ನಿಯಮಗಳನ್ನು ರಚಿಸಬಹುದು.

1. 2003ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: 01-04-2003ರಿಂದ ಪ್ರತಿಯೋಜಿಸಲಾಗಿದೆ.

**206. ಗ್ರಾಮ ಪಂಚಾಯತಿಗಳಿಗೆ ಅನುದಾನ.-** [2][1][2] ಸರ್ಕಾರವು ಪ್ರತಿಯೊಂದು ಗ್ರಾಮ ಪಂಚಾಯತಿಗೆ ವಾರ್ಷಿಕವಾಗಿ [1][ಅದು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ಅಂತಹ ಮೊಬಲಗಿನ, ಆದರೆ ಐದು ಲಕ್ಷ ರೂಪಾಯಿಗಳಿಗೆ ಕಡಿಮೆಯಲ್ಲದ ಅನುದಾನ][1] ನೀಡತಕ್ಕದ್ದು. ಅದನ್ನು ವಿದ್ಯುತ್ ಚಾರ್ಜುಗಳನ್ನು ಭರಿಸಲು, ನೀರು ಸರಬರಾಜು ಯೋಜನೆಗಳು, ನೈರ್ಮಲ್ಯ ವ್ಯವಸ್ಥೆ, ನಿರ್ವಹಣೆ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸತಕ್ಕದ್ದು. ಅನುದಾನದ ಯಾವುದೇ ಭಾಗವನ್ನು, ಮೇಲಿನ ಉದ್ದೇಶಗಳಿಗೆ ಸಂಬಂಧಿಸಿರದ ಸಿಬ್ಬಂದಿ ವೆಚ್ಚಗಳಿಗೆ ಖರ್ಚು ಮಾಡತಕ್ಕದ್ದಲ್ಲ.

1. 2003ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿನಾಂಕ: ೦1-೦4-2೦೦3ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಮರು ಸಂಖ್ಯೆ ನೀಡಲಾಗಿದೆ.

[1][(2) ನಿಧಿಯ ಲಭ್ಯತೆಗೆ ಒಳಪಟ್ಟು, ಸರ್ಕಾರವು ರಾಜ್ಯ ಹಣಕಾಸು ಆಯೋಗವು ನಿರ್ಧರಿಸಬಹುದಾದಂತೆ ಪಂಚಾಯತ್‌ಗಳಿಗೆ ಅನುದಾನಗಳ ಅಂಥ ಶೇಕಡಾವಾರನ್ನು ಹಂಚಿಕೆ ಮಾಡತಕ್ಕದ್ದು ಅದರಲ್ಲಿ ಶೇಕಡಾ ಇಪ್ಪತ್ತು ಮುಕ್ತ (untied) ಅನುದಾನಗಳಾಗಿರತಕ್ಕದ್ದು.

(3) ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟುಗಳ ಉಪಯೋಜನೆಯೆಡೆಗಿನ ಅನುದಾನಗಳ ಹಂಚಿಕೆಯ ವಿಧಾನವು ಗ್ರಾಮಪಂಚಾಯತ್ ಪ್ರದೇಶದಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಜನಗಣತಿಯ ಆಧಾರದ ಮೇಲಿರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**207. ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸಿಬ್ಬಂದಿ ಅನುದಾನ.–** ಸರ್ಕಾರವು ತಾನು ನಿರ್ಧರಿಸುವಂಥ ಪ್ರಮಾಣದಲ್ಲಿ, ಸಿಬ್ಬಂದಿ ವೆಚ್ಚವನ್ನು ಭರಿಸಲು ಪ್ರತಿಯೊಂದು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಅನುದಾನ ನೀಡತಕ್ಕದ್ದು.

**208. ವಿವೇಚನಾತ್ಮಕ ಅನುದಾನ.–** ಸರ್ಕಾರವು, ತಾನು ನಿರ್ಧರಿಸುವಂಥ ಉದ್ದೇಶಗಳಿಗೆ ಮತ್ತು ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟು, ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳಿಗೆ ವಿವೇಚನಾ ಅನುದಾನ ನೀಡಬಹುದು.

## ಅಧ್ಯಾಯ XV

## ಪಂಚಾಯತಿಗಳ ಸ್ವತ್ತುಗಳು ಮತ್ತು ನಿಧಿಗಳು

**209. ಗ್ರಾಮ ಪಂಚಾಯತಿಯು, ಸ್ವತ್ತನ್ನು ಆರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು.–** ಗ್ರಾಮ ಪಂಚಾಯತಿಯು ಅದು ಅಧಿಕಾರ ಹೊಂದಿರುವಂಥ ಪ್ರದೇಶದ ಪರಿಮಿತಿಯೊಳಗೆ ಆಗಲಿ ಅಥವಾ ಅದರ ಹೊರಗೆ ಆಗಲಿ ಇರುವ ಚರ ಅಥವಾ ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಥವಾ ಅದರಲ್ಲಿ ನಿಹಿತಗೊಳಿಸಲಾದ ಅಥವಾ ಅದರಿಂದ ಆರ್ಜಿಸಲಾದ ಯಾವುದೇ ಚರ ಅಥವಾ ಸ್ಥಿರ ಸ್ವತ್ತಿನ ವರ್ಗಾವಣೆಗೆ ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಿರುವ ಇತರ ಎಲ್ಲಾ ಕಾರ್ಯಗಳನ್ನು ಮಾಡಲು ಗ್ರಾಮಪಂಚಾಯತಿಗೆ ಇರುವ ಅಧಿಕಾರವು, ಈ ಸಂಬಂಧದಲ್ಲಿ ಸರ್ಕಾರದಿಂದ ಮಾಡಲಾದ ನಿಯಮಗಳಿಗೆ ಒಳಪಟ್ಟಿರತಕ್ಕದ್ದು:

[1][ಪರಂತು xxx][1]

[2][ಪರಂತು, ಗುತ್ತಿಗೆ ಅಥವಾ ಬಾಡಿಗೆಯ ಮೂಲಕ ಸ್ವತ್ತುಗಳ ವರ್ಗಾವಣೆಯ ಶೇಕಡಾ ಇಪ್ಪತ್ತೈದರಷ್ಟನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದು.][2]

1. 2೦೦3ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: ೦1-1೦-2೦೦3ರಿಂದ ಬಿಟ್ಟುಬಿಡಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**210. ಗ್ರಾಮಪಂಚಾಯತಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವುದು.–** (1) ಕಾಲಕಾಲಕ್ಕೆ ಗ್ರಾಮಪಂಚಾಯತಿಯ ಸಹಮತಿಯೊಂದಿಗೆ ಸಂದರ್ಭಾನುಸಾರ ಸರ್ಕಾರ, ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯಲ್ಲಿ ನಿಹಿತಗೊಳಿಸಿರುವ ಯಾವುದೇ ಸ್ವತ್ತು, ಷರತ್ತುಗಳೊಂದಿಗೆ ಅಥವಾ ಷರತ್ತುಗಳಿಲ್ಲದೆ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿರತಕ್ಕದ್ದೆಂದು ನಿರ್ದೇಶಿಸುವುದಕ್ಕೆ ಸರ್ಕಾರ, ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಸಕ್ಷಮವಾಗಿರತಕ್ಕದ್ದು:

ಪರಂತು, ಸಂದರ್ಭಾನುಸಾರ ಸರ್ಕಾರ, ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯ ಪೂರ್ವಾನುಮೋದನೆಯಿಲ್ಲದೆ ಗ್ರಾಮ ಪಂಚಾಯತಿಯಿಂದ ಮಾಡಲಾದ ಸ್ಥಿರಸ್ವತ್ತಿನ ಯಾವುದೇ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಯು ಮಾನ್ಯವಾಗತಕ್ಕದ್ದಲ್ಲ.

(2) ಗ್ರಾಮ ಪಂಚಾಯತಿ ನಿಧಿಯಿಂದ ಗ್ರಾಮ ಪಂಚಾಯತಿಯು ಮಾಡಿಸಿದ ಪ್ರತಿಯೊಂದು ನಿರ್ಮಾಣ ಕಾಮಗಾರಿಯು ಅಂಥ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದು:

ಪರಂತು, ಸರ್ಕಾರ ತಾನು ಯುಕ್ತವೆಂದು ಭಾವಿಸಿದರೆ ಆದೇಶ ಹೊರಡಿಸುವ ಮೂಲಕ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿರುವ ಅಂಥ ರಸ್ತೆ, ಕಟ್ಟಡ ಅಥವಾ ಇತರ ಕಾಮಗಾರಿ ಸಂದರ್ಭಾನುಸಾರ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಅಥವಾ ಸರ್ಕಾರಕ್ಕೆ ವರ್ಗಾವಣೆಯಾಗಿದೆ ಎಂದು ಅಥವಾ ಅದರಲ್ಲಿ ನಿಹಿತವಾಗಿದೆ ಎಂದು ಘೋಷಿಸಬಹುದು.

(3) ಈ ಅಧಿನಿಯಮದ ಮೇರೆಗೆ ಗ್ರಾಮ ಪಂಚಾಯತಿಯಿಂದ ಸಂಗ್ರಹಿಸಲಾದ ಎಲ್ಲಾ ಕಸ, ಗ್ರಾಮಸಾರ, ಕೊಳೆ ಮತ್ತು ಇತರ ವಸ್ತುಗಳು ಗ್ರಾಮಪಂಚಾಯತಿಗೆ ಸೇರತಕ್ಕದ್ದು.

**211. ಗ್ರಾಮ ಪಂಚಾಯತಿಯಿಂದ ಅಥವಾ ಅದರ ವಿರುದ್ಧವಾಗಿ ಸ್ವತ್ತಿನ ಬಗೆಗಿನ ಕ್ಲೇಮುಗಳ ತೀರ್ಮಾನ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಮಾತ್ರ ಸಾಮಾನ್ಯವಾಗಿ ಉಪಯೋಗಿಸುವ ಭೂಮಿಗಳನ್ನು ಹೊರತುಪಡಿಸಿ, ಇತರ ಭೂಮಿಯ ನೋಂದಣಿಯಾಗಿರುವ ಅಥವಾ ಆಗಬೇಕಾಗಿರುವ ಯಾವುದೇ ಗ್ರಾಮದಲ್ಲಿ, ಗ್ರಾಮ ಪಂಚಾಯತಿ ಅಥವಾ ಅದರ ಪರವಾಗಿ ಅಥವಾ ಯಾವನೇ ವ್ಯಕ್ತಿಯು ಗ್ರಾಮ ಪಂಚಾಯತಿಯ ವಿರುದ್ಧ ಹಕ್ಕನ್ನು ಕ್ಲೇಮು ಮಾಡಿರುವಲ್ಲಿ, ಅಸಿಸ್ಟೆಂಟ್ ಕಮೀಷನರು ಆ ಬಗ್ಗೆ ಸೂಕ್ತ ನೋಟೀಸ್ ನೀಡಿ ವಿಚಾರಣೆ ಮಾಡಿದ ತರುವಾಯ ಕ್ಲೇಮುಗಳನ್ನು ನಿರ್ಧರಿಸಿ ಆದೇಶವನ್ನು ಮಾಡುವುದು ಕಾನೂನು ಸಮ್ಮತವಾಗಿರತಕ್ಕದ್ದು.

(2) (1)ನೇ ಉಪ–ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಡೆಪ್ಯುಟಿ ಕಮೀಷನರಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಡೆಪ್ಯುಟಿ ಕಮೀಷನರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಯಾವನೇ ವ್ಯಕ್ತಿಗೆ ಗೊತ್ತುಪಡಿಸಲಾದ ರೀತಿಯಲ್ಲಿ ನೋಟೀಸನ್ನು ನೀಡಿದ್ದರೆ, ಈ ಪ್ರಕರಣದ ಅಡಿಯಲ್ಲಿ ಯಾವುದೇ ವಿಚಾರಣೆ ಅಥವಾ ಆದೇಶದ ಬಗ್ಗೆ ಅವರಿಗೆ ಸೂಕ್ತ ನೋಟೀಸನ್ನು ಕೊಡಲಾಗಿದೆ ಎಂದು ಭಾವಿಸತಕ್ಕದ್ದು.

**212. ಗ್ರಾಮ ಪಂಚಾಯತಿಯ ನಿಧಿ.**- (1) ಪ್ರತಿಯೊಂದು ಗ್ರಾಮ ಪಂಚಾಯತಿಗೆ ಗ್ರಾಮ ಪಂಚಾಯತಿ ನಿಧಿ ಎಂದು ಕರೆಯಲಾಗುವ ಒಂದು ನಿಧಿ ಇರತಕ್ಕದ್ದು.

(2) ಈ ಕೆಳಕಂಡವು ಗ್ರಾಮ ಪಂಚಾಯತಿ ನಿಧಿಯ ಭಾಗವಾಗಿರತಕ್ಕದ್ದು ಅಥವಾ ಅದಕ್ಕೆ ಸಂದಾಯವಾಗುವಂಥವುಗಳಾಗಿರತಕ್ಕದ್ದು, ಎಂದರೆ:-

(ಎ) ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಥವಾ ಇತರ ಯಾವುದೇ ಲೆಕ್ಕದಲ್ಲಿ ಸರ್ಕಾರದಿಂದ ಅಥವಾ ಜಿಲ್ಲಾ ಪಂಚಾಯತಿಯಿಂದ ಅಥವಾ ತಾಲ್ಲೂಕು ಪಂಚಾಯತಿಯಿಂದ ಗ್ರಾಮ ಪಂಚಾಯತಿಗೆ ನೀಡಬಹುದಾದ ಅಥವಾ ಮಂಜೂರು ಮಾಡಬಹುದಾದ ಮೊಬಲಗು;

(ಬಿ) ಗ್ರಾಮ ಪಂಚಾಯತಿಯು ವಿಧಿಸಿದ ಯಾವುದೇ ತೆರಿಗೆ, ದರ ಮತ್ತು ಫೀಜಿನಿಂದ ಬಂದ ಉತ್ಪತ್ತಿಗಳು;

(ಸಿ) ಸರ್ಕಾರದಿಂದ ಅಥವಾ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯಿಂದ ಸಾಲಗಳು ಅಥವಾ ಕೊಡುಗೆಗಳ ರೂಪದಲ್ಲಿ ಅಥವಾ ಕಾಣಿಕೆಯ ರೂಪದಲ್ಲಿ ಗ್ರಾಮ ಪಂಚಾಯತಿಯಿಂದ ಸ್ವೀಕರಿಸಲಾದ ಎಲ್ಲಾ ಮೊತ್ತಗಳು;

(ಡಿ) ಗ್ರಾಮ ಪಂಚಾಯತಿಯ ಮಾಲೀಕತ್ವದ ಅಥವಾ ಅದರಲ್ಲಿ ನಿಹಿತವಾದ ಯಾವುದೇ ಸ್ಥಿರ ಅಥವಾ ಚರಸ್ವತ್ತಿನ ಬಾಡಿಗೆ ಅಥವಾ ಅದರಿಂದ ಬರುವ ಇತರ ಆದಾಯ ಅಥವಾ ಮಾರಾಟದಿಂದ ಬರುವ ಉತ್ಪತ್ತಿ; ಮತ್ತು

(ಇ) ಯಾವುದಾದರೂ ಮೂಲದಿಂದ ಬರುವ ಇತರ ಎಲ್ಲಾ ಮೊತ್ತಗಳು.

(3) "ಗ್ರಾಮ ಪಂಚಾಯತಿ ನಿಧಿ"ಗೆ ಜಮೆಯಾಗುವ ಮೊತ್ತಗಳನ್ನು ತಾಲ್ಲೂಕಿನ ಸರ್ಕಾರಿ ಖಜಾನೆಯಲ್ಲಿ ಅಥವಾ ಕಾರ್ಯನಿರ್ವಾಹಕ ಅಧಿಕಾರಿಯ ಅನುಮೋದನೆಯೊಂದಿಗೆ ಯಾವುದೇ ಪಂಚಾಯತಿ ಪ್ರದೇಶದಲ್ಲಿರುವ ಅಥವಾ ನೆರೆಯ ಪಂಚಾಯತಿ ಪ್ರದೇಶದಲ್ಲಿರುವ ಯಾವುದೇ ಅನುಸೂಚಿತ ಬ್ಯಾಂಕ್ ಅಥವಾ ಸಹಕಾರಿ ಬ್ಯಾಂಕಿನಲ್ಲಿ ಇಡತಕ್ಕದ್ದು.

**213. ಗ್ರಾಮ ಪಂಚಾಯತಿ ನಿಧಿಯನ್ನು ಮತ್ತು ಸ್ವತ್ತನ್ನು ಬಳಸುವುದು.**- (1) ಈ ಅಧಿನಿಯಮದ ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳಿಗೆ ಮತ್ತು ಸರ್ಕಾರ ಮಾಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಗ್ರಾಮ ಪಂಚಾಯತಿಯ ಮಾಲೀಕತ್ವದ ಅಥವಾ ಅದರಲ್ಲಿ ನಿಹಿತವಾದ ಎಲ್ಲಾ ಸ್ವತ್ತನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಅದಕ್ಕೆ ಪ್ರಾಪ್ತವಾದ ಎಲ್ಲಾ ಮೊಬಲಗನ್ನು 58 ಮತ್ತು 59ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗೆ ಮತ್ತು ಈ ಅಧಿನಿಯಮದಿಂದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಿಂದ ಅಥವಾ ಅದರ ಅಡಿಯಲ್ಲಿ ಗ್ರಾಮ ಪಂಚಾಯತಿಗೆ ಅಧಿಕಾರಗಳನ್ನು ವಹಿಸಿಕೊಡಲಾದ ಅಥವಾ ಕರ್ತವ್ಯಗಳನ್ನು ವಿಧಿಸಲಾದ ಇತರ ಎಲ್ಲಾ ಉದ್ದೇಶಗಳಿಗೆ ಬಳಸತಕ್ಕದ್ದು:

ಪರಂತು, ಗ್ರಾಮ ಪಂಚಾಯತಿಯ ನಿಧಿಯಿಂದ ಯಾವುದೇ ವೆಚ್ಚವನ್ನು, ಗ್ರಾಮ ಪಂಚಾಯತಿಯು ಬಜೆಟ್‌ನಲ್ಲಿ ಅದಕ್ಕಾಗಿ ಏರ್ಪಾಟನ್ನು ಮಾಡಿದ ಅಥವಾ ವಿದ್ಯುಕ್ತವಾಗಿ ಅಂಗೀಕೃತವಾದ ಪುನರ್ವಿನಿಯೋಗದ ಮೂಲಕ ನಿಧಿಯನ್ನು ಪಡೆದ ಹೊರತು, ಗೊತ್ತುಪಡಿಸಿದಂಥ ಸಂದರ್ಭಗಳಲ್ಲಿ ಹೊರತಾಗಿ, ಮಾಡತಕ್ಕದ್ದಲ್ಲ:

ಅಲ್ಲದೆ, ಕಲ್ಯಾಣ ಚಟುವಟಿಕೆಗಳ ಉದ್ದೇಶದ ನಿಧಿಗಳಲ್ಲಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಉಪಯೋಗಿಸತಕ್ಕದ್ದು.

(2) ಗ್ರಾಮ ಪಂಚಾಯತಿ ನಿಧಿಯನ್ನು, ಈ ಮುಂದಿನ ಉದ್ದೇಶಗಳಿಗಾಗಿ ಕೂಡ ಉಪಯೋಗಿಸತಕ್ಕದ್ದು:-

(i) ಅಧ್ಯಕ್ಷ ಮತ್ತು ಉಪಾಧ್ಯಕ್ಷ, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು, ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು ಗ್ರಾಮ ಪಂಚಾಯತಿ ಅಥವಾ ಅದರ ಯಾವುದೇ ಸಮಿತಿಯ ಸದಸ್ಯರ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಉಪವೇಶನ ಶುಲ್ಕಗಳನ್ನು ಸಂದಾಯ ಮಾಡಲು;

(ii) ಗ್ರಾಮ ಪಂಚಾಯತಿಯಿಂದ ಎತ್ತಲಾಗುವ ಯಾವುದೇ ಸಾಲದ ಮೇಲೆ ಬಾಕಿಯಿರುವ ಯಾವುವೇ ಮೊಬಲಗುಗಳನ್ನು ಸಂದಾಯ ಮಾಡಲು;

(iii) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಪೂರ್ವ ಮಂಜೂರಾತಿಯೊಂದಿಗೆ, [1][ಮತ್ತು ಸರ್ಕಾರವು ನಿರ್ದಿಷ್ಟಪಡಿಸಿದ ಮಾರ್ಗದರ್ಶನಗಳಿಗೆ ಅನುಸಾರವಾಗಿ][1] ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಂತಹ ಸ್ವತ್ತನ್ನು ಅಥವಾ ನಿಧಿಯನ್ನು ಬಳಸುವುದು ಅವಶ್ಯವಾದ ಯಾವುದೇ ಇತರ ಉದ್ದೇಶಕ್ಕೆ ಬಳಸಬಹುದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

ಪರಂತು, ಸರ್ಕಾರದಿಂದ ಅಥವಾ ಯಾವನೇ ವ್ಯಕ್ತಿಯಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ ನಿರ್ದಿಷ್ಟ ಕೆಲಸಕ್ಕಾಗಿ ಅಥವಾ ಉದ್ದೇಶಕ್ಕಾಗಿ ಗ್ರಾಮ ಪಂಚಾಯತಿಗೆ ನೀಡಲಾದ ಯಾವುದೇ ಮೊಬಲಗನ್ನು ಕೇವಲ ಅಂತಹ ಕೆಲಸಕ್ಕಾಗಿ ಅಥವಾ ಉದ್ದೇಶಕ್ಕಾಗಿ ಮತ್ತು ಸರ್ಕಾರವು ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ನಿರ್ದಿಷ್ಟಪಡಿಸುವಂಥ ಸೂಚನೆಗಳ ಅನುಸಾರವಾಗಿ ಬಳಸತಕ್ಕದ್ದು.

**214. ಗ್ರಾಮ ಪಂಚಾಯತಿಯು ಸಾಲಗಳನ್ನು ಎತ್ತಬಹುದು ಮತ್ತು ಋಣಪರಿಹಾರ ನಿಧಿಯನ್ನು ರಚಿಸಬಹುದು.**- ಗ್ರಾಮ ಪಂಚಾಯತಿಯು, ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಕಾಲಕಾಲಕ್ಕೆ ಅದು ವಿಧಿಸುವ ಷರತ್ತಿಗೊಳಪಟ್ಟು ಯಾವುದೇ ಕಾಮಗಾರಿಯ ನಿರ್ವಹಣೆಗಾಗಿ ಅಥವಾ ಈ ಅಧಿನಿಯಮದ ಯಾವುದೇ ಏರ್ಪಾಟನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಸಾಲಗಳನ್ನು ಎತ್ತಬಹುದು ಮತ್ತು ಅಂತಹ ಸಾಲಗಳ ಮರುಸಂದಾಯಕ್ಕಾಗಿ ಗೊತ್ತುಪಡಿಸಿದ ರೀತಿಯಲ್ಲಿ ಒಂದು ಋಣ ಪರಿಹಾರ ನಿಧಿಯನ್ನು ರಚಿಸಬಹುದು.

**215. ತಾಲ್ಲೂಕು ಪಂಚಾಯತಿಯು, ಸ್ವತ್ತನ್ನು ಆರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು.**- ತಾಲ್ಲೂಕು ಪಂಚಾಯತಿಯು, ತಾನು ಅಧಿಕಾರ ಹೊಂದಿರುವಂಥ ಪ್ರದೇಶದ ಪರಿಮಿತಿಗಳೊಳಗೆ ಆಗಲಿ ಅಥವಾ ಅದರ ಹೊರಗೆ ಆಗಲಿ ಇರುವ ಸ್ಥಿರ ಮತ್ತು ಚರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಥವಾ ತನ್ನಲ್ಲಿ ನಿಹಿತವಾಗಿರುವ ಅಥವಾ ತನ್ನಿಂದ ಆರ್ಜಿತವಾಗಿರುವ ಯಾವುದೇ ಚರ ಅಥವಾ ಸ್ಥಿರ ಸ್ವತ್ತಿನ ವರ್ಗಾವಣೆಗೆ ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಿರುವ ಇತರ ಎಲ್ಲಾ ಕಾರ್ಯಗಳನ್ನು ಮಾಡಲು ತಾಲ್ಲೂಕು ಪಂಚಾಯತಿಗೆ ಇರುವ ಅಧಿಕಾರವು, ಈ ಸಂಬಂಧದಲ್ಲಿ ಗೊತ್ತುಪಡಿಸಬಹುದಾದ ನಿಯಮಗಳಿಗೆ ಒಳಪಟ್ಟಿರತಕ್ಕದ್ದು:

[1][xxx][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಬಿಟ್ಟುಬಿಡಲಾಗಿದೆ.

**216. ತಾಲ್ಲೂಕು ಪಂಚಾಯತಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವುದು.**- (1) ಕಾಲಕಾಲಕ್ಕೆ ತಾಲ್ಲೂಕು ಪಂಚಾಯತಿಯ ಸಹಮತಿಯೊಂದಿಗೆ, ಸಂದರ್ಭಾನುಸಾರ ಸರ್ಕಾರ ಅಥವಾ ಜಿಲ್ಲಾ ಪಂಚಾಯತಿಯಲ್ಲಿ ನಿಹಿತವಾಗಿರುವ ಯಾವುದೇ ಸ್ವತ್ತು, ಷರತ್ತುಗಳೊಂದಿಗೆ ಅಥವಾ ಷರತ್ತುಗಳಿಲ್ಲದೆ ತಾಲ್ಲೂಕು ಪಂಚಾಯತಿಯಲ್ಲಿ ನಿಹಿತವಾಗಿರತಕ್ಕದ್ದೆಂದು ನಿರ್ದೇಶಿಸುವುದಕ್ಕೆ ಸರ್ಕಾರ ಅಥವಾ ಜಿಲ್ಲಾ ಪಂಚಾಯತಿ ಸಕ್ಷಮವಾಗಿರತಕ್ಕದ್ದು:

ಪರಂತು, ಸಂದರ್ಭಾನುಸಾರ ಸರ್ಕಾರ ಅಥವಾ ಜಿಲ್ಲಾ ಪಂಚಾಯತಿಯ ಪೂರ್ವಾನುಮೋದನೆಯಿಲ್ಲದೆ ತಾಲ್ಲೂಕು ಪಂಚಾಯತಿಯು ಮಾಡಿದ, ಸ್ಥಿರಸ್ವತ್ತಿನ ಯಾವುದೇ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಯು ಮಾನ್ಯವಾಗತಕ್ಕದ್ದಲ್ಲ.

(2) ತಾಲ್ಲೂಕು ಪಂಚಾಯತಿ ನಿಧಿಯಿಂದ ತಾಲ್ಲೂಕು ಪಂಚಾಯತಿಯು ಮಾಡಿಸಿದ ಪ್ರತಿಯೊಂದು ನಿರ್ಮಾಣ ಕಾಮಗಾರಿಯು ಅಂಥ ತಾಲ್ಲೂಕು ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದು:

ಪರಂತು, ಸರ್ಕಾರ ಯುಕ್ತವೆಂದು ಭಾವಿಸಿದರೆ ಆದೇಶ ಹೊರಡಿಸುವ ಮೂಲಕ ತಾಲ್ಲೂಕು ಪಂಚಾಯತಿಯಲ್ಲಿ ನಿಹಿತವಾಗಿರುವ ಅಂಥ ರಸ್ತೆ, ಕಟ್ಟಡ ಅಥವಾ ಇತರ ಕಾಮಗಾರಿಯು ಸಂದರ್ಭಾನುಸಾರ ಜಿಲ್ಲಾ ಪಂಚಾಯತಿಗೆ ಅಥವಾ ಸರ್ಕಾರಕ್ಕೆ ವರ್ಗಾವಣೆಯಾಗಿದೆ ಅಥವಾ ಅದರಲ್ಲಿ ನಿಹಿತವಾಗಿದೆ ಎಂದು ಘೋಷಿಸಬಹುದು.

**217. ಸ್ವತ್ತಿಗೆ ತಾಲ್ಲೂಕು ಪಂಚಾಯತಿಯು ಅಥವಾ ಅದರ ವಿರುದ್ಧವಾಗಿ ಮಾಡಿದ ಕ್ಲೇಮುಗಳ ತೀರ್ಮಾನ.**- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಮಾತ್ರ ಸಾಮಾನ್ಯವಾಗಿ ಉಪಯೋಗಿಸುವ ಭೂಮಿಗಳನ್ನು ಹೊರತುಪಡಿಸಿ, ಇತರ ಭೂಮಿಯ ಮೋಜಣಿಯಾಗಿರುವ ಅಥವಾ ಆಗಬೇಕಾಗಿರುವ ಯಾವುದೇ ತಾಲ್ಲೂಕಿನಲ್ಲಿ, ತಾಲ್ಲೂಕು ಪಂಚಾಯತಿ ಅಥವಾ ಅದರ ಪರವಾಗಿ ಅಥವಾ ಯಾವನೇ ವ್ಯಕ್ತಿಯು ತಾಲ್ಲೂಕು ಪಂಚಾಯತಿಯ ವಿರುದ್ಧ ಹಕ್ಕನ್ನು ಕ್ಲೇಮು ಮಾಡಿರುವಲ್ಲಿ, ಡೆಪ್ಯುಟಿ ಕಮಿಷನರು ಆ ಬಗ್ಗೆ ಸೂಕ್ತ ನೋಟೀಸು ನೀಡಿ ವಿಚಾರಣೆ ಮಾಡಿದ ತರುವಾಯ ಕ್ಲೇಮುಗಳನ್ನು ನಿರ್ಧರಿಸಿ ಆದೇಶವನ್ನು ಮಾಡುವುದು ಕಾನೂನು ಸಮ್ಮತವಾದುದಾಗಿರತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಕಮಿಷನರಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಕಮಿಶನರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಯಾವನೇ ವ್ಯಕ್ತಿಗೆ, ಗೊತ್ತುಪಡಿಸಿರುವ ರೀತಿಯಲ್ಲಿ ನೋಟೀಸನ್ನು ನೀಡಿದ್ದರೆ, ಈ ಪ್ರಕರಣದ ಅಡಿಯಲ್ಲಿ ಯಾವುದೇ ವಿಚಾರಣೆಯ ಅಥವಾ ಆದೇಶದ ಬಗ್ಗೆ ಅವನಿಗೆ ಸೂಕ್ತ ನೋಟೀಸು ಕೊಡಲಾಗಿದೆ ಎಂದು ಭಾವಿಸತಕ್ಕದ್ದು.

**218. ತಾಲ್ಲೂಕು ಪಂಚಾಯತಿ ನಿಧಿ.**- (1) ಪ್ರತಿಯೊಂದು ತಾಲ್ಲೂಕು ಪಂಚಾಯತಿಗೆ ತಾಲ್ಲೂಕು ಪಂಚಾಯತಿ ನಿಧಿ ಎಂದು ಕರೆಯಲಾಗುವ ಒಂದು ನಿಧಿ ಇರತಕ್ಕದ್ದು.

(2) ಈ ಕೆಳಕಂಡವು ತಾಲ್ಲೂಕು ಪಂಚಾಯತಿ ನಿಧಿಯ ಭಾಗವಾಗಿರತಕ್ಕದ್ದು ಅಥವಾ ಅದಕ್ಕೆ ಸಂದಾಯವಾಗುವಂಥವುಗಳಾಗಿರತಕ್ಕದ್ದು, ಎಂದರೆ:-

(ಎ) ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಥವಾ ಇತರ ಯಾವುದೇ ಲೆಕ್ಕದಲ್ಲಿ ಸರ್ಕಾರವು ಅಥವಾ ಜಿಲ್ಲಾ ಪಂಚಾಯತಿಯು ತಾಲ್ಲೂಕು ಪಂಚಾಯತಿಗೆ ನೀಡಬಹುದಾದ ಅಥವಾ ವರ್ಗಾಯಿಸಬಹುದಾದ ಮೊಬಲಗು;

(ಬಿ) ತಾಲ್ಲೂಕು ಪಂಚಾಯತಿಯು ವಿಧಿಸಿದ ಯಾವುದೇ ತೆರಿಗೆ, ದರ ಮತ್ತು ಫೀಜಿನಿಂದ ಬಂದ ಉತ್ಪತ್ತಿಗಳು;

(ಸಿ) ಸರ್ಕಾರದಿಂದ ಅಥವಾ ಇತರ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯಿಂದ ಸಾಲಗಳು ಅಥವಾ ಕೊಡುಗೆಗಳ ರೂಪದಲ್ಲಿ ಅಥವಾ ಕಾಣಿಕೆಯ ರೂಪದಲ್ಲಿ ತಾಲ್ಲೂಕು ಪಂಚಾಯತಿಯಿಂದ ಸ್ವೀಕರಿಸಲಾದ ಎಲ್ಲಾ ಮೊತ್ತಗಳು;

(ಡಿ) ತಾಲ್ಲೂಕು ಪಂಚಾಯತಿಯ ಮಾಲೀಕತ್ವದ ಅಥವಾ ಅದರಲ್ಲಿ ನಿಹಿತವಾದ ಯಾವುದೇ ಸ್ಥಿರ ಅಥವಾ ಚರಸ್ವತ್ತಿನ ಬಾಡಿಗೆ ಅಥವಾ ಅದರಿಂದ ಬರುವ ಇತರ ಆದಾಯ ಅಥವಾ ಮಾರಾಟದಿಂದ ಬರುವ ಉತ್ಪತ್ತಿ; ಮತ್ತು

(ಇ) ಯಾವುದಾದರೂ ಮೂಲದಿಂದ ಬರುವ ಇತರ ಎಲ್ಲಾ ಮೊತ್ತಗಳು:

ಪರಂತು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ದತ್ತಿಯ ರೂಪದಲ್ಲಿ ಸ್ವೀಕರಿಸಿದ ಯಾವುವೇ ಮೊತ್ತಗಳು ತಾಲ್ಲೂಕು ಪಂಚಾಯತಿ ನಿಧಿಯ ಭಾಗವಾಗಿರತಕ್ಕದ್ದಲ್ಲ ಅಥವಾ ಅದಕ್ಕೆ ಸಂದಾಯಮಾಡತಕ್ಕದ್ದಲ್ಲ.

(3) "ತಾಲ್ಲೂಕು ಪಂಚಾಯತಿ ನಿಧಿ"ಗೆ ಜಮೆಯಾಗುವ ಮೊತ್ತಗಳನ್ನು ತಾಲ್ಲೂಕಿನ ಸರ್ಕಾರಿ ಖಜಾನೆಯಲ್ಲಿ ಇಡತಕ್ಕದ್ದು.

**219. ತಾಲ್ಲೂಕು ಪಂಚಾಯತಿ ನಿಧಿಯನ್ನು ಮತ್ತು ಸ್ವತ್ತನ್ನು ಬಳಸುವುದು.**- (1) ಈ ಅಧಿನಿಯಮದ ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳಿಗೆ ಮತ್ತು ಸರ್ಕಾರ ಮಾಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ತಾಲ್ಲೂಕು ಪಂಚಾಯತಿಯ ಮಾಲೀಕತ್ವದ ಅಥವಾ ಅದರಲ್ಲಿ

ನಿಹಿತವಾದ ಎಲ್ಲಾ ಸ್ವತ್ತನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಅದಕ್ಕೆ ಪ್ರಾಪ್ತವಾದ ಎಲ್ಲಾ ಮೊಬಲಗನ್ನು 145 ಮತ್ತು 146ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗೆ ಮತ್ತು ಈ ಅಧಿನಿಯಮದಿಂದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಿಂದ ಅಥವಾ ಅದರ ಅಡಿಯಲ್ಲಿ ತಾಲ್ಲೂಕು ಪಂಚಾಯತಿಗೆ ಅಧಿಕಾರಗಳನ್ನು ವಹಿಸಿಕೊಡಲಾದ ಅಥವಾ ಕರ್ತವ್ಯಗಳನ್ನು ವಿಧಿಸಲಾದ ಇತರ ಎಲ್ಲಾ ಉದ್ದೇಶಗಳಿಗೆ ಬಳಸತಕ್ಕದ್ದು:

ಪರಂತು, ತಾಲ್ಲೂಕು ಪಂಚಾಯತಿಯ ನಿಧಿಯಿಂದ ಯಾವುದೇ ವೆಚ್ಚವನ್ನು ತಾಲ್ಲೂಕು ಪಂಚಾಯತಿಯು, ಬಜೆಟ್‌ನಲ್ಲಿ ಅದಕ್ಕಾಗಿ ಏರ್ಪಾಟನ್ನು ಮಾಡಿದ ಅಥವಾ ವಿಧ್ಯುಕ್ತವಾಗಿ ಅಂಗೀಕೃವಾದ ಪುನರ್‌ವಿನಿಯೋಗದ ಮೂಲಕ ನಿಧಿಯನ್ನು ಪಡೆದ ಹೊರತು, ಗೊತ್ತುಪಡಿಸಿದಂಥ ಸಂದರ್ಭಗಳಲ್ಲಿ ಹೊರತಾಗಿ, ಮಾಡತಕ್ಕದ್ದಲ್ಲ:

ಅಷ್ಟೇ ಅಲ್ಲದೆ, ಕಲ್ಯಾಣ ಚಟುವಟಿಕೆಗಳ ಉದ್ದೇಶದ ನಿಧಿಗಳಲ್ಲಿ ಶೇಕಡ ಇಪ್ಪತ್ತಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಉಪಯೋಗಿಸತಕ್ಕದ್ದು.

(2) ತಾಲ್ಲೂಕು ಪಂಚಾಯತಿ ನಿಧಿಯನ್ನು ಈ ಮುಂದಿನ ಉದ್ದೇಶಗಳಿಗಾಗಿ ಕೂಡ ಉಪಯೋಗಿಸತಕ್ಕದ್ದು:-

(i) ಅಧ್ಯಕ್ಷ ಮತ್ತು ಉಪಾಧ್ಯಕ್ಷ, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು, ಈ ಸಂಬಂಧದಲ್ಲಿ ಸರ್ಕಾರವು ಮಾಡಿರುವ ನಿಯಮಗಳಿಗೊಳಪಟ್ಟು ತಾಲ್ಲೂಕು ಪಂಚಾಯತಿ ಅಥವಾ ಅದರ ಯಾವುದೇ ಸಮಿತಿಯ ಸದಸ್ಯರ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಉಪವೇಶನ ಶುಲ್ಕಗಳನ್ನು ಸಂದಾಯ ಮಾಡಲು;

(ii) ತಾಲ್ಲೂಕು ಪಂಚಾಯತಿಯು ಎತ್ತುವ ಯಾವುದೇ ಸಾಲದ ಮೇಲೆ ಬಾಕಿಯಿರುವ ಯಾವುದೇ ಮೊಬಲಗನ್ನು ಸಂದಾಯ ಮಾಡಲು;

(iii) [1][ಸರ್ಕಾರದ][1] ಪೂರ್ವ ಮಂಜೂರಾತಿಯೊಂದಿಗೆ, ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಂತಹ ಸ್ವತ್ತನ್ನು ಅಥವಾ ನಿಧಿಯನ್ನು ಬಳಸುವುದು ಅವಶ್ಯವಾದ ಯಾವುದೇ ಇತರ ಉದ್ದೇಶಕ್ಕೆ ಬಳಸಬಹುದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

ಪರಂತು, ಸರ್ಕಾರದಿಂದ ಅಥವಾ ಯಾವನೇ ವ್ಯಕ್ತಿಯಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ ನಿರ್ದಿಷ್ಟ ಕೆಲಸಕ್ಕಾಗಿ ಅಥವಾ ಉದ್ದೇಶಕ್ಕಾಗಿ ತಾಲ್ಲೂಕು ಪಂಚಾಯತಿಗೆ ನೀಡಲಾದ ಯಾವುದೇ ಮೊಬಲಗನ್ನು ಕೇವಲ ಅಂತಹ ಕೆಲಸಕ್ಕಾಗಿ ಅಥವಾ ಉದ್ದೇಶಕ್ಕಾಗಿ ಮತ್ತು ಸರ್ಕಾರವು ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ನಿರ್ದಿಷ್ಟಪಡಿಸುವಂತಹ ಸೂಚನೆಗಳ ಅನುಸಾರವಾಗಿ ಬಳಸತಕ್ಕದ್ದು.

**220. ತಾಲ್ಲೂಕು ಪಂಚಾಯತಿಯು ಸಾಲಗಳನ್ನು ಎತ್ತಬಹುದು ಮತ್ತು ಋಣ ಪರಿಹಾರ ನಿಧಿಯನ್ನು ರಚಿಸಬಹುದು.**- ತಾಲ್ಲೂಕು ಪಂಚಾಯತಿಯು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಕಾಲ ಕಾಲಕ್ಕೆ ಅದು ವಿಧಿಸುವ ಷರತ್ತಿಗೊಳಪಟ್ಟು ಯಾವುದೇ ಕಾಮಗಾರಿಯ ನಿರ್ವಹಣೆಗಾಗಿ ಅಥವಾ ಈ ಅಧಿನಿಯಮದ ಯಾವುದೇ ಏರ್ಪಾಟನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಸಾಲಗಳನ್ನು ಎತ್ತಬಹುದು ಮತ್ತು ಅಂತಹ ಸಾಲಗಳ ಮರುಸಂದಾಯಕ್ಕಾಗಿ ಗೊತ್ತುಪಡಿಸಿದ ರೀತಿಯಲ್ಲಿ, ಒಂದು ಋಣಪರಿಹಾರ ನಿಧಿಯನ್ನು ರಚಿಸಬಹುದು.

**221. ಬಾಡಿಗೆಗಳು ಮತ್ತು ಫೀಜುಗಳು.**- ಈ ಅಧಿನಿಯಮದಲ್ಲಿ ಉಪಬಂಧಿಸಿರುವುದರ ಹೊರತು ಮತ್ತು ಈ ಸಂಬಂಧದಲ್ಲಿ ಮಾಡಲಾಗುವ ವಿನಿಯಮಗಳಿಗೆ ಒಳಪಟ್ಟು, ತಾಲ್ಲೂಕು ಪಂಚಾಯತಿಯು, ಈ ಅಧಿನಿಯಮದ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಮೇರೆಗೆ ತಾನು ನೀಡುವ ಯಾವುದೇ ಲೈಸನ್ಸಿಗೆ ಅಥವಾ ಅನುಮತಿಗೆ ಫೀಜನ್ನು ವಿಧಿಸಬಹುದು ಮತ್ತು ತನ್ನ ನಿಯಂತ್ರಣದಲ್ಲಿರುವ ಅಥವಾ ತನ್ನಲ್ಲಿ ನಿಹಿತವಾಗಿರುವ ಅಥವಾ ತಾಲ್ಲೂಕು ಪಂಚಾಯತಿ ನಿಧಿಯಿಂದ ನಿರ್ವಹಿಸಲಾಗುವ ಯಾವುದೇ ಜಮೀನು ಅಥವಾ ಇತರ ಸ್ವತ್ತಿನ ಸ್ವಾಧೀನತೆಗೆ ಅಥವಾ ಬಳಕೆಗೆ ಬಾಡಿಗೆಗಳನ್ನು ಮತ್ತು ಫೀಜುಗಳನ್ನು ವಿಧಿಸಬಹುದು.

**222. ಜಿಲ್ಲಾ ಪಂಚಾಯತಿಯು, ಸ್ವತ್ತನ್ನು ಆರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು.**- ಜಿಲ್ಲಾ ಪಂಚಾಯತಿಯು, ತಾನು ಅಧಿಕಾರ ಹೊಂದಿರುವಂಥ ಪ್ರದೇಶದ ಪರಿಮಿತಿಗಳೊಳಗೆ ಆಗಲಿ ಅಥವಾ ಹೊರಗೆ ಆಗಲಿ ಇರುವ ಚರ ಮತ್ತು ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಥವಾ ತನ್ನಲ್ಲಿ ನಿಹಿತವಾಗಿರುವ ಅಥವಾ ತಾನು ಆರ್ಜಿಸಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತಿನ ವರ್ಗಾವಣೆಗೆ ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಿರುವ ಇತರ ಎಲ್ಲಾ ಕಾರ್ಯಗಳನ್ನು ಮಾಡಲು ಜಿಲ್ಲಾ ಪಂಚಾಯತಿಗೆ ಇರುವ ಅಧಿಕಾರವು ಈ ಸಂಬಂಧದಲ್ಲಿ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟಿರತಕ್ಕದ್ದು:

[1][xxx][1]

1. 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಬಿಟ್ಟುಬಿಡಲಾಗಿದೆ.

**223. ಜಿಲ್ಲಾ ಪಂಚಾಯತಿಯಲ್ಲಿ ಸ್ವತ್ತನ್ನು ನಿಹಿತಗೊಳಿಸುವುದು.**- (1) ಕಾಲಕಾಲಕ್ಕೆ ಜಿಲ್ಲಾ ಪಂಚಾಯತಿಯ ಸಹಮತಿಯೊಂದಿಗೆ, ಸರ್ಕಾರದಲ್ಲಿ ನಿಹಿತವಾಗಿರುವ, ಯಾವುದೇ ಸ್ವತ್ತು ಜಿಲ್ಲಾ ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದೆಂದು ನಿರ್ದೇಶಿಸುವುದಕ್ಕೆ ಸರ್ಕಾರ ಸಕ್ಷಮವಾಗಿರತಕ್ಕದ್ದು:

ಪರಂತು, ಸಂದರ್ಭಾನುಸಾರ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಜಿಲ್ಲಾ ಪಂಚಾಯತಿಯು ಮಾಡಿದ ಸ್ಥಿರ ಸ್ವತ್ತಿನ ಯಾವುದೇ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಯು ಮಾನ್ಯವಾಗತಕ್ಕದ್ದಲ್ಲ.

(2) ಜಿಲ್ಲಾ ಪಂಚಾಯತಿ ನಿಧಿಯಿಂದ ಜಿಲ್ಲಾ ಪಂಚಾಯತಿಯು ಮಾಡಿಸಿದ ಪ್ರತಿಯೊಂದು ನಿರ್ಮಾಣ ಕಾಮಗಾರಿಯು ಅಂಥ ಜಿಲ್ಲಾ ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದು:

ಪರಂತು, ಸರ್ಕಾರವು ತಾನು ಯುಕ್ತವೆಂದು ಭಾವಿಸಿದರೆ ಆದೇಶ ಹೊರಡಿಸುವ ಮೂಲಕ ಜಿಲ್ಲಾ ಪಂಚಾಯತಿಯಲ್ಲಿ ನಿಹಿತವಾಗಿರುವ ಅಂಥ ರಸ್ತೆ, ಕಟ್ಟಡ ಅಥವಾ ಇತರ ಕಾಮಗಾರಿಗಳು ಸರ್ಕಾರಕ್ಕೆ ವರ್ಗಾವಣೆಯಾಗಿದೆ ಅಥವಾ ಅದರಲ್ಲಿ ನಿಹಿತವಾಗಿದೆ ಎಂದು ಘೋಷಿಸಬಹುದು.

**224. ಸ್ವತ್ತಿಗೆ ಜಿಲ್ಲಾ ಪಂಚಾಯತಿಯು ಅಥವಾ ಅದರ ವಿರುದ್ಧವಾಗಿ ಮಾಡಿದ ಕ್ಲೇಮುಗಳ ತೀರ್ಮಾನ.**- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಮಾತ್ರ ಸಾಮಾನ್ಯವಾಗಿ ಉಪಯೋಗಿಸುವ ಭೂಮಿಗಳನ್ನು ಹೊರತುಪಡಿಸಿ, ಇತರ ಭೂಮಿಯ ಮೋಜಣಿಯಾಗಿರುವ ಅಥವಾ

ಆಗಬೇಕಾಗಿರುವ ಯಾವುದೇ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ ಅಥವಾ ಅದರ ಪರವಾಗಿ ಅಥವಾ ಯಾವನೇ ವ್ಯಕ್ತಿಯು ಜಿಲ್ಲಾ ಪಂಚಾಯತಿಯ ವಿರುದ್ಧ ಹಕ್ಕನ್ನು ಕ್ಲೇಮು ಮಾಡಿರುವಲ್ಲಿ, ಡೆಪ್ಯುಟಿ ಕಮಿಷನರು ಆ ಬಗ್ಗೆ ಸೂಕ್ತ ನೋಟೀಸು ನೀಡಿ ವಿಚಾರಣೆ ಮಾಡಿದ ತರುವಾಯ ಕ್ಲೇಮುಗಳನ್ನು ನಿರ್ಧರಿಸಿ ಆದೇಶವನ್ನು ಮಾಡುವುದು ಕಾನೂನುಸಮ್ಮತವಾಗಿರತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಕಮಿಷನರಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಕಮಿಷನರ್ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(3) ಯಾವನೇ ವ್ಯಕ್ತಿಗೆ, ಗೊತ್ತುಪಡಿಸಲಾದ ರೀತಿಯಲ್ಲಿ ನೋಟೀಸನ್ನು ನೀಡಿದ್ದರೆ, ಈ ಪ್ರಕರಣದ ಅಡಿಯಲ್ಲಿ ಯಾವುದೇ ವಿಚಾರಣೆ ಅಥವಾ ಆದೇಶದ ಬಗ್ಗೆ ಅವನಿಗೆ ಸೂಕ್ತ ನೋಟೀಸು ಕೊಡಲಾಗಿದೆ ಎಂದು ಭಾವಿಸತಕ್ಕದ್ದು.

**225. ಜಿಲ್ಲಾ ಪಂಚಾಯತಿ ನಿಧಿ.**- ಪ್ರತಿಯೊಂದು ಜಿಲ್ಲಾ ಪಂಚಾಯತಿಗೆ ಜಿಲ್ಲಾ ಪಂಚಾಯತಿ ನಿಧಿ ಎಂದು ಕರೆಯಲಾಗುವ ಒಂದು ನಿಧಿ ಇರತಕ್ಕದ್ದು ಮತ್ತು ಈ ಕೆಳಕಂಡವು ಜಿಲ್ಲಾ ಪಂಚಾಯತಿ ನಿಧಿಯ ಭಾಗವಾಗಿರತಕ್ಕದ್ದು ಅಥವಾ ಅದಕ್ಕೆ ಸಂದಾಯವಾಗುವಂಥವುಗಳಾಗಿರತಕ್ಕದ್ದು, ಎಂದರೆ:-

(i) ಸರ್ಕಾರದ ಸಂಚಿತ ನಿಧಿಯಿಂದ ವಿನಿಯೋಗದ ಮೂಲಕ ಜಿಲ್ಲಾ ಪಂಚಾಯತಿ ನಿಧಿಗೆ ವರ್ಗಾಯಿಸಲಾದ ಮೊತ್ತಗಳು;

(ii) ಸರ್ಕಾರದಿಂದ ಮಾಡಲಾದ ಎಲ್ಲಾ ಅನುದಾನಗಳು, ಹಸ್ತಾಂತರಣಗಳು, ಸಾಲಗಳು ಮತ್ತು ವಂತಿಕೆಗಳು;

(iii) ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ಪಂಚಾಯತಿಗೆ ಸಂದಾಯ ಮಾಡಿದ ಎಲ್ಲಾ ಫೀಜುಗಳು ಮತ್ತು ದಂಡಗಳು ಅಥವಾ ಅದರಿಂದ ಅಥವಾ ಅದರ ಪರವಾಗಿ ವಿಧಿಸಲಾದ ಫೀಜುಗಳು ಮತ್ತು ದಂಡಗಳು ಮತ್ತು ಈ ಅಧಿನಿಯಮದ ಅಡಿಯಲ್ಲಿ ವಿಧಿಸಲಾದ ಎಲ್ಲಾ ದಂಡಗಳು;

(iv) ಜಿಲ್ಲಾ ಪಂಚಾಯತಿಯ ಜಮೀನುಗಳು ಅಥವಾ ಇತರ ಸ್ವತ್ತುಗಳಿಂದ ಬರುವ ಎಲ್ಲಾ ಬಾಡಿಗೆಗಳು;

(v) ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳಿಂದ ಕೊಡುಗೆಗಳು, ಅನುದಾನಗಳು, ಹಸ್ತಾಂತರಣಗಳು ಅಥವಾ ವರ್ಗಾವಣೆಯ ಮೂಲಕ ಬರುವ ಎಲ್ಲಾ ಬಡ್ಡಿಗಳು, ಲಾಭಗಳು ಮತ್ತು ಇತರ ಹಣಗಳು;

(vi) ಜಿಲ್ಲಾ ಪಂಚಾಯತಿಯಿಂದ ಮಾರಲಾದ ಜಮೀನು, ಭದ್ರತೆಗಳು ಮತ್ತು ಇತರ ಸ್ವತ್ತುಗಳಿಂದ ಬರುವ ಉತ್ಪತ್ತಿಗಳು,

(vii) ಈ ಅಧಿನಿಯಮದ ಬಲದಿಂದ ಜಿಲ್ಲಾ ಪಂಚಾಯತಿಯು ಅಥವಾ ಅದರ ಪರವಾಗಿ ಸ್ವೀಕರಿಸಿದ ಮೊತ್ತಗಳು:

ಪರಂತು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ದತ್ತಿಯ ರೂಪದಲ್ಲಿ ಸ್ವೀಕರಿಸಿದ ಯಾವುವೇ ಮೊತ್ತಗಳು ಜಿಲ್ಲಾ ಪಂಚಾಯತಿ ನಿಧಿಯ ಭಾಗವಾಗಿರತಕ್ಕದ್ದಲ್ಲ ಅಥವಾ ಅದಕ್ಕೆ ಸಂದಾಯವಾಗತಕ್ಕದ್ದಲ್ಲ.

**226. ಜಿಲ್ಲಾ ಪಂಚಾಯತಿಯ ನಿಧಿಯ ಅಭಿರಕ್ಷೆ ಮತ್ತು ಹೂಡಿಕೆ.**- (1) ನಿಧಿಗೆ ಜಮೆಯಾದ ಮೊತ್ತಗಳನ್ನು ಸರ್ಕಾರಿ ಖಜಾನೆಯಲ್ಲಿ ಇಡತಕ್ಕದ್ದು.

(2) ಚಾಲ್ತಿ ಚಾರ್ಜುಗಳಿಗೆ ಅವಶ್ಯವಿರದ ತನ್ನ ಕೈಯಲ್ಲಿರುವ ಯಾವುದೇ ಉಳಿತಾಯ ನಿಧಿಗಳನ್ನು ಸರ್ಕಾರದ ಉಳಿತಾಯ ಬ್ಯಾಂಕಿನಲ್ಲಿ ಅಥವಾ ಸರ್ಕಾರದ ಮಂಜೂರಾತಿಯೊಂದಿಗೆ ರಾಜ್ಯದಲ್ಲಿನ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಸಹಕಾರಿ ಬ್ಯಾಂಕಿನಲ್ಲಿ ಬಡ್ಡಿಗಾಗಿ ಠೇವಣಿ ಇಡಲು ಮತ್ತು ಅಂಥಹುದೇ ಮಂಜೂರಾತಿಯೊಂದಿಗೆ ಸರ್ಕಾರವು ಕಾಲಕಾಲಕ್ಕೆ ಈ ಸಂಬಂಧದಲ್ಲಿ ಅನುಮೋದಿಸಲಾದಂತೆ ಅಂಥ ನಿಧಿಗಳನ್ನು ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಭದ್ರತೆಗಳಲ್ಲಿ ಅಥವಾ ಅಂಥ ಇತರ ಭದ್ರತೆಗಳಲ್ಲಿ ಹೂಡುವುದು ಮತ್ತು ಅಂಥಹುದೇ ಮಂಜೂರಾತಿಯೊಂದಿಗೆ ಅಂಥ ಹೂಡಿಕೆಯನ್ನು ಮಾರ್ಪಡಿಸಲು ಅಥವಾ ಅಂಥ ಭದ್ರತೆಗಳನ್ನು ಮಾಡುವುದು ಕಾನೂನುಸಮ್ಮತವಾಗಿರತಕ್ಕದ್ದು.

**227. ಜಿಲ್ಲಾ ಪಂಚಾಯತಿ ನಿಧಿಯನ್ನು ಮತ್ತು ಸ್ವತ್ತನ್ನು ಬಳಸುವುದು.**- (1) ಈ ಅಧಿನಿಯಮದ ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳಿಗೆ ಮತ್ತು ಸರ್ಕಾರ ಮಾಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಜಿಲ್ಲಾ ಪಂಚಾಯತಿಯ ಮಾಲೀಕತ್ವದ ಅಥವಾ ಅದರಲ್ಲಿ ನಿಹಿತವಾದ ಎಲ್ಲಾ ಸ್ವತ್ತನ್ನು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಅದಕ್ಕೆ ಪ್ರಾಪ್ತವಾದ ಎಲ್ಲಾ ಮೊಬಲಗನ್ನು 184 ಮತ್ತು 185ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗೆ ಮತ್ತು ಈ ಅಧಿನಿಯಮದಿಂದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಿಂದ ಅಥವಾ ಅದರ ಅಡಿಯಲ್ಲಿ ಜಿಲ್ಲಾ ಪಂಚಾಯತಿಗೆ ಅಧಿಕಾರಗಳನ್ನು ವಹಿಸಿಕೊಡಲಾದ ಅಥವಾ ಕರ್ತವ್ಯಗಳನ್ನು ವಿಧಿಸಲಾದ ಇತರ ಎಲ್ಲಾ ಉದ್ದೇಶಗಳಿಗೆ ಬಳಸತಕ್ಕದ್ದು:

ಪರಂತು ಜಿಲ್ಲಾ ಪಂಚಾಯತಿಯ ನಿಧಿಯಿಂದ ಯಾವುದೇ ವೆಚ್ಚವನ್ನು ಜಿಲ್ಲಾ ಪಂಚಾಯತಿಯು, ಬಜೆಟ್‌ನಲ್ಲಿ ಅದಕ್ಕಾಗಿ ಏರ್ಪಾಟನ್ನು ಮಾಡಿದ್ದ ಹೊರತು ಅಥವಾ ವಿದ್ಯುಕ್ತವಾಗಿ ಅಂಗೀಕೃತವಾದ ಪುನರ್ವಿನಿಯೋಗದ ಮೂಲಕ ನಿಧಿಯನ್ನು ಪಡೆದ ಹೊರತು, ಗೊತ್ತುಪಡಿಸಿದಂಥ ಸಂದರ್ಭಗಳಲ್ಲಿ ಹೊರತಾಗಿ, ಮಾಡತಕ್ಕದ್ದಲ್ಲ:

ಅಷ್ಟೇ ಅಲ್ಲದೆ, ಕಲ್ಯಾಣ ಚಟುವಟಿಕೆಗಳ ಉದ್ದೇಶದ ನಿಧಿಗಳಲ್ಲಿ ಶೇಕಡ ಇಪ್ಪತ್ತಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಉಪಯೋಗಿಸತಕ್ಕದ್ದು.

(2) ಜಿಲ್ಲಾ ಪಂಚಾಯತಿ ನಿಧಿ ಮತ್ತು ಈ ಅಧಿನಿಯಮದ ಮೇರೆಗೆ ಜಿಲ್ಲಾ ಪಂಚಾಯತಿ ಹೊಂದಿರುವ ಅಥವಾ ಅದರಲ್ಲಿ ನಿಹಿತಗೊಳಿಸಲಾದ ಎಲ್ಲಾ ಸ್ವತ್ತನ್ನು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಈ ಮುಂದಿನ ಸಂದಾಯಗಳಿಗೆ ಉಪಯೋಗಿಸತಕ್ಕದ್ದು:-

(ಎ) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವೇತನ ಮತ್ತು ಭತ್ಯೆಗಳು, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಜಿಲ್ಲೆಯ ಹೊರಗಿನ ಪ್ರವಾಸಗಳಿಗಾಗಿ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಹಾಗೂ ಈ ಸಂಬಂಧದಲ್ಲಿ ಸರ್ಕಾರದಿಂದ ಮಾಡಲಾಗುವ ನಿಯಮಗಳಿಗೊಳಪಟ್ಟು ಜಿಲ್ಲಾ ಪಂಚಾಯತಿ ಅಥವಾ ಅದರ ಯಾವುದೇ ಸಮಿತಿಯ ಸದಸ್ಯರ ಪ್ರಯಾಣ ಮತ್ತು ದಿನಭತ್ಯೆ;

(ಬಿ) ರಾಜ್ಯದ ಸಂಚಿತ ನಿಧಿಯಿಂದ ವೇತನ ಮತ್ತು ಭತ್ಯೆಗಳನ್ನು ಸಂದಾಯ ಮಾಡುವುದರ ಹೊರತಾಗಿ ಅದರ ಅಧಿಕಾರಿಗಳು ಮತ್ತು ನೌಕರರ ವೇತನಗಳು, ಭತ್ಯೆಗಳು, ವಿಶ್ರಾಂತಿ ವೇತನಗಳು ಮತ್ತು ಉಪದಾನಗಳು;

(ಸಿ) ಜಿಲ್ಲಾ ಪಂಚಾಯತಿಯಿಂದ ಕರಾರು ಮಾಡಿಕೊಳ್ಳಲಾದ ಯಾವುದೇ ಸಾಲದ ಮೇಲೆ ಬಾಕಿಯಿರುವ ಯಾವುದೇ ಮೊಬಲಗನ್ನು ಸಂದಾಯ ಮಾಡಲು;

(ಡಿ) ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಗಳಿಗೆ;

(ಇ) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳು ಅಥವಾ ವಿನಿಮಯಗಳಿಂದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಿಂದ ಅಥವಾ ಅದರ ಅಡಿಯಲ್ಲಿ ಜಿಲ್ಲಾ ಪಂಚಾಯತಿಯಲ್ಲಿ ಯಾವುವೇ ಅಧಿಕಾರಗಳನ್ನು ನಿಹಿತಗೊಳಿಸಿದರೆ ಅಥವಾ ಯಾವುವೇ ಕರ್ತವ್ಯಗಳನ್ನು ವಹಿಸಿದರೆ ಅಂಥ ಇತರ ಎಲ್ಲಾ ಉದ್ದೇಶಗಳಿಗೆ;

(ಎಫ್) ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಂತಹ ಸ್ವತ್ತನ್ನು ಅಥವಾ ನಿಧಿಯನ್ನು ಬಳಸುವುದು ಅವಶ್ಯವಾದ ಯಾವುದೇ ಇತರ ಉದ್ದೇಶಕ್ಕೆ ಬಳಸಬಹುದು:

ಪರಂತು, ಸರ್ಕಾರವು ಅಥವಾ ಯಾವನೇ ವ್ಯಕ್ತಿಯು ಅಥವಾ ಸ್ಥಳೀಯ ಪ್ರಾಧಿಕಾರವು ಯಾವುದೇ ನಿರ್ದಿಷ್ಟ ಕೆಲಸಕ್ಕಾಗಿ ಅಥವಾ ಉದ್ದೇಶಕ್ಕಾಗಿ ಜಿಲ್ಲಾ ಪಂಚಾಯತಿಗೆ ನೀಡಿದ ಯಾವುದೇ ಮೊಬಲಗನ್ನು ಕೇವಲ ಅಂತಹ ಕೆಲಸಕ್ಕಾಗಿ ಅಥವಾ ಉದ್ದೇಶಕ್ಕಾಗಿ ಮತ್ತು ಸರ್ಕಾರವು ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ನಿರ್ದಿಷ್ಟಪಡಿಸುವಂತಹ ಸೂಚನೆಗಳ ಅನುಸಾರವಾಗಿ ಬಳಸತಕ್ಕದ್ದು.

**228. ಬಾಡಿಗೆಗಳು ಮತ್ತು ಫೀಜುಗಳು.**- ಈ ಅಧಿನಿಯಮದಲ್ಲಿ ಉಪಬಂಧಿಸಿರುವುದರ ಹೊರತು ಮತ್ತು ಈ ಸಂಬಂಧದಲ್ಲಿ ಮಾಡಲಾಗುವ ವಿನಿಯಮಗಳಿಗೆ ಒಳಪಟ್ಟು ಜಿಲ್ಲಾ ಪಂಚಾಯತಿಯು, ಈ ಅಧಿನಿಯಮದ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಮೇರೆಗೆ ತಾನು ನೀಡಿದ ಯಾವುದೇ ಲೈಸನ್ಸು ಅಥವಾ ಅನುಮತಿಗೆ ಫೀಜನ್ನು ವಿಧಿಸಬಹುದು ಮತ್ತು ತನ್ನ ನಿಯಂತ್ರಣದಲ್ಲಿರುವ ಅಥವಾ ಅದರಲ್ಲಿ ನಿಹಿತಗೊಳಿಸಲಾಗಿರುವ ಅಥವಾ ಜಿಲ್ಲಾ ಪಂಚಾಯತಿ ನಿಧಿಯಿಂದ ನಿರ್ವಹಿಸಲಾಗುವ ಯಾವುದೇ ಜಮೀನು ಅಥವಾ ಇತರ ಸ್ವತ್ತಿನ ಸ್ವಾಧೀನತೆಗೆ ಅಥವಾ ಬಳಕೆಗೆ ಬಾಡಿಗೆಗಳನ್ನು ಮತ್ತು ಫೀಜುಗಳನ್ನು ವಿಧಿಸಬಹುದು.

**229. ಜಿಲ್ಲಾ ಪಂಚಾಯತಿಯು ಸಾಲಗಳನ್ನು ಎತ್ತಬಹುದು ಮತ್ತು ಋಣಪರಿಹಾರ ನಿಧಿಯನ್ನು ರಚಿಸಬಹುದು.**- ಜಿಲ್ಲಾ ಪಂಚಾಯತಿಯು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಕಾಲಕಾಲಕ್ಕೆ ಅದು ವಿಧಿಸುವ ಷರತ್ತಿಗೊಳಪಟ್ಟು ಯಾವುದೇ ಕಾಮಗಾರಿಯ ನಿರ್ವಹಣೆಗಾಗಿ ಅಥವಾ ಈ ಅಧಿನಿಯಮದ ಯಾವುದೇ ಏರ್ಪಾಟನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಸಾಲಗಳನ್ನು ಎತ್ತಬಹುದು ಮತ್ತು ಅಂತಹ ಸಾಲಗಳ ಮರುಸಂದಾಯಕ್ಕಾಗಿ, ಗೊತ್ತುಪಡಿಸಿದ ರೀತಿಯಲ್ಲಿ, ಒಂದು ಋಣಪರಿಹಾರ ನಿಧಿಯನ್ನು ರಚಿಸಬಹುದು.

**230. ಬಜೆಟ್‌ನಲ್ಲಿ ಒಳಗೊಳ್ಳದಿರುವ ವೆಚ್ಚಕ್ಕೆ ನಿರ್ಬಂಧ.**- ಇಲ್ಲಿ ಇನ್ನು ಮುಂದೆ ಏರ್ಪಾಟು ಮಾಡಿರುವುದರ ಹೊರತು, ಯಾವುದೇ ಮೊತ್ತವನ್ನು ಈ ಮುಂದಿನ ಪ್ರಕರಣಗಳ ಹೊರತು, ಆ ವೆಚ್ಚವು ಬಜೆಟ್ ಅನುದಾನದಲ್ಲಿ ಒಳಗೊಂಡಿದ್ದ ಹೊರತು, ಜಿಲ್ಲಾ ಪಂಚಾಯತಿ ನಿಧಿಯಿಂದ ಸಂದಾಯ ಮಾಡತಕ್ಕದ್ದಲ್ಲ, ಎಂದರೆ:-

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳು ಅಥವಾ ವಿನಿಯಮಗಳ ಮೇರೆಗೆ ವೆಚ್ಚ ಮಾಡಲು ಜಿಲ್ಲಾ ಪಂಚಾಯತಿಗೆ ಅಧಿಕಾರ ನೀಡಲಾದ ಹಣದ ಮರು ಪಾವತಿಗಳು;

(ಬಿ) ಠೇವಣಿ ಇಟ್ಟಿರುವ ಕಂಟ್ರಾಕ್ಟರುಗಳಿಗೆ ಅಥವಾ ಇತರ ವ್ಯಕ್ತಿಗಳಿಗೆ ಸೇರಿದ ಹಣ ಮತ್ತು ತಪ್ಪಾಗಿ ಜಿಲ್ಲಾ ಪಂಚಾಯತಿಗೆ ಜಮೆ ಮಾಡಲಾದ ಹಣಗಳ ಮರುಪಾವತಿ;

(ಸಿ) ಈ ಅಧಿನಿಯಮದ ಅಡಿಯಲ್ಲಿ ಪರಿಹಾರದ ರೂಪದಲ್ಲಿ ಜಿಲ್ಲಾ ಪಂಚಾಯತಿ ಸಂದಾಯ ಮಾಡಬೇಕಾಗಿರುವ ಅಥವಾ ಅಧಿಕಾರ ಹೊಂದಿರುವ ಮೊತ್ತಗಳು;

(ಡಿ) (i) [1][x x x][1] ಸರ್ಕಾರದ ಆದೇಶದ ಮೂಲಕ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಎಲ್ಲಾ ಮೊತ್ತ;

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಬಿಟ್ಟುಬಿಡಲಾಗಿದೆ.

(ii) ಸಿವಿಲ್ ನ್ಯಾಯಾಲಯದ ಒಂದು ಡಿಕ್ರಿ ಅಥವಾ ಆದೇಶದ ಮೇರೆಗೆ ಸಂದಾಯ ಮಾಡಬೇಕಾದ ಎಲ್ಲಾ ಮೊತ್ತ; ಮತ್ತು

(iii) ಯಾವುದೇ ದಾವೆ ಅಥವಾ ಇತರ ಕಾನೂನು ಕಾರ್ಯವಾಹಿಗಳು ಅಥವಾ ಕ್ಲೇಮಿನ ಮೇರೆಗಿನ ರಾಜಿಯ ಬಗ್ಗೆ ಸಂದಾಯ ಮಾಡಬೇಕಾದ ಎಲ್ಲಾ ಮೊತ್ತ.

**231. ಸರ್ಕಾರದ ರಸ್ತೆಗಳು ಮತ್ತು ಇತರ ಸ್ವತ್ತನ್ನು ಜಿಲ್ಲಾ ಪಂಚಾಯತಿಗೆ ವಹಿಸಿಕೊಡಬಹುದು.**- (1) ಜಿಲ್ಲಾ ಪಂಚಾಯತಿಯ ಸಮ್ಮತಿಯೊಂದಿಗೆ ಮತ್ತು ಸರ್ಕಾರವು ಮಾಡಬಹುದಾದ ಮತ್ತು ವಿಧಿಸಬಹುದಾದಂಥ ಅಪವಾದಗಳು ಮತ್ತು ಷರತ್ತುಗಳಿಗೊಳಪಟ್ಟು ಸರ್ಕಾರದಲ್ಲಿ ನಿಹಿತವಾಗಿರುವ ಮತ್ತು ಜಿಲ್ಲೆಯಲ್ಲಿರುವ ಯಾವುದೇ ರಸ್ತೆ, ಸೇತುವೆ, ಕಾಲುವೆ, ಕಟ್ಟಡ, ಅಥವಾ ಇತರ ಚರ ಅಥವಾ ಸ್ಥಿರ ಸ್ವತ್ತನ್ನು, ಒಂದು ಅಧಿಸೂಚನೆಯ ಮೂಲಕ, ಅಧಿನಿಯಮದ ಉದ್ದೇಶಗಳಿಗಾಗಿ ಜಿಲ್ಲಾ ಪಂಚಾಯತಿಯ ನಿಯಂತ್ರಣ ಮತ್ತು ಆಡಳಿತಕ್ಕೆ ವಹಿಸುವಂತೆ ಮತ್ತು ಹಾಗೆ ಮಾಡಲಾದ ಮತ್ತು ವಿಧಿಸಲಾದ ಎಲ್ಲಾ ಅಪವಾದಗಳಿಗೆ ಮತ್ತು ಷರತ್ತುಗಳಿಗೆ ಮತ್ತು ಹಾಗೆ ಮಾಡಿದ್ದಕ್ಕೆ ಆದ ಎಲ್ಲಾ ಚಾರ್ಜುಗಳು ಮತ್ತು ಹೊಣೆಗಳಿಗೆ ಒಳಪಟ್ಟು, ಅಂಥ ರಸ್ತೆ, ಸೇತುವೆ, ಕಾಲುವೆ, ಕಟ್ಟಡಗಳು ಅಥವಾ ಇತರ ಆಸ್ತಿಯು ಜಿಲ್ಲಾ ಪಂಚಾಯತಿಯ ನಿಯಂತ್ರಣ ಮತ್ತು ಆಡಳಿತದಲ್ಲಿರತಕ್ಕದ್ದೆಂದು ಸರ್ಕಾರ ಕಾಲಕಾಲಕ್ಕೆ ನಿರ್ದೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ಪಂಚಾಯತಿಯ ನಿಯಂತ್ರಣದಲ್ಲಿರಿಸಲಾದ ಯಾವುದೇ ಸ್ವತ್ತನ್ನು ಸರ್ಕಾರವು ನಿರ್ಧರಿಸುವಂಥ ನಿಬಂಧನೆಗಳಿಗನುಸಾರವಾಗಿ ಒಂದು ಅಧಿಸೂಚನೆಯ ಪ್ರಕಾರ ವಹಿಸಿಕೊಳ್ಳುವುದಕ್ಕೆ ಸರ್ಕಾರವು ಸಕ್ಷಮವಾಗಿರತಕ್ಕದ್ದು.

## ಅಧ್ಯಾಯ XVI

**[2][ಆಡಳಿತ, ಪರಿವೀಕ್ಷಣೆ, ಮೇಲ್ವಿಚಾರಣೆ ಮತ್ತು ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್‌ದ ಆಯುಕ್ತರ ಕಾರ್ಯಾಲಯದ (ಕಮೀಷನರೇಟಿನ) ಸೃಜನೆ][2]**

**232. ಪರಿವೀಕ್ಷಣೆಯ ಮತ್ತು ಮೇಲ್ವಿಚಾರಣೆಯ ಅಧಿಕಾರ.**- ಜಿಲ್ಲಾ ಪಂಚಾಯತಿಯ ಸಂಬಂಧದಲ್ಲಿ [1][ಸರ್ಕಾರದಿಂದ ಈ ಬಗ್ಗೆ ವಿಶೇಷವಾಗಿ ಪ್ರಾಧಿಕೃತನಾದ ಅಧಿಕಾರಿಯು][1] ತಾಲ್ಲೂಕು ಪಂಚಾಯತಿಯ ಸಂಬಂಧದಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಮತ್ತು ಗ್ರಾಮ ಪಂಚಾಯತಿಯ ಸಂಬಂಧದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯು,-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(ಎ) ಯಾವುದೇ ಜಿಲ್ಲಾ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ಕಚೇರಿಗಳನ್ನು ಅಥವಾ ಆವರಣಗಳನ್ನು ಅಥವಾ ಅವು ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಪರಿವೀಕ್ಷಿಸಬಹುದು ಮತ್ತು ಈ ಉದ್ದೇಶಕ್ಕಾಗಿ ಲೆಕ್ಕದ ಪುಸ್ತಕಗಳನ್ನು, ರಿಜಿಸ್ಟರುಗಳನ್ನು ಮತ್ತು ಸಂಬಂಧಪಟ್ಟ ಇತರ ದಸ್ತಾವೇಜುಗಳನ್ನು ಪರಿವೀಕ್ಷಿಸಬಹುದು ಅಥವಾ ಪರಿವೀಕ್ಷಿಸುವಂತೆ ಮಾಡಬಹುದು ಮತ್ತು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯು, ತಾಲ್ಲೂಕು ಪಂಚಾಯತಿಯು ಅಥವಾ ಗ್ರಾಮ ಪಂಚಾಯತಿಯು ಅಂಥ ಪರಿವೀಕ್ಷಣೆಯ ನಂತರ ಹೊರಡಿಸಿದ ಸೂಚನೆಗಳನ್ನು ಪಾಲಿಸತಕ್ಕದ್ದು;

(ಬಿ) ಸೂಕ್ತವೆಂದು ಅವರು ಭಾವಿಸುವ ಯಾವುದೇ ವಿವರಪಟ್ಟಿಕೆ, ವಿವರಣೆ, ಲೆಕ್ಕ ಅಥವಾ ವರದಿಯನ್ನು ಒದಗಿಸಲು ಜಿಲ್ಲಾ ಪಂಚಾಯತಿಗೆ, ತಾಲ್ಲೂಕು ಪಂಚಾಯತಿಗೆ ಅಥವಾ ಗ್ರಾಮ ಪಂಚಾಯತಿಗೆ ಅಗತ್ಯಪಡಿಸಬಹುದು.

[1][**232ಎ. ಪಂಚಾಯತ್‌ರಾಜ್ ಆಯುಕ್ತರ ಕಾರ್ಯಾಲಯದ ಸ್ಥಾಪನೆ.**- ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಸುಗಮವಾಗಿ ಕಾರ್ಯನಿರ್ವಹಿಸುವುದಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಪಂಚಾಯತ್ ರಾಜ್ ಸೇವೆಗಳಿಗೆಂದೇ ಸರ್ಕಾರವು ಆಯುಕ್ತರ ಕಾರ್ಯಾಲಯವನ್ನು ಸ್ಥಾಪಿಸತಕ್ಕದ್ದು. ಅದರ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಹಾಗೂ ಹುದ್ದೆಗಳ ಪ್ರವರ್ಗಗಳ ಸಂಖ್ಯೆ, ನೇಮಕಾತಿ ವಿಧಾನ, ಕನಿಷ್ಠ ಅರ್ಹತೆ ಇವುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**232ಬಿ. ಕರ್ನಾಟಕ ಪಂಚಾಯತ್ ಆಡಳಿತಾತ್ಮಕ ಸೇವೆಯ ಸ್ಥಾಪನೆ.**- ಸರ್ಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಂಥ ಹುದ್ದೆಗಳ ಪ್ರವರ್ಗವನ್ನು ಒಳಗೊಂಡ ಕರ್ನಾಟಕ ಪಂಚಾಯತ್‌ರಾಜ್ ಆಡಳಿತಾತ್ಮಕ ಸೇವೆಯನ್ನು ರಚಿಸತಕ್ಕದ್ದು, ಅಂಥ ಹುದ್ದೆಗಳ ಸಂಖ್ಯೆ, ವೇತನ ಶ್ರೇಣಿ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯ ನಿಯಮಿಸಬಹುದಾದಂತೆ ಇರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**233. ತಾಂತ್ರಿಕ ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ.**- (1) ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರು ಮತ್ತು ವಿಭಾಗೀಯ ಮಟ್ಟದ ಇಲಾಖೆಗಳ ಪ್ರಭಾರದಲ್ಲಿರುವ ಅಧಿಕಾರಿಗಳು, ಯಾವುದೇ ಜಿಲ್ಲಾ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಅಥವಾ ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳು ಅಥವಾ ಅಭಿವೃದ್ಧಿ ಯೋಜನೆಗಳನ್ನು [1][ಆಯಾಯ ಯೋಜನೆಗಳು ಅಥವಾ ಆದೇಶಗಳಲ್ಲಿ ಒಳಗೊಂಡಿರುವ ತಾಂತ್ರಿಕ ಮತ್ತು ಹಣಕಾಸಿನ ಸೂತ್ರಗಳಿಗೆ ಅನುಸಾರವಾಗಿ ಅನುಷ್ಠಾನದ ಗುಣಮಟ್ಟದ ಬಗ್ಗೆ ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಪರಿವೀಕ್ಷಿಸಬಹುದು][1] ಮತ್ತು ಅಂತಹ ಕಾಮಗಾರಿಗೆ ಅಥವಾ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ದಸ್ತಾವೇಜುಗಳನ್ನು, ಸರ್ಕಾರವು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಪರಿಶೀಲಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(2) ಅಂತಹ ಪರಿಶೀಲನೆಗಳ ವ್ಯಾಪ್ತಿಯಲ್ಲಿ, ಸಾಧ್ಯಾಸಾಧ್ಯತೆ, ಆರ್ಥಿಕ ಸಾಮರ್ಥ್ಯ, ಕಾಮಗಾರಿಯ ತಾಂತ್ರಿಕ ಗುಣಮಟ್ಟ ಮತ್ತು ವಹಿಸುತ್ತಿರುವ ವೆಚ್ಚ ಸೇರಿದಂತೆ ತಾಂತ್ರಿಕ ವಿಚಾರಗಳು ಒಳಗೊಂಡಿರಬಹುದು.

(3) ಅಂಥ ಅಧಿಕಾರಿಗಳು ಅಂಥ ಪರಿಶೀಲನೆ ಮಾಡಿದ ಮೇಲೆ, ಪರಿಶೀಲನಾ ಟಿಪ್ಪಣಿಗಳನ್ನು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕಾಗಿ, ಸಂದರ್ಭಾನುಸಾರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ, ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಕಾರ್ಯದರ್ಶಿಯವರಿಗೆ ಸಲ್ಲಿಸತಕ್ಕದ್ದು.

[1][(4) ಪರಿವೀಕ್ಷಣಾಧಿಕಾರಿಯ ವರದಿಯ ಮೇಲೆ, ಅಂಥ ವರದಿಯನ್ನು ಪಡೆದುಕೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯು ಅನುಸರಣ ಕ್ರಮವನ್ನು ಕೈಗೊಳ್ಳತಕ್ಕದ್ದು ಮತ್ತು ಹಾಗೆ ಕ್ರಮ ಕೈಗೊಳ್ಳಲು ವಿಫಲವಾಗಿರುವುದನ್ನು 268ನೇ ಪ್ರಕರಣದ ಉದ್ದೇಶಕ್ಕಾಗಿ "ಕರ್ತವ್ಯ ನಿರ್ವಹಣೆಯಲ್ಲಿನ ಲೋಪ" ಎಂಬುದಾಗಿ ಅರ್ಥ ಕಲ್ಪಿಸಬಹುದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

**234. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಸಂಬಂಧಪಟ್ಟಂತೆ [1][ಸರ್ಕಾರದ][1] ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧಿಕಾರಗಳು.**- (1) ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗೆ ಸಂಬಂಧಪಟ್ಟಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸಬಹುದು:-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ಎ) ಯಾವುದೇ ಗ್ರಾಮ ಪಂಚಾಯತಿಯ ಅಥವಾ ತಾಲ್ಲೂಕು ಪಂಚಾಯತಿಯ ವ್ಯವಹರಣೆಗಳನ್ನು ಅಥವಾ ಗ್ರಾಮ ಪಂಚಾಯತಿಯ ಅಥವಾ ತಾಲ್ಲೂಕು ಪಂಚಾಯತಿಯ ಸ್ವಾಧೀನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಪುಸ್ತಕವನ್ನು ಅಥವಾ ದಸ್ತಾವೇಜಿನ ಯಾವುದೇ ಉದ್ಧೃತ ಭಾಗವನ್ನು ಅಥವಾ ಲೆಕ್ಕದ ಯಾವುದೇ ವಿವರ ಪಟ್ಟಿಕೆಯನ್ನು ಅಥವಾ ವಿವರಣೆಯನ್ನು ಅಥವಾ ವರದಿಯನ್ನು ತರಿಸಿಕೊಳ್ಳಬಹುದು;

(ಬಿ) ಅಂಥ ಗ್ರಾಮ ಪಂಚಾಯತಿಯು ಅಥವಾ ತಾಲ್ಲೂಕು ಪಂಚಾಯತಿಯು ಮಾಡಬೇಕಾಗಿರುವ ಅಥವಾ ಮಾಡುತ್ತಿರುವ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಇದೆಯೆಂದು ಅವರಿಗೆ ಕಂಡುಬಂದಂಥ ಯಾವುದೇ ಆಕ್ಷೇಪಣೆಯನ್ನು ಅಥವಾ ಅವರು ನಿಗದಿಪಡಿಸಬಹುದಾದಂಥ ಅವಧಿಯೊಳಗೆ ಅಂಥ ಗ್ರಾಮ ಪಂಚಾಯತಿಯು ಅಥವಾ ತಾಲ್ಲೂಕು ಪಂಚಾಯತಿಯು ಯಾವುದೇ ಕಾರ್ಯ ಮಾಡುವುದನ್ನು

ಅಗತ್ಯಪಡಿಸುವುದೆಂದು ಅವರಿಗೆ ಕಂಡುಬರುವಂಥ ಯಾವುದೇ ಮಾಹಿತಿಯನ್ನು ಪರ್ಯಾಲೋಚಿಸಬೇಕೆಂದು ಅಗತ್ಯಪಡಿಸಬಹುದು;

[1][(ಸಿ) ಗ್ರಾಮಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯು ಯಾವುದೇ ಕರ್ತವ್ಯವನ್ನು ನೆರವೇರಿಸುವಲ್ಲಿ ತಪ್ಪಿದರೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಕರ್ತವ್ಯವನ್ನು ನಿರ್ವಹಿಸುವಂತೆ ಅಗತ್ಯಪಡಿಸಬಹುದು;][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(ಡಿ) ಮತ್ತು (ಇ) x x x][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಬಿಟ್ಟುಬಿಡಲಾಗಿದೆ.

(2) ಗ್ರಾಮ ಪಂಚಾಯತಿಯು ಅಥವಾ ತಾಲ್ಲೂಕು ಪಂಚಾಯತಿಯು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು (1)ನೇ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಮಾಡಿದ ಯಾವುದೇ ಆದೇಶದ ವಿರುದ್ಧ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ [1][ಸರ್ಕಾರಕ್ಕೆ][1] ಅಪೀಲು ಸಲ್ಲಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(3) [1][ಸರ್ಕಾರವು][1] ಜಿಲ್ಲಾ ಪಂಚಾಯತಿಗೆ ಸಂಬಂಧಪಟ್ಟಂತೆ ಈ ಮುಂದಿನ ಅಧಿಕಾರಗಳನ್ನು ಚಲಾಯಿಸಬಹುದು:-

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ಎ) ಯಾವುದೇ ಜಿಲ್ಲಾ ಪಂಚಾಯತಿಯ ವ್ಯವಹರಣೆಗಳನ್ನು ಅಥವಾ ಜಿಲ್ಲಾ ಪಂಚಾಯತಿಯ ಸ್ವಾಧೀನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಪುಸ್ತಕದ ಅಥವಾ ದಸ್ತಾವೇಜಿನ ಯಾವುದೇ ಉದ್ಧೃತ ಭಾಗವನ್ನು ಅಥವಾ ಲೆಕ್ಕದ ಯಾವುದೇ ವಿವರ ಪಟ್ಟಿಕೆಯನ್ನು ಅಥವಾ ವಿವರಣೆಯನ್ನು ಅಥವಾ ವರದಿಯನ್ನು ತರಿಸಿಕೊಳ್ಳಬಹುದು.

(ಬಿ) ಅಂಥ ಜಿಲ್ಲಾ ಪಂಚಾಯತಿಯು ಮಾಡಬೇಕಾಗಿರುವ ಅಥವಾ ಮಾಡುತ್ತಿರುವ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಇದೆಯೆಂದು [1][ಅದಕ್ಕೆ ಕಂಡು ಬರುವಂಥ][1] ಯಾವುದೇ ಆಕ್ಷೇಪಣೆಯನ್ನು ಅಥವಾ [1][ಅದು ನಿಗದಿ ಪಡಿಸಬಹುದಾದಂಥ][1] ಅವಧಿಯೊಳಗೆ ಅಂಥ ಜಿಲ್ಲಾ ಪಂಚಾಯತಿಯು ಯಾವುದೇ ಕಾರ್ಯ ಮಾಡುವುದನ್ನು ಅಗತ್ಯಪಡಿಸಬಹುದೆಂದು [1][ಅದಕ್ಕೆ ಕಂಡು ಬರುವಂಥ][1] ಯಾವುದೇ ಮಾಹಿತಿಯನ್ನು ಪರ್ಯಾಲೋಚಿಸಬೇಕೆಂದು ಅಗತ್ಯಪಡಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(ಸಿ) ಜಿಲ್ಲಾ ಪಂಚಾಯತಿಯು ಯಾವುದೇ ಕರ್ತವ್ಯವನ್ನು ನಿರ್ವಹಿಸುವಲ್ಲಿ ತಪ್ಪಿದರೆ, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಕರ್ತವ್ಯವನ್ನು ನಿರ್ವಹಿಸುವಂತೆ ಅಗತ್ಯಪಡಿಸಬಹುದು;][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(ಡಿ) x x x][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಬಿಟ್ಟುಬಿಡಲಾಗಿದೆ.

[1][(4) x x x][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಬಿಟ್ಟುಬಿಡಲಾಗಿದೆ.

**235. ಗ್ರಾಮ ಪಂಚಾಯತಿಯು, ತಾಲ್ಲೂಕು ಪಂಚಾಯತಿಯು ಅಥವಾ ಜಿಲ್ಲಾ ಪಂಚಾಯತಿಯು ತಪ್ಪು ಎಸಗಿದ್ದಾಗ ಕರ್ತವ್ಯಗಳನ್ನು ನೆರವೇರಿಸಲು ಸರ್ಕಾರದ ಅಥವಾ [1][ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯ][1] ಅಧಿಕಾರಗಳು.-** [2][(1)][2] ಯಾವುದೇ ಜಿಲ್ಲಾ ಪಂಚಾಯತಿಯ ಸಂದರ್ಭದಲ್ಲಿ ಸರ್ಕಾರಕ್ಕೆ ಅಥವಾ ತಾಲ್ಲೂಕು ಪಂಚಾಯತಿಯ [1][ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಗೆ][1] ಮತ್ತು ಗ್ರಾಮ ಪಂಚಾಯತಿಯ [1][ಸಂದರ್ಭದಲ್ಲಿ ತಾಲ್ಲೂಕು ಪಂಚಾಯತಿಗೆ][1] ಯಾವುದೇ ಜಿಲ್ಲಾ ಪಂಚಾಯತಿಯು ಅಥವಾ ತಾಲ್ಲೂಕು ಪಂಚಾಯತಿಯು ಅಥವಾ ಗ್ರಾಮ ಪಂಚಾಯತಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅದಕ್ಕೆ ವಿಧಿಸಿರುವ ಯಾವುದೇ ಕರ್ತವ್ಯವನ್ನು ನೆರವೇರಿಸಲು ತಪ್ಪಿದೆಯೆಂದು ದೂರಿನ ಮೂಲಕ ಅಥವಾ ಇತರ ರೀತಿಯಲ್ಲಿ ತಿಳಿಸಿದ್ದರೆ, ಮತ್ತು ವಿದ್ಯುಕ್ತ ವಿಚಾರಣೆಯನ್ನು ನಡೆಸಿದ ತರುವಾಯ ಯಾವುದೇ ಜಿಲ್ಲಾ ಪಂಚಾಯತಿಯು, ತಾಲ್ಲೂಕು ಪಂಚಾಯತಿಯು ಅಥವಾ ಗ್ರಾಮ ಪಂಚಾಯತಿಯು ಅಂಥ ಕರ್ತವ್ಯವನ್ನು ನೆರವೇರಿಸಲು ತಪ್ಪಿದೆ ಎಂದು ಅಭಿಪ್ರಾಯಪಟ್ಟಲ್ಲಿ [1][ಅದು][1] ಅಂಥ ಕರ್ತವ್ಯವನ್ನು ನೆರವೇರಿಸಲು ಅವಧಿಯನ್ನು ನಿಗದಿಪಡಿಸಬಹುದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಮರುಸಂಖ್ಯೆ ನೀಡಲಾಗಿದೆ.

ಪರಂತು, ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗೆ, ತಾಲ್ಲೂಕು ಪಂಚಾಯತಿಗೆ ಅಥವಾ ಗ್ರಾಮ ಪಂಚಾಯತಿಗೆ, ಅಂಥ ಆದೇಶವನ್ನು ಏಕೆ ಮಾಡಬಾರದೆಂಬುದಕ್ಕೆ ಕಾರಣವನ್ನು ತೋರಿಸಲು ಅವಕಾಶವನ್ನು ಕೊಟ್ಟ ಹೊರತು ಅಂಥ ಯಾವುದೇ ಅವಧಿಯನ್ನು ನಿಗದಿಪಡಿಸತಕ್ಕದ್ದಲ್ಲ.

[1][(2) (i) ತಾಲ್ಲೂಕು ಪಂಚಾಯತಿಯ ಆದೇಶದ ವಿರುದ್ಧವಾಗಿ ಜಿಲ್ಲಾ ಪಂಚಾಯತಿಗೆ; ಮತ್ತು

(ii) ಜಿಲ್ಲಾ ಪಂಚಾಯತಿಯ ಆದೇಶದ ವಿರುದ್ಧವಾಗಿ ಸರ್ಕಾರಕ್ಕೆ,

-ಅಂಥ ಆದೇಶವನ್ನು ನೀಡಿದ ಮೂವತ್ತು ದಿನಗಳೊಳಗೆ ಅಪೀಲನ್ನು ಮಾಡಿಕೊಳ್ಳತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

**236. ಗ್ರಾಮ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ, ಜಿಲ್ಲಾ ಪಂಚಾಯತಿಯ ವ್ಯವಹಾರಗಳ ಬಗ್ಗೆ ಸರ್ಕಾರವು ವಿಚಾರಣೆ ನಡೆಸುವುದು.-** (1) ಸರ್ಕಾರವು ಯಾವುದೇ ಸಮಯದಲ್ಲಿ, ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಯಾವುದೇ ಗ್ರಾಮ ಪಂಚಾಯತಿಗೆ, ತಾಲ್ಲೂಕು ಪಂಚಾಯತಿಗೆ ಅಥವಾ ಜಿಲ್ಲಾ ಪಂಚಾಯತಿಗೆ ಸಂಬಂಧಪಡುವ [1][ನಿರ್ದಿಷ್ಟ][1] ವಿಷಯಗಳ ಬಗ್ಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ಸರ್ಕಾರದ ಮಂಜೂರಾತಿ, ಅನುಮೋದನೆ, ಒಪ್ಪಿಗೆ ಅಥವಾ ಆದೇಶಗಳ ಅವಶ್ಯಕತೆ ಇದೆಯೋ ಆ ಯಾವುವೇ ವಿಷಯಗಳ ಬಗ್ಗೆ ತನ್ನ ಯಾರೇ ಅಧಿಕಾರಿಯು ಆರೋಪ ವಿಚಾರಣೆ ಮಾಡುವಂತೆ ಮಾಡಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

(2) ಅಂತಹ ಆರೋಪ ವಿಚಾರಣೆಯನ್ನು ನಡೆಸುವ ಅಧಿಕಾರಿಯು ಆರೋಪ ವಿಚಾರಣೆಯ ಉದ್ದೇಶಕ್ಕಾಗಿ ಸಾಕ್ಷ್ಯಗಳನ್ನು ತೆಗೆದುಕೊಳ್ಳಲು ಮತ್ತು ಸಾಕ್ಷಿಗಳು ಹಾಜರಾಗುವಂತೆ ಮತ್ತು ದಸ್ತಾವೇಜುಗಳನ್ನು ಒಪ್ಪಿಸುವಂತೆ ಒತ್ತಾಯ ಮಾಡಲು 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಅಡಿಯ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಸರ್ಕಾರವು (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆರೋಪ ವಿಚಾರಣೆಗಳ ವೆಚ್ಚ ಮತ್ತು ಯಾವ ಪಕ್ಷಕಾರರು ಮತ್ತು ಯಾವ ನಿಧಿಗಳಿಂದ ವೆಚ್ಚವನ್ನು ಸಂದಾಯ ಮಾಡತಕ್ಕದ್ದೆಂಬ ಬಗ್ಗೆ ಆದೇಶಗಳನ್ನು ಮಾಡಬಹುದು ಮತ್ತು ಅಂಥ ಆದೇಶವನ್ನು [1][ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ][1] ಅಥವಾ ಅದರಲ್ಲಿ ಹೆಸರಿಸಲಾಗಿರುವ ಯಾವನೇ ವ್ಯಕ್ತಿಯು ಅರ್ಜಿ ಸಲ್ಲಿಸಿದಾಗ, ಅದು ಸಿವಿಲ್ ನ್ಯಾಯಾಲಯದ ಡಿಕ್ರಿ ಆಗಿದ್ದರೆ ಹೇಗೋ ಹಾಗೆ ಅಮಲ್ಜಾರಿಗೊಳಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

**237. ಕಾನೂನು ಬಾಹಿರ ಆದೇಶದ ಅಥವಾ ನಿರ್ಣಯದ ಅಮಲ್ಜಾರಿಯನ್ನು ಅಮಾನತುಗೊಳಿಸುವ ಅಧಿಕಾರ.**- (1) [1][ತಾಲ್ಲೂಕು ಪಂಚಾಯತಿ ಅಧ್ಯಕ್ಷನ][1] ಅಭಿಪ್ರಾಯದಲ್ಲಿ ಗ್ರಾಮ ಪಂಚಾಯತಿಯ ಯಾವುದೇ ಆದೇಶ ಅಥವಾ ನಿರ್ಣಯದ ಅಥವಾ ಗ್ರಾಮಪಂಚಾಯತಿಯ ಯಾವನೇ ಪ್ರಾಧಿಕಾರಿಯ ಅಥವಾ ಅಧಿಕಾರಿಯ ಯಾವುದೇ ಆದೇಶದ ಅಮಲ್ಜಾರಿ ಅಥವಾ ಗ್ರಾಮ ಪಂಚಾಯತಿಯು ಅಥವಾ ಅದರ ಪರವಾಗಿ ಮಾಡಬೇಕಾಗಿರುವ ಅಥವಾ ಮಾಡುತ್ತಿರುವಂಥ ಯಾವುದೇ ಕಾರ್ಯವನ್ನು ಮಾಡುವುದು ಅನ್ಯಾಯ, ಕಾನೂನು ಬಾಹಿರ ಅಥವಾ ಅನುಚಿತವಾಗಿದ್ದರೆ ಅಥವಾ ಸಾರ್ವಜನಿಕರಿಗೆ ಹಾನಿ ಅಥವಾ ಕಿರುಕುಳವನ್ನುಂಟುಮಾಡುತ್ತಿದ್ದರೆ ಅಥವಾ ಉಂಟು ಮಾಡುವ ಸಂಭವವಿದ್ದರೆ ಅಥವಾ ಶಾಂತಿ ಭಂಗಕ್ಕೆ ಕಾರಣವಾಗುವುದಾದರೆ ಅವನು ಅದರ ಅಮಲ್ಜಾರಿಯನ್ನು ಆದೇಶದ ಮೂಲಕ ಅಮಾನತುಗೊಳಿಸಬಹುದು ಅಥವಾ ಅದನ್ನು ಮಾಡುವುದನ್ನು ನಿಷೇಧಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(2) 1[ತಾಲ್ಲೂಕು ಪಂಚಾಯತಿಯ ಅಧ್ಯಕ್ಷ]1ನು (1)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡಿದಾಗ ಅವನು ಅದನ್ನು ಮಾಡುವುದಕ್ಕೆ ಕಾರಣಗಳ ವಿವರಣೆ ಸಹಿತ ಆದೇಶದ ಪ್ರತಿಯನ್ನು [1][ಜಿಲ್ಲಾ ಪಂಚಾಯತಿಯ ಅಧ್ಯಕ್ಷ][1] ನಿಗೆ ಮತ್ತು ಅದರಿಂದ ಬಾಧಿತವಾದ ಗ್ರಾಮ ಪಂಚಾಯತಿಗೆ ತಕ್ಷಣವೇ ಕಳುಹಿಸತಕ್ಕದ್ದು. ಮತ್ತು [1][ಜಿಲ್ಲಾ ಪಂಚಾಯತಿಯ ಅಧ್ಯಕ್ಷ][1]ನು ಆ ಆದೇಶವನ್ನು ಸ್ಥಿರೀಕರಿಸಬಹುದು ಅಥವಾ ರದ್ದುಗೊಳಿಸಬಹುದು ಅಥವಾ ಖಾಯಂ ಆಗಿ ಅಥವಾ ಸೂಕ್ತವೆಂದು ಅವರು ಯೋಚಿಸಬಹುದಾದಂಥ ಅವಧಿಯವರೆಗೆ, ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ [1][ತಾಲ್ಲೂಕು ಪಂಚಾಯತಿಯ ಅಧ್ಯಕ್ಷ][1]ನು ಮಾಡಿದ ಯಾವುದೇ ಆದೇಶವನ್ನು ಸದರಿ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಗ್ರಾಮ ಪಂಚಾಯತಿಗೆ ಕೊಟ್ಟ ಹೊರತು [1][ಜಿಲ್ಲಾ ಪಂಚಾಯತಿಯ ಅಧ್ಯಕ್ಷ][1]ನು ಸ್ಥಿರೀಕರಿಸತಕ್ಕದಲ್ಲ, ಪರಿಷ್ಕರಿಸತಕ್ಕದ್ದಲ್ಲ ಅಥವಾ ಮಾರ್ಪಾಟು ಮಾಡತಕ್ಕದ್ದಲ್ಲ.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(3) [1][ಜಿಲ್ಲಾ ಪಂಚಾಯತಿಯ ಅಧ್ಯಕ್ಷನ][1] ಅಭಿಪ್ರಾಯದಲ್ಲಿ ತಾಲ್ಲೂಕು ಪಂಚಾಯತಿಯ ಯಾವುದೇ ಆದೇಶ ಅಥವಾ ನಿರ್ಣಯದ ಅಥವಾ ತಾಲ್ಲೂಕು ಪಂಚಾಯತಿಯ ಯಾವ ಪ್ರಾಧಿಕಾರಿಯ ಅಥವಾ ಅಧಿಕಾರಿಯ ಯಾವುದೇ ಆದೇಶದ ಅಮಲ್ಜಾರಿಯ ಅಥವಾ ತಾಲ್ಲೂಕು ಪಂಚಾಯತಿಯು ಅಥವಾ ಅದರ ಪರವಾಗಿ ಮಾಡಬೇಕಾಗಿರುವ ಅಥವಾ ಮಾಡುತ್ತಿರುವಂಥ ಯಾವುದೇ ಕಾರ್ಯವನ್ನು ಮಾಡುವುದು ಅನ್ಯಾಯ, ಕಾನೂನುಬಾಹಿರ ಅಥವಾ ಅನುಚಿತವಾಗಿದ್ದರೆ ಅಥವಾ ಸಾರ್ವಜನಿಕರಿಗೆ ಹಾನಿ ಅಥವಾ ಕಿರುಕುಳವನ್ನುಂಟು ಮಾಡುತ್ತಿದ್ದರೆ ಅಥವಾ ಉಂಟು ಮಾಡುವ ಸಂಭವವಿದ್ದರೆ ಅಥವಾ ಶಾಂತಿ ಭಂಗಕ್ಕೆ ಕಾರಣವಾಗುವುದಾಗಿದ್ದರೆ, ಅವರು ಅದರ ಅಮಲ್ಜಾರಿಯನ್ನು ಆದೇಶದ ಮೂಲಕ ಅಮಾನತುಗೊಳಿಸಬಹುದು ಅಥವಾ ಅದನ್ನು ಮಾಡುವುದನ್ನು ನಿಷೇಧಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(4) (3)ನೇ ಉಪ ಪ್ರಕರಣದ ಅಡಿಯಲ್ಲಿ [1][ಜಿಲ್ಲಾ ಪಂಚಾಯತಿಯ ಅಧ್ಯಕ್ಷನು][1] ಆದೇಶವನ್ನು ಮಾಡಿದಾಗ, ಅವರು ಅದನ್ನು ಮಾಡುವುದಕ್ಕೆ ಕಾರಣಗಳ ವಿವರಣೆ ಸಹಿತ ಆದೇಶದ ಪ್ರತಿಯನ್ನು ಸರ್ಕಾರಕ್ಕೆ ಮತ್ತು ಅದರಿಂದ ಬಾಧಿತವಾದ ತಾಲ್ಲೂಕು ಪಂಚಾಯತಿಗೆ ತಕ್ಷಣವೇ ಕಳುಹಿಸತಕ್ಕದ್ದು ಮತ್ತು ಸರ್ಕಾರವು ಆ ಆದೇಶವನ್ನು ಸ್ಥಿರೀಕರಿಸಬಹುದು ಅಥವಾ ರದ್ದುಗೊಳಿಸಬಹುದು ಅಥವಾ ಖಾಯಂ ಆಗಿ ಅಥವಾ ಸೂಕ್ತವೆಂದು ಅದು ಯೋಚಿಸಬಹುದಾದಂಥ ಅವಧಿಯವರೆಗೆ ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, (3)ನೇ ಉಪ ಪ್ರಕರಣದ ಅಡಿಯಲ್ಲಿ [1][ಜಿಲ್ಲಾ ಪಂಚಾಯತಿಯ ಅಧ್ಯಕ್ಷನು][1] ಮಾಡಿದ ಯಾವುದೇ ಆದೇಶವನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗೆ ಸದರಿ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಡದೆ, ಸರ್ಕಾರವು ಸ್ಥಿರೀಕರಿಸತಕ್ಕದ್ದಲ್ಲ, ಪರಿಷ್ಕರಿಸತಕ್ಕದ್ದಲ್ಲ ಅಥವಾ ಮಾರ್ಪಾಟು ಮಾಡತಕ್ಕದ್ದಲ್ಲ.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(5) [1][x x x][1], ಸರ್ಕಾರದ ಅಭಿಪ್ರಾಯದಲ್ಲಿ ಜಿಲ್ಲಾ ಪಂಚಾಯತಿಯ ಯಾವುದೇ ಆದೇಶ ಅಥವಾ ನಿರ್ಣಯದ ಅಮಲ್ಜಾರಿಯು ಅಥವಾ ಜಿಲ್ಲಾ ಪಂಚಾಯತಿಯು ಅಥವಾ ಅದರ ಪರವಾಗಿ ಮಾಡಬೇಕಾಗಿರುವ ಅಥವಾ ಮಾಡುತ್ತಿರುವಂಥ ಯಾವುದೇ ಕಾರ್ಯವನ್ನು ಮಾಡುವುದು ಅನ್ಯಾಯ, ಕಾನೂನು ಬಾಹಿರ ಅಥವಾ ಅನುಚಿತವಾಗಿದ್ದರೆ ಅಥವಾ ಸಾರ್ವಜನಿಕರಿಗೆ ಹಾನಿ ಅಥವಾ ಕಿರುಕುಳವನ್ನುಂಟು ಮಾಡುತ್ತಿದ್ದರೆ ಅಥವಾ ಉಂಟು ಮಾಡುವ ಸಂಭವವಿದ್ದರೆ ಅಥವಾ ಶಾಂತಿ ಭಂಗಕ್ಕೆ ಕಾರಣವಾಗುವುದಾದರೆ ಅದು ಅದರ ಅಮಲ್ಜಾರಿಯನ್ನು ಆದೇಶದ ಮೂಲಕ ಅಮಾನತ್ತುಗೊಳಿಸಬಹುದು ಅಥವಾ ಅದನ್ನು ಮಾಡುವುದನ್ನು ನಿಷೇಧಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಬಿಟ್ಟುಬಿಡಲಾಗಿದೆ.

(6) (5)ನೇ ಉಪ-ಪ್ರಕರಣದ ಅಡಿಯಲ್ಲಿ ಸರ್ಕಾರವು ಆದೇಶವನ್ನು ಮಾಡಿದಾಗ ಅದನ್ನು ಮಾಡುವುದಕ್ಕೆ ಕಾರಣಗಳ ವಿವರಣೆ ಸಹಿತ ಆದೇಶದ ಪ್ರತಿಯನ್ನು ಅದರಿಂದ ಬಾಧಿತವಾದ ಜಿಲ್ಲಾ ಪಂಚಾಯತಿಗೆ ತಕ್ಷಣವೇ ಕಳುಹಿಸತಕ್ಕದ್ದು ಮತ್ತು ಸರ್ಕಾರವು ಆ ಆದೇಶವನ್ನು ಸ್ಥಿರೀಕರಿಸಬಹುದು ಅಥವಾ ರದ್ದುಗೊಳಿಸಬಹುದು ಅಥವಾ ಅದು ಖಾಯಂ ಆಗಿ ಅಥವಾ ಸೂಕ್ತವೆಂದು ಯೋಚಿಸಬಹುದಾದಂಥ ಅವಧಿಯವರೆಗೆ ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ, ಸರ್ಕಾರವು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗೆ ಸದರಿ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಒಂದು ಯುಕ್ತ ಅವಕಾಶವನ್ನು ಕೊಡದೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**238. ಸಾಮಗ್ರಿ ಮತ್ತು ಸಾಧನ ಸಲಕರಣೆಗಳ ಖರೀದಿ.**- (1) ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಚಾರಗಳಿಗೆ ಉಪಬಂಧಿಸಬಹುದು, ಎಂದರೆ:-

(ಎ) ಜಿಲ್ಲಾ ಪಂಚಾಯತಿಗೆ, ತಾಲ್ಲೂಕು ಪಂಚಾಯತಿಗೆ ಅಥವಾ ಗ್ರಾಮ ಪಂಚಾಯತಿಗೆ ಅಗತ್ಯವಿರುವ ಸಾಮಗ್ರಿಗಳನ್ನು, ಸಾಧನ ಸಲಕರಣೆಗಳನ್ನು, ಯಂತ್ರ ಸಾಮಗ್ರಿಗಳನ್ನು ಅಥವಾ ಇತರ ವಸ್ತುಗಳನ್ನು ಅದು ಖರೀದಿ ಮಾಡತಕ್ಕ ವಿಧಾನ;

(ಬಿ) ಕಾಮಗಾರಿ ಕಾಂಟ್ರಾಕ್ಟಿಗಾಗಿ ಮತ್ತು ಸರಬರಾಜುಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸತಕ್ಕ ಮತ್ತು ಪರೀಕ್ಷಿಸತಕ್ಕ ಮತ್ತು ಅಂಗೀಕರಿಸತಕ್ಕ ವಿಧಾನ;

(ಸಿ) ಕಾಮಗಾರಿಗಳು ಮತ್ತು ಅಭಿವೃದ್ಧಿ ಯೋಜನೆಗಳನ್ನು ನಿರ್ವಹಿಸಬಹುದಾದ ಮತ್ತು ಪರೀಕ್ಷಿಸಬಹುದಾದ ಮತ್ತು ಅಂತಹ ಕಾಮಗಾರಿಗಳು ಮತ್ತು ಯೋಜನೆಗಳಿಗೆ ಸಂಬಂಧಪಟ್ಟಂತೆ ಸಂದಾಯ ಮಾಡಬಹುದಾದ ವಿಧಾನ;

(ಡಿ) ಈ ಪ್ರಕರಣದ ಉದ್ದೇಶಕ್ಕಾಗಿ ಸಮಿತಿಯ ರಚನೆ.

(2) ನಿಧಿಗಳನ್ನು ಪಡೆದುಕೊಳ್ಳುವುದು, ಬಿಲ್‌ಗಳ ನಮೂನೆ, ವೆಚ್ಚಗಳನ್ನು ಭರಿಸುವುದು, ಲೆಕ್ಕಗಳ ನಿರ್ವಹಣೆ, ಲೆಕ್ಕಗಳನ್ನು ಸಲ್ಲಿಸುವುದು ಮತ್ತು ಅಂಥ ಇತರ ವಿಚಾರಗಳಿಗೆ ಸಂಬಂಧಿಸಿದ ಇತರ ಎಲ್ಲ ವಿಚಾರಗಳಿಗೆ ಸಂಬಂಧಪಟ್ಟಂತೆ (1)ನೇ ಉಪಪ್ರಕರಣದಲ್ಲಿ ಬೇರೆ ರೀತಿಯಲ್ಲಿ ಸ್ಪಷ್ಟವಾಗಿ ನಮೂದಿಸಿರುವುದರ ಹೊರತಾಗಿ, ಸರ್ಕಾರದ ಇಲಾಖೆಗಳಿಗೆ ಅನ್ವಯವಾಗುವಂತೆ ಜಾರಿಗೆ ತರುವ ನಿಯಮಗಳು, ಯಥೋಚಿತ ಪರಿವರ್ತನೆಯೊಂದಿಗೆ ಅನ್ವಯವಾಗತಕ್ಕದ್ದು.

**239. ಕೆಲವು ಸಂದರ್ಭಗಳಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಅಧಿಕಾರ.**- (1),-

(ಎ) ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ನಡೆಯಬೇಕಾದ ಯಾವುದೇ ಸಾರ್ವತ್ರಿಕ ಚುನಾವಣೆಯನ್ನು ಅಥವಾ ಅದರ ಪರಿಣಾಮವಾಗಿ ಯಾವುವೇ ವ್ಯವಹರಣೆಗಳನ್ನು ಸಕ್ಷಮ ನ್ಯಾಯಾಲಯದ ಅಥವಾ ಪ್ರಾಧಿಕಾರಿಯ ಆದೇಶದ ಮೂಲಕ ತಡೆಹಿಡಿದಿರುವಾಗಲೆಲ್ಲಾ; ಅಥವಾ

(ಬಿ) ಜಿಲ್ಲಾ ಪಂಚಾಯತಿಯ ಅಥವಾ ತಾಲ್ಲೂಕು ಪಂಚಾಯತಿಯ ಎಲ್ಲ ಸದಸ್ಯರು ಅಥವಾ ಸದಸ್ಯರ ಪೈಕಿ ಮೂರನೇ ಎರಡರಷ್ಟಕ್ಕಿಂತ ಹೆಚ್ಚಿನವರು ರಾಜೀನಾಮೆಯನ್ನು ಕೊಟ್ಟಿರುವಾಗಲೆಲ್ಲಾ,

-ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟ-ಪಡಿಸಬಹುದಾದಂಥ ಅವಧಿಯವರೆಗೆ ಆಡಳಿತಾಧಿಕಾರಿಯನ್ನು ನೇಮಕಮಾಡತಕ್ಕದ್ದು ಮತ್ತು ಅಂಥದೇ ಅಧಿಸೂಚನೆಯ ಮೂಲಕ, ಅಂಥ ನೇಮಕದ ಅವಧಿಯನ್ನು ಮೊಟಕುಗೊಳಿಸಬಹುದು ಅಥವಾ ವಿಸ್ತರಿಸಬಹುದು. ಆದಾಗ್ಯೂ, ಅಂಥ ನೇಮಕದ ಒಟ್ಟು ಅವಧಿಯು ಆರು ತಿಂಗಳನ್ನು ಮೀರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಆಡಳಿತಗಾರರನ್ನು ನೇಮಕ ಮಾಡಿದ ಮೇಲೆ, ಅಂಥ ನೇಮಕದ ಅವಧಿಯಲ್ಲಿ, ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಕಾರ್ಯಗತಗೊಳಿಸುವ ಹೊಣೆಯನ್ನು ಹೊತ್ತ ಸದರಿ ಜಿಲ್ಲಾ ಪಂಚಾಯತಿಯು ಅಥವಾ ತಾಲ್ಲೂಕು ಪಂಚಾಯತಿಯು ಮತ್ತು ಅದರ ಸಮಿತಿಗಳು ಮತ್ತು ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಅವರಿಗೆ ಪ್ರದಾನ ಮಾಡಿದ ಅಥವಾ ವಿಧಿಸಿದ ಯಾವುವೇ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಯಾವುವೇ ಕರ್ತವ್ಯಗಳನ್ನು ಅಥವಾ ಪ್ರಕಾರ್ಯಗಳನ್ನು ನೆರವೇರಿಸುವುದು ಮತ್ತು ನಿರ್ವಹಿಸುವುದು ನಿಂತುಹೋಗತಕ್ಕದ್ದು ಮತ್ತು ಆ ಆಡಳಿತಾಧಿಕಾರಿಯು ಅಂಥ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಎಲ್ಲ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

**240. ಪಂಚಾಯತಿಗಳ ಪಾತ್ರವನ್ನು ನಿರ್ದಿಷ್ಟಪಡಿಸಲು ಸರ್ಕಾರದ ಅಧಿಕಾರ.**- ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಅನುಸೂಚಿ-I, II ಮತ್ತು IIIರಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಅಂಥ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಮತ್ತು ಚಟುವಟಿಕೆಗಳನ್ನು ಸೂಕ್ತವಾಗಿ ಸಮನ್ವಯಗೊಳಿಸುವುದನ್ನು ಮತ್ತು ಪರಿಣಾಮಕಾರಿಯಾಗಿ ಜಾರಿಗೆ ತರುವುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ, ಗ್ರಾಮಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಮತ್ತು ಜಿಲ್ಲಾ ಪಂಚಾಯತಿಯ ಪಾತ್ರವನ್ನು ಕಾಲಕಾಲಕ್ಕೆ ನಿರ್ದಿಷ್ಟಪಡಿಸತಕ್ಕದ್ದು.

## ಅಧ್ಯಾಯ XVII

## ಹಣಕಾಸು ನಿಯಂತ್ರಣ ಮತ್ತು ಲೆಕ್ಕ ಪರಿಶೋಧನೆ

**241. ಗ್ರಾಮ ಪಂಚಾಯತಿಯ ಲೆಕ್ಕಗಳ ಮತ್ತು ಬಜೆಟ್‌ನ ಮಂಡನೆ.**- (1) [1][ಪಂಚಾಯತಿ ಅಭಿವೃದ್ಧಿ ಅಧಿಕಾರಿಯು,][1] ಮುಂದಿನ ಮಾರ್ಚ್ ಮೂವತ್ತೊಂದನೇ ದಿನದಂದು ಕೊನೆಗೊಳ್ಳುವ ಆರ್ಥಿಕ ವರ್ಷದ ವಾಸ್ತವಿಕ ಮತ್ತು ನಿರೀಕ್ಷಿತ ಜಮೆ ಮತ್ತು ವೆಚ್ಚಗಳ ಸಂಪೂರ್ಣ ಲೆಕ್ಕವನ್ನು ಸಿದ್ಧಪಡಿಸತಕ್ಕದ್ದು ಮತ್ತು ಮುಂಬರುವ ಏಪ್ರಿಲ್ ಮೊದಲನೇ ದಿನದಂದು ಪ್ರಾರಂಭಗೊಳ್ಳುವ ಆರ್ಥಿಕ ವರ್ಷಕ್ಕಾಗಿ ಗ್ರಾಮ ಪಂಚಾಯತಿಯ ಆದಾಯ ಮತ್ತು ವೆಚ್ಚದ

ಬಜೆಟ್ ಅಂದಾಜಿನ ಜೊತೆಗೆ ಅದನ್ನು ಫೆಬ್ರವರಿ ಮೊದಲನೇ ದಿನದ ಮತ್ತು ಮಾರ್ಚ್ ಹತ್ತನೇ ದಿನದ ನಡುವೆ ನಡೆಯುವ ಸಭೆಯಲ್ಲಿ ಮಂಡಿಸತಕ್ಕದ್ದು.

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.

(2) ಆ ತರುವಾಯ, ಗ್ರಾಮ ಪಂಚಾಯತಿಯು, ಮುಂಬರುವ ಏಪ್ರಿಲ್ ಒಂದನೇ ದಿನದಂದು ಪ್ರಾರಂಭವಾಗುವ ವರ್ಷದ ಬಜೆಟ್‌ನಲ್ಲಿ ಒಳಗೊಂಡಿರುವ ಧನ ವಿನಿಯೋಗಗಳ ಮತ್ತು ಮಾರ್ಗೋಪಾಯಗಳ ಬಗ್ಗೆ ತೀರ್ಮಾನಿಸತಕ್ಕದ್ದು. ಗ್ರಾಮ ಪಂಚಾಯತಿಯು ಅಂಗೀಕರಿಸಿದಂತಹ ಬಜೆಟನ್ನು, ಸರ್ಕಾರವು ನಿಗದಿಪಡಿಸಬಹುದಾದಂತಹ ದಿನಾಂಕಕ್ಕೆ ಮೊದಲು ತಾಲ್ಲೂಕು ಪಂಚಾಯತಿಗೆ ಕಳುಹಿಸತಕ್ಕದ್ದು.

(3) ಅಂಥ ಬಜೆಟ್ ಅಂದಾಜಿನಲ್ಲಿ ಗ್ರಾಮ ಪಂಚಾಯತಿಯು ಇತರ ವಿಷಯಗಳೊಂದಿಗೆ,-

(ಎ) ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಮೂಲಕ ಗ್ರಾಮ ಪಂಚಾಯತಿಗೆ ವಿಧಿಸಿದ ಹಲವಾರು ಕರ್ತವ್ಯಗಳನ್ನು ನೆರವೇರಿಸಲು ಅಗತ್ಯವಾಗಬಹುದಾದಂಥ ಸೇವೆಗಳಿಗಾಗಿ ಸಾಕಷ್ಟು ಮತ್ತು ಸೂಕ್ತ ಏರ್ಪಾಟು ಮಾಡತಕ್ಕದ್ದು;

(ಬಿ) ಸರ್ಕಾರವು ಸಾಮಾನ್ಯವಾಗಿ ಎಲ್ಲ ಗ್ರಾಮ ಪಂಚಾಯತಿಗಳಿಗಾಗಿ ಅಥವಾ ವಿಶೇಷವಾಗಿ ಯಾವುದೇ ಗ್ರಾಮ ಪಂಚಾಯತಿಗಾಗಿ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಮೊತ್ತಕ್ಕೆ ಅಥವಾ ಆದಾಯದ ಶೇಕಡಾ ಪ್ರಮಾಣಕ್ಕೆ ಕಡಿಮೆ ಇಲ್ಲದ ಹಣವನ್ನು ಸದರಿ ವರ್ಷದ ಕೊನೆಯಲ್ಲಿ ಶಿಲ್ಕಾಗಿ ಉಳಿಸತಕ್ಕದ್ದು;

(ಸಿ) ತಾನು ಕರಾರು ಮಾಡಿಕೊಂಡ ಸಾಲಗಳ ಸಂದಾಯದ ಬಗ್ಗೆ ಗ್ರಾಮ ಪಂಚಾಯತಿಯು ಬದ್ಧವಾಗಿರಬಹುದಾದ ಅಸಲು ಮತ್ತು ಬಡ್ಡಿಯ ಎಲ್ಲ ಕಂತುಗಳು ಬಾಕಿಯಾದಾಗಲೆಲ್ಲ ಅವುಗಳ ಸಂದಾಯಕ್ಕಾಗಿ ಏರ್ಪಾಟು ಮಾಡತಕ್ಕದ್ದು.

(4) ಅಂಥ ಬಜೆಟ್ ಅಂದಾಜು, ಈ ಅಧಿನಿಯಮಕ್ಕೆ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಿಗೆ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಆದೇಶಗಳಿಗೆ ಅನುಸಾರವಾಗಿ ಇಲ್ಲದಿದ್ದರೆ, ತಾಲ್ಲೂಕು ಪಂಚಾಯತಿಯು ಬಜೆಟ್ಟನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಈ ಅಧಿನಿಯಮದ ನಿಯಮಗಳ ಅಥವಾ ಆದೇಶಗಳ ಪಾಲನೆಯಾಗುವಂತಾಗಲು ಅದನ್ನು ಮಾರ್ಪಾಟು ಮಾಡತಕ್ಕದ್ದು:

ಪರಂತು, ತಾಲ್ಲೂಕು ಪಂಚಾಯತಿಯು, ಒಟ್ಟು ಪ್ರಸ್ತಾವಿತ ವೆಚ್ಚವು, ಮುಂಬರುವ ವರ್ಷದ ಮತ್ತು ಗ್ರಾಮ ಪಂಚಾಯತಿಯ ಅಂದಾಜು ವರಮಾನದ ಒಟ್ಟು ಮೊತ್ತವನ್ನು ಮತ್ತು ಪ್ರಾರಂಭ ಶಿಲ್ಕನ್ನು ಮೀರತಕ್ಕದ್ದೆಂದು ನಿರ್ದೇಶಿಸಲು ಅಧಿಕಾರವನ್ನು ಹೊಂದಿರತಕ್ಕದ್ದಲ್ಲ.

(5) (1)ನೇ ಉಪ ಪ್ರಕರಣದಲ್ಲಿ ಹೇಳಿರುವ ದಿನಾಂಕದಂದು, ಅಥವಾ ಅದಕ್ಕೂ ಮೊದಲು ಬಜೆಟ್ ಅಂದಾಜನ್ನು ಅಂಗೀಕರಿಸಲು ಗ್ರಾಮ ಪಂಚಾಯತಿಯು ತಪ್ಪಿದಲ್ಲಿ, [1][ಪಂಚಾಯತಿ ಅಭಿವೃದ್ಧಿ ಅಧಿಕಾರಿಯು][1] ಬಜೆಟ್ ಅಂದಾಜನ್ನು ತಾಲ್ಲೂಕು ಪಂಚಾಯತಿಗೆ ಕಳುಹಿಸತಕ್ಕದ್ದು ಮತ್ತು ಅದು ಅದನ್ನು ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಅನುಮೋದಿಸತಕ್ಕದ್ದು. ತಾಲ್ಲೂಕು ಪಂಚಾಯತಿಯು ಹಾಗೆ ಅನುಮೋದಿಸಿದ ಬಜೆಟ್ಟನ್ನು ಕಾರ್ಯನಿರ್ವಾಹಕ ಅಧಿಕಾರಿಯು ಪ್ರಮಾಣೀಕರಿಸತಕ್ಕದ್ದು ಮತ್ತು ಆ ತರುವಾಯ, ಅದನ್ನು ಗ್ರಾಮ ಪಂಚಾಯತಿಯು ಯಥಾವಿಧಿಯಾಗಿ ಅನುಮೋದಿಸಿದುದೆಂಬಂತೆ ಭಾವಿಸತಕ್ಕದ್ದು.

1. 2010ರ ಅಧಿನಿಯಮ ಸಂಖ್ಯೆ: 24ರ ಮೂಲಕ ದಿನಾಂಕ: 23-07-2010ರಿಂದ ಪ್ರತಿಯೋಜಿಸಲಾಗಿದೆ.

**242. ಬಜೆಟ್ ಪರಿಷ್ಕರಣೆ.-** ಆರ್ಥಿಕ ವರ್ಷದಲ್ಲಿ ಗ್ರಾಮ ಪಂಚಾಯತಿಯು, ಜಮೆಗಳ ಬಗ್ಗೆ ಅಥವಾ ಅದು ಕೈಗೊಳ್ಳುವ ವಿವಿಧ ಸೇವೆಗಳ ಬಗ್ಗೆ ವೆಚ್ಚ ಮಾಡಬೇಕಾದ ಮೊಬಲಗುಗಳ ಹಂಚಿಕೆಯ ಬಗ್ಗೆ ಬಜೆಟ್ಟಿನಲ್ಲಿ ಮಾಡಿರುವ ಏರ್ಪಾಡುಗಳನ್ನು ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದರೆ ಅದು ಅಂಥ ಮಾರ್ಪಾಡನ್ನು ಮಾಡಬಹುದು:

ಪರಂತು, ರಾಜ್ಯದ ಸಂಚಿತ ನಿಧಿಯಿಂದ ಸರ್ಕಾರವು ವರ್ಗಾವಣೆ ಮಾಡಿರುವ ಯಾವುವೇ ಅನುದಾನಗಳನ್ನು, ಅಂಥ ಅನುದಾನಗಳ ವ್ಯಾಪ್ತಿಯೊಳಗೆ ಬರದ ಉದ್ದೇಶಕ್ಕಾಗಿ ಅಥವಾ ಕಾರ್ಯಕ್ರಮಕ್ಕಾಗಿ ಅಥವಾ ಯೋಜನೆಗಾಗಿ ಪಲ್ಲಟ ಮಾಡತಕ್ಕದ್ದಲ್ಲ:

ಮತ್ತು ಪರಂತು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅನುಮೋದನೆ ಇಲ್ಲದೆ,-

(ಎ) ಗ್ರಾಮ ಪಂಚಾಯತಿಯ ಯಾವುವೇ ಅಭಿವೃದ್ಧಿಕಾರ್ಯಗಳಿಗಾಗಿ ಅನುಮೋದಿಸಿದ ಅನುದಾನಗಳಲ್ಲಿ ಶೇಕಡಾ ಹತ್ತಕ್ಕಿಂತ ಹೆಚ್ಚಿಗೆ ಯಾವುದೇ ಕಡಿತ ಮಾಡತಕ್ಕದ್ದಲ್ಲ.

(ಬಿ) 241ನೇ ಪ್ರಕರಣದ (3)ನೇ ಉಪ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ನಿಗದಿ ಮಾಡಿದ ಮೊಬಲಗಿಗಿಂತ ಕಡಿಮೆಯಾಗಿ ಮುಕ್ತಾಯ ಶಿಲ್ಕನ್ನು ಕಡಿಮೆ ಮಾಡತಕ್ಕದ್ದಲ್ಲ.

**243. ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ವೆಚ್ಚದ ಮೇಲೆ ನಿರ್ಬಂಧ.-** (1) ಗ್ರಾಮ ಪಂಚಾಯತಿಯು ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರ ಇಡತಕ್ಕದ್ದು.

(2) ಗ್ರಾಮ ಪಂಚಾಯತಿ ನಿಧಿಯಿಂದ, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಗೊತ್ತುಪಡಿಸಬಹುದಾದಂಥ ಮಂಜೂರಾತಿಗಳಿಗೆ, ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೊಳಪಟ್ಟು ವೆಚ್ಚಗಳನ್ನು ವಹಿಸತಕ್ಕದ್ದು.

(3) ಗ್ರಾಮ ಪಂಚಾಯತಿಯು, ಆರ್ಥಿಕ ವರ್ಷವು ಮುಕ್ತಾಯವಾದ ತರುವಾಯ ನಡೆಸಿದ ಮೊದಲನೇ ಸಾಮಾನ್ಯ ಸಭೆಯಲ್ಲಿ ಆ ವರ್ಷದ ಲೆಕ್ಕಪತ್ರಗಳನ್ನು ಅಂಗೀಕರಿಸತಕ್ಕದ್ದು.

**244. ಲೆಕ್ಕಪತ್ರಗಳ ರವಾನೆ.-** ಗ್ರಾಮ ಪಂಚಾಯತಿಯು, ವಾರ್ಷಿಕ ಲೆಕ್ಕಪತ್ರಗಳನ್ನು, ಅದು ಅಂತಿಮವಾಗಿ ಅಂಗೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಗೊತ್ತುಪಡಿಸಿರುವ ನಮೂನೆಯಲ್ಲಿ ಲೆಕ್ಕವನ್ನು ಜಿಲ್ಲಾ ಪಂಚಾಯತಿಗೆ ಕಳುಹಿಸತಕ್ಕದ್ದು ಮತ್ತು ಜಿಲ್ಲಾ ಪಂಚಾಯತಿಯು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ಅದಕ್ಕೆ ಸಂಬಂಧಪಟ್ಟ ವಿವರಗಳು ಮತ್ತು ವೋಚರುಗಳನ್ನು ಒದಗಿಸತಕ್ಕದ್ದು.

**245. ವಸೂಲಾಗದ ಮೊತ್ತಗಳನ್ನು ವಜಾ ಮಾಡಲು ಅಧಿಕಾರ.-** ಗೊತ್ತುಪಡಿಸಬಹುದಾದ ನಿರ್ಬಂಧಗಳಿಗೊಳಪಟ್ಟು, ಗ್ರಾಮ ಪಂಚಾಯತಿಯು, ಕರಾರಿನ ಮೇಲೆ ಆಗಲಿ ಅಥವಾ ಅನ್ಯಥಾ ಆಗಲಿ, ಅದಕ್ಕೆ ಬಾಕಿ

ಬರಬೇಕಾಗಿರುವ ಯಾವುದೇ ತೆರಿಗೆಯನ್ನು, ಫೀಜನ್ನು, ದರವನ್ನು ಅಥವಾ ಇತರ ಮೊತ್ತವನ್ನು ಅಥವಾ ಅದಕ್ಕೆ ಸಂಬಂಧಿಸಿದಂತೆ ಸಂದಾಯವಾಗತಕ್ಕ ಯಾವುದೇ ಮೊಬಲಗನ್ನು, ಅಂಥ ತೆರಿಗೆ, ಫೀಜು, ದರ ಅಥವಾ ಇತರ ಮೊಬಲಗು ವಸೂಲಾಗದ್ದೆಂದು ಅದು ಅಭಿಪ್ರಾಯಪಟ್ಟರೆ ವಜಾ ಮಾಡಬಹುದು:

ಪರಂತು, ತಾಲ್ಲೂಕು ಪಂಚಾಯತಿಯ ಪೂರ್ವಾನುಮೋದನೆಯಿಲ್ಲದೆಯೇ ಒಂದು ಸಾವಿರ ರೂಪಾಯಿಗಳನ್ನು ಮೀರಿದ ಮೊತ್ತವನ್ನು ವಜಾ ಮಾಡತಕ್ಕದ್ದಲ್ಲ.

**246. ಲೆಕ್ಕಪತ್ರಗಳ ಪರಿಶೋಧನೆ.**- (1) ಪ್ರತಿಯೊಂದು ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳನ್ನು ಪ್ರತಿವರ್ಷ, [2][ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ ಇಲಾಖೆ][2] ಅಧಿಕಾರ ನೀಡಿರುವಂಥ ಅಧಿಕಾರಿಯು (ಇದರಲ್ಲಿ ಇನ್ನು ಮುಂದೆ ಲೆಕ್ಕಪರಿಶೋಧಕ ಎಂದು ಕರೆಯಲಾಗಿದೆ) [1][ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1971ರ (1971ರ ಕೇಂದ್ರ ಅಧಿನಿಯಮ 56) ಉಪಬಂಧಗಳಿಗನುಸಾರವಾಗಿ (1)ನೇ ಉಪ ಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯನ್ನು ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರವರು ಒದಗಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿಗಳ ಲೆಕ್ಕಗಳ ಪರೀಕ್ಷಾರ್ಥ ತಪಾಸಣೆ ಮಾಡತಕ್ಕದ್ದು][1] ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

(2) ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ, ಲೆಕ್ಕಪರಿಶೋಧಕನಿಗೆ ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶ ಇರತಕ್ಕದ್ದು.

(3) ಲೆಕ್ಕಪರಿಶೋಧಕನು,-

(ಎ) ಲೆಕ್ಕಪರಿಶೋಧನೆಯನ್ನು ಸರಿಯಾಗಿ ನಡೆಸುವುದಕ್ಕಾಗಿ ಅವಶ್ಯವೆಂದು ತಾನು ಪರಿಗಣಿಸುವಂಥ ವೋಚರುಗಳನ್ನು, ವಿವರ ಪತ್ರಗಳನ್ನು, ವಿವರಣಾ ಪಟ್ಟಿಗಳನ್ನು, ಪತ್ರ ವ್ಯವಹಾರವನ್ನು, ಟಿಪ್ಪಣಿಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ತನ್ನ ಮುಂದೆ ಹಾಜರುಪಡಿಸುವಂತೆ ಬರಹದಲ್ಲಿ ಅಗತ್ಯಪಡಿಸಬಹುದು.

(ಬಿ) ಯಾವುವೇ ಅಂಥ ವೋಚರುಗಳ, ವಿವರ ಪತ್ರಗಳ, ವಿವರಪಟ್ಟಿಕೆಗಳ, ಪತ್ರವ್ಯವಹಾರದ, ಟಿಪ್ಪಣಿಗಳ ಅಥವಾ ದಸ್ತಾವೇಜುಗಳ ಬಗ್ಗೆ ಜವಾಬ್ದಾರನಾಗಿರುವ ಅಥವಾ ಅವುಗಳ ಸುಪರ್ದು ಅಥವಾ ನಿಯಂತ್ರಣವನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಅಥವಾ ಗ್ರಾಮ ಪಂಚಾಯತಿಯೊಂದಿಗೆ ಅಥವಾ ಅದರ ಅಡಿಯಲ್ಲಿ ಯಾವುದೇ ಕರಾರಿನಲ್ಲಿ ಪ್ರತ್ಯಕ್ಷವಾಗಿ ಅಥವಾ ತಾನಾಗಿಯೇ ಪರೋಕ್ಷವಾಗಿ ಅಥವಾ ಅವನ ಪಾಲುದಾರನ ಮೂಲಕ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ತನ್ನ ಮುಂದೆ ಖುದ್ದಾಗಿ ಹಾಜರಾಗುವಂತೆ ಬರಹದಲ್ಲಿ ಅಗತ್ಯಪಡಿಸಬಹುದು;

(ಸಿ) ತನ್ನ ಮುಂದೆ ಹಾಗೆ ಹಾಜರಾಗುವ ವ್ಯಕ್ತಿಯನ್ನು, ಅಂಥ ವೋಚರುಗಳಿಗೆ, ವಿವರಪತ್ರಗಳಿಗೆ, ವಿವರ ಪಟ್ಟಿಕೆಗಳಿಗೆ, ಪತ್ರ ವ್ಯವಹಾರದ, ಟಿಪ್ಪಣಿಗಳಿಗೆ ಅಥವಾ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಲು ಮತ್ತು ಅದಕ್ಕೆ ರುಜು ಮಾಡಲು ಅಥವಾ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಯಾವುದೇ ವಿವರಪತ್ರವನ್ನು ಸಿದ್ಧಪಡಿಸಲು ಮತ್ತು ಒದಗಿಸಲು ಅಗತ್ಯಪಡಿಸಬಹುದು;

(ಡಿ) ಗ್ರಾಮ ಪಂಚಾಯತಿಯ ಅಧ್ಯಕ್ಷನಿಂದ ಅಥವಾ ಸದಸ್ಯನಿಂದ ಬರಹದಲ್ಲಿ ವಿವರಣೆಯನ್ನು ಅಗತ್ಯಪಡಿಸಿದ ಸಂದರ್ಭದಲ್ಲಿ ಅವನನ್ನು ಭೇಟಿಯಾಗಲು ಅಂಥ ವ್ಯಕ್ತಿಯನ್ನು ಆಹ್ವಾನಿಸಬಹುದು ಮತ್ತು ಅವನ ವಿವರಣೆಯು ಅಗತ್ಯವಾಗಿರುವಂಥ ಅಂಶವನ್ನು ಬರಹದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(4) (3)ನೇ ಉಪ ಪ್ರಕರಣದ ಅಡಿಯಲ್ಲಿ ಕಾನೂನು ಸಮ್ಮತವಾಗಿ ಮಾಡಿದ ಯಾವುದೇ ಕಡ್ಡಾಯ ಕೋರಿಕೆಯನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವ ಅಥವಾ ನಿರಾಕರಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಒಂದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದ ಅಡಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮಂಜೂರಾತಿ ಇಲ್ಲದೆ ಯಾವುವೇ ವ್ಯವಹರಣೆಗಳನ್ನು ಮಾಡತಕ್ಕದ್ದಲ್ಲ.

(5) ಲೆಕ್ಕ ಪರಿಶೋಧಕನು, ಲೆಕ್ಕ ಪರಿಶೋಧನೆಯು ಮುಕ್ತಾಯವಾದ ಒಂದು ತಿಂಗಳೊಳಗೆ ಲೆಕ್ಕ ಪರಿಶೋಧನೆಯ ವರದಿಯ ಒಂದು ಪ್ರತಿಯನ್ನು ಗ್ರಾಮ ಪಂಚಾಯತಿಗೆ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

(6) ಲೆಕ್ಕ ಪರಿಶೋಧನಾ ವರದಿಯು ತಲುಪಿದ ತರುವಾಯ ಗ್ರಾಮ ಪಂಚಾಯತಿಯು, ವರದಿಯಲ್ಲಿ ಎತ್ತಿ ತೋರಿಸಿರುವ ಯಾವುವೇ ದೋಷಗಳನ್ನು ಅಥವಾ ಅಕ್ರಮಗಳನ್ನು ಸರಿಪಡಿಸಿಕೊಳ್ಳತಕ್ಕದ್ದು ಮತ್ತು ಹಾಗೆ ಮಾಡಿದ ಬಗ್ಗೆ ಮಾಹಿತಿಯನ್ನು ಮೂರು ತಿಂಗಳುಗಳೊಳಗೆ ಕಾರ್ಯ ನಿರ್ವಾಹಕ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು ಅಥವಾ ಅಂಥ ದೋಷಗಳಿಗೆ ಅಥವಾ ಅಕ್ರಮಗಳಿಗೆ ಸಂಬಂಧಪಟ್ಟಂತೆ ಯಾವುದೇ ಹೆಚ್ಚಿನ ವಿವರಣೆಯನ್ನು ಅದನ್ನು ಅದೇ ಅವಧಿಯೊಳಗಾಗಿ ಕಾರ್ಯನಿರ್ವಾಹಕ ಅಧಿಕಾರಿಗೆ ಒದಗಿಸತಕ್ಕದ್ದು.

(7) ಲೆಕ್ಕ ಪರಿಶೋಧನಾ ವರದಿಯಲ್ಲಿ ಚರ್ಚಿಸಿರುವ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಸಂಬಂಧಿಸಿದ ಅಂಥ ಮಾಹಿತಿಯನ್ನು ಅಥವಾ ವಿವರಣೆಯನ್ನು ಸ್ವೀಕರಿಸಿದ ಮೇಲೆ, ಕಾರ್ಯನಿರ್ವಾಹಕ ಅಧಿಕಾರಿಯು ಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ,-

(ಎ) ಗ್ರಾಮ ಪಂಚಾಯತಿಯು ನೀಡಿದ ಮಾಹಿತಿಯನ್ನು ಅಥವಾ ವಿವರಣೆಯನ್ನು ಒಪ್ಪಿಕೊಳ್ಳಬಹುದು ಮತ್ತು ಆಕ್ಷೇಪಣೆಗಳನ್ನು ಹಿಂತೆಗೆದುಕೊಳ್ಳಲು ಆದೇಶಿಸಬಹುದು, ಅಥವಾ

(ಬಿ) ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಅಥವಾ ಅದಕ್ಕಿಂತ ಮೊದಲಿನ ಯಾವುದೇ ದಿನಾಂಕದಲ್ಲಿ ಪುನಃ ತಪಾಸಣೆ ಮಾಡಬೇಕೆಂದು ನಿರ್ದೇಶಿಸಬಹುದು, ಅಥವಾ

(ಸಿ) ಲೆಕ್ಕ ಪರಿಶೋಧನಾ ವರದಿಯಲ್ಲಿ ಎತ್ತಿ ತೋರಿಸಿರುವ ಎಲ್ಲ ದೋಷಗಳನ್ನು ಅಥವಾ ಅಕ್ರಮಗಳನ್ನು ಅಥವಾ ಅವುಗಳಲ್ಲಿ ಯಾವುವನ್ನಾದರೂ ಗ್ರಾಮ ಪಂಚಾಯತಿಯು ತೆಗೆದುಹಾಕತಕ್ಕದ್ದೆಂದು ಅಥವಾ ಸರಿಪಡಿಸತಕ್ಕದೆಂದು ನಿರ್ದೇಶಿಸಬಹುದು.

(8) ಕಾರ್ಯನಿರ್ವಾಹಕ ಅಧಿಕಾರಿಯು, ಅವಶ್ಯವೆಂದು ತಾನು ಪರಿಗಣಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಕಾನೂನಿಗೆ ವಿರುದ್ಧವಾದುದೆಂದು ತನಗೆ ಕಂಡುಬಂದ ಯಾವುದೇ ವೆಚ್ಚದ ಬಗ್ಗೆ ಅನುಮತಿ ನೀಡದಿರಬಹುದು ಮತ್ತು ಕಾನೂನುಬಾಹಿರ ಸಂದಾಯವನ್ನು ಮಾಡುವ ಅಥವಾ ಮಾಡುವುದಕ್ಕೆ ಅಧಿಕಾರ ನೀಡುವ ವ್ಯಕ್ತಿಯ ಮೇಲೆ ಮೊಬಲಗಿನ ಋಣಭಾರ ಹೊರಿಸಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಯಿಂದ ವಿವರಣೆಯನ್ನು ಪಡೆದುಕೊಂಡ ತರುವಾಯ ಕಾರ್ಯನಿರ್ವಾಹಕ ಅಧಿಕಾರಿಯು ಅಂಥ ವ್ಯಕ್ತಿಯು ಋಣಭಾರದ ಮೊಬಲಗನ್ನು ಅದು ಬಾಕಿಯಾದ ದಿನಾಂಕದಿಂದ ಬಾಕಿ ಮೊಬಲಗಿನ ಮೇಲಿನ ಶೇಕಡಾ ಹದಿನೈದರಷ್ಟು ಬಡ್ಡಿ ಸಹಿತ ಗ್ರಾಮ ಪಂಚಾಯತಿಗೆ ಸಂದಾಯ ಮಾಡತಕ್ಕದ್ದೆಂದು ಬರಹದಲ್ಲಿ ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಅಂಥ ಆದೇಶದ ದಿನಾಂಕದಿಂದ ಎರಡು ತಿಂಗಳೊಳಗೆ ಆ ಮೊಬಲಗನ್ನು ಸಂದಾಯ ಮಾಡದಿದ್ದರೆ, ಕಾರ್ಯನಿರ್ವಾಹಕ ಅಧಿಕಾರಿಯು ಅದನ್ನು ಭೂ ಕಂದಾಯದ ಬಾಕಿಯಂತೆ ವಸೂಲ್ಮಾಡಲು ಕ್ರಮ ತೆಗೆದುಕೊಳ್ಳತಕ್ಕದ್ದು ಮತ್ತು ಅದನ್ನು ಗ್ರಾಮ ಪಂಚಾಯತಿಯ ನಿಧಿಗೆ ಜಮಾ ಮಾಡತಕ್ಕದ್ದು.

(9) (8)ನೇ ಉಪಪ್ರಕರಣದ ಅಡಿಯ, ಕಾರ್ಯನಿರ್ವಾಹಕ ಅಧಿಕಾರಿಯ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ತೀರ್ಮಾನದ ಪ್ರತಿಯು ಅವನಿಗೆ ತಲುಪಿದ ಹದಿನೈದು ದಿನಗಳೊಳಗೆ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗೆ ಅಪೀಲನ್ನು ಸಲ್ಲಿಸಬಹುದು, ಅವರು ಸೂಕ್ತವೆಂದು ತಾವು ಭಾವಿಸಬಹುದಾದಂಥ ಆದೇಶವನ್ನು ನೀಡತಕ್ಕದ್ದು.

(1೦) 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸರ್ಕಾರದ ಮುಂದೆ ಇತ್ಯರ್ಥದಲ್ಲಿರುವ (9)ನೇ ಉಪ ಪ್ರಕರಣದ ಅಡಿಯ ಯಾವುದೇ ಅಪೀಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ವರ್ಗಾಯಿಸಲ್ಪಡತಕ್ಕದ್ದು ಮತ್ತು ಅಂಥ ಅಪೀಲನ್ನು, ಅದನ್ನು ಅವರ ಮುಂದೆ ದಾಖಲ್ಮಾಡಲಾಗಿದ್ದರೆ ಹೇಗೋ ಹಾಗೆ ತೀರ್ಮಾನಿಸತಕ್ಕದ್ದು.

(11) [2][ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ ಇಲಾಖೆ][2]ಲೆಕ್ಕ ಪರಿಶೋಧನಾ ವರದಿಯ ಬಗ್ಗೆ ಮಾಡಿದ ಸಂಕ್ಷಿಪ್ತ ಅಭಿಪ್ರಾಯೋಕ್ತಿಗಳನ್ನು ಮತ್ತು ಗ್ರಾಮ ಪಂಚಾಯತಿಗಳು ಸರಿಪಡಿಸಿರುವುದನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

[1][(12) [2][ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ ಇಲಾಖೆ][2], ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಸಂಬಂಧದಲ್ಲಿ ಕ್ರೋಢಿಕೃತ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅಂಥ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.][1]

1. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.
2. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ 12.07.2017ರಿಂದ ಪ್ರತಿಯೋಜಿಸಲಾಗಿದೆ.

**247. ತಾಲ್ಲೂಕು ಪಂಚಾಯತಿಯ ಲೆಕ್ಕಪತ್ರಗಳ ಮತ್ತು ಬಜೆಟ್‌ನ ಮಂಡನೆ.-** (1) ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸಮಿತಿಯು ಮುಂದಿನ ಮಾರ್ಚ್ ಮೂವತ್ತೊಂದರಂದು ಕೊನೆಗೊಳ್ಳುವ ಆರ್ಥಿಕ ವರ್ಷದ ವಾಸ್ತವಿಕ ಮತ್ತು ನಿರೀಕ್ಷಿತ ಜಮೆ ಮತ್ತು ವೆಚ್ಚಗಳ ಸಂಪೂರ್ಣ ಲೆಕ್ಕವನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು. ಅದನ್ನು ಫೆಬ್ರವರಿ ತಿಂಗಳ ಮೊದಲನೆಯ ದಿನದ ಮತ್ತು ಮಾರ್ಚ್ ಹತ್ತನೇ ದಿನದ ನಡುವೆ ನಡೆಸುವ ಸಭೆಯಲ್ಲಿ ತಾಲ್ಲೂಕು ಪಂಚಾಯತಿಯ ಮುಂದೆ, ಮುಂಬರುವ ಏಪ್ರಿಲ್ ಒಂದನೇ ದಿನಾಂಕದಂದು ಪ್ರಾರಂಭವಾಗುವ ಆರ್ಥಿಕ ವರ್ಷದ ತಾಲ್ಲೂಕು ಪಂಚಾಯತಿಯ ಆದಾಯ ಮತ್ತು ವೆಚ್ಚಗಳ ಬಜೆಟ್ ಅಂದಾಜಿನ ಸಹಿತ ಮಂಡಿಸುವಂತೆ ಮಾಡತಕ್ಕದ್ದು.

(2) ಆ ತರುವಾಯ, ತಾಲ್ಲೂಕು ಪಂಚಾಯತಿಯು, ಮುಂಬರುವ ಏಪ್ರಿಲ್ ಮೊದಲನೆಯ ದಿನದಂದು ಪ್ರಾರಂಭವಾಗುವ ವರ್ಷದ ಬಜೆಟ್ಟಿನಲ್ಲಿ ಒಳಗೊಂಡಿರುವ ಧನ ವಿನಿಯೋಗಗಳ ಮತ್ತು ಮಾರ್ಗೋಪಾಯಗಳ ಬಗ್ಗೆ ತೀರ್ಮಾನಿಸತಕ್ಕದ್ದು. ತಾಲ್ಲೂಕು ಪಂಚಾಯತಿಯು ಅಂಗೀಕರಿಸಿದಂತಹ ಬಜೆಟ್‌ನ್ನು ಸರ್ಕಾರವು ನಿಗದಿ ಮಾಡಬಹುದಾದಂಥ ದಿನಾಂಕಕ್ಕೆ ಮೊದಲು ಜಿಲ್ಲಾ ಪಂಚಾಯತಿಗೆ ಕಳುಹಿಸತಕ್ಕದ್ದು.

(3) ಅಂಥ ಬಜೆಟ್ ಅಂದಾಜಿನಲ್ಲಿ, ತಾಲ್ಲೂಕು ಪಂಚಾಯತಿಯು, ಇತರ ವಿಷಯಗಳೊಂದಿಗೆ,-

(ಎ) ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಮೂಲಕ ತಾಲ್ಲೂಕು ಪಂಚಾಯತಿಗೆ ವಿಧಿಸಿದ ಹಲವಾರು ಕರ್ತವ್ಯಗಳನ್ನು ನೆರವೇರಿಸಲು ಅಗತ್ಯವಾಗಬಹುದಾದಂಥ ಸೇವೆಗಳಿಗಾಗಿ ಸಾಕಷ್ಟು ಹಾಗೂ ಸೂಕ್ತ ಏರ್ಪಾಟು ಮಾಡತಕ್ಕದ್ದು;

(ಬಿ) ತಾನು ಕರಾರು ಮಾಡಿಕೊಂಡ ಸಾಲಗಳ ಸಂದಾಯದ ಬಗ್ಗೆ ತಾಲ್ಲೂಕು ಪಂಚಾಯತಿಯು ಬದ್ಧವಾಗಿರಬಹುದಾದ ಅಸಲು ಹಾಗೂ ಬಡ್ಡಿಯ ಎಲ್ಲ ಕಂತುಗಳು ಬಾಕಿಯಾದಾಗಲೆಲ್ಲ ಅವುಗಳ ಸಂದಾಯಕ್ಕಾಗಿ ಏರ್ಪಾಟು ಮಾಡತಕ್ಕದ್ದು;

(ಸಿ) ಸರ್ಕಾರವು ಸಾಮಾನ್ಯವಾಗಿ ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೆ ಅಥವಾ ವಿಶೇಷವಾಗಿ ಯಾವುದೇ ತಾಲ್ಲೂಕು ಪಂಚಾಯತಿಗಾಗಿ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಮೊತ್ತಕ್ಕೆ ಅಥವಾ ಆದಾಯದ ಶೇಕಡಾ ಪ್ರಮಾಣಕ್ಕೆ ಕಡಿಮೆಯಿಲ್ಲದ ಹಣವನ್ನು ಸದರಿ ವರ್ಷದ ಕೊನೆಯಲ್ಲಿ ಶಿಲ್ಕಾಗಿ ಉಳಿಸತಕ್ಕದ್ದು.

(4) ಅಂಥ ಬಜೆಟ್ ಅಂದಾಜು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಉಪಬಂಧಗಳಿಗನುಸಾರವಾಗಿಲ್ಲದಿದ್ದರೆ, ಜಿಲ್ಲಾ ಪಂಚಾಯತಿಯು ಬಜೆಟನ್ನು ಸ್ವೀಕರಿಸಿದ ಎರಡು ತಿಂಗಳೊಳಗೆ, ಅಧಿನಿಯಮದ, ನಿಯಮಗಳ ಮತ್ತು ಆದೇಶಗಳ ಪಾಲನೆಯಾಗುವಂತಾಗಲು ಅದನ್ನು ಮಾರ್ಪಾಡು ಮಾಡಬಹುದು:

ಪರಂತು, ಒಟ್ಟು ಪ್ರಸ್ತಾವಿತ ವೆಚ್ಚವು ಮುಂಬರುವ ವರ್ಷದ ತಾಲ್ಲೂಕು ಪಂಚಾಯತಿಯ ಅಂದಾಜು ವರಮಾನದ ಒಟ್ಟು ಮೊತ್ತವನ್ನು ಮತ್ತು ಪ್ರಾರಂಭದ ಶಿಲ್ಕನ್ನು ಮೀರತಕ್ಕದ್ದೆಂದು ನಿರ್ದೇಶಿಸಲು ಜಿಲ್ಲಾ ಪಂಚಾಯತಿಯು ಅಧಿಕಾರ ಹೊಂದಿರತಕ್ಕದ್ದಲ್ಲ.

(5) ತಾಲ್ಲೂಕು ಪಂಚಾಯತಿಯು, (1)ನೇ ಉಪ ಪ್ರಕರಣದಲ್ಲಿ ಹೇಳಿರುವ ದಿನಾಂಕದಂದು ಅಥವಾ ಅದಕ್ಕೂ ಮೊದಲು ಬಜೆಟ್ ಅಂದಾಜನ್ನು ಅಂಗೀಕರಿಸಲು ತಪ್ಪಿದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯು, ಬಜೆಟ್ ಅಂದಾಜನ್ನು ಜಿಲ್ಲಾ ಪಂಚಾಯತಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಜಿಲ್ಲಾ ಪಂಚಾಯತಿಯು, ಅದನ್ನು

ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಅನುಮೋದಿಸತಕ್ಕದ್ದು. ಜಿಲ್ಲಾ ಪಂಚಾಯತಿಯು, ಹಾಗೆ ಅನುಮೋದಿಸಿದ ಬಜೆಟ್ಟನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಪ್ರಮಾಣೀಕರಿಸತಕ್ಕದ್ದು ಮತ್ತು ಆ ತರುವಾಯ ಅದನ್ನು ತಾಲ್ಲೂಕು ಪಂಚಾಯತಿಯು ಯಥಾವಿಧಿಯಾಗಿ ಅನುಮೋದಿಸಿದುದೆಂಬಂತೆ ಭಾವಿಸತಕ್ಕದ್ದು.

**248. ಬಜೆಟ್ ಪರಿಷ್ಕರಣೆ.**- ಆರ್ಥಿಕ ವರ್ಷದಲ್ಲಿ, ತಾಲ್ಲೂಕು ಪಂಚಾಯತಿಯು, ಜಮೆಗಳ ಬಗ್ಗೆ ಅಥವಾ ಅದು ಕೈಕೊಳ್ಳುವ ವಿವಿಧ ಸೇವೆಗಳ ಬಗ್ಗೆ ವೆಚ್ಚ ಮಾಡಬೇಕಾದ ಮೊಬಲಗುಗಳ ಹಂಚಿಕೆಯ ಬಗ್ಗೆ ಬಜೆಟ್ಟಿನಲ್ಲಿ ಮಾಡಿದ ಏರ್ಪಾಡುಗಳನ್ನು ಮಾರ್ಪಾಡು ಮಾಡುವುದು ಅವಶ್ಯವೆಂದು ಅದಕ್ಕೆ ಕಂಡು ಬಂದರೆ ಅದು ಅಂಥ ಮಾರ್ಪಾಡನ್ನು ಮಾಡಬಹುದು:

ಪರಂತು, ರಾಜ್ಯದ ಸಂಚಿತ ನಿಧಿಯಿಂದ ಸರ್ಕಾರವು ವರ್ಗಾವಣೆ ಮಾಡಿದ ಯಾವುವೇ ಅನುದಾನಗಳನ್ನು ಅಂಥ ಅನುದಾನಗಳ ವ್ಯಾಪ್ತಿಯೊಳಗೆ ಬರದ ಉದ್ದೇಶಕ್ಕಾಗಿ ಅಥವಾ ಕಾರ್ಯಕ್ರಮಕ್ಕಾಗಿ ಅಥವಾ ಯೋಜನೆಗಾಗಿ ಪಲ್ಲಟ ಮಾಡತಕ್ಕದ್ದಲ್ಲ:

ಮತ್ತು ಪರಂತು, ಕಮೀಷನರ್ ಅವರ ಅನುಮೋದನೆ ಇಲ್ಲದೆ,-

(ಎ) ತಾಲ್ಲೂಕು ಪಂಚಾಯತಿಯ ಯಾವುವೇ ಅಭಿವೃದ್ಧಿ ಕಾರ್ಯಗಳಿಗಾಗಿ ಅನುಮೋದಿಸಿದ ಅನುದಾನಗಳಲ್ಲಿ ಶೇಕಡಾ ಹತ್ತಕ್ಕಿಂತ ಹೆಚ್ಚಿಗೆ ಯಾವುದೇ ಕಡಿತ ಮಾಡತಕ್ಕದ್ದಲ್ಲ, ಮತ್ತು

(ಬಿ) 247ನೇ ಪ್ರಕರಣದ (3)ನೇ ಉಪ ಪ್ರಕರಣದ (ಸಿ) ಖಂಡದ ಮೇರೆಗೆ ನಿಗದಿ ಮಾಡಿದ ಮೊಬಲಗಿಗಿಂತ ಕಡಿಮೆಯಾಗಿ ಮುಕ್ತಾಯ ಶಿಲ್ಕನ್ನು ಕಡಿಮೆ ಮಾಡತಕ್ಕದ್ದಲ್ಲ.

**249. ಪೂರಕ ಬಜೆಟ್.**- ಅವಶ್ಯಕವಾದಾಗ ಪೂರಕ ಬಜೆಟನ್ನು ಸಿದ್ಧಪಡಿಸಿ ಒಪ್ಪಿಸಬಹುದು. ತಾಲ್ಲೂಕು ಪಂಚಾಯತಿಯು, ಸರ್ಕಾರವು ಯಾವ ವರ್ಷಕ್ಕಾಗಿ ಬಜೆಟ್ ಮಂಜೂರಾತಿ ನೀಡಿದೆಯೋ ಆ ವರ್ಷದಲ್ಲಿ ಯಾವುದೇ ಕಾಲದಲ್ಲಿ, ಪೂರಕ ಬಜೆಟನ್ನು ಸಿದ್ಧಪಡಿಸುವಂತೆ ಮಾಡಬಹುದು ಮತ್ತು ಸರ್ಕಾರಕ್ಕೆ ಒಪ್ಪಿಸಬಹುದು ಪ್ರತಿಯೊಂದು ಅಂಥ ಪೂರಕ ಬಜೆಟನ್ನು ಜಿಲ್ಲಾ ಪಂಚಾಯತಿಯು ಪರಾಮರ್ಶಿಸತಕ್ಕದ್ದು ಮತ್ತು ಅನುಮೋದಿಸತಕ್ಕದ್ದು ಮತ್ತು ಅನುಮೋದನೆಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

**250. ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ವೆಚ್ಚದ ಮೇಲೆ ನಿರ್ಬಂಧ.**- (1) ತಾಲ್ಲೂಕು ಪಂಚಾಯತಿಯ ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರ ಇಡತಕ್ಕದ್ದು.

(2) ತಾಲ್ಲೂಕು ಪಂಚಾಯತಿಯ ನಿಧಿಯಿಂದ, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಗೊತ್ತುಪಡಿಸಬಹುದಾದಂಥ ಮಂಜೂರಾತಿಗಳಿಗೆ, ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೊಳಪಟ್ಟು ವೆಚ್ಚವನ್ನು ವಹಿಸತಕ್ಕದ್ದು.

(3) ತಾಲ್ಲೂಕು ಪಂಚಾಯತಿಯು ಆರ್ಥಿಕ ವರ್ಷವು ಮುಕ್ತಾಯವಾದ ತರುವಾಯ ನಡೆಸಿದ ಮೊದಲನೇ ಸಾಮಾನ್ಯ ಸಭೆಯಲ್ಲಿ ಆ ವರ್ಷದ ಲೆಕ್ಕಪತ್ರಗಳನ್ನು ಅಂಗೀಕರಿಸತಕ್ಕದ್ದು.

**251. ಲೆಕ್ಕಪತ್ರಗಳ ರವಾನೆ.**- ತಾಲ್ಲೂಕು ಪಂಚಾಯತಿಯು, ವಾರ್ಷಿಕ ಲೆಕ್ಕಪತ್ರಗಳನ್ನು ಅದು ಅಂತಿಮವಾಗಿ ಅಂಗೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಈ ಬಗ್ಗೆ ಗೊತ್ತುಪಡಿಸಿರುವ ನಮೂನೆಯಲ್ಲಿ ಲೆಕ್ಕವನ್ನು ಜಿಲ್ಲಾ ಪಂಚಾಯತಿಗೆ ಕಳುಹಿಸತಕ್ಕದ್ದು ಮತ್ತು ಜಿಲ್ಲಾ ಪಂಚಾಯತಿಯು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ಅದಕ್ಕೆ ಸಂಬಂಧಪಟ್ಟ ವಿವರಗಳು ಮತ್ತು ವೋಚರುಗಳನ್ನು ಒದಗಿಸತಕ್ಕದ್ದು.

**252. ವಸೂಲಾಗದ ಮೊತ್ತಗಳನ್ನು ವಜಾ ಮಾಡುವ ಅಧಿಕಾರ.**- ಗೊತ್ತುಪಡಿಸಬಹುದಾದ ನಿರ್ಬಂಧಗಳಿಗೊಳಪಟ್ಟು, ತಾಲ್ಲೂಕು ಪಂಚಾಯತಿಯು ಕರಾರಿನ ಮೇಲೆ ಆಗಲಿ ಅಥವಾ ಅನ್ಯಥಾ ಆಗಲಿ ಅದಕ್ಕೆ ಬಾಕಿ ಬರಬೇಕಾಗಿರುವ ಯಾವುದೇ ಮೊತ್ತವನ್ನು ಅಥವಾ ಅದಕ್ಕೆ ಸಂಬಂಧಿಸಿದಂತೆ ಸಂದಾಯವಾಗತಕ್ಕ ಯಾವುದೇ ಮೊಬಲಗನ್ನು, ಅಂಥ ಮೊಬಲಗು ವಸೂಲಾಗದ್ದೆಂದು ಅದು ಅಭಿಪ್ರಾಯಪಟ್ಟರೆ, ವಜಾ ಮಾಡಬಹುದು:

ಪರಂತು, ಜಿಲ್ಲಾ ಪಂಚಾಯತಿಯ ಪೂರ್ವಾನುಮೋದನೆ ಇಲ್ಲದೆಯೇ ಒಂದು ಸಾವಿರ ರೂ.ಗಳಿಗೆ ಮೀರಿದ ಮೊತ್ತವನ್ನು ವಜಾ ಮಾಡತಕ್ಕದ್ದಲ್ಲ.

**253. ಲೆಕ್ಕಪತ್ರಗಳ ಪರಿಶೋಧನೆ.**- (1) ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ನಿಧಿಯ ಲೆಕ್ಕಪತ್ರಗಳನ್ನು ಪ್ರತಿವರ್ಷ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು (ಇದರಲ್ಲಿ ಇನ್ನು ಮುಂದೆ ಲೆಕ್ಕ ಪರಿಶೋಧಕರೆಂದು ಉಲ್ಲೇಖಿಸಲಾಗಿದೆ) 1971ರ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಲೆಕ್ಕಪರಿಶೋಧನೆ ಮಾಡತಕ್ಕದ್ದು.

(2) ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ಲೆಕ್ಕ ಪರಿಶೋಧಕರು, ತಾಲ್ಲೂಕು ಪಂಚಾಯತಿಯ ಲೆಕ್ಕ ಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶ ಇರತಕ್ಕದ್ದು.

(3) ರಾಜ್ಯದಲ್ಲಿರುವ ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದ ಕ್ರೋಡೀಕೃತ ಲೆಕ್ಕ ಪರಿಶೋಧನಾ ವರದಿಯನ್ನು ಲೆಕ್ಕ ಪರಿಶೋಧಕರು ಸರ್ಕಾರಕ್ಕೆ ಪ್ರತಿವರ್ಷ ಕಳುಹಿಸಿಕೊಡತಕ್ಕದ್ದು ಮತ್ತು ಸರ್ಕಾರವು ಕ್ರೋಡೀಕೃತ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**254. ಲೆಕ್ಕ ಪರಿಶೋಧನಾ ವರದಿಯ ಮೇಲೆ ತಾಲ್ಲೂಕು ಪಂಚಾಯತಿಯ ಕ್ರಮ.**- (1) ತಾಲ್ಲೂಕು ಪಂಚಾಯತಿಯು, ಲೆಕ್ಕ ಪರಿಶೋಧಕರ ವರದಿಯ ಆಧಾರದ ಮೇಲೆ ಅಥವಾ ತಾನಾಗಿಯೇ ಮತ್ತು ಸಂಬಂಧಪಟ್ಟ ವ್ಯಕ್ತಿಯಿಂದ ವಿವರಣೆಯನ್ನು ಪಡೆದುಕೊಂಡ ತರುವಾಯ ಅಥವಾ ಅವಶ್ಯಕವೆಂದು ತಾನು ಭಾವಿಸುವಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ ಲೆಕ್ಕ ಪರಿಶೋಧಕರು ಎತ್ತಿ ತೋರಿಸಿರುವ ಅಕ್ರಮ ವೆಚ್ಚದ ಬಗ್ಗೆ ಯಾವನೇ ವ್ಯಕ್ತಿಯ ಮೇಲೆ ಋಣಭಾರ ಹೊರಿಸತಕ್ಕದ್ದು ಅಥವಾ ಅಂಥ ವ್ಯಕ್ತಿಯ ಅಲಕ್ಷ್ಯದಿಂದಾಗಿ ಅಥವಾ ದುರ್ನಡತೆಯಿಂದಾಗಿ ಅಥವಾ ನಷ್ಟವಾದ ಮೊಬಲಗಿಗೆ ಅಥವಾ ಅಂಥ ವ್ಯಕ್ತಿಯು ಸ್ವೀಕರಿಸಿದ ಆದರೆ ಲೆಕ್ಕಕ್ಕೆ ತೆಗೆದುಕೊಂಡಿರದ ಯಾವುದೇ ಮೊಬಲಗಿಗೆ ಹೊಣೆಗಾರನಾಗಿರುವ ವ್ಯಕ್ತಿಯ ಮೇಲೆ ಋಣಭಾರ ಹೊರಿಸತಕ್ಕದ್ದು

ಮತ್ತು ಅಂಥ ಪ್ರತಿಯೊಂದು ಸಂದರ್ಭದಲ್ಲಿ ಅಂಥ ವ್ಯಕ್ತಿಯಿಂದ ಬಾಕಿ ಬರಬೇಕಾಗಿರುವ ಮೊಬಲಗನ್ನು ಪ್ರಮಾಣೀಕರಿಸತಕ್ಕದ್ದು.

(2) ತಾಲ್ಲೂಕು ಪಂಚಾಯತಿಯು ಪ್ರತಿಯೊಂದು ಋಣಭಾರದ ಸಂಬಂಧದಲ್ಲಿ ತಾನು ಹಾಗೆ ತೀರ್ಮಾನ ತೆಗೆದುಕೊಂಡಿದ್ದಕ್ಕೆ ಕಾರಣಗಳನ್ನು ಬರಹದಲ್ಲಿ ನೀಡತಕ್ಕದ್ದು ಮತ್ತು ಯಾರ ಮೇಲೆ ಋಣಭಾರ ಹೊರಿಸಲಾಗಿದೆಯೋ ಆ ವ್ಯಕ್ತಿಗೆ ಅದರ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

**255. ಅನುಮತಿಸಿಲ್ಲದ ಮೊಬಲಗುಗಳ ವಸೂಲಿ.**- (1) 254ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ, ಯಾವನೇ ವ್ಯಕ್ತಿಯಿಂದ ಬಾಕಿ ಬರಬೇಕಾಗಿದೆಯೆಂದು ತಾಲ್ಲೂಕು ಪಂಚಾಯತಿಯು ಪ್ರಮಾಣೀಕರಿಸಿರುವ ಪ್ರತಿಯೊಂದು ಮೊಬಲಗನ್ನು, ತೀರ್ಮಾನದ ಪ್ರತಿಯು ಅವನಿಗೆ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಂಥ ವ್ಯಕ್ತಿಯು ತಾಲ್ಲೂಕು ಪಂಚಾಯತಿಗೆ ಸಂದಾಯ ಮಾಡತಕ್ಕದ್ದು.

(2) ಅಂಥ ಮೊತ್ತವನ್ನು, ಅದು ಬಾಕಿಯಾಗಿರುವ ದಿನಾಂಕದಿಂದ, ವರ್ಷಕ್ಕೆ ಶೇಕಡಾ ಹದಿನೈದರಷ್ಟು ಬಡ್ಡಿಯೊಂದಿಗೆ ಸಂದಾಯ ಮಾಡದಿದ್ದರೆ, ಅಂಥ ವಸೂಲಿಗೆ ಆದ ಅವಶ್ಯಕ ಖರ್ಚಿನ ಸಹಿತ ಭೂ ಕಂದಾಯದ ಬಾಕಿಯಂತೆ ವಸೂಲ್ಮಾಡತಕ್ಕದ್ದು ಮತ್ತು ತಾಲ್ಲೂಕು ಪಂಚಾಯತಿಯ ನಿಧಿಗೆ ಜಮೆ ಮಾಡತಕ್ಕದ್ದು.

**256. ಜಿಲ್ಲಾ ಪಂಚಾಯತಿಯ ಲೆಕ್ಕಪತ್ರಗಳು ಮತ್ತು ಬಜೆಟ್ಟಿನ ಮಂಡನೆ.**- (1) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿಯು, ಮುಂದಿನ ಮಾರ್ಚ್ ಮೂವತ್ತೊಂದನೆಯ ದಿನದಂದು ಕೊನೆಗೊಳ್ಳುವ ಆರ್ಥಿಕ ವರ್ಷದ, ವಾಸ್ತವಿಕ ಮತ್ತು ನಿರೀಕ್ಷಿತ ಜಮೆ ಮತ್ತು ವೆಚ್ಚಗಳ ಸಂಪೂರ್ಣ ಲೆಕ್ಕವನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು ಮತ್ತು ಅದನ್ನು, ಫೆಬ್ರವರಿ ತಿಂಗಳ ಮೊದಲನೆಯ ದಿನದ ಮತ್ತು ಮಾರ್ಚ ತಿಂಗಳ ಹತ್ತನೆಯ ದಿನದ ನಡುವೆ ನಡೆಸುವ ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಮುಂದೆ, ಮುಂಬರುವ ಏಪ್ರಿಲ್ ಮೊದಲನೆಯ ದಿನದಂದು ಪ್ರಾರಂಭವಾಗುವ ಆರ್ಥಿಕ ವರ್ಷದ ಜಿಲ್ಲಾ ಪಂಚಾಯತಿಯ ಆದಾಯ ಮತ್ತು ವೆಚ್ಚಗಳ ಬಜೆಟ್ ಅಂದಾಜಿನ ಸಹಿತ ಮಂಡಿಸುವಂತೆ ಮಾಡತಕ್ಕದ್ದು.

(2) ಆ ತರುವಾಯ, ಜಿಲ್ಲಾ ಪಂಚಾಯತಿಯು ಮುಂಬರುವ ಏಪ್ರಿಲ್ ಮೊದಲನೇ ದಿನದಂದು ಪ್ರಾರಂಭವಾಗುವ ವರ್ಷದ ಬಜೆಟ್‌ನಲ್ಲಿ ಒಳಗೊಂಡಿರುವ ಧನ ವಿನಿಯೋಗಗಳ ಮತ್ತು ಮಾರ್ಗೋಪಾಯಗಳ ಬಗ್ಗೆ ತೀರ್ಮಾನಿಸತಕ್ಕದ್ದು. ಜಿಲ್ಲಾ ಪಂಚಾಯತಿಯು ಅಂಗೀಕರಿಸಿದಂತಹ ಬಜೆಟನ್ನು, ಸರ್ಕಾರವು ನಿಗದಿಪಡಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(3) ಅಂಥ ಬಜೆಟ್ ಅಂದಾಜಿನಲ್ಲಿ ಜಿಲ್ಲಾ ಪಂಚಾಯತಿಯು ಇತರ ವಿಷಯಗಳೊಂದಿಗೆ,-

(ಎ) ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಜಿಲ್ಲಾ ಪಂಚಾಯತಿಗೆ ವಿಧಿಸಿದ ಹಲವಾರು ಕರ್ತವ್ಯಗಳನ್ನು ನೆರವೇರಿಸಲು ಅಗತ್ಯವಾಗಬಹುದಾದಂಥ ಸೇವೆಗಳಿಗಾಗಿ ಸಾಕಷ್ಟು ಮತ್ತು ಸೂಕ್ತ ಏರ್ಪಾಟು ಮಾಡತಕ್ಕದ್ದು;

(ಬಿ) ಜಿಲ್ಲಾ ಪಂಚಾಯತಿಯು, ತಾನು ಮಾಡಿಕೊಂಡ ಸಾಲಗಳ ಸಂದಾಯದ ಬಗ್ಗೆ ಬದ್ಧವಾಗಿರಬಹುದಾದ ಅಸಲು ಮತ್ತು ಬಡ್ಡಿಯ ಎಲ್ಲ ಕಂತುಗಳು ಬಾಕಿಯಾದಾಗಲೆಲ್ಲ ಅವುಗಳ ಸಂದಾಯಕ್ಕಾಗಿ ಏರ್ಪಾಡು ಮಾಡತಕ್ಕದ್ದು; ಮತ್ತು

(ಸಿ) ಸರ್ಕಾರವು ಸಾಮಾನ್ಯವಾಗಿ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಅಥವಾ ವಿಶೇಷವಾಗಿ ಯಾವುದೇ ಜಿಲ್ಲಾ ಪಂಚಾಯತಿಗಾಗಿ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಮೊತ್ತಕ್ಕೆ ಅಥವಾ ಆದಾಯದ ಶೇಕಡಾ ಪ್ರಮಾಣಕ್ಕೆ ಕಡಿಮೆಯಿಲ್ಲದ ಹಣವನ್ನು ಸದರಿ ವರ್ಷದ ಕೊನೆಯಲ್ಲಿ ಶಿಲ್ಕಾಗಿ ಉಳಿಸತಕ್ಕದ್ದು.

(4) ಅಂಥ ಬಜೆಟ್ ಅಂದಾಜು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಅಥವಾ ಆದೇಶಗಳ ಉಪಬಂಧಗಳಿಗನುಸಾರವಾಗಿರದಿದ್ದರೆ, ಸರ್ಕಾರವು, ಬಜೆಟ್‌ನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ, ಅಧಿನಿಯಮದ, ನಿಯಮಗಳ ಅಥವಾ ಆದೇಶಗಳ ಪಾಲನೆಯಾಗುವಂತಾಗಲು ಅದನ್ನು ಮಾರ್ಪಾಡು ಮಾಡಬಹುದು:

ಪರಂತು, ಒಟ್ಟು ಪ್ರಸ್ತಾವಿತ ವೆಚ್ಚವು ಮುಂಬರುವ ವರ್ಷದ ಜಿಲ್ಲಾ ಪಂಚಾಯತಿಯ ಅಂದಾಜು ವರಮಾನದ ಒಟ್ಟು ಮೊತ್ತವನ್ನು ಮತ್ತು ಪ್ರಾರಂಭದ ಶಿಲ್ಕನ್ನು ಮೀರತಕ್ಕದ್ದೆಂದು ನಿರ್ದೇಶಿಸಲು ಸರ್ಕಾರವು ಅಧಿಕಾರವನ್ನು ಹೊಂದಿರತಕ್ಕದ್ದಲ್ಲ.

(5) ಜಿಲ್ಲಾ ಪಂಚಾಯತಿಯು, (1)ನೇ ಉಪ-ಪ್ರಕರಣದಲ್ಲಿ ಹೇಳಿರುವ ದಿನಾಂಕದಂದು ಅಥವಾ ಅದಕ್ಕೆ ಮುಂಚೆ, ಬಜೆಟ್ ಅಂದಾಜನ್ನು ಅಂಗೀಕರಿಸಲು ತಪ್ಪಿದರೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯು ಬಜೆಟ್ ಅಂದಾಜನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸರ್ಕಾರವು ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಅದನ್ನು ಅನುಮೋದಿಸತಕ್ಕದ್ದು ಸರ್ಕಾರವು ಹಾಗೆ ಅನುಮೋದಿಸಿದ ಬಜೆಟನ್ನು ಸರ್ಕಾರವು ಪ್ರಮಾಣೀಕರಿಸತಕ್ಕದ್ದು ಮತ್ತು ಆ ತರುವಾಯ ಅದನ್ನು ಜಿಲ್ಲಾ ಪಂಚಾಯತಿಯು ಯಥಾವಿಧಿಯಾಗಿ ಅನುಮೋದಿಸಿದುದೆಂಬಂತೆ ಭಾವಿಸತಕ್ಕದ್ದು.

**257. ಬಜೆಟ್ ಪರಿಷ್ಕರಣೆ.**- ಆರ್ಥಿಕ ವರ್ಷದಲ್ಲಿ, ಜಿಲ್ಲಾ ಪಂಚಾಯತಿಯು, ಜಮೆಗಳ ಬಗ್ಗೆ ಅಥವಾ ಅದು ಕೈಗೊಳ್ಳುವ ವಿವಿಧ ಸೇವೆಗಳ ಬಗ್ಗೆ ವೆಚ್ಚ ಮಾಡಬೇಕಾದ ಮೊಬಲಗುಗಳ ಹಂಚಿಕೆಯ ಬಗ್ಗೆ ಬಜೆಟ್ಟಿನಲ್ಲಿ ಮಾಡಿದ ಏರ್ಪಾಡುಗಳನ್ನು ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದರೆ ಅದು ಅಂಥ ಮಾರ್ಪಾಡನ್ನು ಮಾಡಬಹುದು:

ಪರಂತು, ರಾಜ್ಯದ ಸಂಚಿತ ನಿಧಿಯಿಂದ ಸರ್ಕಾರವು ವರ್ಗಾವಣೆ ಮಾಡಿದ ಯಾವುವೇ ಅನುದಾನಗಳನ್ನು, ಅಂಥ ಅನುದಾನಗಳ ವ್ಯಾಪ್ತಿಯೊಳಗೆ ಬರದ ಉದ್ದೇಶಕ್ಕಾಗಿ ಅಥವಾ ಕಾರ್ಯಕ್ರಮ ಅಥವಾ ಯೋಜನೆಗಾಗಿ ಪಲ್ಲಟ ಮಾಡತಕ್ಕದ್ದಲ್ಲ:

ಮತ್ತು ಪರಂತು, ಸರ್ಕಾರದ ಅನುಮೋದನೆ ಇಲ್ಲದೆ,-

(ಎ) ಜಿಲ್ಲಾ ಪಂಚಾಯತಿಯ ಯಾವುದೇ ಅಭಿವೃದ್ಧಿ ಕಾರ್ಯಗಳಿಗಾಗಿ ಅನುಮೋದಿಸಿದ ಅನುದಾನಗಳಲ್ಲಿ ಶೇಕಡಾ ಹತ್ತಕ್ಕಿಂತ ಹೆಚ್ಚಿಗೆ ಯಾವುದೇ ಕಡಿತ ಮಾಡತಕ್ಕದ್ದಲ್ಲ.

(ಬಿ) 256ನೇ ಪ್ರಕರಣದ (3)ನೇ ಉಪ ಪ್ರಕರಣದ (ಸಿ) ಖಂಡದ ಮೇರೆಗೆ ನಿಗದಿ ಮಾಡಿದ ಮೊಬಲಗಿಗಿಂತ ಕಡಿಮೆಯಾಗಿ ಮುಕ್ತಾಯ ಶಿಲ್ಕನ್ನು ಕಡಿಮೆ ಮಾಡತಕ್ಕದ್ದಲ್ಲ.

**258. ಪೂರಕ ಬಜೆಟ್.-** ಅವಶ್ಯಕವಾದಾಗ ಪೂರಕ ಬಜೆಟನ್ನು ಸಿದ್ಧಪಡಿಸಿ ಒಪ್ಪಿಸಬಹುದು, ಜಿಲ್ಲಾ ಪಂಚಾಯತಿಯು, ಸರ್ಕಾರವು ಯಾವ ವರ್ಷಕ್ಕಾಗಿ ಬಜೆಟ್ ಮಂಜೂರಾತಿಯನ್ನು ನೀಡಿದೆಯೋ ಆ ವರ್ಷದ ಯಾವುದೇ ಕಾಲದಲ್ಲಿ ಪೂರಕ ಬಜೆಟನ್ನು ಸಿದ್ಧಪಡಿಸುವಂತೆ ಮಾಡಬಹುದು ಮತ್ತು ಸರ್ಕಾರಕ್ಕೆ ಒಪ್ಪಿಸಬಹುದು. ಪ್ರತಿಯೊಂದು ಅಂಥ ಪೂರಕ ಬಜೆಟನ್ನು ಜಿಲ್ಲಾ ಪಂಚಾಯತಿಯು ಪರಾಮರ್ಶಿಸತಕ್ಕದ್ದು ಮತ್ತು ಅನುಮೋದಿಸತಕ್ಕದ್ದು ಮತ್ತು ಅನುಮೋದನೆಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

**259. ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ವೆಚ್ಚದ ಮೇಲೆ ನಿರ್ಬಂಧ.-** (1) ಜಿಲ್ಲಾ ಪಂಚಾಯತಿಯ ನಿಧಿಯ ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರ ಇಡತಕ್ಕದ್ದು.

(2) ಜಿಲ್ಲಾ ಪಂಚಾಯತಿಯ ನಿಧಿಯಿಂದ, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಗೊತ್ತುಪಡಿಸಬಹುದಾದಂಥ ಮಂಜೂರಾತಿಗಳಿಗೆ, ಷರತ್ತುಗಳಿಗೆ ಮತ್ತು ಪರಿಮಿತಿಗೊಳಪಟ್ಟು ವೆಚ್ಚವನ್ನು ವಹಿಸತಕ್ಕದ್ದು.

(3) ಜಿಲ್ಲಾ ಪಂಚಾಯತಿಯು, ಆರ್ಥಿಕ ವರ್ಷವು ಮುಕ್ತಾಯವಾದ ತರುವಾಯ ನಡೆಸಿದ ಮೊದಲನೇ ಸಭೆಯಲ್ಲಿ ಆ ವರ್ಷದ ಲೆಕ್ಕಪತ್ರಗಳನ್ನು ಅಂಗೀಕರಿಸತಕ್ಕದ್ದು.

**260. ಲೆಕ್ಕಪತ್ರಗಳ ರವಾನೆ.-** ಜಿಲ್ಲಾ ಪಂಚಾಯತಿಯು ವಾರ್ಷಿಕ ಲೆಕ್ಕಪತ್ರಗಳನ್ನು ಅದು ಅಂತಿಮವಾಗಿ ಅಂಗೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಈ ಬಗ್ಗೆ ಗೊತ್ತುಪಡಿಸಿರುವ ನಮೂನೆಯಲ್ಲಿ ಲೆಕ್ಕವನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ, ಅದಕ್ಕೆ ಸಂಬಂಧಪಟ್ಟ ವಿವರಗಳು ಮತ್ತು ವೋಚರುಗಳನ್ನು ಒದಗಿಸತಕ್ಕದ್ದು.

**261. ವಸೂಲಾಗದ ಮೊತ್ತಗಳನ್ನು ವಜಾ ಮಾಡುವ ಅಧಿಕಾರ.-** ಗೊತ್ತುಪಡಿಸಬಹುದಾದ ನಿರ್ಬಂಧಗಳಿಗೊಳಪಟ್ಟು, ಜಿಲ್ಲಾ ಪಂಚಾಯತಿಯು ಕರಾರಿನ ಮೇಲೆ ಆಗಲಿ ಅಥವಾ ಅನ್ಯಥಾ ಆಗಲಿ ಅದಕ್ಕೆ ಬಾಕಿ ಬರಬೇಕಾಗಿರುವ ಯಾವುದೇ ಮೊತ್ತವನ್ನು ಅಥವಾ ಅದಕ್ಕೆ ಸಂಬಂಧಿಸಿದಂತೆ ಸಂದಾಯವಾಗತಕ್ಕ ಯಾವುದೇ ಮೊಬಲಗನ್ನು, ಅಂಥ ಮೊಬಲಗು ವಸೂಲಾಗದ್ದೆಂದು ಅದು ಅಭಿಪ್ರಾಯ ಪಟ್ಟರೆ, ವಜಾ ಮಾಡಬಹುದು:

ಪರಂತು, ಒಂದು ಸಾವಿರ ರೂಪಾಯಿಗಳಿಗೆ ಮೀರುವ ಯಾವುದೇ ಮೊಬಲಗನ್ನು ಸರ್ಕಾರದ ಪೂರ್ವಾನುಮತಿಯ ಹೊರತು ವಜಾ ಮಾಡತಕ್ಕದ್ದಲ್ಲ.

**262. ಲೆಕ್ಕಪತ್ರಗಳ ಪರಿಶೋಧನೆ.-** (1) ಜಿಲ್ಲಾ ಪಂಚಾಯತಿಯ ನಿಧಿಯ ಲೆಕ್ಕಪತ್ರಗಳನ್ನು ಭಾರತ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು (ಇದರಲ್ಲಿ ಇನ್ನು ಮುಂದೆ ಲೆಕ್ಕಪರಿಶೋಧಕರೆಂದು ಉಲ್ಲೇಖಿಸಲಾಗಿದೆ) 1971ರ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಲೆಕ್ಕಪರಿಶೋಧನೆ ಮಾಡತಕ್ಕದ್ದು.

(2) ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಲೆಕ್ಕಪರಿಶೋಧಕರು ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶವೀಯತಕ್ಕದ್ದು.

(3) ಸರ್ಕಾರವು, ಜಿಲ್ಲಾ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳು ಬಂದ ಮೇಲೆ ಅವುಗಳನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**263. ಲೆಕ್ಕ ಪರಿಶೋಧಕನ ವರದಿಯ ಮೇಲೆ ಜಿಲ್ಲಾ ಪಂಚಾಯತಿಯ ಕ್ರಮ.-** (1) ಜಿಲ್ಲಾ ಪಂಚಾಯತಿಯು, ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ ಅಥವಾ ತಾನಾಗಿಯೇ ಮತ್ತು ಸಂಬಂಧಪಟ್ಟ ವ್ಯಕ್ತಿಯಿಂದ ವಿವರಣೆಯನ್ನು ಪಡೆದುಕೊಂಡ ತರುವಾಯ ಅಥವಾ ಅವಶ್ಯಕವೆಂದು ತಾನು ಭಾವಿಸುವಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಲೆಕ್ಕ ಪರಿಶೋಧಕರು ಎತ್ತಿ ತೋರಿಸಿದ ಅಕ್ರಮ ವೆಚ್ಚದ ಬಗ್ಗೆ ಯಾವನೇ ವ್ಯಕ್ತಿಯ ಮೇಲೆ ಋಣಭಾರ ಹೊರಿಸತಕ್ಕದ್ದು ಅಥವಾ ಅಂಥ ವ್ಯಕ್ತಿಯ ಆಲಕ್ಷ್ಯದಿಂದಾಗಿ ಅಥವಾ ದುರ್ನಡತೆಯಿಂದಾಗಿ ಕಡಿಮೆಯಾದ ಅಥವಾ ನಷ್ಟವಾದ ಮೊಬಲಗಿಗೆ ಅಥವಾ ಅಂಥ ವ್ಯಕ್ತಿಯು ಸ್ವೀಕರಿಸಿದ್ದ, ಆದರೆ, ಲೆಕ್ಕಕ್ಕೆ ತೆಗೆದುಕೊಂಡಿರದ ಯಾವುದೇ ಮೊಬಲಗಿಗೆ ಹೊಣೆಗಾರನಾಗಿರುವ ವ್ಯಕ್ತಿಯ ಮೇಲೆ ಋಣಬಾರ ಹೊರಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಸಂದರ್ಭದಲ್ಲಿ ಅಂಥ ವ್ಯಕ್ತಿಯಿಂದ ಬಾಕಿ ಬರಬೇಕಾಗಿರುವ ಮೊಬಲಗನ್ನು ಪ್ರಮಾಣೀಕರಿಸತಕ್ಕದ್ದು.

(2) ಜಿಲ್ಲಾ ಪಂಚಾಯತಿಯು, ಪ್ರತಿಯೊಂದು ಋಣಭಾರದ ಸಂಬಂಧದಲ್ಲಿ ತಾನು ಹಾಗೆ ತೀರ್ಮಾನ ತೆಗೆದುಕೊಂಡಿದ್ದಕ್ಕಾಗಿ ಕಾರಣಗಳನ್ನು ಬರಹದಲ್ಲಿ ನೀಡತಕ್ಕದ್ದು ಮತ್ತು ಯಾರ ಮೇಲೆ ಋಣಭಾರ ಹೊರಿಸಲಾಗಿದೆಯೋ ಆ ವ್ಯಕ್ತಿಗೆ ಅದರ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

**264. ಅನುಮತಿಸಿಲ್ಲದ ಮೊಬಲಗುಗಳ ವಸೂಲಿ.-** (1) 263ನೇ ಪ್ರಕರಣದ (1) ನೇ ಉಪಪ್ರಕರಣದ ಅಡಿಯಲ್ಲಿ ಯಾವನೇ ವ್ಯಕ್ತಿಯಿಂದ ಬಾಕಿ ಬರಬೇಕಾಗಿದೆ ಎಂದು ಜಿಲ್ಲಾ ಪಂಚಾಯತಿಯು ಪ್ರಮಾಣೀಕರಿಸಿರುವ ಪ್ರತಿಯೊಂದು ಮೊಬಲಗನ್ನು ತೀರ್ಮಾನದ ಪ್ರತಿಯು ಅವನಿಗೆ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಂಥ ವ್ಯಕ್ತಿಯು ಜಿಲ್ಲಾ ಪಂಚಾಯತಿಗೆ ಸಂದಾಯ ಮಾಡತಕ್ಕದ್ದು.

(2) ಅಂಥ ಮೊಬಲಗನ್ನು ಅದು ಬಾಕಿಯಾಗಿರುವ ದಿನಾಂಕದಿಂದ ವರ್ಷಕ್ಕೆ ಶೇಕಡಾ ಹದಿನೈದರಷ್ಟು ಬಡ್ಡಿಯೊಂದಿಗೆ ಸಂದಾಯ ಮಾಡದಿದ್ದರೆ, ಅಂಥ ವಸೂಲಿಗೆ ಆದ ಅವಶ್ಯಕ ಖರ್ಚಿನ ಸಹಿತ ಭೂ ಕಂದಾಯದ ಬಾಕಿಯಂತೆ ವಸೂಲ್ಮಾಡತಕ್ಕದ್ದು ಮತ್ತು ಜಿಲ್ಲಾ ಪಂಚಾಯತಿಯ ನಿಧಿಗೆ ಜಮೆ ಮಾಡತಕ್ಕದ್ದು.

**265. ಜಿಲ್ಲಾ ಪಂಚಾಯತಿಗಳ ಮತ್ತು ತಾಲ್ಲೂಕು ಪಂಚಾಯತಿಗಳ ಬಾಕಿಗಳ ವಸೂಲಿಗೆ ಕಾರ್ಯವಿಧಾನ.-** (1) ತಗಾದೆ ಮೇರೆಗೆ ಸಂದಾಯ ಮಾಡಬೇಕಾದ ಯಾವ ಮೊತ್ತವು,-

(ಎ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಅಡಿಯಲ್ಲಿ ಈ ಅಧ್ಯಾಯದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ವಸೂಲು ಮಾಡಬೇಕೆಂದು ಘೋಷಿಸಲಾಗಿದೆಯೋ; ಅಥವಾ

(ಬಿ) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿರುವ ಯಾವುದೇ ನಿಯಮ ಅಥವಾ ವಿನಿಮಯಗಳ ಅಡಿಯಲ್ಲಿ ಜಿಲ್ಲಾ ಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಬಾಕಿ ಇರುವ ಫೀಜು ಅಥವಾ ಇತರ ಮೊತ್ತ ಎಂಬಂತೆ ಕ್ಲೇಮು ಮಾಡಬಹುದಾಗಿದೆಯೋ,

-ಅದು ಬಾಕಿ ಇರುವ ದಿನದಿಂದ ಹದಿನೈದು ದಿನದೊಳಗೆ ಸಂದಾಯವಾಗದೆ ಉಳಿದಿರುವಾಗ ಸಂದರ್ಭಾನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಅವರಿಂದ ಬರಹದಲ್ಲಿ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕಾರ ಹೊಂದಿದ ಅಧಿಕಾರಿಯು (ಇದರಲ್ಲಿ ಇನ್ನು ಮುಂದೆ ಅಧಿಕೃತ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಗೊತ್ತುಪಡಿಸಿರುವ ನಮೂನೆಯಲ್ಲಿ, ಬರಹದಲ್ಲಿ ನೋಟೀಸನ್ನು, ಅಂಥ ಮೊತ್ತವನ್ನು ಸಂದಾಯ ಮಾಡಲು ಬದ್ಧವಾಗಿರುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಜಾರಿ ಮಾಡಬಹುದು.

(2) ಅಂಥ ತಗಾದೆಯ ನೋಟೀಸನ್ನು ತನಗೆ ಜಾರಿಗೊಳಿಸಿದ ಹದಿನೈದು ದಿವಸಗಳೊಳಗೆ ಅಂಥ ವ್ಯಕ್ತಿಯು ಬಾಕಿ ಇರುವ ಮೊತ್ತವನ್ನು ಸಂದಾಯ ಮಾಡದಿದ್ದರೆ ಅಥವಾ ಅಂಥ ಮೊತ್ತವನ್ನು ಏಕೆ ಸಂದಾಯ ಮಾಡತಕ್ಕದ್ದಲ್ಲ ಎಂಬ ಬಗ್ಗೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಕಾರ್ಯನಿರ್ವಾಹಕ ಅಧಿಕಾರಿಗೆ ಮನದಟ್ಟಾಗುವಂತೆ ಕಾರಣವನ್ನು ತಿಳಿಸದಿದ್ದರೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಕಾರ್ಯನಿರ್ವಾಹಕ ಅಧಿಕಾರಿಯು ತಪ್ಪಿತಸ್ಥರ ಚರಸ್ವತ್ತನ್ನು ಜಪ್ತಿ ಮಾಡಿ ಮಾರಾಟ ಮಾಡುವ ಮೂಲಕ ಎಲ್ಲ ಖರ್ಚುಗಳೊಂದಿಗೆ ಅಂಥ ಮೊತ್ತವನ್ನು ವಸೂಲ್ಮಾಡಬಹುದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಸ್ವತ್ತಿನ ಜಪ್ತಿ ಮತ್ತು ಮಾರಾಟವನ್ನು ಮಾಡುವುದಕ್ಕಾಗಿ, ಸಂದರ್ಭಾನುಸಾರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಅಧಿಕೃತ ಅಧಿಕಾರಿಯು ಗೊತ್ತುಪಡಿಸಿರುವ ನಮೂನೆಯಲ್ಲಿ ವಾರಂಟನ್ನು ಜಾರಿ ಮಾಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ವಾರಂಟಿಗೂ ಒಂದು ರೂಪಾಯಿ ವಾರಂಟ್ ಫೀಜನ್ನು ವಿಧಿಸಬಹುದಾಗಿರತಕ್ಕದ್ದು.

(4) ಸಂದರ್ಭಾನುಸಾರ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಅಧಿಕೃತ ಅಧಿಕಾರಿಯು, ಜಪ್ತಿ ಮಾಡಿದ ಸ್ವತ್ತಿನ ವಿವರಣೆ ಪಟ್ಟಿಯನ್ನು ತಯಾರಿಸಿ, ಅದರ ಒಂದು ಪ್ರತಿಯನ್ನು ತಪ್ಪಿತಸ್ಥನಿಗೆ ಅಥವಾ ಅವನ ಪರವಾಗಿ ಯಾವನೇ ವ್ಯಕ್ತಿಗೆ ಕಳುಹಿಸತಕ್ಕುದು ಮತ್ತು ಜಪ್ತಿ ಮಾಡಿದ ಹದಿನೈದು ದಿವಸಗಳ ಒಳಗೆ ಬಾಕಿ ಇರುವ ಮೊತ್ತವನ್ನು ಸಂದಾಯ ಮಾಡದಿದ್ದರೆ, ಸ್ವತ್ತನ್ನು ಮಾರಾಟ ಮಾಡಬಹುದು.

(5) ಸಂದರ್ಭಾನುಸಾರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಅಧಿಕೃತ ಅಧಿಕಾರಿಯು, ಬಾಕಿ ಇರುವ ಮೊತ್ತವನ್ನು ಸಂದಾಯ ಮಾಡುವ ಪ್ರತಿಯೊಬ್ಬ ವ್ಯಕ್ತಿಗೆ ತಾನು ಸಹಿ ಹಾಕಿ ಒಂದು ರಸೀದಿಯನ್ನು ಕೊಡತಕ್ಕದ್ದು ಅಥವಾ ಕೊಡುವಂತೆ ಮಾಡತಕ್ಕದ್ದು, ಅಂಥ ರಸೀದಿಯಲ್ಲಿ,-

(ಎ) ಸಂದಾಯ ಮಾಡಿದ ದಿನಾಂಕ,

(ಬಿ) ಅದನ್ನು ಸಂದಾಯ ಮಾಡಿದ ವ್ಯಕ್ತಿಯ ಹೆಸರು,

(ಸಿ) ಸಂದಾಯ ಮಾಡಿದ್ದರೆ, ಬಾಕಿ ಇರುವ ಮೊತ್ತ,

(ಡಿ) ಯಾವ ಅವಧಿಗಾಗಿ ಸಂದಾಯ ಮಾಡಲಾಗಿತ್ತೋ ಆ ಅವಧಿ, ಮತ್ತು

(ಇ) ಸಂದಾಯ ಮಾಡಿದ ಹಣವು ಯಾವುದಕ್ಕಾಗಿ ಮಂಜೂರಾಗಿತ್ತು,

-ಈ ಅಂಶಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(6) ಈ ಅಧಿನಿಯಮದ ಅಡಿಯಲ್ಲಿ, ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಗೆ ಬಾಕಿ ಇರುವ ಯಾವುದೇ ಮೊತ್ತವು, ಸಂಗ್ರಹಣೆಯ ಯಾವುದೇ ಇತರ ವಿಧಾನಕ್ಕೆ ಬಾಧಕವಾಗದಂತೆ ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡಬಹುದಾದುದಾಗಿರತಕ್ಕದ್ದು.

**266. ಜಪ್ತಿ ಮತ್ತು ಮಾರಾಟದ ಷರತ್ತುಗಳು.**- (1) ಬಾಕಿ ಇರುವ ಯಾವುದೇ ಮೊಬಲಗನ್ನು ಸಂದಾಯ ಮಾಡದಿರುವುದಕ್ಕಾಗಿ 265ನೇ ಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತನ್ನು ಜಪ್ತಿಮಾಡಿದರೆ, ವಶಪಡಿಸಿಕೊಂಡರೆ ಅಥವಾ ಮಾರಾಟ ಮಾಡಿದರೆ ಅಂಥ ಜಪ್ತಿಯನ್ನು, ವಶಪಡಿಸಿಕೊಳ್ಳುವುದನ್ನು ಮತ್ತು ಮಾರಾಟವನ್ನು ಈ ಕೆಳಕಂಡ ಉಪ-ಪ್ರಕರಣಗಳ ಮತ್ತು 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ ಕೇಂದ್ರ ಅಧಿನಿಯಮ 5) 62ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಮಾಡತಕ್ಕದ್ದು.

(2) 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಮೂಲಕ ಡಿಕ್ರಿಯ ಅಮಲ್ಜಾರಿಯಲ್ಲಿ ಜಪ್ತಿಯಿಂದ ಅಥವಾ ಮಾರಾಟದಿಂದ ವಿನಾಯಿತಿಗೊಳಿಸಿದಂಥ ಎಲ್ಲ ಸ್ವತ್ತನ್ನು, ಈ ಪ್ರಕರಣದ ಅಡಿಯಲ್ಲಿ ಜಪ್ತಿ ಅಥವಾ ಮಾರಾಟದಿಂದ ವಿನಾಯಿತಿಗೊಳಿಸತಕ್ಕದ್ದು.

(3) ಜಪ್ತಿ ಮಾಡಬೇಕಾದ್ದಕ್ಕಿಂತ ಹೆಚ್ಚಿಗೆ ಜಪ್ತಿ ಮಾಡತಕ್ಕದ್ದಲ್ಲ, ಎಂದರೆ, ಜಪ್ತಿ ಮಾಡಿದ ಸ್ವತ್ತಿನ ಮೌಲ್ಯವು, ಸಾಧ್ಯವಾದಷ್ಟು ಮಟ್ಟಿಗೆ, ಫೀಜು, ಬಾಡಿಗೆ ಅಥವಾ ಇತರ ಮೊಬಲಗಿನ ಬಗ್ಗೆ ಬಾಕಿಯಿರುವ ಮೊಬಲಗಿಗೆ ಮತ್ತು ಜಪ್ತಿ, ಫೀಜು ಮತ್ತು ಸದರಿ ಸ್ವತ್ತಿನ ಜಪ್ತಿ ಮತ್ತು ಮಾರಾಟಕ್ಕೆ ಖರ್ಚಾಗಿರುವ ಪ್ರಾಸಂಗಿಕ ವೆಚ್ಚಗಳಿಗೆ ಸರಿಹೊಂದುವಷ್ಟು ಮಾತ್ರವೇ ಇರತಕ್ಕದ್ದು.

(4) ವಶಪಡಿಸಿಕೊಂಡಿರುವ ಸ್ವತ್ತು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ಹಾಳಾಗುವಂತಿದ್ದರೆ ಅಥವಾ ಸ್ವತ್ತನ್ನು ವಶಪಡಿಸಿಕೊಳ್ಳುವ ವ್ಯಕ್ತಿಯು ಬಾಕಿ ಇರುವ ಮೊತ್ತ ಮತ್ತು ಅದನ್ನು ಅಭಿರಕ್ಷೆಯಲ್ಲಿರಿಸಿಕೊಳ್ಳುವುದರ ವೆಚ್ಚವು ಸ್ವತ್ತಿನ ಬೆಲೆಗಿಂತಲೂ ಹೆಚ್ಚಾಗುವುದೆಂದು ಅಭಿಪ್ರಾಯ ಪಟ್ಟರೆ, ಸದರಿ ವ್ಯಕ್ತಿಯು, ಅಂಥ ಸ್ವತ್ತನ್ನು ವಶಪಡಿಸಿಕೊಂಡ ಕೂಡಲೇ ಅದನ್ನು ಯಾರಿಂದ ವಶಪಡಿಸಿಕೊಳ್ಳಲಾಗಿದೆಯೋ ಆ ವ್ಯಕ್ತಿಗೆ ಬಾಕಿ ಇರುವ ಮೊತ್ತವನ್ನು ತಕ್ಷಣವೇ ಸಂದಾಯ ಮಾಡದಿದ್ದರೆ ಅದನ್ನು ಕೂಡಲೇ ಮಾರಾಟ ಮಾಡಲಾಗುವುದೆಂದು ನೋಟೀಸನ್ನು ಕೊಡತಕ್ಕದ್ದು ಮತ್ತು

ಬಾಕಿಯಿರುವ ಮೊಬಲಗನ್ನು ಕೂಡಲೇ ಸಂದಾಯ ಮಾಡದಿದ್ದರೆ ಅದನ್ನು ತದನುಸಾರವಾಗಿ ಮಾರಾಟ ಮಾಡತಕ್ಕದ್ದು.

(5) ಮಾರಾಟದ ವೆಚ್ಚಗಳು ಸೇರಿದಂತೆ ಬಾಕಿಯಿರುವ ಮೊಬಲಗು ಮತ್ತು ಸದರಿ ವೆಚ್ಚಗಳನ್ನು ಕಳೆದ ತರುವಾಯ ಹೆಚ್ಚಿಗೆ ಮೊತ್ತವೇನಾದರೂ ಉಳಿಯಬಹುದಾಗಿದ್ದರೆ ಮೊಬಲಗನ್ನು ಸ್ವತ್ತಿನ ಮಾಲೀಕನಿಗೆ ಸಂದಾಯ ಮಾಡತಕ್ಕದ್ದು.

(6) 265ನೇ ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಿದ ಚರ ಸ್ವತ್ತಿಗೆ ಮೂರನೇ ವ್ಯಕ್ತಿಯು ಯಾವುದೇ ಕ್ಲೇಮನ್ನು ಮುಂದೊಡ್ಡಿದರೆ, ಸಂದರ್ಭಾನುಸಾರ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ಅಥವಾ ಕಾರ್ಯನಿರ್ವಾಹಕ ಅಧಿಕಾರಿಯು ಆ ಕ್ಲೇಮುದಾರರಿಗೆ ಸೂಕ್ತ ನೋಟೀಸನ್ನು ಕೊಟ್ಟು, ಸಂಕ್ಷಿಪ್ತ ವಿಚಾರಣೆ ನಡೆಸಿದ ತರುವಾಯ ಕ್ಲೇಮನ್ನು ಅಂಗೀಕರಿಸತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು. ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಿದರೆ ತದನುಸಾರವಾಗಿ, ಸ್ವತ್ತನ್ನು ವಿಲೆಮಾಡತಕ್ಕದ್ದು. ಅದನ್ನು ಅಂಗೀಕರಿಸಿರುವಷ್ಟರಮಟ್ಟಿಗೆ ಹೊರತು, ಆ ಸ್ವತ್ತನ್ನು ಮಾರಾಟ ಮಾಡತಕ್ಕದ್ದು ಮತ್ತು ಎಲ್ಲ ಉದ್ದೇಶಗಳಿಗಾಗಿ ಅದರ ಮೇಲೆ ಖರೀದಿದಾರನ ಹಕ್ಕಿರತಕ್ಕದ್ದು ಮತ್ತು ಉತ್ಪತ್ತಿಗಳನ್ನು ಇದರಲ್ಲಿ ಈ ಹಿಂದೆ ನಿರ್ದೇಶಿಸಿದಂತೆ ವಿಲೆ ಮಾಡತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿರುವುದಾವುದೂ, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರವನ್ನು ಕೋರಲು ಜಪ್ತಿಯಾದ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಕ್ಲೇಮುದಾರನನ್ನು ಅಥವಾ ಯಾವನೇ ವ್ಯಕ್ತಿಯನ್ನು ಪ್ರತಿಷೇಧಿಸುವುದೆಂದು ಭಾವಿಸತಕ್ಕದ್ದಲ್ಲ.

**267. ಹಣಕಾಸು ಆಯೋಗ.**- (1) [1][ರಾಜ್ಯಪಾಲರು][1], ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದೊಳಗೆ ಮತ್ತು ಆ ತರುವಾಯ ಪ್ರತಿ ಐದನೇ ವರ್ಷವು ಮುಕ್ತಾಯವಾದಾಗ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತಿಗಳ ಹಣಕಾಸು ಪರಿಸ್ಥಿತಿಗಳನ್ನು ಪರಾಮರ್ಶಿಸಲು ಮತ್ತು ಈ ಮುಂದೆ ಹೇಳಿರುವವುಗಳ ಬಗ್ಗೆ, ಎಂದರೆ:-

(ಎ) ಯಾವ ತತ್ವಗಳಿಂದ,-

(i) ರಾಜ್ಯದ ಮತ್ತು ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತಿಗಳ ನಡುವೆ ವಿತರಣೆಯನ್ನು ಮತ್ತು ಸರ್ಕಾರವು ವಿಧಿಸಬಹುದಾದ ಮತ್ತು ತಮ್ಮಲ್ಲಿ ವಿಭಾಗಿಸಬಹುದಾದ ತೆರಿಗೆಗಳ, ಶುಲ್ಕಗಳ, ದಾರಿಸುಂಕಗಳ ಮತ್ತು ಫೀಜುಗಳ ನಿವ್ವಳ ಉತ್ಪತ್ತಿಯನ್ನು ಅಂಥ ಉತ್ಪತ್ತಿಯಲ್ಲಿ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತಿಗಳ ಪಾಲಿನ ಹಂಚಿಕೆಯನ್ನು;

(ii) ಜಿಲ್ಲಾ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಮತ್ತು ಗ್ರಾಮ ಪಂಚಾಯತಿಗಳಿಗೆ ವಹಿಸಿಕೊಡಬಹುದಾದ ಅಥವಾ ಅವುಗಳು ವಿನಿಯೋಗಿಸಬಹುದಾದ ತೆರಿಗೆಗಳು, ಶುಲ್ಕಗಳು, ದಾರಿಸುಂಕಗಳು ಮತ್ತು ಫೀಜುಗಳನ್ನು ನಿರ್ಧರಿಸುವುದನ್ನು;

(iii) ರಾಜ್ಯದ ಸಂಚಿತ ನಿಧಿಯಿಂದ ಜಿಲ್ಲಾ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಮತ್ತು ಗ್ರಾಮ ಪಂಚಾಯತಿಗಳಿಗೆ ನೀಡುವ ಸಹಾಯಾನುದಾನವನ್ನು;

(ಬಿ) ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತಿಗಳ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಲು ಅವಶ್ಯಕವಾದ ಕ್ರಮಗಳನ್ನು;

(ಸಿ) ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತಿಗಳ ಸುಭದ್ರ ಹಣಕಾಸಿನ ದೃಷ್ಟಿಯಿಂದ ರಾಜ್ಯಪಾಲರು ಹಣಕಾಸು ಆಯೋಗಕ್ಕೆ ಉಲ್ಲೇಖಿಸಬಹುದಾದ ಇತರ ವಿಷಯಗಳನ್ನು,

-ನಿಯಂತ್ರಿಸಬೇಕೆನ್ನುವುದರ ಬಗ್ಗೆ ಶಿಫಾರಸ್ಸು ಮಾಡಲು ಹಣಕಾಸು ಆಯೋಗವೊಂದನ್ನು ರಚಿಸತಕ್ಕದ್ದು.

(2) ಹಣಕಾಸು ಆಯೋಗವು ಒಬ್ಬರು ಅಧ್ಯಕ್ಷರನ್ನು ಮತ್ತು ಇತರ ಇಬ್ಬರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಹಣಕಾಸು ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು, ಗೊತ್ತುಪಡಿಸಬಹುದಾದಂಥ ಅರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಗೊತ್ತುಪಡಿಸಬಹುದಾದಂಥ ವಿಧಾನದ ಮೂಲಕ ಅವರನ್ನು ನೇಮಕ ಮಾಡತಕ್ಕದ್ದು.

(4) ಹಣಕಾಸು ಆಯೋಗವು ತನ್ನ ಕಾರ್ಯವಿಧಾನವನ್ನು ನಿರ್ಧರಿಸತಕ್ಕದ್ದು.

(5) ಹಣಕಾಸು ಆಯೋಗದ ಅಧ್ಯಕ್ಷರು ಅಥವಾ ಸದಸ್ಯರು, ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಯವರನ್ನು ಸಂಬೋಧಿಸಿ ತನ್ನ ಸಹಿ ಸಹಿತ ಬರಹದಲ್ಲಿ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಬಹುದು. ಆದರೆ, ಸರ್ಕಾರವು ಅವರ ರಾಜೀನಾಮೆಯನ್ನು ಅಂಗೀಕರಿಸುವವರೆಗೆ ಅವರು ಹುದ್ದೆಯಲ್ಲಿ ಮುಂದುವರಿಯತಕ್ಕದ್ದು.

(6) (5)ನೇ ಉಪ ಪ್ರಕರಣದ ಅಡಿಯಲ್ಲಿ ಸದಸ್ಯರ ಅಥವಾ ಅಧ್ಯಕ್ಷರ ರಾಜೀನಾಮೆಯ ಅಥವಾ ಇತರ ಯಾವುದೇ ಕಾರಣದಿಂದ ಉಂಟಾದ ಆಕಸ್ಮಿಕ ಖಾಲಿ ಸ್ಥಾನವನ್ನು ಹೊಸದಾಗಿ ನೇಮಕ ಮಾಡುವ ಮೂಲಕ ಭರ್ತಿ ಮಾಡಬಹುದು ಮತ್ತು ಹಾಗೆ ನೇಮಕಗೊಂಡ ಸದಸ್ಯರು ಅಥವಾ ಅಧ್ಯಕ್ಷರು ಯಾರ ಸ್ಥಾನದಲ್ಲಿ ಅವರನ್ನು ನೇಮಕ ಮಾಡಲಾಯಿತೋ ಆ ಸದಸ್ಯ ಅಥವಾ ಅಧ್ಯಕ್ಷರ ಹುದ್ದೆಯನ್ನು ಧಾರಣ ಮಾಡಬಹುದಾಗಿದ್ದಂಥ ಉಳಿದ ಅವಧಿಯವರೆಗೆ ಹುದ್ದೆಯ ಧಾರಣ ಮಾಡತಕ್ಕದ್ದು.

(7) ಆಯೋಗವು, ತನ್ನ ಕಾರ್ಯಗಳನ್ನು ನಿರ್ವಹಿಸುವಲ್ಲಿ ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಯಾವನೇ ಅಧಿಕಾರಿಯಿಂದ ಅಥವಾ ಪ್ರಾಧಿಕಾರದಿಂದ ಯಾವುದೇ ದಾಖಲೆಯನ್ನು ತರಿಸಿಕೊಳ್ಳುವುದು;

(ಬಿ) ಸಾಕ್ಷ್ಯವನ್ನು ಕೊಡಲು ಅಥವಾ ದಾಖಲೆಯನ್ನು ಹಾಜರುಪಡಿಸಲು ಯಾವನೇ ವ್ಯಕ್ತಿಗೆ ಕರೆ ಕಳುಹಿಸುವುದು;

(ಸಿ) ಗೊತ್ತುಪಡಿಸಬಹುದಾದಂಥ ಇತರ ಅಧಿಕಾರಗಳು.

(8) ರಾಜ್ಯಪಾಲರು, ಈ ಪ್ರಕರಣದ ಅಡಿಯಲ್ಲಿ ಹಣಕಾಸು ಆಯೋಗವು ಮಾಡಿದ ಪ್ರತಿಯೊಂದು ಶಿಫಾರಸನ್ನು, ಅದರ ಮೇಲೆ ಕೈಕೊಂಡ ಕ್ರಮದ ಬಗೆಗಿನ ವಿವರಣಾತ್ಮಕ ಜ್ಞಾಪನ ಪತ್ರದ ಸಹಿತ, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ [2][ಆರು ತಿಂಗಳುಗಳ ಅವಧಿಯ ಒಳಗೆ][2] ಮಂಡಿಸುವಂತೆ ಮಾಡತಕ್ಕದ್ದು.

1. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

## ಅಧ್ಯಾಯ XVIII
### ಸಂಕೀರ್ಣ

**268. ಪಂಚಾಯತಿಗಳ ವಿಸರ್ಜನೆ.-** (1) [1][ತಾಲ್ಲೂಕು ಪಂಚಾಯತಿಯ ಶಿಫಾರಸ್ಸಿನ ಮೇಲೆ ಅಥವಾ ಅನ್ಯಥಾ, ಜಿಲ್ಲಾ ಪಂಚಾಯತಿಯ ಅಭಿಪ್ರಾಯದಲ್ಲಿ][1], ಗ್ರಾಮ ಪಂಚಾಯತಿಯು, ಅದರ ಅಧಿಕಾರವನ್ನು ಮೀರಿದರೆ ಅಥವಾ ಅದನ್ನು ದುರುಪಯೋಗಪಡಿಸಿದರೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಅದಕ್ಕೆ ವಿಧಿಸಿದ ಕರ್ತವ್ಯಗಳನ್ನು ನೆರವೇರಿಸಲು ಸಕ್ಷಮವಾಗಿಲ್ಲದಿದ್ದರೆ ಅಥವಾ ಅವುಗಳನ್ನು ನೆರವೇರಿಸುವುದರಲ್ಲಿ ಸತತವಾಗಿ ತಪ್ಪಿದಲ್ಲಿ [1][ಜಿಲ್ಲಾ ಪಂಚಾಯತಿಯು][1], ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅಂಥ ಗ್ರಾಮಪಂಚಾಯತಿಯನ್ನು ವಿಸರ್ಜಿಸಬಹುದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(2) ಸರ್ಕಾರದ ಅಭಿಪ್ರಾಯದಲ್ಲಿ, ಜಿಲ್ಲಾ ಪಂಚಾಯತಿಯು ಅಥವಾ ತಾಲ್ಲೂಕು ಪಂಚಾಯತಿಯು ಅದರ ಅಧಿಕಾರವನ್ನು ಮೀರಿದರೆ ಅಥವಾ ಅದನ್ನು ದುರುಪಯೋಗಪಡಿಸಿಕೊಂಡರೆ ಅಥವಾ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಅದಕ್ಕೆ ವಿಧಿಸಿದ ಕರ್ತವ್ಯಗಳನ್ನು ನೆರವೇರಿಸಲು ಸಕ್ಷಮವಾಗಿಲ್ಲದಿದ್ದರೆ ಅಥವಾ ಅವುಗಳನ್ನು ನಿರ್ವಹಿಸುವುದರಲ್ಲಿ ಸತತವಾಗಿ ತಪ್ಪಿದರೆ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅಂಥ ಜಿಲ್ಲಾ ಪಂಚಾಯತಿಯನ್ನು ಅಥವಾ ತಾಲ್ಲೂಕು ಪಂಚಾಯತಿಯನ್ನು ವಿಸರ್ಜಿಸಬಹುದು.

[1][(3) ಜಿಲ್ಲಾ ಪಂಚಾಯತಿಯು ಅಥವಾ ಸಂದರ್ಭಾನುಸಾರ ಸರ್ಕಾರವು (1)ನೇ ಉಪ-ಪ್ರಕರಣ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ಆದೇಶವನ್ನು ಪ್ರಕಟಿಸುವುದಕ್ಕೆ ಮುಂಚೆ, ಅದು ಯಾವ ಕಾರಣಗಳ ಮೇಲೆ ಅದನ್ನು ವಿಸರ್ಜಿಸಲು ಉದ್ದೇಶಿಸಲಾಗಿದೆಯೋ ಆ ಕಾರಣಗಳನ್ನು ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಜಿಲ್ಲಾ ಪಂಚಾಯತಿಗೆ ತಿಳಿಸತಕ್ಕದ್ದು ಮತ್ತು ಪ್ರಸ್ತಾವದ ವಿರುದ್ಧ ಕಾರಣ ತೋರಿಸಲು ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಗೆ ಒಂದು ಸೂಕ್ತ ಅವಧಿಯನ್ನು ನಿಗದಿಪಡಿಸತಕ್ಕದ್ದು ಮತ್ತು ಅದರ ವಿವರಣೆ ಮತ್ತು ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಪರಿಶೀಲಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(3ಎ) (1)ನೇ ಉಪ-ಪ್ರಕರಣದಡಿ ಜಿಲ್ಲಾ ಪಂಚಾಯತಿಯ ಆದೇಶದಿಂದ ತೊಂದರೆಗೊಳಗಾದ ಯಾವೊಬ್ಬ ವ್ಯಕ್ತಿಯು ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

(4) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮಪಂಚಾಯತಿಯನ್ನು ವಿಸರ್ಜಿಸಿದಾಗ ಅಂಥ ಪಂಚಾಯತಿಯ ಎಲ್ಲ ಸದಸ್ಯರು, ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಅಂಥ ಸದಸ್ಯರಾಗಿ ಅವರ ಹುದ್ದೆಯನ್ನು ತೆರವು ಮಾಡತಕ್ಕದ್ದು.

(5) ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯನ್ನು ವಿಸರ್ಜಿಸಿದಾಗ ಅಂಥ ವಿಸರ್ಜನೆಯ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾಗುವ ಮುಂಚೆ ಈ ಅಧಿನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ಅದನ್ನು ಪುನಃ ರಚಿಸತಕ್ಕದ್ದು:

ಪರಂತು, ವಿಸರ್ಜನೆಗೊಂಡ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯು ಮುಂದುವರಿಯಬಹುದಾಗಿದ್ದ ಉಳಿದ ಅವಧಿಯು ಆರು ತಿಂಗಳುಗಳಿಗಿಂತ ಕಡಿಮೆಯಾಗಿದ್ದರೆ, ಅಂಥ ಅವಧಿಗಾಗಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯನ್ನು ರಚಿಸುವುದಕ್ಕೆ ಈ ಪ್ರಕರಣದ ಅಡಿಯಲ್ಲಿ ಚುನಾವಣೆ ನಡೆಸುವ ಅಗತ್ಯವಿರತಕ್ಕದ್ದಲ್ಲ.

(6) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯು ತನ್ನ ಅವಧಿಯು ಪೂರ್ಣಗೊಳ್ಳುವುದಕ್ಕೆ ಮೊದಲು ವಿಸರ್ಜನೆಗೊಂಡಿದ್ದಕ್ಕಾಗಿ ರಚನೆಯಾದರೆ, ವಿಸರ್ಜನೆಗೊಂಡ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯು ಅದು ಹಾಗೆ ವಿಸರ್ಜನೆಗೊಳ್ಳದಿದ್ದಾಗಿನ ಉಳಿದ ಅವಧಿಯವರೆಗೆ ಮಾತ್ರ ಮುಂದುವರಿಯತಕ್ಕದ್ದು.

(7) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯನ್ನು ವಿಸರ್ಜನೆಗೊಳಿಸಿದರೆ,-

(ಎ) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಎಲ್ಲ ಅಧಿಕಾರ ಮತ್ತು ಕರ್ತವ್ಯಗಳನ್ನು, ಅದರ ವಿಸರ್ಜನೆಯ ಅವಧಿಯಲ್ಲಿ, ಸಂದರ್ಭಾನುಸಾರ, ಜಿಲ್ಲಾ ಪಂಚಾಯತಿ ಅಥವಾ ಸರ್ಕಾರವು ಕಾಲಕಾಲಕ್ಕೆ, ಈ ಬಗ್ಗೆ ನೇಮಕ ಮಾಡಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು;

(ಬಿ) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತು ವಿಸರ್ಜನೆಯ ಅವಧಿಯಲ್ಲಿ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು;

(ಸಿ) ವಿಸರ್ಜನೆಯಾದ ಮೇಲೆ ಹುದ್ದೆಯನ್ನು ತೆರವು ಮಾಡುವ ವ್ಯಕ್ತಿಗಳು, ಮರು ಚುನಾವಣೆಗೆ ಅರ್ಹರಾಗಿರತಕ್ಕದ್ದು.

**269. ಅಪೀಲುಗಳು.-** [1][(1) ಈ ಅಧಿನಿಯಮದಡಿ ಗ್ರಾಮ ಪಂಚಾಯತಿಯ ಯಾವುದೇ ಮೂಲ ಆದೇಶದಿಂದ ತೊಂದರೆಗೊಳಗಾದ ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದಲ್ಲಿ ಬೇರೆಡೆಯಲ್ಲಿ ಅಪೀಲು ಸಲ್ಲಿಸಲು ಉಪಬಂಧ ಕಲ್ಪಿಸಿರದಿದ್ದರೆ, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕಾರ್ಯನಿರ್ವಾಹಕ ಅಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(2) ಅಪೀಲು ಪ್ರಾಧಿಕಾರವು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಅಪೀಲನ್ನು ತೀರ್ಮಾನಿಸಬಹುದು ಮತ್ತು ಅದರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ಬಾಕಿ ಉಳಿದಿರುವ, ಯಾವುದೇ ಅಪೀಲನ್ನು 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಸಿಸ್ಟೆಂಟ್ ಕಮಿಷನರ್ ಅವರಿಗೆ ವರ್ಗಾವಣೆ ಮಾಡತಕ್ಕದ್ದು ಮತ್ತು ಅಂಥ ಅಪೀಲನ್ನು ಅವರಿಗೆ ಸಲ್ಲಿಸಿದ್ದರೆ ಹೇಗೋ ಹಾಗೇ ಅವರು ತೀರ್ಮಾನಿಸತಕ್ಕದ್ದು.

**270. ಸಮಿತಿಗಳ ತೀರ್ಮಾನಗಳ ಮೇಲೆ ಅಧಿಕಾರ.-** ಪ್ರತಿಯೊಂದು ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯು, ಅದರ ಯಾವುದೇ ಸಮಿತಿಯು ತೆಗೆದುಕೊಂಡ ಯಾವುದೇ ತೀರ್ಮಾನವನ್ನು ಅನೂರ್ಜಿತಗೊಳಿಸಲು, ಪುನರೀಕ್ಷಿಸಲು ಅಥವಾ ಮಾರ್ಪಾಡು ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

**271. ಚುನಾವಣಾ ಉದ್ದೇಶಗಳಿಗಾಗಿ ಆವರಣ, ವಾಹನಗಳು ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು.-** (1) ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಚುನಾವಣೆಗಳನ್ನು ನಡೆಸುವುದಕ್ಕಾಗಿ ರಾಜ್ಯ ಚುನಾವಣಾ ಆಯೋಗವು ಅಧಿಕಾರ ನೀಡಿರುವ ಅಧಿಕಾರಿಗೆ (ಇದರಲ್ಲಿ ಇನ್ನು ಮುಂದೆ "ಕಡ್ಡಾಯವಾಗಿ ಕೋರುವ ಪ್ರಾಧಿಕಾರಿ" ಎಂದು ಉಲ್ಲೇಖಿಸಿದೆ) ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗೆ ಸಂಬಂಧಪಟ್ಟಂತೆ,-

(ಎ) ಯಾವುದೇ ಆವರಣವು, ಮತದಾನ ಕೇಂದ್ರವಾಗಿ ಉಪಯೋಗಿಸುವ ಉದ್ದೇಶಕ್ಕಾಗಿ ಅಥವಾ ಮತದಾನ ನಡೆದ ತರುವಾಯ ಮತಪೆಟ್ಟಿಗೆಗಳನ್ನು ದಾಸ್ತಾನು ಮಾಡುವುದಕ್ಕಾಗಿ ಬೇಕಾಗಿದೆಯೆಂದು ಅಥವಾ ಬೇಕಾಗುವ ಸಂಭವವಿದೆಯೆಂದು ಕಂಡುಬಂದರೆ, ಅಥವಾ

(ಬಿ) ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯು ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಅದರಿಂದ, ಮತಪೆಟ್ಟಿಗೆಗಳನ್ನು ಸಾಗಿಸುವ ಉದ್ದೇಶಕ್ಕಾಗಿ ಅಥವಾ ಅಂಥ ಚುನಾವಣೆಯನ್ನು ನಡೆಸುವಾಗ ಸುವ್ಯವಸ್ಥೆಯನ್ನು ಪಾಲಿಸುವುದಕ್ಕಾಗಿ, ಪೊಲೀಸು ದಳದ ಸದಸ್ಯರನ್ನು ಸಾಗಿಸುವುದಕ್ಕಾಗಿ ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಯಾವನೇ ಅಧಿಕಾರಿ ಅಥವಾ ಇತರ ವ್ಯಕ್ತಿಯನ್ನು ಸಾಗಿಸುವ ಉದ್ದೇಶಕ್ಕಾಗಿ ಬೇಕಾಗಿದೆ ಎಂದು ಅಥವಾ ಬೇಕಾಗುವ ಸಂಭವವಿದೆಯೆಂದು ಕಂಡುಬಂದರೆ, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಬರಹದಲ್ಲಿನ ಆದೇಶದ ಮೂಲಕ ಅಂಥ ಆವರಣ ಅಥವಾ ಸಂದರ್ಭಾನುಸಾರ, ಅಂಥ ವಾಹನ, ನೌಕೆ ಅಥವಾ ಪ್ರಾಣಿಯನ್ನು ಒದಗಿಸುವಂತೆ ಕಡ್ಡಾಯವಾಗಿ ಕೋರಬಹುದು ಮತ್ತು ಆ ಕಡ್ಡಾಯ ಕೋರಿಕೆಯ ಸಂಬಂಧದಲ್ಲಿ ಅವನಿಗೆ ಅಗತ್ಯವೆಂದು ಅಥವಾ ವಿಹಿತವೆಂದು ಕಂಡುಬರಬಹುದಾದಂಥ ಇನ್ನೂ ಹೆಚ್ಚಿನ ಆದೇಶಗಳನ್ನು ಮಾಡಬಹುದು:

ಪರಂತು, ಅಂಥ ಅಭ್ಯರ್ಥಿಯ ಚುನಾವಣೆಗೆ ಸಂಬಂಧಪಟ್ಟ ಯಾವುದೇ ಉದ್ದೇಶಕ್ಕಾಗಿ ಅಂಥ ಅಭ್ಯರ್ಥಿ ಅಥವಾ ಅವನ ಏಜೆಂಟನು ಕಾನೂನುಬದ್ಧವಾಗಿ ಉಪಯೋಗಿಸುತ್ತಿರುವಂಥ ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯನ್ನು ಅಂಥ ಚುನಾವಣೆಗಳ ಮತದಾನವು ಮುಕ್ತಾಯವಾಗುವವರೆಗೆ ಈ ಉಪ-ಪ್ರಕರಣದ ಅಡಿಯಲ್ಲಿ ಕಡ್ಡಾಯವಾಗಿ ಕೋರತಕ್ಕದ್ದಲ್ಲ.

(2) ಕಡ್ಡಾಯ ಕೋರಿಕೆಯನ್ನು, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಸ್ವತ್ತಿನ ಮಾಲೀಕನಾಗಿರುವುದಾಗಿ ಅಥವಾ ಅದರ ಸ್ವಾಧೀನ ಹೊಂದಿರುವ ವ್ಯಕ್ತಿಯಾಗಿರುವುದಾಗಿ ಭಾವಿಸಲಾದ ವ್ಯಕ್ತಿಗೆ ಸಂಬೋಧಿಸಿದ ಲಿಖಿತ ಆದೇಶದ ಮೂಲಕ ಜಾರಿಗೊಳಿಸತಕ್ಕದ್ದು ಮತ್ತು ಅಂಥ ಆದೇಶವನ್ನು ಗೊತ್ತುಪಡಿಸಿರುವ ರೀತಿಯಲ್ಲಿ, ಅದನ್ನು ಯಾರಿಗೆ ಸಂಬೋಧಿಸಲಾಗಿದೆಯೋ ಆ ವ್ಯಕ್ತಿಗೆ ಜಾರಿ ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ, ಅಂಥ ಕಡ್ಡಾಯ ಕೋರಿಕೆಯ ಅವಧಿಯನ್ನು, ಆ ಉಪ-ಪ್ರಕರಣದಲ್ಲಿ ನಮೂದಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಸ್ವತ್ತು ಅಗತ್ಯವಾಗಿರುವಂಥ ಅವಧಿಯನ್ನು ಮೀರಿ ವಿಸ್ತರಿಸತಕ್ಕದ್ದಲ್ಲ.

(4) ಈ ಪ್ರಕರಣದಲ್ಲಿ,-

(ಎ) "ಆವರಣ" ಎಂದರೆ, ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಗುಡಿಸಲು, ಷೆಡ್ಡು ಅಥವಾ ಇತರ ರಚನೆ ಅಥವಾ ಅದರ ಯಾವುದೇ ಭಾಗವನ್ನು ಒಳಗೊಳ್ಳುತ್ತದೆ;

(ಬಿ) "ವಾಹನ" ಎಂದರೆ, ಯಾಂತ್ರಿಕ ಶಕ್ತಿಯಿಂದ ಅಥವಾ ಅನ್ಯಥಾ ಚಾಲಿತವಾದ, ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಉಪಯೋಗಿಸಲಾಗುವ ಅಥವಾ ಉಪಯೋಗಿಸಲು ಸಮರ್ಥವಾದ ಯಾವುದೇ ವಾಹನ.

**272. ನಷ್ಟ ಪರಿಹಾರ ಸಂದಾಯ.-** (1) 271ನೇ ಪ್ರಕರಣದ ಅನುಸರಣೆಯಲ್ಲಿ, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಯಾವುದೇ ಆವರಣವನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ, ಸಂಬಂಧಪಟ್ಟ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯು, ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಗಳಿಗೆ

ನಷ್ಟಪರಿಹಾರವನ್ನು ಸಂದಾಯಮಾಡತಕ್ಕದ್ದು. ಅದರ ಮೊಬಲಗನ್ನು, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಈ ಕೆಳಕಂಡ ಅಂಶಗಳನ್ನು ಪರ್ಯಾಲೋಚಿಸಿ ನಿರ್ಧರಿಸತಕ್ಕದ್ದು ಎಂದರೆ:-

(i) ಆ ಆವರಣಕ್ಕೆ ಸಂಬಂಧಿಸಿದಂತೆ ಸಂದಾಯಮಾಡಬೇಕಾದ ಬಾಡಿಗೆ ಅಥವಾ ಯಾವುದೇ ಬಾಡಿಗೆಯನ್ನು ಹಾಗೆ ಸಂದಾಯ ಮಾಡಬೇಕಾಗಿಲ್ಲದೆ ಇರುವಾಗ, ಆ ಸ್ಥಳದಲ್ಲಿ ಅಂಥದೇ ಆವರಣಕ್ಕಾಗಿ ಸಂದಾಯ ಮಾಡಬೇಕಾದ ಬಾಡಿಗೆ;

(ii) ಆವರಣಗಳನ್ನು ಕಡ್ಡಾಯವಾಗಿ ಕೋರಿದ ಪರಿಣಾಮವಾಗಿ ಹಿತಾಸಕ್ತಿಯುಳ್ಳ ವ್ಯಕ್ತಿಯು, ಅವನ ವಾಸಸ್ಥಳ ಅಥವಾ ವ್ಯವಹಾರದ ಸ್ಥಳವನ್ನು ಬಲವಂತವಾಗಿ ಬದಲಾಯಿಸಬೇಕಾಗಿ ಬಂದರೆ, ಅಂಥ ಬದಲಾವಣೆಗೆ ಪ್ರಾಸಂಗಿಕವಾದ ಯುಕ್ತ ವೆಚ್ಚಗಳು, ಯಾವುವಾದರೂ ಇದ್ದರೆ, ಅವುಗಳು:

ಪರಂತು, ಹಾಗೆ ನಿರ್ಧರಿಸಿದ ನಷ್ಟ ಪರಿಹಾರದ ಮೊಬಲಗಿನಿಂದ ಬಾಧಿತನಾದ, ಹಿತಾಸಕ್ತಿಯನ್ನು ಹೊಂದಿದ, ಯಾವನೇ ವ್ಯಕ್ತಿಯು (1)ನೇ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕಡ್ಡಾಯವಾಗಿ ಕೋರಿರುವ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಿದಾಗ, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ನಿರ್ಧರಣೆಗಾಗಿ ಆ ವಿಷಯವನ್ನು ಆ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ [1][ಗೊತ್ತುಪಡಿಸಿದ ನ್ಯಾಯಾಲಯರಿಗೆ][1] ಒಪ್ಪಿಸತಕ್ಕದ್ದು ಮತ್ತು ಅಂಥ [1][ಗೊತ್ತುಪಡಿಸಿದ ನ್ಯಾಯಾಲಯರ][1] ತೀರ್ಮಾನಕ್ಕನುಸಾರರಾಗಿ ಅದನ್ನು ನಿರ್ಧರಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

***ವಿವರಣೆ.-*** ಈ ಉಪ ಪ್ರಕರಣದಲ್ಲಿ "ಹಿತಾಸಕ್ತಿಯನ್ನು ಹೊಂದಿದ ವ್ಯಕ್ತಿ" ಎಂದರೆ ಕಡ್ಡಾಯ ಕೋರಿಕೆಯ ನಿಕಟಪೂರ್ವದಲ್ಲಿ 271ನೇ ಪ್ರಕರಣದ ಅಡಿಯಲ್ಲಿ ಕಡ್ಡಾಯವಾಗಿ ಕೋರಿದ ಆವರಣದ ವಾಸ್ತವಿಕ ಸ್ವಾಧೀನವನ್ನು ಹೊಂದಿದ್ದ ವ್ಯಕ್ತಿ ಅಥವಾ ಯಾವನೇ ವ್ಯಕ್ತಿಯು ಅಂಥ ವಾಸ್ತವಿಕ ಸ್ವಾಧೀನವನ್ನು ಹೊಂದಿಲ್ಲದಿರುವಲ್ಲಿ ಅಂಥ ಆವರಣದ ಮಾಲೀಕ.

(2) 271ನೇ ಪ್ರಕರಣದ ಅನುಸರಣೆಯಲ್ಲಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು, ಅದರ ಮಾಲೀಕನಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು. ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಅದರ ಮೊಬಲಗನ್ನು ಅಂಥ ವಾಹನ, ನೌಕೆ ಅಥವಾ ಪ್ರಾಣಿಯ ಬಾಡಿಗೆಗಾಗಿ ಆ ಸ್ಥಳದಲ್ಲಿ ಚಾಲ್ತಿಯಲ್ಲಿರುವ ಹಾಸಲುಗಳು ಅಥವಾ ದರಗಳ ಆಧಾರದ ಮೇಲೆ ನಿರ್ಧರಿಸತಕ್ಕದ್ದು:

ಪರಂತು, ಹಾಗೆ ನಿರ್ಧರಿಸಿದ ಪರಿಹಾರದ ಮೊಬಲಗಿನಿಂದ ಬಾಧಿತನಾದ ಅಂಥ ವಾಹನ, ನೌಕೆ ಅಥವಾ ಪ್ರಾಣಿಯ ಮಾಲೀಕನು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಗೆ ಮೂವತ್ತು ದಿನಗಳೊಳಗೆ ಅರ್ಜಿಯನ್ನು ಸಲ್ಲಿಸಿದಲ್ಲಿ, ಆ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ [1][ಗೊತ್ತುಪಡಿಸಿದ ನ್ಯಾಯಾಲಯ][1]ರಿಗೆ ಆ ವಿಷಯವನ್ನು ಒಪ್ಪಿಸತಕ್ಕದ್ದು ಮತ್ತು ಸಂದಾಯ ಮಾಡಬೇಕಾದ ನಷ್ಟಪರಿಹಾರದ ಮೊಬಲಗು ಆ [1][ಸಿವಿಲ್ ನ್ಯಾಯಾಧೀಶರು (ಕಿರಿಯ ವರ್ಗ)][1] ನಿರ್ಧರಿಸಬಹುದಾದಂಥದ್ದಾಗಿರತಕ್ಕದ್ದು:

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

ಮತ್ತು ಪರಂತು, ಕಡ್ಡಾಯ ಕೋರಿಕೆಯ ನಿಕಟಪೂರ್ವದಲ್ಲಿ, ವಾಹನ ಅಥವಾ ನೌಕೆಯು ಕಂತು ಖರೀದಿ ಒಪ್ಪಂದದ ಕಾರಣದಿಂದಾಗಿ ಆ ವಾಹನ ಅಥವಾ ನೌಕೆಯ ಮಾಲೀಕನನ್ನು ಹೊರತುಪಡಿಸಿದ ವ್ಯಕ್ತಿಯ ಸ್ವಾಧೀನದಲ್ಲಿ ಇದ್ದಾಗ, ಒಟ್ಟು ಇತರ ನಷ್ಟಪರಿಹಾರವೆಂದು ಈ ಉಪ ಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದ ಮೊಬಲಗನ್ನು ಆ ವ್ಯಕ್ತಿ ಮತ್ತು ಮಾಲೀಕನ ನಡುವೆ, ಅವರು ಒಪ್ಪಬಹುದಾದಂಥ ರೀತಿಯಲ್ಲಿ ಮತ್ತು ಆ ಒಪ್ಪಂದವು ಆಗದಿದ್ದರೆ, ಈ ಬಗ್ಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ನೇಮಕ ಮಾಡಿದ ಮಧ್ಯಸ್ಥಗಾರನು ತೀರ್ಮಾನಿಸಬಹುದಾದಂಥ ರೀತಿಯಲ್ಲಿ ಹಂಚತಕ್ಕದ್ದು.

**273. ಮಾಹಿತಿಯನ್ನು ಪಡೆಯುವ ಅಧಿಕಾರ.-** ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, 271ನೇ ಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತನ್ನು, ಕಡ್ಡಾಯವಾಗಿ ಕೋರುವ ಅಥವಾ 272ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ನಷ್ಟಪರಿಹಾರವನ್ನು ನಿರ್ಧರಿಸುವ ದೃಷ್ಟಿಯಿಂದ, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ, ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಸ್ವತ್ತಿಗೆ ಸಂಬಂಧಪಟ್ಟಂಥ, ಅವನಲ್ಲಿರುವಂಥ ಮಾಹಿತಿಯನ್ನು ಒದಗಿಸಲು ಯಾವನೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

**274. ಆವರಣ ಇತ್ಯಾದಿಗಳಿಗೆ ಪ್ರವೇಶಿಸುವ ಮತ್ತು ಅವುಗಳನ್ನು ಪರಿಶೀಲಿಸುವ ಅಧಿಕಾರ.-** (1) ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಈ ಬಗ್ಗೆ ಅಧಿಕಾರ ನೀಡಿರುವ ಯಾವನೇ ವ್ಯಕ್ತಿಯು, 273ನೇ ಪ್ರಕರಣದ ಅಡಿಯಲ್ಲಿ, ಅಂಥ ಆವರಣ, ವಾಹನ, ನೌಕೆ ಅಥವಾ ಪ್ರಾಣಿಗೆ ಸಂಬಂಧಪಟ್ಟಂತೆ ಆದೇಶವನ್ನು ಹೇಗೆ ಮಾಡತಕ್ಕದ್ದು ಮತ್ತು ಹಾಗೆ ಮಾಡಬಹುದಾದರೆ ಯಾವ ರೀತಿಯಲ್ಲಿ ಮಾಡಬಹುದು ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅಥವಾ ಆ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಆದೇಶದ ಪಾಲನೆಯನ್ನು ಸುನಿಶ್ಚಿತಗೊಳಿಸುವ ದೃಷ್ಟಿಯಿಂದ ಆ ಯಾವುದೇ ಆವರಣದೊಳಕ್ಕೆ ಪ್ರವೇಶಿಸಬಹುದು ಮತ್ತು ಅಂಥ ಆವರಣ ಮತ್ತು ಅದರಲ್ಲಿರುವ ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯನ್ನು ಪರಿಶೀಲಿಸಬಹುದು.

(2) ಈ ಪ್ರಕರಣದಲ್ಲಿ "ಆವರಣ" ಮತ್ತು "ವಾಹನ" ಎಂಬ ಪದಗಳು 271ನೇ ಪ್ರಕರಣದಲ್ಲಿ ಅವು ಹೊಂದಿರುವಂಥದೇ ಅರ್ಥವನ್ನು ಹೊಂದಿರುತ್ತವೆ.

**275. ಕಡ್ಡಾಯವಾಗಿ ಕೋರಲಾದ ಆವರಣಗಳಿಂದ ಹೊರ ಹಾಕುವುದು.-** (1) 271ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ, ಕಡ್ಡಾಯವಾಗಿ ಕೋರಿದ ಯಾವುದೇ ಆವರಣದ ಸ್ವಾಧೀನವನ್ನು ಉಳಿಸಿಟ್ಟುಕೊಂಡಿರುವ ಯಾವನೇ ವ್ಯಕ್ತಿಯನ್ನು, ಈ ಬಗ್ಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಅಧಿಕಾರ ನೀಡಿರುವ ಯಾವನೇ ಅಧಿಕಾರಿಯು ಆ ಆವರಣದಿಂದ ಕ್ಷಿಪ್ರವಾಗಿ ಹೊರಹಾಕಬಹುದು.

(2) ಹಾಗೆ ಅಧಿಕಾರ ಪಡೆದಿರುವ ಯಾವನೇ ಅಧಿಕಾರಿಯು, ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಯಾರೇ ಮಹಿಳೆಗೆ ಹೊರಟು ಹೋಗಲು ಸೂಕ್ತ ಎಚ್ಚರಿಕೆಯನ್ನು ಮತ್ತು ಸೌಲಭ್ಯವನ್ನು ಕೊಟ್ಟ ತರುವಾಯ, ಯಾವುದೇ

ಕಟ್ಟಡದ ಯಾವುದೇ ಬೀಗ ಅಥವಾ ಚಿಲಕವನ್ನು ತೆಗೆದುಹಾಕಬಹುದು ಅಥವಾ ತೆರೆಯಬಹುದು ಅಥವಾ ಅದರ ಯಾವುದೇ ಬಾಗಿಲನ್ನು ಒಡೆಯಬಹುದು ಅಥವಾ ಹಾಗೆ ಹೊರಹಾಕುವುದನ್ನು ಜಾರಿಗೊಳಿಸುವುದಕ್ಕೆ ಅವಶ್ಯವಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು.

**276. ಕಡ್ಡಾಯ ಕೋರಿಕೆಯಿಂದ ಆವರಣಗಳ ಬಿಡುಗಡೆ.**- (1) 271ನೇ ಪ್ರಕರಣದ ಅಡಿಯಲ್ಲಿ ಕಡ್ಡಾಯವಾಗಿ ಕೋರಲಾದ ಯಾವುದೇ ಆವರಣವನ್ನು, ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಬೇಕಾದಾಗ, ಅದರ ಸ್ವಾಧೀನತೆಯನ್ನು, ಆವರಣವನ್ನು ಕಡ್ಡಾಯವಾಗಿ ಕೋರಿದ ಕಾಲದಲ್ಲಿ ಯಾರ ಸ್ವಾಧೀನದಿಂದ ಅದನ್ನು ಪಡೆಯಲಾಯಿತೋ ಆ ವ್ಯಕ್ತಿಗೆ ಅಥವಾ ಅಂಥ ಯಾವನೇ ವ್ಯಕ್ತಿಯು ಇಲ್ಲದಿದ್ದರೆ ಅಂಥ ಆವರಣದ ಮಾಲೀಕನೆಂದು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಭಾವಿಸಿದ ವ್ಯಕ್ತಿಗೆ ವಾಪಸ್ಸು ಮಾಡತಕ್ಕದ್ದು ಮತ್ತು ಹಾಗೆ ಸ್ವಾಧೀನತೆಯನ್ನು ವಾಪಸ್ಸು ಮಾಡಿರುವುದು ಅದಕ್ಕೆ ಸಂಬಂಧಿಸಿದಂತೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯ ಎಲ್ಲ ಹೊಣೆಗಾರಿಕೆಗಳನ್ನು ಪೂರ್ಣವಾಗಿ ವಿಮೋಚನೆ ಮಾಡತಕ್ಕದ್ದು. ಆದರೆ ಆ ಆವರಣದ ಸ್ವಾಧೀನವನ್ನು ಹಾಗೆ ಯಾರಿಗೆ ವಾಪಸ್ಸು ಮಾಡಲಾಯಿತೋ ಆ ವ್ಯಕ್ತಿಯ ವಿರುದ್ಧ, ಆವರಣಕ್ಕೆ ಸಂಬಂಧಿಸಿದ ಯಾವ ಹಕ್ಕುಗಳನ್ನು ಯಾವನೇ ಇತರ ವ್ಯಕ್ತಿಯು, ಕಾನೂನಿನ ಯುಕ್ತ ಕ್ರಮದ ಮೂಲಕ ಜಾರಿಗೊಳಿಸಲು ಹಕ್ಕುಳ್ಳವನಾಗಿರಬಹುದೋ ಆ ಯಾವುವೇ ಹಕ್ಕುಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) 271ನೇ ಪ್ರಕರಣದ ಅಡಿಯಲ್ಲಿ ಕಡ್ಡಾಯವಾಗಿ ಕೋರಲಾದ ಯಾವುದೇ ಆವರಣದ ಸ್ವಾಧೀನವನ್ನು (1)ನೇ ಉಪ ಪ್ರಕರಣದ ಮೇರೆಗೆ ಪಡೆಯಬೇಕಾಗಿರುವ ವ್ಯಕ್ತಿಯು ಸಿಕ್ಕದಿರುವಲ್ಲಿ ಅಥವಾ ಅವನ ಬಗ್ಗೆ ಖಚಿತಪಡಿಸಿಕೊಳ್ಳಲು ಆಗದಿರುವಲ್ಲಿ ಅಥವಾ ಅವನ ಪರವಾಗಿ ವಾಪಸ್ಸು ಪಡೆಯುವುದನ್ನು ಅಂಗೀಕರಿಸಲು ಅಧಿಕಾರ ಪಡೆದಿರುವ ಯಾವನೇ ಏಜೆಂಟ್ ಅಥವಾ ಯಾವನೇ ಇತರ ವ್ಯಕ್ತಿಯಿಲ್ಲದಿರುವಲ್ಲಿ, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಅಂಥ ಆವರಣವನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ನೋಟೀಸನ್ನು ಅಂಥ ಆವರಣದ ಎದ್ದುಕಾಣುವ ಭಾಗದಲ್ಲಿ ಮತ್ತು ತಹಸೀಲ್ದಾರರ ಕಛೇರಿಯ ಸೂಚನಾಫಲಕದ ಮೇಲೆ ಅಂಟಿಸುವಂತೆ ಮಾಡತಕ್ಕದ್ದು.

(3) (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಲಾದಂತೆ ನೋಟೀಸನ್ನು ಸೂಚನಾಫಲಕದ ಮೇಲೆ ಅಂಟಿಸಿದಾಗ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಆವರಣವು, ಆ ನೋಟೀಸನ್ನು ಹಾಗೆ ಅಂಟಿಸಿದ ದಿನಾಂಕದಂದು ಮತ್ತು ಅಂದಿನಿಂದ ಕಡ್ಡಾಯ ಕೋರಿಕೆಗೆ ಒಳಪಟ್ಟಿರುವುದು ನಿಂತು ಹೋಗತಕ್ಕದ್ದು ಮತ್ತು ಅದರ ಸ್ವಾಧೀನವನ್ನು ಹೊಂದಲು ಹಕ್ಕುಳ್ಳ ವ್ಯಕ್ತಿಗೆ ಅದನ್ನು ವಾಪಸ್ಸು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ಸದರಿ ದಿನಾಂಕದ ತರುವಾಯದ ಯಾವುದೇ ಅವಧಿಗಾಗಿ ಅಂಥ ಆವರಣಕ್ಕೆ ಸಂಬಂಧಿಸಿದಂತೆ ಯಾವುದೇ ನಷ್ಟಪರಿಹಾರಕ್ಕಾಗಿ ಅಥವಾ ಇತರ ಕ್ಲೇಮಿಗಾಗಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿ ಅಥವಾ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಹೊಣೆಯಾಗಿರತಕ್ಕದ್ದಲ್ಲ.

**277. ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ಯಾವುದೇ ಆದೇಶದ ಉಲ್ಲಂಘನೆಗೆ ದಂಡನೆ.**- ಯಾವನೇ ವ್ಯಕ್ತಿಯು, 271ನೇ ಪ್ರಕರಣ ಅಥವಾ 273ನೇ ಪ್ರಕರಣದ ಅಡಿಯಲ್ಲಿ ಮಾಡಿದ್ದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಅವನು, ಅಪರಾಧ ನಿರ್ಣಯವಾದ ಮೇಲೆ, ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**278. ಅನರ್ಹಗೊಂಡಿದ್ದಾಗ ಸದಸ್ಯ, ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸುವುದಕ್ಕಾಗಿ ದಂಡನೆ.**- (1) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಅಡಿಯಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸದಸ್ಯನಾಗಿ ಕಾರ್ಯ ನಿರ್ವಹಿಸುವ ಯಾರೇ ಆಗಲಿ, ಅವನು ಹಾಗೆ ಪದಧಾರಣ ಮಾಡಲು ಹಕ್ಕುಳ್ಳವನಾಗಿಲ್ಲವೆಂದು ಅಥವಾ ಹಕ್ಕುಳ್ಳವನಾಗಿರುವುದು ನಿಂತುಹೋಗಿರುವುದೆಂದು ತಿಳಿದಿದ್ದೂ ಸದಸ್ಯನಾಗಿ ಹಾಗೆ ಕಾರ್ಯನಿರ್ವಹಿಸಿದರೆ ಅಪರಾಧ ನಿರ್ಣಯವಾದ ಮೇಲೆ, ಅವನು ಸದಸ್ಯನಾಗಿ ಉಪಸ್ಥಿತನಿರುವ ಅಥವಾ ಮತ ಕೊಡುವ ಪ್ರತಿಯೊಂದು ದಿನಕ್ಕೆ ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಯಾರೇ ಆಗಲಿ ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಅಡಿಯಲ್ಲಿ ಅವನು ಹಾಗೆ ಪದಧಾರಣ ಮಾಡಲು ಅಥವಾ ಅಂಥ ಪ್ರಕಾರ್ಯಗಳನ್ನು ನಿರ್ವಹಿಸಲು ಹಕ್ಕುಳ್ಳವನಾಗಿಲ್ಲವೆಂದು ಅಥವಾ ಹಕ್ಕುಳ್ಳವನಾಗಿರುವುದು ನಿಂತು ಹೋಗಿರುವುದೆಂದು ತಿಳಿದಿದ್ದು ಅಪರಾಧ ನಿರ್ಣಯವಾದ ಮೇಲೆ, ಹಾಗೆ ಅವನು ಕಾರ್ಯನಿರ್ವಹಿಸುವ ಅಥವಾ ಪ್ರಕಾರ್ಯವನ್ನು ನಿರ್ವಹಿಸುವಂಥ ಪ್ರತಿಯೊಂದು ದಿನಕ್ಕೆ ಎರಡು ನೂರು ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿದ್ದು, ಯಾವನೇ ವ್ಯಕ್ತಿಯು ಅವನ ಸ್ವಾಧೀನ ಅಥವಾ ನಿಯಂತ್ರಣದಲ್ಲಿರುವ ಅಥವಾ ಸ್ವಾಧೀನಕ್ಕೆ ಬಂದಿರುವಂಥ ಸಂದರ್ಭಾನುಸಾರ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಯಾವುದೇ ದಸ್ತಾವೇಜನ್ನು ಅಥವಾ ಅದರಲ್ಲಿ ನಿಹಿತವಾದ ಅಥವಾ ಅದಕ್ಕೆ ಸೇರಿದ ಯಾವುದೇ ಹಣ ಅಥವಾ ಇತರೆ ಸ್ವತ್ತುಗಳನ್ನು ಹುದ್ದೆಯಲ್ಲಿನ ಅವನ ಉತ್ತರಾಧಿಕಾರಿಗೆ ಅಥವಾ ಗೊತ್ತುಪಡಿಸಿದ ಇತರೆ ಪ್ರಾಧಿಕಾರಿಗೆ ಒಪ್ಪಿಸಲು ತಪ್ಪಿದರೆ,-

(ಎ) ಅಂಥ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ, ಅವನ ಪದಾವಧಿ ಮುಕ್ತಾಯವಾದ ಕೂಡಲೇ ಪ್ರತಿಯೊಂದು ಸಂದರ್ಭದಲ್ಲಿ; ಮತ್ತು

(ಬಿ) ಸಂದರ್ಭಾನುಸಾರ, ಅಧ್ಯಕ್ಷನ ಕೋರಿಕೆಯ ಮೇರೆಗೆ ಉಪಾಧ್ಯಕ್ಷನಾಗಿದ್ದ ವ್ಯಕ್ತಿಯ ಸಂದರ್ಭದಲ್ಲಿ,

-ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**279. ಹಿತಾಸಕ್ತಿಯನ್ನು ಹೊಂದಿದ್ದ ಸದಸ್ಯನು, ಮತಚಲಾಯಿಸಿದ್ದಕ್ಕಾಗಿ ದಂಡನೆ.**- 53ನೇ ಪ್ರಕರಣದ (4)ನೇ ಉಪಪ್ರಕರಣದ ಅಥವಾ 141ನೇ ಪ್ರಕರಣದ (2)ನೇ ಉಪ-ಪ್ರಕರಣದ (ಜಿ) ಖಂಡದ ಅಥವಾ 180ನೇ ಪ್ರಕರಣದ

(2)ನೇ ಉಪಪ್ರಕರಣದ (ಜಿ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿ, ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ, ಅಥವಾ ಜಿಲ್ಲಾ ಪಂಚಾಯತಿಯ ಸದಸ್ಯನಾಗಿ ಮತ ಚಲಾಯಿಸುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ಮೇಲೆ ಉದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**280. ಕರಾರಿನಲ್ಲಿನ ಹಿತಾಸಕ್ತಿಯನ್ನು ಅಧಿಕಾರಿ ಅಥವಾ ನೌಕರನು ಆರ್ಜಿಸಿರುವುದಕ್ಕಾಗಿ ದಂಡನೆ.**- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಯಾವನೇ ಸದಸ್ಯನು, ಅಧಿಕಾರಿಯು ಅಥವಾ ನೌಕರನು, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ತಾನಾಗಿಯೇ ಅಥವಾ ಪಾಲುದಾರ, ನಿಯೋಜಕ ಅಥವಾ ನೌಕರನ ಮೂಲಕ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯೊಂದಿಗೆ ಅಥವಾ ಅದರಿಂದ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ತಿಳಿದೂ ಆರ್ಜಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಯಾವನೇ ವ್ಯಕ್ತಿಯು, ಯಾವುದೇ ಕಂಪನಿಯಲ್ಲಿ ಷೇರುದಾರನಾಗಿರುವ ಅಥವಾ ಸದಸ್ಯನಾಗಿರುವ ಕಾರಣ ಮಾತ್ರದಿಂದಲೇ ಅವನು ಅಂಥ ಕಂಪನಿಯ ನಿರ್ದೇಶಕನಾಗಿದ್ದ ಹೊರತು, ಅಂಥ ಕಂಪನಿ ಮತ್ತು ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ನಡುವೆ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅವನು ಹಿತ್ತಾಸಕ್ತಿಯನ್ನು ಹೊಂದಿರುವುದಾಗಿ ಗ್ರಹಿಸತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದಲ್ಲಿರುವುದಾವುದೂ, ಕಮಿಷನರ್‌ನ ಮಂಜೂರಾತಿಯೊಂದಿಗೆ ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯೊಂದಿಗೆ ಕರಾರನ್ನು ಮಾಡಿಕೊಳ್ಳುವ ಯಾವನೇ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**281. ಕೆಲವು ಅಧಿಕಾರಿಗಳನ್ನು ಅಕ್ರಮವಾಗಿ ಅಡ್ಡಿಪಡಿಸುವುದು.**- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಕಾರ್ಯದರ್ಶಿ ಅಥವಾ ಅಂಥ ಅದಿಕಾರಿಯು, ಯಾವುದೇ ಸ್ಥಳ, ಕಟ್ಟಡ ಅಥವಾ ಭೂಮಿಯ ಮೇಲೆ ಅಥವಾ ಅದನ್ನು ಪ್ರವೇಶಿಸಲು ಅವನ ಅಧಿಕಾರಗಳನ್ನು ಕಾನೂನುಬದ್ಧವಾಗಿ ಪ್ರತ್ಯಾಯೋಜಿಸಲಾಗಿರುವಂಥ ಯಾವನೇ ವ್ಯಕ್ತಿಯನ್ನು, ಅದರ ಮೇಲೆ ಅಥವಾ ಅದರೊಳಗೆ ಪ್ರವೇಶಿಸುವ ಅವನ ಕಾನೂನುಬದ್ಧ ಅಧಿಕಾರವನ್ನು ಚಲಾಯಿಸುವುದನ್ನು ತಡೆಗಟ್ಟುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**282. ಅಧ್ಯಕ್ಷ ಅಥವಾ ಉಪಾಧ್ಯಕ್ಷ ಮುಂತಾದವರನ್ನು ಅಡ್ಡಿಪಡಿಸುವುದರ ವಿರುದ್ಧ ನಿಷೇಧ.**- ಗ್ರಾಮ ಪಂಚಾಯತಿಯ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಅಥವಾ ಸದಸ್ಯನನ್ನು ಅಥವಾ ತಾಲ್ಲೂಕು ಪಂಚಾಯತಿಯ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸದಸ್ಯನನ್ನು ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷ, ಉಪಾಧ್ಯಕ್ಷ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸದಸ್ಯನನ್ನು ಅಥವಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ನಿಯೋಜಿಸಿದ ಯಾವನೇ ವ್ಯಕ್ತಿಯನ್ನು ಅಥವಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಥವಾ ಅದರ ಪರವಾಗಿ ಕರಾರನ್ನು ಯಾರೊಂದಿಗೆ ಮಾಡಿಕೊಳ್ಳಲಾಗಿದೆಯೋ ಆ ಯಾವನೇ ವ್ಯಕ್ತಿಯನ್ನು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮ, ಉಪವಿಧಿ, ವಿನಿಯಮ ಅಥವಾ ಆದೇಶದ ಕಾರಣದಿಂದ ಅಥವಾ ಪರಿಣಾಮದಿಂದಾಗಿ ಮಾಡಲು ಅವನಿಗೆ ಅಧಿಕಾರ ನೀಡಿರುವಂಥ ಅಥವಾ ಅಗತ್ಯಪಡಿಸಿದಂಥ ಅವನ ಕರ್ತವ್ಯ ಅಥವಾ ಯಾವುದೇ ಕಾರ್ಯವನ್ನು ನಿರ್ವಹಿಸುವಲ್ಲಿ ಅಡ್ಡಿಪಡಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**283. ನೋಟೀಸನ್ನು ತೆಗೆದುಹಾಕುವುದು ಅಥವಾ ಅಳಿಸಿ ಹಾಕುವುದರ ವಿರುದ್ಧ ನಿಷೇಧ.**- ಯಾವನೇ ವ್ಯಕ್ತಿಯು ಆ ಬಗ್ಗೆ ಅಧಿಕಾರವಿಲ್ಲದೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಅಥವಾ ಅದರ ಕಾರ್ಯಕಾರಿ ಪ್ರಾಧಿಕಾರಿಯ ಆದೇಶದ ಮೂಲಕ ಅಥವಾ ಅದರ ಮೇರೆಗೆ ಪ್ರದರ್ಶಿಸಿದ ಯಾವುದೇ ನೋಟೀಸನ್ನು ಅಥವಾ ನಿರ್ಮಿಸಿದ ಯಾವುದೇ ಚಿನ್ಹೆ ಅಥವಾ ಗುರುತನ್ನು ತೆಗೆದುಹಾಕಿದರೆ, ನಾಶಪಡಿಸಿದರೆ, ವಿರೂಪಗೊಳಿಸಿದರೆ ಅಥವಾ ಅನ್ಯಥಾ ಅಳಿಸಿ ಹಾಕಿದರೆ, ಅಪರಾಧ ನಿರ್ಣಯವಾದ ಮೇಲೆ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**284. ಮಾಹಿತಿಯನ್ನು ಕೊಡದೆ ಇರುವುದಕ್ಕೆ ಅಥವಾ ಸುಳ್ಳು ಮಾಹಿತಿಯನ್ನು ಕೊಡುವುದಕ್ಕಾಗಿ ದಂಡನೆ.**- ಈ ಅಧಿನಿಯಮದ ಮೂಲಕ ಅಥವಾ ಯಾವುದೇ ನೋಟೀಸು ಅಥವಾ ಅದರ ಅಡಿಯಲ್ಲಿ ಹೊರಡಿಸಿದ ಇತರ ವ್ಯವಹರಣೆಗಳ ಮೂಲಕ ಯಾವುದೇ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಲಾದ ಯಾವನೇ ವ್ಯಕ್ತಿಯು, ಅಂಥ ಮಾಹಿತಿಯನ್ನು ಒದಗಿಸಲು ತಪ್ಪಿದರೆ ಅಥವಾ ಉದ್ದೇಶಪೂರ್ವಕವಾಗಿ ಸುಳ್ಳು ಮಾಹಿತಿಯನ್ನು ಒದಗಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**285. ಸವಾಲು ಕೂಗುವುದರ ನಿಷೇಧ.**- (1) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಯಾವನೇ ಸದಸ್ಯನು ಅಥವಾ ಯಾವನೇ ನೌಕರನು ಅಥವಾ ಈ ಅಧಿನಿಯಮದ ಅಡಿಯಲ್ಲಿ ಚರ ಅಥವಾ ಸ್ಥಿರ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಬೇಕಾಗಿರುವ ಯಾವನೇ ಅಧಿಕಾರಿಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಂಥ ಮಾರಾಟದಲ್ಲಿ ಮಾರಾಟ ಮಾಡುವ ಸ್ವತ್ತಿಗಾಗಿ ಸವಾಲು ಕೂಗತಕ್ಕದ್ದಲ್ಲ ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಆರ್ಜಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು

ಮತ್ತು ಅವನು ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಧಿಕಾರಿ ಅಥವಾ ನೌಕರನಾಗಿದ್ದರೆ ಅವನು ಸೇವೆಯಿಂದ ವಜಾ ಆಗಲು ಸಹ ಗುರಿಯಾಗತಕ್ಕದ್ದು.

**286. ಪಂಚಾಯತಿಗಳ ಸದಸ್ಯರು ಮತ್ತು ಅವುಗಳ ಅಧಿಕಾರಿಗಳು ಮತ್ತು ನೌಕರರಿಗೆ "ಲೋಕ ನೌಕರ" ಎಂಬ ಪದದ ಅನ್ವಯ.**- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನನ್ನು ಮತ್ತು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಧೀನದಲ್ಲಿ ನಿಯೋಜಿತನಾದ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರನನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತ ದಂಡ ಸಂಹಿತೆಯ 21ನೇ ಪ್ರಕರಣ ಮತ್ತು ಭ್ರಷ್ಟಾಚಾರ ನಿವಾರಣಾ ಅಧಿನಿಯಮ, 1988ರ (ಕೇಂದ್ರ ಅಧಿನಿಯಮ 1988ರ 49) ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರನೆಂಬುದಾಗಿ ಭಾವಿಸತಕ್ಕದ್ದು.

**287. ಜುಲ್ಮಾನೆಗಳನ್ನು ಪಂಚಾಯತಿ ನಿಧಿಗೆ ಜಮೆ ಮಾಡತಕ್ಕದ್ದು.**- ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮ, ವಿನಿಯಮಗಳು ಅಥವಾ ಉಪವಿಧಿಯ ಅಡಿಯಲ್ಲಿ ಯಾವುದೇ ಅಪರಾಧಕ್ಕಾಗಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ಅಥವಾ ಅದರ ಪರವಾಗಿ ಹೂಡಿದ ಯಾವುದೇ ಪ್ರಾಸಿಕ್ಯೂಷನ್ನಿನಲ್ಲಿ, ಮ್ಯಾಜಿಸ್ಟ್ರೇಟರು ವಿಧಿಸಿದ ಎಲ್ಲ ಜುಲ್ಮಾನೆಗಳನ್ನು, ಅದರ ನಿಧಿಗೆ ಜಮೆ ಮಾಡತಕ್ಕದ್ದು.

**288. ಪಂಚಾಯತಿಗಳ ಯಾವುದೇ ಸ್ವತ್ತಿಗೆ ಉಂಟಾದ ಹಾನಿ ಮತ್ತು ಅದನ್ನು ತುಂಬಿ ಕೊಡುವ ಬಗೆ.**- ಯಾವನೇ ವ್ಯಕ್ತಿಯು, ಯಾವುದೇ ಕಾರ್ಯನಿರ್ಲಕ್ಷತೆ ಅಥವಾ ಕರ್ತವ್ಯಲೋಪದ ಕಾರಣದಿಂದಾಗಿ ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ವಿಧಿಸಿದ ದಂಡನೆಗೆ ಗುರಿಯಾಗಿದ್ದು ಮತ್ತು ಅಂಥ ವ್ಯಕ್ತಿಯು ಯಾವುದೇ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸ್ವತ್ತಿಗೆ ಹಾನಿ ಉಂಟು ಮಾಡಿದ್ದರೆ ಅವನು ಅಂಥ ಹಾನಿಯನ್ನು ತುಂಬಿಕೊಡಲು ಮತ್ತು ಅಂಥ ದಂಡವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು ಮತ್ತು ಅಂಥ ಹಾನಿಯ ಮೌಲ್ಯವನ್ನು ವಿವಾದದ ಸಂದರ್ಭದಲ್ಲಿ ಮ್ಯಾಜಿಸ್ಟ್ರೇಟರು ನಿರ್ಧರಿಸತಕ್ಕದ್ದು. ಅಂಥ ದಂಡನೆಯನ್ನು ಅನುಭವಿಸಿದ ವ್ಯಕ್ತಿಯು ಅಪರಾಧ ನಿರ್ಣೀತನಾಗತಕ್ಕದ್ದು ಮತ್ತು ತಗಾದೆಯ ಮೇಲೆ ಅಂಥ ಮೌಲ್ಯವನ್ನು ಸಂದಾಯ ಮಾಡದಿದ್ದಾಗ ಅದನ್ನು ಜಪ್ತಿಯ ಮೂಲಕ ಸಂಗ್ರಹಿಸತಕ್ಕದ್ದು ಮತ್ತು ಮ್ಯಾಜಿಸ್ಟೇಟರು ತದನುಸಾರವಾಗಿ ವಾರಂಟನ್ನು ಹೊರಡಿಸತಕ್ಕದ್ದು.

**289. ಪಂಚಾಯತಿಗಳ ವಿರುದ್ಧ ದಾವೆಗಳನ್ನು ಹೂಡುವುದಕ್ಕೆ ಸಂಬಂಧಿಸಿದಂತೆ ನಿರ್ಬಂಧಗಳು.**- (1) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ, ಉಪವಿಧಿ, ವಿನಿಯಮ ಅಥವಾ ಆದೇಶದ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಬಗ್ಗೆ, ಯಾವುದೇ ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಥವಾ ಅದರ ಯಾವನೇ ಅಧಿಕಾರಿಯ ಅಥವಾ ಅದರ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ ಹಾನಿಪರಿಹಾರ ಅಥವಾ ನಷ್ಟಪರಿಹಾರಕ್ಕಾಗಿ ಯಾವುದೇ ದಾವೆಯನ್ನು ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಕಚೇರಿಯಲ್ಲಿ ಅಥವಾ ಅಂಥ ಅಧಿಕಾರಿ ಅಥವಾ ವ್ಯಕ್ತಿಯ ವಾಸ ಸ್ಥಳದಲ್ಲಿ ಬರಹದಲ್ಲಿನ ನೋಟೀಸನ್ನು ಕೊಟ್ಟ ತರುವಾಯದ ಎರಡು ತಿಂಗಳುಗಳು ಮುಕ್ತಾಯವಾಗುವವರೆಗೆ ಹೂಡತಕ್ಕದ್ದಲ್ಲ, ಅಂಥ ನೋಟೀಸು ವ್ಯಾಜ್ಯಕಾರಣ, ಕ್ಲೇಮು ಮಾಡಲಾದ ನಷ್ಟ ಪರಿಹಾರದ ಮೊಬಲಗು, ಯಾವುದಾದರೂ ಇದ್ದರೆ ಅದನ್ನು ಮತ್ತು ಉದ್ದೇಶಿತ ವಾದಿಯ ಹೆಸರು ಮತ್ತು ವಾಸ ಸ್ಥಳವನ್ನು ನಿರೂಪಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ನೋಟೀಸನ್ನು ಕೊಡಲಾಗಿರುವ ಯಾವನೇ ವ್ಯಕ್ತಿಯು, ದಾವೆಯನ್ನು ಹೂಡುವುದಕ್ಕೆ ಮುಂಚೆ ವಾದಿಗೆ ಮೊಬಲಗನ್ನು ನೀಡಿದರೆ ಮತ್ತು ವಾದಿಯು ಹಾಗೆ ನೀಡಿದ ಮೊಬಲಗಿಗಿಂತ ಹೆಚ್ಚಿನದನ್ನು ಅಂಥ ಯಾವುವೇ ಕ್ರಮದಲ್ಲಿ ಪಡೆಯದಿದ್ದರೆ, ಅವನು ಹಾಗೆ ಮೊಬಲಗನ್ನು ನೀಡಿದ ತರುವಾಯ, ವಹಿಸಿದ ಯಾವುವೇ ವೆಚ್ಚಗಳನ್ನು ವಸೂಲು ಮಾಡತಕ್ಕದ್ದಲ್ಲ ಮತ್ತು ಪ್ರತಿವಾದಿಯು ಮೊಬಲಗನ್ನು ನೀಡಿದ ದಿನಾಂಕದಿಂದ ಖರ್ಚುಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(3) ಯಾವುದೇ ದಾವೆಯಲ್ಲಿ ಪ್ರತಿವಾದಿಯು, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸದಸ್ಯ, ಅಧಿಕಾರಿ ಅಥವಾ ನೌಕರನಾಗಿದ್ದರೆ ಅಥವಾ ಅದರ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯಾಗಿದ್ದರೆ, ಸಂದರ್ಭಾನುಸಾರ, ಕಾರ್ಯದರ್ಶಿ, ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ಪ್ರತಿರಕ್ಷೆಯನ್ನು ಕೈಗೊಳ್ಳಬೇಕೇ ಎಂಬುದನ್ನು ಮತ್ತು ಅದರ ನಿಧಿಯಿಂದ ಸಂದಾಯ ಮಾಡತಕ್ಕದ್ದೇ ಎಂಬುದನ್ನು ನಿರ್ಧರಿಸತಕ್ಕದ್ದು.

(4) ಈ ಪ್ರಕರಣದಲ್ಲಿರುವುದು ಯಾವುದೂ, ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ (ಕೇಂದ್ರ ಅಧಿನಿಯಮ 1963ರ 47) 38ನೇ ಪ್ರಕರಣದ ಅಡಿಯಲ್ಲಿ ಹೂಡಲಾದ ಯಾವುದೇ ದಾವೆಗೆ ಅನ್ವಯವಾಗುವುದೆಂದು ಭಾವಿಸತಕ್ಕದ್ದಲ್ಲ.

**290. ಸರ್ಕಾರವು ಲೈಸೆನ್ಸುಗಳು ಮತ್ತು ಅನುಮತಿಗಳನ್ನು ಪಡೆಯಬೇಕಾಗಿಲ್ಲ.**- ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ, ಉಪವಿಧಿ ಅಥವಾ ವಿನಿಯಮದಲ್ಲಿರುವುದಾವುದೂ ಈ ಅಧಿನಿಯಮ ಅಥವಾ ಯಾವುದೇ ಅಂಥ ನಿಯಮ, ಉಪವಿಧಿ ಅಥವಾ ವಿನಿಯಮದ ಅಡಿಯಲ್ಲಿ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸ್ವಾಧೀನಾನುಭವದ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವುದೇ ಸ್ವತ್ತಿನ ಬಗ್ಗೆ ಯಾವುದೇ ಲೈಸೆನ್ಸನ್ನು ತೆಗೆದುಕೊಳ್ಳಬೇಕೆಂದು ಅಥವಾ ಯಾವುದೇ ಅನುಮತಿಯನ್ನು ಪಡೆದುಕೊಳ್ಳಬೇಕೆಂದು ಅಗತ್ಯಪಡಿಸುವುದೆಂದು ಅರ್ಥೈಸತಕ್ಕದ್ದಲ್ಲ.

**291. ಚುನಾವಣಾ ವ್ಯವಹರಣೆಗಳಲ್ಲಿ ನಿರ್ಬಂಧಕಾಜ್ಞೆಗಳನ್ನು ಕೊಡತಕ್ಕದ್ದಲ್ಲ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಚುನಾವಣೆಯನ್ನು ನಡೆಸುವುದಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ತೆಗೆದುಕೊಳ್ಳುವ ಅಥವಾ

ತೆಗೆದುಕೊಳ್ಳಬೇಕಾಗಿರುವಂಥ ಯಾವುದೇ ವ್ಯವಹರಣೆಯನ್ನು ಪ್ರತಿಬಂಧಿಸುವ ಯಾವುದೇ ಖಾಯಂ ಅಥವಾ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೊಡತಕ್ಕದ್ದಲ್ಲ ಅಥವಾ ಯಾವುದೇ ಮಧ್ಯಕಾಲೀನ ಆದೇಶವನ್ನು ಮಾಡತಕ್ಕದ್ದಲ್ಲ.

**292. ಇತರ ಯಾವುದೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿಲ್ಲದ ಆದೇಶಗಳು ಮತ್ತು ನೋಟೀಸುಗಳ ಉಲ್ಲಂಘನೆಗಾಗಿ ದಂಡ.**- ಈ ಅಧಿನಿಯಮದ ಅಡಿಯಲ್ಲಿ ಪ್ರದಾನ ಮಾಡಿದ ಯಾವುದೇ ಅಧಿಕಾರದ ಮೇರೆಗೆ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯಿಂದ ಅಥವಾ ಅದರ ಪರವಾಗಿ ಲಿಖಿತ ನೋಟೀಸಿನ ಮೂಲಕ ಹೊರಡಿಸಿದ ಯಾವುದೇ ಕಾನೂನುಬದ್ಧ ನಿರ್ದೇಶನವನ್ನು ಉಲ್ಲಂಘಿಸುವ ಅಥವಾ ಪಾಲಿಸಲು ತಪ್ಪುವ ಅಥವಾ ಹಾಗೆ ಪ್ರದಾನ ಮಾಡಿದ ಯಾವುದೇ ಅಧಿಕಾರದ ಮೇರೆಗೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ಯಾವ ಷರತ್ತುಗಳಿಗೊಳಪಟ್ಟು ಯಾವುದೇ ಅನುಮತಿಯನ್ನು ಅವನಿಗೆ ಕೊಟ್ಟಿರುವುದೋ ಆ ಷರತ್ತುಗಳನ್ನು ಪಾಲಿಸಲು ತಪ್ಪುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ಮೇಲೆ, ಯಾವುದೇ ಇತರ ಪ್ರಕರಣದ ಮೇರೆಗೆ ಆ ಉಲ್ಲಂಘನೆ ಅಥವಾ ಆ ತಪ್ಪುವಿಕೆಯು ದಂಡನೀಯವಾದ ಅಪರಾಧವಾಗಿರದಿದ್ದರೆ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಸಲ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ, ಸದರಿ ಉಲ್ಲಂಘನೆ ಅಥವಾ ತಪ್ಪುವಿಕೆಯು ಮುಂದುವರಿಯುತ್ತಿರುವಂಥ ಕಾಲದಲ್ಲಿ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಆ ನೋಟೀಸು, ನಿರ್ದಿಷ್ಟ ಕಾರ್ಯವನ್ನು ಒಂದು ಕಾಲದೊಳಗೆ ಮಾಡಬೇಕೆಂದು ನಿಗದಿಪಡಿಸಿರುವಾಗ ಮತ್ತು ಆ ಅಧಿನಿಯಮದಲ್ಲಿ ಯಾವುದೇ ಕಾಲವನ್ನು ನಿರ್ದಿಷ್ಟಪಡಿಸಿಲ್ಲದಿರುವಾಗ ಹಾಗೆ ನಿಗದಿಪಡಿಸಿದ ಕಾಲವು ಯುಕ್ತವಾಗಿದ್ದಿತೇ ಹೇಗೆ ಎಂಬುದನ್ನು ಮ್ಯಾಜಿಸ್ಟ್ರೇಟರು ನಿರ್ಧರಿಸತಕ್ಕದ್ದು.

**293. ಮಾಲೀಕ ಅಥವಾ ಅನುಭವದಾರನು ತಪ್ಪಿದಲ್ಲಿ ಪಂಚಾಯತಿಯು ಕಾಮಗಾರಿಗಳನ್ನು ನಿರ್ವಹಿಸಬಹುದು ಮತ್ತು ವೆಚ್ಚಗಳನ್ನು ವಸೂಲಿ ಮಾಡಬಹುದು.**- (1) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯಾವುದೇ ಕಾಮಗಾರಿಯನ್ನು ಯಾವುದೇ ಕಟ್ಟಡ ಅಥವಾ ಭೂಮಿಯ ಮಾಲೀಕ ಅಥವಾ ಅನುಭವದಾರನು ನಿರ್ವಹಿಸತಕ್ಕದ್ದೆಂದು ಅಗತ್ಯಪಡಿಸಿದಾಗಲೆಲ್ಲಾ ಮತ್ತು ಅಂಥ ಕಾಮಗಾರಿಯನ್ನು ನಿರ್ವಹಿಸಲು ತಪ್ಪಿದಾಗಲೆಲ್ಲಾ ಹಾಗೆ ತಪ್ಪಿದ್ದಕ್ಕಾಗಿ ಯಾವುದೇ ದಂಡನೆಯನ್ನು ಉಪಬಂಧಿಸಿರಲಿ ಅಥವಾ ಇಲ್ಲದಿರಲಿ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಅಂಥ ಕಾಮಗಾರಿಯನ್ನು ನಿರ್ವಹಿಸುವಂತೆ ಮಾಡತಕ್ಕದ್ದು ಮತ್ತು ಅದರಿಂದಾಗಿ ವಹಿಸಲಾದ ವೆಚ್ಚಗಳನ್ನು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು ಅಂಥ ಕಾಮಗಾರಿಯನ್ನು ನಿರ್ವಹಿಸಬೇಕಾಗಿದ್ದಂಥ ವ್ಯಕ್ತಿಯು ಅದಕ್ಕೆ ಸಂದಾಯ ಮಾಡತಕ್ಕದ್ದು ಮತ್ತು XIIIನೇ ಅಧ್ಯಾಯದ ಅಡಿಯಲ್ಲಿ, ವಸೂಲುಮಾಡಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂತೆ, ಅದೇ ರೀತಿಯಲ್ಲಿ, ಸಂಬಂಧಪಟ್ಟ ಪಂಚಾಯತಿಯು ಸೂಕ್ತವೆಂದು ಭಾವಿಸಬಹುದಾದಂತೆ ಒಂದೇ ಮೊತ್ತದಲ್ಲಿ ಅಥವಾ ಕಂತುಗಳ ಮೂಲಕ ವಸೂಲು ಮಾಡತಕ್ಕದ್ದು.

(2) ತಪ್ಪಿತಸ್ಥನು, ಆ ಕಟ್ಟಡ ಅಥವಾ ಭೂಮಿಯ ಮಾಲೀಕನಾಗಿದ್ದರೆ ಸಂಬಂಧಪಟ್ಟ ಪಂಚಾಯತಿಯು, ಅಂಥ ಮಾಲೀಕನ ವಿರುದ್ಧ ದಾವೆ ಅಥವಾ ವ್ಯವಹರಣೆಯನ್ನು ಹೂಡಿದ್ದಿರಲಿ ಅಥವಾ ಇಲ್ಲದಿರಲಿ, ಹೆಚ್ಚಿನ ಪರಿಹಾರೋಪಾಯದ ರೂಪದಲ್ಲಿ, (3)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ತತ್ಕಾಲದಲ್ಲಿ ಮಾಲೀಕನು ಸಂದಾಯ ಮಾಡಬೇಕಾದ ಎಲ್ಲ ವೆಚ್ಚವನ್ನು ಅಥವಾ ಅದರ ಯಾವುದೇ ಭಾಗವನ್ನು ಅಂಥ ಮಾಲೀಕನ ಅಧೀನದಲ್ಲಿ ಆ ಕಟ್ಟಡ ಅಥವಾ ಭೂಮಿಯನ್ನು ಆಗ ಅಥವಾ ಆ ತರುವಾಯ ಯಾವುದೇ ಕಾಲದಲ್ಲಿ ಅನುಭವಕ್ಕೆ ತೆಗೆದುಕೊಳ್ಳುವ ವ್ಯಕ್ತಿಯು ಸಂದಾಯ ಮಾಡಬೇಕೆಂದು ಅಗತ್ಯಪಡಿಸಬಹುದು ಮತ್ತು ತಗಾದೆಯ ಮೇಲೆ ಅಂಥ ಅನುಭವದಾರನು ಅದನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಅದನ್ನು ಅಂಥ ಅನುಭವದಾರನಿಂದ ಸಂಗ್ರಹಿಸತಕ್ಕದ್ದು ಮತ್ತು ಹಾಗೆ ಸಂಗ್ರಹಿಸಬಹುದಾದ ಪ್ರತಿಯೊಂದು ಮೊಬಲಗು XIIIನೇ ಅಧ್ಯಾಯದ ಮೇರೆಗೆ ವಸೂಲಿಯಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂತೆ ಅದೇ ರೀತಿಯಲ್ಲಿ ವಸೂಲುಮಾಡತಕ್ಕದ್ದು. ಪ್ರತಿಯೊಬ್ಬ ಅಂಥ ಅನುಭವದಾರನು, ಅವನ ಭೂ ಮಾಲೀಕನಿಗೆ ಅವನು ಸಂದಾಯ ಮಾಡಬೇಕಾದ ಬಾಡಿಗೆಯಿಂದ ಅಂಥ ಯಾವುವೇ ವೆಚ್ಚಗಳಿಗೆ ಸಂಬಂಧಿಸಿದಂತೆ ಅಂಥ ಅನುಭವದಾರನು ಹಾಗೆ ಸಂದಾಯ ಮಾಡಿದ ಮತ್ತು ಅವನಿಂದ ವಸೂಲ್ಮಾಡಿರುವಷ್ಟರಮಟ್ಟಿಗೆ, ಕಳೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(3) ಯಾವುದೇ ಕಟ್ಟಡದ ಅಥವಾ ಭೂಮಿಯ ಯಾವನೇ ಅನುಭವದಾರನು ಅದರ ಬಗ್ಗೆ ಮಾಲೀಕನಿಗೆ ವಿಧಿಸಿದ ಯಾವುವೇ ವೆಚ್ಚಗಳಿಗೆ ಸಂಬಂಧಿಸಿದಂತೆ, ಅವನಿಗೆ ತಗಾದೆ ಮಾಡಿದ ಕಾಲದಲ್ಲಿ ಸಂದಾಯಮಾಡಬೇಕಾದ ಅಥವಾ ಅವನ ಭೂ ಮಾಲೀಕನಿಗೆ ಅದನ್ನು ಸಂದಾಯ ಮಾಡದಿರಲು ಅಂಥ ತಗಾದೆಯನ್ನು ಮಾಡಿದ ಮತ್ತು ನೋಟೀಸನ್ನು ಕೊಟ್ಟ ತರುವಾಯ ಯಾವುದೇ ಕಾಲದಲ್ಲಿ ಒದಗಿಬಂದಿರುವಂಥ ಮತ್ತು ಅಂಥ ಅನುಭವದಾರನು ಸಂದಾಯ ಮಾಡಬೇಕಾದಂಥ ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವ ಕಟ್ಟಡ ಅಥವಾ ಭೂಮಿಗೆ ಸಂಬಂಧಿಸಿದಂತೆ ವೆಚ್ಚಗಳನ್ನು ಸಂದಾಯ ಮಾಡಬೇಕಾಗಿದೆಯೋ ಆ ಕಟ್ಟಡ ಅಥವಾ ಭೂಮಿಗಾಗಿ ಅಂಥ ಅನುಭವದಾರನಿಂದ ಬಾಕಿಯಾಗಿರುವಂಥ ಬಾಡಿಗೆಯ ಮೊಬಲಗಿಗಿಂತ ಹೆಚ್ಚಿನ ಹಣವನ್ನು, ಆ ಉದ್ದೇಶಕ್ಕಾಗಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು, ಅವನಿಗೆ ಮಾಡಿಕೊಂಡ ಅರ್ಜಿಯ ಮೇಲೆ ಅವನ ಬಾಡಿಗೆಯ ಮೊಬಲಗನ್ನು ಮತ್ತು ಯಾವ ವ್ಯಕ್ತಿಗೆ ಬಾಡಿಗೆಯನ್ನು ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಸತ್ಯವಾಗಿ ಬಹಿರಂಗಪಡಿಸಲು ಅವನು ನಿರ್ಲಕ್ಷಿಸಿದ, ಅಥವಾ ನಿರಾಕರಿಸಿದ ಹೊರತು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದಲ್ಲ ಮತ್ತು ಅಂಥ ಅನುಭವದಾರನಿಂದ ತಗಾದೆ ಮಾಡಿದ ಮೊತ್ತವು ಅಂಥ ತಗಾದೆಯ ಕಾಲದಲ್ಲಿ ಅವನಿಂದ ಬಾಕಿಯಾಗಿದ್ದಂಥ ಬಾಡಿಗೆ ಅಥವಾ ತರುವಾಯ ಒದಗಿ ಬಂದಿರುವುದಕ್ಕಿಂತ ಹೆಚ್ಚಾಗಿದೆಯೆಂದು ರುಜುವಾತುಪಡಿಸುವ ಭಾರವು ಅಂಥ ಅನುಭವದಾರನ ಮೇಲೆ ಇರತಕ್ಕದ್ದು:

ಪರಂತು, ಇದರಲ್ಲಿ ಒಳಗೊಂಡಿರುವುದು ಯಾವುದೂ ಹಿಂದೆ ಹೇಳಿದಂತೆ ಯಾವುವೇ ಅಂಥ ಕಾಮಗಾರಿಗಳ ವೆಚ್ಚಗಳ ಸಂದಾಯದ ಸಂಬಂಧದಲ್ಲಿ ಯಾವನೇ ಅಂಥ ಅನುಭವದಾರನ ಮತ್ತು ಮಾಲೀಕನ ನಡುವೆ ಮಾಡಿಕೊಳ್ಳಲಾದ ಯಾವುದೇ ವಿಶೇಷ ಕರಾರಿಗೆ ಭಾದಕವನ್ನುಂಟು ಮಾಡುತ್ತದೆ ಎಂದು ಭಾವಿಸತಕ್ಕದ್ದಲ್ಲ.

**294. ಖರ್ಚು ಅಥವಾ ವೆಚ್ಚಗಳನ್ನು ನಿರ್ಧರಿಸುವ ಮತ್ತು ವಸೂಲು ಮಾಡುವ ಬಗೆ.**– ಈ ಅಧ್ಯಾಯದ ಮೂಲಕ ಸಂದಾಯ ಮಾಡಬೇಕೆಂದು ನಿರ್ದೇಶಿಸಲಾದಂಥ ಯಾವುವೇ ವೆಚ್ಚಗಳು ಅಥವಾ ಖರ್ಚುಗಳಿಗೆ ಸಂಬಂಧಿಸಿದಂತೆ ವಿವಾದವು ಉದ್ಭವಿಸಿದರೆ, ಆ ಮೊಬಲಗನ್ನು ಮತ್ತು ಅವಶ್ಯವಿದ್ದರೆ ಅದರ ಹಂಚುವಿಕೆಯನ್ನು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವ ಹೊರತು, ಸಂಬಂಧಪಟ್ಟ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು ಮತ್ತು ಅದು XIIIನೇ ಅದ್ಯಾಯದ ಅಡಿಯಲ್ಲಿ ವಸೂಲು ಮಾಡಬಹುದಾದ ಯಾವುದೇ ತೆರಿಗೆ ಬಗ್ಗೆ ಕ್ಲೇಮು ಮಾಡಲಾದ ಮೊಬಲಗಿನಂತೆ ಅದೇ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

**295. ದಾವೆಗಳ ಪ್ರತಿಷೇಧ ಇತ್ಯಾದಿ.**– (1) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಅಥವಾ ವಿಧಿಸಿದ ಯಾವುದೇ ನಿರ್ಧರಣೆ, ತಗಾದೆ ಅಥವಾ ಋಣಭಾರಕ್ಕೆ ಆಕ್ಷೇಪಿಸುವ ಅಥವಾ ಈ ಅಧಿನಿಯಮದ ಅಧಿಕಾರದ ಮೇರೆಗೆ ಸಂಗ್ರಹಿಸಿದ ಹಣದ ಯಾವುದೇ ಮೊತ್ತದ ವಸೂಲಿಗಾಗಿ ಅಥವಾ ಸದರಿ ಅಧಿಕಾರದ ಮೇರೆಗೆ, ಹಣದ ಯಾವುದೇ ನಿರ್ಧರಣೆ ಅಥವಾ ಸಂಗ್ರಹಣೆಯ ಬಗ್ಗೆ ಹಾನಿಪರಿಹಾರದ ದಾವೆಯನ್ನು, ಈ ಅಧಿನಿಯಮದ ಉಪಬಂಧಗಳನ್ನು ವಸ್ತುಶಃ ಮತ್ತು ಕಾರ್ಯತಃ ಪಾಲಿಸಲಾಗಿದ್ದರೆ, ಯಾವುದೇ ಸಿವಿಲ್ ನ್ಯಾಯಾಲಯವು ಪುರಸ್ಕರಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ವಿನಿಯಮ, ಉಪವಿಧಿ ಅಥವಾ ಆದೇಶದ ಅಡಿಯಲ್ಲಿ ಕಾನೂನುಬದ್ಧವಾಗಿ ಅಥವಾ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಕಾರ್ಯದರ್ಶಿ ಅಥವಾ ಸರ್ಕಾರದ ಇತರ ಯಾವನೇ ಅಧಿಕಾರಿಯ ಅಥವಾ ಗ್ರಾಮ ಪಂಚಾಯತಿಯ ಅಥವಾ ತಾಲ್ಲೂಕು ಪಂಚಾಯತಿಯ ಅಥವಾ ಜಿಲ್ಲಾ ಪಂಚಾಯತಿಯ ಅಥವಾ ಅಂಥ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ಸದಸ್ಯ, ಅಧಿಕಾರಿ, ನೌಕರ ಅಥವಾ ಏಜಂಟನ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(3) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ವಿನಿಯಮ ಅಥವಾ ಉಪವಿಧಿಯ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**296. ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ.**– ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ವಿನಿಯಮ ಅಥವಾ ಉಪವಿಧಿಯ ಅಡಿಯಲ್ಲಿ ಯಾವುದೇ ಪ್ರಾಸಿಕ್ಯೂಷನನ್ನು, ಅದರಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ಯಾವನೇ ಮ್ಯಾಜಿಸ್ಟೇಟರ ಮುಂದೆ ಹೂಡಬಹುದು ಮತ್ತು ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ, ವಿನಿಯಮ ಅಥವಾ ಉಪ ವಿಧಿಯ ಮೇರೆಗೆ ಅಥವಾ ಅವುಗಳಿಂದಾಗಿ ವಿಧಿಸಿದ ಪ್ರತಿಯೊಂದು ಜುಲ್ಮಾನೆ ಅಥವಾ ದಂಡವನ್ನು ಮತ್ತು ಯಾವುದರ ವಸೂಲಿಗಾಗಿ ಈ ಅಧಿನಿಯಮದಲ್ಲಿ ಅನ್ಯಥಾ ವಿಶೇಷ ವ್ಯವಸ್ಥೆಯನ್ನು ಮಾಡಿಲ್ಲವೋ ಆ ನಷ್ಟ ಪರಿಹಾರ ಅಥವಾ ಇತರ ವೆಚ್ಚಗಳ ಎಲ್ಲಾ ಕ್ಲೇಮುಗಳನ್ನೂ ಸಹ, ಅಂಥ ಮ್ಯಾಜಿಸ್ಟ್ರೇಟರಿಗೆ, ಅರ್ಜಿಯನ್ನು ಸಲ್ಲಿಸಿದ ಮೇಲೆ, ಯಾರಿಂದ ಹಣವನ್ನು ಕ್ಲೇಮು ಮಾಡಲಾಗಿದೆಯೋ ಆ ವ್ಯಕ್ತಿಗೆ ಸೇರಿದ, ತನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗಿನ ಯಾವುದೇ ಚರ ಸ್ವತ್ತಿನ ಜಫ್ತಿ ಮತ್ತು ಮಾರಾಟದ ಮೂಲಕ ವಸೂಲು ಮಾಡಬಹುದು.

[2][[1][**296ಎ. ಕುಂದು ಕೊರತೆ ನಿವಾರಣಾ ಪ್ರಾಧಿಕಾರ.**– (1) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಅಥವಾ ವಿಶೇಷ ಡೆಪ್ಯೂಟಿ ಕಮೀಷನರ್ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ [3][ನಿವೃತ್ತ][3] ಅಧಿಕಾರಿಯನ್ನು ಒಳಗೊಂಡ ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯನ್ನಾಗಿ ನೇಮಿಸತಕ್ಕದ್ದು.

(2) ರಾಜ್ಯ ಸರ್ಕಾರವು ಕುಂದುಕೊರತೆ ನಿವಾರಣಾ ಪ್ರಾಧಿಕಾರಿಗೆ ಅವಶ್ಯಕ ಸಿಬ್ಬಂದಿಯನ್ನು ಒದಗಿಸತಕ್ಕದ್ದು.

(3) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಕಛೇರಿಯು ವಾರದ ಎಲ್ಲಾ ಕೆಲಸದ ದಿನಗಳಂದು ಪಂಚಾಯತ್‌ನ ವ್ಯವಹಾರ ವೇಳೆಗಳಲ್ಲಿ ತೆರೆದಿರತಕ್ಕದ್ದು.

(4) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಸಂಬಳ ಮತ್ತು ಇತರ ಭತ್ಯೆಗಳು, ಆತನ ನಿವೃತ್ತಿ ಮುಂಚೆ ಅತನು ಅರ್ಹನಾದುದಕ್ಕೆ ನಿವೃತ್ತಿ ವೇತನವನ್ನು ಕಳೆದು, ಆಗಿರತಕ್ಕದ್ದು.

(5) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ಅವಧಿಯೊಳಗೆ ಬಾಧಿತ ನಾಗರಿಕರಿಗೆ ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ನಿರ್ಧಾರವನ್ನು ತಿಳಿಸತಕ್ಕದ್ದು.

(6) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು, ಜಿಲ್ಲಾ ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯ ನಿರ್ಧಾರವನ್ನು ತಿಳಿಸುವುದಕ್ಕಾಗಿ ನಿಯಮಿಸಲಾದ ಅವಧಿಯ ಮುಕ್ತಾಯವಾದ ತರುವಾಯ ತಕ್ಷಣವೇ, ದೂರುದಾರರ ವಿವರಗಳು ದೂರಿನ ಸ್ವರೂಪ ಮತ್ತು ಪರಿಹಾರ ನೀಡದಿರುವುದಕ್ಕೆ ಕಾರಣಗಳೊಂದಿಗೆ ಪರಿಹಾರ ನೀಡದ ಪ್ರತಿಯೊಂದು ದೂರನ್ನು,–

(i) ಗ್ರಾಮ ಪಂಚಾಯತಿ ಮತ್ತು ತಾಲೂಕು ಪಂಚಾಯಿತಿಯ ಸಂದರ್ಭದಲ್ಲಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ; ಮತ್ತು

(ii) ಜಿಲ್ಲಾ ಪಂಚಾಯಿತಿಯ ಸಂದರ್ಭದಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

– ಇವರಿಗೆ ಅವಶ್ಯಕ ಕ್ರಮಕ್ಕಾಗಿ ವರದಿ ಮಾಡತಕ್ಕದ್ದು.

(7) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು, ಯಾವುದೇ ದೂರನ್ನು ನಿರ್ಧರಿಸುವ ಸಮಯದಲ್ಲಿ ಸಂಬಂಧಪಟ್ಟ ಅಧಿಕಾರಿ ಅಥವಾ ಅಧಿಕಾರಿಗಳ ಅಥವಾ ಯಾವುದೇ ಇತರ ವ್ಯಕ್ತಿಯು, ಯಾವುದೇ ಯುಕ್ತ ಕಾರಣವಿಲ್ಲದೆ, ಈ ಅಧಿನಿಯಮದ ಅಡಿಯಲ್ಲಿ ಆತನು ನಿರ್ವಹಿಸಬೇಕಾದ ಆತನ ಕರ್ತವ್ಯಗಳನ್ನು ಬೇಕಾಗಿಯೇ ಕಡೆಗಣಿಸಿರುವವನು ಅಥವಾ ನಿರಾಕರಿಸಿರುವವನೆಂದು ಅಥವಾ ವಿಫಲನಾಗಿರುವವನು ಅಥವಾ ನಿಗದಿತ ಸಮಯದೊಳಗೆ ನೀಡಬೇಕಾದ ಸೇವೆಯನ್ನು ವಿಸ್ತರಿಸುವುದಕ್ಕೆ ದುರ್ಭಾವನೆಯಿಂದ ಅಲ್ಲಗಳೆದಿದ್ದಾನೆಂದು ಅಭಿಪ್ರಾಯಪಟ್ಟಲ್ಲಿ, ಅಂಥ ಅಧಿಕಾರಿಯನ್ನು ಅಥವಾ ವ್ಯಕ್ತಿಯನ್ನು ಕುಂದು ಕೊರತೆ ಪರಿಹಾರವಾಗುವವರೆಗೆ ಪ್ರತಿ ದಿನಕ್ಕೆ ಎರಡು ನೂರ ಐವತ್ತು ರೂಪಾಯಿಗಳ ದಂಡಕ್ಕೆ ಒಳಪಡಿಸತಕ್ಕದ್ದು. ಆದಾಗ್ಯೂ ಅಂಥ ದಂಡದ ಒಟ್ಟು ಮೊತ್ತವು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ. ಕುಂದುಕೊರತೆ ಪ್ರಾಧಿಕಾರವು ದಂಡದ ಸ್ಥಾನದಲ್ಲಿ ಸಂಬಂಧಪಟ್ಟ ಅಧಿಕಾರಿ ಅಥವಾ ವ್ಯಕ್ತಿಯ ವಿರುದ್ದ ಸೇವಾ ನಿಯಮಗಳ ಅಥವಾ ಆತನಿಗೆ ಅನ್ವಯವಾಗುವ ಸಂಬಂಧಿಸಿದ ಕಾನೂನಿನ ಅಡಿಯಲ್ಲಿ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವಂತೆ ಶಿಫಾರಸು ಮಾಡಬಹುದು:

ಪರಂತು, ಸಂಬಂಧಪಟ್ಟ ಅಧಿಕಾರಿ ಅಥವಾ ವ್ಯಕ್ತಿಗೆ ಆತನ ಮೇಲೆ ಯಾವುದೇ ದಂಡವನ್ನು ವಿಧಿಸುವ ಪೂರ್ವದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು:

ಮತ್ತು ಪರಂತು, ಆತನು ಯುಕ್ತವಾಗಿ ಮತ್ತು ಶ್ರದ್ಧಾಪೂರ್ವಕವಾಗಿ (diligently) ಹಾಗೇ ಮಾಡಿದ್ದಾನೆಂದು ರುಜುವಾತು ಪಡಿಸುವ ಹೊಣೆಯು ನೀಡಬೇಕಾದ ಸೇವೆಯನ್ನು ನೀಡಲು ನಿರಾಕರಣೆ ಮಾಡಿರುವ ಅಧಿಕಾರಿ ಅಥವಾ ವ್ಯಕ್ತಿಯದ್ದಾಗಿರತಕ್ಕದ್ದು.

**ವಿವರಣೆ**: ಈ ಪ್ರಕರಣದ ಉದ್ದೇಶಕ್ಕಾಗಿ:–

(ಎ) **"ಬಾಧಿತ ವ್ಯಕ್ತಿ"** ಎಂದರೆ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಆತನು ಅನುಭವಿಸಬೇಕಾದ ಸೇವೆಯನ್ನು ನೀಡುವಲ್ಲಿ ಗ್ರಾಮ ಪಂಚಾಯಿತಿ, ತಾಲೂಕ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಯಾವುದನ್ನಾದರೂ ಮಾಡಬೇಕಾದ್ದರಿಂದ ಅಥವಾ ಬಿಟ್ಟು ಬಿಡುವುದರಿಂದ ಬಾಧಿತನಾದ ಒಬ್ಬ ನಾಗರಿಕ ಮತ್ತು ಪಂಚಾಯಿತಿನ ಮೂಲಕ ಸರ್ಕಾರವು ನೀಡುವ ಯಾವುದೇ ಸ್ಕೀಮಿನ ಪ್ರಯೋಜನವನ್ನು ಕೋರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ ;

(ಬಿ) **"ಕುಂದು ಕೊರತೆ"** ಎಂದರೆ :–

(i) ನೀರು ಸರಬರಾಜು ;

(ii) ಆರೋಗ್ಯ ನಿರ್ವಹಣೆ ;

(iii) ರಸ್ತೆ ನಿರ್ವಹಣೆ ;

(iv) ಬೀದಿ ದೀಪಗಳ ನಿರ್ವಹಣೆ ;

(v) ಯಾವುದೇ ಸ್ಕೀಮ್ ಅಥವಾ ಯೋಜನೆಯ ಫಲಾನುಭವಿಗಳನ್ನು ಗುರುತಿಸುವುದು;

(vi) ಯಾವುದೇ ಸ್ಕೀಮಿನ ಅಥವಾ ಯೋಜನೆಯ ಪ್ರಯೋಜನದ ಹಂಚಿಕೆ;

(vii) ನೈರ್ಮಲೀಕರಣ ನಿರ್ವಹಣೆ ;

(viii) ಯಾವುದೇ ದಸ್ತಾವೇಜುಗಳು ಅಥವಾ ಪ್ರಮಾಣಪತ್ರವನ್ನು ಮಂಜೂರು ಮಾಡುವುದು ಅಥವಾ ಹೊರಡಿಸುವುದು

(ix) ನಿಯಮಿಸಬಹುದಾದ ಯಾವುದೇ ಇತರ ವಿಷಯ,–

– ಇವುಗಳ ಸಂಬಂಧದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ತೆಗೆದುಕೊಳ್ಳುವ ಕ್ರಿಯೆಯನ್ನು ಮಾಡುವುದರಿಂದ ಅಥವಾ ಬಿಟ್ಟುಬಿಡುವುದರ ಕುರಿತು ಬಾಧಿತ ನಾಗರಿಕನು ನೀಡುವ ಯಾವುದೇ ದೂರನ್ನು ಇದು ಒಳಗೊಳ್ಳುತ್ತದೆ.][1]][2]

1. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.
3. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ 11.07.2017ರಿಂದ ಸೇರಿಸಲಾಗಿದೆ

[2][[1][**296ಬಿ. ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಅಧಿಕಾರಗಳು ಮತ್ತು ಕರ್ತವ್ಯಗಳು.– (1)** ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ;–

(ಎ) ಬಾಧಿತ ವ್ಯಕ್ತಿಯ ಕುಂದು ಕೊರತೆಯನ್ನು ಪರಿಹರಿಸುವುದಕ್ಕೆ ಆತನು ಅವಶ್ಯವೆಂದು ಭಾವಿಸುವ ಯಾವುದೇ ದಸ್ತಾವೇಜನ್ನು ಕೇಳಬಹುದು ಮತ್ತು ಪರಿಶೀಲಿಸಬಹುದು.

(ಬಿ) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಾಗಿ, ಈ ಮುಂದಿನ ವಿಷಯಗಳ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ, ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದಂಥದೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಯಾವುದೇ ವ್ಯಕ್ತಿಯ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಒತ್ತಾಯಪಡಿಸುವುದು ಹಾಗೂ ಪ್ರಮಾಣದ ಮೇಲೆ ಆತನನ್ನು ಪರೀಕ್ಷಿಸುವುದು;

(ii) ಸಾಕ್ಷ್ಯವಾಗಿ ನೀಡುವ ಯಾವುದೇ ದಸ್ತಾವೇಜು ಅಥವಾ ಇತರ ಭೌತಿಕ ವಸ್ತುವನ್ನು ಹುಡುಕುವುದು ಮತ್ತು ಒದಗಿಸುವುದು;

(iii) ಅಫಿಡವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(iv) ಯಾವುದೇ ಸಾರ್ವಜನಿಕ ದಾಖಲೆಗಳನ್ನು ಅಗತ್ಯಪಡಿಸುವುದು;

(v) ಸಾಕ್ಷಿಗಳ ಪರೀಕ್ಷೆಗಾಗಿ ಕಮೀಷನ್ ಗಳನ್ನು ಹೊರಡಿಸುವುದು;

(vi) ತನ್ನ ನಿರ್ಧಾರಗಳು, ನಿರ್ದೇಶನಗಳು ಮತ್ತು ಆದೇಶಗಳನ್ನು ಪುನರಾವಲೋಕಿಸುವುದು;

(vii) ನಿಯಮಿಸಬಹುದಾದ ಅಂಥ ಇತರ ವಿಷಯ.

(2) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ಅರೆ ನ್ಯಾಯಿಕ ಪ್ರಾಧಿಕಾರವಾಗಿದ್ದು ತನ್ನ ಮುಂದಿನ ವಿಷಯಗಳನ್ನು ಕ್ಷಿಪ್ರವಾಗಿ (summarily) ವಿಲೇ ಮಾಡತಕ್ಕದ್ದು.

(3) ಒಂದು ಕಛೇರಿ ಅಥವಾ ಅಧಿಕಾರಿ ಅಥವಾ ಸಿಬ್ಬಂದಿಯ ನ್ಯೂನತೆ ನಿರ್ಲಕ್ಷ್ಯ ಅಥವಾ ದುಷ್ಕೃತ್ಯದ ಪರಿಣಾಮವಾಗಿ ಆಗಿರುವ ಕುಂದು ಕೊರತೆಯನ್ನು ಅಥವಾ ನಿರ್ದಿಷ್ಟ ಅಕ್ರಮಗಳು ಅಥವಾ ಫಲಾನುಭವಕ್ಕೆ ಪರಿಣಾಮ ಉಂಟು ಮಾಡುವ ಭೌತಿಕ ಪ್ರಯೋಜನ ಅಥವಾ ಬೇಧ-ಭಾವವನ್ನು ಸೂಚಿಸುವ ನಿರ್ದಿಷ್ಟ ಪ್ರಕರಣವನ್ನು ಹೊರತುಪಡಿಸಿ ಬಾಧಿತ ನಾಗರಿಕನ ಯಾವುದೇ ದೂರನ್ನು ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

(4) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ಈ ಮುಂದಿನದನ್ನು ಖಚಿತಪಡಿಸಿಕೊಳ್ಳತಕ್ಕದ್ದು, ಎಂದರೆ:-

(ಎ) ದೂರನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳು ಮೀರದ ಸಮಯದ ಚೌಕಟ್ಟಿನಲ್ಲಿ ತೊಂದರೆಯನ್ನು ಪರಿಹರಿಸಲಾಗಿದೆ ; ಅಥವಾ

(ಬಿ) ತೊಂದರೆಯು ಆಗಿರುವ ಕಾರಣವನ್ನು ಗುರುತಿಸುವುದು ಮತ್ತು ತಪ್ಪಿತಸ್ಥ ಅಧಿಕಾರಿ ಅಥವಾ ವ್ಯಕ್ತಿಗಳಿಗೆ ಜವಾಬ್ದಾರಿಯನ್ನು ಹೊರಿಸುವುದು ಮತ್ತು (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ತರುವಾಯ ಒಂದು ತಿಂಗಳೊಳಗೆ ಕುಂದುಕೊರತೆಯನ್ನು ಸಮಾಧಾನಕರವಾಗಿ ಪರಿಹರಿಸಲಾಗಿದೆ ; ಅಥವಾ

(ಸಿ) ಅಧಿಕಾರಿ ಅಥವಾ ವ್ಯಕ್ತಿಯ ಅಸಮರ್ಥತೆ, ನಿರ್ಲಕ್ಷ್ಯ ಅಥವಾ ದುಷ್ಕೃತ್ಯದ ಪರಿಣಾಮವಾಗಿ ತೊಂದರೆಯಾಗಿದ್ದಲ್ಲಿ ಕ್ರಮವನ್ನು ನಡತೆ ನಿಯಮಗಳು ಮತ್ತು ಇಲಾಖಾ ಪ್ರಕ್ರಿಯೆಗಳ ಅನುಸಾರವಾಗಿ ನಡೆಸಲಾಗಿದೆ ; ಅಥವಾ

(ಡಿ) ಸರಕುಗಳ ಮತ್ತು ಸೇವೆಗಳನ್ನು ನೀಡಲು ಜವಾಬ್ದಾರನಾದ ವ್ಯಕ್ತಿಯು ಬೇಕಾಗಿಯೇ ಸರಕು ಅಥವಾ ಸೇವೆಯನ್ನು ಒದಗಿಸಲು ನಿರ್ಲಕ್ಷಿಸಿರುವ ಅಥವಾ ಭ್ರಷ್ಟಾಚಾರ ತಡೆಗಟ್ಟುವ ಅಧಿನಿಯಮ 1988 ರ ಅಡಿಯಲ್ಲಿ ಪ್ರಕರಣದ ಮೇಲ್ನೋಟದಲ್ಲೇ ಆಧಾರಗಳು ಇದ್ದಾಗ ಆ ಮಟ್ಟಿಗೆ ವಿಧಿಸಬೇಕಾದ ದಂಡದ ಶಿಫಾರಸ್ಸಿನೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಸಂದರ್ಭಾನುಸಾರವಾಗಿ ಸರ್ಕಾರದ ಕಾರ್ಯದರ್ಶಿಗೆ ಆತನು ಅವಲೋಕನೆಯನ್ನು ಮಾಡುವುದು.

(5) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ತನ್ನ ಕರ್ತವ್ಯಗಳ ಕ್ರಮಬದ್ಧ ನಿರ್ವಹಣೆಗಾಗಿ ಅಗತ್ಯವಾದ ಯಾವುದೇ ಇತರ ಅಧಿಕಾರಿಯ ನೆರವನ್ನು ಕೋರಬಹುದು ಅಥವಾ ಬಾಧಿತ ನಾಗರಿಕನು ಮಾಡಿದ ದೂರಿನ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಯಾವುದೇ ಇತರ ಅಧಿಕಾರಿಗೆ ನಿರ್ದೇಶಿಸಬಹುದು.

(6) (5)ನೇ ಉಪಪ್ರಕರಣದ ಅಡಿಯಲ್ಲಿ ನೆರವನ್ನು ಕೋರಲಾದ ಯಾವೊಬ್ಬ ಅಧಿಕಾರಿಯು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ಎಲ್ಲಾ ನೆರವನ್ನು ನೀಡತಕ್ಕದ್ದು.][1]][2]

1. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[2][[1][**296ಸಿ. ಅಪೀಲು.-** (1) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ನಿರ್ಧಾರದಿಂದ ಬಾಧಿತನಾದ ಅಥವಾ ಆತನು ದಾಖಲ್ಮಾಡಿದ ದೂರಿನ ಸಂಬಂಧದಲ್ಲಿ ತೆಗೆದುಕೊಂಡ ಕ್ರಮದ ವರದಿಯನ್ನು ಸ್ವೀಕರಿಸಿದ ಯಾವೊಬ್ಬ ವ್ಯಕ್ತಿಯು, ಅಂಥ ತೀರ್ಮಾನದ ಸ್ವೀಕೃತಿಯ ಮುಕ್ತಾಯದಿಂದ ಮೂವತ್ತು ದಿನಗಳ ಒಳಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಸಂದರ್ಭಕ್ಕನುಸಾರವಾಗಿ ಸರ್ಕಾರದ ಕಾರ್ಯದರ್ಶಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲು ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು :

ಪರಂತು ಅಪೀಲು ಪ್ರಾಧಿಕಾರವು, ಒಂದು ವೇಳೆ ದೂರುದಾರನು ಸಮಯದೊಳಗೆ ಅಪೀಲನ್ನು ದಾಖಲು ಮಾಡದೇ ಇರಲು ಸಾಕಷ್ಟು ಕಾರಣಗಳು ದೂರುದಾರರನ್ನು ನಿರ್ಬಂಧಿಸಿದೆ ಎಂದು ಮನಗಂಡರೆ, ಮೂವತ್ತು ದಿನಗಳ ತರುವಾಯವೂ ಅಪೀಲನ್ನು ಸ್ವೀಕರಿಸಬಹುದು

(2) ಪ್ರತಿಯೊಂದು ಅಪೀಲನ್ನು ಅಂಥ ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ವಿಲೆ ಮಾಡತಕ್ಕದ್ದು.

(3) ಅಪೀಲು ಪ್ರಾಧಿಕಾರವು, ತಾನು ತೆಗೆದುಕೊಂಡ ತೀರ್ಮಾನಗಳ ದಿನಾಂಕದಿಂದ ಹದಿನೈದು ಕೆಲಸದ ದಿನಗಳ ಅವಧಿಯೊಳಗೆ ಸಂಬಂಧಪಟ್ಟ ಪಕ್ಷಕಾರರಿಗೆ ತೀರ್ಮಾನಗಳ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡತಕ್ಕದ್ದು][1]][2]

1. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[2][[1][**296ಡಿ. ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಪದಾವಧಿ.-** ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯು ಆತನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಗಾಗಿ ಅಥವಾ ಆತನಿಗೆ ಅರವತ್ತೈದು ವರ್ಷಗಳಾಗುವವರೆಗೂ ಇದರಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಪದವನ್ನು ಹೊಂದತಕ್ಕದ್ದು ಮತ್ತು ಮರು ನೇಮಕಕ್ಕಾಗಿ ಅರ್ಹನಾಗತಕ್ಕದ್ದಲ್ಲ][1]][2]

1. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[2][[1][**296ಇ. ರಾಜೀನಾಮೆ ಮತ್ತು ತೆಗೆದುಹಾಕುವುದು.**- (1) ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯು ರಾಜ್ಯ ಸರ್ಕಾರಕ್ಕೆ ಸ್ವಹಸ್ತದಿಂದ ಲಿಖಿತದಲ್ಲಿನ ನೋಟೀಸನ್ನು ಸಲ್ಲಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಸರ್ಕಾರವು ಆದೇಶದ ಮೂಲಕ, ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಪದದಿಂದ ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯನ್ನು –

(ಎ) ಆತನು ಅವಿಮುಕ್ತ ದಿವಾಳಿಯಾಗಿದ್ದಲ್ಲಿ; ಅಥವಾ

(ಬಿ) ನೈತಿಕ ಅಧಃಪತನವನ್ನು ಒಳಗೊಂಡಿದೆ ಎಂದು ಸರ್ಕಾರವು ಅಭಿಪ್ರಾಯಪಡುವ ಅಪರಾಧದಲ್ಲಿ ಅಪರಾಧ ನಿರ್ಣೀತನಾಗಿದ್ದಲ್ಲಿ; ಅಥವಾ

(ಸಿ) ಆತನು ತನ್ನ ಪದಾವಧಿಯಲ್ಲಿ ಆತನ ಪದದ ಕರ್ತವ್ಯಗಳ ಹೊರತಾಗಿ ಯಾವುದೇ ಸಂಬಳ ಪಡೆಯುವ ಉದ್ಯೋಗದಲ್ಲಿ ತೊಡಗಿರುವನೆಂದು; ಅಥವಾ

(ಡಿ) ಮಾನಸಿಕ ಅಥವಾ ದೈಹಿಕ ಅಸಮರ್ಥತೆಯ ಕಾರಣವಾಗಿ ಪದದಲ್ಲಿ ಮುಂದುವರೆಯಲು ಅರ್ಹನಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟಲ್ಲಿ; ಅಥವಾ

(ಇ) ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯಾಗಿ ಆತನ ಪ್ರಕಾರ್ಯಗಳಿಗೆ ಪೂರ್ವಾಗ್ರಹವಾಗಿ ಪರಿಣಾಮವುಂಟು ಮಾಡುವ ಅಂಥ ಹಣಕಾಸು ಅಥವಾ ಇತರೆ ಹಿತಾಸಕ್ತಿಯನ್ನು ಹೊಂದಿದ್ದಲ್ಲಿ ಆತನನ್ನು ತೆಗೆದು ಹಾಕಬಹುದು.][1]][2]

1. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[2][[1][**296ಎಫ್. ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಪ್ರಕ್ರಿಯೆ ಮತ್ತು ವಿಧಾನಗಳು:**- (1) ದೂರನ್ನು ದಾಖಲ್ಮಾಡುವ ಪ್ರಕ್ರಿಯೆ ಮತ್ತು ವಿಧಾನವು ಮತ್ತು ಅಂಥ ದೂರಿನ ಜೊತೆ ಇರಬೇಕಾದ ಫೀಜುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(2) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ವ್ಯವಹರಣೆಗಳನ್ನು ನಡೆಸುವ ವಿಧಾನ ಮತ್ತು ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು.][1]][2]

1. 2011ರ ಅಧಿನಿಯಮ ಸಂಖ್ಯೆ: 34ರ ಮೂಲಕ ದಿನಾಂಕ: 04-10-2010ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**296ಜಿ. ತನಿಖೆಗೆ ಒಳಪಡದ ವಿಷಯಗಳು.**- ಕುಂದು ಕೊರತೆ ನಿವಾರಣಾ ಪ್ರಾಧಿಕಾರವು:-

(i) ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ (1985ರ ಕರ್ನಾಟಕ ಅಧಿನಿಯಮ 4) ಉಪಬಂಧಗಳ ಅಡಿಯಲ್ಲಿ ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರು ತನಿಖೆ ನಡೆಸುತ್ತಿರುವ; ಅಥವಾ

(ii) ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮಗಳ ಯಾವುದೇ ಉಪಬಂಧಗಳ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ತನಿಖೆ ನಡೆಸುತ್ತಿರುವ,

– ವಿಷಯಗಳಲ್ಲಿ ತನಿಖೆ ನಡೆಸತಕ್ಕದ್ದಲ್ಲ.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**296ಎಚ್. ಬಾಕಿ ಪ್ರಕರಣಗಳ ವರ್ಗಾವಣೆ.**- ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015ರ ಪ್ರಾರಂಭದ ದಿನಾಂಕದಂದು ಪಂಚಾಯತ್ ಓಂಬುಡ್ಸಮನ್ ಮುಂದೆ ಬಾಕಿಯಿರುವ ಎಲ್ಲಾ ಪ್ರಕರಣಗಳು ಸಂಬಂಧಪಟ್ಟ ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ಅಂಥ ಪ್ರಾಧಿಕಾರದ ಮುಂದೆ ಪ್ರಕರಣಗಳು ದಾಖಲಾಗಿದೆ ಎಂಬಂತೆ ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ವಿಲೇ ಮಾಡತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**296ಐ. ಕೈಗೊಂಡ ಕ್ರಮದ ವರದಿ.**- **(1)** ಪ್ರತಿಯೊಂದು ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ತನಗೆ ಮಾಡಲಾದ ದೂರುಗಳ ಅಥವಾ ಅದರಲ್ಲಿ ನಿಯಮಿಸಲಾದ ಅಪೀಲಿನ ಸಂಬಂಧದಲ್ಲಿ ಅನುಸರಿಸಲಾದ ಕ್ರಮದ ವರದಿಯನ್ನು ನಿಯಮಿಸಬಹುದಾದ ಅಂಥ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಪ್ರತಿಯೊಂದು ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ತನಗೆ ಮಾಡಲಾದ ದೂರುಗಳ ಅಥವಾ ದಾಖಲ್ಮಾಡಿದ ಅಪೀಲಿನ ಮತ್ತು ಅಂಥ ದೂರುಗಳ ಮತ್ತು ಅಪೀಲುಗಳ ಮೇಲೆ ದಾಖಲಾದ ತೀರ್ಮಾನಗಳ ದಾಖಲೆಯನ್ನು ನಿರ್ವಹಿಸತಕ್ಕದ್ದು.

(3) ಪ್ರತಿಯೊಂದು ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ತನ್ನ ಜಾಲತಾಣದಲ್ಲಿ ಪ್ರತಿ ತಿಂಗಳ 15ನೇ ದಿನದೊಳಗಾಗಿ ಅಥವಾ ನಿಯಮಿಸಬಹುದಾದ ಅಂಥ ಅಂತರಗಳಲ್ಲಿ, ಅದರಲ್ಲಿ ಹೇಳಲಾದ ವರದಿಯಲ್ಲಿ ;-

(ಎ) ಸ್ವೀಕರಿಸಲಾದ ದೂರುಗಳ ಸಂಖ್ಯೆಯನ್ನು

(ಬಿ) ಬಾಕಿ ಇರುವ ದೂರುಗಳ ಸಂಖ್ಯೆಯನ್ನು

(ಸಿ) ವಿಲೆಯಾದ ದೂರುಗಳ ಸಂಖ್ಯೆಯನ್ನು

(ಡಿ) ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು,

– ಪ್ರಕಟಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**297. ದಾವೆಯ ಮೂಲಕ ಪರ್ಯಾಯ ಪ್ರಕ್ರಿಯೆ.**- XIIIನೇ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ವಸೂಲಿಯಾಗಬಹುದಾದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಕೊಡಲಾದ ಯಾವುದೇ ನಷ್ಟಪರಿಹಾರ,

ವೆಚ್ಚಗಳು, ಚಾರ್ಜುಗಳು ಅಥವಾ ಹಾನಿಪರಿಹಾರಗಳ ಯಾವುದೇ ಮೊಬಲಗಿನ ಒಟ್ಟು ಅಥವಾ ಅದರ ಯಾವುದೇ ಭಾಗವನ್ನು ಅಂಥ ವಿಧಾನದ ಮೂಲಕ ಪಡೆಯಲು ವಿಫಲವಾಗುವ ಸಂದರ್ಭದಲ್ಲಿ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅನುಮತಿಸಲಾದ, ವಸೂಲಿ ಮಾಡಬಹುದಾದ ಯಾವುದೇ ವಿಧಾನಕ್ಕೆ ಬದಲಾಗಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ, ಸಕ್ಷಮ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದಲ್ಲಿ, ಅದಕ್ಕೆ ಹೊಣೆಗಾರನಾದ ವ್ಯಕ್ತಿಯನ್ನು ಮತ್ತು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸ್ವತ್ತಿಗೆ, ಹಕ್ಕು ಅಥವಾ ವಿಶೇಷಾಧಿಕಾರಗಳಿಗೆ ಯಾವುದೇ ರೀತಿಯಲ್ಲಿ ಯಾವುದೇ ಹಾನಿಯನ್ನು ಉಂಟುಮಾಡಿರಬಹುದಾದ ಯಾವನೇ ವ್ಯಕ್ತಿಯ ವಿರುದ್ಧ ದಾವೆಯನ್ನು ಹೂಡಬಹುದು.

**298. ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳಿಗಾಗಿ ದಂಡನೆ ಮತ್ತು ರಾಜಿ ಮಾಡಿಕೊಳ್ಳಲು ಅಧಿಕಾರ.**- (1) ಯಾರೇ ಆಗಲಿ,-

(ಎ) 64ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದ, ಬರಹದಲ್ಲಿನ ಅನುಮತಿಯಿಲ್ಲದೆ ಅಥವಾ ಅದರ ಮೂಲಕ ವಿಧಿಸಿದ ಯಾವುದೇ ಷರತ್ತನ್ನು ಉಲ್ಲಂಘಿಸಿ ಕಟ್ಟಡವನ್ನು ನಿರ್ಮಿಸಿದರೆ, ಬದಲಾವಣೆ ಮಾಡಿದರೆ, ಅಥವಾ ಅದಕ್ಕೆ ಸೇರ್ಪಡೆ ಮಾಡಿದರೆ ಅಥವಾ ಪುನಃ ನಿರ್ಮಿಸಿದರೆ;

(ಬಿ) 66, 67, 68, ಅಥವಾ 69ನೇ ಪ್ರಕರಣಗಳ ಮೂಲಕ ಅಗತ್ಯಪಡಿಸಿದ, ಪರವಾನಿಗೆ ಅಥವಾ ಲೈಸೆನ್ಸಿಲ್ಲದೆ ಅಥವಾ ಯಾವುವೇ ಷರತ್ತುಗಳನ್ನು ಉಲ್ಲಂಘಿಸಿ ಅಥವಾ ಲೈಸೆನ್ಸನ್ನು ಅಮಾನತುಗೊಳಿಸಿದ ಕಾಲದಲ್ಲಿ, ಯಾವುದೇ ಸ್ಥಳವನ್ನು ಉಪಯೋಗಿಸಿದರೆ; ಅಥವಾ

(ಸಿ) ಅಧಿನಿಯಮದ ಇತರ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ,

-ಅಪರಾಧ ನಿರ್ಣಯವಾದ ಮೇಲೆ [1][ಐದು ಸಾವಿರ ರೂಪಾಯಿಗಳವರೆಗೆ][1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮುಂದುವರೆಯುತ್ತಿರುವ ಅಪರಾಧದ ಸಂದರ್ಭದಲ್ಲಿ ಮೊದಲಬಾರಿಗೆ ಅಪರಾಧ ನಿರ್ಣಯವಾದ ಮೇಲೆ ಅಪರಾಧವು ಮುಂದುವರಿಯುತ್ತಿರುವ ಪ್ರತಿಯೊಂದು ದಿವಸಕ್ಕೆ [1][ಐವತ್ತು ರೂಪಾಯಿಗಳವರೆಗೆ][1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(2) ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ, (1)ನೇ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಅಪರಾಧ ನಿರ್ಣಯವಾದ ಮೇಲೆ ಮ್ಯಾಜಿಸ್ಟ್ರೇಟರು ಸಂದರ್ಭಾನುಸಾರ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅರ್ಜಿಯ ಮೇಲೆ, ಅದರೆ ಅನ್ಯಥಾ ಅಲ್ಲ. ಅಂಥ ಸ್ಥಳವನ್ನು ಮುಚ್ಚಬೇಕೆಂದು ಆದೇಶಿಸತಕ್ಕದ್ದು ಮತ್ತು ಆ ತರುವಾಯ ಅಂಥ ಸ್ಥಳವನ್ನು ಹಾಗೆ ಉಪಯೋಗಿಸುವುದನ್ನು ತಡೆಗಟ್ಟಲು ಅಂಥ ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು ಅಥವಾ ಅಂಥ ಇತರ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅದನ್ನು ಮುಚ್ಚಬೇಕೆಂದು ಆದೇಶವನ್ನು ಮಾಡಿದ ತರುವಾಯ, ಸ್ಥಳವನ್ನು ಹಾಗೆ ಉಪಯೋಗಿಸುವ ಅಥವಾ ಉಪಯೋಗಿಸಲು ಅನುಮತಿಸುವ ಪ್ರತಿಯೊಬ್ಬ ವ್ಯಕ್ತಿಯು ಅದನ್ನು ಹಾಗೆ ಮುಚ್ಚಬೇಕೆಂದು ಆದೇಶವನ್ನು ಮಾಡಿದ ತರುವಾಯ, ಆ ಸ್ಥಳವನ್ನು ಉಪಯೋಗಿಸಲು ಅಥವಾ ಅಂಥ ಉಪಯೋಗವನ್ನು ಅನುಮತಿಸುವುದನ್ನು ಅವನು ಮುಂದುವರಿಸುವಂಥ ಕಾಲದಲ್ಲಿ ಪ್ರತಿಯೊಂದು ದಿವಸ [1][ಐವತ್ತು ರೂಪಾಯಿಗಳಿಗೆ][1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(3) (ಎ) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಅಥವಾ ಜಿಲ್ಲಾ ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ಅಧಿಕೃತಗೊಳಿಸಬಹುದಾದಂಥ ಅಧಿಕಾರಿಯು, ಸಂದರ್ಭಾನುಸಾರ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಅಥವಾ ಅಧಿಕೃತ ಅಧಿಕಾರಿಯ ಅಭಿಪ್ರಾಯದಲ್ಲಿ,-

(i) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಹಿಂದೆ ಹೇಳಿದ ಯಾವುದೇ ಅಪರಾಧವನ್ನು, ಅಥವಾ

(ii) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ, ವಿನಿಯಮ ಅಥವಾ ಉಪವಿಧಿಯ ಅಡಿಯಲ್ಲಿ ಸರ್ಕಾರವು ಅಧಿಸೂಚನೆಯ ಮೂಲಕ ರಾಜಿಮಾಡಿಕೊಳ್ಳಬಹುದು ಎಂದು ಘೋಷಿಸಬಹುದಾದಂಥ ಯಾವುದೇ ಇತರ ಅಪರಾಧವನ್ನು,

-ಮಾಡಿರುವ ಯಾವನೇ ವ್ಯಕ್ತಿಯಿಂದ [1][ಎರಡು ಸಾವಿರ ರೂಪಾಯಿಗಳನ್ನು ಮೀರದ][1] ಹಣದ ಮೊತ್ತವನ್ನು ರಾಜಿಯ ರೂಪದಲ್ಲಿ ಅಂಗೀಕರಿಸಬಹುದು ಮತ್ತು ಹಾಗೆ ರಾಜಿಯಾದ ಮೇಲೆ ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

(ಬಿ) (ಎ) ಖಂಡದ ಅಡಿಯಲ್ಲಿ ಯಾವುದೇ ಅಪರಾಧವನ್ನು ರಾಜಿ ಮಾಡಿಕೊಂಡ ಮೇಲೆ, ಆ ಅಪರಾಧಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ವ್ಯಕ್ತಿಯ ವಿರುದ್ಧ ಯಾವುವೇ ವ್ಯವಹರಣೆಗಳನ್ನು ಕ್ರಿಮಿನಲ್ ನ್ಯಾಯಾಲಯದಲ್ಲಿ ಹೂಡಿದ್ದರೆ, ರಾಜಿಯನ್ನು ಖುಲಾಸೆಯೆಂಬುದಾಗಿ ಭಾವಿಸತಕ್ಕದ್ದು ಮತ್ತು ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ, ಅಂಥ ವ್ಯಕ್ತಿಯ ವಿರುದ್ಧ ಯಾವುವೇ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**299. ಪೊಲೀಸ್ ಅಧಿಕಾರಿಗಳ ಅಧಿಕಾರಗಳು.**- (1) ಯಾವನೇ ಪೊಲೀಸು ಅಧಿಕಾರಿಯು, ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿನ ಯಾವುದೇ ನಿಯಮ, ವಿನಿಯಮ ಅಥವಾ ಉಪವಿಧಿಯ ಉಪಬಂಧದ ವಿರುದ್ಧ ಯಾವುದೇ ಅಪರಾಧವನ್ನು ತನ್ನ ಸಮ್ಮುಖದಲ್ಲಿ ಮಾಡಿದ ಯಾವನೇ ವ್ಯಕ್ತಿಯನ್ನು, ಅವನಿಗೆ ಅಂಥ ವ್ಯಕ್ತಿಯ ಹೆಸರು ಮತ್ತು ವಿಳಾಸ ಗೊತ್ತಿಲ್ಲದಿದ್ದರೆ, ಮತ್ತು ಅವನು ತನ್ನ ಹೆಸರು ಮತ್ತು ವಿಳಾಸವನ್ನು ಕೊಡಲು ನಿರಾಕರಿಸಿದರೆ ಅಥವಾ ಅದನ್ನು ಕೊಟ್ಟರೆ ಅಂಥ ಹೆಸರು ಮತ್ತು ವಿಳಾಸದ ನಿಷ್ಕೃಷ್ಟತೆಯ ಬಗ್ಗೆ ಸಂದೇಹಪಡಲು ಆ ಪೊಲೀಸ್ ಅಧಿಕಾರಿಗೆ ಕಾರಣವಿದ್ದರೆ, ದಸ್ತಗಿರಿಮಾಡಬಹುದು ಮತ್ತು ಅಂಥ ವ್ಯಕ್ತಿಯನ್ನು ಠಾಣೆಯಲ್ಲಿ ಅವನ ಹೆಸರು ಮತ್ತು ವಿಳಾಸವನ್ನು ಸರಿಯಾಗಿ ಖಚಿತಪಡಿಸಿಕೊಳ್ಳುವವರೆಗೆ ಬಂಧಿಸಿಡಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ದಸ್ತಗಿರಿ ಮಾಡಲಾದ ಯಾವನೇ ವ್ಯಕ್ತಿಗೆ ಆದಷ್ಟು ಬೇಗ ಅಂಥ ದಸ್ತಗಿರಿಯ ಕಾರಣಗಳ ಬಗ್ಗೆ ತಿಳಿಸತಕ್ಕದ್ದು ಮತ್ತು ಅವನನ್ನು, ದಸ್ತಗಿರಿಯಾದ ಸ್ಥಳದಿಂದ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕೆ ಪ್ರಯಾಣ ಮಾಡಲು ಅವಶ್ಯವಾದ ಕಾಲವನ್ನು ಹೊರತುಪಡಿಸಿ, ಅಂಥ ದಸ್ತಗಿರಿಯಾದ ಇಪ್ಪತ್ತನಾಲ್ಕು ಗಂಟೆಗಳ ಅವಧಿಯೊಳಗೆ ಅತಿ ಸಮೀಪದ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಅಂಥ ಯಾವನೇ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟರ ಅಧಿಕಾರವಿಲ್ಲದೆ, ಸದರಿ ಅವಧಿಯನ್ನು ಮೀರಿ ಅಭಿರಕ್ಷೆಯಲ್ಲಿ ಬಂಧಿಸಿಡತಕ್ಕದ್ದಲ್ಲ.

(3) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿನ ಯಾವುದೇ ನಿಯಮ, ವಿನಿಯಮ ಅಥವಾ ಉಪವಿಧಿಯ ಉಪಬಂಧಗಳ ವಿರುದ್ಧ ಯಾವುದೇ ಅಪರಾಧವನ್ನು ಮಾಡಿರುವ ಬಗ್ಗೆ ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಕಾರ್ಯದರ್ಶಿಗೆ ಅಥವಾ ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಅಥವಾ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಸದಸ್ಯನನ್ನು ದಸ್ತಗಿರಿ ಮಾಡಿದಲ್ಲಿ ಅಂಥ ದಸ್ತಗಿರಿಯಾದ ಇಪ್ಪತ್ತನಾಲ್ಕು ಗಂಟೆಯೊಳಗೆ ಮಾಹಿತಿಯನ್ನು ಕೂಡಲೇ ಕೊಡುವುದು ಮತ್ತು ಅವರ ಕಾನೂನು ಬದ್ಧ ಅಧಿಕಾರವನ್ನು ಚಲಾಯಿಸುವಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಎಲ್ಲ ಅಧಿಕಾರಿಗಳು ಮತ್ತು ನೌಕರರಿಗೆ ಸಹಾಯ ಮಾಡುವುದು ಸಹ ಎಲ್ಲ ಪೊಲೀಸ್ ಅಧಿಕಾರಿಗಳ ಕರ್ತವ್ಯವಾಗಿರತಕ್ಕದ್ದು.

**300. ವಾರ್ಷಿಕ ಆಡಳಿತ ವರದಿ.**- (1) ಪ್ರತಿವರ್ಷದ ಏಪ್ರಿಲ್ ಮೊದಲನೇ ದಿನದ ತರುವಾಯ ಆದಷ್ಟು ಬೇಗನೆ ಮತ್ತು ಸರ್ಕಾರವು ನಿಗದಿಪಡಿಸಬಹುದಾದಂಥ ದಿನಾಂಕವನ್ನು ಮೀರದಂತೆ, ಕಾರ್ಯದರ್ಶಿಯು, ಗ್ರಾಮಪಂಚಾಯತಿಯ ಹಿಂದಿನ ಆರ್ಥಿಕ ವರ್ಷದ ಆಡಳಿತ ವರದಿಯನ್ನು ಸರ್ಕಾರವು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳೊಡನೆ ಗ್ರಾಮ ಪಂಚಾಯತಿಯ ಮುಂದೆ ಮಂಡಿಸತಕ್ಕದ್ದು ಮತ್ತು ಅದರ ಮೇಲಿನ ಗ್ರಾಮ ಪಂಚಾಯತಿಯ ನಿರ್ಣಯದೊಂದಿಗೆ ಆ ವರದಿಯನ್ನು ಜಿಲ್ಲಾ ಪಂಚಾಯತಿಗೆ ಕಳುಹಿಸತಕ್ಕದ್ದು.

(2) ಪ್ರತಿವರ್ಷದ ಏಪ್ರಿಲ್ ಮೊದಲನೇ ದಿನದ ತರುವಾಯ ಆದಷ್ಟು ಬೇಗನೆ ಮತ್ತು ಸರ್ಕಾರವು ನಿಗದಿಪಡಿಸಬಹುದಾದಂಥ ದಿನಾಂಕವನ್ನು ಮೀರದಂತೆ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು ಹಿಂದಿನ ಆರ್ಥಿಕ ವರ್ಷದ ಆಡಳಿತ ವರದಿಯನ್ನು ಸರ್ಕಾರವು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ತಾಲ್ಲೂಕು ಪಂಚಾಯತಿಯ ಮುಂದೆ ಮಂಡಿಸತಕ್ಕದ್ದು ಮತ್ತು ಅದರ ಮೇಲಿನ ತಾಲ್ಲೂಕು ಪಂಚಾಯತಿಯ ನಿರ್ಣಯದೊಂದಿಗೆ ಆ ವರದಿಯನ್ನು ಜಿಲ್ಲಾ ಪಂಚಾಯತಿಗೆ ಕಳುಹಿಸತಕ್ಕದ್ದು.

(3) (1) ಮತ್ತು (2)ನೇ ಉಪಪ್ರಕರಣದ ಅಡಿಯಲ್ಲಿನ ವರದಿಗಳು ಬಂದ ಮೇಲೆ ಗ್ರಾಮ ಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗಳ ಕೆಲಸವನ್ನು ಜಿಲ್ಲಾ ಪಂಚಾಯತಿಯು ಪುನರವಲೋಕಿಸತಕ್ಕದ್ದು ಮತ್ತು ಈ ಬಗ್ಗೆ ಕ್ರೋಡೀಕರಿಸಲಾದ ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(4) ಪ್ರತಿವರ್ಷದ ಏಪ್ರಿಲ್ ಮೊದಲನೇ ದಿವಸದ ತರುವಾಯ, ಆದಷ್ಟು ಬೇಗನೆ ಮತ್ತು ಸರ್ಕಾರವು ನಿಗದಿಪಡಿಸಬಹುದಾದಂಥ ದಿನಾಂಕವನ್ನು ಮೀರದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಜಿಲ್ಲಾ ಪಂಚಾಯತಿಯ ಹಿಂದಿನ ಆರ್ಥಿಕ ವರ್ಷದ ಆಡಳಿತ ವರದಿಯನ್ನು ಸರ್ಕಾರವು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ತಯಾರಿಸತಕ್ಕದ್ದು ಮತ್ತು ಜಿಲ್ಲಾ ಪಂಚಾಯತಿಗೆ ವರದಿಯನ್ನು ಸಲ್ಲಿಸತಕ್ಕದ್ದು. ಜಿಲ್ಲಾ ಪಂಚಾಯತಿಯಿಂದ ಅನುಮೋದಿತವಾದ ನಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(5) (3) ಮತ್ತು (4)ನೇ ಉಪ-ಪ್ರಕರಣದ ಮೇರೆಗೆ ಸರ್ಕಾರಕ್ಕೆ ಒಪ್ಪಿಸಿದ ವರದಿಯನ್ನು ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳ ಕೆಲಸವನ್ನು ಸರ್ಕಾರವು ಪುನರಲೋಕಿಸಿದ ಬಗ್ಗೆ ಜ್ಞಾಪನ ಪತ್ರದೊಂದಿಗೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**301. ಸರ್ಕಾರಿ ಬಾಕಿ, ಇತ್ಯಾದಿಗಳ ಹೊಂದಾಣಿಕೆ.**- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ಸರ್ಕಾರಕ್ಕೆ, ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗೆ ಕೊಡಬೇಕಾದ ಯಾವುವೇ ಮೊಬಲಗುಗಳು, ಸಾಲದ ಕಂತುಗಳು ಅಥವಾ ಬಡ್ಡಿಯನ್ನು ಅಥವಾ ಅಂಥ ಪಂಚಾಯತಿಗಳಿಗೆ ಪ್ರತಿನಿಯೋಜನೆಯ ಮೇಲೆ ಬಂದ ಸರ್ಕಾರಿ ನೌಕರರ ಸಂಬಳಗಳು, ಭತ್ಯೆಗಳು ಅಥವಾ ರಜೆ ಮತ್ತು ಪಿಂಚಣಿ ವಂತಿಗೆಗಳನ್ನು ಸಂದಾಯ ಮಾಡಲು ತಪ್ಪಿದರೆ, ಸರ್ಕಾರವು, ಪಂಚಾಯತಿಗಳ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ ಅಂಥ ನಿಧಿಯಿಂದ ಸಂದಾಯ ಮಾಡತಕ್ಕ ಯಾವುದೇ ಹೊಣೆಗಿಂತಲೂ, ಬಾಕಿ ಇರುವ ಮೊಬಲಗನ್ನು ಆದ್ಯತೆಯ ಮೇಲೆ ಸಂದಾಯ ಮಾಡುವಂತೆ ಆದೇಶಿಸಬಹುದು ಮತ್ತು ಅಂಥ ವ್ಯಕ್ತಿಯು, ಅಂಥ ನಿಧಿಗೆ ಜಮೆಯಾಗಿರುವ ಮೊಬಲಗಿನಷ್ಟರಮಟ್ಟಿಗೆ, ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

[1][**302. ಒಂದು ಪಂಚಾಯತಿ ಪ್ರದೇಶದ ಭಾಗವನ್ನು ಅಥವಾ ಜಿಲ್ಲಾ ಅಥವಾ ತಾಲ್ಲೂಕು ಪರಿಮಿತಿಗಳಲ್ಲಿರುವ ಒಂದು ಪ್ರದೇಶವನ್ನು ದೊಡ್ಡ ನಗರ ಪ್ರದೇಶ ಮುಂತಾದುವುಗಳೊಳಗೆ ವಿಲೀನಗೊಳಿಸುವುದರ ಪರಿಣಾಮ.**- (1) ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸದಸ್ಯನ ಹುದ್ದೆಯ ಅವಧಿಯಲ್ಲಿ, ಅಂಥ ಸದಸ್ಯನು ಪ್ರತಿನಿಧಿತನಾಗಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರದಲ್ಲಿ ಅಡಕವಾದ ಪೂರ್ಣ ಪ್ರದೇಶವಾಗಿರುವ ಪಂಚಾಯತಿ ಪ್ರದೇಶ, ತಾಲ್ಲೂಕು ಅಥವಾ ಜಿಲ್ಲೆಯ ಪರಿಮಿತಿಗಳೊಳಗಿನ ಯಾವುದೇ ಪ್ರದೇಶವನ್ನು ಯಾವುದೇ ದೊಡ್ಡ ನಗರ ಪ್ರದೇಶದಲ್ಲಿ, ಚಿಕ್ಕ ನಗರ ಪ್ರದೇಶದಲ್ಲಿ ಅಥವಾ ಪರಿವರ್ತಿತವಾಗಲಿರುವ ಪ್ರದೇಶದಲ್ಲಿ ಸೇರ್ಪಡೆ ಮಾಡಿದರೆ ಅಥವಾ ಪಂಚಾಯತಿ ಪ್ರದೇಶ ಅಥವಾ ತಾಲ್ಲೂಕು ಪರಿಮಿತಿಗಳಲ್ಲಿರುವ ಅಂಥ ಪ್ರದೇಶವನ್ನು ಚಿಕ್ಕ ನಗರ ಪ್ರದೇಶ ಅಥವಾ ಪರಿವರ್ತಿತವಾಗಲಿರುವ ಪ್ರದೇಶವಾಗಿ (ಇನ್ನು ಮುಂದೆ ಇತರ ಸ್ಥಳೀಯ ಪ್ರದೇಶವೆಂದು ಉಲ್ಲೇಖಿಸಲಾಗುವುದು) ಪರಿವರ್ತಿಸಿದರೆ, ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಹಾಗೆ ಸೇರ್ಪಡೆ ಮಾಡುವ ಅಥವಾ ಪರಿವರ್ತಿಸುವ ದಿನಾಂಕದಿಂದ ಈ ಮುಂದಿನ ಪರಿಣಾಮಗಳು ಸಂಭವಿಸತಕ್ಕದ್ದು, ಎಂದರೆ:-

1. ಪ್ರಕರಣ 302 ಮತ್ತು 302ಎ 1997ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿನಾಂಕ: 14-08-1997ರಿಂದ ಪ್ರತಿಯೋಜಿಸಲಾಗಿದೆ.

(ಎ) ಅಂಥ ಸದಸ್ಯನು ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಸದಸ್ಯನಾಗಿರುವುದು ನಿಂತು ಹೋಗತಕ್ಕದ್ದು ಮತ್ತು ಅಂಥ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆಯು ಈಗಾಗಲೇ ನಿರ್ಧರಿತವಾದಂತೆ ಅದಕ್ಕನುಸಾರವಾಗಿ ಕಡಿಮೆಯಾಗತಕ್ಕದ್ದು.

(ಬಿ) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿರುವಷ್ಟರಮಟ್ಟಿಗೆ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ನಿಧಿ ಅಥವಾ ಅದರ ಸ್ವತ್ತನ್ನು ಸರ್ಕಾರವು, ಲಿಖಿತದಲ್ಲಿ ಆದೇಶಿಸಬಹುದಾದಂತೆ ಅಂಥ ಇತರ ಸ್ಥಳೀಯ ಪ್ರದೇಶದ ಅಂಥ ಸ್ಥಳೀಯ ಪ್ರಾಧಿಕಾರದ ನಿಧಿಗೆ ವರ್ಗಾಯಿಸತಕ್ಕದ್ದು.

(ಸಿ) ಇತರ ಸ್ಥಳೀಯ ಪ್ರದೇಶದಲ್ಲಿ ಸೇರ್ಪಡೆ ಮಾಡಲಾದ ಅಥವಾ ಇತರ ಸ್ಥಳೀಯ ಪ್ರದೇಶವಾಗಿ ಪರಿವರ್ತಿತವಾದ ಪ್ರದೇಶದಲ್ಲಿ ಉದ್ಭವಿಸುವ ಅಥವಾ ಆ ಪ್ರದೇಶಕ್ಕೆ ಸಂಬಂಧಪಟ್ಟ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳು, ಕರಾರುಗಳು, ಒಪ್ಪಂದಗಳು ಮತ್ತು ಇತರ ವಿಷಯಗಳು ಅಥವಾ ಸಂಗತಿಗಳಿಗೆ (ತೆರಿಗೆ, ಶುಲ್ಕಗಳು, ದರಗಳು ಮತ್ತು ಉಪಕರದ ಬಾಕಿಯೂ ಸೇರಿದಂತೆ) ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಹಕ್ಕುಗಳು ಮತ್ತು ಬಾಧ್ಯತೆಗಳು ಇತರ ಸ್ಥಳೀಯ ಪ್ರದೇಶದ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಹಕ್ಕುಗಳು ಮತ್ತು ಬಾಧ್ಯತೆಗಳನ್ನು, ಸ್ಥಳೀಯ ಪ್ರಾಧಿಕಾರಕ್ಕೆ ಅನ್ವಯಿಸುವ ಸುಸಂಗತ ಕಾನೂನು ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳು, ಉಪವಿಧಿಗಳು ಮತ್ತು ಆದೇಶಗಳ ಅಡಿಯಲ್ಲಿ ಅಂಥ ಸ್ಥಳೀಯ ಪ್ರಾಧಿಕಾರ ಅಥವಾ ಅದರ ವಿರುದ್ಧ ಜಾರಿಗೊಳಿಸತಕ್ಕದ್ದು.

**302ಎ. ಅಸ್ತಿತ್ವದಲ್ಲಿದ್ದ ಜಿಲ್ಲೆಗಳು ಮತ್ತು ತಾಲ್ಲೂಕುಗಳ ಪರಿಮಿತಿಗಳನ್ನು ಬದಲಾಯಿಸುವ ಮೂಲಕ ಹೊಸ ಜಿಲ್ಲೆ ಮತ್ತು ತಾಲ್ಲೂಕುಗಳ ರಚನೆ.**- (1) ಒಂದು ಜಿಲ್ಲೆಯ ಜಿಲ್ಲಾ ಪಂಚಾಯತಿಯ ಅಥವಾ ಒಂದು ತಾಲ್ಲೂಕಿನ ತಾಲ್ಲೂಕು ಪಂಚಾಯತಿಯ ಸದಸ್ಯರ ಹುದ್ದೆಯ ಅವಧಿಯಲ್ಲಿ (ಇನ್ನು ಮುಂದೆ ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ಅಸ್ತಿತ್ವದಲ್ಲಿದ್ದ ತಾಲ್ಲೂಕು ಪಂಚಾಯತಿ ಎಂದು ಉಲ್ಲೇಖಿಸಲಾಗುವುದು) 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ ಅಡಿಯಲ್ಲಿ ಅಂಥ ಜಿಲ್ಲೆಯ ಅಥವಾ ತಾಲ್ಲೂಕಿನ ಪರಿಮಿತಿಗಳನ್ನು ಬದಲಾವಣೆ ಮಾಡಿ ಒಂದು ಹೊಸ ಜಿಲ್ಲೆ ಅಥವಾ ತಾಲ್ಲೂಕನ್ನು ರಚಿಸಿದರೆ (ಇನ್ನು ಮುಂದೆ ಹೊಸ ಜಿಲ್ಲೆ ಅಥವಾ ಸಂದರ್ಭಾನುಸಾರ ಹೊಸ ತಾಲ್ಲೂಕು ಎಂದು ಉಲ್ಲೇಖಿಸಲಾಗುವುದು), ಈ ಅಧಿನಿಯಮದಲ್ಲಿ ಅದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಹಾಗೆ ಹೊಸ ಜಿಲ್ಲೆ ಅಥವಾ ತಾಲ್ಲೂಕಿನ ರಚನೆಯಾದ ದಿನಾಂಕದಿಂದ ಈ ಮುಂದಿನ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಹೊಸ ಜಿಲ್ಲೆಗೆ ಒಂದು ಜಿಲ್ಲಾ ಪಂಚಾಯತಿ ಅಥವಾ ಸಂದರ್ಭಾನುಸಾರ ಹೊಸ ತಾಲ್ಲೂಕಿಗೆ ಒಂದು ತಾಲ್ಲೂಕು ಪಂಚಾಯತಿ ಇರತಕ್ಕದ್ದು ಮತ್ತು ಇದು ಹೊಸ ಜಿಲ್ಲೆ ಅಥವಾ ಹೊಸ ತಾಲ್ಲೂಕಿನಲ್ಲಿ ಸೇರ್ಪಡೆಯಾದ ಪ್ರದೇಶದ ಪೂರ್ಣ ಅಥವಾ ಬಹು ಭಾಗವು ಇರುವ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಪ್ರತಿನಿಧಿಸುವ, ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ಸಂದರ್ಭಾನುಸಾರ ತಾಲ್ಲೂಕು ಪಂಚಾಯತಿಯ ಸದಸ್ಯರನ್ನು ಮತ್ತು 120ನೇ ಪ್ರಕರಣ ಅಥವಾ ಸಂದರ್ಭಾನುಸಾರ 159ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಇತರ ಸದಸ್ಯರನ್ನು ಹೊಂದಿರತಕ್ಕದ್ದು ಮತ್ತು ಈಗಾಗಲೇ ನಿರ್ಧರಿತವಾದ ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆಯು ಅದಕ್ಕನುಸಾರವಾಗಿ ಕಡಿಮೆಯಾಗತಕ್ಕದ್ದು;

(ಬಿ) ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತಿ ಅಥವಾ ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಯು, ಹೊಸ ಜಿಲ್ಲೆ ಅಥವಾ ಸಂದರ್ಭಾನುಸಾರ ಹೊಸ ತಾಲ್ಲೂಕಿನ ರಚನೆಯಾದ ತರುವಾಯ ತನ್ನ ಮೊದಲ ಸಭೆಯಲ್ಲಿ, ತನ್ನ ಸದಸ್ಯರ ಪೈಕಿ ಒಬ್ಬನನ್ನು ಅಧ್ಯಕ್ಷನನ್ನಾಗಿ ಮತ್ತು ಅಧ್ಯಕ್ಷನನ್ನು ಬಿಟ್ಟು ಮತ್ತೊಬ್ಬನನ್ನು ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು;

(ಸಿ) ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತಿ ಅಥವಾ ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಯು, ಸಾಧ್ಯವಾದಷ್ಟು ಬೇಗ, 148ನೇ ಪ್ರಕರಣದ ಅಡಿಯಲ್ಲಿ ಅಥವಾ ಸಂದರ್ಭಾನುಸಾರ 186ನೇ ಪ್ರಕರಣದ ಅಡಿಯಲ್ಲಿ ಸಮಿತಿಗಳ ಸದಸ್ಯರನ್ನು ಆಯ್ಕೆ ಮಾಡತಕ್ಕದ್ದು;

(ಡಿ) ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತಿಯ ಅಥವಾ ಸಂದರ್ಭಾನುಸಾರ ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಯ ಸದಸ್ಯರು, 128, 129, 135, 136, 167, 168, 174 ಮತ್ತು 175ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿಯಲ್ಲಿ ಅಥವಾ ಸಂದರ್ಭನುಸಾರ ಅಸ್ತಿತ್ವದಲ್ಲಿದ್ದ ತಾಲ್ಲೂಕು ಪಂಚಾಯತಿಯಲ್ಲಿ ಸದಸ್ಯರಾಗಿ ಅವರ ಹುದ್ದೆಯ ಅವಧಿಯ ಅಪೂರ್ಣ ಭಾಗಕ್ಕೆ ಹುದ್ದೆಯನ್ನು ಧಾರಣ ಮಾಡತಕ್ಕದ್ದು;

(ಇ) (ಬಿ) ಮತ್ತು (ಸಿ) ಖಂಡಗಳಲ್ಲಿ ಉಲ್ಲೇಖಿಸಲಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಮತ್ತು ಸದಸ್ಯರ ಹುದ್ದೆಯ ಅವಧಿಯು, 138, 14೦ 148, 177, 179 ಮತ್ತು 186ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದ ದಿನಾಂಕದಂದು ಮುಕ್ತಾಯವಾಗತಕ್ಕದ್ದು.

(2) ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯ ಸಂಬಂಧದಲ್ಲಿ ಮಾಡಿದ, ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ವಿನಿಯಮ, ಉಪವಿಧಿ ಅಥವಾ ನಮೂನೆಯು, ಅದನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ವಿನಿಯಮ, ಉಪವಿಧಿ ಅಥವಾ ನಮೂನೆಯ ಮೂಲಕ ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡು ಮಾಡುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಹೊಸ ಜಿಲ್ಲೆ ಅಥವಾ ಸಂದರ್ಭಾನುಸಾರ ಹೊಸ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯ ಸಂಬಂಧದಲ್ಲಿ ಮಾಡಿದೆ, ಹೊರಡಿಸಿದೆ ಅಥವಾ ವಿಧಿಸಿದೆ ಎಂದು ಭಾವಿಸತಕ್ಕದ್ದು:

ಪರಂತು ಅಸ್ತಿತ್ವದಲ್ಲಿದ್ದ ಎರಡು ಅಥವಾ ಹೆಚ್ಚಿನ ಜಿಲ್ಲೆಗಳು ಅಥವಾ ತಾಲ್ಲೂಕುಗಳ ಪರಿಮಿತಿಗಳನ್ನು ಬದಲಾವಣೆ ಮಾಡುವ ಮೂಲಕ ಹೊಸ ಜಿಲ್ಲೆ ಅಥವಾ ಹೊಸ ತಾಲ್ಲೂಕನ್ನು ರಚಿಸಿದರೆ, ಸರ್ಕಾರವು, ಅಧಿಸೂಚನೆಯ ಮೂಲಕ, ಅಸ್ತಿತ್ವದಲ್ಲಿದ್ದ ಅಂಥ ಜಿಲ್ಲಾ ಪಂಚಾಯತಿಗಳು ಅಥವಾ ತಾಲ್ಲೂಕು ಪಂಚಾಯಿಗಳ ಸಂಬಂಧದಲ್ಲಿ ಮಾಡಲಾದ, ಹೊರಡಿಸಲಾದ ಅಥವಾ ವಿಧಿಸಲಾದ ನೇಮಕಾತಿ, ಅದಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ವಿನಿಯಮ, ಉಪವಿಧಿ ಮತ್ತು ನಮೂನೆಯು ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತಿ ಮತ್ತು ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಗೆ ಅಧಿಸೂಚನೆಯ ಅಡಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಅನ್ವಯವಾಗತಕ್ಕದ್ದೆಂದು ಮತ್ತು ಆ ತರುವಾಯ ಅಂಥ ನೇಮಕಾತಿಗಳು, ಅಧಿಸೂಚನೆಗಳು, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ವಿನಿಯಮ, ಉಪವಿಧಿ ಮತ್ತು ನಮೂನೆ ಮಾತ್ರ ಜಾರಿಯಲ್ಲಿ ಮುಂದುವರಿಯತಕ್ಕದ್ದೆಂದು ನಿರ್ದೇಶಿಸಬಹುದು.

(3) ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯಲ್ಲಿ ನಿಹಿತವಾಗಿರುವ ಖರ್ಚುಮಾಡದೆ ಉಳಿದ ನಿಧಿ ಮತ್ತು ಎಲ್ಲ ಇತರ ಸ್ವತ್ತುಗಳನ್ನು, ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತಿಗೆ ಅಥವಾ ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಗೆ ವರ್ಗಾಯಿಸತಕ್ಕದ್ದು.

(4) ಹೊಸ ಜಿಲ್ಲೆ ಅಥವಾ ಹೊಸ ತಾಲ್ಲೂಕಿನಲ್ಲಿ ಸೇರ್ಪಡೆ ಮಾಡಲಾದ ಪ್ರದೇಶದ ಯಾವುದೇ ಭಾಗದಲ್ಲಿ ಉದ್ಭವಿಸುವ ಅಥವಾ ಆ ಪ್ರದೇಶಕ್ಕೆ ಸಂಬಂಧಪಟ್ಟ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳು, ಸ್ವತ್ತುಗಳು, ಕರಾರುಗಳು, ಒಪ್ಪಂದಗಳು ಮತ್ತು ಇತರ ವಿಷಯಗಳು ಅಥವಾ ಸಂಗತಿಗಳಿಗೆ (ತೆರಿಗೆಗಳು, ಶುಲ್ಕಗಳು, ದರಗಳು ಮತ್ತು ಉಪಕರದ ಬಾಕಿಯೂ ಸೇರಿದಂತೆ) ಸಂಬಂಧಿಸಿದಂತೆ ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯ ಹಕ್ಕುಗಳು ಮತ್ತು ಬಾಧ್ಯತೆಗಳು, ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಹೊಸ ಜಿಲ್ಲೆಗಳ ಜಿಲ್ಲಾ ಪಂಚಾಯತಿಯಲ್ಲಿ ಅಥವಾ ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದು.

(5) ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯ ಅಧಿಕಾರಿಗಳು ಮತ್ತು ನೌಕರರನ್ನು, ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತಿಗೆ ಅಥವಾ ಸಂದರ್ಭಾನುಸಾರ ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಗೆ ವರ್ಗಾಯಿಸಬಹುದು ಮತ್ತು ಈ ಅಧಿನಿಯಮಕ್ಕೆ ಅನುಸಾರವಾಗಿ ಇತರ ಉಪಬಂಧಗಳನ್ನು ರಚಿಸುವವರೆಗೆ, ಹಾಗೆ ವರ್ಗಾಯಿತರಾಗುವುದಕ್ಕೆ ಮೊದಲು ಅವರು ಪಡೆಯಲು ಹಕ್ಕುಳ್ಳವರಾಗಿದ್ದ ಅದೇ ಸಂಬಳ ಮತ್ತು ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗತಕ್ಕದ್ದು ಮತ್ತು ಅವರು ಒಳಪಡುತ್ತಿದ್ದ ಅವೇ ಸೇವಾ ಷರತ್ತುಗಳಿಗೆ ಒಳಪಡತಕ್ಕದ್ದು.

(6) ಹೊಸ ಜಿಲ್ಲೆ ಅಥವಾ ಹೊಸ ತಾಲ್ಲೂಕಿನ ರಚನೆಗೆ ನಿಕಟಪೂರ್ವದಲ್ಲಿ ಅಪೀಲುಗಳೂ ಸೇರಿದಂತೆ ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಯಾವೊಬ್ಬ ಅಧಿಕಾರಿಯ ಮುಂದೆ ಇತ್ಯರ್ಥವಾಗದೆ ಉಳಿದಿರುವ ಎಲ್ಲ ವ್ಯವಹರಣೆಗಳು ಮತ್ತು ಅಂಥ ರಚನೆಗೆ ನಿಕಟಪೂರ್ವದಲ್ಲಿ ಇತ್ಯರ್ಥವಾಗದೆ ಉಳಿದಿರುವ ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಅದರ ಯಾವೊಬ್ಬ ಅಧಿಕಾರಿ ಅಥವಾ ಅವನ ಪರವಾಗಿ ಹೂಡಲಾದ ಎಲ್ಲಾ ಕಾನೂನು ವ್ಯವಹರಣೆಗಳನ್ನು ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಅಂಥ ಅಧಿಕಾರಿಯು ಮುಂದುವರಿಸತಕ್ಕದ್ದು ಅಥವಾ ಅಂಥ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಅಧಿಕಾರಿಯ ವಿರುದ್ಧ ಮುಂದುವರಿಯತಕ್ಕದ್ದು ಅಥವಾ ಅಂಥ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಅಧಿಕಾರಿಯು ವಿಲೆಮಾಡತಕ್ಕದ್ದು.

(7) ಸರ್ಕಾರವು, ಅದಿಸೂಚನೆಯ ಮೂಲಕ,-

(i) ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತಿಗೆ ಅಥವಾ ಸಂದರ್ಭಾನುಸಾರ ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಗೆ (2)ನೇ ಉಪ-ಪ್ರಕರಣವನ್ನು ಅನ್ವಯಿಸುವಾಗ ಅದರಲ್ಲಿ ಉಲ್ಲೇಖಿಸಲಾದ ಯಾವುದೇ ನಿಯಮ, ಉಪವಿಧಿ, ಅಧಿಸೂಚನೆ, ಯೋಜನೆ, ಅನುಮತಿ ಅಥವಾ ಲೈಸೆನ್ಸಿನಿಂದ ಬಿಟ್ಟುಬಿಡುವುದಕ್ಕೆ, ಅವುಗಳಿಗೆ ಸೇರ್ಪಡೆ ಮಾಡುವುದಕ್ಕೆ ಅಥವಾ ಅವುಗಳಲ್ಲಿ ಅಳವಡಿಸುವುದಕ್ಕೆ ಅಥವಾ ಮಾರ್ಪಾಟು ಮಾಡುವುದಕ್ಕೆ; ಅಥವಾ

(ii) ಅಸ್ತಿತ್ವದಲ್ಲಿದ್ದ ಜಿಲ್ಲಾ ಪಂಚಾಯತಿ ಅಥವಾ ಅಸ್ತಿತ್ವದಲ್ಲಿದ್ದ ತಾಲ್ಲೂಕು ಪಂಚಾಯತಿ ಅಥವಾ ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತಿ ಅಥವಾ ಹೊಸ ತಾಲ್ಲೂಕಿನ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಉಂಟಾಗುವ ತೊಂದರೆಗಳನ್ನು ನಿವಾರಿಸುವುದಕ್ಕೆ,

-ಅಗತ್ಯವೆಂದು ಅಥವಾ ಯುಕ್ತವೆಂದು ಕಂಡು ಬರುವಂಥ ಉಪಬಂಧಗಳನ್ನು ರಚಿಸಬಹುದು.][1]

[1][**302ಬಿ. ಒಂದು ಪಂಚಾಯತಿ ಪ್ರದೇಶದ ಭಾಗವನ್ನು ಅಥವಾ ಜಿಲ್ಲಾ ಅಥವಾ ತಾಲ್ಲೂಕು ಪರಿಮಿತಿಗಳಲ್ಲಿರುವ ಯಾವುದೇ ಪ್ರದೇಶವನ್ನು ಇನ್ನೊಂದು ಪಂಚಾಯತಿ ಪ್ರದೇಶ, ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ವಿಲೀನಗೊಳಿಸುವುದರ ಪರಿಣಾಮ.**- ಈ ಅಧಿನಿಯಮದಲ್ಲಿ ವ್ಯತಿರಿಕ್ತವಾಗಿ ಏನೇ ಇದ್ದರೂ,-

(i) ಗ್ರಾಮ ಪಂಚಾಯತಿಯ ಸದಸ್ಯನ ಹುದ್ದೆಯ ಅವಧಿಯಲ್ಲಿ, ಅಂಥ ಸದಸ್ಯನು ಪ್ರತಿನಿಧಿತನಾಗಿರುವ ಪ್ರಾದೇಶಿಕ ಚುನಾವಣೆ ಕ್ಷೇತ್ರದಲ್ಲಿ ಅಡಕವಾದ ಪ್ರದೇಶದ ಪೂರ್ಣ ಅಥವಾ ಬಹುಭಾಗವಾಗಿರುವ ಪಂಚಾಯತಿ ಪ್ರದೇಶದ ಪರಿಮಿತಿಗಳಲ್ಲಿರುವ ಯಾವುದೇ ಸ್ಥಳೀಯ ಪ್ರದೇಶವನ್ನು ಈ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿನ ಒಂದು ಅಧಿಸೂಚನೆಯ ಕಾರಣದಿಂದಾಗಿ ಇತರ ಯಾವುದೇ ಪಂಚಾಯತಿ ಪ್ರದೇಶದಲ್ಲಿ ಸೇರ್ಪಡೆ ಮಾಡಿದರೆ; ಅಥವಾ

(ii) ತಾಲ್ಲೂಕು ಪಂಚಾಯತಿಯ ಸದಸ್ಯನ ಹುದ್ದೆಯ ಅವಧಿಯಲ್ಲಿ, ಅಂಥ ಸದಸ್ಯನು ಪ್ರತಿನಿಧಿತನಾಗಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರದಲ್ಲಿ ಅಡಕವಾದ ಪ್ರದೇಶದ ಪೂರ್ಣ ಅಥವಾ ಬಹುಭಾಗವಾಗಿರುವ ತಾಲ್ಲೂಕಿನ ಪರಿಮಿತಿಗಳಲ್ಲಿರುವ ಯಾವುದೇ ಸ್ಥಳೀಯ ಪ್ರದೇಶವನ್ನು 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿನ ಒಂದು ಅಧಿಸೂಚನೆಯ ಕಾರಣದಿಂದಾಗಿ ಇನ್ನೊಂದು ತಾಲ್ಲೂಕಿನಲ್ಲಿ ಸೇರ್ಪಡೆ ಮಾಡಿದರೆ; ಅಥವಾ

(iii) ಜಿಲ್ಲಾ ಪಂಚಾಯತಿಯ ಸದಸ್ಯನ ಹುದ್ದೆಯ ಅವಧಿಯಲ್ಲಿ, ಅಂಥ ಸದಸ್ಯನು ಪ್ರತಿನಿಧಿತನಾಗಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರದಲ್ಲಿ ಅಡಕವಾದ ಪ್ರದೇಶದ ಪೂರ್ಣ ಅಥವಾ ಬಹುಭಾಗವಾಗಿರುವ ಜಿಲ್ಲೆಯ ಪರಿಮಿತಿಗಳಲ್ಲಿರುವ ಯಾವುದೇ ಸ್ಥಳೀಯ ಪ್ರದೇಶವನ್ನು 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿನ ಒಂದು ಅಧಿಸೂಚನೆಯ ಕಾರಣದಿಂದಾಗಿ ಇನ್ನೊಂದು ಜಿಲ್ಲೆಯಲ್ಲಿ ಸೇರ್ಪಡೆ ಮಾಡಿದರೆ,

-ಆಗ ಹಾಗೆ ಸೇರ್ಪಡೆಯಾದ ದಿನಾಂಕದಿಂದ ಈ ಮುಂದಿನ ಪರಿಣಾಮಗಳು ಸಂಭವಿಸತಕ್ಕದ್ದು, ಎಂದರೆ:-

(ಎ) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಅಂಥ ಸದಸ್ಯನು (ಇಲ್ಲಿ ಇನ್ನು ಮುಂದೆ ಹಿಂದಿನ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯೆಂದು ಉಲ್ಲೇಖಿಸಲಾಗುವುದು) ಹಿಂದಿನ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಸದಸ್ಯನಾಗಿರುವುದು ನಿಂತು ಹೋಗತಕ್ಕದ್ದು ಮತ್ತು ಹಿಂದಿನ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಈಗಾಗಲೇ ನಿರ್ಧರಿತವಾದ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆಯು ಅಷ್ಟರಮಟ್ಟಿಗೆ ಕಡಿಮೆಯಾಗತಕ್ಕದ್ದು;

(ಬಿ) ಹಿಂದಿನ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಅಂಥ ಸದಸ್ಯನು, ಅಂಥ ಸ್ಥಳೀಯ ಪ್ರದೇಶವನ್ನು ಸೇರ್ಪಡೆ ಮಾಡಲಾದ ಜಿಲ್ಲೆಯ ಜಿಲ್ಲಾ ಪಂಚಾಯತಿ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಪಂಚಾಯತಿ ಪ್ರದೇಶದ ಗ್ರಾಮ ಪಂಚಾಯತಿ ಸದಸ್ಯನಾಗತಕ್ಕದ್ದು (ಇಲ್ಲಿ ಇನ್ನು ಮುಂದೆ ತರುವಾಯದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯೆಂದು ಉಲ್ಲೇಖಿಸಲಾಗುವುದು) ಮತ್ತು ಅಂಥ ತರುವಾಯದ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಈಗಾಗಲೇ ನಿರ್ಧರಿತವಾದ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆಯು ಅಷ್ಟರಮಟ್ಟಿಗೆ ಹೆಚ್ಚಾಗತಕ್ಕದ್ದು;

(ಸಿ) ತರುವಾಯದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಸದಸ್ಯನು, ಹಾಗೆ ಸೇರ್ಪಡೆಯಾಗದೆ ಇದ್ದಿದ್ದರೆ ಅವನು ಹಿಂದಿನ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಸದಸ್ಯನಾಗಿ ಯಾವ ಅವಧಿಯವರೆಗೆ ಮುಂದುವರೆಯುತ್ತಿದ್ದನೋ ಆ ಉಳಿದ ಅವಧಿಯವರೆಗೆ ಅಥವಾ ತರುವಾಯದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಸಂದರ್ಭಾನುಸಾರ ಗ್ರಾಮ ಪಂಚಾಯತಿಯ ಉಳಿದ ಅವಧಿಯು ಮುಗಿಯುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು;

(ಡಿ) ಹಿಂದಿನ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿದ್ದಷ್ಟು ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ನಿಧಿ ಅಥವಾ ಇತರ ಯಾವುದೇ ಸ್ವತ್ತನ್ನು, ಸರ್ಕಾರವು ಲಿಖಿತದಲ್ಲಿ ಆದೇಶಿಸಬಹುದಾದಂತೆ ತರುವಾಯದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ನಿಧಿಗೆ ವರ್ಗಾಯಿಸತಕ್ಕದ್ದು;

(ಇ) ಇನ್ನೊಂದು ಪಂಚಾಯತಿ ಪ್ರದೇಶ, ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ಸೇರ್ಪಡೆ ಮಾಡಲಾದ ಪ್ರದೇಶದ ಭಾಗದಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಉದ್ಭವಿಸುವ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳು, ಕರಾರುಗಳು, ಒಪ್ಪಂದಗಳು ಮತ್ತು ಇತರ ವಿಷಯಗಳು ಅಥವಾ ಸಂಗತಿಗಳಿಗೆ (ತೆರಿಗೆ, ಶುಲ್ಕಗಳು, ದರಗಳು ಮತ್ತು ಉಪಕರದ ಬಾಕಿಯೂ ಸೇರಿದಂತೆ) ಸಂಬಂಧಿಸಿದಂತೆ ಹಿಂದಿನ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಹಕ್ಕುಗಳು ಮತ್ತು ಬಾಧ್ಯತೆಗಳು ತರುವಾಯದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಸಂದರ್ಭಾನುಸಾರ ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಹಕ್ಕು ಮತ್ತು ಬಾಧ್ಯತೆಗಳನ್ನು ಈ ಅಧಿನಿಯಮದ ಅಥವಾ ಅದರಡಿ ಮಾಡಲಾದ ನಿಯಮಗಳು, ಉಪವಿಧಿಗಳು ಮತ್ತು ಆದೇಶಗಳ ಅಡಿಯಲ್ಲಿ ಅಂಥ ತರುವಾಯದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯು ಅಥವಾ ಅದರ ವಿರುದ್ಧ ಜಾರಿಗೊಳಿಸತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

**303. ಸ್ವತ್ತಿನ ವರ್ಗಾವಣೆಯು ಷರತ್ತುಗಳಿಗೊಳಪಟ್ಟಿರಬಹುದು.**- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಮಾಡಿದ ಸ್ಥಿರ ಅಥವಾ ಚರ ಸ್ವತ್ತಿನ ಮಂಜೂರಾತಿ, ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಯು, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ, ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಡಬಹುದು.

**304. ಕಾರ್ಯಗಳು ಮತ್ತು ವ್ಯವಹರಣೆಗಳ ಉಳಿಸುವಿಕೆ.**- ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುವೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಗಳನ್ನು ಆ ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಯಾವುದೇ ದೋಷ ಅಥವಾ ಅಕ್ರಮತೆಯ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

**305. ಸಮಾಲೋಚನಾ ಪ್ರಕ್ರಿಯೆ.**- ಯಾವುದೇ ಪ್ರಾಧಿಕಾರ ಅಥವಾ ನಿಕಾಯದೊಂದಿಗೆ ಸಮಾಲೋಚಿಸಿದ ತರುವಾಯ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಕಾರ್ಯವನ್ನು ಕೈಗೊಳ್ಳಬೇಕಾಗಿರುವಾಗಲೆಲ್ಲಾ, ಅಂಥ ಸಮಾಲೋಚನೆಯನ್ನು, ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯಕ್ಕೆ ಪ್ರಸ್ತಾವಿತ ಕ್ರಮದ ಬಗ್ಗೆ ತಿಳಿಸಲಾಗಿದ್ದರೆ ಮತ್ತು ಅದರ ಅಭಿಪ್ರಾಯಗಳನ್ನು ಒದಗಿಸಲು ಅದಕ್ಕೆ ಯುಕ್ತ ಕಾಲವನ್ನು ಕೊಟ್ಟಿದ್ದರೆ, ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

**306. ನೋಟೀಸು ಇತ್ಯಾದಿಗಳನ್ನು ಜಾರಿಮಾಡುವ ವಿಧಾನ.**- (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನೋಟೀಸು ಅಥವಾ ಇತರ ದಸ್ತಾವೇಜು ಅಥವಾ ಅದರ ಅಡಿಯಲ್ಲಿ ಮಾಡಿದ ಆದೇಶವನ್ನು ಯಾರಿಗೆ ಹೆಸರಿನ ಮೂಲಕ ಸಂಬೋಧಿಸಲಾಗಿದೆಯೋ ಆ ಯಾವನೇ ವ್ಯಕ್ತಿಗೆ,-

(ಎ) ಅಂಥ ವ್ಯಕ್ತಿಗೆ ಸದರಿ ನೋಟೀಸು ಅಥವಾ ದಸ್ತಾವೇಜನ್ನು ಕೊಡುವ ಅಥವಾ ನೀಡುವ ಮೂಲಕ; ಅಥವಾ

(ಬಿ) ಅಂಥ ವ್ಯಕ್ತಿಯು ಸಿಕ್ಕದಿದ್ದರೆ, ಅಂಥ ನೋಟೀಸು ಅಥವಾ ದಸ್ತಾವೇಜನ್ನು ತಿಳಿದು ಬಂದ ಕೊನೆಯ ವಾಸ ಅಥವಾ ವ್ಯವಹಾರ ಸ್ಥಳದಲ್ಲಿ ಬಿಡುವ ಮೂಲಕ ಅಥವಾ ಅದನ್ನು ಅವನ ಕುಟುಂಬದ ಯಾವನೇ ವಯಸ್ಕ ಸದಸ್ಯ ಅಥವಾ ಸೇವಕನಿಗೆ ಕೊಡುವ ಅಥವಾ ನೀಡುವ ಮೂಲಕ; ಅಥವಾ

(ಸಿ) ಅಂಥ ವ್ಯಕ್ತಿಯು ಗ್ರಾಮ ಅಥವಾ ಪಟ್ಟಣದಲ್ಲಿ ವಾಸಿಸುತ್ತಿಲ್ಲದಿದ್ದರೆ ಮತ್ತು ಅಂಥ ನೋಟೀಸು ಅಥವಾ ದಸ್ತಾವೇಜನ್ನು ಕೊಡುವ ಅಧಿಕಾರಿಗೆ ಅವನ ಬೇರೆ ಕಡೆಯ ವಿಳಾಸವು ತಿಳಿದಿದ್ದರೆ, ಅದನ್ನು ಅವನಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸುವ ಮೂಲಕ; ಅಥವಾ

(ಡಿ) ಹಿಂದೆ ಹೇಳಿದ ಯಾವುದೇ ಸಾಧನವು ಲಭ್ಯವಿಲ್ಲದಿದ್ದರೆ, ಅಂಥ ನೋಟೀಸು ಅಥವಾ ದಸ್ತಾವೇಜನ್ನು ಆ ವ್ಯಕ್ತಿಯು ಕೊನೆಯಲ್ಲಿ ವಾಸಿಸುತ್ತಿದ್ದನೆಂದು ಅಥವಾ ವ್ಯವಹಾರವನ್ನು ನಡೆಸುತ್ತಿದ್ದನೆಂದು ಅಥವಾ ಲಾಭಕ್ಕಾಗಿ ಸ್ವತಃ ಕೆಲಸ ಮಾಡುತ್ತಿದ್ದನೆಂದು ತಿಳಿದುಬಂದ ಕೊನೆಯ ಮನೆಯ ವಿಳಾಸವು ಯಾವುದಾದರೂ ಇದ್ದರೆ ಅದರ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವ ಮೂಲಕ,

-ಜಾರಿಗೊಳಿಸತಕ್ಕದ್ದು.

(2) ಯಾವುದೇ ನೋಟೀಸು ಅಥವಾ ಇತರ ದಸ್ತಾವೇಜನ್ನು, ಯಾವುದೇ ಕಟ್ಟಡ ಅಥವಾ ಭೂಮಿಯ ಮಾಲೀಕ ಅಥವಾ ಅನುಭವದಾರನಿಗೆ ಜಾರಿಮಾಡಬೇಕಾಗಿರುವಾಗ, ಅದರಲ್ಲಿ ಮಾಲೀಕ ಅಥವಾ ಅನುಭವದಾರರನ್ನು ಹೆಸರಿಸುವುದು ಅವಶ್ಯ ಇರತಕ್ಕದ್ದಲ್ಲ ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ, ವಿಶೇಷವಾಗಿ ಉಪಬಂಧಿಸಿಲ್ಲದ ಪ್ರಕರಣಗಳಲ್ಲಿ,-

(ಎ) ಆ ನೋಟೀಸು ಅಥವಾ ದಸ್ತಾವೇಜನ್ನು ಮಾಲೀಕ ಅಥವಾ ಅನುಭವದಾರನಿಗೆ ಅಥವಾ ಒಬ್ಬನಿಗಿಂತ ಹೆಚ್ಚು ಮಾಲೀಕ ಅಥವಾ ಅನುಭವದಾರರು ಇದ್ದರೆ, ಅವರ ಪೈಕಿ ಒಬ್ಬನಿಗೆ, ಕೊಡುವ ಅಥವಾ ನೀಡುವ ಮೂಲಕ, ಅಥವಾ

(ಬಿ) ಅಂಥ ಮಾಲೀಕ ಅಥವಾ ಅನುಭವದಾರನು ಸಿಗದಿದ್ದರೆ, ಆ ನೋಟೀಸು ಅಥವಾ ದಸ್ತಾವೇಜನ್ನು ಹಿಂದೆ ಹೇಳಿದಂತೆ ಯಾವನೇ ಅಂಥ ಮಾಲೀಕ ಅಥವಾ ಅನುಭವದಾರನ ವಯಸ್ಕ ಸದಸ್ಯ ಅಥವಾ ನೌಕರನಿಗೆ ಕೊಡುವ ಅಥವಾ ನೀಡುವ ಮೂಲಕ, ಅಥವಾ

(ಸಿ) ಹಿಂದೆ ಹೇಳಿದ ಯಾವುದೇ ವಿಧಾನವು ಲಭ್ಯವಿಲ್ಲದಿದ್ದರೆ, ಆಗ ಆ ನೋಟೀಸು ಅಥವಾ ದಸ್ತಾವೇಜನ್ನು, ಅದು ಸಂಬಂಧಪಡುವಂಥ ಕಟ್ಟಡ ಅಥವಾ ಭೂಮಿಯ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವಂತೆ ಮಾಡುವ ಮೂಲಕ,

-ಜಾರಿಗೊಳಿಸತಕ್ಕದ್ದು.

(3) ಸಾರ್ವಜನಿಕ ನೋಟೀಸಿನಂತೆಯೇ ಆಗಲಿ ಅಥವಾ ಸಾಮಾನ್ಯವಾಗಿಯಾಗಲಿ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ಸ್ಪಷ್ಟವಾಗಿ ನೋಟೀಸನ್ನು ಕೊಡಬೇಕೆಂದು ಅಗತ್ಯಪಡಿಸಿಲ್ಲದಂಥ ಉಪಬಂಧಗಳ ಮೂಲಕ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಅದನ್ನು ಕೊಡುವಂತೆ ಅಥವಾ ಜಾರಿಗೊಳಿಸುವಂತೆ ಈ ಅಧಿನಿಯಮವು ಅಗತ್ಯಪಡಿಸುವ ಅಥವಾ ಶಕ್ತಗೊಳಿಸುವಂಥ ಪ್ರತಿಯೊಂದು ನೋಟೀಸನ್ನು, ಅದರ ಒಂದು ಪ್ರತಿಯನ್ನು ಈ ಬಗ್ಗೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ನಿರ್ದೇಶಿಸಬಹುದಾದಂಥ ಅವಧಿಯಲ್ಲಿ ಸಂದರ್ಭಾನುಸಾರ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಕಚೇರಿಯ ಅಂಥ ಎದ್ದು ಕಾಣುವ ಸ್ಥಳದಲ್ಲಿ ಅಥವಾ ಅಂಥ ಇತರ ಸಾರ್ವಜನಿಕ ಕಟ್ಟಡಗಳು ಅಥವಾ ಸ್ಥಳಗಳಲ್ಲಿ ಹಚ್ಚಿದರೆ ಅಥವಾ ಅಂಥ ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಅಥವಾ ಅಂಥ ಇತರ ರೀತಿಯಲ್ಲಿ ಪ್ರಕಟಿಸಿದರೆ, ಅದನ್ನು ಸೂಕ್ತವಾಗಿ ಕೊಡಲಾಗಿದೆ ಅಥವಾ ಜಾರಿಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

(4) ನಮೂನೆಯಲ್ಲಿನ ಯಾವುದೇ ನ್ಯೂನತೆಯಿಂದಾಗಿ ಯಾವುದೇ ನೋಟೀಸು, ಅಥವಾ ಬಿಲ್ಲು ಅಸಿಂಧುವಾಗತಕ್ಕದ್ದಲ್ಲ.

(5) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳು, ವಿನಿಯಮಗಳು, ಉಪವಿಧಿಗಳು ಅಥವಾ ಆದೇಶದ ಮೇರೆಗೆ ಜಾರಿಗೊಳಿಸಿದ ಯಾವುದೇ ನೋಟೀಸು ಅಥವಾ ಇತರ ದಸ್ತಾವೇಜಿನಲ್ಲಿ ಒಂದು ಅವಧಿಯೊಳಗೆ ಯಾವುದೇ ತೆರಿಗೆ ಅಥವಾ ಇತರ ಮೊತ್ತವನ್ನು ಸಂದಾಯಮಾಡಬೇಕೆಂದು ಅಥವಾ ಯಾವುದೇ ಕೆಲಸವನ್ನು ನಿರ್ವಹಿಸಬೇಕೆಂದು ಅಥವಾ ಯಾವುದೇ ವ್ಯವಸ್ಥೆಯನ್ನು ಮಾಡಬೇಕೆಂದು, ನಿಗದಿಪಡಿಸಿರುವಾಗಲೆಲ್ಲಾ ಅಂಥ ಅವಧಿಯನ್ನು ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿನ ಸದರಿ ನಿಯಮಗಳು, ವಿನಿಯಮಗಳು ಉಪ-ವಿಧಿಗಳು ಅಥವಾ ಆದೇಶದಲ್ಲಿ ತದ್ವಿರುದ್ಧವಾದ ಯಾವುದೇ ಉಪಬಂಧವು ಇಲ್ಲದಿದ್ದಲ್ಲಿ, ಅಂಥ ಜಾರಿಯ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು.

(6) ಈ ಅಧಿನಿಯಮ ಅಥವಾ ಯಾವುದೇ ನಿಯಮ, ವಿನಿಯಮ, ಉಪ ವಿಧಿ ಅಥವಾ ಆದೇಶದ ಮೇರೆಗಿನ ಯಾವುದೇ ನೋಟೀಸು ಯಾವುದೇ ಕಾರ್ಯವನ್ನು ಮಾಡಲು ಅಗತ್ಯಪಡಿಸಿದ್ದು ಅದಕ್ಕೆ ಯಾವುದೇ ಕಾಲವನ್ನು ನಿಗದಿಪಡಿಸದಿದ್ದಲ್ಲಿ ಆ ನೋಟೀಸು ಅದನ್ನು ಮಾಡುವುದಕ್ಕಾಗಿ ಯುಕ್ತ ಕಾಲವನ್ನು ನಿಗದಿಪಡಿಸತಕ್ಕದ್ದು.

(7) ನೋಟೀಸಿನಲ್ಲಿರುವ ನಿಬಂಧನೆಗಳನ್ನು ಪಾಲಿಸದೇ ಇರುವ ಸಂದರ್ಭದಲ್ಲಿ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಅಥವಾ ಅದು ಅಧಿಕೃತಗೊಳಿಸಿದ ಅಧಿಕಾರಿಯು, ನಿರ್ವಹಿಸಬೇಕೆಂದು ಅಗತ್ಯಪಡಿಸಿದ ಕಾರ್ಯವನ್ನು ಮಾಡುವುದಕ್ಕಾಗಿ ಅವಶ್ಯವಿರಬಹುದಾದಂಥ ಕಾರ್ಯ ಅಥವಾ ಕ್ರಮಗಳನ್ನು ಕೈಗೊಳ್ಳುವುದು ಕಾನೂನುಬದ್ಧವಾಗಿರತಕ್ಕದ್ದು ಮತ್ತು ಅದರ ಬಗ್ಗೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ವಹಿಸಿದ ಎಲ್ಲಾ ವೆಚ್ಚಗಳನ್ನು ಯಾರಿಗೆ ಆ ನೋಟೀಸನ್ನು ಜಾರಿ

ಮಾಡಲಾಯಿತೋ ಆ ವ್ಯಕ್ತಿ ಅಥವಾ ವ್ಯಕ್ತಿಗಳು ಸಂದಾಯ ಮಾಡತಕ್ಕದ್ದು ಮತ್ತು ಅವುಗಳನ್ನು ಘಿಱಱಱನೇ ಅಧ್ಯಾಯದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

**307. ಧ್ವಜದ ಅಧಿಕೃತ ಪ್ರದರ್ಶನ.–** (1) ಯಾವನೇ ವ್ಯಕ್ತಿಯು ರಾಷ್ಟ್ರಧ್ವಜ ಅಥವಾ ಸರ್ಕಾರದಿಂದ ಮನ್ನಣೆ ಪಡೆದ ಧ್ವಜವನ್ನು ಹೊರತುಪಡಿಸಿ ಯಾವುದೇ ಧ್ವಜವನ್ನು ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಕಛೇರಿಯ ಮೇಲೆ ಹಾರಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣವನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಅಂಥ ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಉಲ್ಲಂಘನೆಯು ಮುಂದುವರಿದ ಪ್ರತಿಯೊಂದು ದಿನಕ್ಕಾಗಿ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**308. ರಾಜ್ಯ ಚುನಾವಣಾ ಆಯೋಗ.–** (1) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಎಲ್ಲ ಚುನಾವಣೆಗಳಿಗಾಗಿ ಚುನಾವಣಾ ಪಟ್ಟಿಯ ಸಿದ್ಧತೆಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣ ಹಾಗೂ ಚುನಾವಣೆಗಳನ್ನು ನಡೆಸುವುದು [1][ಮತ್ತು ಅಂತಹ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯದ ಮತ್ತು ನೀತಿಸಂಹಿತೆಯನ್ನು ಜಾರಿಗೆ ತರುವುದು][1] ರಾಜ್ಯದ ರಾಜ್ಯಪಾಲರಿಂದ ನೇಮಕ ಮಾಡಲಾಗುವ ರಾಜ್ಯ ಚುನಾವಣಾ ಕಮಿಷನರ್ ಅವರನ್ನು ಒಳಗೊಂಡ ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

(2) ರಾಜ್ಯ ಚುನಾವಣಾ ಕಮಿಷನರರ ಸೇವಾ ಷರತ್ತುಗಳು ಮತ್ತು ಹುದ್ದೆಯ ಅವಧಿಯು ರಾಜ್ಯಪಾಲರು, ನಿಯಮಗಳನುಸಾರ ನಿರ್ಧರಿಸಿರಬಹುದಾದಂತೆ ಇರತಕ್ಕದ್ದು:

[1][(2ಎ) ಆಯುಕ್ತರು, ತಮ್ಮ ಹುದ್ದೆಗೆ ಸ್ವಹಸ್ತಾಕ್ಷರದಲ್ಲಿ ಬರೆದ ರಾಜೀನಾಮೆಯನ್ನು ರಾಜ್ಯಪಾಲರಿಗೆ ಸಲ್ಲಿಸುವ ಮೂಲಕ ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡಬಹುದು, ಆದರೆ ರಾಜ್ಯಪಾಲರು ರಾಜೀನಾಮೆಯನ್ನು ಅಂಗೀಕರಿಸುವವರೆಗೆ ಆಯುಕ್ತರು ತಮ್ಮ ಹುದ್ದೆಯಲ್ಲಿ ಮುಂದುವರೆಯತಕ್ಕದ್ದು;

(2ಬಿ) (5)ನೇ ಉಪಪ್ರಕರಣದ ಅಡಿಯಲ್ಲಿ ಆಯುಕ್ತರು ರಾಜೀನಾಮೆ ಸಲ್ಲಿಸಿದ ಅಥವಾ ಇತರ ಬೇರಾವುದೇ ಕಾರಣಕ್ಕೆ ತೆರವಾದ ತಾತ್ಕಾಲಿಕ ಹುದ್ದೆಯನ್ನು ಹೊಸದಾಗಿ ನೇಮಕ ಮಾಡುವ ಮೂಲಕ ತುಂಬಬಹುದು:

ಪರಂತು, ಅಂಥ ನೇಮಕವನ್ನು ಆದಷ್ಟು ಬೇಗನೆ ಅಂದರೆ ಆ ಹುದ್ದೆಯು ತೆರವಾದ ದಿನಾಂಕದಿಂದ ಒಂದು ತಿಂಗಳ ಒಳಗೆ ಮಾಡತಕ್ಕದ್ದು.

(2ಸಿ) ಸರ್ಕಾರವು ರಾಜ್ಯ ಚುನಾವಣಾ ಆಯುಕ್ತರ ಹಣಕಾಸು ಅಧಿಕಾರಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅಗತ್ಯವಿರುವ ಹಣಕಾಸನ್ನು ಸುಗಮವಾಗಿ ಪಡೆಯುವುದಕ್ಕೆ ಅವಕಾಶ ಇರುವುದನ್ನು ಮತ್ತು ಲೆಕ್ಕದ ವಿವಿಧ ಶೀರ್ಷಿಕೆಗಳ ನಡುವೆ ನಿಧಿಗಳನ್ನು ವರ್ಗಾಯಿಸುವುದಕ್ಕೆ ಸಹ ಮುಕ್ತ ಅವಕಾಶ ಇರುವುದನ್ನು ಸುನಿಶ್ಚಿತಪಡಿಸಿಕೊಂಡು ಸಿಬ್ಬಂದಿ ವರ್ಗದವರಿಗೆ ಮತ್ತು ಚುನಾವಣೆಗೆ ಸಂಬಂಧಿಸಿದಂತೆ ತಗಲುವ ಖರ್ಚುವೆಚ್ಚಗಳನ್ನು ನಿರ್ವಹಿಸುವುದಕ್ಕೆ ಮತ್ತು ಪ್ರಕಾರ್ಯಗಳಿಗೆ ಮತ್ತು ಹೊಣೆಗಾರಿಕೆಗಳಿಗೆ ಅನುಗುಣವಾಗಿ ನಿಧಿಗಳನ್ನು ಹಂಚಿಕೆ ಮಾಡತಕ್ಕದ್ದು.

(2ಡಿ) ರಾಜ್ಯ ಚುನಾವಣಾ ಆಯೋಗವು ತನ್ನದೇ ಆದ ಕಾರ್ಯ ವಿಧಾನವನ್ನು ನಿರ್ಧರಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

ಪರಂತು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು, ರಾಜ್ಯ ಉಚ್ಚ ನ್ಯಾಯಾಲಯವು ಅವರನ್ನು ಹುದ್ದೆಯಿಂದ ತೆಗೆದುಹಾಕುವಂತಹುದೇ ರೀತಿಯ ಮತ್ತು ಅಂಥವೇ ಆಧಾರಗಳ ಹೊರತು, ರಾಜ್ಯ ಚುನಾವಣಾ ಕಮಿಷನರರನ್ನು ಹುದ್ದೆಯಿಂದ ತೆಗೆದುಹಾಕತಕ್ಕದ್ದಲ್ಲ ಮತ್ತು ರಾಜ್ಯ ಚುನಾವಣಾ ಕಮಿಷನರರ ಸೇವಾ ಷರತ್ತುಗಳು, ಅವರ ನೇಮಕಾತಿ ನಂತರ ಅವರಿಗೆ ಅನನುಕೂಲವಾಗುವಂತೆ ಬದಲಾಗತಕ್ಕದ್ದಲ್ಲ.

(3) ರಾಜ್ಯಪಾಲರು, (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರದತ್ತವಾದ ಕರ್ತವ್ಯಗಳನ್ನು ನಿರ್ವಹಿಸಲು ಅವಶ್ಯಕವಾಗಿರಬಹುದಾದಂಥ ಸಿಬ್ಬಂದಿಯನ್ನು, ರಾಜ್ಯ ಚುನಾವಣಾ ಆಯೋಗವು ಹಾಗೆ ಕೋರಿದಾಗ ಅದಕ್ಕೆ ದೊರೆಯುವಂತೆ ಮಾಡತಕ್ಕದ್ದು.

[1]['ಪರಂತು, ರಾಜ್ಯ ಚುನಾವಣಾ ಆಯುಕ್ತರು ಪಂಚಾಯತ್‌ಗಳ ಚುನಾವಣೆಗಳನ್ನು ನಡೆಸುವುದಕ್ಕಾಗಿ ರಾಜ್ಯ ಸಾರ್ವಜನಿಕ ವಲಯಗಳ ಉದ್ದಿಮೆಗಳ ಉದ್ಯೋಗಿಗಳನ್ನು ಸಹ ನಿಯೋಜಿಸಿಕೊಳ್ಳಬಹುದು ಮತ್ತು ಸ್ಥಳೀಯ ಪೊಲೀಸರು ಸೇರಿದಂತೆ ಸಾರ್ವಜನಿಕ ನೌಕರರ ಯಾವುದೇ ವರ್ಗವನ್ನು ಪಂಚಾಯತ್‌ಗಳಿಗೆ ಸಂಬಂಧಿಸಿದ ಚುನಾವಣಾ ಕರ್ತವ್ಯಗಳಲ್ಲಿ ನಿಯೋಜಿಸಿಕೊಳ್ಳುವುದನ್ನು ಬಿಟ್ಟುಬಿಡಬಹುದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

[1][[2][**308ಎ. ಕೆಲವು ಪ್ರಾಧಿಕಾರಗಳ ಸಿಬ್ಬಂದಿಯನ್ನು ಚುನಾವಣಾ ಕೆಲಸಕ್ಕೆ ಲಭ್ಯವಾಗುವಂತೆ ಮಾಡುವುದು.–**

(1) (2)ನೇ ಉಪಪ್ರಕರಣ ನಿರ್ದಿಷ್ಟಪಡಿಸಿರುವ ಪ್ರಾಧಿಕಾರಗಳು ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಅಗತ್ಯವಾಗಬಹುದಾದಷ್ಟು ಸಿಬ್ಬಂದಿಯನ್ನು ಯಾರೇ ರಿಟರ್ನಿಂಗ್ ಆಫೀಸರ್‌ಗೆ ಲಭ್ಯವಾಗುವಂತೆ ಮಾಡಬೇಕೆಂದು ರಾಜ್ಯ ಚುನಾವಣಾ ಆಯುಕ್ತರು ಕೋರಿದ ಸಂದರ್ಭದಲ್ಲಿ, ಆ ಸಿಬ್ಬಂದಿ ವರ್ಗದವರನ್ನು ಆ ಪ್ರಾಧಿಕಾರಗಳು ಒದಗಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ ಈ ಮುಂದಿನವುಗಳು ಪ್ರಾಧಿಕಾರಗಳಾಗಿ ಇರತಕ್ಕದ್ದು, ಎಂದರೆ:–

(i) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ;

(ii) ಕಾನೂನಿನ ಅಡಿಯಲ್ಲಿ ಸ್ಥಾಪಿತವಾಗಿರುವ ಪ್ರತಿಯೊಂದು ವಿಶ್ವವಿದ್ಯಾನಿಲಯ;

(iii) ಸರ್ಕಾರಿ ಕಂಪನಿ;

(iv) ಸರ್ಕಾರದ ನಿಯಂತ್ರಣದಲ್ಲಿರುವ ಅಥವಾ ಸರ್ಕಾರದಿಂದ ನೇರವಾಗಿ ಹಣಕಾಸು ಸೌಲಭ್ಯವನ್ನು ಪಡೆಯುತ್ತಿರುವ ಬ್ಯಾಂಕ್‌ಗಳು, ನಿಗಮ ಅಥವಾ ಉದ್ಯಮ.

**308ಎಎ. ಚುನಾವಣೆಗಳ ವೇಳಾಪಟ್ಟಿ.–** ರಾಜ್ಯ ಚುನಾವಣಾ ಆಯೋಗವು ಪಂಚಾಯತ್‌ನ ಅವಧಿಯು ಪೂರ್ಣಗೊಳ್ಳುವುದಕ್ಕೆ ಮೊದಲು ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಚುನಾವಣಾ ವೇಳಾಪಟ್ಟಿಯ ಅಧಿಸೂಚನೆಯನ್ನು ಹೊರಡಿಸುವುದಕ್ಕೂ ಮೊದಲಿನ ನಲವತ್ತೈದು ದಿನಗಳಿಗೆ ಕಡಿಮೆ ಇಲ್ಲದಂತೆ ಸ್ಥಾನಗಳ ಮೀಸಲಾತಿಯನ್ನು ಮತ್ತು ಚುನಾವಣಾ ವೇಳಾಪಟ್ಟಿಯನ್ನು ಘೋಷಿಸತಕ್ಕದ್ದು.

**308ಎಬಿ. ನಾಮ ಪತ್ರಗಳನ್ನು ಸಲ್ಲಿಸುವುದು ಮೊದಲಾದವುಗಳಿಗಾಗಿ ದಿನಾಂಕಗಳ ಅಧಿಸೂಚನೆ.** (1) ಸದಸ್ಯನನ್ನು ಆಯ್ಕೆ ಮಾಡುವಂತೆ ಚುನಾವಣಾ ಕ್ಷೇತ್ರವನ್ನು ಕೋರುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, [1][ಚುನಾವಣಾಧಿಕಾರಿಯು][1] ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ,–

(ಎ) ನಾಮ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು, ಆ ಕೊನೆಯ ದಿನಾಂಕವು ಮೊದಲು ಹೇಳಿರುವ ಅಧಿಸೂಚನೆಯ ಪ್ರಕಟಣೆಯ ದಿನಾಂಕದ ತರುವಾಯ ಬರುವ ಮೂರನೆಯ ದಿನವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಾಗಿರದ, ತರುವಾಯ ಬರುವ ದಿನವಾಗಿರತಕ್ಕದ್ದು;

(ಬಿ) ನಾಮಪತ್ರಗಳ ಪರಿಶೀಲನೆಗೆ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು. ಆ ದಿನಾಂಕವು ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ನಿಕಟ ತರುವಾಯದ ದಿನವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಾಗಿರದ ತರುವಾಯ ಬರುವ ದಿನವಾಗಿರತಕ್ಕದ್ದು;

(ಸಿ) ನಾಮಪತ್ರಗಳನ್ನು ವಾಪಸ್ಸು ಪಡೆಯುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು. ಆ ಕೊನೆಯ ದಿನಾಂಕವು ನಾಮಪತ್ರಗಳ ಪರಿಶೀಲನೆಗೆ ಗೊತ್ತುಪಡಿಸಿರುವ ದಿನಾಂಕದ ತರುವಾಯದ ಎರಡನೆಯ ದಿನವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಾಗಿರದ ತರುವಾಯ ಬರುವ ದಿನವಾಗಿರತಕ್ಕದ್ದು;

(ಡಿ) ಮತದಾನವು, ಅವಶ್ಯವಾದರೆ, ಮತದಾನಕ್ಕೆ ದಿನಾಂಕವನ್ನು ಅಥವಾ ದಿನಾಂಕಗಳನ್ನು ಗೊತ್ತುಪಡಿಸತಕ್ಕದ್ದು ಅಥವಾ ಆ ಪೈಕಿ ಮೊದಲನೆಯ ದಿನಾಂಕವು ಗ್ರಾಮ ಪಂಚಾಯತ್‌ಗೆ ನಡೆಯುವ ಚುನಾವಣೆ ಸಂದರ್ಭದಲ್ಲಿ, ಐದನೆಯ ದಿನಕ್ಕೆ ಮುಂಚಿನದಲ್ಲದ ದಿನಾಂಕವಾಗಿರತಕ್ಕದ್ದು ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮತ್ತು ಜಿಲ್ಲಾ ಪಂಚಾಯತ್‌ಗೆ ಚುನಾವಣೆ ಸಂದರ್ಭದಲ್ಲಿ ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವುದಕ್ಕೆ ನಿಗದಿ ಮಾಡಿದ ಕೊನೆಯ ದಿನಾಂಕದ ತರುವಾಯದ ಏಳನೆಯ ದಿನಕ್ಕಿಂತ ಮುಂಚಿನ ದಿನಾಂಕವಾಗಿರತಕ್ಕದ್ದು;

(ಇ) ಯಾವ ದಿನಾಂಕಕ್ಕೆ ಮುಂಚೆ ಚುನಾವಣೆಯನ್ನು ಮುಕ್ತಾಯಗೊಳಿಸತಕ್ಕದ್ದೋ ಆ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು;

(ಎಫ್) ಪಂಚಾಯತ್‌ಗಳಿಗೆ ಸದಸ್ಯರ ಚುನಾವಣಾ ಪ್ರಕ್ರಿಯೆಯನ್ನು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಚುನಾವಣಾ ಅಧಿಸೂಚನೆಯನ್ನು ಹೊರಡಿಸಿದ ಹತ್ತು ಕೆಲಸದ ದಿನಗಳೊಳಗೆ ಮುಕ್ತಾಯಗೊಳಿಸತಕ್ಕದ್ದು."

1. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 12.07.2017ರಿಂದ ಪ್ರತಿಯೋಜಿಸಲಾಗಿದೆ.

**308ಎಸಿ. ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟುವುದು.**–(1)ಚುನಾವಣಾ ಕಾಲದಲ್ಲಿ ಲಂಚಗುಳಿತನ ಮತ್ತು ಅನಗತ್ಯ ಪ್ರಭಾವ ಬೀರುವಂತಹ ಭ್ರಷ್ಟಾಚಾರಗಳನ್ನು ತಡೆಯುವ ದೃಷ್ಟಿಯಿಂದ, ರಾಜ್ಯ ಚುನಾವಣಾ ಆಯೋಗವು ಈ ಮುಂದಿನ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಎಂದರೆ:–

(ಎ) ನೀತಿ ಸಂಹಿತೆಯನ್ನು ಚುನಾವಣಾ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಫಲಿತಾಂಶಗಳನ್ನು ಘೋಷಿಸುವ ದಿನಾಂಕದವರೆಗೆ ಜಾರಿಗೆ ತರತಕ್ಕದ್ದು;

(ಬಿ) ರಿಟರ್ನಿಂಗ್ ಆಫೀಸರ್‌ಗಳು ಪ್ರತಿಯೊಂದು ಮತಗಟ್ಟೆಯಲ್ಲಿ ಚುನಾವಣಾ ಪ್ರಕ್ರಿಯೆಗಳ ವಿಡಿಯೋ–ಗ್ರಾಫಿಕ್ ಚಿತ್ರೀಕರಣ ಮಾಡಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಸಿ) ಯಾವ ಪಂಚಾಯತ್ ಪ್ರದೇಶದಲ್ಲಿ ನೀತಿ ಸಂಹಿತೆಯು ಜಾರಿಯಲ್ಲಿರುತ್ತದೋ ಆ ಪಂಚಾಯತ್ ಪ್ರದೇಶದ ಒಳಗೆ ನೀತಿ ಸಂಹಿತೆಯು ಜಾರಿಯಲ್ಲಿರುವ ಇಡೀ ಅವಧಿವರೆಗೆ ಎಲ್ಲ ಮದ್ಯದ ಅಂಗಡಿಗಳನ್ನು ಹಾಗೂ ಮದ್ಯ ತಯಾರಿಕಾ ಘಟಕಗಳನ್ನು ಮುಚ್ಚತಕ್ಕದ್ದು. ಮದ್ಯದ ಅಂಗಡಿಗಳ ಮತ್ತು ಮದ್ಯ ತಯಾರಿಕಾ ಘಟಕಗಳ ಮಾಲೀಕರು, ಅಧಿಭೋಗದಾರರು ಮತ್ತು ಸಂದರ್ಭಾನುಸಾರವಾಗಿ ವ್ಯವಸ್ಥಾಪಕರು ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿರುವ ಅವಧಿಯಲ್ಲಿ ತಮ್ಮ ಘಟಕಗಳನ್ನು ಮುಚ್ಚತಕ್ಕದ್ದು ಮತ್ತು ಮೊಹರು ಮಾಡಿ ಕೀಯನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿಕಾರ ವ್ಯಾಪ್ತಿಯುಳ್ಳ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರಿಗೆ ಒಪ್ಪಿಸತಕ್ಕದ್ದು. ಆ ಕಾಲದಲ್ಲಿ ಯಾರಾದರೂ ಮದ್ಯವನ್ನು ಸ್ವಾಧೀನದಲ್ಲಿಟ್ಟು ಕೊಂಡಿರುವುದು ಅಥವಾ ಮದ್ಯವನ್ನು ಸೇವಿಸಿದ ತರುವಾಯ ಸಾರ್ವಜನಿಕ ಉಪದ್ರವ, ಬೀದಿ ರಂಪಾಟ ಮಾಡುತ್ತಿರುವುದು ಕಂಡುಬಂದರೆ ಮುನ್ನೆಚ್ಚರಿಕೆ ಕ್ರಮವಾಗಿ ಚುನಾವಣೆ ಮುಕ್ತಾಯವಾಗುವವರೆಗೆ ಅವರನ್ನು ಕಸ್ಟಡಿಯಲ್ಲಿ ಇಡತಕ್ಕದ್ದು. ನೀತಿ ಸಂಹಿತೆ ಜಾರಿಯಲ್ಲಿರುವ ಅವಧಿಯಲ್ಲಿ ಮಾಡುವ ಯಾವುದೇ ಉಲ್ಲಂಘನೆಗಳು ಸಂಜ್ಞೇಯ ಮತ್ತು ಜಾಮೀನುರಹಿತ ಅಪರಾಧಗಳಾಗತಕ್ಕದ್ದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಸುಸಂಗತ ಕಾನೂನಿನ ಮೇರೆಗೆ ಜುಲ್ಮಾನೆಯ ಮತ್ತು ಕಾರಾವಾಸ ಶಿಕ್ಷೆಯ ದಂಡನೆಗೆ ಒಳಪಡತಕ್ಕದ್ದು.][2]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][**308ಎಡಿ. ಚುನಾವಣಾ ವೆಚ್ಚದ ಲೆಕ್ಕ ಮತ್ತು ಆ ವೆಚ್ಚದ ಗರಿಷ್ಠ ಮೊತ್ತ.**– (1) ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯು

ತಾನಾಗಿಯೇ ಆಗಲಿ ಅಥವಾ ತನ್ನ ಚುನಾವಣಾ ಏಜಂಟನಿಂದಾಗಲಿ, ಎಲ್ಲಾ ವೆಚ್ಚಗಳಿಗೆ, ತನ್ನನ್ನು ನಾಮನಿರ್ದೇಶನ ಮಾಡಿದ ದಿನಾಂಕದಿಂದ ಅದರ ಫಲಿತಾಂಶವು ಘೋಷಿತವಾದ ದಿನಾಂಕದ ನಡುವೆ, ಎರಡೂ ದಿನಾಂಕಗಳು ಸೇರಿದಂತೆ, ಚುನಾವಣೆಯ ಸಂಬಂಧದಲ್ಲಿ ತಾನು ಅಥವಾ ತನ್ನ ಚುನಾವಣಾ ಏಜೆಂಟನು ವಹಿಸಿದ ಅಥವಾ ಪ್ರಾಧೀಕರಿಸಿದ ಎಲ್ಲ ವೆಚ್ಚಗಳ ಬಗ್ಗೆ ಪ್ರತ್ಯೇಕವಾದ ಮತ್ತು ಸರಿಯಾದ ಲೆಕ್ಕವನ್ನು ಇಡತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಭ್ಯರ್ಥಿಯ ಚುನಾವಣೆಯ ಸಂಬಂಧದಲ್ಲಿ ಒಂದು ರಾಜಕೀಯ ಪಕ್ಷವು ಅಥವಾ ಯವುದೇ ಇತರ ಅಸೋಶಿಯೇಷನ್ ಅಥವಾ ನಿಕಾಯ ಅಥವಾ ವ್ಯಕ್ತಿಗಳು ಅಥವಾ ಯಾವೊಬ್ಬ ವ್ಯಕ್ತಿಯು (ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ) ವಹಿಸಿದ ಅಥವಾ ಪ್ರಾಧೀಕರಿಸಿದ ಯಾವುದೇ ವೆಚ್ಚವನ್ನು ಅಭ್ಯರ್ಥಿಯು ಅಥವಾ ಆತನ ಚುನಾವಣಾ ಏಜೆಂಟನು (1)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಚುನಾವಣೆಗೆ ಸಂಬಂಧಿಸಿದಂತೆ ವಹಿಸಿದ ಅಥವಾ ಪ್ರಾಧೀಕರಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ.

**ವಿವರಣೆ 1:** ಈ ಉಪಪ್ರಕರಣದ ಉದ್ದೇಶಕ್ಕಾಗಿ "ರಾಜಕೀಯ ಪಕ್ಷ"ವು, ತತ್ಕಾಲದಲ್ಲಿ ಜಾರಿಯಲ್ಲಿರುವ 1968ರ ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶದಲ್ಲಿನ ಅರ್ಥವನ್ನೇ ಹೊಂದಿರತಕ್ಕದ್ದು.

**ವಿವರಣೆ 2:** ಸಂದೇಹಗಳ ನಿವಾರಣೆಗಾಗಿ, ಸರ್ಕಾರದ ಸೇವೆಯಲ್ಲಿರುವ ಅಥವಾ ಜಿಲ್ಲಾ ಪಂಚಾಯಿತಿ ಅಥವಾ ಸಂದರ್ಭಾನುಸಾರವಾಗಿ ತಾಲ್ಲೂಕು ಪಂಚಾಯಿತಿ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, (ಅಭ್ಯರ್ಥಿಯು ಧಾರಣ ಮಾಡಿದ ಹುದ್ದೆಯ ಕಾರಣದಿಂದಾಗಲಿ ಅಥವಾ ಇತರ ಯಾವುದೇ ಕಾರಣದಿಂದಾಗಲಿ) ಯಾವೊಬ್ಬ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟ್ ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯೊಡನೆ ಕಾರ್ಯನಿರ್ವಹಿಸುವ ಇತರ ಯಾವೊಬ್ಬ ವ್ಯಕ್ತಿಗಾಗಿ, ವ್ಯಕ್ತಿಗೆ, ಅಥವಾ ವ್ಯಕ್ತಿಯ ಸಂಬಂಧದಲ್ಲಿ ತನ್ನ ಅಧಿಕೃತ ಕರ್ತವ್ಯದ ನೆರವೇರಿಕೆಯಲ್ಲಿ ಅಥವಾ ನೆರವೇರಿಕೆ ಎಂದು ತಾತ್ಪರ್ಯವಾಗುವಲ್ಲಿ ಮಾಡಿದ ಯಾವುದೇ ವ್ಯವಸ್ಥೆ, ಒದಗಿಸಿದ ಸೌಲಭ್ಯಗಳು ಅಥವಾ ಮಾಡಿದ ಯಾವುದೇ ಇತರ ಕಾರ್ಯ ಅಥವಾ ಕೃತ್ಯದ ಸಂಬಂಧದಲ್ಲಿ ವಹಿಸಿದ ಯಾವುದೇ ವೆಚ್ಚವನ್ನು, ಈ ಪ್ರಕರಣದ ಉದ್ದೇಶಕ್ಕಾಗಿ ಒಬ್ಬ ಅಭ್ಯರ್ಥಿಯು ಅಥವಾ ಚುನಾವಣಾ ಏಜೆಂಟನು, ಚುನಾವಣೆಯ ಸಂಬಂಧದಲ್ಲಿ ವಹಿಸಿದ ಅಥವಾ ಪ್ರಾಧೀಕರಿಸಿದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

(3) ಲೆಕ್ಕಪತ್ರವು, ನಿಯಮಿಸಬಹುದಾದ ಅಂತಹ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಸದರಿ ಒಟ್ಟು ವೆಚ್ಚವು ನಿಯಮಿಸಬಹುದಾದ ಅಂತಹ ಮೊತ್ತವನ್ನು ಮೀರತಕ್ಕದ್ದಲ್ಲ.][1]

1. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 12.07.2017ರಿಂದ ಸೇರಿಸಲಾಗಿದೆ.

**308ಬಿ. ರಿಟರ್ನಿಂಗ್ ಆಫೀಸರನಿಗೆ ಲೆಕ್ಕಪತ್ರಗಳನ್ನು ಸಲ್ಲಿಸುವಿಕೆ.**- ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ಪಂಚಾಯತ್‌ಗೆ ಅಥವಾ ತಾಲ್ಲೂಕು ಪಂಚಾಯತ್‌ಗೆ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಗೆದ್ದ ಅಭ್ಯರ್ಥಿಯ ಚುನಾವಣೆಯ ದಿನಾಂಕದಿಂದ ಅಥವಾ ಒಂದು ವೇಳೆ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಗೆದ್ದ ಅಭ್ಯರ್ಥಿಗಳಿದ್ದರೆ ಮತ್ತು ಚುನಾವಣಾ ದಿನಾಂಕಗಳು ಬೇರೆ ಬೇರೆಯಾಗಿದ್ದರೆ, ಆ ಎರಡು ದಿನಾಂಕಗಳಲ್ಲಿ ತರುವಾಯದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಅಧಿನಿಯಮದ ಅಡಿಯಲ್ಲಿ ಒಂದು ಚುನಾವಣೆಗೆ ನೇಮಿಸಲಾದ ರಿಟರ್ನಿಂಗ್ ಆಫೀಸರನಿಗೆ, 308ಎ ಪ್ರಕರಣದ ಅಡಿಯಲ್ಲಿ ತಾನು ಅಥವಾ ತನ್ನ ಚುನಾವಣಾ ಏಜಂಟನು ಇಟ್ಟಿರುವ ಲೆಕ್ಕಪತ್ರಗಳ ಯಥಾ ಪ್ರತಿಯಾಗಿರುವ ತನ್ನ ಚುನಾವಣಾ ವೆಚ್ಚದ ಲೆಕ್ಕಪತ್ರವನ್ನು ಸಲ್ಲಿಸತಕ್ಕದ್ದು.

**308ಸಿ. ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಸಲ್ಲಿಸುವದಕ್ಕೆ ತಪ್ಪುವುದು.**- ಯಾವೊಬ್ಬ ವ್ಯಕ್ತಿಯು,-

(ಎ) ಈ ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದಂಥ ಸಮಯದೊಳಗೆ ಮತ್ತು ವಿಧಾನದಲ್ಲಿ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಸಲ್ಲಿಸಲು ತಪ್ಪಿದ್ದಾನೆಂದು, ಮತ್ತು

(ಬಿ) ತಪ್ಪಿರುವುದಕ್ಕೆ ಸರಿಯಾದ ಕಾರಣ ಅಥವಾ ಸಮರ್ಥನೆಯಿಲ್ಲವೆಂದು,

- ಚುನಾವಣಾ ಆಯೋಗಕ್ಕೆ ಮನವರಿಕೆಯಾದರೆ, ರಾಜ್ಯ ಚುನಾವಣಾ ಆಯೋಗವು ರಾಜ್ಯ ಪತ್ರದಲ್ಲಿ ಪ್ರಕಟಿತವಾದ ಆದೇಶದ ಮೂಲಕ ಆತನನ್ನು ಅನರ್ಹನೆಂದು ಘೋಷಿಸತಕ್ಕದ್ದು ಮತ್ತು ಅಂತಹ ಯಾವೊಬ್ಬ ವ್ಯಕ್ತಿಯು ಆದೇಶದ ದಿನಾಂಕದಿಂದ ಆರು ವರ್ಷಗಳ ಅವಧಿಗಾಗಿ ಅನರ್ಹನಾಗತಕ್ಕದ್ದು.

**308ಡಿ. ರಿಟರ್ನಿಂಗ್ ಆಫೀಸರ್ ಮುಂತಾದವರು ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿ ನಿಯೋಜನೆಯ ಮೇಲೆ ಇರುವುದಾಗಿ ಭಾವಿಸತಕ್ಕದ್ದು.**- ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯ ಎಲ್ಲಾ ಚುನಾವಣೆಗಳಲ್ಲಿ, ಮತದಾರರ ಪಟ್ಟಿಯನ್ನು ತಯಾರಿಸುವ, ಪರಿಷ್ಕರಿಸುವ ಮತ್ತು ತಿದ್ದುವ ಮತ್ತು ಚುನಾವಣೆ ನಡೆಸುವ ಸಂಬಂಧದಲ್ಲಿ ನಿಯೋಜಿತರಾದ ರಿಟರ್ನಿಂಗ್ ಆಫೀಸರ್‌ಗಳು, ಪ್ರಿಸೈಡಿಂಗ್ ಆಫೀಸರುಗಳು, ಪೋಲಿಂಗ್ ಆಫೀಸರುಗಳು ಮತ್ತು ಇತರ ಯಾರೇ ಅಧಿಕಾರಿಗಳು ಅಥವಾ ಸಿಬ್ಬಂದಿಯು, ಅವರು ಹಾಗೆ ನಿಯೋಜಿತರಾದ ಅವಧಿಗಾಗಿ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿದ್ದಾರೆಂದು ಭಾವಿಸತಕ್ಕದ್ದು ಮತ್ತು ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಯು ಆ ಅವಧಿಯಲ್ಲಿ ರಾಜ್ಯ ಚುನಾವಣಾ ಆಯೋಗದ ನಿಯಂತ್ರಣ, ಮೇಲ್ವಿಚಾರಣೆ ಹಾಗೂ ಶಿಸ್ತಿಗೆ ಒಳಪಟ್ಟಿರತಕ್ಕದ್ದು ಹಾಗೂ ಈ ಅವಧಿಯಲ್ಲಿ ಅಧಿಕಾರಿಗಳು ದುರ್ನಡತೆ ಎಸಗಿದಲ್ಲಿ ಅಂಥವರ ವಿರುದ್ಧ ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರನ್ವಯ ಕ್ರಮ ಕೈಗೊಳ್ಳತಕ್ಕದ್ದು.][1]

1. ಪ್ರಕರಣ 308ಎ ಇಂದ 308ಡಿ 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 01-10-2003ರಿಂದ ಸೇರಿಸಲಾಗಿದೆ.

**309. ಅಭಿವೃದ್ಧಿ ಯೋಜನೆಯ ತಯಾರಿಕೆ.**- (1) ಪ್ರತಿಯೊಂದು ಗ್ರಾಮ ಪಂಚಾಯತಿಯು [1][ಗ್ರಾಮ ಸಭೆಯು ಸೂಚಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು][1], ಪ್ರತಿವರ್ಷವೂ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸತಕ್ಕದ್ದು ಮತ್ತು ಗೊತ್ತುಪಡಿಸಬಹುದಾದಂಥ ದಿನಾಂಕದೊಳಗೆ ಮತ್ತು ಅಂಥ ರೀತಿಯಲ್ಲಿ ತಾಲ್ಲೂಕು ಪಂಚಾಯತಿಗೆ [2][ಕಳುಹಿಸತಕ್ಕದ್ದು][2].

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(2) ಪ್ರತಿಯೊಂದು ತಾಲ್ಲೂಕು ಪಂಚಾಯತಿಯು, ಪ್ರತಿವರ್ಷವೂ ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಯೋಜನೆಗಳು ಸೇರಿದ ನಂತರ ತಾಲ್ಲೂಕು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಗೊತ್ತುಪಡಿಸಬಹುದಾದಂಥ ದಿನಾಂಕದೊಳಗೆ ಮತ್ತು ಅಂಥ ರೀತಿಯಲ್ಲಿ ಜಿಲ್ಲಾ ಪಂಚಾಯತಿಗೆ [1][ಕಳುಹಿಸತಕ್ಕದ್ದು][1].

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(3) ಪ್ರತಿಯೊಂದು ಜಿಲ್ಲಾ ಪಂಚಾಯತಿಯು, ಪ್ರತಿವರ್ಷವೂ ತಾಲ್ಲೂಕು ಪಂಚಾಯತಿಯ ಅಭಿವೃದ್ಧಿ ಯೋಜನೆಗಳು ಸೇರಿದ ನಂತರ ಜಿಲ್ಲೆಯ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು 310ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಜಿಲ್ಲಾ ಯೋಜನಾ ಸಮಿತಿಗೆ [1][ಕಳುಹಿಸತಕ್ಕದ್ದು][1].

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(4) ಗ್ರಾಮೀಣ ಮಟ್ಟದಿಂದ ರಾಜ್ಯಮಟ್ಟದವರೆಗಿನ ಅವಶ್ಯಕತೆಗಳನ್ನು ಈಡೇರಿಸುವ ಸಲುವಾಗಿ ಎಲ್ಲ ಯೋಜನೆಗಳನ್ನು ತಾಲ್ಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿಗಳು ಮತ್ತು ಜಿಲ್ಲಾ ಯೋಜನಾ ಸಮಿತಿಗಳ ಮೂಲಕ ರೂಪಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

[1][**309ಎ. ಪಂಚಾಯತ್‌ಗಳಿಗಾಗಿ ವಿಕೇಂದ್ರೀಕರಣ ಯೋಜನೆ.**– ಸ್ವಯಂ-ಆಡಳಿತ ಸಂಸ್ಥೆಗಳಾದ ಪಂಚಾಯತ್‌ಗಳು ಸಾಮಾಜಿಕ ನ್ಯಾಯ ಸೇರಿದಂತೆ, ಪಂಚಾಯತ್‌ಗಳಿಗೆ ಪ್ರಕಾರ್ಯಗಳನ್ನು, ಕಾರ್ಯನಿರ್ವಾಹಕರನ್ನು ಮತ್ತು ನಿಧಿಗಳನ್ನು ಒಟ್ಟಾರೆ ಹಾಗೂ ಏಕಕಾಲದಲ್ಲಿ ವಹಿಸಿಕೊಟ್ಟು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸತಕ್ಕದ್ದು. ಸುರಕ್ಷಿತವಲ್ಲದ ವರ್ಗಗಳ ಹಿತಾಸಕ್ತಿಗಳಿಗೆ ಒತ್ತು ನೀಡಿ ಎಲ್ಲ ವರ್ಗಗಳ ಜನರ ಅಗತ್ಯತೆಗಳನ್ನು ನಿರ್ಧರಿಸಿ ನಿರ್ಣಯಿಸುವ ಮತ್ತು ಅವುಗಳಿಗೆ ಆದ್ಯತೆ ನಿಗದಿ ಮಾಡಿ ತಳಮಟ್ಟದಿಂದ ಅಭಿವೃದ್ಧಿಯಾಗುವಂತೆ ಯೋಜನೆಗಳನ್ನು ರೂಪಿಸತಕ್ಕದ್ದು.

**309ಬಿ. ದೂರದೃಷ್ಟಿ ಯೋಜನೆ.–(1)** ಪ್ರತಿಯೊಂದು ಹೊಸದಾಗಿ ಚುನಾಯಿತವಾದ ಗ್ರಾಮ ಪಂಚಾಯತಿಯು, ಅದರ ರಚನೆಯ ದಿನಾಂಕದಿಂದ ಮೂರು ತಿಂಗಳೊಳಗಾಗಿ, ಜನವಸತಿ ಸಭಾ, ವಾರ್ಡ್ ಸಭಾ, ಮತ್ತು ಗ್ರಾಮ ಸಭೆಗಳ ಸದಸ್ಯರನ್ನು ಅದರ ಪ್ರದೇಶದ ಸಂಪನ್ಮೂಲಗಳನ್ನು, ಜನಸಂಖ್ಯೆ ಮತ್ತು ಅಗತ್ಯಗಳನ್ನು ತೋರಿಸುವ ಸಹಭಾಗಿ ಗ್ರಾಮೀಣ ಪರಾಮರ್ಶನವನ್ನು ಕೈಗೊಳ್ಳತಕ್ಕದ್ದು.

(2) ಗ್ರಾಮ ಪಂಚಾಯತಿಯ, ಕಾರ್ಯಸಾಧನೆ ಪದ್ಧತಿಯನ್ನು ಬಳಸಿಕೊಂಡು ಕ್ರಮ ಕೈಗೊಳ್ಳುವುದಕ್ಕಾಗಿ ಗುರಿಗಳನ್ನು ಹೊಂದಿರುವ ಮತ್ತು ಅಭಿವೃದ್ಧಿ ಪ್ರತಿಫಲದ ಸೂಚಿಗಳಿಗೆ ಸ್ಥಳೀಯ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸ್ಥಾಪಿಸಿದ ಅಭಿವೃದ್ಧಿ ಮೈಲಿ ಗುರುತುಗಳು ಅಭಿವೃದ್ಧಿಯ ಆಧಾರದ ಮೇಲೆ ಪಂಚಾಯತ್ ಪೂರ್ಣ ಅವಧಿಗಾಗಿ ದೂರದೃಷ್ಟಿ ಯೋಜನೆಯನ್ನು ಮುಂದಾಲೋಚನೆ ಸಿದ್ಧಪಡಿಸತಕ್ಕದ್ದು.

(3) ದೂರದೃಷ್ಟಿ ಯೋಜನೆಯ ತನ್ನ ಅವಧಿಯ ಮುಂದಿನ ಐದು ವರ್ಷಗಳಿಗಾಗಿ ಪ್ರತಿವರ್ಷಕ್ಕೆ ಅಗತ್ಯ-ಆಧಾರಿತ ವಾರ್ಷಿಕ ಯೋಜನೆಗಳನ್ನು ನಿರ್ಮಿಸುವ ಆಧಾರದಲ್ಲಿ ರೂಪಿಸತಕ್ಕದ್ದು. ಆದ್ಯತೆ ವಿಷಯಗಳು ಜವಾಬ್ದಾರಿ ನಕ್ಷೆಯಲ್ಲಿ ಹೇಳಲಾದ ಆದ್ಯತಾರ್‍ಯಾಂಕಿಂಗ್ ವಿಧಾನದ ಆಧಾರದಲ್ಲಿರತಕ್ಕದ್ದು.

(4) ಮುಂದಿನ ಹಣಕಾಸು ವರ್ಷದ ಅವಧಿಯಲ್ಲಿ ನಿಧಿಗಳ ಲಭ್ಯತೆಗೆ ಒಳಪಟ್ಟು ಪ್ರತಿಯೊಂದು ಗ್ರಾಮ ಪಂಚಾಯತಿಯ ಅದೇ ವರ್ಷದ ಅಕ್ಟೋಬರ್ ಒಳಗಾಗಿ ಕ್ರೋಢೀಕರಣ ಮತ್ತು ಸಂಯೋಜನೆಗಾಗಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ತಮ್ಮ ವಾರ್ಷಿಕ ಕರಡು ಯೋಜನೆಗಳನ್ನು ಸಲ್ಲಿಸತಕ್ಕದ್ದು.

**ವಿವರಣೆ:–** 309ಎ, 309ಬಿ ಪ್ರಕರಣದ ಉದ್ದೇಶಕ್ಕಾಗಿ ಮತ್ತು ಅಧಿನಿಯಮದಲ್ಲಿ ಸದರಿ ಪದಾವಳಿಗಳು ಬರುವಕಡೆಗಳಲ್ಲಿ:

(1) "ಸಹಭಾಗೀ ಗ್ರಾಮೀಣ ಪರಾಮರ್ಶೆ"ಯಲ್ಲಿ ಈ ಅಧಿನಿಯಮದ ಅಡಿಯಲ್ಲಿ ಪಂಚಾಯತ್‌ಗಳ ದೀರ್ಘಾವಧಿ ದೂರದೃಷ್ಟಿ ಯೋಜನೆಗೆ ಅಥವಾ ವಾರ್ಷಿಕ ಯೋಜನೆಗಳಿಗೆ ಸಂಬಂಧಪಟ್ಟಂತೆ ಕೈಗೆತ್ತಿಕೊಳ್ಳಲಾದ ವಾಸ್ತವಾಂಶಗಳ ಕುರಿತಂತೆ ಅಧ್ಯಯನ, ವಿಶ್ಲೇಷಣೆ ಮತ್ತು ಪರಾಮರ್ಶೆ ಒಳಗೊಂಡಿರುತ್ತವೆ.

(2) "ಕಾರ್ಯಸಾಧನೆ ಪದ್ಧತಿ" ಎಂದರೆ ಮೂರು ಪ್ರಾಥಮಿಕ ಘಟಕಗಳಾದ-ಅಳತೆಗೋಲು, ಪ್ರತಿಕ್ರಿಯೆ ಮತ್ತು ಧನಾತ್ಮಕ ಮರು ಜಾರಿ ಒಳಗೊಂಡಿರುವ, ವೈಜ್ಞಾನಿಕ ಆಧಾರಿತ, ದತ್ತಾಂಶ ಆಧಾರಿತ ನಿರ್ವಹಣಾ ಪದ್ಧತಿ ಮತ್ತು ಇದರಲ್ಲಿ ಅತ್ಯಗತ್ಯ ಧ್ಯೇಯೋದ್ದೇಶಗಳನ್ನು ಮತ್ತು ಆದ್ಯತೆಗಳನ್ನು ಸಾಧಿಸುವ ನಿಟ್ಟಿನಲ್ಲಿ ಸಂಪನ್ಮೂಲಗಳನ್ನು, ವ್ಯವಸ್ಥೆಗಳನ್ನು ಹಾಗೂ ಸಿಬ್ಬಂದಿವರ್ಗದವರನ್ನು ಸರಿಹೊಂದಾಣಿಕೆ ಮಾಡುವ ವಿಧಾನದ ಮೂಲಕ ಪರಿಣಾಮಕಾರಿಯಾಗಿ ಮತ್ತು ದಕ್ಷತೆಯಿಂದ ನಿರಂತರವಾಗಿ ಗುರಿಗಳನ್ನು ಸಾಧಿಸುತ್ತಿರುವುದನ್ನು ಸುನಿಶ್ಚಿತಪಡಿಸುವಂಥ ಕಾರ್ಯಚಟುವಟಿಕೆಗಳು ಸೇರುತ್ತವೆ.

(3) "ಆದ್ಯತಾ ರ್‍ಯಾಂಕಿಂಗ್" ಇದು 'ಆದ್ಯತಾ ನಿಗದಿ ವಿಧಾನ'ವನ್ನು ಬಳಸಿಕೊಂಡು ಫಲಾನುಭವಿಗಳನ್ನು, ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಪರಿಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಪ್ರದೇಶದ ಹಿಂದುಳಿದಿರುವಿಕೆ, ಅವಶ್ಯಕತೆಯತುರ್ತು, ಪರಿಣಾಮಕಾರಿ ಹಂತ ಮತ್ತು ವ್ಯಾಪ್ತಿಯ ಆದ್ಯತೆಗಳನ್ನು ನಿರ್ಧರಿಸುವುದಕ್ಕೆ ಸೂಚಕಗಳನ್ನು ನೀಡುತ್ತದೆ.

**309ಸಿ. ತಾಲ್ಲೂಕು ಪಂಚಾಯತ್ ಯೋಜನೆ.– (1)** 309ಡಿ ಪ್ರಕರಣದ ಅಡಿಯಲ್ಲಿ ರಚನೆಯಾದ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಮುಂದೆ ಮಂಡಿಸುವುದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳ ಯೋಜನೆಗಳನ್ನು ಡಿಜಿಟಲ್ ನಮೂನೆಯಲ್ಲಿ ಕ್ರೋಢೀಕರಿಸುವುದಕ್ಕೆ ತಾಲ್ಲೂಕು ಪಂಚಾಯತಿಗಳು ಹೊಣೆಯಾಗತಕ್ಕದ್ದು.

(2) ತಾಲ್ಲೂಕು ಪಂಚಾಯತಿಯು ಜಿಲ್ಲಾ ಪಂಚಾಯತಿಗೆ ಈ ಯೋಜನೆಯ ಡಿಜಿಟಲ್ ಪ್ರತಿಯನ್ನು ಕೂಡಾ ಕಳುಹಿಸತಕ್ಕದ್ದು.

**309ಡಿ. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ.–** (1) ಪ್ರತಿಯೊಂದು ತಾಲ್ಲೂಕಿನಲ್ಲಿ ಈ ಕೆಳಗಿನವುಗಳನ್ನೊಳಗೊಂಡ ತಾಲ್ಲೂಕು ಮಟ್ಟದಲ್ಲಿ ಯೋಜನೆಯ ಸಂಯೋಜನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಸ್ಥಾಪಿತವಾಗತಕ್ಕದ್ದು, ಎಂದರೆ:–

| | | |
|---|---|---|
| (i) | ತಾಲ್ಲೂಕಿನ ದೊಡ್ಡ ಭಾಗಗಳನ್ನು ಪ್ರತಿನಿಧಿಸುವ ವಿಧಾನಸಭೆ ಸದಸ್ಯರು | **ಅಧ್ಯಕ್ಷರು** |
| (ii) | ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಅಧ್ಯಕ್ಷ | **ಕೋ ಛೇರ್ಮನ್** |
| (iii) | ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ದೊಡ್ಡ ನಗರ ಸ್ಥಳೀಯ ಸ್ವಯಂ ಆಡಳಿತದ ಅಧ್ಯಕ್ಷ | **ಕೋ ಚೇರ್‌ಪರ್ಸನ್** |
| (iv) | ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಪೈಕಿ ಲಾಟರಿಯ ಮೂಲಕ ಆಯ್ಕೆ ಮಾಡಲಾದ ಗ್ರಾಮ ಪಂಚಾಯತಿಯ ಅಧ್ಯಕ್ಷ | **ವೈಸ್ ಚೇರ್‌ಪರ್ಸನ್** |
| (v) | ಲೋಕಸಭೆ ಮತ್ತು ರಾಜ್ಯ ವಿಧಾನಸಭೆಯ ಸದಸ್ಯರು ತಾಲ್ಲೂಕಿನ ಭಾಗ ಅಥವಾ ಪೂರ್ಣ ತಾಲ್ಲೂಕನ್ನು ಪ್ರತಿನಿಧಿಸುವ ತಾಲ್ಲೂಕಿನೊಳಗೆ ಮತದಾನ ಕ್ಷೇತ್ರಗಳನ್ನು ಹೊಂದಿರುವ ತಾಲ್ಲೂಕುಗಳಿಗೆ ಮತದಾರನೆಂದು ನೋಂದಾಯಿತವಾಗಿರುವ ರಾಜ್ಯಸಭಾ ಮತ್ತು ರಾಜ್ಯ ವಿಧಾನ ಪರಿಷತ್‌ನ ಸದಸ್ಯರು | **ಸದಸ್ಯರು** |
| (vi) | ಸಂಬಂಧಪಟ್ಟ ತಾಲ್ಲೂಕು ಪಂಚಾಯತ್ ಉಪಾಧ್ಯಕ್ಷ | **ಸದಸ್ಯರು** |
| (vii) | ಸಾಮಾಜಿಕ ನ್ಯಾಯ ಸಮಿತಿಯ ಚೇರ್ಮನ್ | **ಸದಸ್ಯರು** |
| (viii) | ಲಾಟರಿಯ ಮೂಲಕ ಆಯ್ಕೆಯಾದ ಗ್ರಾಮ ಪಂಚಾಯತ್‌ನ ಐವರು ಅಧ್ಯಕ್ಷರು, ಅದರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು ಮತ್ತು ಒಬ್ಬರು ಅನುಸೂಚಿತ ಜಾತಿಗಳಿಗೆ ಮತ್ತು ಒಬ್ಬರು ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿರತಕ್ಕದ್ದು | **ವಿಶೇಷ ಆಹ್ವಾನಿತರು** |
| (ix) | ತಾಲ್ಲೂಕಿನೊಳಗೆ ಇರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರು | **ವಿಶೇಷ ಆಹ್ವಾನಿತರು** |
| (x) | ತಾಲ್ಲೂಕಿನೊಳಗೆ ಇರುವ ಪಿಸಿಎಆರ್‌ಡಿ ಅಧ್ಯಕ್ಷರು | **ವಿಶೇಷ ಆಹ್ವಾನಿತರು** |
| (xi) | ಜಿಲ್ಲೆಯಲ್ಲಿನ ಮುಂಚೂಣಿ ಬ್ಯಾಂಕಿನ ಜಿಲ್ಲಾ ಮ್ಯಾನೇಜರ್ | **ವಿಶೇಷ ಆಹ್ವಾನಿತರು** |
| (xii) | ಮೂವರು ತಜ್ಞರು ತಾಂತ್ರಿಕ ವಲಯದಿಂದ ಒಬ್ಬರು (ಸಂಬಂಧಪಟ್ಟ ತಾಲ್ಲೂಕಿನ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್/ಐ.ಟಿ.ಐ) ಪ್ರಾಂಶುಪಾಲರು ಮತ್ತು ಸೇವಾ ವಲಯದಿಂದ ಒಬ್ಬರು (ಸಮಾಜವಿಜ್ಞಾನ) ಸ್ಥಳೀಯ ಕಾಲೇಜಿನ ಪ್ರಾಂಶುಪಾಲರು), ಗ್ರಾಮೀಣಾಭಿವೃದ್ಧಿಯಿಂದ ಒಬ್ಬರು( ಕೃಷಿ ವಿಜ್ಞಾನ ಕೇಂದ್ರದ ನಿರ್ದೇಶಕರು) | **ವಿಶೇಷ ಆಹ್ವಾನಿತರು** |

(2) ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ವಿಶೇಷ ಆಹ್ವಾನಿತರು ಅಥವಾ ಪದನಿಮಿತ್ತ ಸದಸ್ಯರನ್ನು ನಾಮನಿರ್ದೇಶನ ಮಾಡತಕ್ಕದ್ದು. ಈ ಸದಸ್ಯರು ಪದಾವಧಿಯ ತಾಲ್ಲೂಕು ಪಂಚಾಯತಿಯ ಪದಾವಧಿಯೊಂದಿಗೆ ಮುಕ್ತಾಯವಾಗತಕ್ಕದ್ದು ಮತ್ತು ಪದನಿಮಿತ್ತ ಸದಸ್ಯರ ಪದಾವಧಿಯೊಂದಿಗೆ ಅಥವಾ ತಾಲ್ಲೂಕು ಪಂಚಾಯತಿಯ ಪದಾವಧಿಯೊಂದಿಗೆ ಇದರಲ್ಲಿ ಯಾವುದು ಮೊದಲೋ ಅದರೊಂದಿಗೆ ಮುಕ್ತಾಯವಾಗತಕ್ಕದ್ದು.

**309ಇ. ಯೋಜನೆ ಮತ್ತು ಅಭಿವೃದ್ಧಿಯ ಕಾರ್ಯವಿಧಾನ.–** (1) ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಎಲ್ಲಾ ಪಂಚಾಯತಿಗಳ ಮತ್ತು ನಗರ ಸ್ಥಳೀಯ ಸ್ವಯಂ ಆಡಳಿತಗಳು ಸಲ್ಲಿಸಿದ ಕರಡು ವಾರ್ಷಿಕ ಯೋಜನೆಗಳನ್ನು ಸ್ವೀಕರಿಸತಕ್ಕದ್ದು ಮತ್ತು ತಾಲ್ಲೂಕು ಮಟ್ಟದಲ್ಲಿ ಪ್ರತಿಯೊಂದು ವಲಯದ ಆದ್ಯತೆಗಳನ್ನು ವಲಯವಾರು ಗುರುತಿಸಿ ಕ್ರೋಢೀಕರಿಸತಕ್ಕದ್ದು.

(2) ಆದ್ಯತೆ ನಕಾಶೆ ಮತ್ತು ಯೋಜನೆಗಳ ಕ್ರೋಢೀಕರಣ ವಿಧಾನವನ್ನು ಅನುಸರಿಸಿ ಆದ್ಯತೆ ವಿಷಯಗಳ ಮೂಲಕ ಮಧ್ಯಂತರ ಮಟ್ಟದಲ್ಲಿ ಸಂಯೋಜನೆ ಕಾರ್ಯವಿಧಾನವನ್ನು ಸಾಧಿಸತಕ್ಕದ್ದು.

(3) ಈ ಪ್ರಕರಣದಲ್ಲಿ ಒಳಗೊಂಡಿರುವುದಾವುದೂ ಗ್ರಾಮ ಪಂಚಾಯತಿಗಳ ತಾಲ್ಲೂಕು ಪಂಚಾಯತ್ ಅಥವಾ ಸಂದರ್ಭಾನುಸಾರವಾಗಿ ನಗರ ಸ್ಥಳೀಯ ಸ್ವಯಂ ಆಡಳಿತಗಳ ಯೋಜನೆಗಳಲ್ಲಿ ಶಿಫಾರಸ್ಸುಗಳು ಮತ್ತು ಆದ್ಯತೆ ಬದಲಾಯಿಸಲು, ಮಾರ್ಪಡಿಸಲು ಅಥವಾ ವ್ಯತ್ಯಾಸಗೊಳಿಸಲು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಅಧಿಕಾರವಿಲ್ಲ ಎಂದು ಅರ್ಥೈಸತಕ್ಕದ್ದು.

(4) ಸ್ಥಳೀಯ ಸ್ವಯಂ ಆಡಳಿತಗಳ ಪ್ರತಿಯೊಂದು ಪ್ರತ್ಯೇಕ ಘಟಕದ ಆದ್ಯತೆಗಳನ್ನು ಗುರುತಿಸುವ ಗುರಿಯೊಂದಿಗೆ ಕ್ರೋಢೀಕರಣದ ಪರಿಣಾಮವಾಗಿ ಮಧ್ಯಂತರ ಮಟ್ಟದಲ್ಲಿ ಯೋಜನೆಯು ಮುಂದಿನವುಗಳನ್ನು ಒಳಗೊಳ್ಳತಕ್ಕದ್ದು, ಎಂದರೆ:–

i. ಒಂದು ಅಥವಾ ಹೆಚ್ಚಿನ ಸ್ಥಳೀಯ ಪ್ರಾಧಿಕಾರಗಳ ಮೂಲಕ ನಡೆಯುವ ಸ್ಕೀಮ್‌ಗಳ ಸ್ಥಳ ವಿಸ್ತಾರದ ಸಂಯೋಜನೆ, ಸಾಧನೆಗಳ ಸಂಯೋಜನೆ.

ii. ಅಂತರ ವಲಯಕ್ಕೆ ಸಂಬಂಧಿಸಿದ ಹಲವಾರು ಸ್ಕೀಮ್‌ಗಳ ಸಂಯೋಜನೆ ಎಂದು ಅರ್ಥೈಸಲಾಗುವ ವಲಯವಾರು ಸಂಯೋಜನೆ,

iii. ಅಂತರ್ವಲಯ ಸಂಯೋಜನೆ ಎಂದರೆ ವಿವಿಧ ಸ್ಕೀಮ್‌ಗಳಿಂದ ಸಂಪನ್ಮೂಲಗಳನ್ನು ಸೆಳೆಯುವ ಮೂಲಕ ವಿವಿಧ ಮಧ್ಯಪ್ರವೇಶದಿಂದ ಗರಿಷ್ಠ ಪ್ರಭಾವವನ್ನು ಖಚಿತಪಡಿಸುವುದಕ್ಕಾಗಿ ಗುರಿಯಾಗಿರುವುದು.

iv. ನೇರ ಸಂಯೋಜನೆ ಎಂದರೆ ಉನ್ನತ ಪಂಚಾಯತ್ ಮಟ್ಟಗಳಲ್ಲಿ ಏನು ಮಾಡಬೇಕಿದೆ ಅದನ್ನು ಪ್ರತ್ಯೇಕಗೊಳಿಸುವುದು.

v. ಸಂಪನ್ಮೂಲಗಳ ಸಂಯೋಜನೆ ಎಂದರೆ; ಪಂಚಾಯತ್ ಬಳಸಬಹುದಾದ ಸ್ಥಳೀಯ ಯೋಜನೆಗಳೊಳಗೆ ಸಂಯೋಜಿಸಬಹುದಾದ ಮತ್ತು ಯಾವುದಕ್ಕೂ ಅವು ಹೆಚ್ಚುವರಿ ಸಂಪನ್ಮೂಲಗಳನ್ನು ಕೊಡುಗೆ ನೀಡಬಹುದೇ ಅಂತಹ ಕೇಂದ್ರ ಪ್ರಾಯೋಜಿತ ಮತ್ತು ರಾಜ್ಯ ಪ್ರಾಯೋಜಿತ ಎರಡೂ ವಿವಿಧ ಸ್ಕೀಮ್‌ಗಳ ವರ್ಗೀಕರಣವನ್ನು ಗುರುತಿಸುವುದು ಮತ್ತು ಯೋಜಿಸುವುದನ್ನು ಗಮನಿಸುವುದು.

**309ಎಫ್. ಜಿಲ್ಲಾ ಪಂಚಾಯತ್ ಯೋಜನೆ.**–ಜಿಲ್ಲಾ ಪಂಚಾಯತಿಗಳು ಜಿಲ್ಲಾ ಪಂಚಾಯತ್‌ನ ಕರಡು ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಪಂಚಾಯತಿಗಳ ಯೋಜನೆಗಳನ್ನು ಕ್ರೋಢೀಕರಿಸುವುದು ಮತ್ತು ಜಿಲ್ಲಾ ಯೋಜನಾ ಸಮಿತಿಯ ಮುಂದೆ ಮಂಡಿಸುವುದಕ್ಕೆ ಜವಾಬ್ದಾರರಾಗತಕ್ಕದ್ದು.

**309ಜಿ. ಜಿಲ್ಲಾ ಅಭಿವೃದ್ಧಿ ಯೋಜನೆ.**– **(1)** ಜಿಲ್ಲಾ ಯೋಜನಾ ಸಮಿತಿಯು ಅನುದಾನ ಲಭ್ಯತೆಗೆ ಒಳಪಟ್ಟು, ಈ ಕೆಳಗಿನವುಗಳ ಕುರಿತಂತೆ ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು, ಎಂದರೆ:–

(i) ಸ್ಥಳ ವಿಸ್ತಾರ ಯೋಜನೆ, ನೀರಿನ ಹಂಚಿಕೆ ಮತ್ತು ಇತರ ಭೌತಿಕ ಮತ್ತು ನೈಸರ್ಗಿಕ ಸಂಪನ್ಮೂಲ, ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಒಳಗೊಂಡಂತೆ ಜಿಲ್ಲೆಯಲ್ಲಿ ಪಂಚಾಯತಿಗಳು ಮತ್ತು ನಗರ ಸ್ಥಳೀಯ ಪ್ರಾಧಿಕಾರಗಳ ನಡುವೆ ಸಮಾನ ಆಸಕ್ತಿಗಳ ವಿಷಯಗಳು;

(ii) ಹಣಕಾಸು ಅಥವಾ ಲಭ್ಯವಿರುವ ಸಂಪನ್ಮೂಲಗಳ ವ್ಯಾಪ್ತಿ ಮತ್ತು ವಿಧಾನ.

(2) ಜಿಲ್ಲಾ ಯೋಜನಾ ಸಮಿತಿಯು ಪಂಚಾಯತ್‌ಗಳು ಮತ್ತು ನಗರ ಸ್ಥಳೀಯ ಮತ್ತು ಇತರ ಯೋಜನಾ ಘಟಕಗಳ ಯೋಜನೆಗಳನ್ನು, ಅವುಗಳ ನಡುವೆ ಪರಸ್ಪರ ಸಮಾಲೋಚನೆ ಮತ್ತು ವ್ಯವಹರಿಸುವುದಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ ಜೋಡಿಸುವುದು ಮತ್ತು ಗ್ರಾಮೀಣ ಯೋಜನೆಗಳ ವಲಯ ಮತ್ತು ಸ್ಥಳವಿಸ್ತಾರ ವಿಷಯಗಳನ್ನು ಸಂಯೋಜಿಸುವುದಕ್ಕಾಗಿ ಚೌಕಟ್ಟನ್ನು ಕಲ್ಪಿಸುವುದು.

(3) ಜಿಲ್ಲಾ ಯೋಜನಾ ಸಮಿತಿಯ ಕ್ರೋಢೀಕರಣ ಮತ್ತು ಸಂಯೋಜನಾ ಕಾರ್ಯವಿಧಾನವು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಸಿದ್ಧಪಡಿಸಿದ ಯೋಜನೆಗಳನ್ನು ವ್ಯತ್ಯಾಸಗೊಳಿಸತಕ್ಕದ್ದಲ್ಲ. ಆದರೆ ಈಗಾಗಲೇ ಮೊದಲು ಸೇರಿರುವ ಅಥವಾ ಯೋಜನೆಗಳಲ್ಲಿ ಒಳಗೊಂಡಿರುವ ಯೋಜನೆಗಳನ್ನು ಸೇರಿಸತಕ್ಕದ್ದಲ್ಲ.

(4) ಜಿಲ್ಲಾ ಯೋಜನಾ ಸಮಿತಿಯು ಕ್ರೋಢೀಕೃತ ಯೋಜನೆಯನ್ನು ಸಿದ್ಧಪಡಿಸುವಾಗ, ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸುವ ಅಂಥ ಸಂಸ್ಥೆಗಳು ಮತ್ತು ಸಂಘಗಳೊಂದಿಗೆ ಸಮಾಲೋಚಿಸತಕ್ಕದ್ದು.

(5) ಕ್ರೋಢೀಕರಣ ಮತ್ತು ಸಂಯೋಜನೆಯ ಕಾರ್ಯವಿಧಾನವು ಪೂರ್ಣವಾದ ತರುವಾಯ, ಜಿಲ್ಲಾ ಯೋಜನಾ ಸಮಿತಿಯ ರಾಜ್ಯ ಯೋಜನೆಗಳ ಸಂಯೋಜನೆಗೊಳ್ಳುವುದಕ್ಕಾಗಿ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಮೂಲಕ ಸರ್ಕಾರಕ್ಕೆ ಜಿಲ್ಲೆಯ ಯೋಜನೆಗಳನ್ನು ಕಳುಹಿಸತಕ್ಕದ್ದು.

**309ಎಚ್. ಕೈಗೊಂಡ ಕ್ರಮದ ವರದಿ.**– **(1)** ಗ್ರಾಮ ಪಂಚಾಯತ, ತಾಲ್ಲೂಕು ಪಂಚಾಯತ, ಮತ್ತು ಜಿಲ್ಲಾ ಪಂಚಾಯತ್‌ಗಳು ಯೋಜನೆಗಳ ಪ್ರಗತಿಯ ಬಗ್ಗೆ ಮತ್ತು ಅವುಗಳನ್ನು ಅಳೆಯುವ ಸೂಚಿಗಳ ಪ್ರತಿಫಲವನ್ನು ಬಳಸುವ ಬಗ್ಗೆ ಸಂಪನ್ಮೂಲ ಲಭ್ಯತೆ ನಿರ್ಧರಿತ ಗುರಿಗಳನ್ನು ವಾರ್ಷಿಕ ಯೋಜನೆಯಲ್ಲಿ ಮಾಡಲಾದ ಪ್ರಾಜೆಕ್ಟ್‌ಗಳ ಮತ್ತು ಸ್ಕೀಮ್‌ಗಳ ಅನುಷ್ಠಾನ ಅಥವಾ ಮಾಡಲು ಅಸಮರ್ಥವಾದುದಕ್ಕೆ ಕಾರಣಗಳು ಇವುಗಳನ್ನು ಹೇಳುವ ಮತ್ತು ಕೈಗೊಂಡ ಕ್ರಮದ ವರದಿಯನ್ನು ಆರು ತಿಂಗಳಿಗೊಮ್ಮೆ ಸಿದ್ಧಪಡಿಸತಕ್ಕದ್ದು.

(2) ಎಲ್ಲಾ ಗ್ರಾಮ ಪಂಚಾಯತಿಗಳು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗೆ ತಮ್ಮ ವರದಿಯನ್ನು ಸಲ್ಲಿಸತಕ್ಕದ್ದು. ತಾಲ್ಲೂಕು ಪಂಚಾಯತಿಯು ಎಲ್ಲಾ ಗ್ರಾಮ ಪಂಚಾಯತಿಗಳ ವರದಿಗಳನ್ನು ಕ್ರೋಢೀಕರಿಸತಕ್ಕದ್ದು ಮತ್ತು ತಮ್ಮದೇ ಆದ ವರದಿಯೊಂದಿಗೆ ಜಿಲ್ಲಾ ಪಂಚಾಯತಿಗೆ ಸಲ್ಲಿಸತಕ್ಕದ್ದು, ಮತ್ತು ಜಿಲ್ಲಾ ಪಂಚಾಯತಿಗಳು ಎಲ್ಲಾ ತಾಲ್ಲೂಕು ಪಂಚಾಯತಿಗಳ ವರದಿಗಳನ್ನು ಕ್ರೋಢೀಕರಿಸತಕ್ಕದ್ದು ಮತ್ತು ತಮ್ಮದೇ ಆದ ವರದಿಯೊಂದಿಗೆ ಅದನ್ನೆಲ್ಲಾ ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸತಕ್ಕದ್ದು.

(3) ಗ್ರಾಮ ಪಂಚಾಯತಿಗಳ ಸಂಯೋಜಿತ ವರದಿಯನ್ನು ತಮ್ಮ ಮುಂದಿನ ಗ್ರಾಮ ಸಭೆಗೆ ಮಂಡಿಸತಕ್ಕದ್ದು.

(4) ಹಾಗೆಯೇ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ವರದಿಗಳನ್ನು ಗ್ರಾಮ ಪಂಚಾಯತ್‌ಗಳಿಗೆ ಗ್ರಾಮ ಸಭೆಗೆ ಹಾಜರುಪಡಿಸುವುದಕ್ಕಾಗಿ ಲಭ್ಯವಾಗುವಂತೆ ಮಾಡತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**310. ಜಿಲ್ಲಾ ಯೋಜನಾ ಸಮಿತಿ.**– (1) ಸರ್ಕಾರವು, ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು ಮತ್ತು [1][ಪಟ್ಟಣ ಪಂಚಾಯತಿಗಳು][1], ಜಿಲ್ಲೆಯಲ್ಲಿರುವ ಪುರಸಭಾ ಪರಿಷತ್ತುಗಳು ಮತ್ತು ನಗರ ಪೌರಸಭಾ ನಿಗಮಗಳ ಯೋಜನೆಗಳನ್ನು ಕ್ರೋಡೀಕರಿಸಲು ಮತ್ತು ಒಟ್ಟಾರೆ ಜಿಲ್ಲೆಗಾಗಿ ಒಂದು ಅಭಿವೃದ್ಧಿ

ಯೋಜನೆಯ ಕರಡನ್ನು ತಯಾರಿಸಲು ಪ್ರತಿಯೊಂದು ಜಿಲ್ಲೆಗೂ ಒಂದೊಂದು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

[1][(2) ಜಿಲ್ಲಾ ಯೋಜನಾ ಸಮಿತಿಯು ಈ ಮುಂದಿನವರನ್ನೊಳಗೊಂಡಿರತಕ್ಕದ್ದು, ಎಂದರೆ;

| | | |
|---|---|---|
| (ಎ) | ಸಂಬಂಧಪಟ್ಟ ಜಿಲ್ಲೆಯ ಉಸ್ತುವಾರಿ ಸಚಿವರು | ಸದಸ್ಯರು |
| (ಬಿ) | ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು | ಸದಸ್ಯರು |
| (ಸಿ) | ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಪದನಿಮಿತ್ತ ಕೋ-ಚೇರ್‌ಪರ್ಸನ್ ಆಗಿರುವ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು | ಸದಸ್ಯರು |
| (ಡಿ) | ಜಿಲ್ಲೆಯಲ್ಲಿನ ಪ್ರತಿಯೊಂದು ತಾಲ್ಲೂಕಿನಿಂದ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ವೈಸ್ ಚೇರ್ ಪರ್ಸನ್(ತಾಲ್ಲೂಕು ಗ್ರಾಮ ಪಂಚಾಯತ್ ಮೂಲಕ ಚುನಾಯಿತರಾದವರು) | ಸದಸ್ಯರು |
| (ಇ) | ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತ್, ಪಟ್ಟಣ ಪಂಚಾಯತಿಗಳ ಮತ್ತು ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳ ಮತ್ತು ನಗರ ಪ್ರದೇಶಗಳ ಜನಸಂಖ್ಯೆಯ ನಡುವಿನ ಅನುಪಾತಕ್ಕೆ ಅನುಗುಣವಾಗಿ ಜಿಲ್ಲೆಯಲ್ಲಿ ನಗರಪಾಲಿಕೆ ಮತ್ತು ಪೌರಸಭೆಗಳ ಕೌನ್ಸಿಲರ್‌ಗಳು ಪೈಕಿಯಿಂದ ನೇಮಿಸಲಾದ ವಿಧಾನದಲ್ಲಿ ಚುನಾಯಿತರಾದ ಸದಸ್ಯರ ಒಟ್ಟು ಸಂಖ್ಯೆಯ ಐದನೇ ನಾಲ್ಕಕ್ಕಿಂತ ಕಡಿಮೆ ಇರದ ಅಂತಹ ಸಂಖ್ಯೆಯ ವ್ಯಕ್ತಿಗಳು | ಸದಸ್ಯರು][1] |

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

[1][(3) ಪೂರ್ತಿ ಜಿಲ್ಲೆ ಅಥವಾ ಜಿಲ್ಲೆಯ ಭಾಗವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರು, ಜಿಲ್ಲೆಯಲ್ಲಿ ಮತದಾರರೆಂದು ನೋಂದಣಿಯಾಗಿರುವ ರಾಜ್ಯಸಭಾ ಸದಸ್ಯರು, ಜಿಲ್ಲೆಯೊಳಗೆ ಇರುವ ಮತಕ್ಷೇತ್ರಗಳಲ್ಲಿನ ರಾಜ್ಯ ವಿಧಾನಸಭೆಯ ಎಲ್ಲಾ ಸದಸ್ಯರು ಜಿಲ್ಲೆಯಲ್ಲಿ ಮತದಾರರೆಂದು ನೋಂದಣಿಯಾಗಿರುವ ರಾಜ್ಯ ವಿಧಾನಪರಿಷತ್‌ನ ಸದಸ್ಯರು, ಜಿಲ್ಲೆಯ ಡೆಪ್ಯೂಟಿ ಕಮಿಷನರ್‌ರವರು ಜಿಲ್ಲಾ ಯೋಜನಾ ಸಮಿತಿಯ ಶಾಶ್ವತ ಆಹ್ವಾನಿತರಾಗಿರತಕ್ಕದ್ದು][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಮಿತಿಯ ಕಾರ್ಯದರ್ಶಿಯಾಗಿರತಕ್ಕದ್ದು.

[2][[1][5) ಜಿಲ್ಲಾ ಯೋಜನಾ ಸಮಿತಿಯ ಚೇರ್ಮನ್‌ರನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅವರುಗಳ ಪೈಕಿ ಆಯ್ಕೆ ಮಾಡತಕ್ಕದ್ದು.][1]][2]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

(6) ಜಿಲ್ಲಾ ಯೋಜನಾ ಸಮಿತಿಯು, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳು, [1][ಪಟ್ಟಣ ಪಂಚಾಯತಿಗಳು][1] ಜಿಲ್ಲೆಯಲ್ಲಿರುವ ಪುರಸಭಾ ಪರಿಷತ್ತುಗಳು ಮತ್ತು ಪೌರಸಭಾ ನಿಗಮಗಳು ತಯಾರಿಸಿದ ಯೋಜನೆಗಳನ್ನು ಕ್ರೋಡೀಕರಿಸತಕ್ಕದ್ದು ಮತ್ತು ಇಡೀ ಜಿಲ್ಲೆಗಾಗಿ ಅಭಿವೃದ್ಧಿ ಯೋಜನೆಯ ಕರಡೊಂದನ್ನು ತಯಾರಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(7) ಪ್ರತಿಯೊಂದು ಜಿಲ್ಲಾ ಯೋಜನಾ ಸಮಿತಿಯು, ಅಭಿವೃದ್ಧಿ ಯೋಜನೆ ಕರಡನ್ನು ತಯಾರಿಸುವಲ್ಲಿ,-

(ಎ) (i) ಪ್ರಾದೇಶಿಕ ಯೋಜನೆ, ನೀರಿನ ಹಂಚಿಕೆ ಮತ್ತು ಇತರೆ ಭೌತಿಕ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆ, ಮೂಲ ಪರಿಕರಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಇವುಗಳನ್ನು ಒಳಗೊಂಡಂತೆ ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು, ಗ್ರಾಮ ಪಂಚಾಯತಿಗಳು, [1][ಪಟ್ಟಣ ಪಂಚಾಯತಿಗಳು][1], ಜಿಲ್ಲೆಯಲ್ಲಿರುವ ಪೌರಸಭಾ ನಿಗಮಗಳು ಮತ್ತು ಪೌರಸಭಾ ಪರಿಷತ್ತುಗಳ ನಡುವಣ ಸಮಾನ ಹಿತಾಸಕ್ತಿಯ ವಿಷಯಗಳನ್ನು;

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಪ್ರತಿಯೋಜಿಸಲಾಗಿದೆ.

(ii) ಲಭ್ಯವಿರುವ ಹಣಕಾಸು ಸಂಪನ್ಮೂಲ ಅಥವಾ ಇತರೆ ಸಂಪನ್ಮೂಲಗಳ ವ್ಯಾಪ್ತಿ ಮತ್ತು ಸ್ವರೂಪಗಳ ಬಗ್ಗೆ ಗಮನ ಹರಿಸತಕ್ಕದ್ದು:

[1][ಪರಂತು, (i)ನೇ ಬಾಬಿನಲ್ಲಿ ಉಲ್ಲೇಖಿಸಲಾದ ಸ್ಥಳೀಯ ಪ್ರಾಧಿಕಾರಗಳು ಸಿದ್ಧಪಡಿಸಿದ ಯೋಜನೆಗಳಲ್ಲಿ ಬದಲಾವಣೆಗಳನ್ನು ತರತಕ್ಕದ್ದಲ್ಲ. ಆದರೆ ಜಿಲ್ಲಾ ಯೋಜನಾ ಸಮಿತಿಯ ಶಿಫಾರಸುಗಳು ಯಾವುವಾದರೂ ಇದ್ದರೆ ಅವುಗಳನ್ನು ಯೋಜನೆಯನ್ನು ಅಂತಿಮಗೊಳಿಸುವುದಕ್ಕೆ ಮೊದಲು ಅಂಥ ಸ್ಥಳೀಯ ಪ್ರಾಧಿಕಾರಗಳು ಪರಿಶೀಲಿಸಬಹುದು.][1]

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

(ಬಿ) ರಾಜ್ಯಪಾಲರು, ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಂಘ ಸಂಸ್ಥೆಗಳ ಸಲಹೆ ತೆಗೆದುಕೊಳ್ಳುವುದು.

(8) ಪ್ರತಿಯೊಂದು ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರುಗಳು, ಅಂಥ ಸಮಿತಿಯಿಂದ ಶಿಫಾರಸ್ಸು ಮಾಡಿದಂತೆ ಅಭಿವೃದ್ಧಿ ಯೋಜನೆಯನ್ನು [1][ರಾಜ್ಯ ಯೋಜನೆಯಲ್ಲಿ ಸೇರಿಸುವ ಸಲುವಾಗಿ][1] ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

[1][**310ಎ. ರಾಜ್ಯ ಪಂಚಾಯತಿ ಪರಿಷತ್ತು.**- (1) ಸರ್ಕಾರವು, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸುಧಾರಿಸುವ ಸಲುವಾಗಿ ಹಾಗೂ ಅದು ಜನತೆಯ ಅವಶ್ಯಕತೆಗಳಿಗೆ ತೀವ್ರವಾಗಿ ಸ್ಪಂದಿಸುವಂತೆ ಮಾಡುವ ಸಲುವಾಗಿ, ಚುನಾಯಿತ

ಪ್ರತಿನಿಧಿಗಳು ತಮ್ಮ ಆಶಯಗಳನ್ನು ವ್ಯಕ್ತಪಡಿಸುವುದಕ್ಕೆ ಮತ್ತು ತಮ್ಮ ಸಲಹೆಗಳನ್ನು ಸೂಚಿಸುವುದಕ್ಕೆ ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸಲು ಒಂದು ರಾಜ್ಯ ಪಂಚಾಯತಿ ಪರಿಷತ್ತನ್ನು ರಚಿಸತಕ್ಕದ್ದು.

1. ಉಪಪ್ರಕರಣ (1) ಮತ್ತು (2), ಖಂಡ (i) ರಿಂದ (vii) ಮತ್ತು (3) ಮತ್ತು (4), 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997 ರಿಂದ ಸೇರಿಸಲಾಗಿದೆ.

(2) ರಾಜ್ಯ ಪಂಚಾಯತಿ ಪರಿಷತ್ತು,-

(i) ಮುಖ್ಯ ಮಂತ್ರಿಯವರನ್ನು ಅಧ್ಯಕ್ಷರನ್ನಾಗಿ;

(ii) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಉಪಾಧ್ಯಕ್ಷರನ್ನಾಗಿ;

(iii) ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಇತರ ಐವರು ಸಚಿವರುಗಳನ್ನು ಸದಸ್ಯರುಗಳನ್ನಾಗಿ;

[1][(iv) [2][ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರನ್ನು][2] ಸದಸ್ಯರನ್ನಾಗಿ;

(v) [3][ಸರ್ಕಾರದಿಂದ][3] ನಾಮನಿರ್ದೇಶಿಸಲ್ಪಟ್ಟ [2][ನಾಲ್ಕು ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಪ್ರತಿಯೊಂದು ಕಂದಾಯ ವಿಭಾಗದಿಂದ ಒಬ್ಬರು][2] ಹಾಗೂ ಒಂದು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರುಗಳನ್ನು ಸದಸ್ಯರುಗಳನ್ನಾಗಿ;

(vi) ವಿಧಾನ ಸಭೆಯ ಸಭಾಧ್ಯಕ್ಷರಿಂದ ನಾಮನಿರ್ದೇಶಿಸಲ್ಪಟ್ಟ ಐದು ಜನ ಶಾಸಕರು ಮತ್ತು ವಿಧಾನ ಪರಿಷತ್ತಿನ ಸಭಾಪತಿಯವರಿಂದ ನಾಮನಿರ್ದೇಶಿಸಲ್ಪಟ್ಟ ಇಬ್ಬರು ಶಾಸಕರನ್ನು ಸದಸ್ಯರುಗಳನ್ನಾಗಿ; ಮತ್ತು

(vii) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯವರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ.][1]

1. ಖಂಡ iv ರಿಂದ vii 2003ರ ಅಧಿನಿಯಮ ಸಂಖ್ಯೆ: 37ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.
3. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 11.07.2017ರಿಂದ ಪ್ರತಿಯೋಜಿಸಲಾಗಿದೆ.

-ಒಳಗೊಂಡಿರತಕ್ಕದ್ದು.

(3) ರಾಜ್ಯ ಪಂಚಾಯತಿ ಪರಿಷತ್ತು ಪ್ರತಿವರ್ಷ ಕಡೆಯ ಪಕ್ಷ ಎರಡು ಸಲವಾದರೂ ಸಭೆಯನ್ನು ಸೇರತಕ್ಕದ್ದು.

(4) ರಾಜ್ಯ ಪಂಚಾಯತಿ ಪರಿಷತ್ತು, ರಾಜ್ಯದಲ್ಲಿರುವ ಪಂಚಾಯತಿಗಳ ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸತಕ್ಕದ್ದು.][1]

[1][**310ಬಿ. ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ.**- (1) ಅಭಿವೃದ್ಧಿ ಯೋಜನೆಗಳನ್ನು ಮತ್ತು ಆಯವ್ಯಯ ದಸ್ತಾವೇಜಿನೊಂದಿಗೆ ಹಾಜರುಪಡಿಸಬೇಕಾದ ವಾರ್ಷಿಕ ಹಣಕಾಸು ಪುನರಾವಲೋಕನೆಯನ್ನು ರೂಪಿಸುವುದಕ್ಕೆ ಸರ್ಕಾರವನ್ನು ಸಮರ್ಥಗೊಳಿಸುವುದಕ್ಕೆ ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯೆಂದು ಕರೆಯಲಾಗುವ ಸಮಿತಿಯನ್ನು ಸ್ಥಾಪಿಸತಕ್ಕದ್ದು.

(2) ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ;-

| | | |
|---|---|---|
| 1. | ಚೇರ್‌ಪರ್ಸನ್ | ಮುಖ್ಯಮಂತ್ರಿ |
| 2. | ವೈಸ್‌ಚೇರ್ಮನ್ | 1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು<br>2) ಹಣಕಾಸು ಸಚಿವರು<br>3) ಯೋಜನಾ ಸಚಿವರು<br>4) ನಗರಾಭಿವೃದ್ಧಿ ಸಚಿವರು,<br>ಸರ್ಕಾರವು ನಾಮನಿರ್ದೇಶಿಸಿದ ಸಮಾಜೋ ಆರ್ಥಿಕ ಅಭಿವೃದ್ಧಿಯ ಕ್ಷೇತ್ರದಲ್ಲಿ ತಜ್ಞರಾದ ಒಬ್ಬರು ಸರ್ಕಾರೇತರ ಸದಸ್ಯರು |
| 3. | ಸದಸ್ಯರು | 1) ರಾಜ್ಯದ ಅಭಿವೃದ್ಧಿ ಆಯುಕ್ತರು<br>2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>3) ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>4) ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>5) ಸರ್ಕಾರವು ನಾಮನಿರ್ದೇಶನ ಮಾಡಿದ ಸ್ಥಳೀಯ ನಿಕಾಯಗಳನ್ನು ಪ್ರತಿನಿಧಿಸುವ ಇಬ್ಬರು ವಿಧಾನಪರಿಷತ್ ಸದಸ್ಯರು.<br>6) ಸರ್ಕಾರವು ನಾಮ ನಿರ್ದೇಶನ ಮಾಡಿದ ಎಂಟು ಸದಸ್ಯರು, ಅವರಲ್ಲಿ<br>(ಎ) ಜಿಲ್ಲಾ ಯೋಜನಾ ಸಮಿತಿಗಳ ಇಬ್ಬರು ಚೇರ್‌ಪರ್ಸನ್ಸ್ ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಬಿ) ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳ ಇಬ್ಬರು ಚೇರ್‌ಪರ್ಸನ್ಸ್ ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಸಿ) ಗ್ರಾಮ ಪಂಚಾಯತಿಗಳ ಇಬ್ಬರು ಚೇರ್‌ಪರ್ಸನ್ಸ್- ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಡಿ) ನಗರ ಸ್ಥಳೀಯ ನಿಕಾಯಗಳ ಇಬ್ಬರು ಚೇರ್‌ಪರ್ಸನ್ಸ್ ನಗರ ಪಾಲಿಕೆಗಳನ್ನು ಪ್ರತಿನಿಧಿಸುವ ಒಬ್ಬರು ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳನ್ನು ಪ್ರತಿನಿಧಿಸುವ ಒಬ್ಬರು ಅಥವಾ ಪಟ್ಟಣ ಪಂಚಾಯತ್‌ಗಳನ್ನು ಪ್ರತಿನಿಧಿಸುವ ಒಬ್ಬರು ಮತ್ತು ಪಟ್ಟಣ ಮುನ್ಸಿಪಾಲಿಟಿಗಳನ್ನು ಪ್ರತಿನಿಧಿಸುವ ಒಬ್ಬರು: |

| | | |
|---|---|---|
| | | ಪರಂತು ಎಂಟರಲ್ಲಿ ಕನಿಷ್ಠ ಒಬ್ಬರು ಮಹಿಳೆಯಾಗಿರತಕ್ಕದ್ದು. ಅನುಸೂಚಿತ ಜಾತಿಗಳಿಂದ ಒಬ್ಬರು ಪ್ರತಿನಿಧಿ ಅನುಸೂಚಿತ ಪಂಗಡಗಳಿಂದ ಒಬ್ಬರು ಪ್ರತಿನಿಧಿ, ಅಲ್ಪಸಂಖ್ಯಾತರ ಸಮುದಾಯವು ಒಳಗೊಂಡಂತೆ ಇತರ ಹಿಂದುಳಿದ ವರ್ಗಗಳ ಒಬ್ಬರು ಪ್ರತಿನಿಧಿ.<br>(ಇ) ತಜ್ಞರಾಗಿರುವ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ, ಕೈಗಾರಿಕೆ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ಲಿಂಗ ಸಂಬಂಧಿ ವಿಷಯಗಳು (ಮಹಿಳೆಯಾಗಿರತಕ್ಕದ್ದು) ಮಕ್ಕಳ ಹಕ್ಕುಗಳು– ಮಕ್ಕಳ ಹಕ್ಕುಗಳ ಕಾರ್ಯಕರ್ತರು, ಆರ್ಥಿಕ, ಪಟ್ಟಣ ಮತ್ತು ಗ್ರಾಮ ಯೋಜನೆ ಮತ್ತು ಪರಿಸರ ಮತ್ತು ಜಲ ಸಂರಕ್ಷಣೆ ಈ ಕ್ಷೇತ್ರಗಳಿಂದ ಸರ್ಕಾರವು ನಾಮ ನಿರ್ದೇಶನ ಮಾಡಿದ ಐವರು ವ್ಯಕ್ತಿಗಳು. |
| 4 | ಸದಸ್ಯ ಕಾರ್ಯದರ್ಶಿ | ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ. |

(3) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ(2)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸರ್ಕಾರೇತರ ಸದಸ್ಯರ ಪದಾವಧಿಯು ಐದು ವರ್ಷಗಳಿಗೆ ಅಥವಾ ತಮ್ಮ ಪದಾವಧಿ ಮುಕ್ತಾಯದವರೆಗೆ, ಅವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಗಿರತಕ್ಕದ್ದು.

(4) ಕರ್ನಾಟಕ ರಾಜ್ಯ ವಿಕೇಂದ್ರಿರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ;

(ಎ) ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ(ಕೆಎಸ್‌ಡಿಪಿಡಿಸಿ) ಜಿಲ್ಲೆಯ ಯೋಜನೆಗಳು ಮತ್ತು ಇತರ ಯೋಜನಾ ಘಟಕಗಳ ನಡುವೆ ಪರಸ್ಪರ ಸಮಾಲೋಚನೆ ಮತ್ತು ವ್ಯವಹಾರಗಳನ್ನು ಕಲ್ಪಿಸುವುದಕ್ಕೆ ಅವುಗಳನ್ನು ಜೋಡಿಸತಕ್ಕದ್ದು ಮತ್ತು ನಗರ ಮತ್ತು ಗ್ರಾಮೀಣ ಯೋಜನೆಗಳ ವಲಯ ಮತ್ತು ಸ್ಥಳ ವಿಸ್ತಾರ ವಿಷಯಗಳನ್ನು ಸಂಯೋಜಿಸುವುದಕ್ಕೆ ಚೌಕಟ್ಟನ್ನು ಕೂಡಾ ಕಲ್ಪಿಸತಕ್ಕದ್ದು.

(ಬಿ) ಕೆಎಸ್‌ಡಿಪಿಡಿಸಿಯ ಕ್ರೋಢೀಕರಣ ಮತ್ತು ಸಂಯೋಜನೆಯ ಪ್ರಕ್ರಿಯೆಯು ಜಿಲ್ಲೆಗಳು ಸಿದ್ಧಪಡಿಸಿದುದನ್ನು ವ್ಯತ್ಯಾಸಗೊಳಿಸತಕ್ಕದ್ದಲ್ಲ.

(ಸಿ) ಸಮಿತಿಯು ಕ್ರೋಢೀಕರಣ ಯೋಜನೆಯನ್ನು ಸಿದ್ಧಪಡಿಸುವಾಗ, ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಸಂಸ್ಥೆಗಳು ಮತ್ತು ಸಂಘಗಳೊಂದಿಗೆ ಸಮಾಲೋಚನೆ ಮಾಡತಕ್ಕದ್ದು.

(ಡಿ) ಕೇಂದ್ರೀಕರಣ ಮತ್ತು ಸಮಾಲೋಚನೆಯ ಪ್ರಕ್ರಿಯೆಯು ಪೂರ್ಣವಾದ ತರುವಾಯ ಕೂಡಲೇ ಸಮಿತಿಯು ಸರ್ಕಾರಕ್ಕೆ ಕ್ರೋಢೀಕೃತ ಯೋಜನೆಯನ್ನು ಕಳುಹಿಸತಕ್ಕದ್ದು.

(ಇ) ಸಮಿತಿಯು, ಸ್ಥಳೀಯ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಸೂತ್ರವನ್ನೂ ಸಹ ನೋಡಿಕೊಳ್ಳತಕ್ಕದ್ದು, ಜಿಲ್ಲೆಗಳ ಮತ್ತು ರಾಜ್ಯ ಯೋಜನೆಗಳ ಸಮನ್ವಯ ಮತ್ತು ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸಲು ಕಾರ್ಯನೀತಿಗಳನ್ನು ರೂಪಿಸುವುದು][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

## [1][ಅಧ್ಯಾಯ XIX
## ನಿಯಮಗಳು, ವಿನಿಮಯಗಳು ಮತ್ತು ಉಪವಿಧಿಗಳು][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಸೇರಿಸಲಾಗಿದೆ.

**311. ನಿಯಮಗಳನ್ನು ರಚಿಸಲು ಸರ್ಕಾರದ ಅಧಿಕಾರ.–** (1) ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿನ ನಿಯಮವನ್ನು ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ ಆ ನಿಯಮ ರಚಿಸುವುದಕ್ಕೆ ಕಾರಣಗಳನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇಟ್ಟ ವಿವರಣಾ ಪತ್ರದಲ್ಲಿ ನಿರ್ದಿಷ್ಟಪಡಿಸತಕ್ಕದ್ದು. 320ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಮಾರ್ಪಾಟಿಗೊಳಪಟ್ಟು ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವು, ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮವನ್ನು ಹೊಂದಿರತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ನಿಯಮವನ್ನು ರಚಿಸುವಲ್ಲಿ, ಸರ್ಕಾರವು, ಅದರ ಉಲ್ಲಂಘನೆಯ ಬಗ್ಗೆ ತಪ್ಪಿತಸ್ಥನಾದ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಎಂದು ಮತ್ತು ಆ ಉಲ್ಲಂಘನೆಯು ಮುಂದುವರೆದರೆ ಆ ಉಲ್ಲಂಘನೆಯು ಮುಂದುವರಿಯುತ್ತಿರುವಂಥ ದಿವಸದಂದು ಮತ್ತು ಮೊದಲನೇ ದಿವಸದ ತರುವಾಯದ ಪ್ರತಿಯೊಂದು ದಿವಸಕ್ಕೆ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ಉಪಬಂಧಿಸಬಹುದು.

**312. I, II ಮತ್ತು IIIನೇ ಅನುಸೂಚಿಗಳ ತಿದ್ದುಪಡಿ.–** ಸರ್ಕಾರವು [1][ರಾಜ್ಯ ಪಂಚಾಯತಿ ಪರಿಷತ್ತಿನೊಂದಿಗೆ ಸಮಾಲೋಚಿಸಿ][1] ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ I, II ಮತ್ತು IIIನೇ ಅನುಸೂಚಿಗಳಲ್ಲಿ ಒಳಗೊಂಡಿರುವ ಅಥವಾ ಹೇಳಿರುವ ಯಾವುವೇ ಕಾರ್ಯಚಟುವಟಿಕೆ, ಕಾರ್ಯಕ್ರಮ ಅಥವಾ ಯೋಜನೆಯನ್ನು ಬಿಟ್ಟುಬಿಡಬಹುದು, ತಿದ್ದುಪಡಿ ಮಾಡಬಹುದು ಅಥವಾ ಸೇರಿಸಬಹುದು. ಅಂಥ ಅಧಿಸೂಚನೆಯನ್ನು ಹೊರಡಿಸಿದಾಗ

ಅನುಸೂಚಿಯು ಅದಕ್ಕನುಸಾರವಾಗಿ ತಿದ್ದುಪಡಿಯಾಗಿದೆ ಎಂದು ಭಾವಿಸತಕ್ಕದ್ದು. ಅಂಥ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ: 29ರ ಮೂಲಕ ದಿನಾಂಕ: 20-10-1997ರಿಂದ ಸೇರಿಸಲಾಗಿದೆ.

**313. ವಿನಿಯಮಗಳನ್ನು ರಚಿಸಲು ಜಿಲ್ಲಾ ಪಂಚಾಯತಿಯ ಅಧಿಕಾರ.**- (1) ಜಿಲ್ಲಾ ಪಂಚಾಯತಿಯು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 311ನೇ ಪ್ರಕರಣದ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಒಳಪಟ್ಟು ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆ ಮೂಲಕ ಅದರ ಅಧಿಕಾರಗಳು ಮತ್ತು ಕರ್ತವ್ಯಗಳಿಗೆ ಅದು ಸಂಬಂಧಿಸುವಷ್ಟರಮಟ್ಟಿಗೆ ವಿನಿಯಮಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ವಿನಿಯಮಗಳು ಪೂರ್ವ ಪ್ರಕಟಣೆಯ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅಂಥ ಪ್ರಕಟಣೆಯು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

**314. ವಿನಿಯಮಗಳನ್ನು ರಚಿಸಲು ತಾಲ್ಲೂಕು ಪಂಚಾಯತಿಗಳ ಅಧಿಕಾರ.**- (1) ತಾಲ್ಲೂಕು ಪಂಚಾಯತಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 311ನೇ ಪ್ರಕರಣದ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಒಳಪಟ್ಟು ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಡನೆ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ಅದರ ಅಧಿಕಾರಗಳು ಮತ್ತು ಕರ್ತವ್ಯಗಳಿಗೆ ಅದು ಸಂಬಂಧಪಡುವಷ್ಟರಮಟ್ಟಿಗೆ ವಿನಿಯಮಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ವಿನಿಯಮಗಳ ಪೂರ್ವ ಪ್ರಕಟಣೆಯು ಷರತ್ತಿಗೊಳಪಟ್ಟಿರತಕ್ಕದ್ದು ಮತ್ತು ಅಂಥ ಪ್ರಕಟಣೆಯು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

[1][**315. ಉಪವಿಧಿಗಳನ್ನು ಮಾಡಲು ಗ್ರಾಮ ಪಂಚಾಯತ್‌ನ ಅಧಿಕಾರ.**- **(1)** ಈ ಅಧಿನಿಯಮದ ಉಪಬಂಧಗಳು ಮತ್ತು 311ನೇ ಪ್ರಕರಣದ ಅಡಿಯಲ್ಲಿನ ನಿಯಮಗಳು ಮತ್ತು 313ನೇ ಪ್ರಕರಣದ ಅಡಿಯಲ್ಲಿನ ವಿನಿಮಯಗಳು ಮತ್ತು ಜಿಲ್ಲಾ ಪಂಚಾಯತ್‌ನ ಪೂರ್ವ ಮಂಜೂರಾತಿಯೊಂದಿಗೆ ಉಪವಿಧಿಗಳನ್ನು ವ್ಯತ್ಯಾಸಗೊಳಿಸಬಹುದು ಅಥವಾ ರದ್ದುಮಾಡತಕ್ಕದ್ದು ಅಥವಾ ಉಪವಿಧಿಗಳನ್ನು ರಚಿಸತಕ್ಕದ್ದು.

(ಎ) ಮಾರುಕಟ್ಟೆಗಳು, ಸರಕುಗಳನ್ನು ಮಾರಾಟ ಮಾಡಲು ಬಳಸುವ ಎಲ್ಲಾ ಸಾರ್ವಜನಿಕ ಸಂಸ್ಥೆಗಳು ಮತ್ತು ಕಸಾಯಿಖಾನೆಗಳು ಮತ್ತು ಮಾರಾಟಕ್ಕಾಗಿ ಅಥವಾ ಬಾಡಿಗೆಗಾಗಿ ಇರುವ ಪ್ರಾಣಿಗಳಿಗಾಗಿ ಅಥವಾ ಪ್ರಾಣಿಗಳು ಬಳಸುವ ಅಥವಾ ಅವುಗಳ ಉತ್ಪನ್ನಗಳ ಮಾರಾಟಕ್ಕಾಗಿ ಎಲ್ಲಾ ಸ್ಥಳಗಳು ಮತ್ತು ಅದರಲ್ಲಿ ಕ್ರಮಬದ್ಧ ಮತ್ತು ಸ್ವಚ್ಛ ವ್ಯವಹಾರ ನಿರ್ವಹಣೆಯನ್ನು ನಿಯಂತ್ರಿಸುವುದು ಮತ್ತು ಪರಿಶೀಲಿಸುವುದು, ಗ್ರಾಮ ಪಂಚಾಯತ್ ಮಾರುಕಟ್ಟೆಗಳು ಅಥವಾ ಇತರ ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ಹಣ್ಣುಗಳು, ಹೂಗಳು ಮತ್ತು ತರಕಾರಿಗಳು ಅಥವಾ ಮಾಂಸ, ಮೀನು, ಮೊಟ್ಟೆಗಳು ಮತ್ತು ಪ್ರಾಣಿಗಳ ಮಾರಾಟವನ್ನು ನಿಯಂತ್ರಿಸುವುದು ಮತ್ತು ಗ್ರಾಮ ಪಂಚಾಯಿತಿಗೆ ಸೇರಿದ ಅವುಗಳಲ್ಲಿ ಯಾವುದನ್ನಾದರೂ ಬಳಸುವುದಕ್ಕೆ ವಿಧಿಸಬೇಕಾದ ಬಾಡಿಗೆಗಳು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು;

(ಬಿ) ಗ್ರಾಮ ಪಂಚಾಯಿತಿಗೆ ಸೇರದ ಯಾವುದೇ ಸ್ಥಳದ ಉಪಯೋಗಕ್ಕಾಗಿ, ಷರತ್ತುಗಳನ್ನು ನಿರ್ದಿಷ್ಟಪಡಿಸುವ ಅಥವಾ ಸನ್ನಿವೇಶಗಳಿಗೆ ಮತ್ತು ಪ್ರದೇಶಗಳಿಗೆ ಒಳಪಟ್ಟು ಅಥವಾ ಸ್ಥಳಿಯ ಪ್ರದೇಶಗಳ ಲೈಸೆನ್ಸನ್ನು ಮಂಜೂರು ಮಾಡಬಹುದು, ತಿರಸ್ಕರಿಸಬಹುದು, ಅಮಾನತ್ತುಗೊಳಿಸಬಹುದು ಅಥವಾ ಹಿಂತೆಗೆದುಕೊಳ್ಳಬಹುದು;

(ಸಿ) ಕುದುರೆಗಳು, ಜಾನುವಾರುಗಳು ಅಥವಾ ಇತರ ಚತುಷ್ಪಾದ ಪ್ರಾಣಿಗಳನ್ನು ಸಾಕುವುದಕ್ಕೆ ಮತ್ತು ಇಟ್ಟುಕೊಳ್ಳುವುದಕ್ಕೆ ಅಥವಾ ಕೋಳಿ ಸಾಕಾಣೆ/ಪಕ್ಷಿಗಳ ಸಾಗಾಣಿಕೆ, ಮಾರಾಟ ಅಥವಾ ಬಾಡಿಗೆ ಅಥವಾ ಅದರ ಉತ್ಪನ್ನದ ಮಾರಾಟವನ್ನು ನಿಯಂತ್ರಿಸುವುದು;

(ಡಿ) ಸಾರ್ವಜನಿಕ ಆರೋಗ್ಯಕ್ಕೆ ಅಪಾಯವನ್ನುಂಟುಮಾಡುವುದನ್ನು ತಡೆಗಟ್ಟಲು ಅವಶ್ಯವೆನಿಸಬಹುದಾದಂತೆ, ಕುದುರೆಗಳು, ಒಂಟೆಗಳು, ಜಾನುವಾರುಗಳು, ಕತ್ತೆಗಳು, ಹಂದಿಗಳು, ಮೇಕೆ ಮತ್ತು ಕುರಿಗಳನ್ನು ಅವುಗಳ ಸಂಖ್ಯೆಗೆ ಸಂಬಂಧದಲ್ಲಿ, ಅಂಥ ಉಪವಿಧಗಳಲ್ಲಿ ನಿಯಮಿಸಬಹುದಾದ ಅಂಥ ನಿಬಂಧನೆಗಳಿಗೆ ಅನುಸಾರವಾಗಿ ಅನ್ಯಥಾ ಮತ್ತು ಉದ್ದೇಶಕ್ಕಾಗಿ ಬಳಸಬೇಕಾದ ಸ್ಥಳಗಳಲ್ಲಿ ಇಟ್ಟುಕೊಳ್ಳುವುದು ಅಥವಾ ಮಂದೆಯಲ್ಲಿರುಸುವುದು ನಿಷೇದಿಸುವುದು;

(ಇ) ಗ್ರಾಮ ಪಂಚಾಯಿತಿ ಪ್ರದೇಶದೊಳಗೆ ಬಯಲು ಬಹಿರ್ದೆಸೆಯಿಂದ ಮುಕ್ತವಾದ ಸ್ವಚ್ಛತೆಯನ್ನು ಪಡೆಯುವುದು ಮತ್ತು ನೈರ್ಮಲೀಕರಣ ಮತ್ತು ಘನ ಮತ್ತು ದ್ರವ ತ್ಯಾಜ್ಯದ ನಿರ್ವಹಣೆ;

(ಎಫ್) ಜನನ ಮತ್ತು ಮರಣಗಳ ನೋಂದಣಿ ಮತ್ತು ಗ್ರಾಮ ಪಂಚಾಯತ್ ಪ್ರದೇಶದೊಳಗೆ ಅಂಕಿಅಂಶಗಳನ್ನು ತೆಗೆದುಕೊಳ್ಳುವುದು ಮತ್ತು ಅಂಥ ನೋಂದಣಿ ಅಥವಾ ಪರಿಣಾಮಕಾರಿ ಅಂಕಿ ಅಂಶಗಳನ್ನು ಮಾಡಲು ಅವಶ್ಯವೆನಿಸಬಹುದಾದ ಅಂಥ ಮಾಹಿತಿಯನ್ನು ಒದಗಿಸುವಂತೆ ಒತ್ತಾಯಪಡಿಸುವುದು;

(ಜಿ) ಸತ್ತ ಪ್ರಾಣಿಗಳ ವಿಲೇವಾರಿಯನ್ನು ನಿಯಂತ್ರಿಸುವುದು, ಸತ್ತ ಪ್ರಾಣಿಗಳ ವಿಲೇಗಾಗಿ ಅಂಥ ಸ್ಥಳಗಳ ಬಳಕೆಗೆ ಅರ್ಹವಾದ ಸಮುದಾಯದ ಅಥವಾ ಸಮುದಾಯದ ವರ್ಗದ ಧಾರ್ಮಿಕ ಬಳಕೆಯ ಸ್ಥಳಗಳಿಗೆ ಮುಕ್ತ ಗೌರವವನ್ನು ನೀಡಿ, ಸತ್ತ ಪ್ರಾಣಿಗಳನ್ನು ಉತ್ತಮವಾಗಿ ಮತ್ತು ಕ್ಷೇಮ ನಿರ್ಮಲ ಪರಿಸ್ಥಿತಿಯಲ್ಲಿ ವಿಲೇ ಮಾಡುವುದಕ್ಕಾಗಿ ಎಲ್ಲಾ ಸ್ಥಳಗಳ ನಿರ್ವಹಣೆ ಮಾಡುವುದು

(ಎಚ್) ಅಪಾಯಕಾರಿ ರೋಗದ ಯಾವುದೇ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದನ್ನು ಒತ್ತಾಯಪಡಿಸುವುದು;

(ಐ) ಗ್ರಾಮ ಪಂಚಾಯತ್ ನಿವಾಸಿಗಳು, ಅಂಥ ಮಾಹಿತಿಯಲ್ಲಿ ವಿಧಿಸಲಾದ ಯಾವುದೇ ತೆರಿಗೆಗೆ ತಮಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಖಚಿತ ಪಡಿಸಿಕೊಳ್ಳಲು ಅವಶ್ಯವಾಗಬಹುದಾದ ಅಂಥ ಮಾಹಿತಿಗಳನ್ನು ಒದಗಿಸುವಂತೆ ಒತ್ತಾಯಪಡಿಸುವುದು;

(ಜೆ) ಗ್ರಾಮ ಪಂಚಾಯತ್ ಪ್ರದೇಶದ ಮಿತಿಗೊಳಗಾಗಲಿ ಅಥವಾ ಹೊರಗಾಗಲಿ ನೀರಿನ ಹಂಚಿಕೆಗಾಗಿ ಗ್ರಾಮ ಪಂಚಾಯಿತಿಯು ಒಡೆತನ ಹೊಂದಿರುವ ನೀರು ಸರಬರಾಜು ಮೂಲಗಳನ್ನು ಮತ್ತು ಸಾಧನಗಳಿಗೆ ಹಾಗೂ ಪರಿಕರಿಗಳನ್ನು ಸಂರಕ್ಷಿಸುವುದು ಮತ್ತು ಅವುಗಳಿಗೆ ಆಗುವ ಹಾನಿಯನ್ನು ತಡೆಗಟ್ಟುವುದು; ಹಾಗೂ ನೀರು ಸರಬರಾಜು ಮತ್ತು ಬಳಕೆಗೆ ಸಂಬಂಧಿಸಿದ ಎಲ್ಲಾ ವಿಷಯಗಳು ಮತ್ತು ನೀರನ್ನು ಬಿಡುವುದು ಅಥವಾ

ನಿಲ್ಲಿಸುವುದನ್ನು ನಿಯಂತ್ರಿಸುವುದು ಮತ್ತು ನೀರು ಪೋಲಾಗುವುದನ್ನು ತಡೆಗಟ್ಟುವುದು, ಗ್ರಾಮ ಪಂಚಾಯತ್ ನೀರು ಕಾಮಗಾರಿಗಳು ಮತ್ತು ಅದರೊಂದಿಗಿನ ಪೈಪುಗಳು ಮತ್ತು ಫಿಟ್ಟಿಂಗ್‍ಗಳು ಗ್ರಾಮ ಪಂಚಾಯಿತಿಗೆ ಸೇರಿದ ಅಥವಾ ಸೇರಿಲ್ಲದ ಸ್ವತ್ತಿನ ನಿರ್ವಹಣೆ ಮತ್ತು ನಿಯಂತ್ರಣ ಮಾಡುವುದು;

<u>**ವಿವರಣೆ:-**</u> ಈ ಖಂಡದ ಉದ್ದೇಶಕ್ಕಾಗಿ "ನೀರು ಸರಬರಾಜಿನ ಮೂಲಗಳು ಮತ್ತು ಸಾಧನಗಳು" ಸಾರ್ವಜನಿಕರು ಬಳಸುವ ಖಾಸಗಿ ಬಾವಿಗಳನ್ನು ಒಳಗೊಳ್ಳುತ್ತದೆ.

(ಕೆ) ನಿವಾಸಿ ಆವರಣಗಳನ್ನು ಅದಿಭೋಗಿಸುವ ವ್ಯಕ್ತಿಗಳಿಗೆ ಶುದ್ಧ ನೀರಿನ ಸಾಕಷ್ಟು ಸರಬರಾಜನ್ನು ಪಡೆದುಕೊಳ್ಳುವುದು;

(ಎಲ್) ಗ್ರಾಮ ಪಂಚಾಯತ್ ಮಿತಿಗಳೊಳಗೆ ಸಾರ್ವಜನಿಕ ಸ್ನಾನ ಮತ್ತು ತೊಳೆಯುವ ಸ್ಥಳಗಳ ಬಳಕೆಯನ್ನು ನಿಯಂತ್ರಿಸುವುದು;

(ಎಂ) ಸತ್ತ ಪ್ರಾಣಿಗಳ ಮೃತದೇಹಗಳ ವಿಲೆಯನ್ನು ನಿಯಂತ್ರಿಸುವುದು;

(ಎನ್) ಸಾರ್ವಜನಿಕ ಬೀದಿಗಳಲ್ಲಿ ತಾತ್ಕಾಲಿಕ ಅದಿಭೋಗಕ್ಕಾಗಿ ತಾತ್ಕಾಲಿಕ ಕಟ್ಟಡಗಳ ನಿರ್ಮಾಣ ಅಥವಾ ಸಾರ್ವಜನಿಕ ಬೀದಿಗಳಲ್ಲಿ ನಿರ್ಮಿತಿಗಳಿಗೆ ಯಾವ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗುವುದೊ ಅದನ್ನು ನಿಯಮಿಸುವುದು;

(ಒ) ಸ್ಥಿರತೆಯನ್ನು ಕಾಪಾಡಿಕೊಳ್ಳಲು ಮತ್ತು ಬೆಂಕಿಯನ್ನು ತಡೆಗಟ್ಟುವ ಉದ್ದೇಶಕ್ಕಾಗಿ ಮತ್ತು ಆರೋಗ್ಯದ ಉದ್ದೇಶಗಳಿಗಾಗಿ ಹೊಸ ಕಟ್ಟಡಗಳ ಪ್ಲಿಂತ್‍ಗಳು, ಗೋಡೆಗಳು, ತಳಪಾಯಗಳು, ಮಹಡಿಗಳು, ಮೇಲ್ಚಾವಣಿಗಳು ಮತ್ತು ಚಿಮಣಿಗಳ ರಚನೆ ಮತ್ತು ಆಯಾಮಗಳನ್ನು ನಿಯಂತ್ರಿಸುವುದು;

(ಪಿ) ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1963ಕ್ಕೆ ಒಳಪಟ್ಟು ಖಾಸಗಿ ಅಥವಾ ವಾಣಿಜ್ಯ ಕಟ್ಟಡಗಳ ನಿರ್ಮಾಣ, ಬಳಕೆಯನ್ನು ನಿಯಂತ್ರಿಸುವುದು;

(ಕ್ಯೂ) ಈ ಅಧಿನಿಯಮದಲ್ಲಿ ನಿರ್ದಿಷ್ಟವಾಗಿ ಉಪಬಂಧಿಸಿರದ, ಗ್ರಾಮಪಂಚಾಯಿತಿಯ ಸ್ವತ್ತಾಗಿರಲಿ ಅಥವಾ ಆಗಿರದ ಚರಂಡಿಗಳು, ಒಳಚರಂಡಿಗಳು, ವಾಯುಸಂಚಾರ ಸುರಂಗಮಾರ್ಗಗಳ, ಸಗಣಿ ಮತ್ತು ಗೊಬ್ಬರದ ಗುಂಡಿಗಳು, ರೊಚ್ಚು ಗುಂಡಿಗಳು, ನೀರು ಶೌಚಾಲಯಗಳು, ಕಕ್ಕಸ್ಸುಗಳು, ಲೆಟ್ರಿನ್‍ಗಳು, ಮೂತ್ರಾಲಯಗಳ ಮತ್ತು ಪ್ರತೀ ವಿವರಣಾತ್ಮಕ ಒಳಚರಂಡಿ ಅಥವಾ ಒಳಚರಂಡಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ ಮತ್ತು ನಿಯಂತ್ರಿಸುವುದು ;

(ಆರ್) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆಗಳ ಅಧಿನಿಯಮ, 1963ರ ಅನುಸಾರವಾಗಿ ಹೊಸ ವಿಸ್ತರಣೆಗಳ ಅಥವಾ ಲೇಔಟ್‍ಗಳು ಅಥವಾ ಹೊಸ ಖಾಸಗಿ ಬೀದಿಗಳ ರಚನೆಗಳನ್ನು ಮಾಡಲು ಗ್ರಾಮ ಪಂಚಾಯತ್ ಅಗತ್ಯಪಡಿಸಿದ ಮಾಹಿತಿ ಮತ್ತು ಯೋಜನೆಗಳನ್ನು ನಿರ್ಧರಿಸುವುದು;

(ಎಸ್) ಕರ್ನಾಟಕ ಸಂಚಾರ ನಿಯಂತ್ರಣ ಅಧಿನಿಯಮ, 1960 ಉಪಬಂಧಗಳಿಗೆ ಒಳಪಟ್ಟು ಅಂತಹ ಬೀದಿಗಳ ಎರಡು ಕಡೆಗಳಲ್ಲಿ ಅಥವಾ ಅಂತಹ ಬೀದಿಯ ಭಾಗದಲ್ಲಿ ಪೋಸ್ಟ್‍ಗಳನ್ನು ನೆಡುವ ಮೂಲಕ ಸಾರ್ವಜನಿಕರಿಗೆ ಆಗುವ ಅಪಾಯ, ತೊಂದರೆ ಅಥವಾ ಅನಾನುಕೂಲತೆಯನ್ನು ತಡೆಗಟ್ಟುವುದಕ್ಕಾಗಿ ಯಾವುದೇ ನಿರ್ದಿಷ್ಟ ಬೀದಿಯಲ್ಲಿ ವಾಹನಗಳ ಸಂಚಾರವನ್ನು ತಡೆಗಟ್ಟುವುದು ಅಂಥ ನಮೂನೆ ನಿರ್ಮಾಣ ತೂಕ ಮತ್ತು ಅಳತೆಯ ಯಾವುದೇ ವಾಹನಗಳ ಅಥವಾ ಕೆಲವು ಸಮಯದಲ್ಲಿ ಅಂಥ ಷರತ್ತುಗಳ ಅಡಿಯಲ್ಲಿ ಹೊರತುಪಡಿಸಿ ರಸ್ತೆ ಮಾರ್ಗ ಅಥವಾ ಅದರ ಯಾವುದೇ ನಿರ್ಮಿತಿಗೆ ಹಾನಿ ಉಂಟುಮಾಡುವಂತ ಭಾವಿಸಬಹುದಾದ ಅಂತಹ ಯಂತ್ರೋಪಕರಣ ಅಥವಾ ಇತರ ನಿರ್ವಹಿಸಲಾಗದ ಅಂತರದಿಂದ ತುಂಬಲಾಗಿರುವ ಸಾಗಣೆಯನ್ನು ನಿಯಂತ್ರಿಸುವುದು ಟ್ರ್ಯಾಕ್ಷನ್ ಅಥವಾ ಲೋಕೋಮೇಷನ್ ಇದನ್ನು ರಸ್ತೆ ಮಾರ್ಗದ ರಕ್ಷಣೆಗಾಗಿ ವಸ್ತುಗಳ ಬಳಕೆ ದೀಪಗಳ ಸಂಖ್ಯೆ ಮತ್ತು ನಿಯಮಿಸಬಹುದಾದ ನೆರವುಗಳು ಮತ್ತು ಇತರ ಸಾಮಾನ್ಯ ಮುನ್ನೆಚ್ಚರಿಕೆಗಳು ಅಂಥ ಉಪವಿಧಿಗಳಲ್ಲಿ ಸಾಮಾನ್ಯವಾಗಿ ಅಥವಾ ಪ್ರತಿಯೊಂದು ಪ್ರಕರಣದಲ್ಲಿ ಮಂಜೂರಾಗಬೇಕಾದ ವಿಶೇಷ ಲೈಸನ್ಸಗಳಲ್ಲಿ ಸಮಯದಲ್ಲಿ ಅಂತಹ ನಿಬಂಧನೆಗಳು ಅಂತಹ ಉಪವಿಧಿಗಳಲ್ಲಿ ನಿಯಮಿಸಬಹುದಾದ ಶುಲ್ಕಗಳ ಅನ್ವಯ ಮತ್ತು ಪಾವತಿ:

ಪರಂತು ಅಂಥ ನಿಷೇಧದ ನೋಟೀಸುಗಳನ್ನು ಗ್ರಾಮ ಪಂಚಾಯಿತಿಯು ಅಂಥ ರಸ್ತೆಯ ಅಥವಾ ರಸ್ತೆಯ ಭಾಗದ ಎರಡೂ ಕೊನೆಗಳಲ್ಲಿ ಅಥವಾ ಹತ್ತಿರ ಎದ್ದು ಕಾಣುವ ಸ್ಥಳಗಳಲ್ಲಿ ಪ್ರಕಟಿಸದ ಹೊರತು ಯಾವುದೇ ನಿರ್ದಿಷ್ಟ ರಸ್ತೆ ಅಥವಾ ರಸ್ತೆಯ ಭಾಗಕ್ಕೆ ಮಾತ್ರ ಜಾರಿಯಲ್ಲಿರುವ ಅಂಥ ಉಪವಿಧಿಗೆ ಸಂಬಂಧಿಸಿದೆಯೆಂದು ಭಾವಿಸತಕ್ಕದ್ದಲ್ಲ.

(ಟಿ) ಹಾನಿ ಅಥವಾ ದುರುಪಯೋಗದಿಂದ ಗ್ರಾಮ ಪಂಚಾಯಿತಿಯಲ್ಲಿ ಅಥವಾ ನಿಯಂತ್ರಣದ ಅಡಿಯಲ್ಲಿ ನಿಹಿತವಾಗಿರುವ ಸಾರ್ವಜನಿಕ ಉದ್ಯಾನಗಳು, ಗಾರ್ಡನುಗಳು, ಕಣಗಳು ಮತ್ತು ಮುಕ್ತ ಪ್ರದೇಶಗಳ ರಕ್ಷಣೆಯನ್ನು ಭದ್ರಗೊಳಿಸುವುದು ಅವುಗಳ ನಿರ್ವಹಣೆಯನ್ನು ಮತ್ತು ಸಾರ್ವಜನಿಕರು ಅವುಗಳನ್ನು ಬಳಸುವ ವಿಧಾನಗಳನ್ನು ನಿರ್ವಹಿಸುವುದು, ಹಾಗೂ ಅವುಗಳಲ್ಲಿರುವ ವ್ಯಕ್ತಿಗಳ ಸೂಕ್ತ ವರ್ತನೆಯನ್ನು ಉಪಬಂಧಿಸುವುದು.

(ಯು) ಸರ್ವೇಯರುಗಳ ಅಥವಾ ಅಗತ್ಯವಿರುವ ಪ್ಲಾನುಗಳನ್ನು ರಚಿಸುವ ವ್ಯಕ್ತಿಗಳು ಅಥವಾ ಪ್ಲಂಬರುಗಳ ವಿದ್ಯಾರ್ಹತೆಗಳನ್ನು ನಿಗದಿಪಡಿಸುವುದು ಸರ್ವೇಯರುಗಳ ಅಥವಾ ಪ್ಲಂಬರುಗಳ ಅಥವಾ ನೀರು ಸರಬರಾಜು ಗುತ್ತಿಗೆದಾರರಾಗಿ ವ್ಯಕ್ತಿಗಳಿಗೆ ಲೈಸೆನ್ಸುಗಳನ್ನು ನೀಡುವುದು ಮತ್ತು ಅಂಥ ಲೈಸೆನ್ಸುಗಳಿಗೆ ವಿಧಿಸಬಹುದಾದ ಶುಲ್ಕಗಳನ್ನು ನಿಗದಿಪಡಿಸುವುದು ಹಾಗೂ ಅಂಥ ಲೈಸೆನ್ಸುಗಳನ್ನು ತೆಗೆದುಹಾಕುವ ಅಥವಾ ಉಪಬಂಧಗಳನ್ನು ಮಾರ್ಪಡಿಸುವುದಕ್ಕಾಗಿ ಮತ್ತು ಲೈಸೆನ್ಸು ಪಡೆದ ಪ್ಲಂಬರುಗಳ ಅಥವಾ ನೀರು ಸರಬರಾಜು ಗುತ್ತಿಗೆದಾರರ ಹೊರತಾಗಿ ನೀರು ಅಥವಾ ಕಾಲುವೆ ಕೊಳವೆಗಳ ಅಥವಾ ಮನೆ ಸಂಪರ್ಕಗಳಿಗೆ ಕೈಗೊಳ್ಳಲಾದ ಅಥವಾ ಮಾಡಿರುವ ಯಾವುದೇ ಮಾರ್ಪಡುಗಳು ಅಥವಾ ಕೈಗೊಳ್ಳಲಾದ ಅಥವಾ ಮಾಡಿರುವ ಯಾವುದೇ ಮಾರ್ಪಡುಗಳು ಅಥವಾ ರಿಪೇರಿಗಳು ಅಥವಾ ಜೋಡಣೆಗಳನ್ನು ನಿರ್ಬಂಧಿಸುವುದು ಎಲ್ಲಾ ಲೈಸೆನ್ಸ ಪಡೆದ ಪ್ಲಂಬರುಗಳ ಅಥವಾ ಲೈಸೆನ್ಸ ಪಡೆದ ನೀರು ಸರಬರಾಜು ಗುತ್ತಿಗೆದಾರರ ಮೇಲೆ ಸಾಕಷ್ಟು ನಿಯಂತ್ರಣ ಚಲಾಯಿಸಲು ಉಪಬಂಧಗಳನ್ನು ಕಲ್ಪಿಸುವುದು, ಅವರುಗಳ ಕೈಗೊಂಡ ಕೆಲಸಗಳನ್ನು ಪರಿವೀಕ್ಷಿಸುವುದು ಮತ್ತು

ಲೈಸೆನ್ಸ ಪಡೆದ ಪ್ಲಂಬರು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಗುತ್ತಿಗೆದಾರನ ಮೂಲಕ ಮಾಡಲಾದ ಕೆಲಸದ ಗುಣಮಟ್ಟ, ಬಳಸುವ ವಸ್ತು, ಕೆಲಸಗಳನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬ ಮತ್ತು ವಿಧಿಸಲಾದ ಶುಲ್ಕಗಳಿಗೆ ಸಂಬಂಧಿಸಿದಂತೆ ವ್ಯಾಪ್ತಿಯಲ್ಲಿರುವ ಮಾಲೀಕರು ಅಥವಾ ಅನುಭೋಗದಾರರು ಮಾಡಿರುವ ದೂರುಗಳ ಕೇಳುವುದು ಮತ್ತು ವಿಲೇ ಮಾಡುವುದು.

(ವಿ) ಯಾವುದೇ ಪ್ರಮೇಯಗಳಲ್ಲಿ ಯಾವುದೇ ಕಾರ್ಖಾನೆಗಳಲ್ಲಿ ಕಾರ್ಖಾನೆಗಳ ಅಧಿನಿಯಮ 1948ರಲ್ಲಿ ಪರಿಭಾಷಿಸಿದಂತೆ ಲೈಸೆನ್ಸುಗಳನ್ನು ಮಂಜೂರು ಮಾಡಬಹುದಾದ, ತಿರಸ್ಕರಿಸಬಹುದಾದ, ಅಮಾನತುಪಡಿಸಬಹುದಾದ, ಅಥವಾ ಹಿಂಪಡೆಯಬಹುದಾದ ಷರತ್ತುಗಳ ಮೇರೆಗೆ ಅಥವಾ ಒಳಪಟ್ಟು ಮತ್ತು ಸಂದರ್ಭಗಳು ಹಾಗೂ ಸಂಬಂಧಿಸಿದ ಪ್ರದೇಶಗಳ ಅಥವಾ ಸ್ಥಳಗಳನ್ನು ನಿಯಮಿಸುವುದು.

(ಡಬ್ಲ್ಯೂ) ಯಾವುದೇ ಭೂಮಿಯ, ಕಟ್ಟಡ ಅಥವಾ ರಚನೆಯ ಮೇಲೆ ಅಥವಾ ಯಾವುದೇ ವಾಹನದ ಮೇಲೆ ಅಥವಾ ಯಾವುದೇ ಇತರ ವಿಧಾನದಲ್ಲಿ ಪ್ರದರ್ಶಿಸುವುದಕ್ಕಾಗಿ ಯಾವುದೇ ಜಾಹೀರಾತುಗಳನ್ನು ನಿಲ್ಲಿಸಲು, ಪ್ರದರ್ಶಿಸಲು, ನಿಗದಿಪಡಿಸಲು ಅಥವಾ ಉಳಿಸಿಕೊಳ್ಳಲು ಮಂಜೂರು ಮಾಡಬಹುದಾದ, ತಿರಸ್ಕರಿಸಬಹುದಾದ ಅಮಾನತ್ತು ಪಡಿಸಬಹುದಾದ ಅಥವಾ ಹಿಂಪಡೆಯಬಹುದಾದ ಅನುಮತಿಯನ್ನು ಷರತ್ತುಗಳ ಮೇಲೆ ಅಥವಾ ಒಳಪಟ್ಟು ನಿಯಮಿಸುವುದು.

(ಎಕ್ಸ್) ಗ್ರಾಮ ಪಂಚಾಯಿತಿ ಮೂಲಕ ಮಂಜೂರಾದ ಲೈಸೆನ್ಸುಗಳು ಅಥವಾ ಅನುಮತಿಗಳಿಗಾಗಿ ಅಥವಾ ದಾಖಲೆಗಳ ಪರಿವೀಕ್ಷಣೆಗಾಗಿ ಅಥವಾ ದಸ್ತಾವೇಜುಗಳ ಪ್ರತಿಗಳ ಮಂಜೂರಾತಿಗಾಗಿ ಅಥವಾ ಲೈಸೆನ್ಸುಗಳನ್ನು ಅಥವಾ ಪರ್ಮಿಟ್ಟುಗಳಿಗೆ ಶುಲ್ಕಗಳನ್ನು ವಿಧಿಸುವುದು; ಮತ್ತು

(ವೈ) ಗ್ರಾಮ ಪಂಚಾಯತ್ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು ಸಾಮಾನ್ಯ ನಿರ್ವಹಣೆಗೆ.

(2) ಈ ಪ್ರಕರಣದ ಅಡಿಯಲ್ಲಿ ಯಾವುದೇ ಉಪವಿಧಿಯನ್ನು ಮಾಡುವುದಕ್ಕೆ ಮೊದಲು ಪ್ರತಿಯೊಂದು ಗ್ರಾಮ ಪಂಚಾಯತಿಯು, ಅದರಿಂದ ಬಾಧಿತವಾಗಬಹುದಾದ ವ್ಯಕ್ತಿಗಳ ಮಾಹಿತಿಗಾಗಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಪ್ರಕಟಿಸುವುದು, ಉದ್ದೇಶಿತ ಉಪವಿಧಿಯ ಕರಡು ಪ್ರತಿಯ ಜೊತೆಗೆ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳುವ ದಿನಾಂಕದ ಅಥವಾ ಅದರ ತರುವಾಯ ನಿರ್ದಿಷ್ಟಪಡಿಸಿದ ನೋಟೀಸಿನೊಂದಿಗೆ ಉದ್ದೇಶಿತ ಉಪವಿಧಿಯ ಕರಡು ಪ್ರಕಟಣೆಯ ದಿನಾಂಕದಿಂದ 30 ದಿನಗಳಿಗೆ ಮುಂಚಿತವಲ್ಲದ ಅಂಥ ದಿನಾಂಕದಿಂದ, ಉಪ ವಿಧಿಯನ್ನು ಮಾಡುವ ಮೊದಲು ಹಾಗೇ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುನ್ನ ಯಾವೊಬ್ಬ ವ್ಯಕ್ತಿಯೂ ಲಿಖಿತದಲ್ಲಿ ಕರಡು ಪ್ರತಿಗೆ ಸಂಬಂಧಿಸಿದಂತೆ ಮಾಡಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ಸ್ವೀಕರಿಸತಕ್ಕದ್ದು ಮತ್ತು ಪರಿಗಣಿಸತಕ್ಕದ್ದು.

**315ಎ. ಗ್ರಾಮ ಪಂಚಾಯತಿಯ ಉಪ ವಿಧಿಗಳನ್ನು ರದ್ದುಪಡಿಸುವ ಅಥವಾ ಮಾರ್ಪಡಿಸುವ ಸರ್ಕಾರದ ಅಧಿಕಾರ.–** (1) ಸರ್ಕಾರವು ಯಾವುದೇ ಗ್ರಾಮ ಪಂಚಾಯತಿಯ ಮೂಲಕ ಮಾಡಲಾದ ಯಾವುದೇ ಉಪವಿಧಿಯನ್ನು ಅಥವಾ ಅದರ ಭಾಗವನ್ನು ಪೂರ್ಣವಾಗಿ ಯಾವುದೇ ಸಮಯದಲ್ಲಿ ಅಧಿಸೂಚನೆಯ ಮೂಲಕ ನಿರಸನಗೊಳಿಸಬಹುದು:

ಪರಂತು ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಮೊದಲು ಸರ್ಕಾರವು ಉದ್ದೇಶಿತ ಅಧಿಸೂಚನೆಯ ಕರಡನ್ನು ಪ್ರಕಟಿಸತಕ್ಕದ್ದು ಮತ್ತು ಅದನ್ನು ಸಂಬಂಧಿತ ಗ್ರಾಮ ಪಂಚಾಯತಿಗೆ ತಿಳಿಸತಕ್ಕದ್ದು, ಪ್ರಸ್ತಾವನೆಗೆ ಪ್ರತಿಯಾಗಿ ಕಾರಣ ಕೇಳುವುದಕ್ಕೆ ಗ್ರಾಮ ಪಂಚಾಯತ್ ಮತ್ತು ಸಾರ್ವಜನಿಕ ಸದಸ್ಯರುಗಳಿಗಾಗಿ ಯುಕ್ತ ಅವಧಿಯನ್ನು ನಿಗದಿಪಡಿಸುವುದು ಹಾಗೂ ಗ್ರಾಮ ಪಂಚಾಯತ್ ಮತ್ತು ಸಾರ್ವಜನಿಕ ಸದಸ್ಯರುಗಳ ಯಾವುದೇ ವಿವರಣೆ ಮತ್ತು ಆಕ್ಷೇಪಣೆಗಳು ಇದ್ದಲ್ಲಿ ಪರಿಗಣಿಸುವುದು.

(2) ಯಾವುದೇ ಉಪವಿಧಿಯ ನಿರಸನಗೊಳಿಸುವಿಕೆ ಅಥವಾ ಮಾರ್ಪಾಡು ಅಧಿಕೃತ ರಾಜ್ಯ ಪತ್ರದಲ್ಲಿ ಅಧಿಸೂಚಿಸಿದ ದಿನಾಂಕದಿಂದ ಜಾರಿಯಾಗತಕ್ಕದ್ದು. ಅದರಲ್ಲಿ ದಿನಾಂಕವನ್ನು ನಿರ್ದಿಷ್ಟಪಡಿಸದಿದ್ದಲ್ಲಿ ಪ್ರಕಟಣೆಯ ದಿನಾಂಕದಿಂದ ಮತ್ತು ಅಂಥ ದಿನಾಂಕದ ಮೊದಲು ಯಾವುದನ್ನೇ ಮಾಡಿರುವುದು, ತೆಗೆದುಹಾಕಿರುವುದು ಅಥವಾ ಅನುಭವಿಸಿರುವುದು ಬಾಧಿತವಾಗತಕ್ಕದ್ದಲ್ಲ.][1]

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.

**316. ಮಾದರಿ ವಿನಿಯಮಗಳು ಮತ್ತು ಉಪವಿಧಿಗಳನ್ನು ರಚಿಸಲು ಸರ್ಕಾರದ ಅಧಿಕಾರ ಮತ್ತು ಪಂಚಾಯತಿಗಳು ಅಂಥ ನಿಯಮಗಳು ಮತ್ತು ಉಪವಿಧಿಗಳನ್ನು ಅಳವಡಿಸಿಕೊಳ್ಳುವುದು.–** (1) ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 311ನೇ ಪ್ರಕರಣದಡಿ ಮಾಡಲಾದ ನಿಯಮಗಳಿಗೊಳಪಟ್ಟು ಮತ್ತು ಕರಡನ್ನು ಪೂರ್ವಭಾವಿಯಾಗಿ ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳಿಗೆ ಕಡಿಮೆಯಿಲ್ಲದಷ್ಟು ಅವಧಿಯ ತರುವಾಯ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಮಾದರಿ ವಿನಿಯಮಗಳು ಮತ್ತು ಉಪವಿಧಿಗಳನ್ನು ರಚಿಸಬಹುದು.

(2) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ಸಂದರ್ಭಾನುಸಾರ (1)ನೇ ಉಪಪ್ರಕರಣದಡಿ ಮಾಡಲಾದ ಮಾದರಿ ವಿನಿಯಮಗಳು ಮತ್ತು ಉಪವಿಧಿಗಳನ್ನು ನಿರ್ಣಯ ಮಂಡಿಸುವ ಮೂಲಕ ಅಳವಡಿಸಿಕೊಳ್ಳಬಹುದು ಮತ್ತು ಅಂಥ ವಿನಿಯಮಗಳು ಮತ್ತು ಉಪವಿಧಿಗಳು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗೆ ಸಂದರ್ಭಾನುಸಾರವಾಗಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯು ಗೊತ್ತುಪಡಿಸಿದ ರೀತಿಯಲ್ಲಿ ಪ್ರಕಟಿಸಲಾದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಸರ್ಕಾರವು, ಸಂಬಂಧಪಟ್ಟ ಪಂಚಾಯತಿಯು ನಿರ್ದೇಶನವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳಿಗೆ ಕಡಿಮೆಯಿಲ್ಲದಂಥ ಅವಧಿಯೊಳಗೆ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಮಾದರಿ ವಿನಿಯಮಗಳು ಮತ್ತು ಉಪವಿಧಿಗಳನ್ನು ಅಳವಡಿಸಿಕೊಳ್ಳಬೇಕೆಂಬುದಾಗಿ ಆದೇಶದ ಮೂಲಕ ಯಾವುದೇ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಅಥವಾ ಜಿಲ್ಲಾ ಪಂಚಾಯತಿಗೆ ನಿರ್ದೇಶನ ನೀಡಬಹುದು.

(4) ಯಾವುದೇ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು ಸಂದರ್ಭಾನುಸಾರ ಮಾದರಿ ವಿನಿಯಮ ಅಥವಾ ಉಪವಿಧಿಗಳನ್ನು ಅಳವಡಿಸಿಕೊಳ್ಳುವಲ್ಲಿ ಯಾವುದೇ ಕ್ರಮ ಕೈಗೊಳ್ಳಲು ತಪ್ಪಿದರೆ, ಸರ್ಕಾರವು, ಅಧಿಸೂಚನೆ ಹೊರಡಿಸುವ ಮೂಲಕ, ಸಂದರ್ಭಾನುಸಾರ ಸದರಿ ಮಾದರಿ ವಿನಿಯಮಗಳು ಅಥವಾ ಉಪವಿಧಿಗಳು ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗೆ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಯಲ್ಲಿ ಬರತಕ್ಕದ್ದೆಂದು ಘೋಷಿಸಬಹುದು ಮತ್ತು ಸಂದರ್ಭಾನುಸಾರ ಅಂಥ ವಿನಿಯಮಗಳು ಅಥವಾ ಉಪವಿಧಿಗಳು ಅದೇ ಪ್ರಕಾರವಾಗಿ ಜಾರಿಯಲ್ಲಿ ಬರತಕ್ಕದ್ದು.

(5) 313, 314 ಮತ್ತು 315ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ ಈ ಪ್ರಕರಣದ ಉಪಬಂಧಗಳು ಪರಿಣಾಮಕಾರಿಯಾಗುತ್ತವೆ.

**317. ಕಾನೂನುಗಳನ್ನು ಅಳವಡಿಸಲು ಸರ್ಕಾರದ ಅಧಿಕಾರ.**- ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳನ್ನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ತರುವ ಉದ್ದೇಶಕ್ಕಾಗಿ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅವಶ್ಯ ಅಥವಾ ಯುಕ್ತವಾಗಬಹುದಾದಂತೆ ನಿರಸನಗೊಳಿಸುವ ಮೂಲಕವಾಗಲಿ ಅಥವಾ ತಿದ್ದುಪಡಿ ಮಾಡುವ ಮೂಲಕವೇ ಆಗಲಿ ಅಂಥ ಕಾನೂನಿನಲ್ಲಿ ಅಂಥ ಅಳವಡಿಕೆ ಮತ್ತು ಮಾರ್ಪಾಟುಗಳನ್ನು ಮಾಡಬಹುದು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆ ಕಾನೂನು, ಹಾಗೆ ಮಾಡಲಾದ ಅಳವಡಿಕೆಗಳು ಮತ್ತು ಮಾರ್ಪಾಟುಗಳಿಗೊಳಪಟ್ಟು, ಪರಿಣಾಮಕಾರಿಯಾಗತಕ್ಕದ್ದು ಎಂದು ಉಪಬಂಧಿಸಬಹುದು ಮತ್ತು ಅಂತ ಯಾವುದೇ ಅಳವಡಿಕೆ ಅಥವಾ ಮಾರ್ಪಾಟನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

***ವಿವರಣೆ.***- ಈ ಪ್ರಕರಣದಲ್ಲಿರುವ "ಜಾರಿಯಲ್ಲಿರುವ ಕಾನೂನು" ಎಂಬ ಪದಾವಳಿಯು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ, ರಾಜ್ಯ ವಿಧಾನಮಂಡಲ ಅಥವಾ ರಾಜ್ಯದಲ್ಲಿನ ಇತರ ಸಕ್ಷಮ ಪ್ರಾಧಿಕಾರವು ಅಂಗೀಕರಿಸಿದ ಅಥವಾ ಮಾಡಿದ ಮತ್ತು ರಾಜ್ಯದಲ್ಲಿನ ಎಲ್ಲ ಅಥವಾ ಯಾವುವೇ ನಿರ್ದಿಷ್ಟ ಪ್ರದೇಶಗಳಲ್ಲಿ ಅದು ಅಥವಾ ಅದರ ಭಾಗಗಳು ಪ್ರವರ್ತನೆಯಲ್ಲಿ ಇಲ್ಲದೆ ಇದ್ದಾಗ್ಯೂ, ಈ ಹಿಂದೆ ನಿರಸನಗೊಂಡಿಲ್ಲದ ಕಾನೂನನ್ನು ಒಳಗೊಳ್ಳತಕ್ಕದ್ದು.

**318. ನಿರಸನ ಮತ್ತು ಉಳಿಸುವಿಕೆಗಳು.**- ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ, 1983ನ್ನು (1985ರ ಕರ್ನಾಟಕ ಅಧಿನಿಯಮ 20) ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು,-

(ಎ) ಸದರಿ ಅಧಿನಿಯಮದ ಪೂರ್ವಪ್ರವರ್ತನೆ ಅಥವಾ ಅವುಗಳ ಅಡಿಯಲ್ಲಿ ಕ್ರಮಬದ್ಧವಾಗಿ ಮಾಡಿದ ಅಥವಾ ಅನುಭವಿಸಿದ ಯಾವುದನ್ನಾದರೂ, ಅಥವಾ

(ಬಿ) ಸದರಿ ಅಧಿನಿಯಮದ ಅಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು, ಅಥವಾ

(ಸಿ) ಸದರಿ ಅಧಿನಿಯಮದ ವಿರುದ್ಧ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಅನುಭವಿಸಿದ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು, ಅಥವಾ

(ಡಿ) ಹಿಂದೆ ಹೇಳಿದಂಥ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು,

-ಬಾಧಿಸತಕ್ಕದ್ದಲ್ಲ ಮತ್ತು ಯಾವುದೇ ಅಂಥ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು, ಈ ಅಧಿನಿಯಮವನ್ನು ಅಂಗೀಕರಿಸಿಲ್ಲದಿದ್ದರೆ ಹೇಗೋ ಹಾಗೆ ಮಾಡಬಹುದು, ಮುಂದುವರೆಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಯಾವುದೇ ಅಂಥ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದು:

ಅಷ್ಟೇ ಅಲ್ಲದೆ,-

(ಎ) ಹಿಂದಿನ ಉಪಬಂಧಕ್ಕೆ ಒಳಪಟ್ಟು, ಸದರಿ ಅಧಿನಿಯಮಗಳ ಅಡಿಯಲ್ಲಿ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು (ಮಾಡಿದ ಯಾವುದೇ ನೇಮಕಾತಿ ಅಥವಾ ಪ್ರತ್ಯಾಯೋಜನೆ, ವಿಧಿಸಿದ ತೆರಿಗೆ, ಫೀಜು ಅಥವಾ ಉಪಕರ, ಹೊರಡಿಸಿದ ಅಧಿಸೂಚನೆ, ಆದೇಶ, ಲಿಖಿತ ಅಥವಾ ನಿರ್ದೇಶನ, ರಚಿಸಿದ ನಿಯಮ, ವಿನಿಯಮ, ನಮೂನೆ, ಉಪವಿಧಿ ಅಥವಾ ಯೋಜನೆ, ಪಡೆದುಕೊಂಡ ಪ್ರಮಾಣ ಪತ್ರ, ಮಂಜೂರು ಮಾಡಿದ ಪರ್ಮಿಟ್ಟು ಅಥವಾ ಲೈಸನ್ಸ್ ಅಥವಾ ಮಾಡಿಕೊಂಡ ನೋಂದಣಿಯನ್ನು ಒಳಗೊಂಡು) ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅದನ್ನು, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮದ ಮೂಲಕ ರದ್ದುಪಡಿಸಿದ್ದ ಹೊರತು ಮತ್ತು ಅಲ್ಲಿಯವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

(ಬಿ) ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನೌಕರರ ವರ್ಗವನ್ನು ಹೊರತುಪಡಿಸಿ, ಮಂಡಲ ಪಂಚಾಯತಿ ಅಥವಾ ಜಿಲ್ಲಾ ಪರಿಷತ್ತಿನ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರನು, ಇತರ ಉಪಬಂಧಗಳನ್ನು ಮಾಡುವವರೆಗೆ ಈ ಪ್ರಕರಣವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಅವರು ಹಕ್ಕುಳ್ಳವರಾಗಿದ್ದಂಥ ಸಂಬಳ ಮತ್ತು ಭತ್ಯೆಗಳನ್ನು ಸ್ವೀಕರಿಸತಕ್ಕದ್ದು ಮತ್ತು ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(ಸಿ) ಸರ್ಕಾರದ ಪೂರ್ವ ಮಂಜೂರಾತಿಗೊಳಪಟ್ಟು, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯು, ಯಾವನೇ ಅಧಿಕಾರಿ ಅಥವಾ ನೌಕರನ ಸೇವೆಯು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಗೆ ಅಗತ್ಯವಿಲ್ಲವೆಂದು ಅಥವಾ ಸೂಕ್ತವಾಗಿಲ್ಲವೆಂದು ಅಭಿಪ್ರಾಯಪಟ್ಟಲ್ಲಿ ಅವರ ನಿಯೋಜನೆಯ ನಿಬಂಧನೆಗಳ ಮೂಲಕ ಕೊಡಬೇಕೆಂದು ಅಗತ್ಯಪಡಿಸಲಾದಂಥ ನೋಟೀಸನ್ನು ಕೊಟ್ಟ ತರುವಾಯ ಸೇವೆಯನ್ನು ಮುಂದುವರಿಸದೇ ಇರಲು ಸಕ್ಷಮವಾಗಿರತಕ್ಕದ್ದು ಮತ್ತು ಹಾಗೆ ಯಾವ ಅಧಿಕಾರಿ ಅಥವಾ

ನೌಕರರ ಸೇವೆಯನ್ನು ಮುಂದುವರಿಸಿಲ್ಲವೋ ಆ ಪ್ರತಿಯೊಬ್ಬ ಅಧಿಕಾರಿ ಅಥವಾ ನೌಕರರನ್ನು ಯಾವ ಮಂಡಲ ಪಂಚಾಯತಿ ಅಥವಾ ಜಿಲ್ಲಾ ಪರಿಷತ್ತಿನ ನಿಯೋಜನೆಯಲ್ಲಿ ಅವನು ಇದ್ದನೋ ಆ ಮಂಡಲ ಪಂಚಾಯತಿ ಅಥವಾ ಜಿಲ್ಲಾ ಪರಿಷತ್ತು ಅಸ್ತಿತ್ವದಲ್ಲಿರುವುದು ನಿಂತು ಹೋಗಿಲ್ಲದಿದ್ದರೆ, ಸೇವೆಯಿಂದ ಅಮಾನ್ಯ ಮಾಡಿದ್ದರೆ ಹೇಗೋ ಹಾಗೆ ಅವನು ಪಡೆಯಲು ಅಥವಾ ಸ್ವೀಕರಿಸಲು ಹಕ್ಕನ್ನು ಹೊಂದಿರಬಹುದಾಗಿದ್ದಂಥ ರಜೆ, ಪಿಂಚಣಿ, ಭವಿಷ್ಯನಿಧಿ, ಮತ್ತು ಉಪದಾನಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(ಡಿ) ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮುಂಚೆ ಮತ್ತು ಆ ದಿವಸದಂದು ಅಸ್ತಿತ್ವದಲ್ಲಿದ್ದ ಮಂಡಲ ಪಂಚಾಯತಿ ಅಥವಾ ಜಿಲ್ಲಾ ಪರಿಷತ್ತಿನ ಎಲ್ಲ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು ಮತ್ತು ಅದು ಅಥವಾ ಅದರ ಪರವಾಗಿ ಮಾಡಿಕೊಂಡ ಎಲ್ಲ ಕರಾರುಗಳು, ಸರ್ಕಾರವು ಈ ಬಗ್ಗೆ ಮಾಡಬಹುದಾದಂಥ ಆದೇಶಗಳಿಗನುಸಾರವಾಗಿ, ಅಂಥ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಗೆ ವರ್ಗಾವಣೆಯಾಗತಕ್ಕದ್ದು.

(ಇ) ಮಂಡಲ ಪಂಚಾಯತಿ ಅಥವಾ ಜಿಲ್ಲಾ ಪರಿಷತ್ತಿನ ನೌಕರರ ಪ್ರಯೋಜನಕ್ಕಾಗಿ ಭವಿಷ್ಯನಿಧಿ ಅಥವಾ ಸೇವಾ ನಿವೃತ್ತಿ ನಿಧಿ ಅಥವಾ ಅಂಥದೇ ಇತರ ಯಾವುದೇ ನಿಧಿಯನ್ನು ಸ್ಥಾಪಿಸಿರುವಲ್ಲಿ ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಯಾವುದೇ ಅಂಥ ನಿಧಿಯ ಜಮೆಯಲ್ಲಿರುವ ಹಣಗಳು, ಅಂಥ ನಿಧಿಗೆ ಸೇರಿದ ಇತರ ಯಾವುದೇ ಆಸ್ತಿಯೊಂದಿಗೆ ಸರ್ಕಾರಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು ಮತ್ತು ಸರ್ಕಾರವು ಅಂಥ ನಿಧಿಗೆ ಸಂಬಂಧಿಸಿದಂತೆ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತಿನ ಬಾಧ್ಯತೆಗಳನ್ನು ತೀರಿಸಲು ಹೊಣೆಯಾಗಿರತಕ್ಕದ್ದು.

(ಎಫ್) ಯಾವುದೇ ಅಧಿನಿಯಮಿತಿ ಅಥವಾ ಯಾವುವೇ ಲಿಖಿತಪತ್ರಗಳಲ್ಲಿ ನಿರಸನಗೊಳಿಸಿದ ಯಾವುವೇ ಅಧಿನಿಯಮಿತಿಗಳ ಉಪಬಂಧಗಳಿಗೆ ಮಾಡಿದ ಯಾವುದೇ ಉಲ್ಲೇಖವನ್ನು ವಿಭಿನ್ನ ಉದ್ದೇಶವು ಕಂಡುಬಂದ ಹೊರತು ಈ ಅಧಿನಿಯಮದ ಸಂವಾದಿ ಉಪಬಂಧಗಳಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**319. ಈ ಅಧಿನಿಯಮವನ್ನು ಜಾರಿಗೊಳಿಸುವ ಆದೇಶಗಳು.**- (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸರ್ಕಾರವು,-

(ಎ) ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ಅಥವಾ ಮುಂದುವರಿಸಿದ ಸ್ಥಳೀಯ ಪ್ರಾಧಿಕಾರಗಳಿಗೆ ಅವುಗಳ ಅನ್ವಯದಲ್ಲಿ 318ನೇ ಪ್ರಕರಣದ ಎರಡನೇ ಪರಂತುಕದಲ್ಲಿ ಉಲ್ಲೇಖಿಸಿದ ನಿಯಮಗಳು, ವಿನಿಯಮಗಳು, ಉಪವಿಧಿಗಳು, ಅಧಿಸೂಚನೆಗಳು ಮತ್ತು ಆದೇಶಗಳಿಂದ ಲೋಪಿಸುವುದು, ಅವುಗಳಿಗೆ ಸೇರ್ಪಡೆ ಮಾಡುವುದು ಮತ್ತು ಅವುಗಳನ್ನು ಅಳವಡಿಸಿಕೊಳ್ಳುವುದು ಮತ್ತು ಮಾರ್ಪಾಡು ಮಾಡುವುದು ಇವುಗಳಿಗಾಗಿ;

(ಬಿ) ಯಾವುದೇ ಕಾನೂನಿನಲ್ಲಿ ಪ್ರಾಧಿಕಾರಗಳಿಗೆ ಮಾಡಿದ ಉಲ್ಲೇಖಗಳನ್ನು ಅರ್ಥೈಸುವುದರಲ್ಲಿನ ತೊಂದರೆಗಳನ್ನು ಒಳಗೊಂಡು ಈ ಅಧಿನಿಯಮದ ಉಪಬಂಧಗಳಿಗೆ ಪರಿವರ್ತನೆ ಆಗುವುದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ತೊಂದರೆಗಳನ್ನು ನಿವಾರಿಸುವುದಕ್ಕಾಗಿ;

(ಸಿ) ಯಾವುದೇ ಸ್ಥಳೀಯ ಪ್ರಾಧಿಕಾರಗಳು ಈ ಮೊದಲು ನಡೆಸಿಕೊಂಡು ಹೋಗುತ್ತಿದ್ದ ಸೇವೆಗಳು ಮತ್ತು ಕಾರ್ಯ ಚಟುವಟಿಕೆಗಳನ್ನು ಆ ಸ್ಥಳೀಯ ಪ್ರಾಧಿಕಾರಗಳ ಪರವಾಗಿ ತತ್ಕಾಲದಲ್ಲಿ ಮುಂದುವರಿಸಿಕೊಂಡು ಹೋಗುವುದನ್ನು ಅಧಿಕೃತಗೊಳಿಸುವುದಕ್ಕಾಗಿ; ಮತ್ತು

(ಡಿ) ಹಿಂದೆ ಹೇಳಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅವಶ್ಯಕವೆಂದು ಅಥವಾ ವಿಹಿತವೆಂದು ಅದಕ್ಕೆ ಕಂಡುಬರುವಷ್ಟರಮಟ್ಟಿಗೆ ಯಾವುದೇ ನ್ಯಾಯಾಲಯ ಅಥವಾ ಪ್ರಾಧಿಕಾರದ ಅಧಿಕಾರಗಳು ಮತ್ತು ಅಧಿಕಾರ ವ್ಯಾಪ್ತಿಯನ್ನು ವ್ಯತ್ಯಸ್ತಗೊಳಿಸುವುದಕ್ಕಾಗಿ ಮತ್ತು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ಹೊಸ ನ್ಯಾಯಾಲಯಗಳು ಮತ್ತು ಇತರ ಪ್ರಾಧಿಕಾರಗಳನ್ನು ಶಕ್ತಗೊಳಿಸುವುದಕ್ಕಾಗಿ,

-ಅದಕ್ಕೆ ಅವಶ್ಯ ಅಥವಾ ವಿಹಿತವೆಂದು ಕಂಡುಬರುವಂಥ ಉಪಬಂಧವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಮಾಡಬಹುದು.

(2) (1)ನೇ ಉಪ ಪ್ರಕರಣದ ಅಡಿಯ ಯಾವುದೇ ಆದೇಶದ ಮೂಲಕ ಮಾಡಿದ ಉಪಬಂಧಗಳು 320ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದಲ್ಲಿ ಅಧಿನಿಯಮಿತಿಗೊಳಿಸಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ಯಾವುದೇ ಅಂಥ ಆದೇಶವನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನದಲ್ಲದ ಯಾವುದೇ ದಿನಾಂಕಕ್ಕೆ ಪೂರ್ವಾನ್ವಯವಾಗಿರುವ ಹಾಗೆ ಮಾಡಬಹುದು:

ಪರಂತು, ಯಾವನೇ ವ್ಯಕ್ತಿಯನ್ನು ಅಂಥ ಯಾವುದೇ ಆದೇಶವು ಅದರ ಯಾವುದೇ ಉಪಬಂಧವನ್ನು, ಅದನ್ನು ಮಾಡುವುದಕ್ಕೆ ಮುಂಚಿನ ಯಾವುದೇ ದಿನಾಂಕಕ್ಕೆ ಪೂರ್ವಾನ್ವಯವಾಗಿರುವಂತೆ ಮಾಡುವಷ್ಟರಮಟ್ಟಿಗಿನ ಕಾರಣಗಳಿಂದಾಗಿ ಅಪರಾಧದ ಬಗ್ಗೆ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದಲ್ಲ.

**320. ರಾಜ್ಯ ವಿಧಾನಮಂಡಲದ ಸದನಗಳ ಮುಂದೆ ಮಂಡಿಸಬೇಕಾದ ನಿಯಮಗಳು ಮತ್ತು ಆದೇಶಗಳು.**- 311ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮ ಮತ್ತು 319ನೇ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ರಾಜ್ಯ ವಿಧಾನ ಮಂಡಲದ ಯಾವುದೇ ಸದನವು ಆ ಯಾವುದೇ ನಿಯಮ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ಯಾವುದೇ ನಿಯಮ ಅಥವಾ ಆದೇಶವು ಪರಿಣಾಮಕಾರಿಯಾಗಿರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಮತ್ತು ಆ ಮಾರ್ಪಾಟು ಅಥವಾ ನಿರ್ದೇಶನಕ್ಕೆ ಇನ್ನೊಂದು ಸದನವು ಒಪ್ಪಿದರೆ ಆ ತರುವಾಯ ಅಂಥ ನಿಯಮ ಅಥವಾ ಆದೇಶವು, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ.

**321. ತೊಂದರೆಗಳ ನಿವಾರಣೆ.**- ಈ ಅಧಿನಿಯಮವನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ ಸರ್ಕಾರವು ಸಂದರ್ಭವು ಅಗತ್ಯಪಡಿಸಬಹುದಾದಂಥ, ತೊಂದರೆಯನ್ನು ನಿವಾರಿಸಲು ಅಗತ್ಯವೆಂದು ಕಂಡುಬರುವಂಥ ಏನನ್ನಾದರೂ, ರಾಜ್ಯಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಮಾಡಬಹುದು.

**[1][ಅನುಸೂಚಿ –I**
**(58ನೇ ಪ್ರಕರಣವನ್ನು ನೋಡಿ)**
**ಸಾಮಾನ್ಯ**

ಈ ಅನುಸೂಚಿಯಲ್ಲಿ ನಿರೂಪಿಸಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ಮತ್ತು ಗ್ರಾಮಪಂಚಾಯತಿಯ ಬಳಿ ಖರ್ಚು ಮಾಡುವುದಕ್ಕೆ ಲಭ್ಯವಿರುವ ಗ್ರಾಮ ಪಂಚಾಯತಿ ನಿಧಿಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಮತ್ತು ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟಂತೆ ರೂಪಿಸಿರುವ ಜವಾಬ್ದಾರಿ ನಕ್ಷೆಯಲ್ಲಿ ವಿವರಿಸಿರುವಂತೆ ಸಹ ಗ್ರಾಮಪಂಚಾಯತಿ ಪ್ರದೇಶದ ಅಗತ್ಯತೆಗಳನ್ನು ಈಡೇರಿಸುವುದು ಗ್ರಾಮಪಂಚಾಯತ್‌ಗಳ ಕರ್ತವ್ಯವಾಗಿರತಕ್ಕದ್ದು.

ಈ ಅಧಿನಿಯಮದ ಇತರೆ ಉಪಬಂಧಗಳಿಗೆ ಮತ್ತು ಮಾರ್ಗಸೂಚಿಗಳಿಗೆ ಹಾಗೂ ಸರ್ಕಾರದ ಹಣಕಾಸು, ತಾಂತ್ರಿಕ ಅಥವಾ ಇತರ ನೆರವಿಗೆ ಒಳಪಟ್ಟು, ಗ್ರಾಮ ಪಂಚಾಯತಿಯು ಅಭಿವೃದ್ಧಿಗಾಗಿ ಮತ್ತು ಸಾಮಾಜಿಕ ನ್ಯಾಯಯ ಉದ್ದೇಶಗಳಿಗಾಗಿ ಅನುಸೂಚಿಯಲ್ಲಿ ನಿರೂಪಿಸಿರುವ ವಿಷಯಗಳನ್ನು ನಿರ್ವಹಿಸಲು ಹಾಗೂ ಅವುಗಳಿಗೆ ಸಂಬಂಧಿಸಿದ ಸ್ಕೀಮುಗಳನ್ನು ಸಿದ್ಧಪಡಿಸಲು ಮತ್ತು ಅನುಷ್ಠಾನಗೊಳಿಸಲು ಅಧಿಕಾರ ಹೊಂದಿರತಕ್ಕದ್ದು.

**1. ಸಾಮಾನ್ಯ ಪ್ರಕಾರ್ಯಗಳು;**

(i)ಪಂಚಾಯತಿ ಪ್ರದೇಶದ ಅಭಿವೃದ್ಧಿಗಾಗಿ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದು.

(ii) ವಾರ್ಷಿಕ ಬಜೆಟ್ ಸಿದ್ಧಪಡಿಸುವುದು.

(iii) ಪ್ರಕೃತಿ ವಿಕೋಪಗಳಿಗೆ ಪರಿಹಾರವನ್ನು ಒದಗಿಸುವುದು.

(iv) ಸಾರ್ವಜನಿಕ ಸ್ವತ್ತುಗಳಲ್ಲಿನ ಅತಿಕ್ರಮಣವನ್ನು ತೊಡೆದುಹಾಕುವುದು.

(v) ಸ್ವಯಂ ಸೇವೆಯನ್ನು ಸಂಘಟಿಸುವುದು ಮತ್ತು ಸಮುದಾಯ ಕಾರ್ಯಗಳಿಗಾಗಿ ವಂತಿಗೆ ನೀಡುವುದು.

(vi) ಗ್ರಾಮಗಳ ಅತ್ಯಾವಶ್ಯಕ ಅಂಕಿ ಅಂಶಗಳನ್ನು ಇಟ್ಟುಕೊಳ್ಳುವುದು.

**2. ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿ**

(i) ಸಮಗ್ರ ಯೋಜನೆಯನ್ನು ತಯಾರಿಸಿ, ಕೃಷಿ, ತೋಟಗಾರಿಕೆ ಮತ್ತು ತರಕಾರಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಗ್ರಾಮ ಸಭೆಯೊಂದಿಗೆ ಸಮಾಲೋಚಿಸಿ, ಸಮಗ್ರ ಗ್ರಾಮ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿ ಯೋಜನೆಯನ್ನು ಸಿದ್ಧಪಡಿಸುವುದು ಹಾಗೂ ಅವುಗಳ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು;

(ii) ಇತರ ಬಂಜರು ಭೂಮಿಯೂ ಸೇರಿದಂತೆ, ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಮೇವು ಭೂಮಿಯ (grazing) ಗರಿಷ್ಠ ಬಳಕೆಯನ್ನು ಖಚಿತಪಡಿಸಲು ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಮೇವು ಭೂಮಿಯ (grazing) ಗಳ ಬಂಜರು ಭೂಮಿಗಳ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಅಭಿವೃದ್ಧಿಪಡಿಸುವುದು.

(iii) ಗ್ರಾಮ ಪಂಚಾಯತ್ ನಿಧಿಗಳಿಂದ, ನರ್ಸರಿಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

(iv) ಕೃಷಿ ಯಾಂತ್ರೀಕರಣಕ್ಕೆ ಸಂಬಂಧಿಸಿದಂತೆ ಯೋಜನೆಯನ್ನು ಸಿದ್ಧಪಡಿಸುವುದು, ಶಿಫಾರಸ್ಸು ಮಾಡುವುದು ಹಾಗೂ ಮೇಲ್ವಿಚಾರಣೆ ಮಾಡುವುದು.

(v) ಸಮೂಹ ಕೃಷಿ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಳ್ಳುವುದಕ್ಕೆ ಅನುಕೂಲ ಕಲ್ಪಿಸುವುದು.

(vi) ಮಣ್ಣು, ನೀರು ಮತ್ತು ಬೀಜ ಸಂರಕ್ಷಣೆಯ ಮೇಲ್ವಿಚಾರಣೆ ಮಾಡುವುದು.

(vii) ಜಲಾನಯನ ಪ್ರದೇಶದ ನಿರ್ವಹಣೆಯನ್ನು ಕುರಿತು ಮೇಲ್ವಿಚಾರಣೆ ಮಾಡುವುದು.

(viii) ಮಾರುಕಟ್ಟೆ ಧಾರಣೆಯನ್ನು ಪ್ರದರ್ಶಿಸುವುದು.

(ix) ಕೃಷಿ ವಿಮಾ ಯೋಜನೆಗಳ ಮೇಲ್ವಿಚಾರಣೆ ಮಾಡುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು.

**3. ಸಣ್ಣ ನೀರಾವರಿ**

(i) ಗ್ರಾಮ ಪಂಚಾಯತ್ ಪ್ರದೇಶದ ಒಳಗಿರುವ 0 – 10 ಹೆಕ್ಟೇರುಗಳವರೆಗಿನ ಅಚ್ಚುಕಟ್ಟು ಪ್ರದೇಶದಲ್ಲಿರುವ ಎಲ್ಲಾ ಸಣ್ಣ ನೀರಾವರಿ ಯೋಜನೆಗಳನ್ನು ಸಿದ್ಧಪಡಿಸುವುದು, ನಿರ್ಮಿಸುವುದು, ನವೀಕರಿಸುವುದು ಮತ್ತು ನಿರ್ವಹಿಸುವುದು.

(ii) ಗ್ರಾಮ ಪಂಚಾಯತ್ ಮಟ್ಟದಲ್ಲಿ ಇರುವ, 0 – 10 ಹೆಕ್ಟೇರುಗಳವರೆಗಿನ ಅಚ್ಚುಕಟ್ಟು ಪ್ರದೇಶದಲ್ಲಿರುವ ಅಂತಹ ಎಲ್ಲಾ ಸಣ್ಣ/ಕಿರು ನೀರಾವರಿ ಯೋಜನೆಗಳನ್ನು ಸಕಾಲಿಕವಾಗಿ ನಿರ್ವಹಿಸುವುದು ಮತ್ತು ಅನುಷ್ಠಾನಗೊಳಿಸುವುದು ಹಾಗೂ ಲಭ್ಯ ನೀರನ್ನು ಸಮನಾಗಿ ಹಂಚಿಕೆ ಮಾಡುವುದು ಮತ್ತು ಸಂಪೂರ್ಣವಾಗಿ ಬಳಸಿಕೊಳ್ಳುವುದು.

(iii) ಅಂತರ್ಜಲದ ಮರುಪೂರಣ ಮತ್ತು ಮಳೆ ನೀರು ಕೊಯ್ಲಿಗೆ ಸಂಬಂಧಿಸಿದ ಯೋಜನೆಯನ್ನು ಅಭಿವೃದ್ಧಿಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು.

(iv) ಗ್ರಾಮಪಂಚಾಯತ್ ಪ್ರದೇಶದಲ್ಲಿ ಇರುವ ಎಲ್ಲಾ ನೀರಾವರಿ ಮೂಲಗಳ ನಕ್ಷೆ ರೂಪಿಸುವುದನ್ನು ಒಳಗೊಂಡಂತೆ ಅವುಗಳ ದಾಖಲೆಗಳನ್ನು ನಿರ್ವಹಿಸುವುದು.

**4. ಪಶುಸಂಗೋಪನೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ ಮತ್ತು ಮೀನುಗಾರಿಕೆ**

(i) ಗ್ರಾಮ ಪಂಚಾಯತ್‌ಗೆ ವಹಿಸಿಕೊಟ್ಟಿರುವ ಹೈನುಗಾರಿಕೆ, ಕೋಳಿಸಾಕಾಣಿಕೆ, ಹಂದಿ ಸಾಕಾಣಿಕೆ ಮತ್ತು ಕುರಿ ಸಾಕಾಣಿಕೆ ಫಾರ್ಮ್‌ಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

(ii) ಗ್ರಾಮ ಪಂಚಾಯತ್‌ಗೆ ವಹಿಸಿಕೊಟ್ಟಿರುವ ಜಾನುವಾರು–ಅಭಿವೃದ್ಧಿ ಸ್ಕೀಮುಗಳನ್ನು ಅನುಷ್ಠಾನಗೊಳಿಸುವುದು.

(iii) ಸಾಂಕ್ರಾಮಿಕ ರೋಗಗಳ ಮತ್ತು ಅಂಟುರೋಗಗಳ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದು.

(iv) ಗ್ರಾಮ ಪಂಚಾಯತ್‌ಗಳ ಅಧೀನದಲ್ಲಿ ಬರುವ ನೀರಾವರಿ ಕಾಮಗಾರಿಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

(v) ಗ್ರಾಮೀಣ ಮೀನು ಮತ್ತು ಮಾಂಸದ ಮಾರುಕಟ್ಟೆಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು.

(vi) ಹುಲ್ಲುಗಾವಲು (grass land) ಮೇವು ಅಭಿವೃದ್ಧಿಪಡಿಸುವುದು.

5. **ಸಾಮಾಜಿಕ ಅರಣ್ಯ**

(i) ಬಂಜರು ಭೂಮಿಯ ಅರಣ್ಯೀಕರಣ

(ii) ಸಾಮಾಜಿಕ ಅರಣ್ಯ, ಕೃಷಿ ಅರಣ್ಯಗಳನ್ನು (farm forestry) ಅಭಿವೃದ್ಧಿಪಡಿಸುವುದು, ಸಾಮಾಜಿಕ ಅರಣ್ಯದ ಉತ್ಪನ್ನಗಳ ಮಾರಾಟ ಸಂಸ್ಥೆಯನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಅವುಗಳನ್ನು ವಿಲೆ ಮಾಡುವುದು.

(iii) ದನಗಳ ಮೇವಿಗೆ, ಉರುವಲಿಗೆ ಬೇಕಾಗುವ ಮರಗಳನ್ನು ಬೆಳೆಸುವುದು ಮತ್ತು ಹಣ್ಣಿನ ಮರಗಳನ್ನು ಬೆಳೆಸುವುದು.

(iv) ಕೃಷಿ ಅರಣ್ಯ ಸ್ಕೀಮನ್ನು ಜಾರಿಗೊಳಿಸುವುದು.

(v) ನರ್ಸರಿಗಳನ್ನು ಸ್ಥಾಪಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು.

(vi) ಮೀಸಲು ಅರಣ್ಯ, ಸಂರಕ್ಷಿತ ಅರಣ್ಯ, ಮತ್ತು ವನ್ಯ ಜೀವಿಗಳ ಸಂರಕ್ಷಿತ ಪ್ರದೇಶದಲ್ಲಿರುವ ಅರಣ್ಯ ಉತ್ಪನ್ನಗಳ ಹೊರತುಪಡಿಸಿ ಸಣ್ಣ ಅರಣ್ಯ ಪ್ರದೇಶಗಳ ಉತ್ಪನ್ನಗಳನ್ನು ನಿರ್ವಹಿಸುವುದು.

(vii) ಸಾಮಾಜಿಕ ಅರಣ್ಯ ನಿರ್ಮಾಣ ಮತ್ತು ಕೃಷಿ ಅರಣ್ಯ ನಿರ್ಮಾಣ ಬೆಳೆಸಲು ಯೋಜನೆ (ಪ್ರಾಜೆಕ್ಟ್)ಗಳನ್ನು ರೂಪಿಸುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು.

(viii) ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ರಸ್ತೆಯ ಬದಿಯಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಮರಗಳನ್ನು ನೆಡುವುದು ಮತ್ತು ಅವುಗಳನ್ನು ಸಂರಕ್ಷಿಸುವುದು.

6. **ಪ್ರವಾಸೋದ್ಯಮ**

(i) ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಪ್ರವಾಸಿ ತಾಣಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾವಗಳನ್ನು ಸಲ್ಲಿಸುವುದು.

(ii) ಪ್ರವಾಸೋದ್ಯಮದ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಿಕೊಡುವುದು.

(iii) ಗ್ರಾಮ ಪಂಚಾಯತ್‌ಗಳಿಗೆ ವಹಿಸಿಕೊಟ್ಟಿರುವ ಪ್ರವಾಸಿ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು

(iv) ಭಾರತ ಪುರಾತನ ಸರ್ವೇಕ್ಷಣಾ ಇಲಾಖೆ ಅಥವಾ ಇತರ ಸ್ಥಳೀಯ ಪ್ರಾಧಿಕಾರಗಳು ಅಥವಾ ಸರ್ಕಾರಿ ಇಲಾಖೆಗಳು ನಿರ್ವಹಿಸುತ್ತಿರುವ ಪ್ರವಾಸಿ ತಾಣಗಳನ್ನು ಹೊರತುಪಡಿಸಿ ಇನ್ನಿತರ ಪ್ರವಾಸಿ ತಾಣಗಳಲ್ಲಿ ಪ್ರವೇಶ ಶುಲ್ಕವನ್ನು ಮತ್ತು ವಾಹನ ನಿಲುಗಡೆ ಶುಲ್ಕಗಳನ್ನು ಸಂಗ್ರಹಿಸುವುದು.

7. **ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗ್ರಾಮೀಣ ಕೈಗಾರಿಕೆಗಳು – ಖಾದಿ, ಕರಕುಶಲ ಕಲೆಗಳು, ಗ್ರಾಮೋದ್ಯೋಗಗಳು, ಹಾಗೂ ಆಹಾರ ಸಂಸ್ಕರಣಾ ಕೈಗಾರಿಕೆಗಳು**

(i) ಗುಡಿ ಕೈಗಾರಿಕೆಗಳಿಗೆ ಮತ್ತು ಖಾದಿ ಕೈಗಾರಿಕೆಗಳಿಗೆ, ಕರಕುಶಲ ಕಲೆಗಳಿಗೆ, ಗ್ರಾಮೋದ್ಯೋಗಗಳಿಗೆ, ಆಹಾರ ಸಂಸ್ಕರಣಾ ಕೈಗಾರಿಕೆಗಳಿಗೆ ಹಾಗೂ ಇತರ ಕೃಷಿಯೇತರ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು.

(ii) ಪ್ರದರ್ಶನ, ಮಾರುಕಟ್ಟೆ ಸೌಲಭ್ಯವನ್ನು ವ್ಯವಸ್ಥೆಗೊಳಿಸುವುದು.

(iii) ಗುಡಿ ಕೈಗಾರಿಕೆಗಳಿಗೆ ಮತ್ತು ಖಾದಿ ಕೈಗಾರಿಕೆಗಳಿಗೆ, ಕರಕುಶಲ ಕಲೆಗಳಿಗೆ, ಗ್ರಾಮೋದ್ಯೋಗಗಳಿಗೆ, ಆಹಾರ ಸಂಸ್ಕರಣಾ ಕೈಗಾರಿಕೆಗಳಿಗೆ ರಾಜ್ಯ ಸಮಿತಿಗಳ ಮತ್ತು ಅಖಿಲ ಭಾರತ ಸಮಿತಿಗಳ ಸ್ಕೀಮುಗಳನ್ನು ರೂಪಿಸುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು.

(iv) ಲಭ್ಯವಿರಬಹುದಾದ ಖಚ್ಚಾ ಸಾಮಗ್ರಿಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳಿಗೆ ಸಂಬಂಧಿಸಿದ ಮಾಹಿತಿ ದತ್ತಾಂಶವನ್ನು ಸಂಗ್ರಹಿಸುವುದು.

(v) ಮಾರುಕಟ್ಟೆ ಸಮೀಕ್ಷೆ ನಡೆಸುವುದು ಮತ್ತು ಜನರಲ್ಲಿ ಮಾಹಿತಿ ಪ್ರಸಾರ ಮಾಡುವುದು.

(vi) ಆಹಾರ ಸಂಸ್ಕರಣೆ ಮತ್ತು ಉತ್ಪನ್ನ ಮಾರಾಟ ಚಟುವಟಿಕೆಗಳನ್ನು ಉತ್ತೇಜಿಸುವುದು.

8. **ಗ್ರಾಮೀಣ ವಸತಿ**

(i) ವಸತಿರಹಿತ ಮತ್ತು ನಿವೇಶನರಹಿತ ಜನರನ್ನು ಹಾಗೂ ವಲಸೆ ಕಾರ್ಮಿಕರನ್ನು ಗುರುತಿಸುವುದು.

(ii) ಮೀನುಗಾರರ ವಸತಿ ಸ್ಕೀಮುಗಳನ್ನು ಒಳಗೊಂಡಂತೆ ಎಲ್ಲಾ ಗ್ರಾಮೀಣ ವಸತಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಭಾಗವಹಿಸುವುದು.

(iii) ವಸತಿ ಮೇಲ್ದರ್ಜೆಕರಣ ಸ್ಕೀಮಿನ ಅನುಷ್ಠಾನದಲ್ಲಿ ಭಾಗವಹಿಸುವುದು.

(iv) ಋತುಮಾನದ ವಲಸೆ ಕಾರ್ಮಿಕರಿಗೆ ಋತುಮಾನದ ವಲಸೆ ಸೌಲಭ್ಯಗಳನ್ನು ಅನುಷ್ಠಾನಗೊಳಿಸುವುದು.

(v) ಗ್ರಾಮೀಣ ವಸತಿ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದು.

(vi) ಸರ್ಕಾರಿ ಭೂಮಿಯನ್ನು ಗುರುತಿಸುವುದು ಮತ್ತು ಬಡಾವಣೆಗಳ ಅಭಿವೃದ್ಧಿಗಾಗಿ, ವಸತಿ ರಹಿತರಿಗೆ ವಸತಿ ನಿವೇಶನಗಳನ್ನು ವಿತರಿಸುವುದಕ್ಕೆ ಸಂಬಂಧಿಸಿದಂತೆ ನಿವೇಶನ ಹಂಚಿಕೆಗಾಗಿ ಅಥವಾ ನಿವೇಶನ ಮೀಸಲಾತಿಗಾಗಿ ಜಿಲ್ಲಾಧಿಕಾರಿಗೆ ಶಿಫಾರಸ್ಸು ಮಾಡುವುದು.

(vii) ಸರ್ಕಾರವು ನೀಡಿದ ಅಧಿಕಾರಗಳ ಪ್ರಕಾರ ಗ್ರಾಮೀಣ ವಸತಿ ಮತ್ತು ಬಡಾವಣೆ ಯೋಜನೆಗಳನ್ನು ಮಂಜೂರು ಮಾಡುವುದು.

**9. ಕುಡಿಯುವ ನೀರಿನ ಪೂರೈಕೆ**

(i) ನೀರಿನ ಗುಣಮಟ್ಟ ಮತ್ತು ಅದರ ವ್ಯಾಪ್ತಿ ಕುರಿತು ಅಗತ್ಯ ದತ್ತಾಂಶ, ಮಾಹಿತಿ ಸಂಗ್ರಹಿಸುವುದು ಹಾಗೂ ಆ ಕುರಿತು ಯೋಜನೆ ಸಿದ್ಧಪಡಿಸುವುದು.

(ii) ಗ್ರಾಮಪಂಚಾಯತಿಗಳ ವ್ಯಾಪ್ತಿಯೊಳಗಿನ ನೀರು ಸರಬರಾಜು ಸ್ಕೀಮುಗಳನ್ನು ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

(iii) ಜಲಮಾಲಿನ್ಯದ ನಿಯಂತ್ರಣ, ರಕ್ಷಣೆ ಮತ್ತು ತಡೆಗಟ್ಟುವಿಕೆ

(iv) ಸಾಂಪ್ರದಾಯಿಕ ಕುಡಿಯುವ ಜಲಮೂಲಗಳ ನಿರ್ವಹಣೆ

(v) ಪರೀಕ್ಷೆಗಾಗಿ ಕುಡಿಯುವ ನೀರಿನ ಮೂಲಗಳಿಂದ ನೀರಿನ ಮಾದರಿಯ ಸಂಗ್ರಹಣೆ

(vi) ಕುಡಿಯುವ ನೀರಿನ ಮೂಲಗಳ ನಿಯತಕಾಲಿಕ ಶುದ್ಧೀಕರಣ

(vii) ಬಳಕೆದಾರರ ಶುಲ್ಕಗಳನ್ನು ಸಂಗ್ರಹಿಸುವ ಮೂಲಕ ಮನೆಗಳಿಗೆ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ನಲ್ಲಿ ನೀರನ್ನು ಒದಗಿಸುವುದು

(viii) ನೀರು ಶುದ್ಧೀಕರಣ ಘಟಕಗಳ ಸ್ಥಾಪನೆ ಮತ್ತು ನಿರ್ವಹಣೆ

(ix) ಅಂತರ್ಜಲ ದುರ್ಬಳಕೆಯ ನಿಯಂತ್ರಣಕ್ಕೆ ಪ್ರಾಧಿಕಾರಗಳಿಗೆ ನೆರವು ನೀಡುವುದು.

**10. ಪಟ್ಟಣ ಮತ್ತು ಗ್ರಾಮಾಂತರ ಯೋಜನೆಗಳು ಮತ್ತು ಲೋಕೋಪಯೋಗಿ ಕಾಮಗಾರಿಗಳು (ರಸ್ತೆಗಳು, ಸೇತುವೆಗಳು ಹಾಯ್ಗಡಗಳು, ಜಲಮಾರ್ಗಗಳು ಮತ್ತು ಇತರ ಸಂಪರ್ಕ ಕಲ್ಪಿಸುವ ಮಾರ್ಗಗಳು)**

(i) ಈ ಕೆಳಗಿನ ನಿರ್ಮಿತಿಗಳಿಗಾಗಿ ಯೋಜನೆ ರೂಪಿಸುವುದು, ಅವುಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು:

(ಎ) ಪಾದಚಾರಿ ಮಾರ್ಗಗಳು/ಓಣಿಗಳು

(ಬಿ) ಗ್ರಾಮ ರಸ್ತೆಗಳು

(ಸಿ) ಸೇತುವೆಗಳು, ಮೋರಿಗಳು,

(ಡಿ) ಕಟ್ಟಡಗಳು

(ಇ) ಚರಂಡಿಗಳು

(ಎಫ್) ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ಎಂಡಿಆರ್‌ಗಳನ್ನು ಅಥವಾ ಇತರ ಸ್ಥಳೀಯ ಸಂಸ್ಥೆಗಳಿಗೆ ಅಥವಾ ಸರ್ಕಾರಿ ಇಲಾಖೆಗಳಿಗೆ ವಹಿಸಿಕೊಟ್ಟಂಥ ನಿರ್ಮಿತಿಗಳನ್ನು ಹೊರತುಪಡಿಸಿ ಇತರ ನಿರ್ಮಿತಿಗಳು.

(ii) ಈ ಕೆಳಗಿನವುಗಳನ್ನು ನಿರ್ಮಿಸುವುದು ಹಾಗೂ ನಿರ್ವಹಿಸುವುದು

ಎ. ಪ್ರಯಾಣಿಕರ ತಂಗುದಾಣಗಳು/ವಾಹನ ನಿಲುಗಡೆ ಸ್ಥಳಗಳು

ಬಿ. ಆಟದ ಮೈದಾನಗಳು

(iii) ಎಲ್ಲಾ ವಿಧದ ಸ್ಮಶಾನ ಭೂಮಿ/ಸಮಾಧಿ ಭೂಮಿಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು, ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ಎಲ್ಲಾ ಸ್ಮಶಾನ ಭೂಮಿ/ಸಮಾಧಿ ಭೂಮಿಗಳ ಬಳಕೆಗಾಗಿ ನಿಯಮಗಳನ್ನು ಮತ್ತು ವಿನಿಮಯಗಳ್ನು ರಚಿಸುವುದು

(iv) ದೋಣಿಗಳು, ಹಾಯ್ಗಡಗಳು ಮತ್ತು ಜಲ ಮಾರ್ಗಗಳನ್ನು ನಿರ್ವಹಿಸುವುದು

(v) ಮಳೆ ನೀರು ಚರಂಡಿಗಳನ್ನು ನಿರ್ವಹಿಸುವುದು

(vi) ಸ್ನಾನ ಘಟ್ಟಗಳು, ಸಾರ್ವಜನಿಕ ಮಾರುಕಟ್ಟೆ ಮುಂತಾದವುಗಳಂಥಹ ಮೂಲಸೌಕರ್ಯಗಳನ್ನು/ಸೌಲಭ್ಯಗಳನ್ನು ಆಧರಿಸಿದ ಸಮುದಾಯ ಅವಶ್ಯಕತೆಗಳನ್ನು ಸ್ಥಾಪಿಸುವುದು.

(vii) ಜನವಸತಿ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದು.

(viii) ವಸತಿ ಬಡಾವಣೆಗಳನ್ನು ನಿರ್ಮಿಸುವುದು

(ix) ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಟ್ಟಿರುವ ಶಾಲಾ ಕಟ್ಟಡಗಳು, ಆಸ್ಪತ್ರೆಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳ ನಿರ್ಮಾಣಕ್ಕೆ ಯೋಜನೆ ಸಿದ್ಧಪಡಿಸುವುದು, ಅವುಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.

(x) ಸಮಗ್ರ ಗ್ರಾಮ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು.

**11. ಗ್ರಾಮೀಣ ವಿದ್ಯುದೀಕರಣ/ವಿದ್ಯುತ್ ಮತ್ತು ಇಂಧನ**

(i) ಸಾರ್ವಜನಿಕ ಬೀದಿಗಳು ಮತ್ತು ಸ್ಥಳಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು ಮತ್ತು ನಿರ್ವಹಿಸುವುದು.

(ii) ಗ್ರಾಮ ಪಂಚಾಯಿತಿ ನಿಧಿಗಳಿಂದ ಛಾವಣಿ ಮೇಲಿನ ಸೌರ ತಟ್ಟೆ ಅಳವಡಿಕೆಯನ್ನು ಒಳಗೊಂಡಂತೆ ಸೌರವಿದ್ಯುತ್, ಜೈವಿಕ ಅನಿಲ, ಗಾಳಿಯಂತ್ರ, ಕಿರು ವಿದ್ಯುತ್ ಜಲ ಸ್ಥಾವರಗಳಂತಹ ಸಣ್ಣ ಸಾಂಪ್ರದಾಯಿಕ ಮತ್ತು ಅಸಂಪ್ರದಾಯಿಕ ಇಂಧನ ಘಟಕಗಳ ಕುರಿತು ಯೋಜನೆ ಸಿದ್ಧಪಡಿಸುವುದು, ಅವುಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಅವುಗಳಿಗೆ ಉತ್ತೇಜನ ನೀಡುವುದು.

(iii) ಹೆಚ್ಚುವರಿ ಅಸಂಪ್ರದಾಯಿಕ ಇಂಧನ ಉತ್ಪತ್ತಿಯನ್ನು ಇತರರಿಗೆ ಮಾರಾಟ ಮಾಡುವುದು.

(iv) ಗ್ರಾಮ ಪಂಚಾಯಿತಿಗೆ ಸ್ವಯಂ ಸೇವೆ ಸಲ್ಲಿಸುವ ಮೂಲಕ ಗ್ರಾಮೀಣ ವಿದ್ಯುದೀಕರಣಕ್ಕೆ ನೆರವು ನೀಡುವುದು.

**12. ಬಡತನ ನಿರ್ಮೂಲನೆ**

(i) ಬಡ ಜನರನ್ನು ಗುರುತಿಸುವುದು ಮತ್ತು ಬಡತನ ನಿರ್ಮೂಲನೆ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.

(ii) ಎಲ್ಲಾ ಬಡತನ ನಿರ್ಮೂಲನ ಕಾರ್ಯಕ್ರಮಗಳ ಫಲಾನುಭವಿಗಳನ್ನು ಗುರುತಿಸುವುದು ಮತ್ತು ಆಯ್ಕೆ ಮಾಡುವುದು.

(iii) ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಫಲಾನುಭವಿಗಳ ಆಯ್ಕೆಗಾಗಿ ಗ್ರಾಮ ಸಭೆಗೆ ಅನುಕೂಲ ಕಲ್ಪಿಸಿಕೊಡುವುದು.

(iv) ಬಡತನ ನಿರ್ಮೂಲನೆ ಕಾರ್ಯಕ್ರಮಗಳ ಪ್ರಯೋಜನಗಳನ್ನು ಕುರಿತು ಯೋಜಿಸುವುದು, ಅನುಷ್ಠಾನಗೊಳಿಸುವುದು, ಅವುಗಳ ಮೇಲ್ವಿಚಾರಣೆ ಮಾಡುವುದು ಮತ್ತು ವಿತರಿಸುವುದು.

(v) ಸ್ವ-ಉದ್ಯೋಗ ಕಾರ್ಯಕ್ರಮಗಳಿಗೆ ಮೂಲಸೌಕರ್ಯ ಸೌಲಭ್ಯಗಳನ್ನು ಕಲ್ಪಿಸುವುದು.

(vi) ಸ್ವ-ಸಹಾಯ ಗುಂಪುಗಳನ್ನು ಮತ್ತು ನೆರೆಹೊರೆ ಗುಂಪುಗಳನ್ನು ಸಂಘಟಿಸುವುದು ಮತ್ತು ಸಬಲೀಕರಣಗೊಳಿಸುವುದು.

(vii) ಬಡತನ ನಿರ್ಮೂಲನೆ ಅವಶ್ಯಕತೆಗಳನ್ನು ವಿಶ್ಲೇಷಿಸುವುದು.

(viii) ಸ್ವ-ಉದ್ಯೋಗ ಮತ್ತು ಮಜೂರಿ ಉದ್ಯೋಗ ಕಾರ್ಯಕ್ರಮಗಳ ಬಗ್ಗೆ ಯೋಜನೆ ಸಿದ್ಧಪಡಿಸುವುದು ಮತ್ತು ಅದನ್ನು ಅನುಷ್ಠಾನಗೊಳಿಸುವುದು.

(ix) ವಿವಿಧ ಸ್ಕೀಮುಗಳ ಅಡಿಯಲ್ಲಿ ಮೂಲಭೂತ ಕನಿಷ್ಠ ಅಗತ್ಯತೆಗಳನ್ನು ಒದಗಿಸುವುದು.

(x) ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮತ್ತು ಉದ್ಯೋಗ ಅವಕಾಶದ ಉತ್ತೇಜನ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು

**13. ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್)**

(i) ಆಹಾರ ಧಾನ್ಯಗಳು ಮತ್ತು ಇತರ ದೈನಂದಿನ ಅವಶ್ಯಕತೆಗಳ ವಿತರಣೆಯನ್ನು ನಿರ್ವಹಿಸುವುದು.

(ii) ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಆ ಬಗ್ಗೆ ಅರಿವು ಮೂಡಿಸುವುದು.

(iii) ಗ್ರಾಮ ಪಂಚಾಯಿತಿ ನಿಧಿಗಳಿಂದ ಗೋದಾಮುಗಳನ್ನು ಮತ್ತು ಗ್ರಾಮೀಣ ದಾಸ್ತಾನು ಮಳಿಗೆಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು

**14. ವಿಪತ್ತು ನಿರ್ವಹಣೆ**

(i) ವಿಪತ್ತು ಪೀಡಿತ ಸ್ಥಳಗಳನ್ನು ಗುರುತಿಸಲು ಸಮೀಕ್ಷೆ ನಡೆಸುವುದಕ್ಕಾಗಿ;

(ii) ವಿಪತ್ತು ನಿರ್ವಹಣೆ ಸೌಲಭ್ಯಗಳನ್ನು ಸೃಜಿಸಲು ಮತ್ತು ನಿರ್ವಹಿಸಲು;

(iii) ವಿಪತ್ತು ನಿರ್ವಹಣೆಯಲ್ಲಿ ಸ್ಥಳೀಯ ಮತ್ತು ಹೊರಗಿನ ತಜ್ಞರನ್ನು ಗುರುತಿಸಲು;

(iv) ಗ್ರಾಮ ಪಂಚಾಯತಿಯ ಸ್ವಂತ ನಿಧಿಯಿಂದ ಮತ್ತು ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ವಿಪತ್ತುಗಳಿಂದ ಸಂತ್ರಸ್ತರಾದ ವ್ಯಕ್ತಿಗಳಿಗೆ ಪರಿಹಾರ ಮತ್ತು ನಷ್ಟ ಪರಿಹಾರ ಒದಗಿಸಲು,

–ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನೆರವು ನೀಡುವುದು

**15. ಶಿಕ್ಷಣ [ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ, ವಯಸ್ಕರ ಹಾಗೂ ಅನೌಪಚಾರಿಕ ಶಿಕ್ಷಣ]**

(i) ಪಂಚಾಯತಿ ಮಟ್ಟದಲ್ಲಿ ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಈ ಎರಡು ರೀತಿಯ ಶಿಕ್ಷಣ ನೀಡುವ ಕುರಿತು ಯೋಜನೆಯನ್ನು ರೂಪಿಸುವಲ್ಲಿ ಮತ್ತು ಮೇಲ್ವಿಚಾರಣೆ ಮಾಡುವಲ್ಲಿ ಪಾಲ್ಗೊಳ್ಳುವುದು.

(ii) ಲೋಯರ್ ಮತ್ತು ಅಪ್ಪರ್ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸುವುದು ಮತ್ತು ಅವರಿಂದ ಮಂಜೂರಾತಿಗಳನ್ನು ಪಡೆದುಕೊಳ್ಳುವುದು.

(iii) ಸರ್ಕಾರಿ ಲೋಯರ್ ಮತ್ತು ಅಪ್ಪರ್ ಪ್ರಾಥಮಿಕ ಶಾಲೆಗಳ ಮೇಲುಸ್ತುವಾರಿ ನೋಡಿಕೊಳ್ಳುವುದು.

(iv) ಸರ್ಕಾರಿ ಲೋಯರ್ ಮತ್ತು ಅಪ್ಪರ್ ಪ್ರಾಥಮಿಕ ಶಾಲೆಗಳ ಕಟ್ಟಡಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.

(v) ಮಕ್ಕಳ ವಿವರಗಳನ್ನು ಸಂಗ್ರಹಿಸುವುದು ಮತ್ತು ಇಂದೀಕರಿಸುವುದು.

(vi) ಸಾಕ್ಷರತಾ ಕಾರ್ಯಕ್ರಮಗಳು, ಅನೌಪಚಾರಿಕ ಮತ್ತು ಔಪಚಾರಿಕ ಶಿಕ್ಷಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು, ವಯಸ್ಕರ ಸಾಕ್ಷರತೆಗೆ ಉತ್ತೇಜನ ನೀಡುವುದು.

(vii) ಆಡಳಿತ ನಿರ್ವಹಣೆಯನ್ನು ಒಳಗೊಂಡಂತೆ ಗುಣಮಟ್ಟ ನಿಯಂತ್ರಣವನ್ನು ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

(viii) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಶಿಕ್ಷಣ ಚಟುವಟಿಕೆಗಳ ಸಮೀಕ್ಷೆ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು.

(ix) ಹಿಂದುಳಿದ ವರ್ಗಗಳು ಮತ್ತು ಸಮೂಹಗಳಿಗೆ, ಬಾಲಕಿಯರಿಗೆ, ವಿಶೇಷವಾಗಿ ವಿಕಲಚೇತನರು ಮತ್ತು ಅಲ್ಪಸಂಖ್ಯಾತ ಸಮೂಹಗಳಿಗಾಗಿ ಉನ್ನತ ಪ್ರಾಥಮಿಕ ಹಂತದವರೆಗಿನ ಆಶ್ರಮ, ಶಾಲೆಗಳ/ವಿದ್ಯಾರ್ಥಿನಿಲಯ ಶಾಲೆಗಳ ಮೇಲ್ವಿಚಾರಣೆ ಮಾಡುವುದು.

(x) ಗ್ರಾಮೀಣ ಕುಶಲಕರ್ಮಿಗಳಿಗೆ ಉತ್ತೇಜನ ನೀಡುವುದು ಮತ್ತು ಅವರಿಗೆ ವೃತ್ತಿ ತರಬೇತಿಯನ್ನು ನೀಡುವುದು.

(xi) ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಸಂಪೂರ್ಣ ದಾಖಲಾತಿ ಮತ್ತು ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವುದು.

**16. ಗ್ರಂಥಾಲಯಗಳು**

ಗ್ರಾಮ ಪಂಚಾಯತಿ ಮಟ್ಟದ ಗ್ರಂಥಾಲಯಗಳನ್ನು ಮತ್ತು ವಾಚನಾಲಯಗಳನ್ನು ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

**17.ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳು**

(i) ಆಟದ ಮೈದಾನಗಳನ್ನು ಸ್ಥಾಪಿಸುವುದು ಹಾಗೂ ಅವುಗಳನ್ನು ನಿರ್ವಹಿಸುವುದು

(ii) ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗುರುತಿಸುವುದು

(iii) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂರಕ್ಷಿಸುವುದು ಮತ್ತು ಪುನರುಜ್ಜೀವನಗೊಳಿಸುವುದು

(iv) ಯೂಥ್ ಕ್ಲಬ್‌ಗಳಿಗೆ ಉತ್ತೇಜನ ನೀಡುವುದು

(v) ಬಡ ಮತ್ತು ನಿರ್ಗತಿಕ ಕಲಾವಿದರಿಗೆ ನೆರವು ನೀಡುವುದು ಮತ್ತು ಅವರಿಗೆ ರಕ್ಷಣೆ ಒದಗಿಸವುದು

(vi) ಕೋಮು ಮತ್ತು ಧಾರ್ಮಿಕ ಸೌಹಾರ್ದತೆಯನ್ನು ಕಾಪಾಡುವುದು

(vii) ಗ್ರಾಮ ಪಂಚಾಯಿತಿ ಮತ್ತು ಸಮೂಹ ಮಟ್ಟಗಳಲ್ಲಿ ಸಾಂಸ್ಕೃತಿಕ ಕೇಂದ್ರಗಳು, ಸಮುದಾಯ ಭವನಗಳು, ಬಯಲು ರಂಗಮಂದಿರಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು

(viii) ಗ್ರಾಮ ಪಂಚಾಯಿತಿ ಮತ್ತು ಸಮೂಹ ಮಟ್ಟಗಳಲ್ಲಿ ಯುವಜನ ಉತ್ಸವಗಳನ್ನು ಏರ್ಪಡಿಸುವುದು

(ix) ಯುವಕರಿಗೆ ಜೀವನ ಕೌಶಲ್ಯ ಶಿಕ್ಷಣ ಮತ್ತು ನಾಯಕತ್ವ ತರಬೇತಿ ನೀಡುವುದು ಹಾಗೂ ಮನರಂಜನಾ ಚಟುವಟಿಕೆಗಳನ್ನು ಆಯೋಜಿಸುವುದು.

**18. ಮಾರುಕಟ್ಟೆ ಸೌಲಭ್ಯ ಕಲ್ಪಿಸುವುದು ಮತ್ತು ದನಗಳ ಜಾತ್ರೆಗಳನ್ನು ಒಳಗೊಂಡಂತೆ ಜಾತ್ರೆಗಳನ್ನು ನಡೆಸುವುದು**

(i) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾರ್ವಜನಿಕ ಮಾರುಕಟ್ಟೆಗಳನ್ನು ಸ್ಥಾಪಿಸುವುದು, ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು

(ii) ದನಗಳ ಜಾತ್ರೆಗಳನ್ನು ಒಳಗೊಂಡಂತೆ, ಜಾತ್ರೆಗಳನ್ನು ಮತ್ತು ಉತ್ಸವಗಳನ್ನು ನಿಯಂತ್ರಿಸುವುದು ಮತ್ತು ನಡೆಸುವುದು

(iii) ಗ್ರಾಮೀಣ ಕೃಷಿ ಉತ್ಪನ್ನಗಳು ಮತ್ತು ಕರಕುಶಲ ಉತ್ಪನ್ನಗಳನ್ನು ನಿರ್ವಹಿಸುವುದು ಮತ್ತು ಅವುಗಳ ಮಾರುಕಟ್ಟೆ ಉತ್ತೇಜನ ನೀಡುವುದು

(iv) ಕೃಷಿ ಉತ್ಪನ್ನಗಳಿಗೆ ದಾಸ್ತಾನು ಮತ್ತು ಶೀತಲ ದಾಸ್ತಾನು ಸೌಲಭ್ಯಗಳನ್ನು ಒದಗಿಸುವುದು

(v) ಕೃಷಿ ಉತ್ಪನ್ನದ ನೇರ ಮಾರುಕಟ್ಟೆ ಮತ್ತು ಇ–ಮಾರಾಟಕ್ಕಾಗಿ ರೈತರಿಗೆ ಸೌಲಭ್ಯ ಕಲ್ಪಿಸುವುದು

**19. ಸಾರ್ವಜನಿಕ ಆರೋಗ್ಯ (ಆಸ್ಪತ್ರೆಗಳು, ಸಾರ್ವಜನಿಕ ಆರೋಗ್ಯ ಕೇಂದ್ರಗಳನ್ನು ಒಳಗೊಂಡ ಆರೋಗ್ಯ) ಮತ್ತು ಕುಟುಂಬ ಕಲ್ಯಾಣ**

(i) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಲೋಪಥಿಕ್ ಮತ್ತು ಆಯುರ್ವೇದ, ಸಿದ್ಧ, ಯುನಾನಿ ಹಾಗೂ ಪ್ರಕೃತಿ ಚಿಕಿತ್ಸೆ ಮತ್ತು ಯೋಗದಂಥ ಭಾರತೀಯ ವೈದ್ಯಕೀಯ ಪದ್ಧತಿಗಳ ಆರೋಗ್ಯ ಸೌಲಭ್ಯಗಳನ್ನು ಮೇಲ್ವಿಚಾರಣೆ ಮಾಡುವುದು

(ii) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆರೋಗ್ಯ ಉಪ–ಕೇಂದ್ರದ ಸ್ಥಾಪನೆಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವಗಳನ್ನು ಕಳುಹಿಸುವುದು ಮತ್ತು ಅವುಗಳಿಗೆ ಮಂಜೂರಾತಿ ಪಡೆಯುವುದು ಹಾಗೂ

ಆರೋಗ್ಯ ಸೇವೆಗಳನ್ನು ಒದಗಿಸುವುದು ಸೌಲಭ್ಯ ಕಲ್ಪಿಸುವುದು ಮತ್ತು ಅವುಗಳ ಮೇಲ್ವಿಚಾರಣೆ ಮಾಡುವುದು, ಔಷಧಾಲಯಗಳನ್ನು ಒದಗಿಸುವುದು

(iii) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು

(iv) ಲಸಿಕೆ ನೀಡುವ ಹಾಗೂ ಇತರೆ ರೋಗ ನಿರೋಧಕ ಕ್ರಮಗಳನ್ನು ಕೈಗೊಳ್ಳುವುದು

(v) ತಿನಿಸು ಹಾಗೂ ಮನರಂಜನಾ ಸಂಸ್ಥೆಗಳಿಗೆ ಲೈಸೆನ್ಸ್ ನೀಡುವುದು

(vi) ತೊಂಡು ನಾಯಿಗಳು, ಬೀದಿ ನಾಯಿಗಳನ್ನು ಕೊಲ್ಲುವುದು

(vii) ಸಾಂಕ್ರಾಮಿಕ ರೋಗಗಳ ತಡೆಗಾಗಿ ಮತ್ತು ಅವುಗಳ ವಿರುದ್ಧ ಪರಿಹಾರಾತ್ಮಕ ಕ್ರಮಗಳನ್ನು ಜಾರಿಗೆ ತರುವುದು

(viii) ಪ್ರಸೂತಿ ಹಾಗೂ ಶಿಶು ಕಲ್ಯಾಣ ಕೇಂದ್ರಗಳ ಮೇಲ್ವಿಚಾರಣೆ ಮಾಡುವುದು

(ix) ಮಾಂಸ, ಮೀನು ಮತ್ತು ಇತರ ಹಾಳಾಗುವ ಆಹಾರ ಪದಾರ್ಥಗಳ ಮಾರಾಟವನ್ನು ನಿಯಂತ್ರಿಸುವುದು

**20. ನೈರ್ಮಲ್ಯ**

(i) ಸಾರ್ವಜನಿಕ ರಸ್ತೆಗಳು, ಚರಂಡಿಗಳು, ಸ್ನಾನ ಘಟ್ಟದ ಕೊಳಗಳು, ಬಾವಿಗಳು, ಕೊಳಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿರಿಸಿಕೊಳ್ಳುವುದು ಹಾಗೂ ಸಂರಕ್ಷಿಸುವುದು

(ii) ಸ್ಮಶಾನ ಹಾಗೂ ಸಮಾಧಿ ಭೂಮಿಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು

(iii) ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ಅದನ್ನು ನಿರ್ವಹಿಸುವುದು

(iv) ಬಹು ಗ್ರಾಮ ಘನ ತ್ಯಾಜ್ಯ ನಿರ್ವಹಣಾ ಸ್ಥಾವರಗಳಿಗೆ ಘನ ತ್ಯಾಜ್ಯವನ್ನು ಸಂಗ್ರಹಿಸುವುದು, ಬೇರ್ಪಡಿಸುವುದು ಮತ್ತು ರವಾನಿಸುವುದು

(v) ವೈಯಕ್ತಿಕ, ಸಮುದಾಯಿಕ ಶೌಚಾಲಯಗಳು ಮತ್ತು ಸ್ನಾನಗೃಹಗಳು ಹಾಗೂ ನೈರ್ಮಲ್ಯ ಸಂಕೀರ್ಣಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು

(vi) ವಾಸಸ್ಥಳಗಳು, ಸಾರ್ವಜನಿಕ ಸ್ಥಳಗಳು ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ನೈರ್ಮಲ್ಯ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ಅದನ್ನು ಅನುಷ್ಠಾನಗೊಳಿಸುವುದು

(vii) ಆರೋಗ್ಯ ಮತ್ತು ನೈರ್ಮಲ್ಯ ನೀತಿಯನ್ನು ಅಭಿವೃದ್ಧಿ ಪಡಿಸುವುದು ಮತ್ತು ಅದನ್ನು ಅನುಷ್ಠಾನಗೊಳಿಸುವುದು

(viii) ಕ್ಲೇಮು ಮಾಡದ ಪ್ರಾಣಿಗಳ ಮತ್ತು ಮೃತ ದೇಹಗಳನ್ನು ವಿಲೆ ಮಾಡುವುದು ಹಾಗೂ ಚರ್ಮಗಳನ್ನು ಮತ್ತು ತೊಗಲುಗಳನ್ನು ಹದ ಮಾಡುವುದನ್ನು, ಸಂಸ್ಕರಿಸುವುದನ್ನು ಹಾಗೂ ಬಣ್ಣ ಹಾಕುವುದನ್ನು ನಿಯಂತ್ರಿಸುವುದು

(ix) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮಗಳ ಅನುಷ್ಠಾನ

**21. ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಶೇಷವಾಗಿ ವಿಕಲಚೇತನರು ಮತ್ತು ಮಾನಸಿಕ ಸವಾಲುಗಳುಳ್ಳವರ ಕಲ್ಯಾಣ**

(i) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಬಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆಯಲ್ಲಿ ಪಾಲ್ಗೊಳ್ಳುವುದು

(ii) ಶಾಲಾ ಮಕ್ಕಳಿಗಾಗಿ ಆರೋಗ್ಯ ಮತ್ತು ಪೋಷಕ ಆಹಾರ ಕಾರ್ಯಕ್ರಮಗಳ ಯೋಜನೆ ಸಿದ್ಧಪಡಿಸುವ ಕಾರ್ಯದ ಮತ್ತು ಅದರ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಅದರಲ್ಲಿ ಪಾಲ್ಗೊಳ್ಳುವುದು

(iii) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಸಬಲೀಕರಣ ಕಾರ್ಯಕ್ರಮಗಳಲ್ಲಿ ಸ್ಥಳೀಯ ಅಭಿವೃದ್ಧಿ ಏಜೆನ್ಸಿಗಳು, ಖಾಸಗಿ ಏಜೆನ್ಸಿಗಳು, ಸ್ವಯಂ ಸೇವಾ ಸಂಘಟನೆಗಳಿಂದ ನೆರವನ್ನು ಪಡೆಯುವುದನ್ನು ಉತ್ತೇಜಿಸುವುದು

(iv) ಅಂಗನವಾಡಿಗಳ ಸ್ಥಾಪನೆಗಾಗಿ ಸಕ್ಷಮ ಪ್ರಾಧಿಕಾರಗಳಿಗೆ ಪ್ರಸ್ತಾವಗಳನ್ನು ಕಳುಹಿಸುವುದು ಮತ್ತು ಅವರಿಂದ ಮಂಜೂರಾತಿ ಪಡೆಯುವುದು

(v) ಅಂಗನವಾಡಿಗಳ ಮೇಲ್ವಿಚಾರಣೆ ಮಾಡುವುದು

(vi) ನಿರ್ಗತಿಕರು, ವಿಧವೆಯರು, ವಯಸ್ಸಾದವರು, ವಿಶೇಷವಾಗಿ ವಿಕಲಚೇತನರಿಗೆ ಪಿಂಚಣಿ, ಮನಸ್ವಿನಿ ಮುಂತಾದಂತಹ ವಿವಿಧ ಸಾಮಾಜಿಕ ಸುರಕ್ಷಿತ ಸ್ಕೀಮುಗಳ ಅಡಿಯಲ್ಲಿ ಗ್ರಾಮ ಸಭೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸುವುದು

(vii) ಬಡವರಿಗಾಗಿ ಗುಂಪು ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಕೂಲ ಕಲ್ಪಿಸುವುದು

(viii) ವಿಶೇಷವಾಗಿ ವಿಕಲಚೇತನರು, ಮಾನಸಿಕ ಸವಾಲುಗಳುಳ್ಳವರು ಮತ್ತು ಸಾಮಾಜಿಕವಾಗಿ ಬಹಿಷ್ಕೃತರಾದಂಥ/ಹೊರಗುಳಿದಂಥ ಗುಂಪುಗಳನ್ನು ಒಳಗೊಂಡು ಅಂಥವರಿಗಾಗಿ ಇರುವ

ಸಾಮಾಜ ಕಲ್ಯಾಣ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮತ್ತು ಅಂತಹ ಕಾರ್ಯಕ್ರಮಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು.

**22. ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರೆ ಹಿಂದುಳಿದ ಜಾತಿಗಳ ಅಭಿವೃದ್ಧಿ**

(i) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಾಲೋನಿಯಲ್ಲಿ ಮೂಲಸೌಲಭ್ಯಗಳನ್ನು ಒದಗಿಸುವುದು

(ii) ಆದ್ಯತೆಯ ಮೇರೆಗೆ ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲಗಳಿಂದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವನ್ನು ಒದಗಿಸುವುದು

(iii) ಸಮಾಜದ ದುರ್ಬಲ ವರ್ಗಗಳಲ್ಲಿ, ವಿಶೇಷವಾಗಿ ಅನುಸೂಚಿತ ಜಾತಿ ಮತ್ತು ಅನುಸೀಚಿತ ಪಂಗಡಗಳಲ್ಲಿ ಕಾನೂನು ಮತ್ತು ಇತರ ವಿಷಯಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸುವುದು, ಸಮನ್ವಯಗೊಳಿಸುವುದು ಹಾಗೂ ಅನುಷ್ಠಾನಗೊಳಿಸುವುದು

(iv) ದುರ್ಬಲ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮತ್ತು ಅವುಗಳ ಅನುಷ್ಠಾನವನ್ನು ನೋಡಿಕೊಳ್ಳುವುದು

(v) ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡ ಹಾಗೂ ಹಿಂದುಳಿದ ಸಮುದಾಯಗಳಿಗಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲು ಯೋಜಿಸುವುದು ಮತ್ತು ಅದನ್ನು ಮೇಲ್ವಿಚಾರಣೆ ಮಾಡುವುದು

(vi) ವ್ಯಕ್ತಿಗಳು ಮತ್ತು ಸಮುದಾಯದ ಸ್ವಾತಂತ್ರ್ಯ ಮತ್ತು ಘನತೆಯನ್ನು ಕುಗ್ಗಿಸುವ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ಸಮುದಾಯಗಳ ವಿರುದ್ಧದ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ತಡೆಯುವುದು

**23. ಜಾನುವಾರು ಸಾಕಾಣಿಕೆ ಕೇಂದ್ರಗಳು, ಕಾರು/ಆಟೋರಿಕ್ಷಾ ಮತ್ತು ಬಸ್ಸುಗಳ ನಿಲ್ದಾಣಗಳು, ಎತ್ತಿನಗಾಡಿ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆ**

ಜಾನುವಾರು ಸಾಕಾಣಿಕೆ ಕೇಂದ್ರ, ಸಮುದಾಯ ಜಾನುವಾರು ಕೊಟ್ಟಿಗೆಗಳು, ದನದ ದೊಡ್ಡಿಗಳು, ಗ್ರಾಮೀಣ ಬಸ್ ನಿಲ್ದಾಣ, ರಿಕ್ಷಾ ನಿಲ್ದಾಣ, ಟ್ಯಾಕ್ಸಿ/ಆಟೋ ರಿಕ್ಷಾ ನಿಲ್ದಾಣ, ಎತ್ತಿನಗಾಡಿ ನಿಲ್ದಾಣ, ಕಸಾಯಿಖಾನೆಗಳು ಮತ್ತು ವಾಣಿಜ್ಯ ಸಂಕೀರ್ಣಗಳ ನಿರ್ಮಾಣ ಮತ್ತು ನಿರ್ವಹಣೆ

**24. ಎಲ್ಲಾ ಪ್ರಮಾಣ ಪತ್ರಗಳನ್ನು ನೀಡುವುದು**

ಗಣಿ ಮತ್ತು ಭೂ ವಿಜ್ಞಾನ, ವಿದ್ಯುದೀಕರಣ, ಅಬಕಾರಿ, ಜೀವವೈವಿಧ್ಯತೆ, ಭೂಪರಿವರ್ತನೆ ಮುಂತಾದವುಗಳಿಗಾಗಿ ನಿರಾಪೇಕ್ಷಣೆ ಪ್ರಮಾಣ ಪತ್ರ, ಹೋಮ್ ಸ್ಟೇ, ರೆಸಾರ್ಟ್‌ಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳು, ವಿದ್ಯಾರ್ಥಿ ನಿಲಯಗಳು, ಮದ್ಯದಂಗಡಿಗಳು, ಸ್ಮಶಾನ/ಸಮಾಧಿ ಭೂಮಿ, ಮತ್ತು ಚಿತಾಗಾರ, ಕಸಾಯಿಖಾನೆ ಮುಂತಾದವುಗಳಿಗೆ ಲೈಸೆನ್ಸ್ ನೀಡುವುದು.

25. **ಅಂಕಿ – ಅಂಶ ನಿರ್ವಹಣೆ:**

ಗ್ರಾಮಕ್ಕೆ ಸಂಬಂಧಿಸಿದ ಎಲ್ಲಾ ಅಂಕಿ–ಅಂಶಗಳನ್ನು ಸಂಗ್ರಹಿಸುವುದು. ಕೋಷ್ಟಕ ಸಿದ್ಧಪಡಿಸುವುದು ಮತ್ತು ಇಂದೀಕರಿಸುವುದು

26. **ಯೋಜನೆ:**

ದೂರದೃಷ್ಟಿಯುಳ್ಳ ಜನರ ಯೋಜನೆ ಮತ್ತು ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವುದಕ್ಕಾಗಿ ತಾಂತ್ರಿಕ ಮತ್ತು ವಿಷಯ ತಜ್ಞರ ತಂಡವನ್ನು ರಚಿಸುವುದು

27. **ಸಹಕಾರ:**

ಸಹಕಾರ ಚಟುವಟಿಕೆಗಳನ್ನು ಜನಪ್ರಿಯಗೊಳಿಸಲು ಮತ್ತು ಬಲಪಡಿಸಲು ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು

28. **ಗ್ರಾಮೀಣ ಪರಿಸರ ವ್ಯವಸ್ಥೆ ಮತ್ತು ಜೀವಿ ಪರಿಸ್ಥಿತಿ:**

(i) ಗ್ರಾಮೀಣ ಪರಿಸರ ವ್ಯವಸ್ಥೆ ಮತ್ತು ಜೀವಿ ಪರಿಸ್ಥಿತಿಯನ್ನು ರಾಷ್ಟ್ರೀಯ ಮತ್ತು ರಾಜ್ಯ ನೀತಿಗನುಗುಣವಾಗಿ ಕಾಪಾಡುವುದಕ್ಕಾಗಿ ಮತ್ತು ಸಂರಕ್ಷಿಸುವುದಕ್ಕಾಗಿ ಯೋಜನೆ ರೂಪಿಸುವುದು ಮತ್ತು ಅದನ್ನು ಅನುಷ್ಠಾನಗೊಳಿಸುವುದು.

(ii) ಗ್ರಾಮ ಪಂಚಾಯತ್ ಜೀವವೈವಿಧ್ಯತೆ ನಿರ್ವಹಣಾ ಸಮಿತಿಯನ್ನು ಸ್ಥಾಪಿಸುವುದು.

(iii) ಜನರ ಜೈವಿಕ ವೈವಿಧ್ಯತೆ ರಿಜಿಸ್ಟರನ್ನು ಸಿದ್ದಪಡಿಸುವುದು.

(iv) ಜೀವವೈವಿಧ್ಯತಾ ಅಧಿನಿಯಮ 2002ಕ್ಕಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ದಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು.

(v) ಪರಿಸರ ಸೂಕ್ಷ್ಮ ಸಂವೇದಿ ಪ್ರದೇಶಗಳನ್ನು ಕಾಪಾಡುವುದು.

(vi) ಪರಿಸರ ಕಾಪಾಡಲು ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು ಉದ್ಯಾನಗಳನ್ನು ನಿರ್ವಹಿಸುವುದು.

(vii) ಸಾರ್ವಜನಿಕ ಸ್ಥಳಗಳಲ್ಲಿ ತಿಪ್ಪೆಗುಂಡಿಗಳನ್ನು ನಿಯಂತ್ರಿಸುವುದು ಹಾಗೂ ಗ್ರಾಮೀಣ ಮಾರುಕಟ್ಟೆಗಳನ್ನು ನಿಯಂತ್ರಿಸುವುದು.

**29. ಆದಾಯ ಸೃಜನೆ ಕಾರ್ಯಚಟುವಟಿಕೆಗಳು:**

ಸ್ವಂತ ಸಂಪನ್ಮೂಲಗಳನ್ನು ಹೆಚ್ಚಿಸಲು ವಿವಿಧ ಆದಾಯ ಸೃಜನೆ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವುದು.

**30. ಜ್ಞಾನ ನಿರ್ವಹಣೆ:–**

(i) ಕುಟುಂಬಗಳ ದತ್ತಾಂಶದ ಸಂಗ್ರಹ ಮತ್ತು ಸಂಕಲನ ಮತ್ತು ಡಾಟಾಬೇಸ್ ನಿರ್ವಹಣೆ.

(ii) ಗ್ರಾಮದ ಇತಿಹಾಸ, ಸಂಸ್ಕೃತಿ ಪರಂಪರೆಯನ್ನು ದಾಖಲುಮಾಡುವುದು.

(iii) ಗ್ರಾಮದ ಮಾನವ ಅಭಿವೃದ್ಧಿಯ ಸಮೀಕ್ಷೆಗಳು ಮತ್ತು ವ್ಯಾಸಂಗಳನ್ನು ನಡೆಸುವುದು.

(iv) ಮಾನವ ಅಭಿವೃದ್ಧಿಯ ಸೂಚ್ಯಂಕದ ನಿಯತಕಾಲಿಕ ಲೆಕ್ಕಾಚಾರ.

(v) ಗ್ರಾಮ ಪಂಚಾಯತಿಯ ಜನರ ಎಲ್ಲಾ ದತ್ತಾಂಶವನ್ನು ಲಭ್ಯವಾಗುವಂತೆ ಮಾಡುವುದು.

(vi) ಅರಿವು ಉಂಟುಮಾಡುವುದು ಮತ್ತು ಮಾಹಿತಿ, ಶಿಕ್ಷಣ ಹಾಗೂ ಎಲ್ಲಾ ಸರ್ಕಾರಿ ಸ್ಕೀಮ್‌ಗಳಿಗೆ ಸಂಪರ್ಕ ಚಟುವಟಿಕೆಗಳು.

**31. ಸಮುದಾಯ ಸ್ವತ್ತು ನಿರ್ವಹಣೆ:**

(i) ಗ್ರಾಮ ಪಂಚಾಯತಿಗಳಿಗೆ ಸಮುದಾಯ ಸ್ವತ್ತುಗಳ ರಕ್ಷಣೆ, ಸಂರಕ್ಷಣೆ ಮತ್ತು ನಿರ್ವಹಣೆ ಇದರ ಮ್ಯಾಪಿಂಗ್ ಅಳತೆ ಸಮಗ್ರ ದಾಖಲೀಕರಣ ಮತ್ತು ಇದರ ನಿರ್ವಹಣೆ

(ii) ಕೆರೆಗಳು ನೀರಿನ ಗ್ರೋವ್ ಕಾಲುವೆಗಳು, ಕೃಷಿ ಪಿಟ್‌ಗಳು, ಬಾವಿ, ಕೊಳವೆ ಬಾವಿ ಮತ್ತು ಇತರ ಬಾವಿಗಳು ಹುಲ್ಲುಗಾವಲು, ಅರಣ್ಯ ನೆಡುತೋಪು ಇತ್ಯಾದಿಗಳ ಕ್ರಮಬದ್ಧ ದಾಖಲೀಕರಣ ಮತ್ತು ರಕ್ಷಣೆ.

**ಅನುಸೂಚಿ–II**

**(145ನೇ ಪ್ರಕಣದಲ್ಲಿ ನೋಡಿ)**

**ಸಾಮಾನ್ಯ**

ಅನುಸೂಚಿ–IIರಲ್ಲಿ ನಿರೂಪಿಸಿರುವ ವಿಷಯಗಳಿಗೆ ಸಂಬಂಧಪಟ್ಟಂತೆ, ತಾಲ್ಲೂಕು ಪಂಚಾಯತಿಯ ಬಳಿ ಖರ್ಚು ಮಾಡುವುದಕ್ಕೆ ಲಭ್ಯವಿರುವ ತಾಲ್ಲೂಕು ಪಂಚಾಯತಿ ನಿಧಿಗಳಿಗೆ ಸಂಬಂಧಿಸಿರುವಷ್ಟರಮಟ್ಟಿಗೆ, ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟಂತೆ ರೂಪಿಸಿರುವ ಕಾರ್ಯಚಟುವಟಿಕೆ ನಕ್ಷೆಯಲ್ಲಿ ವಿವರಿಸಿರುವಂತೆ ತಾಲ್ಲೂಕು ಪಂಚಾಯತಿ ಪ್ರದೇಶದ ಅಗತ್ಯತೆಗಳನ್ನು ಈಡೇರಿಸುವುದು ತಾಲ್ಲೂಕು ಪಂಚಾಯತ್‌ಗಳ ಕರ್ತವ್ಯವಾಗಿರತಕ್ಕದ್ದು.

ಈ ಅಧಿನಿಯಮದ ಇತರೆ ಉಪಬಂಧಗಳಿಗೆ ಮತ್ತು ಸರ್ಕಾರದ ನಿರ್ದೇಶನಕ್ಕೆ ಒಳಪಟ್ಟು, ತಾಲ್ಲೂಕು ಪಂಚಾಯತಿಯ, ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಸಾಧನೆಗಾಗಿ, ಅನುಸೂಚಿ–IIರಲ್ಲಿ ನಿರೂಪಿಸಿರುವ ವಿಷಯಗಳನ್ನು ನಿರ್ವಹಿಸುವ ಹಾಗೂ ಅವುಗಳಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ ಸ್ಕೀಮುಗಳನ್ನು ಸಿದ್ಧಪಡಿಸುವ ಮತ್ತು ಅನುಷ್ಠಾನಗೊಳಿಸುವ ಅಧಿಕಾರ ಹೊಂದಿರತಕ್ಕದ್ದು.

**1. ಸಾಮಾನ್ಯ ಪ್ರಕಾರ್ಯಗಳು**

(i) ಈ ಅಧಿನಿಯಮದ ಮೂಲಕ ತನಗೆ ವಹಿಸಿಕೊಟ್ಟ ಮತ್ತು ಸರ್ಕಾರವು ಅಥವಾ ಜಿಲ್ಲಾ ಪಂಚಾಯತಿಯು ವಹಿಸಿದ ಯೋಜನೆಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಅದನ್ನು ಜಿಲ್ಲಾ ಯೋಜನೆಯೊಂದಿಗೆ ಸೇರಿಸುವುದಕ್ಕಾಗಿ ಗೊತ್ತುಪಡಿಸಿದ ಸಮಯದೊಳಗೆ ಜಿಲ್ಲಾ ಪಂಚಾಯತಿಗೆ ಒಪ್ಪಿಸುವುದು.

(ii) ತಾಲ್ಲೂಕಿನಲ್ಲಿರುವ ಎಲ್ಲ ಗ್ರಾಮ ಪಂಚಾಯತಿಗಳ ವಾರ್ಷಿಕ ಯೋಜನೆಗಳನ್ನು ಪರಿಶೀಲಿಸುವುದು ಮತ್ತು ಕ್ರೋಡೀಕರಿಸುವುದು ಮತ್ತು ಹಾಗೆ ಕ್ರೋಡೀಕರಿಸಿದ ಯೋಜನೆಗಳನ್ನು ಜಿಲ್ಲಾ ಪಂಚಾಯತಿಗೆ ಒಪ್ಪಿಸುವುದು.

(iii) ತಾಲ್ಲೂಕು ಪಂಚಾಯತಿಯ ವಾರ್ಷಿಕ ಬಜೆಟ್‌ಅನ್ನು ಸಿದ್ಧಪಡಿಸುವುದು ಮತ್ತು ಅದನ್ನು ಗೊತ್ತುಪಡಿಸಿದ ಅವಧಿಯೊಳಗೆ ಜಿಲ್ಲಾ ಪಂಚಾಯತಿಗೆ ಒಪ್ಪಿಸುವುದು.

(iv) ಸರ್ಕಾರದಿಂದ ಅಥವಾ ಜಿಲ್ಲಾ ಪಂಚಾಯತಿಯಿಂದ ತನಗೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಕೆಲಸಗಳನ್ನು ಕಾರ್ಯಗತಗೊಳಿಸುವುದು.

(v) ಪ್ರಕೃತಿ ವಿಕೋಪಗಳಲ್ಲಿ ಪರಿಹಾರವನ್ನು ಒದಗಿಸುವುದು.

**2. ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿ ಮತ್ತು ಸಾಮಾನ್ಯ ಪ್ರಕಾರ್ಯಗಳು.–**

(i) ಕೃಷಿ ಮತ್ತು ತೋಟಗಾರಿಕಾ ಸಮಗ್ರ ಗ್ರಾಮ ಕೃಷಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಸದರಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಾಮಾನ್ಯ ಹಾಗೂ ತಾಂತ್ರಿಕ ತರಬೇತಿಯನ್ನು ಆಯೋಜಿಸುವುದು. ಕೃಷಿ ಮತ್ತು ತೋಟಗಾರಿಕೆಯನ್ನು ಉತ್ತೇಜಿಸುವುದು ಮತ್ತು ಅಭಿವೃದ್ಧಿಪಡಿಸುವುದು.

(ii) ಕೃಷಿ ಬಿತ್ತನೆ ಬೀಜ ಕೇಂದ್ರಗಳನ್ನು (ತೋಟಗಾರಿಕಾ ನರ್ಸರಿಯೂ ಸೇರಿದಂತೆ) ನಿರ್ವಹಿಸುವುದು

(iii) ಕೃಷಿ ಮೇಳಗಳನ್ನು ಏರ್ಪಡಿಸುವುದು, ತರಕಾರಿಗಳನ್ನು, ಹಣ್ಣುಗಳು ಮತ್ತು ಹೂಗಳನ್ನು ಮಾರಾಟ ಮಾಡುವುದು.

(iv) ತಾಂತ್ರಿಕ ಸಿಬ್ಬಂದಿಯ ಮೂಲಕ ತರಬೇತಿಯನ್ನು ನಡೆಸಿ ತಾಂತ್ರಿಕ ಬೆಂಬಲವನ್ನು ಕಲ್ಪಿಸುವುದು ಮತ್ತು ರೈತರಿಗೆ ತರಬೇತಿ ನೀಡಿ ಸುಧಾರಿತ ಸಾಗುವಳಿಯ ವಿಧಾನಗಳನ್ನು ಬಳಸಿಕೊಳ್ಳುವಂತೆ ಪ್ರಸಾರ ಮಾಡುವುದು

(v) ಉಗ್ರಾಣಗಳು ಮತ್ತು ಶೈತ್ಯ ಸಂಗ್ರಹಣಾಗಾರಗಳನ್ನು ಅವುಗಳ ಅಗತ್ಯದ ಆಧಾರದ ಮೇಲೆ ಸ್ಥಾಪಿಸಲು ಶಿಫಾರಸು ಮಾಡುವುದು, ತಾಲ್ಲೂಕು ಮಟ್ಟದ ಸಹಕಾರಿ ಸಂಘಗಳಿಗೆ ಮತ್ತು ಕೃಷಿ

ಮಾರುಕಟ್ಟೆಗೆ ಅನುಕೂಲ ಕಲ್ಪಿಸುವುದು ಹಾಗೂ ತಾಲ್ಲೂಕು ಮಟ್ಟದಲ್ಲಿ ಮೂಲ ಸೌಕರ್ಯವನ್ನು ನಿರ್ವಹಿಸುವುದು.

(vi) ಗ್ರಾಮ ಪಂಚಾಯತ್‌ಗಳು ಸಂಗ್ರಹಿಸಿದ ಅಂಕಿಅಂಶವನ್ನು ಕ್ರೋಢೀಕರಿಸುವುದು ಮತ್ತು ಕೃಷಿ ಉತ್ಪಾದನೆಗೆ ಹಾಗೂ ಮಾರುಕಟ್ಟೆಗೆ ತಾಲ್ಲೂಕು ಮಟ್ಟದ ಯೋಜನೆಗಳನ್ನು ಸಿದ್ಧಪಡಿಸುವುದು.

(vii) ಕ್ರಿಮಿನಾಶಕ ಮತ್ತು ಕೀಟನಾಶಕಗಳನ್ನು ಸಂಗ್ರಹಿಸುವುದು ಮತ್ತು ವಿತರಿಸುವುದು.

**3. ಸಣ್ಣ ನೀರಾವರಿ**

(i) ಸಣ್ಣ ನೀರಾವರಿ ಕಾಮಗಾರಿಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಸರ್ಕಾರಕ್ಕೆ ಮತ್ತು ಜಿಲ್ಲಾ ಪಂಚಾಯತಿಗೆ ನೆರವು ನೀಡುವುದು;

(ii) ಸಮೂಹ ಮತ್ತು ವೈಯಕ್ತಿಕ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು

**4. ಪಶುಸಂಗೋಪನೆ, ಹೈನುಗಾರಿಕೆ, ಕೋಳಿ ಫಾರಂ ಮತ್ತು ಮೀನುಗಾರಿಕೆ**

(i) ತಾಲ್ಲೂಕು ಮಟ್ಟದಲ್ಲಿ ಪ್ರಾಥಮಿಕ ಪಶುವೈದ್ಯಕೀಯ ಕೇಂದ್ರಗಳ, ಪ್ರಥಮ ಚಿಕಿತ್ಸಾ ಕೇಂದ್ರಗಳ ಮತ್ತು ಸಂಚಾರಿ ಪಶುವೈದ್ಯಕೀಯ ಚಿಕಿತ್ಸಾಲಯಗಳ ನಿರ್ವಹಣೆ.

(ii) ಸಾಂಕ್ರಾಮಿಕ ರೋಗಗಳನ್ನು ಹಾಗೂ ಅಂಟು ರೋಗಗಳನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಗ್ರಾಮ ಪಂಚಾಯತ್‌ಗಳಿಗೆ ಚುಚ್ಚುಮದ್ದುಗಳನ್ನು, ಔಷಧಿಗಳನ್ನು ಒದಗಿಸುವುದು ಮತ್ತು ವೈದ್ಯಕೀಯ ನೆರವನ್ನು ಒದಗಿಸುವುದು.

(iii) ಕೃಷಿಕರಿಗೆ ತಾಂತ್ರಿಕತಜ್ಞರ ನೆರವನ್ನು ಒದಗಿಸುವುದು ಮತ್ತು ತರಬೇತಿಗಳನ್ನು ಆಯೋಜಿಸುವುದು.

(iv) ಜಾನುವಾರು, ಕೋಳಿ ಸಾಕಣಿಕೆ ಮತ್ತು ಇತರೆ ಪಶುಗಳ ತಳಿಗಳನ್ನು ಸುಧಾರಿಸುವುದು.

(v) ಪಶುಸಂಗೋಪನೆ, ಹೈನುಗಾರಿಕೆ, ಕೋಳಿ ಸಾಕಣೆ ಮತ್ತು ಮೀನುಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಹಕಾರಿ ಸಂಘಗಳಿಗೆ ಉತ್ತೇಜನ ನೀಡುವುದು.

**5. ಸಾಮಾಜಿಕ ಅರಣ್ಯ**

(i) ತನ್ನ ನಿಯಂತ್ರಣದ ಅಧೀನದಲ್ಲಿ ಬರುವ ರಸ್ತೆ ಬದಿಗಳಲ್ಲಿ ಮತ್ತು ಇತರ ಸಾರ್ವಜನಿಕ ಜಮೀನಿನಲ್ಲಿ ಗಿಡಮರಗಳನ್ನು ಬೆಳೆಸುವುದು ಮತ್ತು ಅವುಗಳನ್ನು ನಿರ್ವಹಿಸುವುದು.

(ii) ಗ್ರಾಮ ಪಂಚಾಯತ್‌ಗಳಿಗೆ ಅಗತ್ಯವಿರುವ ಸಸಿಗಳನ್ನು ಬೆಳೆಸುವುದು ಮತ್ತು ಸಸಿಗಳು ಹಾಗೂ ಬೀಜಗಳನ್ನು ವಿತರಿಸುವುದು.

(iii) ಗ್ರಾಮ ಪಂಚಾಯತ್‌ಗಳಿಗೆ ಮೇವು ಅಭಿವೃದ್ಧಿ ಮತ್ತು ಇಂಧನ ಸ್ಥಾವರ ತಾಂತ್ರಿಕ ಜ್ಞಾನವನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ತರಬೇತಿಗಳನ್ನು, ಕಾರ್ಯಾಗಾರಗಳನ್ನು ಆಯೋಜಿಸುವುದು.

**6. ಪ್ರವಾಸೋದ್ಯಮ**

i. ತಾಲ್ಲೂಕುಗಳಲ್ಲಿರುವ ಗ್ರಾಮ ಪಂಚಾಯತ್‌ಗಳ ಒಳಗಡೆ ಪ್ರವಾಸಿ ತಾಣಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತಾವಗಳನ್ನು ರೂಪಿಸುವುದು.

ii. ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು.

iii. ತಾಲ್ಲೂಕು ಪಂಚಾಯತ್‌ಗಳಿಗೆ ವಹಿಸಿಕೊಟ್ಟಿರುವ ಪ್ರವಾಸಿ ಕೇಂದ್ರಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು.

iv. ತಾಲ್ಲೂಕು ಪಂಚಾಯತ್‌ಗಳಿಗೆ ವಹಿಸಿಕೊಟ್ಟಿರುವ ಪ್ರವಾಸಿ ಆಕರ್ಷಣೆ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದು ಮತ್ತು ನಿರ್ವಹಿಸುವುದು.

**7. ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗ್ರಾಮೀಣ ಕೈಗಾರಿಕೆಗಳು – ಖಾದಿ, ಕರಕುಶಲ ಕಲೆಗಳು, ಆಹಾರ ಗ್ರಾಮೋದ್ಯಮಗಳು ಮತ್ತು ಸಂಸ್ಕರಣಾ ಕೈಗಾರಿಕೆಗಳು**

i. ಗುಡಿ ಕೈಗಾರಿಕೆ ಮತ್ತು ಖಾದಿ ಉದ್ಯಮಗಳು, ಕರಕುಶಲ ಕಲೆಗಳು, ಗ್ರಾಮೀಣ ಕೈಗಾರಿಕೆಗಳು, ಆಹಾರ ಸಂಸ್ಕರಣಾ ಕೈಗಾರಿಕೆಗಳು ಮತ್ತು ಇತರ ಕೃಷಿಯೇತರ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ನೆರವು ನೀಡಿಕೆಯ ಕಾರ್ಯತಂತ್ರ ವ್ಯವಸ್ಥೆಯನ್ನು ಸ್ಥಾಪಿಸುವುದು.

ii. ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.

iii. ಅತಿ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವುದು.

iv. ಸ್ವಯಂ ಉದ್ಯೋಗ ಯೋಜನೆಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.

v. ಗ್ರಾಮ ಪಂಚಾಯತ್ ಸಮುಚ್ಚಯಗಳಿಗೆ (ಕ್ಲಸ್ಟರುಗಳಿಗೆ) ಅಥವಾ ಗ್ರಾಮಪಂಚಾಯತ್‌ಗಳ ಗುಂಪುಗಳಿಗೆ ಪರಿಕರ ಸೇವಾ ಕೇಂದ್ರಗಳನ್ನು ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ಸೃಜಿಸುವುದು.

vi. ಸಮುಚ್ಚಯ(ಕ್ಲಸ್ಟರ್) ಮಟ್ಟದ ಸಾಮಾನ್ಯ ಸೌಲಭ್ಯ ಕೇಂದ್ರಗಳಿಗೆ ಹಣಕಾಸಿನ ನೆರವನ್ನು ಒದಗಿಸುವುದು

vii. ಬ್ಲಾಕ್‌ನಲ್ಲಿ ಅಥವಾ ಹೋಬಳಿ ಮಟ್ಟದಲ್ಲಿ ಇರುವ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ನಿರ್ವಹಿಸುವುದು

**8. ಗ್ರಾಮೀಣ ವಸತಿ**

i. ಗ್ರಾಮಠಾಣಾ ಎಲ್ಲೆಗಳ ಹೊರಗೆ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಮತ್ತು ನಿವೇಶನಗಳನ್ನು ವಿತರಿಸುವುದು.

ii. ಕಡಿಮೆ ವೆಚ್ಚದ ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ಸಮರ್ಪಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಮತ್ತು ಅವುಗಳನ್ನು ಗ್ರಾಮ ಪಂಚಾಯತ್‌ಗಳಿಗೆ ಪ್ರಚುರಪಡಿಸುವುದು.

iii. ಗ್ರಾಮ ಪಂಚಾಯತ್‌ಗಳಿಗೆ ತಾಂತ್ರಿಕ ನೆರವನ್ನು ಮತ್ತು ಪರಿಕರಗಳನ್ನು ಒದಗಿಸುವುದು.

iv. ತಾಲ್ಲೂಕು ಮಟ್ಟದ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದು

**9. ಕುಡಿಯುವ ನೀರು ಪೂರೈಕೆ**

i. ನೀರನ್ನು ಮಲಿನಗೊಳಿಸುವುದನ್ನು ತಡೆಯುವುದು ಮತ್ತು ನಿಯಂತ್ರಿಸುವುದು.

ii. ಗ್ರಾಮ ಪಂಚಾಯತ್‌ಗಳಿಗೆ ಹೊರಗೆ ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.

iii. ಕುಡಿಯುವ ನೀರು ಪೂರೈಕೆಯ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಗ್ರಾಮ ಪಂಚಾಯತಿಗಳಿಗೆ ಪರಿಕರಗಳನ್ನು ಮತ್ತು ತಾಂತ್ರಿಕ ನೆರವನ್ನು ಒದಗಿಸುವುದು.

**10. ಲೋಕೋಪಯೋಗಿ ಕಾಮಗಾರಿಗಳು, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ರಸ್ತೆಗಳು, ಸೇತುವೆಗಳು, ಹಾಯ್ಗಡಗಳು, ಜಲ ಮಾರ್ಗಗಳು ಮತ್ತು ಇತರ ಸಂಪರ್ಕ ಮಾರ್ಗಗಳು)**

(i) ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರದ ಬಹು ಗ್ರಾಮ ಪಂಚಾಯತ್ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ

(ಎ) ರಸ್ತೆಗಳು

(ಬಿ) ಪಾದಚಾರಿ ಮಾರ್ಗಗಳಿಗೆ/ ಓಣಿಗಳಿಗೆ

(ಸಿ) ತಾಲ್ಲೂಕು ರಸ್ತೆಗಳಿಗೆ

(ಡಿ) ಸೇತುವೆಗಳಿಗೆ/ಸುರಂಗ ಕಾಲುವೆಗಳಿಗೆ (ಕಲ್ವರ್ಟ್ಸ್)

(ಇ) ಕಟ್ಟಡಗಳಿಗೆ

(ಎಫ್) ಚರಂಡಿಗಳಿಗೆ

(ಜಿ) ರಾಜ್ಯ ಅಥವಾ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಇತರ ಸ್ಥಳೀಯ ಪ್ರಾಧಿಕಾರಗಳ ನಿಯಂತ್ರಣದ ಅಡಿಯಲ್ಲಿ ಬಾರದಿರುವುದು

(ii) ತಾಲ್ಲೂಕು ಪಂಚಾಯತ್‌ಗಳ ನಿಯಂತ್ರಣಕ್ಕೆ ಒಳಪಡುವ ಬಹು ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯ ಒಳಗೆ ದೋಣಿಗಳು, ತೆಪ್ಪಗಳು (ಫ್ಲೆರಿಗಳು) ಮತ್ತು ಜಲಮಾರ್ಗಗಳನ್ನು ನಿರ್ವಹಿಸುವುದು.

(iii) ತಾಲ್ಲೂಕು ಪಂಚಾಯತಿ ನಿಯಂತ್ರಣಕ್ಕೆ ಒಳಪಟ್ಟ ಪ್ರೌಢಶಾಲಾ ಕಟ್ಟಡಗಳಿಗೆ, ತಾಲ್ಲೂಕು ಆಸ್ಪತ್ರೆಗಳಿಗೆ ಮತ್ತು ಇತರ ತಾಲ್ಲೂಕು ಮಟ್ಟದ ಸಾರ್ವಜನಿಕ ಸಂಸ್ಥೆಗಳಿಗೆ ಯೋಜನೆ ರೂಪಿಸುವುದು, ಅವುಗಳ ನಿರ್ಮಾಣ ಮಾಡುವುದು ಮತ್ತು ಅವುಗಳನ್ನು ನಿರ್ವಹಿಸುವುದು.

**11. ಗ್ರಾಮೀಣ ವಿದ್ಯುದೀಕರಣ/ವಿದ್ಯುತ್ ಮತ್ತು ಇಂಧನ**

i. ಪ್ರಮುಖ ಬೆಳೆ ಹಂಗಾಮುಗಳಲ್ಲಿ ಮತ್ತು ವಿಶೇಷ ಸಂದರ್ಭಗಳಲ್ಲಿ ಗುಣಮಟ್ಟದ ಮತ್ತು ನಿರಂತರವಾಗಿ ವಿದ್ಯುತ್ ಪೂರೈಕೆ ಸಾಧ್ಯವಾಗುವಂತೆ ಮಾಡುವ ದೃಷ್ಟಿಯಿಂದ ವಿದ್ಯುತ್ ಪೂರೈಕೆ ಏಜೆನ್ಸಿಗಳೊಂದಿಗೆ ಸಮನ್ವಯ.

ii. ಸಮರ್ಪಕ ಶ್ರೇಣಿಯ ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಇಂಧನ ಘಟಕಗಳ ಕುರಿತು ಯೋಜನೆ ರೂಪಿಸುವುದು ಅವುಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

iii. ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಇಂಧನವನ್ನು ಇತರರಿಗೆ ಮಾರಾಟ ಮಾಡುವುದು.

**12. ಬಡತನ ನಿರ್ಮೂಲನೆ**

(i) ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ್‌ಗಳಿಗೆ ತಾಂತ್ರಿಕ ಪರಿಕರಗಳನ್ನು ಒದಗಿಸುವುದು.

(ii) ತಾಲ್ಲೂಕು ಮಟ್ಟದಲ್ಲಿ ಸ್ವಯಂ ಉದ್ಯೋಗ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ಜೆಎಲ್‌ಜಿ ಗಳು ಮತ್ತು ವೈಯಕ್ತಿಕ ಹಾಗೂ ಸರ್ಕಾರದ ಎಲ್ಲಾ ಕಾರ್ಯಕ್ರಮಗಳಲ್ಲಿ ಸ್ವ-ಸಹಾಯ ಸಮೂಹಗಳಿಗೆ ಸಂಪರ್ಕವನ್ನು ಕಲ್ಪಿಸುವುದು.

**13. ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್)**

ಅತ್ಯಾವಶ್ಯಕ ಸರಕುಗಳನ್ನು ವಿತರಿಸುವುದು.

**14. ವಿಪತ್ತು ನಿರ್ವಹಣೆ**

ವಿಪತ್ತು ನಿರ್ವಹಣಾ ಕಾರ್ಯಕ್ರಮಗಳಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮಟ್ಟದ ಕಾರ್ಯನಿರ್ವಹಣಾ ಸಿಬ್ಬಂದಿಗೆ ತರಬೇತಿಗಳನ್ನು ನಡೆಸುವುದು.

15. **ಶಿಕ್ಷಣ [ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ, ವಯಸ್ಕರ ಹಾಗೂ ಅನೌಪಚಾರಿಕ ಶಿಕ್ಷಣ]**

(i) ವಯಸ್ಕರ ಶಿಕ್ಷಣವನ್ನು ಪ್ರೋತ್ಸಾಹಿಸುವುದು.

(ii) ತಾಲ್ಲೂಕು ಮಟ್ಟದಲ್ಲಿ ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಈ ಎರಡು ರೀತಿಯ ಶಿಕ್ಷಣ ನೀಡುವುದನ್ನು ಯೋಜನೆ ರೂಪಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

(iii) ಪ್ರೌಢ ಶಾಲೆಗಳನ್ನು ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸುವುದು ಮತ್ತು ಮಂಜೂರಾತಿಗಳನ್ನು ಪಡೆದುಕೊಳ್ಳುವುದು.

(iv) ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳನ್ನು ಸಂಯೋಜಿಸುವುದು.

(v) ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.

(vi) ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ಶಾಲೆಗಳಿಗೆ ಪುಸ್ತಕಗಳು, ಅಧ್ಯಯನ ಸಾಮಗ್ರಿಗಳು, ತರಬೇತಿ ಹೂಡುವಳಿ ರೂಪಗಳಂಥ ಅಗತ್ಯ ನೆರವನ್ನು ಒದಗಿಸುವುದು.

(vii) ಯುವ ಕ್ಲಬ್‌ಗಳು ಮತ್ತು ಮಹಿಳಾ ಮಂಡಳಿಗಳ ಮೂಲಕ ಸಾಮಾಜಿಕ ಶಿಕ್ಷಣವನ್ನು ಉತ್ತೇಜಿಸುವುದು.

(viii) ಹಿಂದುಳಿದ ವರ್ಗಗಳು ಮತ್ತು ಸಮೂಹಗಳು, ಬಾಲಕಿಯರು, ವಿಶೇಷ ಚೇತನ ಮಕ್ಕಳು ಮತ್ತು ಅಲ್ಪಸಂಖ್ಯಾತ ಸಮೂಹಗಳ ಮಕ್ಕಳಿಗೆ ಹಾಗೂ ಅನಾಥ ಮಕ್ಕಳಿಗೆ ಪ್ರಾಥಮಿಕ ಶಾಲೆಯ ಹಂತದಲ್ಲಿ ಆಶ್ರಮ ಶಾಲೆಗಳು, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದನ್ನು ಕುರಿತು ಯೋಜನೆ ರೂಪಿಸುವುದು, ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

**16. ಗ್ರಂಥಾಲಯಗಳು**

(i)ತಾಲ್ಲೂಕು ಮಟ್ಟದ ಗ್ರಂಥಾಲಯಗಳು ಮತ್ತು ವಾಚನಾಲಯಗಳನ್ನು ಸ್ಥಾಪಿಸುವುದನ್ನು ಕುರಿತು ಯೋಜನೆಯನ್ನು ಸೂಚಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

(ii) ಗ್ರಂಥಾಲಯಗಳನ್ನು ಮೇಲ್ದರ್ಜೆಗೇರಿಸುವುದು.

**17. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು**

(i) ಗ್ರಾಮೀಣ ಕುಶಲ ಕರ್ಮಿ ಮತ್ತು ವೃತ್ತಿ ತರಬೇತಿಯನ್ನು ಉತ್ತೇಜಿಸುವುದು.

(ii) ಯುವಜನತೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವುದೂ ಸೇರಿದಂತೆ, ಸಾಂಸ್ಕೃತಿಕ ತಂಡಗಳು ತಮ್ಮ ಪ್ರತಿಭೆ ಮತ್ತು ಕಲೆಗಳನ್ನು ಪ್ರದರ್ಶಿಸುವುದಕ್ಕೆ ಸಂಬಂಧಿಸಿದಂತೆ ವೇದಿಕೆಯನ್ನು ಕಲ್ಪಿಸುವುದು.

(iii) ತಾಲ್ಲೂಕು ಮಟ್ಟದಲ್ಲಿ ಯುವ ಮೇಳಗಳನ್ನು ಏರ್ಪಡಿಸುವುದು.

(iv) ಯುವಜನತೆಗಾಗಿ ತಾಲ್ಲೂಕು ಮಟ್ಟದ ಯುವಕ ಕೇಂದ್ರವನ್ನು ಸ್ಥಾಪಿಸುವುದು.

(v) ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗಣಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

18. **ಮಾರುಕಟ್ಟೆಗಳು, ಪರಿಷೆಗಳು ಮತ್ತು ದನಗಳ ಜಾತ್ರೆಗಳು**

(i) ತಾಲ್ಲೂಕು ಮಟ್ಟದ ಸಾರ್ವಜನಿಕ ಮಾರುಕಟ್ಟೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

(ii) ದನದ ಜಾತ್ರೆಗಳನ್ನು ಒಳಗೊಂಡಂತೆ ತಾಲ್ಲೂಕು ಮಟ್ಟದಲ್ಲಿ ಪರಿಷೆಗಳು, ಉತ್ಸವಗಳನ್ನು ಮತ್ತು ನಡೆಸುವುದಕ್ಕೆ ಸಂಬಂಧಿಸಿದಂತೆ ವಿನಿಯಮಗಳನ್ನು ರೂಪಿಸುವುದು.

(iii) ಸ್ವಸಹಾಯ ಗುಂಪುಗಳು ಮತ್ತು ಜೆಎಲ್‌ಜಿಗಳು ಮೂಲಭೂತ ಸೌಕರ್ಯಗಳನ್ನು ಸೃಜಿಸುವುದು ಮತ್ತು ಅವುಗಳ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡುವುದು

**19. ಸಾರ್ವಜನಿಕ ಆರೋಗ್ಯ (ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಸೇರಿದಂತೆ) ಮತ್ತು ಕುಟುಂಬ ಕಲ್ಯಾಣ**

(i) ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಆಸ್ಪತ್ರೆಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವಗಳನ್ನು ಕಳುಹಿಸುವುದು ಮತ್ತು ಮಂಜೂರಾತಿಗಳನ್ನು ಪಡೆದುಕೊಳ್ಳುವುದು.

(ii) ಪ್ರತಿರಕ್ಷಣೆ ಮತ್ತು ಚುಚ್ಚುಮದ್ದು ಕಾರ್ಯಕ್ರಮಗಳನ್ನು ಉತ್ತೇಜಿಸುವುದು.

(iii) ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಆಸ್ಪತ್ರೆಗಳ ಮೇಲ್ವಿಚಾರಣೆ ಮಾಡುವುದು.

(iv) ಆರೋಗ್ಯ ಸೇವೆಗಳು ಮತ್ತು ನೈರ್ಮಲ್ಯ ಕಾರ್ಯಕ್ರಮಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳಿಗೆ ನಿರಂತರವಾದ ನೆರವು ನೀಡುವುದಕ್ಕಾಗಿ ವ್ಯವಸ್ಥೆಯನ್ನು ಕಲ್ಪಿಸುವುದು.

(v) ವಿಶೇಷ ವರ್ಗಗಳಿಗೆ ವಿಶೇಷ ಚೇತನರಿಗೆ ಹಾಗೂ ಮಾನಸಿಕ ವಿಕಲತೆಯುಳ್ಳವರಿಗೆ ಸಂಬಂಧಿಸಿದಂತೆ ಸೌಲಭ್ಯಗಳನ್ನು ಒದಗಿಸುವುದು ಮತ್ತು ಕೇಂದ್ರಗಳನ್ನು ಸ್ಥಾಪಿಸುವುದು.

(vi) ತಾಲ್ಲೂಕು ಮಟ್ಟದಲ್ಲಿ ಪ್ರಯೋಗಾಲಯಗಳು ಮತ್ತು ರೋಗ ಪರಿಶೋಧನಾ ಸೇವೆಗಳ ಮೇಲ್ವಿಚಾರಣೆ ಮಾಡುವುದು ಹಾಗೂ ಅವುಗಳನ್ನು ಗ್ರಾಮ ಪಂಚಾಯಿತಿಗಳಿಗೆ ಒದಗಿಸುವುದು.

(vii) ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಕುರಿತು ಯೋಜನೆ ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.

**20. ನೈರ್ಮಲ್ಯ**

(i) ಜಾತ್ರೆಗಳು ಮತ್ತು ಉತ್ಸವಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಪ್ರೋತ್ಸಾಹಿಸುವುದು.

(ii) ಬಹುಗ್ರಾಮ ಘನತ್ಯಾಜ್ಯ ಮತ್ತು ದ್ರವ್ಯ ತ್ಯಾಜ್ಯ ಸ್ಥಾವರಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

(iii) ಗ್ರಾಮ ಪಂಚಾಯಿತಿಗಳಿಗೆ ತಾಂತ್ರಿಕವಾದ ನೆರವು ನೀಡುವುದು.

**21. ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಶೇಷ ಚೇತನ ಮತ್ತು ಮಾನಸಿಕ ಸವಾಲುಗಳುಳ್ಳವರ ಕಲ್ಯಾಣ**

(i) ತಾಲ್ಲೂಕು ಮಟ್ಟದಲ್ಲಿ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯನ್ನು ಕುರಿತು ಯೋಜನೆ ರೂಪಿಸುವುದು, ಅನುಷ್ಠಾನಗೊಳಿಸುವುದು ಮತ್ತು ನಿರ್ವಹಿಸುವುದು.

(ii) ತಾಲ್ಲೂಕು ಮಟ್ಟದಲ್ಲಿ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಸಬಲೀಕರಣಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವುದು, ಅನುಷ್ಠಾನಗೊಳಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

(iii) ಶಾಲಾ ಆರೋಗ್ಯ ಮತ್ತು ಪೌಷ್ಠಿಕ ಆಹಾರ ಕಾರ್ಯಕ್ರಮಗಳಿಗೆ ಉತ್ತೇಜನವನ್ನು ನೀಡುವುದು ಮತ್ತು ಮೇಲ್ವಿಚಾರಣೆ ಮಾಡುವುದು.

**22. ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಜಾತಿಗಳ ಅಭಿವೃದ್ಧಿ**

(i) ತಾಲ್ಲೂಕು ಮಟ್ಟದಲ್ಲಿ ಮತ್ತು ಕೆಳಮಟ್ಟದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರು ಮತ್ತು ಹಿಂದುಳಿದ ಸಮುದಾಯಗಳಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಯೋಜನೆಯನ್ನು ರೂಪಿಸುವುದು ಮತ್ತು ನಿರ್ವಹಿಸುವುದು.

(ii) ಮೆಟ್ರಿಕ್‌ಪೂರ್ವ ವಸತಿ ನಿಲಯಗಳನ್ನು ಸ್ಥಾಪಿಸುವುದನ್ನು ಕುರಿತು ಯೋಜನೆ ರೂಪಿಸುವುದು ಮತ್ತು ನಿರ್ವಹಿಸುವುದು.

(iii) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ ವ್ಯಕ್ತಿ ಮತ್ತು ಸಮುದಾಯದ ಸ್ವಾತಂತ್ರ್ಯ ಮತ್ತು ಘನತೆಗೆ ಕುಂದುಂಟು ಮಾಡುವಂಥ ಪದ್ಧತಿಗಳನ್ನು ಸಾಮಾಜಿಕ, ಸಾಂಸ್ಕೃತಿಕ ರೂಢಿಗಳನ್ನು ಅನುಸರಿಸುವುದನ್ನು ತಡೆಗಟ್ಟುವುದು.

(iv) ವೃದ್ಧಾಪ್ಯ ಪಿಂಚಣಿ, ವಿಧವಾ ಪಿಂಚಣಿ ಮತ್ತು ಅಂಗವಿಕಲರ ಪಿಂಚಣಿಗಳ ಮೇಲ್ವಿಚಾರಣೆ ಮಾಡುವುದು

(v) ಅಂಗವಿಕಲ, ಮಾನಸಿಕ ಅಸ್ವಸ್ಥ ಹಾಗೂ ನಿರ್ಗತಿಕರ ಕಲ್ಯಾಣವನ್ನು ಒಳಗೊಂಡಂತೆ ಸಮಾಜ ಕಲ್ಯಾಣ ಕಾರ್ಯಕ್ರಮಗಳು.

**23. ಜಾನುವಾರು ಸಾಕಾಣಿಕೆ ಕೇಂದ್ರಗಳು, ಕಾರು/ ಆಟೋ/ ರಿಕ್ಷಾ ಮತ್ತು ಬಸ್ ನಿಲ್ದಾಣಗಳ ನಿರ್ಮಾಣಗಳು ಹಾಗೂ ಎತ್ತಿನ ಗಾಡಿ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆ**

ಇತರ ಸ್ಥಳೀಯ ಸಂಸ್ಥೆಗಳ ಪುರಸಭಾ ಪರಿಮಿತಿಯ ಹೊರಗೆ ತಾಲ್ಲೂಕು ಬಸ್ ನಿಲ್ದಾಣಗಳು, ಕಾರು/ ಆಟೋರಿಕ್ಷಾ ಹಾಗೂ ಬಸ್ ನಿಲ್ದಾಣಗಳು, ಎತ್ತಿನಗಾಡಿ ನಿಲ್ದಾಣಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.

**24. ಅಂಕಿಅಂಶಗಳ ನಿರ್ವಹಣೆ**

ತಾಲ್ಲೂಕು ಅಂಕಿಅಂಶಗಳನ್ನು ಕ್ರೋಢೀಕರಿಸುವುದು.

**25. ಯೋಜನೆ**

(i) ಗ್ರಾಮ ಪಂಚಾಯಿತಿಗಳಿಂದ ಸ್ವೀಕರಿಸುವ ಯೋಜನೆಗಳನ್ನು ಕ್ರೋಢೀಕರಿಸುವುದು, ತಾಲ್ಲೂಕು ಮಟ್ಟದ ಯೋಜನೆಗಳನ್ನು ಸಿದ್ಧಪಡಿಸುವುದು, ಅಂಗೀಕರಿಸುವುದು ಮತ್ತು ಜಿಲ್ಲಾ ಪಂಚಾಯತಿಗೆ ಅದನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಯೋಜನಾ ಸಮಿತಿಯನ್ನು ರಚಿಸುವುದು.

(ii) ಅಂಕಿಅಂಶಗಳು ಮತ್ತು ಮಾಹಿತಿ ಸಂಗ್ರಹಣೆಗೆ ಹಾಗೂ ಯೋಜನೆ ರೂಪಿಸುವುದುಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳಿಗೆ ತಂತ್ರಜ್ಞರ ನೆರವನ್ನು ಒದಗಿಸುವುದು.

(iii) ಸಮಾಜ ಘಟಕಾಂಶ ಯೋಜನೆಗಳು (ಎಸ್‌ಸಿಪಿಗಳು)/ ಬುಡಕಟ್ಟು ಉಪಯೋಜನೆಗಳು (ಟಿಎಸ್‌ಪಿಗಳು) ಸೇರಿದಂತೆ ಸರ್ಕಾರದ ಎಲ್ಲಾ ಕಾರ್ಯಕ್ರಮಗಳ ಪ್ರಗತಿ ಕುರಿತು ಮತ್ತು ಮೇಲ್ವಿಚಾರಣೆ ಮಾಡುವುದು ಮತ್ತು ಅವುಗಳ ಗುಣಮಟ್ಟದ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವುದು.

**26. ಸಹಕಾರ**

ಬ್ಲಾಕ್ ಅಥವಾ ತಾಲ್ಲೂಕು ಮಟ್ಟದ ಎಲ್ಲಾ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದಕ್ಕೆ ಅಗತ್ಯವಿರುವ ಸೌಲಭ್ಯ ಒದಗಿಸುವುದು.

**27. ಗ್ರಾಮೀಣ ಪರಿಸರ ಮತ್ತು ಜೀವಿ ಪರಿಸ್ಥಿತಿ**

ಗ್ರಾಮೀಣ ಪರಿಸರ ಮತ್ತು ಜೀವಿ ಪರಿಸ್ಥಿತಿಯ ಸಂರಕ್ಷಣೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳಿಗೆ ಅಗತ್ಯವಿರುವ ತಾಂತ್ರಿಕ ನೆರವನ್ನು ಒದಗಿಸುವುದು.

**28. ಆದಾಯೋತ್ಪತ್ತಿ ಚಟುವಟಿಕೆಗಳು**

ತಾಲ್ಲೂಕು ಕೇಂದ್ರ ಕಾರ್ಯಸ್ಥಳದಲ್ಲಿ ಆಸ್ತಿಗಳನ್ನು ಸೃಜಿಸುವುದು ಮತ್ತು ಅವುಗಳನ್ನು ಬಾಡಿಗೆ ನೀಡುವುದು.

**29. ಜ್ಞಾನ ನಿರ್ವಹಣೆ**

(i) ತಾಲ್ಲೂಕಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸುವುದು ಮತ್ತು ಕ್ರೋಢೀಕರಿಸುವುದು ಮತ್ತು ಅಂಕಿಅಂಶಗಳ ಕಣಜವನ್ನು (ಡೇಟಾಬೇಸ್) ನಿರ್ವಹಿಸುವುದು.

(ii) ತಾಲ್ಲೂಕಿನ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ದಾಖಲಿಸುವುದು.

(iii) ತಾಲ್ಲೂಕಿನ ಮಾನವ ಅಭಿವೃದ್ಧಿ ನಿರ್ಧರಿಸಲಿಕ್ಕೆ ಸಂಬಂಧಿಸಿದಂತೆ ಸಮೀಕ್ಷೆಗಳು ಮತ್ತು ಅಧ್ಯಯನಗಳನ್ನು ನಡೆಸುವುದು.

(iv) ಮಾನವಾಭಿವೃದ್ಧಿ ಸೂಚ್ಯಂಕದ ನಿಯತಕಾಲಿಕ ಗಣನೆ ಮಾಡುವುದು.

(v) ಎಲ್ಲಾ ದತ್ತಾಂಶಗಳು ಜನರಿಗೆ ದೊರೆಯುವಂತೆ ಮಾಡುವುದು.

(vi) ಸರ್ಕಾರದ ಎಲ್ಲಾ ಯೋಜನೆಗಳನ್ನು ಕುರಿತು ಜಾಗೃತಿ ಮೂಡಿಸುವುದು ಮತ್ತು ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಚಟುವಟಿಕೆಗಳನ್ನು ಕೈಗೊಳ್ಳುವುದು.

**30. ಸಮುದಾಯ ಸ್ವತ್ತುಗಳ ನಿರ್ವಹಣೆ**

(i) ತಾಲ್ಲೂಕು ಪಂಚಾಯಿತಿಯಲ್ಲಿ ಅಥವಾ ಸರ್ಕಾರದಿಂದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಸಂಸ್ಥೆಯಿಂದ ವರ್ಗಾವಣೆಯಾದ ಎಲ್ಲಾ ಸಮುದಾಯ ಸ್ವತ್ತುಗಳ ನಿರ್ವಹಣೆ

(ii) ಇತರ ಸಮುದಾಯ ಸ್ವತ್ತುಗಳ ಸಂರಕ್ಷಣೆ ಮತ್ತು ನಿರ್ವಹಣೆ

## ಅನುಸೂಚಿ –III

(184ನೇ **ಪ್ರಕರಣವನ್ನು ನೋಡಿ**)

**ಸಾಮಾನ್ಯ**

ಅನುಸೂಚಿ–IIIರಲ್ಲಿ ನಿರೂಪಿಸಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯತಿಯ ಬಳಿ ಖರ್ಚು ಮಾಡುವುದಕ್ಕೆ ಲಭ್ಯವಿರುವ ಜಿಲ್ಲಾ ಪಂಚಾಯತಿ ನಿಧಿಗಳಿಗೆ ಸಂಬಂಧಿಸಿರುವಷ್ಟರಮಟ್ಟಿಗೆ, ಜಿಲ್ಲಾ ಪಂಚಾಯತಿಗೆ ಸಂಬಂಧಪಟ್ಟಂತೆ ರೂಪಿಸಿರುವ ಕಾರ್ಯಚಟುವಟಿಕೆ ನಕ್ಷೆಯಲ್ಲಿ ವಿವರಿಸಿರುವಂತೆ ಜಿಲ್ಲಾ ಪಂಚಾಯತಿ ಪ್ರದೇಶದ ಅಗತ್ಯತೆಗಳನ್ನು ಈಡೇರಿಸುವುದು ಜಿಲ್ಲಾ ಪಂಚಾಯತಿಗಳ ಕರ್ತವ್ಯವಾಗಿರತಕ್ಕದ್ದು.

ಈ ಅಧಿನಿಯಮದ ಇತರ ಉಪಬಂಧಗಳಿಗೆ ಮತ್ತು ಸರ್ಕಾರದ ನಿರ್ದೇಶನಗಳಿಗೆ ಒಳಪಟ್ಟು ಜಿಲ್ಲಾ ಪಂಚಾಯತಿಯು, ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಸಾಧನೆಗಾಗಿ, ಅನುಸೂಚಿ–IIIರಲ್ಲಿ ನಿರೂಪಿಸಿರುವ ವಿಷಯಗಳನ್ನು ನಿರ್ವಹಿಸುವ ಹಾಗೂ ಅವುಗಳಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ ಸ್ಕೀಮುಗಳನ್ನು ಸಿದ್ಧಪಡಿಸುವ ಮತ್ತು ಅನುಷ್ಠಾನಗೊಳಿಸುವ ಅಧಿಕಾರ ಹೊಂದಿರತಕ್ಕದ್ದು.

**1. ಸಾಮಾನ್ಯ ಪ್ರಕಾರ್ಯಗಳು**

ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಅಭಿವೃದ್ಧಿ ಸ್ಕೀಮುಗಳನ್ನು ಮೇಲ್ವಿಚಾರಿಸುವುದು, ಸಮನ್ವಯ ಮಾಡುವುದು ಒಟ್ಟುಗೂಡಿಸುವುದು ಹಾಗೂ ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆಯನ್ನು ಸಿದ್ಧಪಡಿಸುವುದು.

**2. ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿ:**

(i) ಕೃಷಿ ಮತ್ತು ತೋಟಗಾರಿಕೆಯ ಉತ್ಪಾದನೆಯ ಹೆಚ್ಚಳ, ಮಾರುಕಟ್ಟೆ ಹಾಗೂ ಜೈವಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು

(ii) ಒಂದಕ್ಕಿಂತ ಹೆಚ್ಚು ತಾಲ್ಲೂಕು ಪಂಚಾಯತಿ ಪ್ರದೇಶವನ್ನು ಒಳಗೊಂಡಿರುವ ಜಲಾನಯನ ಪ್ರದೇಶಗಳಿಗೆ ಸಂಯೋಜಿತ ಜಲಾನಯನ ಪ್ರದೇಶವನ್ನು ನಿರ್ವಹಿಸುವುದು

(iii) ಕೃಷಿ ಮತ್ತು ತೋಟಗಾರಿಕೆ ಫಾರ್ಮ್‌ಗಳು ಹಾಗೂ ವಾಣಿಜ್ಯ ಫಾರ್ಮ್‌ಗಳನ್ನು ಆರಂಭಿಸುವುದು ಮತ್ತು ನಿರ್ವಹಿಸುವುದು

(iv) ಹಣಕಾಸು, ನೀರು, ಬೀಜಗಳು ಮತ್ತು ಗೊಬ್ಬರಗಳಂಥ ಕೃಷಿ ಹೂಡುವಳಿಗಳನ್ನು ಒದಗಿಸುವುದು

(v) ಗೋದಾಮುಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು

(vi) ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಒದಗಿಸುವುದು, ಕೃಷಿ ಮೇಳಗಳು ಮತ್ತು ಪ್ರದರ್ಶನಗಳನ್ನು ನಡೆಸುವುದು.

(vii) ನೂತನ ಕೃಷಿ ಸಂಬಂಧಿತ ಸಂಶೋಧನೆಗಳು ಮತ್ತು ಪ್ರಾಯೋಗಿಕ (Pilot) ಯೋಜನೆಗಳನ್ನು ಜನಪ್ರಿಯಗೊಳಿಸುವುದಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

(viii) ಸ್ಥಳೀಯ ಮಟ್ಟಕ್ಕೆ ಸೂಕ್ತವಾದ ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವುದು.

(ix) ಕೃಷಿ ಮತ್ತು ತೋಟಗಾರಿಕಾ ವಿಸ್ತರಣೆ ಹಾಗೂ ತರಬೇತಿ ಕೇಂದ್ರಗಳನ್ನು ನಿರ್ವಹಿಸುವುದು.

(x) ಸರ್ಕಾರ ವಹಿಸಿರುವ ಭೂ ಸುಧಾರಣೆ ಮತ್ತು ಭೂಸಾರ ಸಂರಕ್ಷಣೆಯ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು

(xi) ಕೃಷಿಕರಿಗೆ ತರಬೇತಿಯನ್ನು ನೀಡುವುದು.

**3. ಸಣ್ಣ ನೀರಾವರಿ**

(i) ಅಂತರ್ಜಲ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು.

(ii) 40 ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಪ್ರದೇಶಕ್ಕೆ ಸಣ್ಣ ನೀರಾವರಿ ಯೋಜನೆಯನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.

**4. ಪಶುಸಂಗೋಪನೆ, ಹೈನುಗಾರಿಕೆ, ಕೋಳಿಸಾಕಾಣಿಕೆ ಮತ್ತು ಮೀನುಗಾರಿಕೆ**

(i) ಸಾಂಕ್ರಾಮಿಕ ಮತ್ತು ಸೋಂಕು ರೋಗಗಳನ್ನು ತಡೆಯುವುದು

(ii) ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಪಶುವೈದ್ಯಕೀಯ ಪ್ರಯೋಗಾಲಯಗಳು, ಚಿಕಿತ್ಸಾಲಯಗಳನ್ನು ಹಾಗೂ ಸಂಚಾರಿ ಚಿಕಿತ್ಸಾಲಯಗಳನ್ನು ಸ್ಥಾಪಿಸುವುದು.

(iii) ತಾಲ್ಲೂಕು ಮತ್ತು ಗ್ರಾಮ ಪಶುವೈದ್ಯಕೀಯ ಆಸ್ಪತ್ರೆ, ಪ್ರಥಮ ಚಿಕಿತ್ಸಾ ಕೇಂದ್ರಗಳು ಮತ್ತು ಸಂಚಾರಿ ಪಶುವೈದ್ಯಕೀಯ ಔಷಧಾಲಯಗಳನ್ನು ಸ್ಥಾಪಿಸುವುದು.

(iv) ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದು.

(v) ಕೃಷಿಕರಿಗೆ ಜಿಲ್ಲಾಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

(vi) ಔಷಧಗಳು, ಔಷಧೋಪಕರಣಗಳು ಮತ್ತು ಚುಚುಮದ್ದುಗಳನ್ನು ಒದಗಿಸುವುದು.

(vii) ಜಿಲ್ಲಾ ಪಂಚಾಯಿತಿಯ ಅಧೀನದಲ್ಲಿ ಬರುವ ನೀರಾವರಿ ಕಾಮಗಾರಿಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು.

(viii) ಮೀನುಗಾರಿಕೆ ಮತ್ತು ಮೀನುಗಾರರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

(ix) ಹೈನುಗಾರಿಕೆ, ಕೋಳಿ ಸಾಕಾಣಿಕೆ ಮತ್ತು ಹಂದಿ ಸಾಕಾಣಿಕೆಗೆ ಉತ್ತೇಜಿಸುವುದು.

**5. ಸಾಮಾಜಿಕ ಅರಣ್ಯ**

(i) ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಉಪಯೋಗಕ್ಕಾಗಿ ಸಾಮಾಜಿಕ ಅರಣ್ಯ ಮತ್ತು ಜೈವಿಕ ವೈವಿಧ್ಯತೆ ನಿರ್ವಹಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರಚಿಸುವುದು.

(ii) ಸಾಮಾಜಿಕ ಮತ್ತು ಕೃಷಿ ಅರಣ್ಯ, ಇಂಧನ ಸ್ಥಾವರ ಮತ್ತು ಮೇವು ಅಭಿವೃದ್ಧಿಯನ್ನು ಉತ್ತೇಜಿಸುವುದು.

(iii) ಸಮುದಾಯ ಭೂಮಿಯಲ್ಲಿ ಬೆಳೆದ ಸಣ್ಣ ಅರಣ್ಯ ಉತ್ಪನ್ನಗಳನ್ನು ನಿರ್ವಹಿಸುವುದು.

(iv) ಖರಾಬು ಭೂಮಿಯನ್ನು ಅಭಿವೃದ್ಧಿ ಪಡಿಸುವುದು.

**6. ಪ್ರವಾಸೋದ್ಯಮ**

(i) ಜಿಲ್ಲೆಗಳ ವಿವಿಧ ತಾಲ್ಲೂಕುಗಳಲ್ಲಿರುವ ಪ್ರವಾಸಿ ತಾಣಗಳನ್ನು ಗುರುತಿಸುವುದು ಮತ್ತು ಅಭಿವೃದ್ಧಿಪಡಿಸುವುದು.

(ii) ಜಿಲ್ಲಾ ಪ್ರವಾಸೋದ್ಯಮ ನೀತಿಯನ್ನು ಮತ್ತು ಪ್ರವಾಸೋದ್ಯಮ ಚಟುವಟಿಕೆಗಳನ್ನು ರೂಪಿಸುವುದು.

(iii) ಪ್ರವಾಸಿ ಕೇಂದ್ರಗಳಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು.

(iv) ಅವುಗಳಿಗೆ ವಹಿಸಿಕೊಟ್ಟಿರುವ ಪ್ರವಾಸೋದ್ಯಮ ಆಕರ್ಷಣೆಗಳನ್ನು ಆರಂಭಿಸುವುದು ಮತ್ತು ನಿರ್ವಹಿಸುವುದು.

(v) ತಾಲ್ಲೂಕುಗಳಲ್ಲಿರುವ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಮಾರ್ಗದರ್ಶಕರು, ಹಸಿರು ಪೊಲೀಸ್, ಕಾವಲು ವ್ಯವಸ್ಥೆ, ಜೀವ ರಕ್ಷಕರುಗಳನ್ನು ನಿಯೋಜಿಸುವುದು ಮತ್ತು ಅವುಗಳಿಗೆ ವಹಿಸಿಕೊಟ್ಟಿರುವ ಪ್ರವಾಸಿ ಕೇಂದ್ರಗಳಲ್ಲಿ ಪ್ರವೇಶ ಶುಲ್ಕಗಳು, ವಾಹನ ನಿಲುಗಡೆ ಶುಲ್ಕಗಳನ್ನು ಸಂಗ್ರಹಿಸುವುದು.

**7. ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗ್ರಾಮೀಣ ಕೈಗಾರಿಕೆಗಳು – ಖಾದಿ, ಕರಕುಶಲ ಕಲೆಗಳು, ಗ್ರಾಮೋದ್ಯೋಗಗಳು, ಆಹಾರ ಸಂಸ್ಕರಣಾ ಕೈಗಾರಿಕೆಗಳು ಮತ್ತು ಇತರ ಕೃಷಿಯೇತರ ಚಟುವಟಿಕೆಗಳು**

(i) ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಪಟ್ಟ ವ್ಯವಸ್ಥೆಯನ್ನು (mechanism) ಸ್ಥಾಪಿಸುವುದು.

(ii) ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ತಾಂತ್ರಿಕ ಜ್ಞಾನ ಮತ್ತು ಸಂಬಂಧಿತ ಇತರ ಉಪಯುಕ್ತ ಕೌಶಲ್ಯಗಳು ಹಾಗೂ ತಿಳುವಳಿಕೆಯನ್ನು ಒದಗಿಸುವುದು.

(iii) ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು.

(iv) ಗುಡಿ ಕೈಗಾರಿಕೆಗಳು, ಖಾದಿ, ಗ್ರಾಮೋದ್ಯೋಗಗಳು ಮತ್ತು ಕರಕುಶಲಕಲೆಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು.

(v) ಗ್ರಾಮೋದ್ಯೋಗಗಳು ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜ್ಯ ಸಮಿತಿಗಳು ಮತ್ತು ಅಖಿಲ ಭಾರತ ಸಮಿತಿಗಳು ಹಾಗೂ ಆಯೋಗಗಳ ಸ್ಕೀಮುಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಸಂಪರ್ಕ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು.

(vi) ಜಿಲ್ಲಾ ಮಟ್ಟದ ಉದ್ಯಮಶೀಲತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

(vii) ಖಾದಿ ಮತ್ತು ಗ್ರಾಮೋದ್ಯೋಗಗಳು ಹಾಗೂ ಆಹಾರ ಸಂಸ್ಕರಣಾ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಪತ್ತಿನ ಯೋಜನೆಗಳನ್ನು ರೂಪಿಸುವುದು ಹಾಗೂ ಅನುಷ್ಠಾನಗೊಳಿಸುವುದು.

(viii) ಗ್ರಾಮೋದ್ಯೋಗ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದ ರಾಜ್ಯ ಸಮಿತಿಗಳು ಮತ್ತು ಅಖಿಲ ಭಾರತ ಸಮಿತಿಗಳು ಹಾಗೂ ಆಯೋಗಗಳ ಸ್ಕೀಮುಗಳನ್ನು ಅನುಷ್ಠಾನಗೊಳಿಸುವುದು.

**8. ಗ್ರಾಮೀಣ ವಸತಿ**

ಜಿಲ್ಲಾ ಮಟ್ಟದ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಉತ್ತೇಜನ ನೀಡುವುದು.

**9. ಕುಡಿಯುವ ನೀರು ಪೂರೈಕೆ**

(i) ಕುಡಿಯುವ ನೀರು ಪೂರೈಕೆ ಯೋಜನೆಗಳು ಅಥವಾ ಬಹು ತಾಲ್ಲೂಕು ಕುಡಿಯುವ ನೀರು ಪೂರೈಕೆ ಯೋಜನೆಗಳನ್ನು ಸ್ಥಾಪಿಸುವುದು.

(ii) ಕುಡಿಯುವ ನೀರು ಪರೀಕ್ಷಣಾ ಪ್ರಯೋಗಾಲಯಗಳನ್ನು ಸ್ಥಾಪಿಸುವುದು.

(iii) ನೀರು ಪೂರೈಕೆ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಹಣಕಾಸು ನೆರವು ನೀಡುವುದು.

**10. ಲೋಕೋಪಯೋಗಿ, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ರಸ್ತೆಗಳು, ಸೇತುವೆಗಳು ಹಾಯ್ಗಡಗಳು, ಜಲಮಾರ್ಗಗಳು ಮತ್ತು ಇತರ ಸಂಪರ್ಕ ಮಾರ್ಗಗಳು)**

(i) ಯಾವುದೇ ಇತರ ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರದ ನಿಯಂತ್ರಣದ ಅಡಿಯಲ್ಲಿ ಬರದಿರುವಂಥ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯ ಹೆದ್ದಾರಿಗಳು ಹಾಗೂ ಬಹುಜಿಲ್ಲಾ ರಸ್ತೆಗಳು (ಎಂಆರ್‌ಡಿಗಳು), ಸೇತುವೆಗಳು, ಸುರಂಗ ಕಾಲುವೆಗಳನ್ನು, ಹೊರತುಪಡಿಸಿ, ಒಂದಕ್ಕಿಂತ ಹೆಚ್ಚು ತಾಲ್ಲೂಕುಗಳ ಮೂಲಕ ಹಾದುಹೋಗುವ ಅಂಥ ತಾಲ್ಲೂಕುಗಳಿಗೆ ಸಂಬಂಧಪಟ್ಟಿರುವ ಎಲ್ಲಾ ಜಿಲ್ಲಾ ರಸ್ತೆಗಳ ಸಂಬಂಧದಲ್ಲಿ ಯೋಜನೆ ರೂಪಿಸುವುದು, ನಿರ್ಮಾಣ ಮಾಡುವುದು ಮತ್ತು ನಿರ್ವಹಿಸುವುದು.

(ii) ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳು ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ತಂತ್ರಜ್ಞಾನವನ್ನು ಒದಗಿಸುವುದು.

(iii) ಗ್ರಾಮಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕೋರಿಕೆಯ ಮೇರೆಗೆ ತಾಂತ್ರಿಕ, ವಿನ್ಯಾಸಗಳನ್ನು ಹೊಸ ತಂತ್ರಜ್ಞಾನಗಳನ್ನು ಒದಗಿಸುವುದು.

(iv) ಮಾರುಕಟ್ಟೆಗಳು, ಆಟದ ಮೈದಾನ, ಕ್ರೀಡಾಂಗಣ ಮೊದಲಾದಂಥ ಬಹು ತಾಲ್ಲೂಕು ಮಟ್ಟದ ನಾಗರಿಕ ಮೂಲಸೌಲಭ್ಯಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.

**11. ಗ್ರಾಮೀಣ ವಿದ್ಯುದೀಕರಣ/ ವಿದ್ಯುಚ್ಛಕ್ತಿ ಮತ್ತು ಇಂಧನ**

(i)ಸೂಕ್ತವಾದ ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಇಂಧನ ಘಟಕಗಳನ್ನು ಕುರಿತು ಯೋಜನೆ ರೂಪಿಸುವುದು, ಸ್ಥಾಪಿಸುವುದು ಹಾಗೂ ನಿರ್ವಹಿಸುವುದು.

(ii) ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಇಂಧನಗಳನ್ನು ಇತರರಿಗೆ ಮಾರಾಟ ಮಾಡುವುದು.

**12. ಬಡತನ ನಿರ್ಮೂಲನೆ**

(i)ಗ್ರಾಮ ಪಂಚಾಯತಿಗಳು ಗುರುತಿಸಿದ ಬಡವರ ಕೌಶಲ್ಯವರ್ಧನೆ.

(ii) ತಾಂತ್ರಿಕ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

(iii) ಗ್ರಾಮ ಪಂಚಾಯತಿಗಳ ಪಾಲುದಾರಿಕೆಯಲ್ಲಿ ಉದ್ಯೋಗ ಖಾತರಿ ಯೋಜನೆಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.

(iv) ಉದ್ಯೋಗ ಮೇಳಗಳನ್ನು ಏರ್ಪಡಿಸುವುದು

**13. ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್)**

**14. ವಿಪತ್ತು ನಿರ್ವಹಣೆ**

ವಿಪತ್ತು ನಿರ್ವಹಣೆಗೆ ಅಗತ್ಯವಿರುವ ಮೂಲಸೌಕರ್ಯ ಸೃಷ್ಟಿಸುವುದು.

**15. ಶಿಕ್ಷಣ (ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ, ವಯಸ್ಕರ ಹಾಗೂ ಅನೌಪಚಾರಿಕ ಶಿಕ್ಷಣ)**

(i) ಜಿಲ್ಲಾಮಟ್ಟದಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಕುರಿತು ಯೋಜನೆಯನ್ನು ರೂಪಿಸುವುದು ಹಾಗೂ ನಿರ್ವಹಿಸುವುದು.

(ii) ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು, ಐಟಿಐ, ಪಾಲಿಟೆಕ್ನಿಕ್ ಕಾಲೇಜುಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಗಳಿಗೆ ಪ್ರಸ್ತಾವನೆಗಳನ್ನು ಕಳುಹಿಸುವುದು ಮತ್ತು ಮಂಜೂರಾತಿಗಳನ್ನು ಪಡೆದುಕೊಳ್ಳುವುದು.

(iii)ಸರ್ಕಾರಿ ಪದವಿಪೂರ್ವ ಕಾಲೇಜುಗಳು, ಐಟಿಐ, ಪಾಲಿಟೆಕ್ನಿಕ್ ಕಾಲೇಜುಗಳನ್ನು ನಿರ್ಮಿಸುವುದು ಹಾಗೂ ನಿರ್ವಹಿಸುವುದು.

(iv)ಜಿಲ್ಲಾ ಪಂಚಾಯಿತಿ ಅಧೀನದಲ್ಲಿನ ಸಂಸ್ಥೆಗಳಿಗೆ ಸಂಬಂಧಿಸಿದ ವಿದ್ಯಾರ್ಥಿ ನಿಲಯಗಳ ಸಂಬಂಧದಲ್ಲಿ ಯೋಜನೆಯನ್ನು ರೂಪಿಸುವುದು ಮತ್ತು ನಿರ್ವಹಿಸುವುದು.

(v) ಶಿಕ್ಷಣಕ್ಕೆ ಸಂಬಂಧಿಸಿದ ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದು ಮತ್ತು ಶಿಕ್ಷಣ ಚಟುವಟಿಕೆಗಳನ್ನು ಸರ್ವೆ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು.

(vi)ಗ್ರಾಮೀಣ ಕುಶಲ ಕಲೆ ಮತ್ತು ವೃತ್ತಿಶಿಕ್ಷಣ ತರಬೇತಿಗಳನ್ನು ಏರ್ಪಡಿಸುವುದು ಹಾಗೂ ನಿರ್ವಹಿಸುವುದು.

(vii) ಗ್ರಾಮಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ತಾಂತ್ರಿಕ ಹೂಡುವಳಿ ರೂಪಗಳು, ಸಾಮಗ್ರಿಗಳು, ಹಣಕಾಸು ನೆರವನ್ನು ಒದಗಿಸುವುದು.

(viii) ಪದವಿಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳು, ಹಿಂದುಳಿದ ವರ್ಗಗಳ ಮತ್ತು ಸಮೂಹಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ, ಬಾಲಕಿಯರಿಗೆ, ವಿಶೇಷ ಚೇತನರಿಗೆ ಮತ್ತು ಅಲ್ಪಸಂಖ್ಯಾತ ಸಮೂಹಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣ ನೀಡುವುದು ಮತ್ತು ವಯಸ್ಕರ ಶಿಕ್ಷಣದ ಕುರಿತು ಯೋಜನೆ ರೂಪಿಸುವುದು ಹಾಗೂ ನಿರ್ವಹಿಸುವುದು.

(ix)ಜಿಲ್ಲಾ ಪಂಚಾಯಿತಿಯ ಅಧೀನದಲ್ಲಿ ಬರುವ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದ ನಿರ್ದೇಶನಗಳಿಗನುಸಾರವಾಗಿ ಅತಿಥಿ ಶಿಕ್ಷಕರನ್ನು ನಿಯೋಜಿಸುವುದು.

(x) ವಿಶೇಷ ಚೇತನ ಮಕ್ಕಳಿಗೆ ವಿಶೇಷ ಶಾಲೆಗಳು ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು.

(xi) ಅನೌಪಚಾರಿಕ (non-formal) ಶಿಕ್ಷಣದ ಕಾರ್ಯಕ್ರಮಗಳಿಗೆ ಉತ್ತೇಜಿಸುವುದು.

**16. ಗ್ರಂಥಾಲಯಗಳು**

ಇತರ ಸ್ಥಳೀಯ ಪ್ರಾಧಿಕಾರಗಳು ಅಥವಾ ಸರ್ಕಾರದ ನಿಯಂತ್ರಣದ ಅಡಿಯಲ್ಲಿ ಬರದಿರುವಂಥ ಜಿಲ್ಲಾಪಂಚಾಯಿತಿ ಮಟ್ಟದ ಗ್ರಂಥಾಲಯಗಳು ಮತ್ತು ವಾಚನಾಲಯಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸುವುದು, ಅನುಷ್ಠಾನಗೊಳಿಸುವುದು, ಸ್ಥಾಪಿಸುವುದು, ನಿರ್ವಹಿಸುವುದು ಹಾಗೂ ಮೇಲ್ವಿಚಾರಣೆಯನ್ನು ಮಾಡುವುದು.

**17. ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳು**

(i) ಗ್ರಾಮೀಣ ಕಲಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಕುಶಲಕಲೆಗಳ ಉತ್ಪನ್ನಗಳನ್ನು ದಾಖಲೀಕರಿಸುವುದು.

(ii) ಬಹುಪಾಲು ಅವನತಿಯಾಗಿರುವ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವುದು ಮತ್ತು ಪುನಶ್ಚೇತನಗೊಳಿಸುವುದು.

(iii) ಜಿಲ್ಲಾ ಮಟ್ಟದಲ್ಲಿ ಸಾಂಸ್ಕೃತಿಕ ಕೇಂದ್ರಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು ಹಾಗೂ ಕುಶಲಕಲಾ ಮೇಳಗಳನ್ನು ಏರ್ಪಡಿಸುವುದು.

(iv) ಜಿಲ್ಲಾಮಟ್ಟದಲ್ಲಿ ಯುವಮೇಳಗಳನ್ನು ಏರ್ಪಡಿಸುವುದು.

(v) ಜಿಲ್ಲಾಮಟ್ಟದಲ್ಲಿ ಕ್ರೀಡಾಶಾಲೆಗಳ ಮೇಲ್ವಿಚಾರಣೆಯನ್ನು ಮಾಡುವುದು.

(vi) ಮತೀಯ ಮತ್ತು ಧಾರ್ಮಿಕ ಸಾಮರಸ್ಯ ಸಾಧನೆ, ಮಕ್ಕಳು, ಅಲ್ಪಸಂಖ್ಯಾತರು, ಮಹಿಳೆಯರ ಹಕ್ಕುಗಳ ಉಲ್ಲಂಘನೆ, ದೌರ್ಜನ್ಯ, ತಾರತಮ್ಯಗಳ ವಿರುದ್ಧ ಸುರಕ್ಷತೆ ಒದಗಿಸುವ ವಿಷಯದಲ್ಲಿ ಅತ್ಯುತ್ತಮ ಕಾರ್ಯಸಾಧನೆ ಮಾಡಿರುವ ಗ್ರಾಮ ಪಂಚಾಯಿತಿಗಳಿಗೆ ವಾರ್ಷಿಕ ಪ್ರಶಸ್ತಿ ನೀಡುವ ಪದ್ಧತಿಯನ್ನು ಪ್ರಾರಂಭಿಸುವುದು

**18. ಮಾರುಕಟ್ಟೆ, ಪರಿಷೆ ಮತ್ತು ದನಗಳ ಜಾತ್ರೆಗಳು**

ದನಗಳ ಜಾತ್ರೆಗಳನ್ನು ಒಳಗೊಂಡಂತೆ ಜಿಲ್ಲಾ ಮಟ್ಟದಲ್ಲಿ ಪರಿಷೆ, ಉತ್ಸವಗಳನ್ನು ನಡೆಸುವುದಕ್ಕೆ ನೀತಿನಿಯಮಗಳನ್ನು ರೂಪಿಸುವುದು ಮತ್ತು ಅವುಗಳನ್ನು ನಡೆಸುವುದು.

**19. ಸಾರ್ವಜನಿಕ ಆರೋಗ್ಯ (ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಕುಟುಂಬ ಕಲ್ಯಾಣ ಸೌಲಭ್ಯಗಳೂ ಸೇರಿದಂತೆ ಆರೋಗ್ಯ ಸೌಲಭ್ಯಗಳು)**

(i) ಜಿಲ್ಲಾಮಟ್ಟದಲ್ಲಿ ಸಾಂಪ್ರದಾಯಿಕ ಮತ್ತು ಸಾಂಪ್ರದಾಯಕವಲ್ಲದ ಈ ಎರಡೂ ಬಗೆಯ ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಯೋಜನೆ ರೂಪಿಸುವುದು ಹಾಗೂ ನಿರ್ವಹಿಸುವುದು.

(ii) ಸಮುದಾಯ ಆರೋಗ್ಯ ಕೇಂದ್ರ ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಗಳಿಗೆ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವುದು ಮತ್ತು ಮಂಜೂರಾತಿಗಳನ್ನು ಪಡೆದುಕೊಳ್ಳುವುದು.

(iii) ಸರ್ಕಾರ ಅಥವಾ ಇತರ ಸ್ಥಳೀಯ ಪ್ರಾಧಿಕಾರದ ಆಡಳಿತದಿಂದ ಹೊರಗಿರುವ ಸಮುದಾಯ ಆರೋಗ್ಯ ಕೇಂದ್ರ ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ನಿರ್ವಹಿಸುವುದು.

(iv) ತಾಲ್ಲೂಕು ಪಂಚಾಯಿತಿ ಮಟ್ಟ, ಸಮೂಹ ಮಟ್ಟ (ಕ್ಲಸ್ಟರ್ ಲೆವೆಲ್) ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಆರೋಗ್ಯ ಸೇವಾ ಕೇಂದ್ರಗಳಿಗೆ ಸಾಧನಗಳು, ಮೂಲ ಔಷಧ ವಸ್ತುಗಳು ಮತ್ತು ಇತರ ಔಷಧಗಳನ್ನು ಪಡೆದುಕೊಳ್ಳುವುದು, ಔಷಧಗಳು, ವೈದ್ಯಕೀಯ ಉಪಕರಣಗಳು ಮತ್ತು ಇತರ ವೈದ್ಯಕೀಯ ಸಾಧನ ಸಾಮಗ್ರಿಗಳನ್ನು ಪೂರೈಸುವುದು.

(v) ಜಿಲ್ಲಾಮಟ್ಟದಲ್ಲಿ ಸಾಂಕ್ರಾಮಿಕ ರೋಗ ನಿರ್ವಹಣಾ ವ್ಯವಸ್ಥೆಯನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.

(vi) ಜಿಲ್ಲಾಮಟ್ಟದಲ್ಲಿ ಪ್ರಯೋಗಾಲಯಗಳು ಮತ್ತು ರೋಗ ಪರಿಶೋಧನಾ ಸೇವೆಗಳನ್ನು ಸ್ಥಾಪಿಸುವುದು.

(vii) ಜಿಲ್ಲಾಮಟ್ಟದಲ್ಲಿ ಪ್ರಸೂತಿ ಮತ್ತು ಶಿಶು ಆರೋಗ್ಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಮತ್ತು ನಿರ್ವಹಿಸುವುದು.

(viii) ಜಿಲ್ಲಾಮಟ್ಟದಲ್ಲಿ ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದು

(ix) ವಿಶೇಷ ಚೇತನ ಮತ್ತು ಮನೋವಿಕಲತೆಯ ವ್ಯಕ್ತಿಗಳಂತಹ ವಿಶೇಷ ವರ್ಗಗಳಿಗೆ ಆರೋಗ್ಯ ಪಾಲನಾ ಕೇಂದ್ರಗಳನ್ನು ಸ್ಥಾಪಿಸುವುದು.

(x) ಜಿಲ್ಲಾಮಟ್ಟದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಅನುಷ್ಠಾನಗೊಳಿಸುವುದು.

**20. ನೈರ್ಮಲ್ಯ**

(i) ಜಿಲ್ಲಾ ನೈರ್ಮಲ್ಯ ಯೋಜನೆಗಳನ್ನು ಕ್ರೋಢೀಕರಿಸುವುದು

(ii) ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಅಗತ್ಯ ನೆರವು ನೀಡುವುದು.

**(iii)** ಜಿಲ್ಲಾ ನೀತಿ ಮತ್ತು ವಿನಿಯಮಗಳನ್ನು ರೂಪಿಸುವುದು, ಅವುಗಳನ್ನು ವಿನಿಯಮಿಸುವುದು ಮತ್ತು ಮೌಲ್ಯಮಾಪನ ಮಾಡುವುದು.

**21. ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಶೇಷ ಚೇತನ ಹಾಗೂ ಮಾನಸಿಕ ಚೇತನರ ಕಲ್ಯಾಣ**

(i) ತಾಂತ್ರಿಕ ಹೂಡುವಳಿ ಜ್ಞಾನರೂಪವನ್ನು (ಟೆಕ್ನಿಕಲ್ ಇನ್‌ಪುಟ್) ಒದಗಿಸುವುದಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

(ii) ಮಹಿಳಾ ಸಬಲೀಕರಣ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

(iii) ಶಾಲಾ ಆರೋಗ್ಯ ಮತ್ತು ಪೌಷ್ಠಿಕ ಆಹಾರ ಕಾರ್ಯಕ್ರಮಗಳನ್ನು ನಿರ್ವಹಿಸುವುದು.

**(iv)** ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, ಬಾಲಕರ ವಿದ್ಯಾರ್ಥಿ ನಿಲಯಗಳು ಮತ್ತು ಅನಾಥಾಲಯಗಳನ್ನು ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು

**22. ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರೆ ಹಿಂದುಳಿದ ಜಾತಿಗಳ ಅಭಿವೃದ್ಧಿ**

(i) ವ್ಯಕ್ತಿ ಮತ್ತು ಸಮುದಾಯದ ಸ್ವಾತಂತ್ರ್ಯ ಮತ್ತು ಘನತೆಗೆ ಕುಂದುಂಟುಮಾಡುವಂಥ ಸಾಮಾಜಿಕ, ಸಾಂಸ್ಕೃತಿಕ ಪದ್ಧತಿಗಳನ್ನು ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳು ಹಾಗೂ ಹಿಂದುಳಿದ ಸಮುದಾಯಗಳ ಸಂಬಂಧದಲ್ಲಿ ಅನುಸರಿಸದಂತೆ ಪ್ರತಿಬಂಧಿಸುವುದು.

(ii) ಜಿಲ್ಲಾಮಟ್ಟದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ವಹಿಸುವುದು.

(iii) ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳು ಹಾಗೂ ಹಿಂದುಳಿದ ಸಮುದಾಯಗಳಿಗೆ ಸಂಬಂಧಿಸಿದಂತೆ ವೃತ್ತಿ ಶಿಕ್ಷಣ ತರಬೇತಿ ಕೇಂದ್ರಗಳನ್ನು ನಿರ್ವಹಿಸುವುದು.

**(iv)** ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳು ಹಿಂದುಳಿದ ಸಮುದಾಯಗಳ ಕಲ್ಯಾಣಕ್ಕೆ ಸಂಬಂಧಿಸಿದ ಸ್ಕೀಮುಗಳ ಅಡಿಯಲ್ಲಿ ವ್ಯಕ್ತಿಗಳು ಮತ್ತು ಇತರರಿಗೆ ಅನುದಾನಗಳು, ಸಾಲಗಳು ಮತ್ತು ಸಹಾಯಧನಗಳನ್ನು ವಿತರಿಸುವುದು.

**23. ಅಂಕಿಅಂಶಗಳ ನಿರ್ವಹಣೆ**

(i) ಜಿಲ್ಲೆಯ ಅಂಕಿಅಂಶಗಳನ್ನು ಕ್ರೋಢೀಕರಿಸುವುದು.

(ii) ತಾಲ್ಲೂಕು ಪಂಚಾಯಿತಿಯ ದೃಷ್ಟಿಕೋನದ ಯೋಜನೆಗಳನ್ನು ಆಧರಿಸಿ ಜಿಲ್ಲಾ ದೃಷ್ಟಿಕೋನದ ಯೋಜನೆಯನ್ನು ಕ್ರೋಢೀಕರಿಸುವುದು ಮತ್ತು ಅಂತಿಮಗೊಳಿಸುವುದು.

**24. ಯೋಜನೆ**

(i) ಜಿಲ್ಲಾಮಟ್ಟದ ಯೋಜನೆಯನ್ನು ರೂಪಿಸುವುದು.

(ii) ತಾಲ್ಲೂಕು ಪಂಚಾಯಿತಿಗಳಿಂದ ಸ್ವೀಕರಿಸಿದ ಯೋಜನೆಗಳನ್ನು ಕ್ರೋಢೀಕರಿಸುವುದು, ಜಿಲ್ಲಾಮಟ್ಟದ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಅದಕ್ಕೆ ಅನುಮೋದನೆ ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದ ಸಮಿತಿ ರಚಿಸುವುದು.

(iii) ದತ್ತಾಂಶ ಮತ್ತು ಮಾಹಿತಿ ಸಂಗ್ರಹಿಸುವುದಕ್ಕೆ ಹಾಗೂ ಯೋಜನೆಯನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿಗಳಿಗೆ ಅಗತ್ಯವಿರುವ ತಂತ್ರಜ್ಞರ ನೆರವನ್ನು ಒದಗಿಸುವುದು.

(iv) ವಿಶೇಷ ಘಟಕಾಂಶ ಯೋಜನೆ (ಎಸ್‌ಸಿಪಿ) ಮತ್ತು ಬುಡಕಟ್ಟು ಉಪಯೋಜನೆ (ಟಿಎಸ್‌ಪಿ)ಗಳೂ ಸೇರಿದಂತೆ ಎಲ್ಲ ಸರ್ಕಾರಿ ಕಾರ್ಯಕ್ರಮಗಳ ಪ್ರಗತಿಯನ್ನು ಕುರಿತು ಮೇಲ್ವಿಚಾರಣೆ ಮಾಡುವುದು ಮತ್ತು ಗುಣಮಟ್ಟದ ಅನುಷ್ಠಾನ ಕುರಿತು ಖಚಿತಪಡಿಸಿಕೊಳ್ಳುವುದು.

(v) ಯೋಜನೆಗಳ ಮೌಲ್ಯಮಾಪನ ಮಾಡುವುದು.

**25. ಸಹಕಾರ**

ಜಿಲ್ಲಾಮಟ್ಟದ ಎಲ್ಲಾ ಸಹಕಾರ ಸಂಘಗಳಿಗೆ ಅನುಕೂಲಗಳನ್ನು ಕಲ್ಪಿಸುವುದು.

**26. ಗ್ರಾಮೀಣ ವಿದ್ಯುದೀಕರಣ, ಪರಿಸರ ಮತ್ತು ಜೀವಿ ಪರಿಸ್ಥಿತಿ**

ಗ್ರಾಮೀಣ ವಿದ್ಯುದೀಕರಣ, ಪರಿಸರ ಮತ್ತು ಜೀವಿ ಪರಿಸ್ಥಿತಿ ಸಂರಕ್ಷಣೆಗೆ ಸಂಬಂಧಿಸಿದಂತೆ ಗ್ರಾಮಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ತಾಂತ್ರಿಕ ನೆರವನ್ನು ಒದಗಿಸುವುದು.

**27. ಆದಾಯೋತ್ಪತ್ತಿ ಚಟುವಟಿಕೆಗಳನ್ನು ಕೈಗೊಳ್ಳುವುದು**

ಜಿಲ್ಲಾ ಕೇಂದ್ರ ಕಚೇರಿಗಳಲ್ಲಿ ಆಸ್ತಿಗಳನ್ನು ಸೃಜಿಸುವುದು ಮತ್ತು ಅವುಗಳನ್ನು ಬಾಡಿಗೆಗೆ ನೀಡುವುದು.

**28. ಜ್ಞಾನ ನಿರ್ವಹಣೆ**

(i) ಎಲ್ಲ ಸರ್ಕಾರಿ ಸ್ಕೀಮುಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಮತ್ತು ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಚಟುವಟಿಕೆಗಳನ್ನು ಕೈಗೊಳ್ಳುವುದು.

(ii) ಜಿಲ್ಲಾ ಅಂಕಿಅಂಶಗಳನ್ನು ಸಂಗ್ರಹಿಸುವುದು, ಕ್ರೋಢೀಕರಿಸುವುದು ಮತ್ತು ದತ್ತಕಣಜ (ಡೇಟಾಬೇಸ್)ವನ್ನು ನಿರ್ವಹಿಸುವುದು.

(iii) ಜಿಲ್ಲೆಯ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ದಾಖಲಿಸುವುದು.

(iv) ಜಿಲ್ಲೆಯ ಮಾನವ ಅಭಿವೃದ್ಧಿಯನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಸಮೀಕ್ಷೆಗಳನ್ನು ಮತ್ತು ಅಧ್ಯಯನಗಳನ್ನು ಕೈಗೊಳ್ಳುವುದು.

(v) ಮಾನವಾಭಿವೃದ್ಧಿ ಸೂಚ್ಯಂಕವನ್ನು ನಿಯತಕಾಲಿಕವಾಗಿ ಗಣನೆ ಮಾಡುವುದು

(vi) ಎಲ್ಲ ದತ್ತಾಂಶ ಜನರಿಗೆ ಲಭ್ಯವಾಗುವಂತೆ ಮಾಡುವುದು.

**ಅನುಸೂಚಿ – IV**

**(199ನೇ ಪ್ರಕರಣವನ್ನು ನೋಡಿ)**

ಸ್ವತ್ತಿನ ಮೇಲೆ ತೆರಿಗೆ  ಕಟ್ಟಡದ ಮೇಲೆ ತೆರಿಗೆ

| ಎ | **ಕಟ್ಟಡಗಳ ಮೇಲೆ ತೆರಿಗೆ** | **ವಾರ್ಷಿಕ ದರ** |
|---|---|---|
| | (i) ನಿವಾಸ ಕಟ್ಟಡಗಳು | ಸ್ವತ್ತಿನ ಮೂಲಮೌಲ್ಯದ ಮೇಲೆ 0.05% ಕ್ಕಿಂತ ಕಡಿಮೆಯಿಲ್ಲದ ಆದರೆ 0.10%ಕ್ಕಿಂತ ಹೆಚ್ಚಲ್ಲದೆ |
| | (ii) ವಾಣಿಜ್ಯ ಕಟ್ಟಡಗಳು | ಸ್ವತ್ತಿನ ಮೂಲಮೌಲ್ಯದ ಮೇಲೆ 0.20% ಕ್ಕಿಂತ ಕಡಿಮೆಯಿಲ್ಲದ ಆದರೆ 0.5%ಕ್ಕಿಂತ ಹೆಚ್ಚಲ್ಲದೆ |
| | (iii) ಕೈಗಾರಿಕೆಗಳು, ಕಾರ್ಖಾನೆಗಳು, ಐಟಿ ಪಾರ್ಕ್‌ಗಳು, ಹಾರ್ಡ್‌ವೇರ್ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಬಯೋಟೆಕ್ ಪಾರ್ಕ್, ಪವರ್ ಪ್ಲಾಂಟ್ಸ್, ಹೈಡ್ರೋ ಥರ್ಮಲ್, ಸೋಲಾರ್ ಸ್ಥಾವರಗಳು, ವಿಂಡ್‌ಮಿಲ್ಸ್ ಮತ್ತು ಏರ್‌ಪೋರ್ಟ್ ಮತ್ತು ಇವುಗಳಿಗೆ ಸಂಬಂಧಿಸಿದ ಪ್ರದೇಶ ಇತ್ಯಾದಿಗಳು (ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ ವಿಶೇಷ ಆರ್ಥಿಕ ವಲಯ (SEZ) ಮತ್ತು ಇತರ ಕೈಗಾರಿಕಾ ಪ್ರದೇಶ ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ವಲಯಗಳು) | ಸ್ವತ್ತಿನ ಮೂಲಮೌಲ್ಯದ ಮೇಲೆ 0.4% ಕ್ಕಿಂತ ಕಡಿಮೆಯಿಲ್ಲದ ಆದರೆ 1%ಕ್ಕಿಂತ ಹೆಚ್ಚಲ್ಲದೆ |
| ಬಿ | ಈ ಮುಂದಿನ ಅಳತೆಯುಳ್ಳ ಖಾಲಿ ಜಮೀನು, ಎಂದರೆ:– ಎ. 1000 ಚ.ಮೀ. ಗಿಂತ ಹೆಚ್ಚಲ್ಲದ | ಸ್ವತ್ತಿನ ಮೂಲಮೌಲ್ಯದ ಮೇಲೆ 0.05% ಕ್ಕಿಂತ ಕಡಿಮೆಯಿಲ್ಲದ ಆದರೆ 0.1%ಕ್ಕಿಂತ ಹೆಚ್ಚಲ್ಲದೆ |
| | ಬಿ. 1000 ಚ.ಮೀ. ಗಿಂತ ಹೆಚ್ಚಿನ ಆದರೆ 4000 ಚ.ಮೀ.ಗಿಂತ ಕಡಿಮೆ | ಸ್ವತ್ತಿನ ಮೂಲಮೌಲ್ಯದ ಮೇಲೆ 0.025% ಕ್ಕಿಂತ ಕಡಿಮೆಯಿಲ್ಲದ ಆದರೆ 0.05%ಕ್ಕಿಂತ ಹೆಚ್ಚಲ್ಲದೆ |
| | ಸಿ. 4000 ಚ.ಮೀ. ಗಿಂತ ಹೆಚ್ಚು | ಸ್ವತ್ತಿನ ಮೂಲಮೌಲ್ಯದ ಮೇಲೆ 0.01% ಕ್ಕಿಂತ ಕಡಿಮೆಯಿಲ್ಲದ ಆದರೆ 0.02%ಕ್ಕಿಂತ ಹೆಚ್ಚಲ್ಲದೆ |
| [2][ | XXX | XXXX][2] |
| ಡಿ | ಮೊಬೈಲ್ ಟವರ್‌ಗಳ ಮೇಲೆ ತೆರಿಗೆ | ವಾರ್ಷಿಕ ಪ್ರತಿ ಟವರಿನ ಮೇಲೆ ಹನ್ನೆರಡು ಸಾವಿರ ರೂಪಾಯಿಗಳು |
| ಇ | ವಿಂಡ್‌ಮಿಲ್‌ಗಳ ಮೇಲೆ ತೆರಿಗೆ | ಟರ್ಬೈನ್‌ಗಳನ್ನು ಆಧರಿಸಿ ವಾರ್ಷಿಕ 0.5ರಿಂದ 1 ಲಕ್ಷ |
| ಎಫ್ | ಸೋಲಾರ್ ಪಾರ್ಕ್‌ಗಳ ತೆರಿಗೆ | ಸ್ವತ್ತಿನ ಮೂಲಮೌಲ್ಯದ ಮೇಲೆ 0.50% ಕ್ಕಿಂತ ಕಡಿಮೆಯಿಲ್ಲದ ಆದರೆ 1.50%ಕ್ಕಿಂತ ಹೆಚ್ಚಲ್ಲದೆ |

ವಿವರಣೆ:–

1. ತೆರಿಗೆಗೆ ಗುರಿಯಾಗುವ ಸ್ವತ್ತಿನ ಮೂಲಮೌಲ್ಯ ಎಂದರೆ (ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ 1957ರ 45ಬಿ ಪ್ರಕರಣದ ಅಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ನಿರ್ಧರಣೆಯ ಸಮಯದ ಮೌಲ್ಯದ ಸವಕಳಿಯನ್ನು ಕಳೆಯುವುದು)
2. ಕಟ್ಟಡದ ಖಾಲಿ ಜಮೀನು ಅಥವಾ ಅವೆರಡರ ಮೇಲೆ ಪ್ರದೇಶವನ್ನು, ಕಟ್ಟಡದ ನಿರ್ಮಾಣದ ವಿಧಾನ, ಅದರ ಉಪಯೋಗ ಮತ್ತು ಕಟ್ಟಡದ ಆಯಷು ಮತ್ತು ನಿಯಮಿಸಬಹುದಾದ ಅಂತಹ ಇತರ ಯಾವುದೇ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಗಳು ಮತ್ತು ದರಗಳನ್ನು ಅನುಸೂಚಿಯಲ್ಲಿ ನಿಯಮಿಸಲಾದ ತೆರಿಗೆಯ ನಿರ್ಧರಣೆ.

| | | |
|---|---|---|
| ಜಿ | ಮನೋರಂಜನೆಗಳ ಮೇಲೆ ಶುಲ್ಕ | ಪ್ರತಿ ಪ್ರದರ್ಶನಕ್ಕೆ ಐವತ್ತು ರೂಪಾಯಿಗಳು |
| ಹೆಚ್ | ವಾಹನ ನಿಲುಗಡೆ ಶುಲ್ಕ | ಪ್ರತಿ ದಿನಕ್ಕೆ ರೂಪಾಯಿಗಳಲ್ಲಿ |
| | (i) ಬಸ್, ಲಾರಿ ಮುಂತಾದವುಗಳು | 50/– |
| | (ii) ಕಾರ್ ಮತ್ತು ಲಘು ಮೋಟಾರು ವಾಹನಗಳು | 20/– |
| | (iii) ಮೋಟಾರು ಸೈಕಲ್ | 10/– |
| | (iv) ಸ್ಪ್ರಿಂಗ್ ಉಳ್ಳ ಇತರ ವಾಹನ | 3/– |
| | (v) ಸ್ಪ್ರಿಂಗ್ ಇಲ್ಲದಿರುವ ಪ್ರತಿಯೊಂದು ಗಾಡಿ ಮತ್ತು ಇತರ ವಾಹನ | 2/– |
| | (vi) ಪ್ರತಿಯೊಂದು ಬೈಸೈಕಲ್ ಮತ್ತು ತ್ರಿಚಕ್ರವಾಹನ | 1/– |
| ಐ | ಮಾರುಕಟ್ಟೆಗಳ ಮೇಲೆ ಶುಲ್ಕ | |

| | | |
|---|---|---|
| | (i) ಒಂದು ಚದುರ ಮೀಟರ್‌ಗಿಂದ ಹೆಚ್ಚಲ್ಲದ ಪ್ರತಿಯೊಂದು ಪ್ಲಾಟಿನ ಮೇಲೆ | ಪ್ರತಿ ದಿನಕ್ಕೆ ಐದು ರೂಪಾಯಿ |
| | (ii) ಪ್ರತಿ ಹೆಚ್ಚಿನ ಚದುರ ಮೀಟರ್ ಅಳತೆಯುಳ್ಳ ಪ್ಲಾಟ್ ಅಥವಾ ಅದರ ಭಾಗಕ್ಕೆ | ಪ್ರತಿ ದಿನಕ್ಕೆ ಎರಡು ರೂಪಾಯಿ |
| | (iii) ಯಾವುದೇ ಸರಕಿನ ಪ್ರತಿ ಬಾಸ್ಕೆಟ್ ಅಥವಾ ಬ್ಯಾಗಿನ ಮೇಲೆ | ಪ್ರತಿ ದಿನಕ್ಕೆ ಎರಡು ರೂಪಾಯಿ |
| | (iv) ಯಾವುದೇ ಸರಕಿನ ಬ್ಯಾಗನ್ನು ಹೇರುವ ಪ್ರತಿ ಗಾಡಿಯ ಮೇಲೆ | ಪ್ರತಿ ದಿನಕ್ಕೆ ಐದು ರೂಪಾಯಿ |
| ಜೆ | ಪಶುಗಳ ನೋಂದಣಿಯ ಮೇಲೆ ಶುಲ್ಕ | |
| | ಸಂತೆಗಳು ಮತ್ತು ಜಾತ್ರೆಗಳಲ್ಲಿ ಮಾರಾಟಕ್ಕಾಗಿ ತಂದ ಪ್ರತಿ ಪಶುವಿನ ಮೇಲೆ | ಪ್ರತಿ ದಿನಕ್ಕೆ ಐದು ರೂಪಾಯಿ |
| | ಮೇಯಿಸುವ ಜಮೀನಿನಲ್ಲಿ ಪಶುಗಳನ್ನು ಮೇಯಿಸುವುದಕ್ಕೆ ಶುಲ್ಕ | ಪ್ರತಿ ತಿಂಗಳಿಗೆ ಐದು ರೂಪಾಯಿ |
| | ಆಪ್ಟಿಕಲ್ ಫೈಬರ್ಸ್ ಕೇಬಲ್‌ಗಳನ್ನು ಹಾಕುವುದಕ್ಕಾಗಿ ರಸ್ತೆಗಳನ್ನು ತೋಡುವುದಕ್ಕಾಗಿ ಶುಲ್ಕ | ಮೂರು ನಾಳಗಳಿಗೆ ಪ್ರತಿ ಮೀಟರ್‌ಗೆ 450 ರೂಪಾಯಿಗಳು ಲೇಯಿಂಗ್ ಚಾರ್ಜ್<br>ಹೆಚ್ಚಿನ ನಾಳಗಳಿಗೆ ಪ್ರತಿ ಮೀಟರ್‌ಗೆ 75 ರೂಪಾಯಿ<br>ಮೇಲ್ವಿಚಾರಣೆ ಚಾರ್ಜ್ ಪ್ರತಿ ಮೀಟರ್‌ಗೆ 75 ರೂಪಾಯಿ<br>ಹಿಂದಿರುಗಿಸಬಹುದಾದ ಭದ್ರತಾ ಠೇವಣಿ ಪ್ರತಿ ಮೀಟರ್ ಗೆ 119.50 ರೂಪಾಯಿಯಂತೆ][1] |

1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 25.02.2016ರಿಂದ ಪ್ರತಿಯೋಜಿಸಲಾಗಿದೆ.
2. 2017ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ 12.07.2017ರಿಂದ ಬಿಟ್ಟುಬಿಡಲಾಗಿದೆ.

* * * *

## NOTIFICATIONS

### I

Banglore, dated 10.5.1993 [No. RDP 259 ZPS 93]

In exercise of the powers conferred by sub-section (2) of section 1 of the Karnataka Panchayat Raj Act, 1993 (Karnataka Act 14 of 1993), the Government of Karnataka hereby specify the 10th day of May, 1993 as the date on which all the provisions of the said Act shall come into force in the whole of the State of Karnataka.

By Order and in the name of the Governor of Karnataka,
(K.P.PANDEY)
Secretary to the Government,
Rural Development & P.Raj Department.

### II

Banglore, dated 20.10.1997 [No. RDP 151 ZPS 97 (p)]

In exercise of the powers conferred by sub-section (2) of section 1 of the Karnataka Panchayat Raj (3rd Amendment) Act, 1997 (Karnataka Act 29 of 1997), the Government of Karnataka hereby specify the 20th day of October, 1997 as the date on which all the provisions of the said Act shall come into force in the whole of the State of Karnataka.

By Order and in the name of the Governor of Karnataka,
(PARAVATHY KESHAVACHAR)
Under Secretary to Government,
Rural Development & P.Raj Department.

**III**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ:ಗ್ರಾಅಪ 204 ಜಿಪಸ 2003, ಬೆಂಗಳೂರು, ದಿನಾಂಕ:1ನೆ ಅಕ್ಟೋಬರ್ 2003**

ರಾಜ್ಯ ಸರ್ಕಾರವು, ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ 2002 (2003ರ ಕರ್ನಾಟಕ ಅಧಿನಿಯಮ 37)ನ್ನು ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 33 ಶಾಸನ 2002, ದಿನಾಂಕ:3.9.2003ನ್ನು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ದಿನಾಂಕ:3.9.2003 ರಂದು ಪ್ರಕಟಿಸಲಾಗಿದೆ.

ಅಂತೆಯೇ, ಕರ್ನಾಟಕ ಪಂಚಾಯತ್ ರಾಜ್ಯ (ತಿದ್ದುಪಡಿ) ಅಧಿನಿಯಮ 2002ರ ಪ್ರಕರಣ 1(2)ರನ್ವಯ ತಿದ್ದುಪಡಿಯ ಎಲ್ಲಾ ಉಪಬಂಧಗಳು ದಿನಾಂಕ:1.10.2003ರಂದು ಜಾರಿಗೆ ಬರುವಂತೆ ಈ ಮೂಲಕ ಅಧಿಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಎಸ್.ಶಾಮಸುಂದರ**
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

Published in the Karnataka Gazette Part IV-A Extraordinary No.1151 dated 1-10-2003

* * * *

**2014ರ ಕರ್ನಾಟಕ ಅಧಿನಿಯಮ ಸಂಖ್ಯೆ 23**
(2014ರ ಜುಲೈ ತಿಂಗಳ ಹದಿನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2013**
(2014ರ ಜೂನ್ ತಿಂಗಳ ಇಪ್ಪತ್ತೇಳನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) 2 ಮತ್ತು 3ನೇ ಪ್ರಕರಣಗಳು 2003ರ ಸೆಪ್ಟೆಂಬರ್ 3ನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ಉಳಿದ ಪ್ರಕರಣಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 136ಎ ಮತ್ತು 175ಎ ಇವಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

**4. ಸಿಂಧುಗೊಳಿಸುವಿಕೆ.-** ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ, ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ 136ಎ ಮತ್ತು 175ಎ ಪ್ರಕರಣದ ಅಡಿಯಲ್ಲಿ ಕ್ರಮ ತೆಗೆದುಕೊಂಡ ಹೊರತು ಯಾವೊಬ್ಬ ಸದಸ್ಯನು ಸದಸ್ಯನಾಗಿರುವುದು ನಿಂತುಹೋಗತಕ್ಕದ್ದಲ್ಲ, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ 136ಎ ಮತ್ತು 175ಎ ಪ್ರಕರಣಗಳ ಉಪಬಂಧಗಳು ಸಂಬಂಧಪಟ್ಟ ಎಲ್ಲಾ ಅವಧಿಯಲ್ಲಿಯೂ ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ ಸಿಂಧುವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದಕ್ಕೆ ಅನುಸಾರವಾಗಿ,-

(ಎ) ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ನಡೆಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಬಿ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿರುವುದನ್ನು ಹೊರತುಪಡಿಸಿ ಅನ್ಯಥಾ ಯಾವೊಬ್ಬ ಸದಸ್ಯನ ಸದಸ್ಯತ್ವವನ್ನು ಕೊನೆಗೊಳಿಸುವಂತೆ ಯಾವುದೇ ನ್ಯಾಯಾಲಯವು ನಿರ್ದೇಶಿಸಿ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಜಾರಿ ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಎಸ್.ಬಿ. ಗುಂಜಿಗಾವಿ**
ಸರ್ಕಾರದ ಕಾರ್ಯದರ್ಶಿ
**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ**

***********

**2015ರ ಕರ್ನಾಟಕ ಅಧಿನಿಯಮ ಸಂಖ್ಯೆ: 17**
(2015ರ ಏಪ್ರಿಲ್ ತಿಂಗಳ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)
**ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2015**

(2015ರ ಏಪ್ರಿಲ್ ತಿಂಗಳ ಇಪ್ಪತ್ತೊಂಬತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 5. 9, 44, 46, 123, 125, 138, 162, 164 ಮತ್ತು 177 ಇವಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಭಾ.ಭೀ. ಪತ್ತಾರ**
ಸರ್ಕಾರದ ಕಾರ್ಯದರ್ಶಿ(ಪ್ರ)
ಸಂಸದೀಯ ವ್ಯವಹಾರಗಳ ಇಲಾಖೆ

*********

**2015ರ ಕರ್ನಾಟಕ ಅಧಿನಿಯಮ ಸಂಖ್ಯೆ: 44**

(2015ರ ಡಿಸೆಂಬರ್ ತಿಂಗಳ ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015**
(2015ರ ಡಿಸೆಂಬರ್ ತಿಂಗಳ ಹದಿನಾರನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-**(1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಪ್ರಕರಣ 2, Chapter IA, 3, 3A, 12, 15 to 23, 22, 24, 24A, 43A, 44, 45, 46, 47, 48, 49, 52, 53, 57, 58, 58B, 58C, 58D, 58E, 58F, 60A and 60B, 61, 64, 70, 110, chapter IVA, V, 119, 120, 121, 136, 136A ,140 143, 145, Insertion of new sections 145A to 145D, 152, 154, 160, 163, 171, 175, 175A, 178, 179, 182, 184, 191, 193, 195, 199, 199A, 200, 206, 209, chapter XVI, 232A, 232B, 267, 296A,

296B, 296C, 296D, 296E, 296F, 298, 308, 308A, 309, 309A to 309H, 310A, 310A, 310B, chapter XIX, 315, schedule I, II, III and IV ಇವಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ (ಪ್ರ),
ಸಂಸದೀಯ ವ್ಯವಹಾರಗಳ ಇಲಾಖೆ

*********

## 2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 37

(2017ರ ಜುಲೈ ತಿಂಗಳ ಹನ್ನೆರಡನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶಇಂಷಂ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಅಧಿನಿಯಮ, 2017

(2017ರ ಜುಲೈ ತಿಂಗಳ ಹನ್ನೊಂದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು ವಂಂತಂಗಷಂಂಔ ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

18. ಬಾಕಿಯಿರುವ ಪ್ರಕರಣಗಳ ವರ್ಗಾವಣೆ.- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಅಧಿನಿಯಮ, 2017 ಜಾರಿಗೆ ಬಂದ ದಿನಾಂಕದಂದು ಜಿಲ್ಲಾ ಪಂಚಾಯತಿಯ ಚುನಾವಣೆ ವಿವಾದಗಳಿಗೆ ಸಂಬಂಧಿಸಿದಂತೆ, ಅಧಿಕಾರ ವ್ಯಾಪಿಯುಳ್ಳ ಜಿಲ್ಲಾ ನ್ಯಾಯಾಧೀಶರ ಮುಂದೆ ಬಾಕಿಯಿರುವ ಎಲ್ಲಾ ಪ್ರಕರಣಗಳನ್ನು ಅಧಿಕಾರವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಕೂಡಲೇ ವರ್ಗಾಯಿಸತಕ್ಕದ್ದು.

ಪ್ರಕರಣ 1,13,48,64,129,141,157,168,180,199,246,296,310 ಹಾಗೂ ಹೊಸ ಪ್ರಕರಣ 308 ಮತ್ತು ಅನುಸೂಚಿ-IV ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.